# ಕರ್ನಾಟಕ ವಿಧಾನ ಪರಿಷತ್ತು

## ಶುಕ್ರವಾರ, 27ನೇ ಜುಲೈ 2012

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 10 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್. ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು**

# 1. ಪ್ರಶ್ನೋತ್ತರಗಳು

## ಅ). ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

**ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರುಗಳ ಬಗ್ಗೆ.**

**395; ಶ್ರೀ ಡಿ.ಎಸ್.ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)**

ಅ) ಆಯುಷ್ ಇಲಾಖೆಯಲ್ಲಿ ವೈದ್ಯರುಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವಾಗ ಅರ್ಹ ಎಸ್.ಸಿ./ಎಸ್.ಟಿ ಅಭ್ಯರ್ಥಿಗಳಿದ್ದರೂ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದರೂ, ಅವರನ್ನು ಕಡೆಗಣಿಸಿ ಕೇವಲ ಸಾಮಾನ್ಯ ವರ್ಗಕ್ಕೆ ನೇಮಕಾತಿ ನೀಡಲಾಗಿದೆಯೇ;

ಆ) ಹೀಗೆ ನೇಮಕಗೊಂಡ ಸಾಮಾನ್ಯ ವರ್ಗದವರನ್ನು ಖಾಯಂಗೊಳಿಸಲು ಪ್ರಸ್ತಾವನೆ ಸರ್ಕಾರದ ಮುಂದಿದ್ದು, ಅನ್ಯಾಯಕ್ಕೊಳಗಾದ ಎಸ್.ಸಿ/ಎಸ್.ಟಿ ಅಭ್ಯರ್ಥಿಗಳು ತಮ್ಮನ್ನು ಖಾಯಂಗೊಳಿಸಬೇಕೆಂದು ಮನವಿ ಮಾಡಿದ್ದಾರೆಯೇ

ಇ) ಸಾಮಾನ್ಯ ವರ್ಗದ ಗುತ್ತಿಗೆ ವೈದ್ಯರನ್ನು ಖಾಯಂಗೊಳಿಸುವ ಹಂತದಲ್ಲಿ, ವಂಚಿತ ಎಸ್.ಸಿ/ಎಸ್.ಟಿ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದೇ?

**ಶ್ರೀ ಅರವಿಂದ ಲಿಂಬಾವಳಿ( ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

ಅ) ಆಯುಷ್ ಇಲಾಖೆಯಲ್ಲಿ ವೈದ್ಯರುಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವಾಗ ಅರ್ಹ ಎಸ್.ಸಿ./ಎಸ್.ಟಿ ಅಭ್ಯರ್ಥಿಗಳಿದ್ದರೂ ನೇಮಕಾತಿ ಪ್ರಕ್ರಿಯೆಯಲ್ಲಿ ಕಡೆಗಣಿಸಲಾಗಿರುವುದಿಲ್ಲ. ಸಾಮಾನ್ಯ ವರ್ಗದವರ ಜೊತೆ ಎಸ್.ಸಿ/ಎಸ್.ಟಿ ಅಭ್ಯರ್ಥಿಗಳನ್ನು ನೇಮಕಾತಿ ಮಾಡಲಾಗಿದೆ.

ಆ) ಎಸ್.ಸಿ/ಎಸ್.ಟಿ ಅಭ್ಯರ್ಥಿ ಒಳಗೊಂಡಂತೆ ಗುತ್ತಿಗೆ ಆಯುಷ್ ವೈದ್ಯರನ್ನು ಖಾಯಂಗೊಳಿಸುವ ಬಗ್ಗೆ ಮನವಿಗಳು ಬಂದಿವೆ.

ಇ) ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೇ, ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಗುತ್ತಿಗೆ ಆಧಾರದ ನೇಮಕಾತಿ ಪ್ರಕ್ರಿಯೆಯಲ್ಲಿ ಎಸ್.ಸಿ/ಎಸ್.ಟಿ ಅಭ್ಯರ್ಥಿಗಳಲ್ಲಿ ಎಷ್ಟು ಜನರನ್ನು ಪರಿಗಣಿಸಲಾಗಿದೆ ಎಂಬುದನ್ನು ತಿಳಿಸಬೇಕು. ಏಕೆಂದರೆ ಆ ಹಂತದಲ್ಲಿ ಮೀಸಲಾತಿಯನ್ನು ಅನುಸರಿಸದಿದ್ದರೆ ಖಾಯಂಮಾತಿಗೆ ಪ್ರಸ್ತಾವನೆ ಮಾಡುವಾಗ ಈ ಮೀಸಲಾತಿಯ Roster ಉಲ್ಲಂಘನೆಯಾಗುವುದರಿಂದ ಅಭ್ಯರ್ಥಿಗಳನ್ನು ಮೀಸಲಾತಿ ಸೌಲಭ್ಯದಿಂದ ವಂಚಿತರನ್ನಾಗಿ ಮಾಡಿದಂತಾಗುತ್ತದೆ. ಈಗ ಖಾಯಂಮಾತಿಗೆ ಸಲ್ಲಿಸಿರುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ, ಆದರೆ ಆ ಪಟ್ಟಿಯಲ್ಲಿ ಯಾವ ಎಸ್.ಸಿ/ಎಸ್.ಟಿ ಅಭ್ಯರ್ಥಿಗಳು ಕೂಡ ಇಲ್ಲ. ಹೀಗಾಗಿ ಸರ್ಕಾರ ನನ್ನ ಮೊದಲನೆಯ ಪ್ರಶ್ನೆಗೆ ಕೊಟ್ಟಿರುವಂತಹ ಉತ್ತರ ಸುಳ್ಳಾಗುತ್ತದೆ, ಅದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ನೀಡಬೇಕೆಂದು ವಿನಂತಿಸುತ್ತೇನೆ.

ಆಯುಷ್ ಇಲಾಖೆಗೆ ಯಾವ ಸ್ವಾಯತ್ತತೆ ಇದೆಯೋ ಗೊತ್ತಿಲ್ಲ, ಅವರು ವೃಂದ ಮತ್ತು ನೇಮಕಾತಿ ನಿಯಮ (C & R Rules) ಗಳನ್ನೇ ಬದಲಾವಣೆ ಮಾಡುವುದಕ್ಕೆ ಹೊರಟಿದ್ದಾರೆ. That is against the norms of reservation. ಅದನ್ನು ಕೂಡ ತಡೆದು ಯಾವ ಯಾವ ಹಂತದಲ್ಲಿ Roster ನ್ನು ಅನುಸರಿಸಿ ಮೀಸಲಾತಿಯನ್ನು ನೀಡಬೇಕಾಗಿದೆಯೋ ಅದು ಉಲ್ಲಂಘನೆಯಾಗದಂತೆ ನೋಡಿಕೊಂಡು ಆ ಬಗ್ಗೆ ಕ್ರಮತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ಅರವಿಂದ ಲಿಂಬಾವಳಿ:-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದಂತಹ ಮಾನ್ಯ ಡಿ.ಎಸ್.ವೀರಯ್ಯನವರು ಆ ಸಮಾಜದ ಮುಖಂಡರೂ ಹೌದು. ಆಯುಷ್ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ

ಒಟ್ಟು 170 ವೈದ್ಯರನ್ನು ನೇಮಕ ಮಾಡಿಕೊಂಡಿದ್ದೇವೆ. ಅದರಲ್ಲಿ 24 ಜನ ಅಭ್ಯರ್ಥಿಗಳು ಪರಿಶಿಷ್ಟ ಜಾತಿಗೂ 11 ಅಭ್ಯಥಿಗಳು ಪರಿಶಿಷ್ಟ ಪಂಗಡಕ್ಕೂ ಸೇರಿದವರಾಗಿದ್ದು ಒಟ್ಟು ಶೇಕಡ 20 ರಷ್ಟು ವೈದ್ಯರು ಅಲ್ಲಿದ್ದಾರೆ. ಹೀಗಾಗಿ ಮೀಸಲಾತಿ ನಿಯಮದಲ್ಲಿ ತಿಳಿಸಿರುವುದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಈ ವರ್ಗದವರಿಗೆ ಅವಕಾಶ ಕಲ್ಪಿಸಿದಂತಾಗಿದೆ. ಅಲ್ಲದೆ ಗುತ್ತಿಗೆ ಆಧಾರದ ಮೇಲೆ ನೇಮಕವಾದಂತಹ ವೈದ್ಯರನ್ನು ಖಾಯಂ ಮಾಡುವಂತಹ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಇವರಿಗೆ ಸಂವಿಧಾನಬದ್ಧವಾದ ಹಕ್ಕೇನಿದೆ ಅದನ್ನು ದೊರಕಿಸಿಕೊಡುವ ವಿಚಾರದಲ್ಲಿ ಸರ್ಕಾರ ಎಚ್ಚರಿಕೆ ವಹಿಸುತ್ತದೆ. ಮತ್ತು ಉಳಿದಂತಹವರು ಖಾಯಂ ಆದಾಗ ಇವರು ಸಹ ಸಹಜವಾಗಿ ಖಾಯಂ ಆಗುತ್ತಾರೆ. ಅದರಲ್ಲಿ ಯಾವುದೇ ವ್ಯತ್ಯಾಸಗಳಾಗುವುದಿಲ್ಲ ಎನ್ನುವಂತಹ ವಿಚಾರವನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೇ, ಸಚಿವರು ಒಟ್ಟಾರೆ ಅಂಕಿಅಂಶಗಳನ್ನು ಕೊಡುತ್ತಿದ್ದಾರೆ. ಆದರೆ ನಾನು ಕೇಳುತ್ತಿರುವ ನೇಮಕಾತಿ ಹಂತದಲ್ಲಿ ಎಷ್ಟು ಜನ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕೋ ಅದರಲ್ಲಿ ಏನು Roster ನಿಯಮವನ್ನು ಅನುಸರಿಸಬೇಕಾಗಿತ್ತೋ ಆ ಕೆಲಸ ಆಗಿಲ್ಲ. ಈ ಹಿಂದೆ 5 ಬಾರಿ ಮಾಡಿರುವಂತಹ ಅಂಕಿಸಂಖ್ಯೆಗಳನ್ನು ಮಾನ್ಯ ಸಚಿವರು ನೀಡುತ್ತಿದ್ದಾರೆ. ದಯವಿಟ್ಟು ಕಳೆದ ಬಾರಿಯ ಗುತ್ತಿಗೆ ಆಧಾರದ ನೇಮಕಾತಿಯನ್ನು ಪರಿಗಣಿಸಿ ಅವರಿಗೂ ಸಹ ರೋಸ್ಟರ್ ಪ್ರಕಾರ ಮೀಸಲಾತಿ ಸೌಲಭ್ಯ ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ.

**ಶ್ರೀ ಅರವಿಂದ ಲಿಂಬಾವಳಿ:-**ಮಾನ್ಯ ಸಭಾಪತಿಯವರೇ, ಕಳೆದ ಬಾರಿಯ ಮಾಹಿತಿ ಸದ್ಯಕ್ಕೆ ನನ್ನ ಹತ್ತಿರ ಇಲ್ಲ, ಆ ಮಾಹಿತಿಯನ್ನು ತರಿಸಿಕೊಂಡು ಅದರಲ್ಲೇನಾದರೂ ವ್ಯತ್ಯಾಸಗಳಾಗಿದ್ದರೆ ನಿಶ್ಚಿತವಾಗಿಯೂ ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇವೆ.

## ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಖಾಲಿಯಾಗಿರುವ ಹುದ್ದೆಗಳನ್ನು ಭರ್ತಿ ಮಾಡದಿರುವ ಬಗ್ಗೆ

### 690; ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)

**ಅ)** ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಿವೃತ್ತಿ, ರಾಜೀನಾಮೆ ಇನ್ನಿತರೆ ಕಾರಣಗಳಿಂದ ತೆರವಾಗಿರುವ ಉಪನ್ಯಾಸಕರ ಹುದ್ದೆಗಳ ಸಂಖ್ಯೆ ಎಷ್ಟು; (ವಿಷಯವಾರು ಮಾಹಿತಿ ನೀಡುವುದು)

**ಆ)** ಯಾವ ಸಮಯದಿಂದ ಖಾಲಿ ಉಳಿದಿವೆ;

**ಇ)** ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಇದುವರೆವಿಗೆ ಕೈಗೊಂಡಿರುವ ಕ್ರಮಗಳೇನು;

**ಈ)** ಯಾವ ಕಾಲಮಿತಿಯಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು?

### ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು)

**ಅ)** ಪ್ರಸ್ತುತ ಖಾಲಿ ಇರುವ ಹುದ್ದೆಗಳ ಸಂಖ್ಯೆ 847

ವಿಷಯವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

**ಆ)** 2009 ರ ನಂತರ

**ಇ)** ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇದ್ದ 799 ಉಪನ್ಯಾಸಕ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವಂತೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಲಾಗಿತ್ತು, ಈ ಹುದ್ದೆಗಳಲ್ಲಿ ತೀರ ಅಗತ್ಯ ಇರುವ ಹುದ್ದೆಗಳನ್ನು ಗುರುತಿಸಿ ಕಡತವನ್ನು ಮರು ಸಲ್ಲಿಸುವಂತೆ ಸೂಚಿಸಿದ್ದರ ಹಿನ್ನೆಲೆಯಲ್ಲಿ 276 ಅಗತ್ಯ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವಂತೆ ಕಡತವನ್ನು ಆರ್ಥಿಕ ಇಲಾಖೆಯ ಸಹಮತಿಗಾಗಿ ಕಳುಹಿಸಲಾಗಿದೆ.

ಈ) ಸಂಖ್ಯೆ:ಆಇ 01 ಬಿಇಎಂ 2012 ದಿನಾಂಕ: 14–06–2012 ಹಾಗೂ ಸಂಖ್ಯೆ:ಆಇ 01 ಬಿಇಎಂ 2008 ದಿನಾಂಕ: 21–10–2009ರ ಸುತ್ತೋಲೆಗಳಲ್ಲಿ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಹೊಸ ಬೋಧಕ / ಭೋಧಕೇತರ ಹುದ್ದೆಗಳನ್ನು ಸೃಜಿಸುವ / ಭರ್ತಿ ಮಾಡುವುದನ್ನು ಸಂಪೂರ್ಣವಾಗಿ ತಡೆಹಿಡಿಯಲಾಗಿದೆ. ಮಿತವ್ಯಯ ಆದೇಶ ಹಿಂಪಡೆದ ನಂತರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

**ಅನುಬಂಧ–I**

**ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಿವೃತ್ತಿ, ರಾಜೀನಾಮೆ ಇನ್ನಿತರ ಕಾರಣಗಳಿಂದ ತೆರವಾಗಿರುವ ಉಪನ್ಯಾಪಕರ ವಿಷಯವಾರು ಹುದ್ದೆಗಳ ವಿವರ**

| ಕ್ರಮ ಸಂಖ್ಯೆ | ವಿಷಯ | ಒಟ್ಟು |
|---|---|---|
| 1 | 2 | 3 |
| 1 | ಕನ್ನಡ | 39 |
| 2 | ಆಂಗ್ಲಭಾಷೆ | 48 |
| 3 | ಹಿಂದಿ | 8 |
| 4 | ಸಂಸ್ಕೃತ | 6 |
| 5 | ತಮಿಳು | 2 |
| 6 | ತೆಲುಗು | 6 |
| 7 | ಉರ್ದು | 11 |
| 8 | ಅರೇಬಿಕ್ | 2 |
| 9 | ಮರಾಠಿ | 1 |
| 10 | ಇತಿಹಾಸ | 56 |
| 11 | ಅರ್ಥಶಾಸ್ತ್ರ | 70 |
| 12 | ಶಿಕ್ಷಣ | 1 |
| 13 | ರಾಜ್ಯಶಾಸ್ತ್ರ | 60 |
| 14 | ಸಮಾಜಶಾಸ್ತ್ರ | 21 |

| | | |
|---|---|---|
| 15 | ಭೂಗೋಳಶಾಸ್ತ್ರ | 6 |
| 16 | ಮನ:ಶಾಸ್ತ್ರ | 19 |
| 17 | ತತ್ವಶಾಸ್ತ್ರ | 5 |
| 18 | ಸಹಕಾರ | 2 |
| 19 | ಗ್ರಾಮೀಣಾ ಪುನರಭಿವೃದ್ಧಿ | 1 |
| 20 | ಅಪರಾಧಶಾಸ್ತ್ರ | 1 |
| 21 | ಟೂರಿಸಂ | 0 |
| 22 | ಎಂಎಸ್‌ಡಬ್ಲ್ಯೂ | 3 |
| 23 | ಮಿಲಿಟರಿ ಸೈನ್ಸ್ | 2 |
| 24 | ವಾಣಿಜ್ಯ ಶಾಸ್ತ್ರ | 87 |
| 25 | ಮಾಸ್ಟರ್ ಆಫ್ ಇಂಟರ್ ನ್ಯಾಷನಲ್ ಬಿಸಿನೆಸ್ | 4 |
| 26 | ಮಾಸ್ಟರ್ ಆಫ್ ಫೈನಾನ್ಸಿಯಲ್ ಅಕೌಂಟಿಂಗ್ | 2 |
| 27 | ಮಾಸ್ಟರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ | 28 |
| 28 | ಟೂರಿಸಂ ಅಡ್ಮಿನಿಸ್ಟ್ರೇಷನ್ | 2 |
| 29 | ಕಾನೂನು | 5 |
| 30 | ಸಂಗೀತ | 4 |
| 31 | ಭೌತಶಾಸ್ತ್ರ | 58 |
| 32 | ಎಲೆಕ್ಟ್ರಾನಿಕ್ಸ | 8 |
| 33 | ರಸಾಯನ ಶಾಸ್ತ್ರ | 20 |
| 34 | ಕೈಗಾರಿಕ ರಸಾಯನಶಾಸ್ತ್ರ | 3 |
| 35 | ಬಯೋಕೆಮಿಸ್ಟ್ರಿ | 3 |
| 36 | ಗಣಿತಶಾಸ್ತ್ರ | 42 |
| 37 | ಗಣಕ ವಿಜ್ಞಾನ | 116 |
| 38 | ಸಂಖ್ಯಾಶಾಸ್ತ್ರ | 4 |
| 39 | ಸಸ್ಯಶಾಸ್ತ್ರ | 31 |
| 40 | ಅಪ್ಲೈಡ್ ಬಾಟನಿ | 3 |
| 41 | ಬಯೋಟೆಕ್ನಾಲಜಿ | |

| | | |
|---|---|---|
| 42 | ಮೈಕ್ರೋಬಯಾಲಜಿ | 0 |
| 43 | ಪ್ರಾಣಿಶಾಸ್ತ್ರ | 20 |
| 44 | ಫೋರೆನ್ಸಿಕ್‌ಸೈನ್ಸ್ | |
| 45 | ಪರಿಸರ ವಿಜ್ಞಾನ | 2 |
| 46 | ರೇಷ್ಮೆಕೃಷಿ | 2 |
| 47 | ಭೂ ವಿಜ್ಞಾನ | 11 |
| 48 | ಪತ್ರಿಕೋದ್ಯಮ | 2 |
| 49 | ಗೃಹ ವಿಜ್ಞಾನ | 20 |
| | **ಒಟ್ಟು** | **847** |

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವಂತಹ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ಎನ್ನುವಂತಹ ಪ್ರಶ್ನೆಗೆ ಸರ್ಕಾರ ಆರ್ಥಿಕ ಇಲಾಖೆಯಿಂದ ಪ್ರಸ್ತಾವನೆ ವಾಪಸ್ ಬಂದಿದೆ, ಅಗತ್ಯವಿರುವಂತಹ ಹುದ್ದೆಗಳನ್ನು ಮಾತ್ರ ತುಂಬುವುದಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಅವರು ತಿಳಿಸಿದ್ದಾರೆ. ಅದರಲ್ಲಿ ಅಗತ್ಯವಿರುವಂತಹ 276 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಲು ಅನುಮತಿ ನೀಡುವಂತೆ ಕಡತವನ್ನು ಆರ್ಥಿಕ ಇಲಾಖೆಯ ಸಹಮತಿಗಾಗಿ ಕಳುಹಿಸಲಾಗಿದೆ ಎನ್ನುವಂತಹ ಉತ್ತರವನ್ನು ನೀಡಿದೆ. ಪ್ರಸ್ತುತ 847 ಹುದ್ದೆಗಳು 2009ನೇ ಇಸವಿಯಿಂದಲೂ ಖಾಲಿ ಇವೆ ಎನ್ನುವಂತಹ ಉತ್ತರವನ್ನೇನು ಸರ್ಕಾರ ನೀಡಿದೆ, ಇವೊತ್ತು ಪದವಿ ಕಾಲೇಜುಗಳಲ್ಲಿ Semester ಪದ್ಧತಿಯಲ್ಲಿ ಪಾಠ ಪ್ರವಚನಗಳು ನಡೆಯುತ್ತಿವೆ. ಹೀಗಿರುವಾಗ ಇಲ್ಲಿ 'ಅಗತ್ಯ ಇರುವಂತಹ ಹುದ್ದೆಗಳು' ಎನ್ನುವಂತಹ ಪ್ರಶ್ನೆ ಬರುವುದಿಲ್ಲ. 847 ಹುದ್ದೆಗಳೇನು ಖಾಲಿ ಇವೆ ಇವೆಲ್ಲವೂ ಅಗತ್ಯವಿರುವಂತಹ ಹುದ್ದೆಗಳೇ ಆಗಿವೆ. ಆದ್ದರಿಂದ ದಯಮಾಡಿ ಆರ್ಥಿಕ ಇಲಾಖೆಗೆ ಇವರು 276 ಹುದ್ದೆಗಳು ಮಾತ್ರ ಅಗತ್ಯ ಇರುವಂತಹ ಹುದ್ದೆಗಳೆಂದು ಏನು ಕಡತವನ್ನು ಕಳುಹಿಸಿದ್ದಾರೆ ಆ ಪ್ರಸ್ತಾವನೆಯನ್ನು ವಾಪಸ್ ಪಡೆದು ಖಾಲಿ

ಇರುವಂತಹ ಎಲ್ಲಾ 847 ಹುದ್ದೆಗಳು ಕೂಡ ಅಗತ್ಯವಿರುವಂತಹ ಹುದ್ದೆಗಳಾದ್ದರಿಂದ ಅವುಗಳನ್ನು ಕೂಡಲೇ ಭರ್ತಿ ಮಾಡಬೇಕೆಂದು ಪ್ರಸ್ತಾವನೆಯನ್ನು ಸಲ್ಲಿಸುವಂತಹ ಪ್ರಯುತ್ನಗಳನ್ನು ಮಾಡಬೇಕಂಬುದು ನನ್ನ ಕೋರಿಕೆಯಾಗಿದೆ.

ದಿನಾಂಕ:21.10.2009 ರಿಂದ ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿದೆ, ಆರ್ಥಿಕ ಮಿತವ್ಯಯ ಸಡಿಲಿಸಿದ ಮೇಲೆ ಈ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ ಎನ್ನುವಂತಹ ಉತ್ತರವನ್ನು ಸರ್ಕಾರ ನೀಡಿದೆ. 2009ರಿಂದ ಈ ಹುದ್ದೆಗಳು ಖಾಲಿ ಇರುವುದರಿಂದ ಆ ಕಾಲೇಜುಗಳಲ್ಲಿ Semester ಪದ್ಧತಿಯಂತೆ ವಿದ್ಯಾರ್ಥಿಗಳಿಗೆ ಪಾಠಗಳು ನಡೆಯುತ್ತಿಲ್ಲ. ಅತಿಥಿ ಉಪನ್ಯಾಸಕರ ನೇಮಕಾತಿ ಇದೆ, ಇದರಿಂದ ಉನ್ನತ ಶಿಕ್ಷಣದಲ್ಲಿ ಬಹಳ ಗೊಂದಲವಿದ್ದು ವಿದ್ಯಾರ್ಥಿಗಳು ಬಹಳಷ್ಟು ತೊಂದರೆಗಳಿಗೆ ಒಳಗಾಗಿದ್ದಾರೆ. ದಯಮಾಡಿ ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಆರ್ಥಿಕ ಇಲಾಖೆಯ ವತಿಯಿಂದ ಆರ್ಥಿಕ ಮಿತವ್ಯಯ ಆದೇಶವನ್ನು ಸಡಿಲಿಸಿ ಖಾಲಿ ಇರುವ 847 ಹುದ್ಧೆಗಳನ್ನು ಸಹ ಭರ್ತಿ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೆ? ಎಂಬ ಬಗ್ಗೆ ಮಾನ್ಯ ಸಚಿವರಿಂದ ನಾನು ಸ್ಪಷ್ಟವಾದ ಉತ್ತರವನ್ನು ಬಯಸುತ್ತೇನೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರಾದಂತಹ ಮರಿತಿಬ್ಬೇಗೌಡರು ಉನ್ನತ ಶಿಕ್ಷಣದ ವಿದ್ಯಾರ್ಥಿಗಳ ವಿಚಾರದಲ್ಲಿನ ಕಳಕಳಿಯಿಂದ ಈ ಪ್ರಶ್ನೆಯನ್ನು ಕೇಳಿದ್ದಾರೆ ಎಂದು ನಾನು ಗೌರವಿಸುತ್ತೇನೆ. ಅದರಲ್ಲಿ ಒಟ್ಟು 5794 ಹುದ್ದೆಗಳು ಮಂಜೂರಾಗಿರುವಂತಹ ಹುದ್ದೆಗಳಾಗಿದ್ದು ಅದರಲ್ಲಿ 4950 ಉಪನ್ಯಾಪಕರು ಈಗ ಕಾರ್ಯ ನಿರ್ವಹಿಸುತ್ತಿದ್ದಾರೆ. 847 ಉಪನ್ಯಾಸಕರ ಹುದ್ದೆಗಳು ಖಾಲಿ ಇದ್ದು ಅವುಗಳಲ್ಲಿ 799 ಹುದ್ದೆಗಳನ್ನು ಭರ್ತಿ ಮಾಡುವುದಕ್ಕೋಸ್ಕರ ನಾವು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೆವು. ಅವರು ಇದರಲ್ಲಿ ಅತ್ಯವಶ್ಯಕವಾಗಿರತಕ್ಕಂತಹ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಪಟ್ಟಿಯನ್ನು ಮತ್ತೆ ಪರಿಷ್ಕರಣೆ ಮಾಡಿ ಕಳುಹಿಸಿಕೊಡಿ ಎಂದು ವಾಪಸ್

ಕಳುಹಿಸಿಕೊಟ್ಟಿದ್ದಾರೆ. ವಿಜ್ಞಾನ, ಗಣಿತ ಮತ್ತು ವಾಣಿಜ್ಯ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳಿಗೆ ಅತಿಥಿ ಉಪನ್ಯಾಸಕರು ಕೂಡ ನಮಗೆ ಸಿಗುವುದಿಲ್ಲ. ಹೀಗಾಗಿ ಅವುಗಳನ್ನು ನಾವು ಅತ್ಯವಶ್ಯಕ ಎಂದು ಪರಿಗಣಿಸಿದ್ದೇವೆ. ಇನ್ನುಳಿದ ವಿಷಯಗಳಿಗೆ ಅತಿಥಿ ಉಪನ್ಯಾಸಕರು ಸಿಗುವುದರಿಂದ ಉಪನ್ಯಾಪಕರ ಕೊರತೆಯಾಗುವುದಕ್ಕೆ ನಾವು ಅವಕಾಶ ಕೊಟ್ಟಿಲ್ಲ. ಆದರೆ ಖಾಯಂ ಉಪನ್ಯಾಸಕರಿಲ್ಲ, ಅತಿಥಿ ಉಪನ್ಯಾಸಕರನ್ನು ನೇಮಕಮಾಡಿ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತಿದ್ದೇವೆ. ಅದರೆ remote area ಗಳಲ್ಲಿ ಮತ್ತು ವಿಜ್ಞಾನ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದ ವಿಷಯಗಳಿಗೆ ನಮಗೆ ಉಪನ್ಯಾಸಕರು ಸಿಗುವುದಿಲ್ಲ. ಅಂತಹ ಹುದ್ದೆಗಳನ್ನು ಬಹಳ ಅತ್ಯವಶ್ಯಕ ಎಂದು ಪರಿಗಣಿಸಿ ಆ ತಕ್ಷಣಕ್ಕೆ 276 ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸಿದ್ದೇವೆ, ಅವರು ಮೌಖಿಕವಾಗಿ ಅನುಮತಿ ಕೊಟ್ಟಿದ್ದಾರೆ, ನಾವು ಆ ವಿಚಾರದಲ್ಲಿ ವ್ಯವಹರಿಸುತ್ತಿದ್ದು ಅದನ್ನು ತಕ್ಷಣಕ್ಕೆ ಮಾಡುತ್ತೇವೆ. ಹಾಗಾದರೆ ಇನ್ನುಳಿದ ಬಾಕಿ ಹುದ್ದೆಗಳೇಕೆ ಭರ್ತಿಯಾಗಬಾರದು ಎನ್ನುವಂತಹ ಅವರ ಪ್ರಶ್ನೆ ಸಮಂಜಸವಾಗಿದೆ. ಉಳಿದಂತಹ ಹುದ್ದೆಗಳಿಗೆ ಕೂಡ ಮುಂದಿನ ಹಂತದಲ್ಲಿ ನೇಮಕ ಮಾಡಿಕೊಳ್ಳುವುದಕ್ಕೆ ಬೇಕಾದಂತಹ ಅಗತ್ಯ ಕ್ರಮವನ್ನು ನಾವು ಕೈಗೊಳ್ಳುತ್ತೇವೆ.

ಮಾನ್ಯ ಸಭಾಪತಿಯವರೇ, ಇಷ್ಟೆಲ್ಲಾ ಕೊರತೆಯಾಗಿದ್ದಕ್ಕೆ ಒಂದು ರೀತಿಯಲ್ಲಿ ಪ್ರತ್ಯೇಕ್ಷವಾಗಿ ಮತ್ತು ಪರೋಕ್ಷವಾಗಿ ತಾವೇ ಕಾರಣರೆಂದು ಹೇಳಬೇಕಾಗುತ್ತದೆ. ಇದು ಆರೋಪ ಅಲ್ಲ ಪ್ರಶಂಸೆಯ ಮಾತು. ನಾನು ತಮ್ಮ ಮೇಲೆ ಖಂಡಿತವಾಗಿಯೂ ಆರೋಪ ಮಾಡುತ್ತಿಲ್ಲ. ತಾವು ಸಚಿವರಾಗುವುದಕ್ಕೆ ಮುಂಚೆ ನಮ್ಮ ಇಡೀ ರಾಜ್ಯದಲ್ಲಿ ಒಟ್ಟು 166 ಪ್ರಥಮ ದರ್ಜೆ ಕಾಲೇಜುಗಳಿದ್ದವು, ತಾವು ಉನ್ನತ ಶಿಕ್ಷಣ ಸಚಿವರಾದ ನಂತರ 194 ಕಾಲೇಜುಗಳಿಗೆ ಅನುಮತಿಯನ್ನು ಕೊಟ್ಟಿದ್ದೀರಿ. ಹೀಗಾಗಿ ನಮ್ಮ ರಾಜ್ಯದಲ್ಲಿ ಒಟ್ಟು 360 ಪ್ರಥಮ ದರ್ಜೆ ಕಾಲೇಜುಗಳಿವೆ. ಈ ರೀತಿ ಹೊಸ ಪ್ರಥಮ ದರ್ಜೆ ಕಾಲೇಜುಗಳಿಗೆ ಅನುಮತಿಯನ್ನು ಕೊಟ್ಟಿದ್ದರಿಂದಾಗಿ ನಮಗೆ

ಇಷ್ಟು ಪ್ರಮಾಣದಲ್ಲಿ ಉಪನ್ಯಾಪಕರ ಹುದ್ದೆಗಳು ಕೊರತೆಯಾಗುವುದಕ್ಕೆ ಕಾರಣವಾಯಿತು. ಆದರೂ ಮಾನ್ಯ ಮರಿತಿಬ್ಬೇಗೌಡರು ಇವೊತ್ತು ಉನ್ನತ ಶಿಕ್ಷಣದ ಕಾಳಜಿಯಿಂದ ಈ ಪ್ರಶ್ನೆಯನ್ನೇನು ಕೇಳಿದ್ದಾರೆ ಆ ದೃಷ್ಟಿಯಲ್ಲಿ ಭರ್ತಿ ಮಾಡಿಕೊಳ್ಳುವುದಕ್ಕೆ ಬೇಕಾದಂತಹ ಕ್ರಮವನ್ನು ಆರ್ಥಿಕ ಇಲಾಖೆಯ ಜೊತೆಯಲ್ಲಿ ವ್ಯವಹರಿಸಿ ಹಂತಹಂತವಾಗಿ ಆ ಎಲ್ಲ ಹುದ್ದೆಗಳನ್ನು ಭರ್ತಿ ಮಾಡುವಂತಹ ಕೆಲಸವನ್ನು ನಾವು ಮಾಡುತ್ತೇವೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ತಾವು ಉನ್ನತ ಶಿಕ್ಷಣ ಸಚಿವರಾಗಿದಂತಹ ಅವಧಿಯಲ್ಲಿ ಬಹಳಷ್ಟು ಉತ್ತಮವಾದಂತಹ ಕೆಲಸಗಳನ್ನು ಮಾಡಿದ್ದೀರಿ. ಆದರೆ ಇವೊತ್ತು ಆರ್ಥಿಕ ಮಿತವ್ಯಯವನ್ನು ಸಡಿಲಿಸಿ ಈ ನೇಮಕಾತಿಗೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಆದೇಶ ಮಾಡುತ್ತಾರೆಯೇ ಎಂಬುದು ಪ್ರಮುಖವಾದಂತಹ ಒಂದು ವಿಚಾರ. ಇನ್ನು ಎರಡನೆಯದಾಗಿ ಅನುದಾನಿತ ಕಾಲೇಜುಗಳಲ್ಲಿ ಕಳೆದ 20 ವರ್ಷಗಳಿಂದ ರಾಜಿನಾಮೆ, ನಿವೃತ್ತಿ, ಇನ್ನಿತರೆ ಕಾರಣಗಳಿಂದ ಖಾಲಿಯಾಗಿರುವಂತಹ ಉಪನ್ಯಾಸಕರ ಹುದ್ದೆಗಳನ್ನು ಕಳೆದ 20 ವರ್ಷಗಳಿಂದ ಯಾವುದೇ ಸರ್ಕಾರ ಕೂಡ ಭರ್ತಿ ಮಾಡುವುದಕ್ಕೆ ಅವಕಾಶ ಕೊಡಲಿಲ್ಲ. ಇವೊತ್ತು ಶೇಕಡಾ 70 ಕ್ಕೂ ಹೆಚ್ಚು ಭಾಗ ಪ್ರತಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರು ಕೆಲಸ ಮಾಡುತ್ತಿದ್ದಾರೆ. ಇನ್ನು ಕೇವಲ ಎರಡು–ಮೂರು ವರ್ಷಗಳಲ್ಲಿ U.G.C. ವೇತನ ಶ್ರೇಣಿಯನ್ನು ಪಡೆಯುತ್ತಿರುವಂತಹ ಖಾಯಂ ಉಪನ್ಯಾಸಕರೆಲ್ಲರೂ ಸಹ ನಿವೃತ್ತರಾಗುವುದರಿಂದ ಅಲ್ಲಿ ಶೇಕಡ 100ರಷ್ಟು ಪ್ರಮಾಣದಲ್ಲಿ ಅತಿಥಿ ಉಪನ್ಯಾಸಕರು ಬರುತ್ತಾರೆ. ಆದ್ದರಿಂದ ದಯವಿಟ್ಟು ಅನುದಾನಿತ ಕಾಲೇಜುಗಳಲ್ಲಿ ಕಳೆದ ಸುಮಾರು 20 ವರ್ಷಗಳಿಂದ ಖಾಲಿ ಉಳಿದಿರುವಂತಹ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ವಿಚಾರದಲ್ಲಿ ಈ ಸರ್ಕಾರ ಕ್ರಮ ಕೈಗೊಳ್ಳುವ ದೃಷ್ಟಿಯಿಂದ ಕಾಳಜಿಯನ್ನು ವಹಿಸುತ್ತದೆಯೇ? ಈಗ ನೇಮಕಾತಿ ಮಾಡುವುದಕ್ಕೆ ಹೊರಟಿರುವಂತಹ ಹುದ್ದೆಗಳ ವಿಚಾರದಲ್ಲಿ ಸಹ ಸರ್ಕಾರ ಆರ್ಥಿಕ ಮಿತವ್ಯಯಯನ್ನು ಸಡಿಸಿಲಿ ನೇಮಕಾತಿಯನ್ನು

ಮಾಡುತ್ತದೆಯೇ ಎಂಬ ಬಗ್ಗೆ ಮಾನ್ಯ ಸಚಿವರು ನೇರವಾಗಿ ಉತ್ತರಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ತಾವು ಉನ್ನತ ಶಿಕ್ಷಣ ಸಚಿವರಾಗಿದ್ದಾಗ ಹೊಸ ಪ್ರಥಮ ದರ್ಜೆ ಕಾಲೇಜುಗಳ ಪ್ರಾರಂಭಕ್ಕೆ ಅನುಮತಿಯನ್ನು ಕೊಟ್ಟ ನಂತರ ಮಾನ್ಯ ಅರವಿಂದ ಲಿಂಬಾವಳಿಯವರು ಉನ್ನತ ಶಿಕ್ಷಣ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಸುಮಾರು ಎರಡೂವರೆ ಸಾವಿರ ಉಪನ್ಯಾಸಕರನ್ನು ಕರ್ನಾಟಕ ಲೋಕ ಸೇವಾ ಆಯೋಗ ಮುಖಾಂತರ ನೇರ ನೇಮಕಾತಿಯನ್ನು ಮಾಡಿಕೊಂಡಿದ್ದು ಈಗಾಗಲೇ ಅವರು ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈಗ ಬಾಕಿ ಉಳಿದಿರುವುದು 847 ಹುದ್ದೆಗಳು ಮಾತ್ರ.

ಮಾನ್ಯ ಸದಸ್ಯರು ಇದಕ್ಕೆ ಸಂಬಂಧಿಸಿದಂತೆ ಕೇಳಿರುವಂತಹ ಮತ್ತೊಂದು ಪ್ರಶ್ನೆ ಎಂದರೆ ಸರ್ಕಾರ ಆರ್ಥಿಕ ಮಿತವ್ಯಯವನ್ನು ಸಡಿಲಿಸಿ ನೇಮಕಾತಿ ಮಾಡಿಕೊಳ್ಳಲಾಗುತ್ತದೆಯೇ ಎಂದು ಕೇಳಿದ್ದಾರೆ. ಯಾವುದೇ ಸರ್ಕಾರವಾದರೂ ಸಹ ಶಿಕ್ಷಣಕ್ಕೆ ಅದ್ಯತೆಯನ್ನು ಕೊಡಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ಮಿತವ್ಯಯವನ್ನು ಶಿಕ್ಷಣಕ್ಕೆ ಅನ್ವಯಿಸಬಾರದು ಎನ್ನುವಂತಹ ವಿನಂತಿಯನ್ನು ಆರ್ಥಿಕ ಇಲಾಖೆಯವರಲ್ಲಿ ಮಾಡಿಕೊಳ್ಳುತ್ತೇನೆ. ಈ ವಿಚಾರವಾಗಿ ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಸಹ ಮಾತನಾಡುತ್ತೇನೆ. ಅದರಿಂದ ಇಡೀ ವ್ಯವಸ್ಥೆಗೆ ಒಂದು ಹೊಡೆತ ಬೀಳುತ್ತದೆ. ಹಾಗಾಗಿ ಶಿಕ್ಷಣ ಕ್ಷೇತ್ರಕ್ಕೆ, ಅದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವಾಗಿರಬಹುದು ಅಥವಾ ಉನ್ನತ ಶಿಕ್ಷಣವಾಗಿರಬಹುದು ಆ ವಿಚಾರದಲ್ಲಿ ಹುದ್ದೆಗಳ ಭರ್ತಿಗೆ ಮಿತವ್ಯಯದ ಮಿತಿಯನ್ನು ವಿಧಿಸಬಾರದೆಂದು ಮಾನ್ಯ ಮುಖ್ಯಮಂತ್ರಿಯವರು ಮತ್ತು ಆರ್ಥಿಕ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ ಮಾನ್ಯ ಸದಸ್ಯರ ಭಾವನೆಗಳಿಗೆ ಸ್ಪಂದಿಸುವಂತಹ ಕೆಲಸವನ್ನು ನಾವು ಮಾಡುತ್ತೇವೆ.

ಮಾನ್ಯ ಸದಸ್ಯರು ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಬಗ್ಗೆ ಮತ್ತೊಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಹೇಳಿರತಕ್ಕಂತಹ ಮಾತು ನಿಜ, ಕಳೆದ 20 ವರ್ಷಗಳಿಂದ ಅಲ್ಲಿ ನಿವೃತ್ತಿಯಾಗಿರುವ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಕ್ರಮವನ್ನು ಕೈಗೊಂಡಿಲ್ಲ. ಇದರಿಂದ ತೊಂದರೆಯಾಗುತ್ತಿರುವುದು ಕೂಡ ನಿಜ. ಆ ಬಗ್ಗೆ ನಾವು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇವೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಯವರೇ ಹಣಕಾಸು ಖಾತೆಯ ಸಚಿವರಾಗಿರುವುದರಿಂದ ಅವರ ಜೊತೆಯಲ್ಲಿ ಚರ್ಚಿಸಿ ನಾವು ಈ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎನ್ನುವಂತಹ ವಿಚಾರವನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

**ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ವಾರ್ಡ್ ಹಾಗೂ ತಜ್ಞ ವೈದ್ಯರ ಕೊರತೆ ಬಗ್ಗೆ.**

**339;** ಶ್ರೀಮತಿ ಎ.ವಿ.ಗಾಯತ್ರಿ ಶಾಂತೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಅ)** ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ಮಕ್ಕಳ ವಿಭಾಗಕ್ಕೆ ಮತ್ತು ಪ್ರಸೂತಿ ತಜ್ಞತಾ ವಿಭಾಗಕ್ಕೆ ಹೆಚ್ಚುವರಿ ವಾರ್ಡ್ ಅವಶ್ಯಕತೆ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದರೆ ಏನು ಕ್ರಮ ವಹಿಸಲಾಗಿದೆ;

**ಆ)** ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ಸಿ.ಟಿ.ಸ್ಕ್ಯಾನ್ ಯಂತ್ರದ ಅವಶ್ಯಕತೆ ಇದೆಯೇ; ಇದ್ದಲ್ಲಿ ಅಳವಡಿಸಲು ಏನು ಕ್ರಮ ವಹಿಸಲಾಗಿದೆ;

**ಇ)** ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯರ ಮತ್ತು ತಜ್ಞ ವೈದ್ಯರ ಕೊರತೆ ಇದ್ದು, ವೈದ್ಯರ ನೇಮಕದ ಬಗ್ಗೆ ಕ್ರಮವಹಿಸುವುದಾಗಿ ಮುಖ್ಯ ಮಂತ್ರಿಗಳು ಹಿಂದಿನ ಅಧಿವೇಶನದಲ್ಲಿ ತಿಳಿಸಿದ್ದರೂ ಸಹ ಇಲ್ಲಿಯವರೆಗೂ ನೇಮಕಾತಿಯಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ, ಈ ಬಗ್ಗೆ ಏನು ಕ್ರಮ ವಹಿಸಲಾಗಿದೆ?

ಶ್ರೀ ಅರವಿಂದ ಲಿಂಬಾವಳಿ( ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯು ಒಟ್ಟು 400 ಹಾಸಿಗೆಗಳ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದರಲ್ಲಿ ಮಹಿಳೆ ಮತ್ತು ಮಕ್ಕಳ ವಿಭಾಗದ 100 ಹಾಸಿಗೆಗಳು ಸಹ ಒಳಗೊಂಡಿವೆ. ಈ ಪೈಕಿ, ಪ್ರಸೂತಿ ವಿಭಾಗಕ್ಕೆ 80 ಹಾಸಿಗೆಗಳು ಹಾಗೂ ಮಕ್ಕಳ ವಿಭಾಗಕ್ಕೆ 20 ಹಾಸಿಗೆಗಳನ್ನು ಮೀಸಲಿಡಲಾಗಿದೆ. ಸದರಿ ಪ್ರಸೂತಿ ಮತ್ತು ಮಕ್ಕಳ ವಿಭಾಗಗಳಲ್ಲಿ ಕಳೆದ 3 ವರ್ಷಗಳ ಹಾಸಿಗೆಗಳ ಬಳಕೆ ಪ್ರಮಾಣ ದರವು ಕೆಳಕಂಡಂತಿದೆ.

| ವಿವರ | 2010 | 2011 | 2012 |
|---|---|---|---|
| ಪ್ರಸೂತಿ ಪ್ರಕರಣಗಳು | 3265 | 3493 | 1686 |
| ಹಾಸಿಗೆ ಬಳಕೆ ಪ್ರಮಾಣ | 11.18 | 11.96 | 5.77 |
| ಮಕ್ಕಳ ಪ್ರಕರಣಗಳು | 1969 | 2175 | 1412 |
| ಹಾಸಿಗೆ ಬಳಕೆ ಪ್ರಮಾಣ | 26.97 | 29.79 | 19.34 |

ಆದ್ದರಿಂದ, ಈ ವಿಭಾಗಗಳಿಗೆ ಹೆಚ್ಚುವರಿ ವಾರ್ಡ್‌ನ ಅವಶ್ಯಕತೆ ಇರುವುದಿಲ್ಲ.

ಆ) ಸದರಿ ಆಸ್ಪತ್ರೆಯು ದ್ವಿತೀಯ ಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸುತ್ತಿದೆ. ಈ ಮಟ್ಟದ ಸೇವೆಗೆ ಸಿ.ಟಿ.ಸ್ಕ್ಯಾನ್ ಯಂತ್ರದ ಅವಶ್ಯಕತೆ ಇರುವುದಿಲ್ಲ.

ಇ) ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ 28 ತಜ್ಞ ವೈದ್ಯರು, 02 ಉಪ ಮುಖ್ಯ ವೈದ್ಯಾಧಿಕಾರಿಗಳು ಹಾಗೂ 02 ದಂತ ಆರೋಗ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 21 ತಜ್ಞ ವೈದ್ಯರು, ಒಬ್ಬರು

ಉಪ ಮುಖ್ಯ ವೈದ್ಯಾಧಿಕಾರಿ ಹಾಗೂ 02 ದಂತ ಆರೋಗ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ಆಸ್ಪತ್ರೆಯಲ್ಲಿ 07 ತಜ್ಞರು ಮತ್ತು 01 ಉಪ ಮುಖ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ. ಭರ್ತಿ ಮಾಡಲಾದ ಹುದ್ದೆಗಳ ಪೈಕಿ, ಏಪ್ರೀಲ್ 2012 ರಲ್ಲಿ ಸರ್ಜನ್, ಪೆಥಾಲಜಿ ಮತ್ತು ಅರವಳಿಕೆ ತಜ್ಞತೆಗಳಲ್ಲಿ ತಲಾ ಒಬ್ಬರು ವೈದ್ಯರನ್ನು ಈ ಆಸ್ಪತ್ರೆಗೆ ಸ್ಥಳ ನಿಯುಕ್ತಿ ಮಾಡಲಾಗಿದೆ. ಮುಂದುವರೆದು, ಇತ್ತೀಚೆಗೆ ಮತ್ತೋರ್ವ ಅರವಳಿಕೆ ತಜ್ಞರನ್ನು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಯೋಜನೆಯಡಿ ಈ ಆಸ್ಪತ್ರೆಯ ಮಹಿಳಾ ಮತ್ತು ಮಕ್ಕಳ ವಿಭಾಗಕ್ಕೆ ನೇಮಿಸಲಾಗಿದೆ.

**ಶ್ರೀಮತಿ ಎ.ವಿ.ಗಾಯತ್ರಿ ಶಾಂತೇಗೌಡ:–** ಮಾನ್ಯ ಸಭಾಪತಿಯವರೇ, ನನ್ನ ಮೊದಲನೆಯ ಪ್ರಶ್ನೆಗೆ ಸರ್ಕಾರ ನೀಡಿರುವಂತಹ ಉತ್ತರದಲ್ಲಿ 2010 ರಲ್ಲಿ 3265 ಪ್ರಸೂತಿ ಪ್ರಕರಣಗಳು, 2011 ರಲ್ಲಿ 3493, 2012 ರಲ್ಲಿ 1686 ಎಂದು ಉತ್ತರ ಕೊಟ್ಟಿದ್ದಾರೆ. ಅದೇ ರೀತಿ 2010 ರಲ್ಲಿ ಹಾಸಿಗೆ ಬಳಕೆ ಪ್ರಮಾಣ 11.18 2011 ರಲ್ಲಿ 11.96, 2012ರಲ್ಲಿ 5.77 ಬಳಕೆ ಮಾಡಲಾಗಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ ಸರ್ಕಾರ ಒಂದು ದಿನದ ಮಟ್ಟಿಗೆ percentage ಲೆಕ್ಕದಲ್ಲಿ ಹಾಸಿಗೆ ಪ್ರಮಾಣವನ್ನು ಕೊಟ್ಟಿದ್ದಾರೆ. ಆದರೆ ನಾನು ಹೇಳುವುದೇನೆಂದರೆ, ಯಾರಿಗಾದರು Cesarean ಆದರೆ ಏಳೆಂಟು ದಿವಸ ಆಸ್ಪತ್ರೆಯಲ್ಲಿ ಇರಬೇಕಾಗುತ್ತದೆ. Normal delivery ಅದರೆ ಮೂರು ದಿವಸ ಇರಬೇಕಾಗುತ್ತದೆ. ಅದೇ ರೀತಿ Tubectomy ಆದರೆ ಆರರಿಂದ ಏಳು ದಿವಸ ಇರಬೇಕಾಗುತ್ತದೆ. Laparoscopy ಮಾಡಿಸಿಕೊಳ್ಳುವವರು ಒಂದು ದಿವಸಕ್ಕೆ ಬಂದು ಹೋಗುವವರು ಇರುತ್ತಾರೆ. ದೂರದ ಊರಿಗೆ ಹೋಗುವುದಾದರೆ ಆಸ್ಪತ್ರೆಯಲ್ಲಿಯೇ ಉಳಿದುಕೊಳ್ಳಬೇಕಾಗುತ್ತದೆ. ಆದುದರಿಂದ ಹಾಸಿಗೆ ಬಳಕೆ ಪ್ರಮಾಣವನ್ನು ಹಾಕಬಾರದೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ನಾನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ C.T.Scan ಯಂತ್ರದ ಅವಶ್ಯಕತೆ ಇದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದೆ, ಅದಕ್ಕೆ ಉತ್ತರವಾಗಿ ಸದರಿ ಆಸ್ಪತ್ರೆಯು ದ್ವಿತೀಯ ಮಟ್ಟದ ಆರೋಗ್ಯ ಸೇವೆಗಳನ್ನು

ಒದಗಿಸುತ್ತಿದೆ. ಈ ಮಟ್ಟದ ಸೇವೆಗೆ C.T.Scan ಯಂತ್ರದ ಅವಶ್ಯಕತೆ ಇರುವುದಿಲ್ಲವೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ ನಾನು ಈ ಪ್ರಶ್ನೆಯನ್ನು ಏಕೆ ಕೇಳುತ್ತಿದ್ದೇನೆಂದರೆ, ಸರ್ಕಾರಿ ಆಸ್ಪತ್ರೆಗೆ ಬರುವಂಥವರು ಬಡವರಾಗಿರುವುದರಿಂದ ಅವರು ಯಾವುದಾದರು ಒಂದು check up ಮಾಡಿಸಿಕೊಳ್ಳಬೇಕೆಂದರೆ C.T.Scan ಗೆ ಬರೆದು ಕಳಿಸುತ್ತಾರೆ. ಆದರೆ ಈ C.T.Scan ಮಾಡಿಸಬೇಕೆಂದರೆ ಎರಡು ಸಾವಿರ ರೂಪಾಯಿಗಳು ಬೇಕಾಗುತ್ತದೆ. ಆದುದರಿಂದ ನಮಗೆ ಆಧುನಿಕ ಉಪಕರಣಗಳ ಅವಶ್ಯಕತೆ ಕಂಡು ಬಂದಿರುವುದರಿಂದ ಸರ್ಕಾರದ ಗಮನಕ್ಕೆ ತಂದು C.T.Scan ಉಪಕರಣವನ್ನು ಅಳವಡಿಸಬೇಕೆಂದು ಕೋರುತ್ತೇನೆ. ನಂತರ ನನ್ನ ಮೂರನೇ ಪ್ರಶ್ನೆ ಏನೆಂದರೆ, ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯರ ಮತ್ತು ತಜ್ಞ ವೈದ್ಯರ ಕೊರತೆ ಬಗ್ಗೆ ಕೇಳಿದ್ದೆ, ಅದಕ್ಕೆ ಉತ್ತರವಾಗಿ ಏಪ್ರೀಲ್ 2012 ರಲ್ಲಿ Pathology ಮತ್ತು ಅರವಳಿಕೆ ತಜ್ಞತೆಗಳಲ್ಲಿ ತಲಾ ಒಬ್ಬರು ವೈದ್ಯರನ್ನು ಈ ಆಸ್ಪತ್ರೆಗೆ ಸ್ಥಳ ನಿಯುಕ್ತಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಆದರೆ ಈಗ ಅಲ್ಲಿ Nephro Urologist ಮತ್ತು Cardiologist ಹುದ್ದೆ ಖಾಲಿ ಇದೆ. ಏಕೆಂದರೆ ಇತ್ತೀಚಿನ ದಿನಗಳಲ್ಲಿ ಮೂತ್ರಪಿಂಡದ ತೊಂದರೆ ಹೆಚ್ಚಾಗಿ ಆಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಮೂತ್ರಪಿಂಡದ ತೊಂದರೆ ಉಂಟಾದಂತಹ ಒಬ್ಬ ವ್ಯಕ್ತಿಯನ್ನು ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲು ಸಾಧ್ಯವಾಗದ ಕಾರಣ ಅವರಿಗೆ ಚಿಕಿತ್ಸೆ ಕೊಡಿಸಲು ಮಂಗಳೂರಿಗೆ ಕರೆದುಕೊಂಡು ಹೋದರು. ಆದರೆ ಅಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಅವರು ಎರಡೇ ದಿವಸದಲ್ಲಿ ಸಾವನ್ನಪ್ಪಿದರು. ಆದುದರಿಂದ ಈ ಆಸ್ಪತ್ರೆಯಲ್ಲಿ ತಜ್ಞ ವೈದ್ಯರನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ಈಗ ಹೃದಯ ತಜ್ಞರ ಹುದ್ದೆ ಮಂಜೂರಾಗಿದೆ. ಅದಕ್ಕೂ ಸಹ ಒಬ್ಬ ವೈದ್ಯರ ಅವಶ್ಯಕತೆ ಇದೆ ಎಂದು ಮಾನ್ಯ ಸಚಿವರ ಗಮನಕ್ಕೆ ತರುತ್ತಾ, ಇನ್ನು ಮೂತ್ರಪಿಂಡದ ರೋಗಿ dialysis ಮಾಡಿಸಿಕೊಳ್ಳಬೇಕೆಂದರೆ ಅವರು ಬೆಂಗಳೂರು, ಶಿವಮೊಗ್ಗ, ಹಾಸನ ಅಥವಾ ಮಂಗಳೂರಿಗೆ ಹೋಗಬೇಕು. ವಾರದಲ್ಲಿ ಮೂರು ಸಲ dialysis ಮಾಡಿಸಬೇಕಾಗುವುದರಿಂದ ಅವರಿಗೆ ಅಲ್ಲಿಗೆ ಹೋಗಿ ಬರಲು ತುಂಬಾ ತೊಂದರೆಯಾಗುತ್ತದೆ.

ಆದುದರಿಂದ ಈ ತಜ್ಞ ವೈದ್ಯರ ಅವಶ್ಯಕತೆ ಇರುವುದರಿಂದ ಕೂಡಲೆ ನೇಮಕ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಅರವಿಂದ ಲಿಂಬಾವಳಿ:–** ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸದಸ್ಯರಾದಂತಹ ಶ್ರೀಮತಿ ಗಾಯತ್ರಿ ಶಾಂತೇಗೌಡರು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಾವು ಉತ್ತರದಲ್ಲಿ percentage ಹಾಕಿರುವುದು ಏಕೆಂದರೆ, ಹಾಸಿಗೆಗಳು ಎಷ್ಟು ಬಳಕೆಯಾಗಿವೆ ಎಂಬುದನ್ನು ಹಾಕಿದ್ದೇವೆ. ಆದರೆ peak time ಅಂತಹ ಸಂದರ್ಭದಲ್ಲಿ ಕೊರತೆಯಾಗಿರಬಹುದು. ಅದನ್ನು ಸರಿಪಡಿಸುವಂತಹ ಅಗತ್ಯ ಬಿದ್ದರೆ ನಿಶ್ಚಿತವಾಗಿ ಅದನ್ನು ಸರಿಪಡಿಸುವಂತಹ ಕೆಲಸ ಮಾಡಲಾಗುತ್ತದೆ. ಇನ್ನು ಎರಡನೆಯ ಪ್ರಶ್ನೆ ಏನೆಂದರೆ, ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ C.T.Scan ಯಂತ್ರದ ಅವಶ್ಯಕತೆ ಇರುವುದಿಲ್ಲ ಎನ್ನುವುದಕ್ಕಿಂತ ಹೆಚ್ಚಾಗಿ ಇದು ದ್ವಿತೀಯ ದರ್ಜೆ ಆಸ್ಪತ್ರೆ ಆಗಿರುವುದರಿಂದ ಇಲ್ಲಿ provision ಇಲ್ಲ. ಆದರೆ ನಮ್ಮ ಇಲಾಖೆಗೆ ಬರುವಂತಹ ಗುಲ್ಬರ್ಗ ಆಸ್ಪತ್ರೆಯಲ್ಲಿ ಮಾತ್ರ ಈ ಸೌಲಭ್ಯವನ್ನು ಕಲ್ಪಿಸಬಹುದಾಗಿದೆ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ, ಈ ಹಿಂದೆ ಆರೋಗ್ಯ ಸಚಿವರಾಗಿದ್ದಂತವರು ಪ್ರತೀ ಜಿಲ್ಲಾ ಆಸ್ಪತ್ರೆಗಳಿಗೆ C.T.Scan ಕೊಡುವುದರ ಜೊತೆಗೆ ಪ್ರತೀಯೊಂದು ಜಿಲ್ಲಾ ಆಸ್ಪತ್ರೆಗಳಲ್ಲಿ Ventilator System ಒದಗಿಸುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತೇವೆಂದು ಹೇಳಿದ್ದರು. ನಿಜವಾಗಿಯೂ ಎಲ್ಲಾ ಜಿಲ್ಲಾ ಆಸ್ಪತ್ರೆಗಳಿಗೆ C.T.Scan ಬೇಕೇ ಬೇಕು. ಆದರೆ ಮಾಡುವುದಕ್ಕೆ ಮೊದಲು ಪ್ರಾಮುಖ್ಯವಾಗಿ ಅದಕ್ಕೆ experienced technologists ಬೇಕು. ಅವರು ಇಲ್ಲದೆ ಹೋದರೆ ನೀವು ದಯವಿಟ್ಟು ಯಾರಿಗೂ C.T.Scan ಕೊಡುವ ಅವಶ್ಯಕತೆ ಇಲ್ಲ. ಅಲ್ಲಿರುವಂತಹ ಸಿಬ್ಬಂದಿ operate ಮಾಡುವಂಥವರು they are most important. ಅವರು ತಾನೆ ಪೂರ್ತಿ reading ಮಾಡಿ ಕೊಡುವುದು. ನಾವು ಈ ಕೆಲಸವನ್ನು ಮಾಡಿ ಎಂದು ಹೇಳುತ್ತೇವೆ. ಮಾಡುವುದಕ್ಕಿಂತ ಮೊದಲು

ಅದನ್ನು operate ಮಾಡುವುದಕ್ಕೆ ಬೇಕಾದಂತಹ Operators ಮತ್ತು ಬೇಕಾದಂತಹ Technologists ಸಹ ಕೊಡಬೇಕು. ಅಲ್ಲದೆ ಅದಕ್ಕೆ ಒಬ್ಬ Radiologist ಬೇಕಲ್ಲವೆ? Radiologists ಇಲ್ಲದೆ ನೀವು C.T.Scan ಕೊಟ್ಟು ಏನು ಮಾಡುತ್ತೀರಿ? This is also more important. ಇದನ್ನು ಗಮನದಲ್ಲಿಟ್ಟುಕೊಂಡು ಮಾಡಿ. ಆದರೆ provision ಇಲ್ಲ ಎಂದು ಹೇಳಬೇಡಿ. This is a wrong approach. ಸರ್ಕಾರ ಇದನ್ನು ಮಾಡುವುದಕ್ಕೆ ಬೇಕಾದಂತಹ ಕ್ರಮವನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ನನಗೆ ಆ ಆಸ್ಪತ್ರೆಯ ಬಗ್ಗೆ ವಿಶೇಷವಾದಂತಹ ಅನುಭವ ಇದೆ. ನಾನು ಚಿಕ್ಕವನಿರುವಾಗ ನಮ್ಮ ತಂದೆಗೆ ಒಂದು ಸಣ್ಣ operation ಮಾಡಿಸುವುದಕ್ಕೆ ಅವರನ್ನು ಅಲ್ಲಿ admit ಮಾಡಿಸಿದ್ದರು. ಅವರನ್ನು Operation Theature ಗೆ ಕರೆದುಕೊಂಡು ಹೋದರು, ಕರೆದುಕೊಂಡು ಹೋದಮೇಲೆ ಅಲ್ಲಿ ಏನೋ ಸಮಸ್ಯೆಯಾಗಿ ಒಂದು ವಾರ operation ಮಾಡುವುದಕ್ಕೆ ಆಗಿರಲಿಲ್ಲ. ಕಡೆಗೆ ಆ ಆಸ್ಪತ್ರೆಯಿಂದ ಕರೆದುಕೊಂಡು ಬಂದು ಬೇರೆ ಆಸ್ಪತ್ರೆಯಲ್ಲಿ operation ಮಾಡಿಸಿದರು. ಆದಕಾರಣ ಮಲೆನಾಡ ಭಾಗದಲ್ಲಿ ಒಂದು ಒಳ್ಳೆಯ ಆಸ್ಪತ್ರೆಯ ಅವಶ್ಯಕತೆ ಇದೆ. ಅದೇ ರೀತಿ ಮೂಲಭೂತ ಸೌಕರ್ಯಗಳನ್ನು ಕೊಡಬೇಕಾದಂತಹ ಅವಶ್ಯಕತೆ ಸಹ ಇದೆ. ನಮಗೆಲ್ಲರಿಗೂ ತಿಳಿದಿರುವಂತೆ ಚಿಕಿತ್ಸೆಗೆಂದು ಚಿಕ್ಕಮಗಳೂರಿನಿಂದ ಮಣಿಪಾಲಿಗೆ ಬರಬೇಕಾಗುತ್ತದೆ ಇಲ್ಲ ಬೆಂಗಳೂರಿಗೆ ಬರಬೇಕಾಗುತ್ತದೆ. ಹಾಗಾಗಿ ಮಾನ್ಯ ಸದಸ್ಯರ ವಿನಂತಿಗೆ ಧ್ವನಿಗೂಡಿಸುತ್ತಾ, ಆ ಆಸ್ಪತ್ರೆಯನ್ನು ಒಂದು ಸಾವಿರ ಸಾಮರ್ಥ್ಯದ ಹಾಸಿಗೆಗಳುಳ್ಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಬೇಕೆಂದು ಕೋರುತ್ತೇನೆ ಹಾಗೂ ಆ ಆಸ್ಪತ್ರೆಗೆ ಮೂಲಭೂತ ಸೌಕರ್ಯಗಳ ಅವಶ್ಯಕತೆ ಇರುವುದರಿಂದ ಅದನ್ನು ಒದಗಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ತಮ್ಮಿಂದ ಆಗಬೇಕೆಂದು ಆ ಕ್ಷೇತ್ರದ ಎಲ್ಲಾ ಜನರ ಪರವಾಗಿ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಅರವಿಂದ ಲಿಂಬಾವಳಿ:–** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದಂತಹ ಮಾನ್ಯ ನಾಣಯ್ಯನವರು ಕೊಟ್ಟಿರುವಂತಹ ಸಲಹೆ ಏನಿದೆ ಅದು ನಿಜಕ್ಕೂ ಉತ್ತಮವಾಗಿದೆ. ಏಕೆಂದರೆ ಇತ್ತೀಚಿನ ವರ್ಷಗಳಲ್ಲಿ ನಮ್ಮ ಆರೋಗ್ಯ ಇಲಾಖೆಯಲ್ಲಿ ಸಾಕಷ್ಟು ಅಭಿವೃದ್ಧಿಯನ್ನು ಮಾಡಲಾಗಿದೆ. ನಿಶ್ಚಿತವಾಗಿ ಜಿಲ್ಲಾ ಆಸ್ಪತ್ರೆಗಳಿಗೆ ಬೇಕಾಗಿರುವಂತಹ ಎಲ್ಲಾ ಸೌಲಭ್ಯಗಳನ್ನು ಒದಗಿಸುವುದು ತುಂಬಾ ಅವಶ್ಯವಾಗಿದೆ. ಮಾನ್ಯ ನಾಣಯ್ಯನವರು ಹೇಳಿದಂತೆ ತಜ್ಞ ವೈದ್ಯರುಗಳು ಬೇಕಾಗುತ್ತಾರೆ. ಆದುದರಿಂದ ಮಾನ್ಯ ಸದಸ್ಯರು ಕೊಟ್ಟಿರುವಂತಹ ಸಲಹೆಯನ್ನು ಸ್ವೀಕರಿಸಿ ಆ ಆಸ್ಪತ್ರೆಯನ್ನು ಅಭಿವೃದ್ಧಿಗೊಳಿಸುವ ದೃಷ್ಟಿಯಿಂದ ಬೇಕಾಗಿರುವಂತಹ ಎಲ್ಲಾ ಕ್ರಮವನ್ನು ಕೈಗೊಳ್ಳುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ. ಇನ್ನು ಮಾನ್ಯ ಗಣೇಶ್ ಕಾರ್ಣಿಕ್‌ರವರು ತಾವು ಚಿಕ್ಕವರು ಇರುವಾಗ ಆ ಆಸ್ಪತ್ರೆಯಲ್ಲಿ ಆದಂತಹ ಅನುಭವವನ್ನು ಹೇಳಿದರು. ಆದರೆ ಆಗ ಆ ಆಸ್ಪತ್ರೆ ಯಾವ ರೀತಿ ಇತ್ತೋ ನನಗೆ ಗೊತ್ತಿಲ್ಲ. ಅದರೆ ಈಗಂತೂ ಆ ಆಸ್ಪತ್ರೆಯಲ್ಲಿ ಉತ್ತಮವಾದಂತಹ ಸೌಲಭ್ಯವಿದೆ. ಆದರೆ ಆ ಆಸ್ಪತ್ರೆಯನ್ನು upgrade ಮಾಡುವುದಾಗಲಿ ಅಥವಾ ಹೊಸ ಆಸ್ಪತ್ರೆಯನ್ನು ತೆಗೆಯುವುದಕ್ಕಾಗಲಿ ಸಚಿವ ಸಂಪುಟ ಒಪ್ಪಿಗೆ ಬೇಕಾಗುತ್ತದೆ. ಹೊಸ ಆಸ್ಪತ್ರೆಗಳನ್ನು ತೆಗೆಯುವುದರ ಬದಲು ಇರುವುದನ್ನೇ ಅಭಿವೃದ್ಧಿಪಡಿಸಬೇಕು ಎಂದು ಈ ಹಿಂದೆ ಸಚಿವ ಸಂಪುಟ ತೀರ್ಮಾನ ತೆಗೆದುಕೊಂಡಿತ್ತು. ಆದುದರಿಂದ ಆಸ್ಪತ್ರೆಯನ್ನು ಅಭಿವೃದ್ಧಿಪಡಿಸುವುದಕ್ಕೆ ಏನೇನು ಕ್ರಮ ಜರುಗಿಸಬೇಕೋ ಆ ಎಲ್ಲಾ ಕ್ರಮವನ್ನು ಜರುಗಿಸುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ. ಅದೇ ರೀತಿ ಶ್ರೀಮತಿ ಗಾಯತ್ರಿ ಶಾಂತೇಗೌಡರು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ತಜ್ಞ ವೈದ್ಯರ ಕೊರತೆಯಿದೆ ಎಂದು ತಿಳಿಸಿದ್ದಾರೆ. ಈಗ ನಮ್ಮಲ್ಲಿ 899 ತಜ್ಞ ವೈದ್ಯರ ಕೊರತೆ ಇದೆ. ಈಗ ವೈದ್ಯಕೀಯ ಶಿಕ್ಷಣ ಸಚಿವರು ಏನಾದರು ಕಾನೂನು ಮಾಡಿದರೆ ನಿಶ್ಚಿತ ವಾಗಿ ನಮಗೆ ತಜ್ಞ ವೈದ್ಯರುಗಳು ಸಿಗುತ್ತಾರೆ. ನಾವು ಗುತ್ತಿಗೆ ಆಧಾರದ ಮೇಲೆ ಒಳ್ಳೆಯ ಸಂಬಳ ಕೊಡುತ್ತೇವೆ ಎಂದು ಹೇಳಿದರೂ ಸಹ ಯಾರು ಸಿಗುತ್ತಿಲ್ಲ.

Hourly basis ಮೇಲೆ ಬನ್ನಿ ಎಂದು ಹೇಳಿದರೂ ಸಹ ಸಿಗುತ್ತಿಲ್ಲ. ನಿಶ್ಚಿತವಾಗಿ ಆ ಬಗ್ಗೆ ತಾವೆಲ್ಲರೂ ಕಾನೂನು ಮಾಡಿಕೊಟ್ಟರೆ ಖಂಡಿತವಾಗಿಯೂ ಈ ಸಮಸ್ಯೆ ಬಗೆಹರಿಯುತ್ತದೆ ಎಂದು ನಾನು ಭಾವಿಸಿದ್ದೇನೆ.

**ಶ್ರೀ ಅಲ್ಲಮ ಪ್ರಭುಪಾಟೀಲ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಒಂದು ಪರಿಹಾರ ಕಂಡು ಹಿಡಿಯಬೇಕೆಂದರೆ, ಈಗೇನು ಶಿಕ್ಷಕರಿಗೆ UGC Scale ಕೊಡುತ್ತಿದ್ದೀರಿ, ಅದೇ Scale ಅನ್ನು ವೈದ್ಯರಿಗೆ ಕೊಟ್ಟರೆ ಖಂಡಿತವಾಗಿ ತಜ್ಞ ವೈದ್ಯರುಗಳು ಬರುತ್ತಾರೆ ನಮ್ಮ ರಾಜ್ಯದಲ್ಲಿರುವಂತಹ ಸಮಸ್ಯೆ ಪರಿಹಾರವಾಗುತ್ತದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಪ್ರತಿ ಜಿಲ್ಲಾ ಕೇಂದ್ರಕ್ಕೆ ಮೂಲಭೂತ ಅವಶ್ಯಕತೆ ಏನಿವೆ ಅದನ್ನು ಕೊಡಲೇ ಬೇಕು. ಹಾಗಾಗಿ ಜಿಲ್ಲಾ ಕೇಂದ್ರಕ್ಕೆ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳುವುದು ಸರಿ ಅಲ್ಲ.

**ಶ್ರೀ ಗೋವಿಂದ.ಎಂ.ಕಾರಜೋಳ:–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಅಲ್ಲಮಪ್ರಭುರವರು ಸಂಬಳ ಜಾಸ್ತಿ ಮಾಡಿ ಡಾಕ್ಟರ್ಸ್ ಬರುತ್ತಾರೆ ಎಂದು ಹೇಳಿದರು. ಆದರೆ ಡಾಕ್ಟರ್ಸ್ ಸಿಗುತ್ತಿಲ್ಲ ಎನ್ನುವ ವಿಚಾರದಲ್ಲಿ ಒಂದೆರಡು ಮಾತನ್ನು ಹೇಳಬಯಸುತ್ತೇನೆ. ಇದಕ್ಕೆ ಒಂದು ಕಾರಣ ಎಂದರೆ, ಎಂ.ಬಿ.ಬಿ.ಎಸ್ ಮಾಡಿದವರು, ಪಿ.ಜಿ ಮಾಡಿದವರು ಹಳ್ಳಿಯಲ್ಲಿ ಜೀವನ ಮಾಡಲು ಇಷ್ಟಪಡುವುದಿಲ್ಲ. ಮತ್ತು ಸಾಮಾನ್ಯವಾಗಿ ಬಡವರ ಮಕ್ಕಳು ವೈದ್ಯರಾಗುವುದಿಲ್ಲ. ಡಾಕ್ಟರ್ಸ್ ಆಗುವವರೆಲ್ಲರೂ ಶ್ರೀಮಂತರ ಮಕ್ಕಳೆ, ಕೊಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದವರಿಗೆ ಸರ್ಕಾರದ ಸಂಬಳ ಅವರಿಗೆ ಯಾವ ಲೆಕ್ಕಕ್ಕೂ ಸಾಕಾಗುವುದಿಲ್ಲ. ಎರಡನೆಯದಾಗಿ, ಅವರಿಗೆ ನಗರ ಜೀವನ, ವಿಲಾಸಿ ಜೀವನ ಬೇಕಾಗಿರುತ್ತದೆ. ಆ ಕಾರಣಕ್ಕಾಗಿಯೂ ಅವರು ಹಳ್ಳಿಗಳಿಗೆ ಬರುವುದಿಲ್ಲ. ಸಂಬಳ ಹೆಚ್ಚು ಮಾಡಿದರೆ ಬರುತ್ತಾರೆ ಎನ್ನುವುದು ಭ್ರಮೆ, ಬಂದಿರುವ ಬಹಳಷ್ಟು ಡಾಕ್ಟರ್‌ಗಳು ರಾಜಿನಾಮೆ ನೀಡಿ ಹೋಗಿದ್ದಾರೆ. ಹಳ್ಳಿಗಳಿಗೆ ಪೋಸ್ಟಿಂಗ್ ಕೊಟ್ಟರೆ 50% ಡಾಕ್ಟರ್‌ಗಳು ಬಂದು join

ಆಗುವುದಿಲ್ಲ. ಇನ್ನು ಬಂದಿರುವವರು ಸ್ವಲ್ಪ ದಿನಗಳಲ್ಲಿ ಹೋಗಿ ಬಿಡುತ್ತಾರೆ. ಅದಕ್ಕೆ ಬೇರೆ–ಬೇರೆ ಕಾರಣಗಳು ಇವೆ. ಅನಿವಾರ್ಯತೆ ಇರುವವರು ಕೂಡ ಇಲ್ಲಿ ಇರುವುದು ಬೇಡ, ನಗರದಲ್ಲಿ ಒಂದು Consultation Room ಮಾಡಿಕೊಂಡು ಕುಳಿತರೆ ದಿನಕ್ಕೆ 1000 ರೂಪಾಯಿಗಳನ್ನು ದುಡಿಯಬಹುದು ಎನ್ನುತ್ತಾರೆ. ತಿದ್ದುಪಡಿ ತಂದು ಎಂಬಿಬಿಎಸ್ ಮುಗಿಸಿದ ತಕ್ಷಣ ಮೊದಲ ಎರಡು ವರ್ಷ ಕಡ್ಡಾಯವಾಗಿ ಹಳ್ಳಿಯಲ್ಲಿ ಸೇವೆ ಮಾಡಬೇಕು ಇಲ್ಲದಿದ್ದರೆ ಡಿಗ್ರಿ ಸರ್ಟಿಫೀಕೇಟ್ ಕೊಡುವುದಿಲ್ಲ ಎಂದು ಮಾಡಿದಾಗ ಮಾತ್ರ ಅವರು ಹಳ್ಳಿಗಳಿಗೆ ಹೋಗಲು ಸಾಧ್ಯ, ಆ ರೀತಿ ಕಾನೂನಿನ ಮೂಲಕ ತರಬೇಕೇ ಹೊರತು ಸಂಬಳ ಹೆಚ್ಚು ಮಾಡುವುದರಿಂದ ಏನು ಆಗುವುದಿಲ್ಲ.

**ಶ್ರೀ ಅಲ್ಲಮ ಪ್ರಭುಪಾಟೀಲ:–** ಬಡವರ ಮಕ್ಕಳು ಎಂಬಿಬಿಎಸ್ ಓದುವುದಿಲ್ಲ, ಶ್ರೀಮಂತರ ಮಕ್ಕಳು ಮಾತ್ರ ಓದುತ್ತಾರೆ ಎಂದು ಮಾನ್ಯ ಸಚಿವರು ಹೇಳುವುದು ತಪ್ಪು ಇದರಿಂದ ತಪ್ಪು ಸಂದೇಶ ಹೋಗುತ್ತದೆ. ಏಕೆ ಬಡವರ ಮಕ್ಕಳು ಎಂಬಿಬಿಎಸ್ ಓದಿ ಡಾಕ್ಟರ್ ಆಗುವುದಿಲ್ಲವೆ?

**ಶ್ರೀ ಗೋವಿಂದ.ಎಂ.ಕಾರಜೋಳ:–** ನಾನು ಬೇರೆಯವರ ಮಕ್ಕಳ ವಿಚಾರ ಮಾತನಾಡುತ್ತಿಲ್ಲ. ನನ್ನ ಇಬ್ಬರು ಮಕ್ಕಳೆ ರಾಜಿನಾಮೆಯನ್ನು ಕೊಟ್ಟು ಬಂದಿದ್ದಾರೆ. 100ರಲ್ಲಿ ಒಬ್ಬ ಬಡವರ ಮಗ ಎಂಬಿಬಿಎಸ್ ಓದುವವರು ಸಿಗಬಹುದು. ನಾನು ನನ್ನ ಮಕ್ಕಳ ವಿಚಾರವನ್ನೆ ಹೇಳುತ್ತಿದ್ದೇನೆ.

**ಶ್ರೀ ಅರವಿಂದ ಲಿಂಬಾವಳಿ:–** ಮಾನ್ಯ ಸಭಾಪತಿಗಳೆ, ಮಾನ್ಯ ಕಾರಜೋಳರವರು ಹೇಳುತ್ತಿರುವುದಕ್ಕೆ ಸಾಕಷ್ಟು ಪುರಾವೆಗಳು ಇವೆ. ಉದಾಹರಣೆಗೆ ಹೇಳುತ್ತೇನೆ, ಕರ್ನಾಟಕ ಲೋಕಸೇವಾ ಆಯೋಗದ ಮೂಲಕ 600 ಜನ ವೈದ್ಯರನ್ನು ನೇಮಕಾತಿ ಮಾಡಲು ಅರ್ಜಿ ಕರೆಯಲಾಗಿತ್ತು. ಅದರಲ್ಲಿ ಭರ್ತಿಯಾಗಿರುವುದು 252 ಜನ ವೈದ್ಯರು. ನಂತರ ಸ್ಥಳ ಆಯ್ಕೆ ಮಾಡಿಕೊಂಡವರು 137 ಜನ ವೈದ್ಯರು. ಅದರಲ್ಲಿ ಕೆಲಸಕ್ಕೆ ಹಾಜರಾದವರು 75 ಜನ ವೈದ್ಯರು ಮಾತ್ರ.

**ಸಭಾಪತಿಯವರು:–** ಉಳಿದವರು ಬರಲೇ ಇಲ್ಲ.

**ಶ್ರೀ ಅರವಿಂದ ಲಿಂಬಾವಳಿ:–** ಮಾನ್ಯ ಸಭಾಪತಿಗಳೆ, ವೈದ್ಯರು ಯಾರು ಸರ್ಕಾರಿ ಕೆಲಸಕ್ಕೆ ಬರುತ್ತಿಲ್ಲ. ನಿಜವಾಗಿಯು ಸಮಸ್ಯೆ ಇದೆ. ಮಾನ್ಯ ಕಾರಜೋಳರವರು ಹೇಳಿದ ಹಾಗೆ ಆ ಕಾನೂನನ್ನು ತಂದರೆ ಸಮಸ್ಯೆ ಬಗೆಹರಿಯಬಹುದು. ಮಾನ್ಯ ಸಿ.ಟಿ.ರವಿಯವರು ಚಿಕ್ಕಮಗಳೂರು ಆಸ್ಪತ್ರೆ ಬಗ್ಗೆ ನಿರಂತರವಾಗಿ ವಿಚಾರಿಸುತ್ತಾರೆ. ಆದ್ದರಿಂದ ನಮ್ಮ ಪ್ರಯತ್ನವ್ನನು ನಾವು ಮಾಡುತ್ತಿದ್ದೇವೆ.

**ಅಂಗನವಾಡಿ ಕೇಂದ್ರಗಳ ಬಗ್ಗೆ**

**341; ಶ್ರೀ. ವೀರಕುಮಾರ್ ಅಪ್ಪಾಸೊ ಪಾಟೀಲ್**

**ಅ)** ಬೆಳಗಾಂ ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳೆಷ್ಟು: (ತಾಲ್ಲುಕುವಾರು ವಿವರ ನೀಡುವುದು ಹಾಗೂ ಇವುಗಳಲ್ಲಿ ಸ್ವಂತ ಕಟ್ಟಡ ಹೊಂದಿರುವ ಹಾಗೂ ಬಾಡಿಗೆ ಕಟ್ಟಡದಲ್ಲಿರುವ ಅಂಗನವಾಡಿ ಕೇಂದ್ರಗಳ ವಿವರ ನೀಡುವುದು)

**ಆ)** ಈ ಅಂಗನವಾಡಿ ಕೇಂದ್ರಗಳಲ್ಲಿ ಸ್ವಂತ ಕಟ್ಟಡಗಳು ಇಲ್ಲದೆ ಇರುವ ಕಡೆ ಸ್ವಂತ ಕಟ್ಟಡ ಒದಗಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಇ)** ಸದರಿ ಕಟ್ಟಡಗಳಿಗೆ ಕಳೆದ ಆಯವ್ಯಯದಲ್ಲಿ ಒದಗಿಸಿದ ಅನುದಾನವೆಷ್ಟು?

**ಶ್ರೀ ಕಳಕಪ್ಪ ಜಿ. ಬಂಡಿ ( ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)**

**ಅ)** ಬೆಳಗಾಂ ಜಿಲ್ಲೆಯಲ್ಲಿ 5294 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಇವುಗಳಲ್ಲಿ 2495 ಕೇಂದ್ರಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. 1374 ಅಂಗನವಾಡಿ ಕೇಂದ್ರಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಉಳಿದ 1425 ಕೇಂದ್ರಗಳು ವಿವಿಧ ಪರ್ಯಾಯ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿವೆ. ಸ್ವಂತ ಕಟ್ಟಡ

ಇಲ್ಲದೇ ಇರುವ 2799 ಕೇಂದ್ರಗಳ ಪೈಕಿ 155 ಕೇಂದ್ರಗಳಿಗೆ ಕಟ್ಟಡಗಳು ಮಂಜೂರಾಗಿದ್ದು ನಿರ್ಮಾಣ ಹಂತದಲ್ಲಿರುತ್ತವೆ.

ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಸ್ವಂತ ಕಟ್ಟಡಗಳು ಇಲ್ಲದೆ ಇರುವ ಕಡೆ ನಿವೇಶನಗಳನ್ನು ಗುರುತಿಸಿ ಅನುದಾನದ ಅಭ್ಯತೆಯ ಮೇರೆಗೆ ಹಂತ ಹಂತವಾಗಿ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ.

ಇ) ಬೆಳಗಾಂ ಜಿಲ್ಲೆಯಲ್ಲಿ 2011–12ನೇ ಸಾಲಿನಲ್ಲಿ ನಬಾರ್ಡ್ ನೆರವಿನಿಂದ ಸಾಲ ಪಡೆದು ಆರ್.ಐ.ಡಿ.ಎಫ್ ನಡಿ 104 ಕಟ್ಟಡಗಳನ್ನು ನಿರ್ಮಿಸಲು ₹ 434.72 ಲಕ್ಷಗಳ ಅನುದಾನ ಒದಗಿಸಿದೆ. ವಿಶೇಷ ಅಭಿವೃದ್ಧಿ ಕಾರ್ಯಕ್ರಮದಡಿ 51 ಕಟ್ಟಡಗಳನ್ನು ನಿರ್ಮಿಸಲು ₹ 158.84 ಲಕ್ಷಗಳ ಅನುದಾನ ಒದಗಿಸಲಾಗಿದೆ ಹಾಗೂ 3 ಅಪೂರ್ಣ ಕಟ್ಟಡಗಳನ್ನು ಪೂರ್ಣಗೊಳಿಸಲು ₹ 5.25 ಲಕ್ಷಗಳ ಅನುದಾನ ಒದಗಿಸಲಾಗಿದೆ. ₹ 19.26 ಲಕ್ಷಗಳನ್ನು ಅಂಗನವಾಡಿ ಕಟ್ಟಡಗಳ ನಿರ್ವಹಣೆ/ ದುರಸ್ತಿಗಾಗಿ ಒದಗಿಸಲಾಗಿದೆ.

## ಅನುಬಂಧ

**1. ಬೆಳಗಾವಿ ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ(ತಾಲ್ಲೂಕಾರುವಾರು ವಿವರ) ಹಾಗೂ ಇವುಗಳಲ್ಲಿ ಸ್ವಂತ ಕಟ್ಟಡ ಹಾಗೂ ಬಾಡಿಗೆ ಕಟ್ಟಡ ಹೊಂದಿರುವ ವಿವರ.**

| ಕ್ರ.ಸಂ | ತಾಲ್ಲೂಕು | ಮಂಜೂರಾದ ಅಂ. ಕೇಂದ್ರಗಳ ಸಂಖ್ಯೆ | ಸ್ವಂತ ಕಟ್ಟಡ | ಬಾಡಿಗೆ ಕಟ್ಟಡಗಳು |
|---|---|---|---|---|
| 1 | ರಾಯಭಾಗ | 468 | 244 | 10 |
| 2 | ಅಥಣಿ | 551 | 325 | 110 |
| 3 | ಸವದತ್ತಿ | 341 | 247 | 11 |
| 4 | ಬೆಳಗಾವಿ(ನಗರ) | 370 | 15 | 323 |
| 5 | ಹುಕ್ಕೇರಿ | 471 | 254 | 142 |

| | | | | |
|---|---|---|---|---|
| 6 | ಗೋಕಾಕ | 623 | 284 | 121 |
| 7 | ಚಿಕ್ಕೋಡಿ | 706 | 246 | 269 |
| 8 | ಬೆಳಗಾವಿ(ಗ್ರಾ) | 674 | 235 | 284 |
| 9 | ಖಾನಾಪೂರ | 367 | 208 | 75 |
| 10 | ರಾಮದುರ್ಗ | 298 | 170 | 0 |
| 11 | ಬೈಲಹೊಂಗಲ | 425 | 267 | 29 |
| | **ಒಟ್ಟು** | **5294** | **2495** | **1374** |

**ಶ್ರೀ ಆರ್.ವಿ.ವೆಂಕಟೇಶ್ (ಶ್ರೀ ವೀರಕುಮಾರ್.ಎ.ಪಾಟೀಲ್ ಪರವಾಗಿ):– ಮಾನ್ಯ** ಸಭಾಪತಿಗಳೆ, ಬೆಳಗಾಂನಲ್ಲಿರುವ ಅಂಗನವಾಡಿಗಳ ಬಗ್ಗೆ ಪ್ರಶ್ನೆಯನ್ನು ಕೇಳಲಾಗಿದೆ. ಸರ್ಕಾರ ತನ್ನ ಉತ್ತರದಲ್ಲಿ ಅಂಗನವಾಡಿಗಳ ಅಂಕಿಗಳನ್ನು ಕೊಟ್ಟಿದ್ದಾರೆ. ಆದರೆ ಅವರು ಕೊಟ್ಟಿರುವ ಅಂಕಿಗಳ ಹೋಲಿಕೆಯಾಗುತ್ತಿಲ್ಲ. ಬೆಳಗಾಂ ಜಿಲ್ಲೆಯಲ್ಲಿ 5294 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಿದ್ದಾರೆ. ಇನ್ನು ಕೊಟ್ಟಿರುವ ಬೇರೆ ಅಂಕಿಗಳನ್ನು ಕೂಡಿಸಿ ಕಳೆದರೆ ಉತ್ತರ ಸರಿ ಇಲ್ಲ, ಅಜಗಜಾಂತರ ವ್ಯತ್ಯಾಸವಿದೆ. ಇಷ್ಟು ಅಂಗನವಾಡಿ ಕೇಂದ್ರಗಳು ಇವೆ, ಆದರೆ ಸ್ವಂತ ಕಟ್ಟಡಗಳ ಸಂಖ್ಯೆ ಬಹಳ ಕಡಿಮೆ ಇದೆ. 5294 ಅಂಗನವಾಡಿ ಕೇಂದ್ರಗಳಿಗೆ ಈ ವರ್ಷ ಕೇವಲ ಒಂದೂವರೆ ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಿದ್ದಾರೆ. ನಬಾರ್ಡ್‌ನಿಂದ 85%ರಷ್ಟು ಸಾಲವನ್ನು ಪಡೆದು ಇವುಗಳಿಗೆ ಕೊಡುವಂತಹ ಕೆಲಸವನ್ನು ಬೇರೆ ಜಿಲ್ಲೆಗಳಲ್ಲಿ ಮಾಡಲಾಗಿದೆ. ಸಾಲ ತೆಗೆದುಕೊಂಡರೆ ಅದು 5 ಅಥವಾ 7 ವರ್ಷಗಳಲ್ಲಿ ಸಾಲ ತೀರಿ ಸ್ವಂತ ಕಟ್ಟಡಗಳಾಗುತ್ತವೆ. ಈ ಯೋಚನೆಯನ್ನು ಇವರು ಏಕೆ ಮಾಡಲಿಲ್ಲ? ಅಧಿಕಾರಿಗಳ ಮಾತನ್ನು ಕೇಳಿದ್ದರೆ ಈ ರೀತಿ ಸರ್ಕಾರಕ್ಕೆ ಹೊರೆ. ಇಲಾಖೆಯ ಅಧಿಕಾರಿಗಳ ಈ ರೀತಿಯ ಕಾರ್ಯನಿರ್ವಹಣೆ ಬಗ್ಗೆ ಸಚಿವರು ಉತ್ತರ ಕೊಡಬೇಕು.

**ಶ್ರೀ. ಕಳಕಪ್ಪ ಬಂಡಿ:–** ಮಾನ್ಯ ಸಭಾಪತಿಗಳೆ, ಬೆಳಗಾಂ ಜಿಲ್ಲೆಯಲ್ಲಿ ಒಟ್ಟು 5294 ಅಂಗನವಾಡಿ ಕೇಂದ್ರಗಳು ಇವೆ. ಇದರಲ್ಲಿ 2495 ಸ್ವಂತ ಕಟ್ಟಡಗಳನ್ನು ಹೊಂದಿವೆ. 1374 ಅಂಗನವಾಡಿಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. 1425 ಪರ್ಯಾಯ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿವೆ. ಈಗಾಗಲೆ 155 ಕೇಂದ್ರಗಳಿಗೆ ಕಟ್ಟಡಗಳು ಮಂಜೂರಾಗಿದ್ದು ನಿರ್ಮಾಣ ಹಂತದಲ್ಲಿದೆ.

**ಶ್ರೀ ಆರ್.ವಿ.ವೆಂಕಟೇಶ್:–** ಮಾನ್ಯ ಸಭಾಪತಿಗಳೆ, ಇವರು ಹೇಳುತ್ತಿರುವ ಅಂಕಿಗಳನ್ನು ಕೂಡಿಸಿ ಕಳೆದರೆ 3000 ಹೆಚ್ಚಿಗೆ ಬರುತ್ತದೆ. ಆಗ ಒಟ್ಟು 8000 ಆಗುತ್ತದೆ.

**ಸಭಾಪತಿಯವರು:–** ಸಚಿವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು, ಅವರು ಶಿಕ್ಷಣ ಸಚಿವರೆಂದು ನೀವು ತಿಳಿದುಕೊಂಡು ಅವರಿಗೆ ಕೂಡಿಸುವುದು, ಕಳೆಯುವುದನ್ನು ಹೇಳಿಕೊಡುತ್ತಿದ್ದೀರಿ.

**ಶ್ರೀ ಕಳಕಪ್ಪ ಬಂಡಿ:–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿ ಇದೆ. ಅದನ್ನು ಇನ್ನೊಂದು ಸರಿ ಪರಿಶಿಲನೆ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಇನ್ನು ಅನೇಕ ಅಂಗನವಾಡಿಗಳಿಗೆ ಸ್ವಂತ ಕಟ್ಟಡ ಇಲ್ಲ. ಅನುಬಂಧ ಲಭ್ಯತೆ ಮೇರೆಗೆ ಆದಷ್ಟು ಬೇಗನೆ ಸ್ವಂತ ಕಟ್ಟಡವನ್ನು ಕಟ್ಟಿಸುವಂತಹ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ. ಈಗಾಗಲೇ 4,20,000 ರೂ. ಗಳಲ್ಲಿ ಒಂದೊಂದು ಕಟ್ಟಡವನ್ನು ಕಟ್ಟಿಸುತ್ತಿದ್ದೇವೆ. ಆ ಹಣವನ್ನು ಹೆಚ್ಚಿಗೆ ಮಾಡಿ compound ಹಾಕಿಸುವುದು, ಅಡುಗೆ ಮನೆ ಹೀಗೆ ಸುಸಜ್ಜಿತವಾದ ಕಟ್ಟಡವನ್ನು ಕಟ್ಟಲು ಸುಮಾರು ಏಳೂವರೆಯಿಂದ ಹತ್ತು ಲಕ್ಷ ರೂ.ಗಳಲ್ಲಿ ಕಟ್ಟಡವನ್ನು ಕಟ್ಟುವಂತಹ ಕೆಲಸವನ್ನು ಕೈಗೆ ತೆಗೆದುಕೊಳ್ಳುವಂತಹ ವಿಚಾರದಲ್ಲಿ ಇದ್ದೇವೆ. Rural Infrastructure Development Fund (RIDF) ನಿಂದಲೂ ಸಾಲವನ್ನು ತೆಗೆದುಕೊಂಡು ಆದಷ್ಟು ಬೇಗ ಕಟ್ಟಡಗಳನ್ನು ಕಟ್ಟಿಸುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

**ಶ್ರೀಮತಿ ಎ.ವಿ.ಗಾಯತ್ರಿ ಶಾಂತೇಗೌಡ:–** ಮಾನ್ಯ ಸಭಾಪತಿಗಳೆ, ನಗರಸಭೆ ವ್ಯಾಪ್ತಿಗೆ ಬರುವಂತಹ ಅಂಗನವಾಡಿ ಕೇಂದ್ರಗಳಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಕಟ್ಟಡಗಳನ್ನು ಕೊಡುವುದಿಲ್ಲ. ಅಲ್ಲಿ ಗುಡಿಸಲುಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ನಡೆಸುವಂತಹ ಪರಿಸ್ಥಿತಿ ಇದೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ನಗರಸಭೆ ವ್ಯಾಪ್ತಿಗೆ ಬರುವ ಅಂಗನವಾಡಿ ಕೇಂದ್ರಗಳಿಗೆ ಕಟ್ಟಡಗಳನ್ನು ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಸರ್ಕಾರದ ನಿಲುವೇನು?

**ಶ್ರೀ ಕಳಕಪ್ಪ ಬಂಡಿ:–** ಮಾನ್ಯ ಸಭಾಪತಿಗಳೆ, ನಗರಸಭೆಗಳ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಿಗೂ ಕಟ್ಟಡವನ್ನು ಕೊಡುತ್ತೇವೆ.

**ಸಭಾಪತಿಯವರು:–** ಕಾನೂನಿನಲ್ಲಿ ಕೊಡಲು ಬರುತ್ತದೆ. ಆದರೆ ಹಣವಿದ್ದರೆ ಕೊಡುತ್ತಾರೆ. ಇಲ್ಲದಿದ್ದರೆ ಇಲ್ಲ.

**ಶ್ರೀಮತಿ ಎ.ವಿ.ಗಾಯತ್ರಿ ಶಾಂತೇಗೌಡ:–** ಮಾನ್ಯ ಸಭಾಪತಿಗಳೆ, ನನ್ನ ಹತ್ತಿರ ಒಂದು ಪಟ್ಟಿ ಇದೆ. ನಾನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯಲ್ಲಿದ್ದಾಗ ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ, ಕೊಡಲು ಬರುವುದಿಲ್ಲ ಎಂದು ಇಲಾಖಾಧಿಕಾರಿಗಳು ಹೇಳಿದ್ದಾರೆ. ಕಟ್ಟಡಗಳನ್ನು ಕೊಟ್ಟರೆ ಒಳ್ಳೆಯಾಗುತ್ತದೆ. ಚಿಕ್ಕಮಗಳೂರು ನಗರಸಭೆ ವ್ಯಾಪ್ತಿಗೆ 24 ಅಂಗನವಾಡಿ ಕೇಂದ್ರಗಳು ಬರುತ್ತವೆ. ಅವು ಗುಡಿಸಲುಗಳಲ್ಲಿ ಕೆಲಸ ಮಾಡುತ್ತಿವೆ. ಕಟ್ಟಡವನ್ನು ಕೊಟ್ಟರೆ ನಮಗೆ ಬಹಳ ಸಂತೋಷವಾಗುತ್ತದೆ.

**ಶ್ರೀ. ಕಳಕಪ್ಪ ಬಂಡಿ:–** ಮಾನ್ಯ ಸಭಾಪತಿಗಳೆ, ಖಂಡಿತವಾಗಿ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

## ಆರೋಗ್ಯ ಇಲಾಖೆಯ 108 ವಾಹನದ ಮಾದರಿಯಂತೆ ಪಶುಸಂಗೋಪನಾ ಇಲಾಖೆಯಲ್ಲಿ ತುರ್ತು ಚಿಕಿತ್ಸೆಗೆ ಕ್ರಮ ಕೈಗೊಳ್ಳುವ ಬಗ್ಗೆ.

**678; ಡಾ॥ ದೊಡ್ಡರಂಗೇಗೌಡ (ನಾಮ ನಿರ್ದೇಶಿತರು)**

**ಅ)** ರಾಜ್ಯದಲ್ಲಿ ಗೋವುಗಳಿಗೆ (ದನಕರು) ತುರ್ತು ಸಂದರ್ಭಗಳಲ್ಲಿ ಚಿಕಿತ್ಸೆ ನೀಡಲು ಆರೋಗ್ಯ ಇಲಾಖೆಯ 108 ವಾಹನ ಮಾದರಿಯಲ್ಲಿ ಪಶುಸಂಗೋಪನೆ ಇಲಾಖೆಯಲ್ಲಿ "ತುರ್ತು" ವಾಹನ ವ್ಯವಸ್ಥೆ ಮಾಡುವ ಪ್ರಸ್ತಾವನೆ ಯಾವ ಹಂತದಲ್ಲಿದೆ

**ಆ)** ಪ್ರಾಯೋಗಿಕವಾಗಿ ಕೆಲವು ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಜಾರಿ ಮಾಡಿ, ನಂತರ ಅದರ ಯಶಸ್ಸನ್ನು ನೋಡಿಕೊಂಡು ಇಡೀ ರಾಜ್ಯಕ್ಕೆ ಜಾರಿ ಮಾಡುವ ಯೋಜನೆ ಸರ್ಕಾರದ ಮುಂದೆ ಇದೆಯೇ (ವಿವರ ನೀಡುವುದು)?

**ಶ್ರೀ ರೇವು ನಾಯಕ ಬೆಳಮಗಿ ( ಪಶುಸಂಗೋಪನೆ ಸಚಿವರು)**

**ಅ)** ಆರೋಗ್ಯ ಇಲಾಖೆಯ 108 ವಾಹನದ ಮಾದರಿಯಲ್ಲಿರುವಂತೆ ಪಶುಸಂಗೋಪನಾ ಇಲಾಖೆಯಲ್ಲಿ ಧನ್ವಂತರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿರುತ್ತದೆ. ಈ ಸಂಬಂಧ ಪ್ರಥಮ ಹಂತವಾಗಿ 5 ಜಿಲ್ಲೆಗಳಾದ ಕೊಪ್ಪಳ, ರಾಯಚೂರು, ಬಳ್ಳಾರಿ, ಯಾದಗಿರಿ ಮತ್ತು ಗುಲ್ಬರ್ಗಾಗಳ 26 ತಾಲ್ಲೂಕುಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗಿದ್ದು, ಈಗಾಗಲೇ ಅಲ್ಪಾವಧಿ ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್ ಸಲ್ಲಿಸಲು 24-08-2012 ಕೊನೆಯ ದಿನಾಂಕವಾಗಿದ್ದು, ಟೆಂಡರ್ ಪ್ರಕ್ರಿಯೆಯು ಮುಗಿದ ನಂತರ ಯೋಜನೆಯ ಅನುಷ್ಠಾನ ಪ್ರಾರಂಭಿಸಲಾಗುವುದು.

**ಆ)** ಹೌದು.

ಅನುಷ್ಠಾನಗೊಳಿಸಲು ಪ್ರಸ್ತಾಪಿಸಿರುವ 26 ತಾಲ್ಲೂಕುಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

**ಅನುಬಂಧ**

| ಕ್ರ.ಸಂ | ಜಿಲ್ಲೆಗಳು | ಧನ್ವಂತ್ರಿ ಯೋಜನೆ ಅನುಷ್ಠಾನಗೊಳಿಸಲಿರುವ ತಾಲ್ಲೂಕುಗಳು | |
|---|---|---|---|
| 1 | ಬಳ್ಳಾರಿ | 1 | ಬಳ್ಳಾರಿ |
| | | 2 | ಸಿರಗುಪ್ಪ |
| | | 3 | ಸಂಡೂರು |
| | | 4 | ಹೊಸಪೇಟೆ |
| | | 5 | ಹಗರಿಬೊಮ್ಮನಹಳ್ಳಿ |
| | | 6 | ಹಡಗಲಿ |
| | | 7 | ಕೂಡ್ಲಗಿ |
| 2 | ಕೊಪ್ಪಳ | 8 | ಕೊಪ್ಪಳ |
| | | 9 | ಗಂಗಾವತಿ |
| | | 10 | ಯಲಬುರ್ಗಾ |
| | | 11 | ಕುಷ್ಟಗಿ |
| 3 | ರಾಯಚೂರು | 12 | ರಾಯಚೂರು |
| | | 13 | ಮಾನ್ವಿ |
| | | 14 | ದೇವದುರ್ಗ |
| | | 15 | ಲಿಂಗಸಗೂರು |
| | | 16 | ಸಿಂಧನೂರು |
| 4 | ಗುಲ್ಬರ್ಗಾ | 17 | ಗುಲ್ಬರ್ಗಾ |
| | | 18 | ಸೇಡಂ |
| | | 19 | ಜೇವರ್ಗಿ |
| | | 20 | ಚಿತ್ತಾಪುರ |
| | | 21 | ಆಳಂದ |
| | | 22 | ಚಿಂಚೋಳಿ |

| | | | |
|---|---|---|---|
| | | 23 | ಅಫಜಲಪುರ |
| 5 | ಯಾದಗಿರಿ | 24 | ಯಾದಗಿರಿ |
| | | 25 | ಸುರಪುರ |
| | | 26 | ಶಹಾಪುರ |

**ಡಾ॥ದೊಡ್ಡರಂಗೇಗೌಡ:–** ಮಾನ್ಯ ಸಭಾಪತಿಗಳೆ, ಮೊದಲನೆಯದಾಗಿ ಎಲ್ಲರಿಗೂ ವರಮಹಾಲಕ್ಷ್ಮಿ ಹಬ್ಬದ ಶುಭಾಶಯಗಳು. ಉತ್ತರಗಳನ್ನು ಒದಗಿಸಿದ್ದಾರೆ. ಇಲ್ಲಿ ನಾನು ಏನು ಹೇಳಲು ಇಷ್ಟಪಡುತ್ತೇನೆ ಎಂದರೆ, ನಮ್ಮ ದೇಶದಲ್ಲಿ ಗೋವುಗಳ ಸಂಖ್ಯೆ ಅಪಾರವಾಗಿದೆ. ಮೂಲತಃ ಅವು ಮೂಕ ಪ್ರಾಣಿಗಳು. ತಮಗೆ ಆದ ಹಸಿವು, ನೋವು, ಕಾಯಿಲೆಗಳನ್ನು ಬಾಯಿಬಿಟ್ಟು ಹೇಳಿಕೊಳ್ಳಲು ಸಾಧ್ಯವಿಲ್ಲ. ಹೇಗೆ ಮನುಷ್ಯನಿಗೆ 108 ಮಾದರಿಯ ವಾಹನವಿದೆ, ಅದೇ ರೀತಿಯ ವೈದ್ಯಕೀಯ ಸವಲತ್ತುಗಳು ಇರುವಂತಹ ವಾಹನವನ್ನು ಮಾಡಿ, ಆ ಪ್ರಾಣಿಗಳು ಇರುವಂತಹ ಸ್ಥಳಗಳಿಗೆ ಹೋಗಿ ಚಿಕಿತ್ಸೆಯನ್ನು ನೀಡುವಂತಹ ಒಂದು ಶಾಶ್ವತ ಪರಿಹಾರವಾಗಬೇಕು ಎನ್ನುವುದು ನನ್ನ ಅಭಿಲಾಷೆ. ಪ್ರಾಯೋಗಿಕವಾಗಿ ಕೆಲವು ಜಿಲ್ಲೆಗಳಲ್ಲಿ ಇದನ್ನು ಜಾರಿಗೆ ತರಲಾಗುತ್ತಿದೆ ಎಂದು ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಅವರು ಇಡೀ ಉತ್ತರ ಕರ್ನಾಟಕ ಜಿಲ್ಲೆಗಳನ್ನು ಮತ್ತು ಕೆಲವು ಪ್ರದೇಶಗಳನ್ನು ಆರಿಸಿಕೊಂಡಿದ್ದಾರೆ. ಅವರು ಹಳೆ ಮೈಸೂರನ್ನು, ಬಯಲು ಸೀಮೆ ಪ್ರದೇಶಗಳನ್ನು ಆರಿಸಿಕೊಂಡಿದ್ದರೆ ಸೂಕ್ತವಾಗುತ್ತಿತ್ತು. ಗೋವುಗಳು, ರಾಸುಗಳು ಇಲ್ಲದೆ ಇರುವಂತಹ ಹಳ್ಳಿಗಳೆ ಇಲ್ಲ. ರೈತರ ಕುಟುಂಬಗಳಲ್ಲಿ ಜನರ ಜೊತೆಯಲ್ಲಿ ಜಾನುವಾರುಗಳು ಇರುವುದು ಖಚಿತವಾದ ವಿಷಯ. ಆ ಮೂಕ ಪ್ರಾಣಿಗಳಿಗೆ ಮಾತುಗಳು ಬರುವ ಹಾಗೆ ಇದ್ದರೆ ಅವು ಹರತಾಳವನ್ನು, ಮುಷ್ಕರವನ್ನು ಮಾಡುತ್ತಿದ್ದವು. ನಾವು ಅವುಗಳ ಭಾಷೆಯನ್ನು ಅರ್ಥಮಾಡಿಕೊಂಡು, ಅವುಗಳು ಕಾಯಿಲೆ ಬಿದ್ದಾಗ ಅವು ಇರುವಲ್ಲಿಯೇ ಹೋಗಿ ಚಿಕಿತ್ಸೆಯನ್ನು ಕೊಡುವಂತಹ ಶಾಶ್ವತವಾದ ಪರಿಹಾರವನ್ನು ಸರ್ಕಾರ ಯೋಚಿಸಿ ಯೋಜಿಸಿ ಅನ್ವಯಕ್ಕೆ ತರಬೇಕು ಎನ್ನುವುದು ನನ್ನ ಅಭಿಲಾಷೆ.

**ಶ್ರೀ ರೇವುನಾಯಕ್ ಬೆಳಮಗಿ:-** ಮಾನ್ಯ ಸಭಾಪತಿಗಳೆ, ಮಾನ್ಯ ದೊಡ್ಡರಂಗೇಗೌಡರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಮೂಕ ಪ್ರಾಣಿಗಳ ಸೇವೆಯನ್ನು ಪ್ರಾಮಾಣಿಕವಾಗಿ ಮಾಡಬೇಕು ಎನ್ನುವ ಸಲಹೆಯನ್ನು ಕೊಟ್ಟಿದ್ದಾರೆ. ಆದರೆ ಕರ್ನಾಟಕ ರಾಜ್ಯದಲ್ಲಿ ಪಶುವೈದ್ಯರ ಕೊರತೆ ಬಹಳ ಇದೆ. ಈ ಕೊರತೆಯನ್ನು ನಿವಾರಿಸಬೇಕೆಂದು ಸಮ್ಮಿಶ್ರ ಸರ್ಕಾರವಿದ್ದಾಗ ಹಾಸನ ಮತ್ತು ಶಿವಮೊಗ್ಗಕ್ಕೆ ಪಶುವೈದ್ಯಕೀಯ ಕಾಲೇಜನ್ನು ಕೊಡಲಾಯಿತು. ಆದರೂ ಸಮಸ್ಯೆ ಪರಿಹಾರವಾಗಲಿಲ್ಲ. ಈಗ ಅಥಣಿ ಮತ್ತು ಗದಗ ಜಿಲ್ಲೆಗೂ ಪಶು ವೈದ್ಯಕೀಯ ಕಾಲೇಜನ್ನು ಕೊಡಲಾಗಿದೆ. ವೈದ್ಯರ ಸಮಸ್ಯೆಯನ್ನು ನಿವಾರಿಸಿ ಮೂಕ ಪ್ರಾಣಿಗಳ ಸೇವೆಯನ್ನು ಪ್ರಾಮಾಣಿಕವಾಗಿ ಮಾಡಬೇಕು ಎನ್ನುವುದು ಸರ್ಕಾರದ ಭಾವನೆ ಇದೆ. ನೀರಡಿಕೆಯಾದರೆ ನೀರು ಕೇಳುವುದಿಲ್ಲ, ಹಸಿವಾದರೆ ಊಟ ಕೇಳುವುದಿಲ್ಲ, ಜ್ವರ ಬಂದರೆ ದವಾಖಾನೆಗೆ ಕರೆದುಕೊಂಡು ಹೋಗಿ ಎಂದು ಅವು ಹೇಳುವುದಿಲ್ಲ ಎಂದು ದೊಡ್ಡರಂಗೇಗೌಡರು ಹೇಳಿದರು ಖಸಾಯಿ ಖಾನೆಗೆ ಕಳುಹಿಸಿದರೆ ಏಕೆ ಕಳುಹಿಸುತ್ತೀರಿ ಎಂದು ಅವು ಕೇಳುವುದಿಲ್ಲ. ಇಂತಹ ಮೂಕ ಪ್ರಾಣಿಗಳ ಸೇವೆಯನ್ನು ಪ್ರಾಮಾಣಿಕವಾಗಿ ಮಾಡಬೇಕು ಎನ್ನುವುದು ನಮ್ಮ ಸರ್ಕಾರದ ಇಚ್ಛೆ. ಹೋದ ವರ್ಷದಲ್ಲಿ 108 ಮತ್ತು ಆರೋಗ್ಯ ಕವಚದಂತಹ ಯೋಜನೆಗಳನ್ನು ಇವುಗಳಿಗಾಗಿ ಇಡೀ ರಾಜ್ಯದಲ್ಲಿ ಮಾಡಬೇಕೆಂದು 20 ಕೋಟಿ ರೂ. ಗಳನ್ನು ಇಟ್ಟು 84 ತಾಲ್ಲೂಕುಗಳನ್ನು ಇದರಲ್ಲಿ ತೆಗೆದುಕೊಂಡು ಟೆಂಡರ್‌ನ್ನು ಕರೆಯಲಾಗಿತ್ತು. ಆದರೆ ಯಾರು ಟೆಂಡರ್ ಹಾಕಲಿಲ್ಲ. ಇದಕ್ಕೆ ಕಾರಣ ವೈದ್ಯರ ಕೊರತೆ. ಅದಕ್ಕಾಗಿ ಈ ವರ್ಷ ಆರ್ಥಿಕ ಇಲಾಖೆಯಿಂದ 26 ತಾಲ್ಲೂಕುಗಳಿಗೆ ಅನುಮತಿಯನ್ನು ಕೊಟ್ಟಿದ್ದಾರೆ. ಈ ಪ್ರಯೋಗ ಮಾಡಿ, ಇದು ಯಶಸ್ವಿಯಾದರೆ ರಾಜ್ಯದಲ್ಲಿ ಹಂತ-ಹಂತವಾಗಿ ಮಾಡಲಾಗುತ್ತದೆ. ಎಂದು ಹೇಳಬಯಸುತ್ತೇನೆ.

**ಶ್ರೀ ಭಾನುಪ್ರಕಾಶ್:-** ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಪಶುವೈದ್ಯಕೀಯ ಕಾಲೇಜು ಇರುವುದರಿಂದ, ಈ ಪ್ರಾಯೋಗಿಕವಾಗಿ

ಪ್ರಯತ್ನವನ್ನು ಆ ಎರಡು ಜಿಲ್ಲೆಗಳಲ್ಲಿಯು ಮುಂದುವರೆಸಿಕೊಂಡು ಹೋಗಬೇಕು ಎಂದು ಕೇಳುತ್ತೇನೆ.

**ಸಭಾಪತಿಯವರು:–** ಪಶುವೈದ್ಯಕೀಯ ಕಾಲೇಜು ಇರುವಂತಹ ಹಾಸನ ಮತ್ತು ಶಿವಮೊಗ್ಗದಲ್ಲಿಯು ಈ ವ್ಯವಸ್ಥೆಯನ್ನು ಮುಂದುವರೆಸಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

**ಶ್ರೀ ರೇವುನಾಯಕ್ ಬೆಳಮಗಿ:–** ಈ ಪ್ರಯೋಗ ಯಶಸ್ವಿಯಾದರೆ ಇಡೀ ರಾಜ್ಯದಲ್ಲಿ ಹಂತ–ಹಂತವಾಗಿ ಮಾಡಲಾಗುತ್ತದೆ.

**ಸಭಾಪತಿಯವರು:–** ಧನ್ಯವಾದಗಳು, ಮುಂದಿನ ಪ್ರಶ್ನೆ ಪುಟ್ಟಣ್ಣನವರದು, ಉತ್ತರವು ಬಂದಿದೆ. ಆದರೆ ಅವರು ಬರಲು ಸ್ವಲ್ಪ ತಡವಾಗುತ್ತದೆ ಎಂದು ನನಗೆ ಒಂದು ಪತ್ರವನ್ನು ಕಳುಹಿಸಿದ್ದಾರೆ. ಅವರು ಪ್ರಶ್ನೋತ್ತರ ವೇಳೆ ಮುಗಿಯುವಷ್ಟರಲ್ಲಿ ಬಂದರೆ ಅವರ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ, ಇಲ್ಲದಿದ್ದರೆ ನನ್ನನು ಕ್ಷಮಿಸಬೇಕು.

ಮಾನ್ಯ ಬಸವರಾಜ ಹೊರಟ್ಟಿಯವರ ಪ್ರಶ್ನೆಗೆ ಸರ್ಕಾರ ಕಾಲಾವಕಾಶವನ್ನು ಕೇಳಿದೆ. ಅದರ ಮುಂದಿನ ಪ್ರಶ್ನೆ ಅಲ್ಲಮ ಪ್ರಭುಪಾಟೀಲ್‌ರವರದು ಅವರು ತಮ್ಮ ಪ್ರಶ್ನೆಯನ್ನು ಕೇಳಬೇಕು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ಆ ಪ್ರಶ್ನೆ ಏನು ಇದೆ ಎನ್ನುವುದನ್ನು ನೀವು ಓದಿ ನೋಡಿ. ಅದಕ್ಕೆ ಕಾಲಾವಕಾಶವನ್ನು ಕೇಳುವ ಅಗತ್ಯವಿಲ್ಲ. ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು ಎಷ್ಟು? ಅಲ್ಲಿ ಎಷ್ಟು ಜನ ಸಿಬ್ಬಂದಿಗಳು ಕೆಲಸ ಮಾಡುತ್ತಾರೆ ಎಂದು ಕೇಳಿದ್ದೇನೆ ಅಷ್ಟೆ. ಕಾಲಾವಕಾಶವನ್ನು ಕೇಳುವಷ್ಟು ಮಹತ್ವದ ಪ್ರಶ್ನೆ ಏನು ಅಲ್ಲ ಅದು. ಹಿಂದೆ ಒಬ್ಬರು ಸದಸ್ಯರು ಈ ಪ್ರಶ್ನೆಯನ್ನು ಕೇಳಿದರು ಅದಕ್ಕೆ ಸರಿಯಾದ ಮಾಹಿತಿ ಬಂದಿರಲಿಲ್ಲ, ಅದಕ್ಕೆ ಈಗ ನಾನು ಕೇಳಿದ್ದೇನೆ.

**ಸಭಾಪತಿಯವರು:–** ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು ಮಾಹಿತಿ ಪಡೆಯುವುದು ಸರ್ಕಾರಕ್ಕೆ ಸ್ವಲ್ಪ ತಾಪತ್ರಯವಾಗಿದೆ. ಅದಕ್ಕೆ

ಕಾಲಾವಕಾಶವನ್ನುಕೇಳಿದ್ದಾರೆ. ಮುಂದಿನ ಪ್ರಶ್ನೆ ಅಲ್ಲಮ ಪ್ರಭುಪಾಟೀಲ್‌ರವರು ಕೇಳಬೇಕು.

## ಗುಲ್ಬರ್ಗಾ ಜಿಲ್ಲೆಯ ಆರೋಗ್ಯ ಪ್ರಾಥಮಿಕ ಕೇಂದ್ರದ ಬಗ್ಗೆ

## 651; ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಅ)** ಗುಲ್ಬರ್ಗಾ ಜಿಲ್ಲೆ, ಜೇವರ್ಗಿ ತಾಲ್ಲೂಕಿನ ಮಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

**ಆ)** ಹಾಗಿದ್ದಲ್ಲಿ, ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸುವುದಕ್ಕೆ ಸರ್ಕಾರದ ವಿಧಿಸಿರುವ ಮಾನದಂಡಗಳೇನು;

**ಇ)** ಸರ್ಕಾರ ವಿಧಿಸಿರುವ ಮಾನದಂಡಗಳೆಲ್ಲವನ್ನು ಪೂರೈಸಿರುವ ಮಳ್ಳಿ ಗ್ರಾಮಕ್ಕೆ ಎಂದಿನಿಂದ ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರಾರಂಭಿಸಲಾಗುವುದು?

## ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**ಅ) ಮತ್ತು ಆ)** ಸರ್ಕಾರಿ ಆದೇಶ ಸಂಖ್ಯೆ: ಆಕುಕ 443 ಸಿಜಿಎಂ 2007 ದಿನಾಂಕ: 4–10–2007ರಲ್ಲಿ ಗುಲಬರ್ಗಾ ಜಿಲ್ಲೆ, ಜೇವರ್ಗಿ ತಾಲ್ಲೂಕಿನ ಮಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಲು ಕೆಲವು ಷರತ್ತುಗಳಿಗೆ ಒಳಪಟ್ಟು ಮಂಜೂರಾತಿ ನೀಡಲಾಗಿತ್ತು.

ಜೇವರ್ಗಿ ತಾಲ್ಲೂಕಿನ ಮಳ್ಳಿ ಗ್ರಾಮಕ್ಕೆ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸಂಬಂಧಪಟ್ಟಂತೆ, ಸರ್ಕಾರವು ವಿಧಿಸಿದ್ದ ಷರತ್ತುಗಳನ್ನು ನಿಗದಿತ ಸಮಯದಲ್ಲಿ ಭಾಗಶಃ ಪೂರೈಸಿದ್ದರಿಂದ, ಸರ್ಕಾರದ ಆದೇಶ ಸಂಖ್ಯೆ: ಆಕುಕ 626 ಸಿಜಿಎಂ 2008 ದಿನಾಂಕ: 21–8–2010 ರಲ್ಲಿ ಸದರಿ ಗ್ರಾಮಕ್ಕೆ ಮಂಜೂರಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ರದ್ದು ಪಡಿಸಲಾಗಿದೆ.

ಇ) ಸರ್ಕಾರವು ವಿಧಿಸಿದ್ದ ಷರತ್ತುಗಳನ್ನು ಪೂರ್ಣವಾಗಿ ನಿಗದಿತ ಸಮಯದೊಳಗೆ ಪೂರೈಸದೇ ಇರುವ ಹಿನ್ನೆಲೆಯಲ್ಲಿ, ಈಗಾಗಲೇ ಸದರಿ ಗ್ರಾಮಕ್ಕೆ ಮಂಜೂರಾಗಿದ್ದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ರದ್ದುಪಡಿಸಲಾಗಿರುವುದರಿಂದ ಈಗ ಅದನ್ನು ಪ್ರಾರಂಭಿಸಲು ಅವಕಾಶವಿರುವುದಿಲ್ಲ.

**ಶ್ರೀ ಅಲ್ಲಮಪ್ರಭುಪಾಟೀಲ್:-** ಮಾನ್ಯ ಸಭಾಪತಿಗಳೆ, ಉತ್ತರವನ್ನು ಒದಗಿಸಿದ್ದಾರೆ. ಜೇವರ್ಗಿ ತಾಲ್ಲೂಕಿನಲ್ಲಿರುವ ಮಳ್ಳಿ ಗ್ರಾಮ ಎನ್ನುವುದು ಹೋಬಳಿ ಮಟ್ಟ. ಸುಮಾರು 35 ಹಳ್ಳಿಗಳು ಅಲ್ಲಿ ಬರುತ್ತವೆ. ಸರ್ಕಾರದ ಆದೇಶದ ಪ್ರಕಾರ 4–10–2007 ರಂದು ಜೇವರ್ಗಿ ತಾಲ್ಲೂಕು ಮಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪನೆ ಮಾಡಲು ಮಂಜೂರಾತಿಯನ್ನು ಸರ್ಕಾರ ಕೊಟ್ಟಿತು. ಕೆಲವು ಷರತ್ತುಗಳನ್ನು ಹಾಕಿ, 21–8–2010ರಲ್ಲಿ ಈ ಷರತ್ತುಗಳನ್ನು ಪೂರೈಸಬೇಕೆಂದು ಸಮಯವನ್ನು ನಿಗದಿ ಮಾಡಲಾಗಿತ್ತು. ಎಲ್ಲ ರೈತರು ಸೇರಿ ಒಂದು ಲಕ್ಷ ರೂ.ಗಳ ದೇಣಿಗೆಯನ್ನು ಸಂಗ್ರಹ ಮಾಡಿ 3–10–2008ರಂದು ಕೊಟ್ಟಿದ್ದಾರೆ. ಅದೇ ರೀತಿ ಅಲ್ಲಿ ಪ್ರಾಥಮಿಕ ಕೃಷಿ ಕಟ್ಟಡದ ಸಲುವಾಗಿ ಕೇಳಿದರು, ಅದಕ್ಕೂ ಅಲ್ಲಿಯ ಸೊಸೈಟಿಯವರು ಬರೆದು ಪತ್ರವನ್ನು 17–9–ರೊಳಗೆ ಪತ್ರವನ್ನು ಸರ್ಕಾರಕ್ಕೆ ತಲುಪಿಸಿದ್ದಾರೆ. ಇದು ಆದಮೇಲೆ 2010ರಲ್ಲಿ ಮಳ್ಳಿ ಗ್ರಾಮದಲ್ಲಿ ಎರಡು ಎಕರೆ ಜಮೀನು ಬೇಕು ಎಂದು ಕೇಳಿದರು, ಆ ಜಮೀನನ್ನು ಸಹ ಆ ಜಮೀನನ್ನು ಸರ್ಕಾರಿ ಗೈರಾಣಿಯಿಂದ ಡಿಸಿ ಯವರ ಆದೇಶದಂತೆ 2010ರಲ್ಲಿ ಎರಡು ಎಕರೆ ಜಮೀನನ್ನು ಕೊಟ್ಟಿದೆ. ಎರಡು ಎಕರೆ ಜಮೀನನ್ನು ಉಚಿತವಾಗಿ ಕೊಡುವುದು ಸ್ವಲ್ಪ ತಡವಾಯಿತು. ಎಲ್ಲವನ್ನು ಕೊಟ್ಟರು ಅಲ್ಲಿ ಆಸ್ಪತ್ರೆಯನ್ನು ರದ್ದು ಮಾಡಿದ್ದಾರೆ. ಅಲ್ಲಿ ಆಸ್ಪತ್ರೆಯ ಅವಶ್ಯಕತೆ ತುಂಬಾ ಇದೆ. ಆ ಆಸ್ಪತ್ರೆಯನ್ನು ಕೊಡುತ್ತೇವೆ ಎಂದು ಸರ್ಕಾರ ಹೇಳಿದ್ದಕ್ಕೆ ಅಲ್ಲಿಯ ಎಲ್ಲ ಗ್ರಾಮಸ್ಥರು ಸೇರಿ ಎಲ್ಲ ಷರತ್ತುಗಳನ್ನು ಪೂರೈಸಿದ್ದಾರೆ. ಇಷ್ಟೆಲ್ಲಾ ಮಾಡಿದರು ಮಂಜೂರು ಆಗಿರುವುದನ್ನು ಏಕೆ ರದ್ದುಪಡಿಸಲಾಯಿತು ಎನ್ನುವುದು ನನ್ನ ಪ್ರಶ್ನೆ.

**ಶ್ರೀ ಅರವಿಂದ ಲಿಂಬಾವಳಿ:–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಹೇಳಿದ ಹಾಗೆ 210 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಲು ಸರ್ಕಾರಿ ಆದೇಶ 443 ಸಿಜಿಎಂ 2007 ದಿನಾಂಕ: 4–10–2007ರಲ್ಲಿ ಕೆಲವು ಷರತ್ತುಗಳನ್ನು ಹಾಕಿ ಒಂದು ವರ್ಷದಲ್ಲಿ ಈ ಷರತ್ತುಗಳನ್ನು ಪೂರ್ಣ ಮಾಡಿದರೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಕೊಡಲಾಗುತ್ತದೆ ಎಂದು ಹೇಳಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗಿತ್ತು. ತಾತ್ಕಾಲಿಕವಾಗಿ ಕಟ್ಟಡವನ್ನು ಒದಗಿಸಬೇಕು, ಎರಡು ಎಕರೆ ಜಮೀನನ್ನು ಕೊಡಬೇಕು ಮತ್ತು ಒಂದು ಲಕ್ಷ ರೂ.ಗಳ ದೇಣಿಗೆಯನ್ನು ನೀಡಬೇಕು ಎನ್ನುವುದು ಷರತ್ತಾಗಿತ್ತು. ಆದರೆ ಇದನ್ನು ಪೂರೈಸಿದ್ದು 2011ರಲ್ಲಿ. ಹೀಗಾಗಿ ರದ್ದಾಗಿದೆ. ಸಾಮಾನ್ಯವಾಗಿ ಕ್ಯಾಬಿನೆಟ್‌ನ ತೀರ್ಮಾನದಂತೆ ಎಲ್ಲವೂ ನಡೆಯುತ್ತದೆ. ಜೇವರ್ಗಿಯಲ್ಲಿ ಗ್ರಾಮೀಣ ಜನಸಂಖ್ಯೆ 2.15.651 ಇದೆ. ಇಲ್ಲಿ 7 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಅವಕಾಶವಿದೆ. ಈಗಾಗಲೇ ಅಲ್ಲಿ 13 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ, ಹೀಗಾಗಿ ಈಗಾಗಲೇ ಹೆಚ್ಚುವರಿಯಾಗಿ 6 ಕೇಂದ್ರಗಳು ಅಲ್ಲಿ ಇವೆ. ಈ ಕಾರಣದಿಂದ ಜಿಲ್ಲೆಯಲ್ಲಿ ಒಟ್ಟು 22.76.935 ಗ್ರಾಮೀಣ ಸಂಖ್ಯೆ ಇದೆ, 76 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸ್ಥಾಪನೆಯಾಗಬೇಕಾಗಿತ್ತು. ಆದರೆ ಈಗಾಗಲೇ ಅಲ್ಲಿ 90 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ. ಇವರು ಕೇಳಿರುವುದು 2008ರಲ್ಲಿ ಷರತ್ತುಗಳನ್ನು ಪೂರೈಸಬೇಕಾಗಿತ್ತು, ಆದರೆ 2011ರಲ್ಲಿ ಷರತ್ತುಗಳನ್ನು ಪೂರ್ಣ ಮಾಡಿದ್ದಾರೆ. ಆದರೆ ಈಗಾಗಲೇ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ.

**ಸಭಾಪತಿಯವರು:–** ಈಗ ಇವರು ಕೇಳಿರುವುದನ್ನು ಕೊಡುತ್ತಿರೋ ಇಲ್ಲವೋ?

**ಶ್ರೀ ಅರವಿಂದ ಲಿಂಬಾವಳಿ:–** ಮಾನ್ಯ ಸಭಾಪತಿಗಳೆ, ಸದ್ಯಕ್ಕೆ ಮಂಜೂರು ಮಾಡಲು ಸಾಧ್ಯವಿಲ್ಲ.

**ಶ್ರೀ ಅಲ್ಲಮ ಪ್ರಭುಪಾಟೀಲ್:–** ಮಾನ್ಯ ಸಭಾಪತಿಗಳೆ, ನನ್ನ ಹತ್ತಿರ ಸರ್ಕಾರ ಕೊಟ್ಟಿರುವ ಬ್ಯಾಂಕ್ ರೆಕಾರ್ಡ್ ಇದೆ. 3–10–2008 ರಂದು ಡಿಡಿ ತುಂಬಿದ್ದೇವೆ. ಎರಡು ಎಕರೆ ಜಮೀನನ್ನು ಕೊಟ್ಟಿದ್ದೇವೆ. ಎಲ್ಲಾ ಕೊಟ್ಟರೂ ಕೂಡ ರದ್ದು ಮಾಡಿದ್ದಾರೆ.

**ಸಭಾಪತಿಯವರು:–** ಸಮಯ ಮೀರಿದ ಮೇಲೆ ಕೊಟ್ಟಿದ್ದಾರೆ ಎಂದು ಮಂತ್ರಿಗಳು ಹೇಳುತ್ತಾರೆ.

**ಶ್ರೀ ಅಲ್ಲಮ ಪ್ರಭುಪಾಟೀಲ್:–** ಮಾನ್ಯ ಸಭಾಪತಿಗಳೆ, 30 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ರದ್ದು ಮಾಡಿದ್ದಾರೆ. ರದ್ದು ಮಾಡಿದ ಮೇಲೆ ಯಾರಿಗೆ ಮತ್ತೆ ಕೊಡಬಾರದಿತ್ತು. ಆದರೆ ಸಚಿವರ ಊರಾದ ಬೆಳಮಗಿಗೆ ಕೊಟ್ಟಿದ್ದಾರೆ. ನನ್ನ ಹತ್ತಿರ ದಾಖಲೆ ಇದೆ ಓದುತ್ತೇನೆ. ಆದೇಶ ಕ್ರಮ ಸಂಖ್ಯೆ 17ರಲ್ಲಿ ಗುಲ್ಬರ್ಗ ಜಿಲ್ಲೆ, ಆಳಂದ ತಾಲ್ಲೂಕಿನಲ್ಲಿ ಬೆಳಮಗಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ರದ್ದುಪಡಿಸಲಾಗಿದೆ. ಆದರೆ ಈ ಗ್ರಾಮವು ಸರ್ಕಾರ ವಿಧಿಸಿರುವ ಎಲ್ಲ ಷರತ್ತುಗಳನ್ನು ಪೂರೈಸಿರುವುದು ಸರ್ಕಾರದ ಗಮನಕ್ಕೆ ಬಂದಿರುವುದರಿಂದ ಇದನ್ನು ಪುನಃ ಪ್ರಾರಂಭಿಸಲು ಸರ್ಕಾರ ತೀರ್ಮಾನ ತೆಗೆದುಕೊಂಡು ಪುನಃ ಮಂಜೂರು ಮಾಡಿದ್ದಾರೆ. ನಮ್ಮ ಜೊತೆಯಲ್ಲಿಯೇ ಇದನ್ನು ರದ್ದು ಮಾಡಲಾಗಿತ್ತು. ಆದರೆ ಬೆಳಮಗಿಯವರಿಗಿಂತ ಮೊದಲು ನಾವು ಡಿಡಿ ಕಟ್ಟಿದ್ದೇವೆ. ಅದರ ದಾಖಲೆ ನನ್ನ ಹತ್ತಿರ ಇದೆ.

**ಸಭಾಪತಿಯವರು:–**ನಾವು ಸಮಯಕ್ಕೆ ಸರಿಯಾಗಿ ಷರತ್ತುಗಳನ್ನು ಪೂರೈಸಲಿಲ್ಲ, ಸ್ವಲ್ಪ ತಡವಾಗಿದೆ. ತಡವಾಗಿ ಷರತ್ತುಗಳನ್ನು ಪೂರೈಸಿದ ಬೇರೆಯವರಿಗೆ ಮಂಜೂರಾತಿಯನ್ನು ಕೊಟ್ಟಿದ್ದೀರಿ. ನಮಗೂ ಕೊಡಿ ಎಂದು ಸದಸ್ಯರು ಕೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಏಕೆಂದರೆ ಎರಡು ಆಸ್ಪತ್ರೆಗಳು ರದ್ದಾಗಿವೆ, ಮಳ್ಳಿ ಗ್ರಾಮವು ಸರ್ಕಾರವು ವಿಧಿಸಿದ್ದ ಷರತ್ತುಗಳನ್ನು ಭಾಗಶಃ ಪೂರೈಸಿದ್ದರಿಂದ ಮಂಜೂರಾಗಿರುವ ಆರೋಗ್ಯ ಕೇಂದ್ರವನ್ನು ರದ್ದುಪಡಿಸಲಾಗಿದೆ. ಆದರೆ ಬೇರೆ ಗ್ರಾಮಕ್ಕೆ ಕೊಟ್ಟಿದ್ದು, ಇವರಿಗೆ

ಏಕೆ ಕೊಡುವುದಿಲ್ಲ? ಸಂವಿಧಾನಕ ಪರಿಚ್ಛೇದ 14ನ್ನು ಉಲ್ಲಂಘನೆ ಮಾಡಿದಂತಾಗುತ್ತದೆ. ಸಮಾನತೆಯನ್ನು ನಿರ್ವಹಣೆ ಮಾಡಬೇಕೇ ಹೊರತು ಮನಸೋ ಇಚ್ಛೆ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಅರವಿಂದ ಲಿಂಬಾವಳಿ:-** ಅವರ ಹತ್ತಿರ ಇರುವ ಮಾಹಿತಿಗಳು ನನ್ನಲ್ಲಿಯೂ ಇದೆ. ಅವರು ಷರತ್ತುಗಳನ್ನು ಪೂರ್ಣಗೊಳಿಸಿಲ್ಲ. ಬೇರೆ ಗ್ರಾಮಕ್ಕೆ ಕೊಟ್ಟಿದೆ ಎನ್ನುವುದಾದರೆ ನಮ್ಮಲ್ಲಿ ಹೆಚ್ಚು ಕೊಟ್ಟಿರುವುದರಿಂದ ಅದನ್ನು ಮಾಡಲು ಚಿಂತನೆ ಮಾಡುತ್ತೇನೆ. ಈ ರೀತಿ ಹೇಳಿದರೆ ಏನು?

(ಗೊಂದಲ)

**ಶ್ರೀ ಅಲ್ಲಮ ಪ್ರಭುಪಾಟೀಲ್**:- ದಯಮಾಡಿ ಮಾನ್ಯ ಸಚಿವರು ಬಡವರ ಬಗ್ಗೆ ಕಾಳಜಿ ತೋರಿಸಬೇಕು. ಸುಮಾರು 2 ವರ್ಷಗಳಿಂದ ಆರೋಗ್ಯ ಮಂತ್ರಿ ಇರಲಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:-** ಎಲ್ಲವನ್ನು ಕಾನೂನು ಪ್ರಕಾರ ಮಾಡಿದ್ದಾರೆಯೇ? ವಿಪಕ್ಷದವರಿಗೆ ಒಂದು ರೀತಿ ಮತ್ತು ಆಡಳಿತ ಪಕ್ಷದವರಿಗೆ ಒಂದು ರೀತಿ ಮಾಡಿದರೆ ಹೇಗೆ? ಕಾನೂನು ಪ್ರಕಾರ ಎಷ್ಟು ಮಾಡಿದ್ದಾರೆ? ಒಬ್ಬರಿಗೆ ಕೊಟ್ಟು ಮತ್ತೊಬ್ಬರಿಗೆ ಕೊಡದಿದ್ದರೆ ತಪ್ಪಾಗುವುದಿಲ್ಲವೇ? ಸಣ್ಣ ಪುಟ್ಟ ತಪ್ಪುಗಳಿದ್ದರೆ ಸರ್ಕಾರವು ಮಾಡಲಿ. ಅವಶ್ಯಕತೆ ಇರುವಲ್ಲಿ ಆರೋಗ್ಯ ಕೇಂದ್ರಗಳನ್ನು ಕೊಡಲಿ.

**ಶ್ರೀ ಅಲ್ಲಮ ಪ್ರಭುಪಾಟೀಲ್**:- ನನ್ನ ಉತ್ತರವನ್ನು ಅವರು ಸರಿಯಾಗಿ ಅರ್ಥೈಸಿಕೊಳ್ಳಲಿಲ್ಲ. ಜೇವರ್ಗಿ ತಾಲ್ಲೂಕಿನಲ್ಲಿ 2,15,651 ಜನಸಂಖ್ಯೆಗೆ ಅನುಗುಣವಾಗಿ 7 ಪ್ರಾಥಮಿಕ ಆರೋಗ್ಯ ಕೇಂದ್ರ ಅಸ್ತಿತ್ವದಲ್ಲಿರಬೇಕಾಗಿದ್ದು, ಈಗಾಗಲೇ 13 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ.

**ಶ್ರೀ ಬಸವರಾಜ ಹೊರಟ್ಟಿ:-** ಹಾಗಾದರೆ ಅವುಗಳನ್ನು ಮಂಜೂರು ಮಾಡಿದ್ದೇಕೆ?

**ಶ್ರೀ ಅರವಿಂದ ಲಿಂಬಾವಳಿ:–** ಕೊಟ್ಟಿದ್ದು ತಪ್ಪು ಎಂದು ಹೇಳುತ್ತೇನೆ. ಸರ್ಕಾರದ ಪಾಲಿಸಿ.....

**ಶ್ರೀ ಬಸವರಾಜ ಹೊರಟ್ಟಿ:–**ಇದು ಸಾರ್ವಜನಿಕರ ಪ್ರಶ್ನೆ ಇದೆ.

**ಶ್ರೀ ಅರವಿಂದ ಲಿಂಬಾವಳಿ:–** ಸಚಿವ ಸಂಪುಟದ ತೀರ್ಮಾನದಂತೆ ರಾಜ್ಯದ 8871 ಉಪಕೇಂದ್ರಗಳು, 2346 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 180 ಸಮುದಾಯ ಆರೋಗ್ಯ ಕೇಂದ್ರಗಳು, 146 ತಾಲ್ಲೂಕು ಆಸ್ಪತ್ರೆಗಳು ಮತ್ತು 18 ಜಿಲ್ಲಾ ಆಸ್ಪತ್ರೆಗಳು ಇವೆ. ಲಭ್ಯವಿರುವ ಜನಸಂಖ್ಯೆಗನುಗುಣವಾಗಿ ಇದ್ದು ಹೆಚ್ಚಾಗಿದ್ದು, ಇರುವ ಆಸ್ಪತ್ರೆಗಳನ್ನು ಬಲಪಡಿಸಬೇಕು ಎಂಬುದು ಸರ್ಕಾರದ ತೀರ್ಮಾನವಾಗಿದೆ. ಹೊಸದಾಗಿ ಕೊಡುವ ಬಗ್ಗೆ ಚಿಂತನೆ ಮಾಡಿದರೆ ಈಗಾಗಲೇ 500ಕ್ಕಿಂತ ಹೆಚ್ಚು ಅರ್ಜಿಗಳು ಇರುವ ಹಿನ್ನೆಲೆಯಲ್ಲಿ ನಾನು ಅವರಿಗೆ ಕೊಟ್ಟಿದ್ದಾರೆ. ಮತ್ತು ಇವರಿಗೆ ಕೊಟ್ಟಿದ್ದಾರೆ ಎಂದು ತಾರತಮ್ಯ ಮಾಡುತ್ತಿಲ್ಲ. ಆದ್ದರಿಂದ ಈಗಾಗಲೇ ಹೆಚ್ಚು ಇದ್ದು, ಷರತ್ತುಗಳನ್ನು ಪೂರೈಸಲು ಅವಕಾಶ ಕೊಟ್ಟಿದ್ದು, ನಿಗದಿತ ಸಮಯದಲ್ಲಿ ಷರತ್ತುಗಳನ್ನು ಪೂರೈಸಿಲ್ಲ. ಆದ್ದರಿಂದ 83 ಪ್ರಾಥಮಿಕ ಆರೋಗ್ಯ ಕೇಂದ್ರಗಳು ರದ್ದಾಗಿವೆ. ಒಂದು ಕಡೆ ಕೊಟ್ಟರೆ 83 ಕಡೆ ಕೊಡಬೇಕೆಂದು ಕೇಳುತ್ತಾರೆ. ಆದ್ದರಿಂದ ಇರುವ ಆಸ್ಪತ್ರೆಗಳನ್ನು ಬಲಪಡಿಸಲು ಸರ್ಕಾರ ಬದ್ಧವಾಗಿದೆ.

**ಶ್ರೀ ಅಲ್ಲಮ ಪ್ರಭುಪಾಟೀಲ್** :–ಮಾನ್ಯ ಸಭಾಪತಿಯವರೇ, ಇದು ಅನ್ಯಾಯ, ಇದನ್ನು ಪ್ರತಿಭಟಿಸಿ ನಾನು ಸದನದಲ್ಲಿ ಹೊರ ಹೋಗುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಸಚಿವರ ಹೇಳಿಕೆಯನ್ನು ಪ್ರತಿಭಟಿಸಿ ಸದನದಿಂದ ಹೊರನಡೆದರು)

**ಶ್ರೀ ಎಸ್.ಆರ್. ಪಾಟೀಲ್:–** ಷರತ್ತುಗಳನ್ನು ಇವರ ನಂತರ ಪೂರೈಸಿದವರಿಗೆ ಕೊಟ್ಟಿದ್ದಾರೆ. ಇವರಿಗೆ ಒಂದು ನೀತಿ ಮತ್ತೊಬ್ಬರಿಗೆ ಒಂದು ನೀತಿಯಾದರೆ ಸಂವಿಧಾನದ ಪರಿಚ್ಛೇದ 14ನ್ನು ಉಲ್ಲಂಘಿಸಿದಂತಾಗುವುದಲ್ಲವೇ? ತಾರತಮ್ಯ ಆಗುವುದಿಲ್ಲವೇ? ನ್ಯಾಯವನ್ನು ಸಮಾನತೆಯಿಂದ ನೋಡಬೇಕು. ಸಂವಿಧಾನದ ಪರಿಚ್ಛೇದ 14ನ್ನು ಓದಲಿ,

ಒಬ್ಬರಿಗೆ ಒಂದು ರೀತಿ ಮತ್ತೊಬ್ಬರಿಗೆ ಒಂದು ನೀತಿ ಮಾಡುವುದಕ್ಕೆ ಬರುವುದಿಲ್ಲ.

**ಸಭಾಪತಿಯವರು:–** ಈಗ ನಾನು ಉಳಿದ 6 ಪ್ರಶ್ನೆಗಳನ್ನು ನಿಲ್ಲಿಸಿಬಿಡುತ್ತೇನೆ.

**ಶ್ರೀ ಅರವಿಂದ ಲಿಂಬಾವಳಿ:–** ಅವರು ಷರತ್ತುಗಳನ್ನು ಪೂರೈಸಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮತ್ತೊಬ್ಬರು ಪೂರೈಸಿಲ್ಲ.

**ಶ್ರೀ ಅರವಿಂದ ಲಿಂಬಾವಳಿ:–** ನಮ್ಮ ಕಡೆ ವೈದ್ಯರನ್ನು ಕೊಡುವುದಕ್ಕೆ ಸಾಧ್ಯವಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಚಿವರಿಗೆ discretionary powers ಇದೆ. ಅವರು ಹೊಸದಾಗಿ ಕೇಳಿಲ್ಲ. ಮಂಜೂರಾಗಿರುವುದನ್ನು ಕೇಳಿದ್ದಾರೆ.

**ಸಭಾಪತಿಯವರು:–** ತಮಗೆ ಅವಕಾಶ ಕೊಡುತ್ತೇನೆ. ಮಾನ್ಯ ಸಚಿವರು ಉತ್ತರ ಹೇಳಲಿ.

**ಶ್ರೀ ಅರವಿಂದ ಲಿಂಬಾವಳಿ:–** 200 ಕಡೆ ಅನುಮತಿ ಕೊಡುವ ಸಮಯದಲ್ಲಿ 83 ಕಡೆ ಷರತ್ತುಗಳನ್ನು ಪೂರೈಸದೇ ರದ್ದಾಗಿದೆ. ಆಕಸ್ಮಾತ್ ಯಾರದೋ ಒಬ್ಬರದು ಆಗಿದೆ ಎಂದು ವಿವರಗಳನ್ನು ತರಿಸಿಕೊಳ್ಳುತ್ತೇನೆ. ಏಕೆಂದರೆ ಈಗ ಇರುವ ಆಸ್ಪತ್ರೆಗಳಿಗೆ ವೈದ್ಯರನ್ನು ಕೊಡುವುದಕ್ಕೆ ಆಗುತ್ತಿಲ್ಲ. ಇನ್ನೂ ಮತ್ತೆ ಪ್ರಾರಂಭಿಸಿದರೆ ಏನೂ ಇಲ್ಲದೇ ಪ್ರಾರಂಭವಾದಂತಾಗುತ್ತದೆ. ಆ ಹಿನ್ನೆಲೆಯಲ್ಲಿ ನಾನು ಹೇಳುವುದೇನೆಂದರೆ,

**ಸಭಾಪತಿಯವರು:–** ಪರಿಗಣನೆ ಮಾಡುತ್ತೇನೆ ಮತ್ತು ಮಾಹಿತಿ ತರಿಸಿ ನೋಡುತ್ತೇನೆ ಎಂದು ಹೇಳಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾರತಮ್ಯ ಮಾಡಬಾರದು. ಸಂವಿಧಾನಕ್ಕೆ ಅನುಗುಣವಾಗಿ ಸರ್ಕಾರ ನಡೆಯುತ್ತಿದೆಯೇ?

ಒಬ್ಬರಿಗೊಂದು yardstick ಮತ್ತೊಬ್ಬರಿಗೊಂದು yardstick ಎಂದರೆ ಹೇಗೆ? ಅದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಒಪ್ಪಿಕೊಳ್ಳಲಿ.

**ಶ್ರೀ ಅರವಿಂದ ಲಿಂಬಾವಳಿ:–** ನಿಶ್ಚಿತವಾಗಿ ಮಾಹಿತಿಗಳನ್ನು ತರಿಸಿ ಪರಿಶೀಲನೆ ಮಾಡುತ್ತೇನೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಚಿವರು ಜನಸಂಖ್ಯೆ ಮತ್ತು ಕಾನೂನಿನ ಬದ್ಧತೆಯ ಬಗ್ಗೆ ಮಾತನಾಡುತ್ತಿದ್ದಾರೆ. ಅದರೆ ಕೆಲವೊಂದು ವಿಶಿಷ್ಟ ಸಂದರ್ಭಗಳಲ್ಲಿ ಅಲ್ಲಿಯ ವಾತಾವರಣ, ಅಲ್ಲಿನ ಪರಿಸ್ಥಿತಿ ಹಾಗೂ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಸರ್ಕಾರವು ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಆಸ್ಪತ್ರೆ ಅವಶ್ಯಕತೆಯಿರುವಲ್ಲಿ ಯಾವುದೇ ಸರ್ಕಾರವಾಗಲೀ ಮಂಜೂರಾತಿಯನ್ನು ಕೊಟ್ಟಿದೆ. ಅತ್ಯಂತ ಬಡತನದ ಪರಿಸ್ಥಿತಿಯನ್ನು ನೋಡಬೇಕು.

**ಸಭಾಪತಿಯವರು:–** ಮಂಜೂರಾತಿ ಕೊಡುವಾಗ ಷರತ್ತುಗಳನ್ನು ಹಾಕಿದ್ದರು. ನಂತರ ರದ್ದು ಮಾಡಿ, ವಿಳಂಬ ಮಾಡಿದವರಿಗೆ ಮಂಜೂರಾತಿಯನ್ನು ಕೊಟ್ಟು ಮುಂಚೆ ಮಾಡಿದವರಿಗೆ ಕೊಡಲಿಲ್ಲ ಎಂದು ಹೇಳುತ್ತಿದ್ದಾರೆ. ಮಾನ್ಯ ಸಚಿವರು ವೈದ್ಯರು ಇಲ್ಲದಿರುವುದರಿಂದ ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಿದ್ದಾರೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಸರ್ಕಾರವು ಇದನ್ನು ಪರಿಶೀಲನೆ ಮಾಡಿ ವಿಶಾಲ ಮನಸ್ಸಿನಿಂದ ಮಾಡಬೇಕೆಂದು ವಿನಂತಿಸುತ್ತೇನೆ. ಅಲ್ಲಿ ಬಡತನ, ಬರಗಾಲ ಮತ್ತು ಸಂಘರ್ಷದಲ್ಲಿರುವ ಜನ ಕೊಡುವುದಕ್ಕೆ ಸ್ವಲ್ಪ ತಡವಾಗಿರಬಹುದು. ಅನುಕಂಪ ತೋರಿ ಮಂಜೂರು ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ ನಾನು ಅವರಿಗೊಂದು ಇವರಿಗೊಂದು ಮಾಡಿದರು ಎಂದು ಹೇಳುವುದಿಲ್ಲ. ಕಾನೂನು ಬದ್ಧತೆಯ ಬಗ್ಗೆ ನಮ್ಮ ನಾಯಕರು ಪ್ರಸ್ತಾಪಿಸಿದ್ದು, ನಾನು ಆ ವಿಷಯವನ್ನು ಹೇಳುವುದಿಲ್ಲ. ವಿಶಾಲ ಮನೋಭಾವನೆಯಿಂದ ಬಡವರು ಹಾಗೂ ದೀನದಲಿತರು ಇರುವ ಕಡೆ ಕೊಡಬಹುದಾಗಿದೆ. ಷರತ್ತುಗಳನ್ನು ಹೊಟ್ಟೆ ತುಂಬಿದವರಿಗೆ ಹೇಳಲಿ.

**ಶ್ರೀ ಎಸ್.ಆರ್. ಪಾಟೀಲ್:-** ಗ್ರಾಮೀಣ ಭಾಗದಲ್ಲಿ ಕಷ್ಟಪಡುತ್ತಾರೆ, ಒಂದು ಲಕ್ಷ ರೂಪಾಯಿಗಳನ್ನು ನೀಡಿ ಒಂದೆರಡು ಎಕರೆ ಜಮೀನು ಕೊಡಿಸಿದ್ದಾರೆ. ಆದರೆ ಅವರ ನಂತರ ಕೊಟ್ಟವರಿಗೆ ಕೊಟ್ಟು ಇವರಿಗೆ ಕೊಟ್ಟಿಲ್ಲ.

(ಗೊಂದಲ)

**ಶ್ರೀ ಅರವಿಂದ ಲಿಂಬಾವಳಿ:-** ಮಾನ್ಯ ಅಲ್ಲಮಪ್ರಭು ಪಾಟೀಲ್‌ರವರು ನನ್ನ ಉತ್ತರ ಮುಗಿಯುವುದಕ್ಕಿಂತ ಮುಂಚೆಯೇ ಹೊರಗೆ ಹೊರಟು ಹೋದರು.

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಬಡವರಿಗೆ ಸಿಟ್ಟಿಲ್ಲ, ಮಾನ್ಯ ಸಚಿವರು ದೊಡ್ಡ ಮನಸ್ಸು ಮಾಡಿ ಕೊಡಬೇಕು.

**ಸಭಾಪತಿಯವರು:-** ಮೊದಲು ಇಬ್ಬರದು ರದ್ದು ಮಾಡಿದ್ದು, ತಡವಾಗಿ ಪೂರೈಸಿದವರಿಗೆ ಕೊಟ್ಟು ಮುಂಚೆ ಪೂರೈಸಿದವರಿಗೆ ಕೊಟ್ಟಿಲ್ಲ, ಅದನ್ನು ಮಾನ್ಯ ಸಚಿವರು ಪರಿಶೀಲಿಸುತ್ತೇನೆ ಎಂದು ಹೇಳಿದ್ದಾರೆ. ತಾವು ಪರಿಶೀಲಿಸಿ ಸರಿಯಾದ ಕ್ರಮ ತೆಗೆದುಕೊಳ್ಳಿ. ವಿಪಕ್ಷ ನಾಯಕರು ಇಬ್ಬರಿಗೂ ಕೊಡುವುದಕ್ಕೆ ಬರುವುದಿಲ್ಲ ಎನ್ನುತ್ತಿದ್ದಾರೆ.

**ಶ್ರೀ ಅರವಿಂದ ಲಿಂಬಾವಳಿ:-** ಮಾನ್ಯ ವಿಪಕ್ಷ ನಾಯಕರು, ಮಾನ್ಯ ಮತ್ತಿಕಟ್ಟಿ ವೀರಣ್ಣನವರು ಹಾಗೂ ಮಾನ್ಯ ಹೊರಟ್ಟಿಯವರು ವಿನಂತಿ ಮಾಡಿದ್ದು, ಅದು ಹೈದರಾಬಾದ್-ಕರ್ನಾಟಕದ ಭಾಗವಾಗಿದ್ದು ನಾನು ಪರಿಶೀಲಿಸುತ್ತೇನೆ.

**ವಿಶ್ವವಿದ್ಯಾನಿಲಯಗಳ ಕುಲಪತಿ ಆಯ್ಕೆ ಕ್ರಮದ ಬಗ್ಗೆ**

**422; ಡಾ॥ ಮುಮ್ತಾಜ್ ಅಲಿಖಾನ್ (ನಾಮ ನಿರ್ದೇಶಿತರು)**

ಅ) ವಿಶ್ವವಿದ್ಯಾನಿಲಯದ ಕುಲಪತಿಗಳ ಆಯ್ಕೆಗೆ ಗುರ್ತಿಸಿರುವ ಮಾನ ದಂಡವೇನು; (ಸಂಪೂರ್ಣ ಮಾಹಿತಿಯನ್ನು ಕೊಡುವುದು);

**ಆ)** ಜಾತಿ ಆಧಾರದ ಮೇಲೆ ಆಯ್ಕೆ ಆಗುತ್ತಿದೆಯೇ: ಹಾಗಿದ್ದರೆ ಸಮಾಜಕ್ಕೆ ಹಾನಿ ಆಗುವುದಿಲ್ಲವೇ;

**ಇ)** ಒಂದು ವೇಳೆ ಜಾತಿ ಲೆಕ್ಕಾಚಾರ ಅನಿವಾರ್ಯವಾದರೆ ಯಾವ ಯಾವ ಜಾತಿಗಳಿಗೆ ಎಷ್ಟೆಷ್ಟು ಕೊಡಬೇಕೆಂದು ಸ್ಪಷ್ಟವಾಗಿ ನಿಯಮಾವಳಿಯಲ್ಲಿ ರೂಪಿಸುವುದು ಸೂಕ್ತವಲ್ಲವೇ;

**ಈ)** ಯಾವುದೇ ಒಂದು ಜಾತಿ/ಕೋಮಿನ ಅಭ್ಯರ್ಥಿಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡುವುದರಿಂದ ಸಮಾಜಿಕ ನ್ಯಾಯಕ್ಕೆ ಧಕ್ಕೆ ಆಗುವುದಿಲ್ಲವೆ; ಇದಕ್ಕೆ ಪರಿಹಾರ ಏನು;

**ಉ)** ಅರ್ಹತೆ, ಪ್ರಾಮಾಣಿಕತೆ ಮತ್ತು ದಕ್ಷತೆಗೆ ಆದ್ಯತೆ ಕೊಡುವುದು ಒಳ್ಳೆಯದಲ್ಲವೆ; ಹಾಗಿದ್ದಲ್ಲಿ ಇವುಗಳನ್ನು ಅನುಷ್ಠಾನಕ್ಕೆ ತರಲು ಸರ್ಕಾರ ಸಿದ್ಧವಾಗಿದೆಯೇ?

**ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು)**

**ಅ)** ಕುಲಪತಿಗಳ ನೇಮಕಾತಿಗಾಗಿ ವಿಶ್ವವಿದ್ಯಾಲಯಗಳ ಕಾಯ್ದೆಯಲ್ಲಿನ ಅವಕಾಶಗಳನ್ವಯ ಶೋಧನಾ ಸಮಿತಿಗಳನ್ನು ರಚಿಸಲಾಗುತ್ತದೆ. ಶೋಧನಾ ಸಮಿತಿಯ ಸದಸ್ಯರುಗಳಲ್ಲಿ ಘನತೆವೆತ್ತ ರಾಜ್ಯಪಾಲರ ನಾಮನಿರ್ದೇಶಿತರು, ರಾಜ್ಯ ಸರ್ಕಾರದ ನಾಮಾಂಕಿತರು, ಯುಜಿಸಿಯ ನಾಮಾಂಕಿತರು ಮತ್ತು ಆಯಾ ವಿಶ್ವವಿದ್ಯಾಲಯಗಳ ಸಿಂಡಿಕೇಟ್‌ನಿಂದ ನಾಮಕರಣಗೊಂಡ ಒಬ್ಬರನ್ನೊಳಗೊಂಡ ವ್ಯಕ್ತಿಗಳು ಸದಸ್ಯರುಗಳಾಗಿರುತ್ತಾರೆ. ಶೋಧನಾ ಸಮಿತಿಯು ಕುಲಪತಿ ಹುದ್ದೆಯ ಅರ್ಹ ಆಕಾಂಕ್ಷಿಗಳ ಅರ್ಹತೆಗಳನ್ನು ಪರಿಶೋಧಿಸಿ **'ಅಕಾರಾಧಿ'** ಕ್ರಮದಲ್ಲಿ ಮೂರು ವ್ಯಕ್ತಿಗಳ ಹೆಸರುಗಳನ್ನು ಶಿಪಾರಸ್ಸು ಮಾಡುತ್ತದೆ. ಘನತೆವೆತ್ತ ಕುಲಾಧಿಪತಿಯವರು ಹಾಗೂ ರಾಜ್ಯಪಾಲರು ಅವರುಗಳ ಅರ್ಹತೆ, ಸಮದರ್ಶಿತ್ವ, ಅನುಭವ ಮತ್ತು ಸಾಮಾಜಿಕ ನ್ಯಾಯ – ಇವುಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರದೊಡನೆ

ಸಮಾಲೋಚಿಸಿ ಒಬ್ಬರನ್ನು ಕುಲಪತಿಯನ್ನಾಗಿ ನೇಮಕ ಮಾಡುವ ಶಾಸನೀಯ ವ್ಯವಸ್ಥೆ ಇದೆ.

**ಆ)** ಮೇಲ್ಕಂಡ ಪ್ರಶ್ನೆ 'ಅ' ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ಇ)** ಮೇಲ್ಕಂಡ ಪ್ರಶ್ನೆ 'ಅ' ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ಈ)** ಮೇಲ್ಕಂಡ ಪ್ರಶ್ನೆ 'ಅ' ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ಉ)** ಮೇಲ್ಕಂಡ ಪ್ರಶ್ನೆ 'ಅ' ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ಪ್ರೊ: ಮುಮ್ತಾಜ್ ಆಲಿಖಾನ್:-** ಮಾನ್ಯ ಸಭಾಪತಿಯವರೇ ನಾನು ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರ ಬಂದಿಲ್ಲ ಎಂದು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಮಾನದಂಡದ ಬಗ್ಗೆ ಸಾಮಾಜಿಕ ನ್ಯಾಯ ಎಂದು ಹೇಳುತ್ತಾರೆ.. ಆದರೆ ಸಾಮಾಜಿಕ ನ್ಯಾಯ ಎಲ್ಲಿದೆ? Where is social justice? This is also what is called distributive social justice. ಹಿಂದುಳಿದವರಲ್ಲಿ ಅನೇಕ ಗುಂಪುಗಳಿದ್ದು, ಕೆಲವು ವಿಶ್ವವಿದ್ಯಾಲಯಗಳಲ್ಲಿ 50-60ವರ್ಷಗಳು ಕಳೆದರೂ ಒಬ್ಬ ದಲಿತ ಅರ್ಹತೆ ಹೊಂದಿದ್ದರೂ ಆತನನ್ನು ಕುಲಪತಿ ಮಾಡಿಲ್ಲ. ನಂತರ ಪ್ರಾಮಾಣಿಕತೆಯ ಮಾತು ಮಾನದಂಡದಲ್ಲಿ ಬಂದಿಲ್ಲ. ಅಂದರೆ ಪ್ರಾಮಾಣಿಕತೆ ಹೊಂದಿರುವ ಕುಲಪತಿಯ ಅಭ್ಯರ್ಥಿಗಳು ಸಿಗುತ್ತಿಲ್ಲವೇ ಅಥವಾ ಸರ್ಕಾರಕ್ಕೆ ಪ್ರಾಮಾಣಿಕರು ಬೇಕಿಲ್ಲವೇ ಎಂಬ ಅರ್ಥ ಬರುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಯಾವುದೇ ಒಂದು ಜಾತಿ ಅಥವಾ ಕೋಮಿನ ಅಭ್ಯರ್ಥಿಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡುವುದರಿಂದ ಸಾಮಾಜಿಕ ನ್ಯಾಯಕ್ಕೆ ಧಕ್ಕೆ ಆಗುವುದಿಲ್ಲವೇ ಎನ್ನುವಂತಹ ನನ್ನ ಪ್ರಶ್ನೆಗೆ ಮೇಲ್ಕಂಡ 'ಅ'

ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎನ್ನುವಂತಹ ಉತ್ತರವನ್ನು ನೀಡಿದ್ದಾರೆ, ನಾನು ಕೇಳಿದ್ದೇನೆಂದರೆ – "If there is heavy concentration of the number of Vice–Chancellors in the hands of a particular group, will that not affect social justice?" ಒಂದು ವೇಳೆ, ಒಂದು ಅಥವಾ ಎರಡು ಕೋಮಿನವರಿಗೆ ಹೆಚ್ಚಾಗಿ ಪ್ರಾಶಸ್ತ್ಯವನ್ನು ಕೊಟ್ಟು ಕುಲಪತಿಗಳ ಹುದ್ದೆಯನ್ನು ನೀಡುವುದರಿಂದ ಸಾಮಾಜಿಕ ನ್ಯಾಯಕ್ಕೆ ಧಕ್ಕೆ ಆಗುವುದಿಲ್ಲವೇ ಎನ್ನುವಂತಹ ಪ್ರಶ್ನೆಗೆ ಸಮಂಜಸವಾಗಿರುವಂತಹ ಉತ್ತರವನ್ನು ಕೊಟ್ಟಿಲ್ಲ. ಶ್ರೇಣಿಕೃತ ಸಮಾಜ ನಮ್ಮದು. ಬಸವಣ್ಣನವರ ತತ್ವಗಳನ್ನು ಗಾಳಿಗೆ ತೂರಿದ್ದಾರೆ. ಯಾರ ತತ್ವವನ್ನೂ ಇವರು ಪಾಲಿಸುವುದಿಲ್ಲ. ತಮ್ಮ ಜಾತಿ ಮುಖ್ಯವಾಗಿದೆ ಜಾತಿ ಇಲ್ಲವೆಂದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಮಂತ್ರಿಗಳಾಗಿ ಮತ್ತು ಶಾಸಕರಾಗಿ ಕಾರ್ಯ ನಿರ್ವಹಿಸುತ್ತಿರುವವರು ಈ ಮಾತನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಯಾವುದೇ ಆಡಳಿತ ಪಕ್ಷವಾಗಿರಲಿ ಸಾಮಾನ್ಯವಾಗಿ ತಮಗೆ ಬೇಕಾಗಿರುವವರನ್ನು ಕುಲಪತಿಗಳನ್ನಾಗಿ ನೇಮಕ ಮಾಡಿಕೊಳ್ಳುತ್ತಾರೆ. ಕುಲಪತಿಗಳನ್ನು ನೇಮಕ ಮಾಡುವ ಸಮಿತಿಯಲ್ಲಿಯೂ ಗೊಂದಲ ನಡೆದು ಬಿಡುತ್ತದೆ. A, B ಮತ್ತು C ಎಂದು panel ಕೊಡುತ್ತಾರೆ, ನೀವು ಆಯ್ಕೆ ಮಾಡಬೇಕಾಗುತ್ತದೆ. ತಮಗೆ ಯಾರು ಬೇಕು. ಅವರಿಗೆ A ಎಂದು ಕೊಟ್ಟು ಅವರನ್ನು ನೇಮಕ ಮಾಡುತ್ತಾರೆ. ಒಟ್ಟಿನಲ್ಲಿ ಹೇಳಬೇಕಾದರೆ, ವಿಶ್ವವಿದ್ಯಾಲಯಗಳಲ್ಲಿ ಸಾಮಾಜಿಕ ನ್ಯಾಯ, ಪ್ರಾಮಾಣಿಕತೆ ಎನ್ನುವುದು ಕಂಡುಬರುತ್ತಿಲ್ಲ. ತಮ್ಮೆಲ್ಲರಿಗೂ ತಿಳಿದಿರುವಂತೆ ಎಷ್ಟೋ ಜನ ಕುಲಪತಿಗಳು ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಹೊಡೆದಿದ್ದಾರೆ, ಅದನ್ನು ಲೆಕ್ಕ ಹಾಕಿದರೆ ಅರ್ಥವಾಗುತ್ತದೆ. ದಲಿತರ ಮತ್ತು ಹಿಂದುಳಿದ ವರ್ಗದವರ ಕಡೆಗೆ ಹೆಚ್ಚಾಗಿ ಗಮನ ಕೊಡಬೇಕೆನ್ನುವುದು ನನ್ನ ಮನವಿಯಾಗಿದೆ.

| 17 | MYSORE | KODAGU | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 18 | MYSORE | MYSORE | 0 | 0 | 0 | 0 | 0 | 0 | 0 | 0 | 1 | 1 | 2 | 0 | 0 | 0 | 0 | 0 | 0 | 0 |
| 19 | MYSORE | CHAMARAJANAGAR | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 1 | 0 |
| | | **Division Total** | **0** | **0** | **0** | **0** | **0** | **0** | **0** | **0** | **7** | **3** | **11** | **4** | **1** | **0** | **0** | **0** | **6** | **2** |
| 20 | BELGAUM | BELGAUM | 0 | 0 | 0 | 0 | 0 | 0 | 0 | 0 | 0 | 0 | 1 | 0 | 0 | 0 | 0 | 0 | 1 | 0 |
| 21 | BELGAUM | BAGALKOT | 0 | 0 | 0 | 0 | 0 | 0 | 0 | 0 | 1 | 0 | 0 | 0 | 0 | 0 | 0 | 0 | 1 | 0 |
| 22 | BELGAUM | BIJAPUR | 0 | 0 | 0 | 0 | 0 | 0 | 0 | 0 | 1 | 0 | 1 | 0 | 0 | 0 | 0 | 0 | 1 | 0 |
| 23 | BELGAUM | GADAG | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 24 | BELGAUM | DHARWAD | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 25 | BELGAUM | UTTARKANNADA | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 26 | BELGAUM | HAVERI | 0 | 0 | 0 | 0 | 0 | 0 | 0 | 0 | 2 | 0 | 1 | 1 | 0 | 0 | 0 | 0 | 0 | 1 |
| 27 | BELGAUM | CHIKKODI | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 28 | BELGAUM | SIRSI | 0 | 0 | 0 | 0 | 0 | 0 | 0 | 0 | 0 | 0 | 1 | 0 | 0 | 0 | 0 | 0 | 1 | 1 |
| | | **Division Total** | **0** | **0** | **0** | **0** | **0** | **0** | **0** | **0** | **4** | **0** | **4** | **1** | **0** | **0** | **0** | **0** | **4** | **2** |

| SL.NO. | DIVISION | DISTRICT | PET - SECONDARY | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|
| | | | TERMINALLY ILL CASES | | PHISICALLY HANDICAPPED (> 40%) | | WIDOWS | | DEFENCE CASES | | HUSBAND AND WIFE BOTH IN GOVT | | HUSBAND OR WIFE IN GOVT | | OTHER CASES WOMEN | | OFFICE BEARER | | OTHER CASES MEN | |
| | | | WITHIN | OUT | WITHIN | OUT | WITHIN | OUT | WITHIN | OUT | WITHIN | OUT | WITHIN | OUT | WITHIN | OUT | WITHIN | OUT | WITHIN | OUT |
| 29 | GULBARGA | GULBARGA | 0 | 0 | 0 | 0 | 0 | 0 | 0 | 0 | 2 | 0 | 0 | 1 | 0 | 0 | 0 | 0 | 3 | 0 |
| 30 | GULBARGA | BIDAR | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 31 | GULBARGA | RAICHUR | 0 | 0 | 0 | 0 | 0 | 1 | 0 | 0 | 0 | 1 | 1 | 0 | 0 | 0 | 0 | 0 | 1 | 0 |
| 32 | GULBARGA | KOPPAL | 0 | 0 | 0 | 0 | 0 | 0 | 0 | 0 | 0 | 0 | 1 | 0 | 0 | 0 | 0 | 0 | 2 | 0 |
| 33 | GULBARGA | BELLARY | 0 | 0 | 0 | 0 | 0 | 0 | 0 | 0 | 3 | 0 | 1 | 1 | 0 | 0 | 0 | 0 | 1 | 0 |
| 34 | GULBARGA | YADGIRI | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 1 | 0 |
| | | **Division Total** | **0** | **0** | **0** | **0** | **0** | **1** | **0** | **0** | **5** | **1** | **3** | **2** | **0** | **0** | **0** | **0** | **8** | **0** |
| | | **State Total** | **1** | **0** | **0** | **0** | **0** | **1** | **0** | **0** | **21** | **8** | **28** | **9** | **3** | **0** | **0** | **0** | **30** | **4** |

DISTRICT , REASON WISE TRANSFER EFFECTED

| SL.NO. | DIVISION | DISTRICT | SPL - SECONDARY | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|
| | | | TERMINALLY ILL CASES | | PHISICALLY HANDICAPPED (> 40%) | | WIDOWS | | DEFENCE CASES | | HUSBAND AND WIFE BOTH IN GOVT | | HUSBAND OR WIFE IN GOVT | | OTHER CASES WOMEN | | OFFICE BEARER | | OTHER CASES MEN | |
| | | | WITHIN | OUT | WITHIN | OUT | WITHIN | OUT | WITHIN | OUT | WITHIN | OUT | WITHIN | OUT | WITHIN | OUT | WITHIN | OUT | WITHIN | OUT |
| 1 | BANGALORE | CHITRADURGA | 0 | 0 | 0 | 0 | 0 | 0 | 0 | 0 | 1 | 0 | 0 | 0 | 0 | 0 | 0 | 0 | 1 | 0 |
| 2 | BANGALORE | DAVANAGERE | 0 | 0 | 0 | 0 | 0 | 0 | 0 | 0 | 0 | 1 | 0 | 1 | 1 | 0 | 0 | 0 | 5 | 0 |
| 3 | BANGALORE | SHIMOGA | 0 | 0 | 0 | 0 | 0 | 0 | 0 | 0 | 0 | 0 | 1 | 1 | 0 | 0 | 0 | 0 | 1 | 0 |
| 4 | BANGALORE | TUMKUR | 0 | 0 | 0 | 0 | 0 | 0 | 0 | 0 | 0 | 0 | 0 | 1 | 1 | 0 | 0 | 0 | 0 | 0 |
| 5 | BANGALORE | KOLAR | 0 | 0 | 0 | 0 | 0 | 0 | 0 | 0 | 0 | 0 | 0 | 2 | 0 | 0 | 0 | 0 | 0 | 0 |
| 6 | BANGALORE | BANGALORE SOUTH | 1 | 0 | 0 | 0 | 0 | 0 | 0 | 0 | 0 | 0 | 0 | 0 | 3 | 0 | 0 | 0 | 3 | 0 |
| 7 | BANGALORE | BANGALORE RURAL | 0 | 0 | 0 | 0 | 0 | 0 | 0 | 0 | 0 | 0 | 0 | 0 | 1 | 0 | 0 | 0 | 1 | 0 |
| 8 | BANGALORE | BANGALORE NORTH | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 9 | BANGALORE | CHIKKABALLAPURA | 0 | 0 | 0 | 0 | 0 | 0 | 0 | 0 | 0 | 0 | 0 | 1 | 0 | 0 | 0 | 0 | 0 | 0 |
| 10 | BANGALORE | MADHUGIRI | 0 | 0 | 0 | 0 | 0 | 0 | 0 | 0 | 2 | 0 | 0 | 1 | 1 | 0 | 0 | 0 | 0 | 0 |
| 11 | BANGALORE | RAMANAGARA | 0 | 0 | 0 | 0 | 0 | 0 | 0 | 0 | 0 | 0 | 1 | 2 | 0 | 0 | 0 | 0 | 0 | 0 |
| | | **Division Total** | **1** | **0** | **0** | **0** | **0** | **0** | **0** | **0** | **3** | **1** | **2** | **9** | **7** | **0** | **0** | **0** | **11** | **0** |
| 12 | MYSORE | UDUPI | 0 | 0 | 0 | 1 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 13 | MYSORE | CHIKKAMANGALORE | 0 | 0 | 0 | 0 | 0 | 0 | 0 | 0 | 0 | 0 | 0 | 2 | 0 | 0 | 0 | 0 | 0 | 0 |
| 14 | MYSORE | MANDYA | 0 | 0 | 0 | 0 | 0 | 0 | 0 | 0 | 0 | 0 | 0 | 1 | 1 | 0 | 0 | 0 | 3 | 1 |
| 15 | MYSORE | HASSAN | 0 | 0 | 0 | 0 | 0 | 0 | 0 | 0 | 2 | 1 | 0 | 1 | 1 | 0 | 0 | 0 | 2 | 0 |
| 16 | MYSORE | DAKSHINA KANNADA | 0 | 0 | 0 | 0 | 0 | 0 | 0 | 0 | 0 | 0 | 2 | 1 | 0 | 0 | 0 | 0 | 1 | 0 |
| 17 | MYSORE | KODAGU | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 18 | MYSORE | MYSORE | 0 | 0 | 1 | 1 | 0 | 0 | 0 | 0 | 0 | 0 | 1 | 0 | 0 | 0 | 0 | 0 | 0 | 0 |
| 19 | MYSORE | CHAMARAJANAGAR | 0 | 0 | 0 | 0 | 0 | 0 | 0 | 0 | 0 | 1 | 0 | 0 | 0 | 0 | 0 | 0 | 0 | 0 |
| | | **Division Total** | **0** | **0** | **1** | **2** | **1** | **0** | **0** | **0** | **2** | **2** | **3** | **5** | **2** | **0** | **0** | **0** | **6** | **1** |
| 20 | BELGAUM | BELGAUM | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 21 | BELGAUM | BAGALKOT | 0 | 0 | 0 | 0 | 0 | 0 | 1 | 0 | 1 | 1 | 2 | 0 | 1 | 0 | 0 | 0 | 0 | 0 |
| 22 | BELGAUM | BIJAPUR | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 23 | BELGAUM | GADAG | 0 | 0 | 0 | 0 | 0 | 0 | 0 | 0 | 1 | 0 | 0 | 0 | 0 | 0 | 0 | 0 | 1 | 0 |
| 24 | BELGAUM | DHARWAD | 0 | 0 | 0 | 0 | 0 | 0 | 0 | 0 | 0 | 0 | 1 | 0 | 1 | 0 | 0 | 0 | 0 | 0 |
| 25 | BELGAUM | UTTARKANNADA | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 26 | BELGAUM | HAVERI | 0 | 0 | 0 | 1 | 0 | 0 | 0 | 0 | 0 | 0 | 0 | 0 | 0 | 0 | 0 | 0 | 1 | 0 |
| 27 | BELGAUM | CHIKKODI | 0 | 0 | 0 | 0 | 0 | 0 | 0 | 0 | 0 | 0 | 0 | 1 | 0 | 0 | 0 | 0 | 0 | 0 |
| 28 | BELGAUM | SIRSI | 0 | 0 | 0 | 0 | 0 | 0 | 0 | 0 | 0 | 0 | 0 | 0 | 1 | 0 | 0 | 0 | 0 | 0 |
| | | **Division Total** | **1** | **0** | **0** | **1** | **0** | **0** | **1** | **0** | **2** | **1** | **3** | **1** | **3** | **0** | **0** | **0** | **2** | **0** |

| SL.NO. | DIVISION | DISTRICT | SPL - SECONDARY | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|
| | | | TERMINALLY ILL CASES | | PHISICALLY HANDICAPPED (> 40%) | | WIDOWS | | DEFENCE CASES | | HUSBAND AND WIFE BOTH IN GOVT | | HUSBAND OR WIFE IN GOVT | | OTHER CASES WOMEN | | OFFICE BEARER | | OTHER CASES MEN | |
| | | | WITHIN | OUT | WITHIN | OUT | WITHIN | OUT | WITHIN | OUT | WITHIN | OUT | WITHIN | OUT | WITHIN | OUT | WITHIN | OUT | WITHIN | OUT |
| 29 | GULBARGA | GULBARGA | 0 | 1 | 0 | 0 | 0 | 0 | 0 | 0 | 1 | 0 | 1 | 1 | 0 | 0 | 0 | 0 | 5 | 0 |
| 30 | GULBARGA | BIDAR | 0 | 0 | 0 | 0 | 0 | 0 | 0 | 0 | 0 | 0 | 1 | 0 | 0 | 0 | 0 | 0 | 0 | 1 |
| 31 | GULBARGA | RAICHUR | 0 | 0 | 0 | 2 | 0 | 0 | 0 | 0 | 0 | 1 | 1 | 0 | 0 | 0 | 0 | 0 | 5 | 0 |
| 32 | GULBARGA | KOPPAL | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 33 | GULBARGA | BELLARY | 0 | 0 | 0 | 0 | 0 | 1 | 0 | 0 | 0 | 1 | 0 | 0 | 0 | 0 | 0 | 0 | 0 | 0 |
| 34 | GULBARGA | YADGIRI | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 0 | 8 | 0 |
| | | **Division Total** | **0** | **1** | **0** | **2** | **0** | **1** | **0** | **0** | **1** | **2** | **3** | **1** | **0** | **0** | **0** | **0** | **18** | **1** |
| | | **State Total** | **2** | **1** | **1** | **5** | **1** | **1** | **1** | **0** | **8** | **6** | **11** | **16** | **12** | **0** | **0** | **0** | **37** | **2** |

# CADRE WISE DETAILS

## 1. ELGIBLE FOR COUNSELLING – REQUESRT

| | PRIMARY | | SECONDARY | | GROUP-B | | TOTAL |
|---|---|---|---|---|---|---|---|
| | WITHIN UNIT | OUT OF UNIT | WITHIN UNIT | OUT OF UNIT | WITHIN UNIT | OUT OF UNIT | |
| HM | 1889 | 238 | - | - | - | - | **2127** |
| NGHM | 160 | 32 | - | - | - | - | **192** |
| AM | 25501 | 9171 | 5374 | 2652 | - | - | **42698** |
| SPECIAL | 894 | 321 | 290 | 169 | - | - | **1674** |
| PHY.EDUCATION | - | - | 606 | 231 | - | - | **837** |
| GROUP B | - | - | - | - | 582 | 24 | **606** |
| GROUP B PHY EDN | - | - | - | - | 11 | 8 | **19** |
| GROUP B SICRAFT | - | - | - | - | 0 | 5 | **5** |
| **TOTAL** | **28444** | **9762** | **6270** | **3052** | **593** | **37** | **48158** |

## 2. TRANSFER EFFECTED- REQUEST

| | PRIMARY | | SECONDARY | | GROUP-B | | TOTAL |
|---|---|---|---|---|---|---|---|
| | WITHIN UNIT | OUT OF UNIT | WITHIN UNIT | OUT OF UNIT | WITHIN UNIT | OUT OF UNIT | |
| HM | 455 | 50 | - | - | - | - | **505** |
| NGHM | 45 | 7 | - | - | - | - | **52** |
| AM | 5855 | 1201 | 789 | 229 | - | - | **8074** |
| SPECIAL | 162 | 29 | 73 | 31 | - | - | **295** |
| PHY.EDUCATION | - | - | 83 | 22 | - | - | **105** |
| GROUP B | - | - | - | - | 255 | 16 | **271** |
| GROUP B PHY EDN | - | - | - | - | 3 | 1 | **4** |
| GROUP B SICRAFT | - | - | - | - | 0 | 0 | **0** |
| **TOTAL** | **6517** | **1287** | **945** | **282** | **258** | **17** | **9306** |

**TRANSFER EFFECTED DURING 2012 SECONDARY**

| Sl.No | Division | District | SECONDARY | | | | | |
|---|---|---|---|---|---|---|---|---|
| | | | WITHIN UNIT | | | OUT OF UNIT | | |
| | | | AM | PET | SPL | AM | PET | SPL |
| 1 | BANGALORE | CHITRADURGA | 7 | 3 | 2 | 3 | 0 | 0 |
| 2 | BANGALORE | DAVANAGERE | 23 | 2 | 6 | 6 | 0 | 2 |
| 3 | BANGALORE | SHIMOGA | 13 | 4 | 2 | 5 | 1 | 1 |
| 4 | BANGALORE | TUMKUR | 18 | 2 | 1 | 8 | 1 | 1 |
| 5 | BANGALORE | KOLAR | 32 | 5 | 0 | 13 | 1 | 2 |
| 6 | BANGALORE | BANGALORE SOUTH | 11 | 1 | 7 | 1 | 0 | 0 |
| 7 | BANGALORE | BANGALORE RURAL | 14 | 3 | 2 | 3 | 0 | 0 |
| 8 | BANGALORE | BANGALORE NORTH | 5 | 2 | 0 | 0 | 0 | 0 |
| 9 | BANGALORE | CHIKKABALLAPURA | 19 | 4 | 0 | 8 | 1 | 1 |
| 10 | BANGALORE | MADHUGIRI | 5 | 3 | 3 | 7 | 1 | 1 |
| 11 | BANGALORE | RAMANAGARA | 20 | 1 | 1 | 4 | 1 | 2 |
| | | **Division Total** | **167** | **30** | **24** | **58** | **6** | **10** |
| 12 | MYSORE | UDUPI | 7 | 0 | 1 | 3 | 0 | 1 |
| 13 | MYSORE | CHIKKAMANGALORE | 15 | 0 | 0 | 2 | 2 | 2 |
| 14 | MYSORE | MANDYA | 43 | 5 | 4 | 8 | 2 | 2 |
| 15 | MYSORE | HASSAN | 51 | 6 | 5 | 8 | 3 | 2 |
| 16 | MYSORE | DAKSHINA KANNADA | 54 | 10 | 3 | 8 | 1 | 1 |
| 17 | MYSORE | KODAGU | 6 | 0 | 0 | 1 | 0 | 0 |
| 18 | MYSORE | MYSORE | 57 | 3 | 2 | 12 | 1 | 1 |
| 19 | MYSORE | CHAMARAJANAGARA | 17 | 1 | 0 | 5 | 0 | 1 |
| | | **Division Total** | **250** | **25** | **15** | **47** | **9** | **10** |
| 20 | BELGAUM | BELGAUM | 22 | 2 | 0 | 9 | 0 | 0 |
| 21 | BELGAUM | BAGALKOT | 13 | 2 | 5 | 6 | 0 | 1 |
| 22 | BELGAUM | BIJAPUR | 27 | 3 | 0 | 8 | 0 | 0 |
| 23 | BELGAUM | GADAG | 7 | 0 | 2 | 4 | 0 | 0 |
| 24 | BELGAUM | DHARWAD | 21 | 0 | 2 | 6 | 0 | 0 |
| 25 | BELGAUM | UTTARA KANNADA | 3 | 0 | 1 | 1 | 0 | 0 |
| 26 | BELGAUM | HAVERI | 35 | 3 | 1 | 11 | 2 | 1 |
| 27 | BELGAUM | CHIKKODI | 33 | 0 | 0 | 9 | 0 | 1 |
| 28 | BELGAUM | SIRSI | 7 | 2 | 1 | 3 | 1 | 0 |
| | | **Division Total** | **168** | **12** | **12** | **57** | **3** | **3** |
| 29 | GULBARGA | GULBARGA | 53 | 5 | 7 | 16 | 1 | 2 |
| 30 | GULBARGA | BIDAR | 28 | 0 | 1 | 13 | 0 | 1 |
| 31 | GULBARGA | RAICHUR | 36 | 2 | 6 | 10 | 2 | 3 |
| 32 | GULBARGA | KOPPAL | 29 | 3 | 0 | 9 | 0 | 0 |
| 33 | GULBARGA | BELLARY | 33 | 5 | 0 | 13 | 1 | 2 |
| 34 | GULBARGA | YADAGIRI | 25 | 1 | 8 | 6 | 0 | 0 |
| | | **Division Total** | **204** | **16** | **22** | **67** | **4** | **8** |
| | | **State Total** | **789** | **83** | **73** | **229** | **22** | **31** |

**TRANDFER EFFECTED DURING 2012 PRIMARY**

| Sl.No | Division | District | PRIMARY | | | | | | | |
|---|---|---|---|---|---|---|---|---|---|---|
| | | | WITHIN UNIT | | | | OUT OF UNIT | | | |
| | | | HM | NGHM | AM | SPL | HM | NGHM | AM | SPL |
| 1 | BANGALORE | CHITRADURGA | 24 | 3 | 143 | 5 | 4 | 0 | 26 | 1 |
| 2 | BANGALORE | DAVANAGERE | 21 | 0 | 206 | 10 | 0 | 0 | 15 | 0 |
| 3 | BANGALORE | SHIMOGA | 15 | 3 | 220 | 9 | 6 | 0 | 23 | 2 |
| 4 | BANGALORE | TUMKUR | 12 | 3 | 170 | 3 | 1 | 0 | 22 | 1 |
| 5 | BANGALORE | KOLAR | 12 | 0 | 209 | 1 | 1 | 0 | 14 | 1 |
| 6 | BANGALORE | BANGALORE SOUTH | 4 | 1 | 130 | 6 | 1 | 0 | 7 | 1 |
| 7 | BANGALORE | BANGALORE RURAL | 5 | 0 | 114 | 1 | 5 | 0 | 47 | 1 |
| 8 | BANGALORE | BANGALORE NORTH | 1 | 1 | 68 | 1 | 0 | 0 | 2 | 0 |
| 9 | BANGALORE | CHIKKABALLAPURA | 7 | 2 | 195 | 6 | 0 | 0 | 33 | 2 |
| 10 | BANGALORE | MADHUGIRI | 7 | 0 | 148 | 5 | 2 | 0 | 25 | 1 |
| 11 | BANGALORE | RAMANAGARA | 13 | 2 | 222 | 0 | 3 | 0 | 56 | 1 |
| | | **Division Total** | **121** | **15** | **1825** | **47** | **23** | **0** | **270** | **11** |
| 12 | MYSORE | UDUPI | 6 | 3 | 59 | 2 | 0 | 0 | 7 | 0 |
| 13 | MYSORE | CHIKKAMANGALORE | 11 | 3 | 56 | 1 | 1 | 2 | 24 | 1 |
| 14 | MYSORE | MANDYA | 8 | 2 | 212 | 0 | 0 | 0 | 21 | 1 |
| 15 | MYSORE | HASSAN | 8 | 3 | 193 | 0 | 4 | 1 | 27 | 0 |
| 16 | MYSORE | DAKSHINA KANNADA | 10 | 2 | 152 | 1 | 1 | 0 | 21 | 1 |
| 17 | MYSORE | KODAGU | 4 | 2 | 69 | 3 | 1 | 0 | 8 | 0 |
| 18 | MYSORE | MYSORE | 28 | 2 | 212 | 5 | 0 | 1 | 34 | 0 |
| 19 | MYSORE | CHAMARAJANAGARA | 5 | 0 | 116 | 2 | 4 | 1 | 27 | 0 |
| | | **Division Total** | **80** | **17** | **1069** | **14** | **11** | **5** | **169** | **3** |
| 20 | BELGAUM | BELGAUM | 13 | 0 | 173 | 7 | 0 | 0 | 35 | 0 |
| 21 | BELGAUM | BAGALKOT | 30 | 0 | 176 | 11 | 2 | 0 | 46 | 0 |

| | | | | | | | | | | |
|---|---|---|---|---|---|---|---|---|---|---|
| 22 | BELGAUM | BIJAPUR | 17 | 0 | 236 | 5 | 0 | 0 | 16 | 0 |
| 23 | BELGAUM | GADAG | 11 | 1 | 145 | 6 | 0 | 0 | 22 | 0 |
| 24 | BELGAUM | DHARWAD | 19 | 0 | 96 | 5 | 0 | 0 | 9 | 1 |
| 25 | BELGAUM | UTTARA KANNADA | 15 | 0 | 78 | 0 | 0 | 0 | 10 | 0 |
| 26 | BELGAUM | HAVERI | 20 | 1 | 188 | 4 | 3 | 0 | 53 | 2 |
| 27 | BELGAUM | CHIKKODI | 12 | 1 | 301 | 17 | 2 | 1 | 102 | 4 |
| 28 | BELGAUM | SIRSI | 13 | 1 | 138 | 4 | 3 | 0 | 40 | 1 |
| | | **Division Total** | **150** | **4** | **1531** | **59** | **10** | **1** | **333** | **8** |
| 29 | GULBARGA | GULBARGA | 19 | 2 | 277 | 7 | 1 | 1 | 75 | 2 |
| 30 | GULBARGA | BIDAR | 16 | 3 | 251 | 11 | 0 | 0 | 32 | 2 |
| 31 | GULBARGA | RAICHUR | 33 | 2 | 323 | 5 | 4 | 0 | 122 | 1 |
| 32 | GULBARGA | KOPPAL | 19 | 1 | 195 | 9 | 0 | 0 | 63 | 1 |
| 33 | GULBARGA | BELLARY | 14 | 1 | 205 | 7 | 1 | 0 | 65 | 1 |
| 34 | GULBARGA | YADAGIRI | 3 | 0 | 179 | 3 | 0 | 0 | 72 | 0 |
| | | **Division Total** | **104** | **9** | **1430** | **42** | **6** | **1** | **429** | **7** |
| | | **State Total** | **455** | **45** | **5855** | **162** | **50** | **7** | **1201** | **29** |

**REASON WISE AND CADRE WISE TRANSFER EFFECTED – SECONDARY**

| SL.NO | REASON | CADRE TYPE- SECONDARY | | | | | | | |
|---|---|---|---|---|---|---|---|---|---|
| | | AM | | PET | | SPL | | TOTAL | |
| | | WITHIN | OUT | WITHIN | OUT | WITHIN | OUT | WITHIN | OUT |
| 1 | TERMINALLY ILL CASES | 12 | 35 | 1 | 0 | 2 | 1 | 15 | 36 |
| 2 | PHISICALLY HANDICAPPED (>40%) | 13 | 17 | 0 | 0 | 1 | 5 | 14 | 22 |
| 3 | WIDOWS | 6 | 4 | 0 | 1 | 1 | 1 | 7 | 6 |
| 4 | DEFENCE CASES | 5 | 1 | 0 | 0 | 1 | 0 | 6 | 1 |
| 5 | HUSBAND AND WIFE BOTH IN GOVERNMENT | 159 | 126 | 21 | 8 | 8 | 6 | 188 | 140 |
| 6 | HUSBAND OR WIFE IN GOVERNMENT | 212 | 44 | 28 | 9 | 11 | 16 | 251 | 69 |
| 7 | OTHER CASES WOMEN | 74 | 1 | 3 | 0 | 12 | 0 | 89 | 1 |
| 8 | OFFICE BEARER | 4 | 0 | 0 | 0 | 0 | 0 | 4 | 0 |
| 9 | OTHER CASES MEN | 304 | 1 | 30 | 4 | 37 | 2 | 371 | 7 |
| | **STATE TOTAL** | **789** | **229** | **83** | **22** | **73** | **31** | **945** | **282** |

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನಮಗೆ ಉತ್ತರವನ್ನು ಕೊಡುವಾಗ ಮಾನ್ಯ ನಿರ್ದೇಶಕರು ಕೊಟ್ಟಿರುವಂತಹ ಉತ್ತರವನ್ನು ಕೊಟ್ಟಿದ್ದಾರೆ. ಅವರು ಉತ್ತರವನ್ನು ಕೊಡುವಾಗ 3ನೇ ಪ್ರಶ್ನೆಗೆ ಏನು ಹೇಳುತ್ತಾರೆಂದರೆ ಈಗ ಇರುವಂತಹ ವರ್ಗಾವಣೆ ಮಾನದಂಡದಂತೆ ಕೆಲವೇ ಕೆಲವು ಶಿಕ್ಷಕರಿಗೆ ಪ್ರಯೋಜನವಾಗುತ್ತಿದ್ದು, ಮಾನದಂಡವನ್ನು ಬದಲಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ಕೇಳುವಾಗ ಸರ್ಕಾರದ ಹಂತದಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ ಎಂದು ಹೇಳಲಾಗಿದೆ. ತೊಂದರೆಗಳಾಗಿದೆ ಎಂದು ಅವರಿಗೆ ಗೊತ್ತಾಗಿದೆ. ಆದರೆ, ಮಂತ್ರಿಗಳು ಉತ್ತರವನ್ನು ಕೊಡಬೇಕಾದರೆ, ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಅಂದರೆ ಎಲ್ಲೋ ಇಲಾಖೆಯಲ್ಲಿ ಮಾನಸಿಕತೆ ಇದ್ದರೂ ಕೂಡ ಇದನ್ನು ಪರಿಗಣಿಸುತ್ತಿಲ್ಲವೆನ್ನುವ ಒಂದು ಭಾವನೆ ಬರುತ್ತಿದೆ. ಏತಕ್ಕೆ ಈ ಮಾತನ್ನು ಹೇಳತ್ತಿದ್ದೇನೆಂದರೆ primary school ವಿಭಾಗದಲ್ಲಿ 2,02,000 ದಷ್ಟು ಶಿಕ್ಷಕರುಗಳಿದ್ದಾರೆ. ಅದರಲ್ಲಿ ಎಷ್ಟು ಜನರಿಗೆ ವರ್ಗಾವಣೆಯಾಯಿತು ಎಂದು ಕೇಳಿದರೆ ಒಟ್ಟು 7804 ಜನರಿಗೆ ಆಗಿದೆ ಎಂದು ಹೇಳಿದ್ದಾರೆ. ಅದರಲ್ಲಿ 4940 ಜನ ವಿಶೇಷ ಪ್ರಕರಣದಡಿಯಲ್ಲಿ ಆಗಿದೆ ಎಂದು ಹೇಳಿದ್ದಾರೆ. ದಂಪತಿ ಪ್ರಕರಣ, ಅಂಗವಿಕಲರು, ಈ ಎಲ್ಲಾ ಪ್ರಕರಣಗಳು ಬಂದವು. ಹೀಗಾಗಿ, ಉಳಿದಿರುವವರು ಕೇವಲ ಕೆಲವು ಜನರಿಗೆ ಮಾತ್ರ ಅವಕಾಶ ಸಿಕ್ಕಿದೆ.

ಮಾನ್ಯ ಮಂತ್ರಿಗಳಲ್ಲಿ ನನ್ನ ವಿನಂತಿ ಏನೆಂದರೆ, ತಾವು ಪಾರದರ್ಶಕವಾಗಿರುವಂತಹ ಒಂದು ವರ್ಗಾವಣೆ ನೀತಿಯನ್ನು ತೆಗೆದುಕೊಂಡು ಬಂದಿದ್ದೀರಿ. ಇದರಿಂದ ತುಂಬಾ ಅನುಕೂಲಗಳಾಗಿವೆ. ದಂದೆ ನಡೆಯುವುದು ನಿಂತು ಹೋಗಿದೆ. ಆದರೆ, ಶಿಕ್ಷಕರುಗಳಿಗೆ ಅನುಕೂಲವಾಗುತ್ತಿಲ್ಲ. ನಾನು ಪ್ರಾಥಮಿಕ ಶಾಲೆಯ ಮಾಹಿತಿಯನ್ನು ಸಹ ಸಂಗ್ರಹ ಮಾಡಿದ್ದೆನು, high school ಮಾಹಿತಿಯನ್ನು ಸಹ ಸಂಗ್ರಹ ಮಾಡಿದ್ದೆನು. ಸರ್ಕಾರದ ಲೆಕ್ಕಚಾರದಲ್ಲಿ ಇದು 5% ಸಹ ಆಗುತ್ತಿಲ್ಲ. ನನ್ನ ಮೊದಲನೆ ಪ್ರಶ್ನೆ ಇರುವಂತಹದ್ದು ಏನೆಂದರೆ, ತುಂಬಾ ದೊಡ್ಡ ಸಂಖ್ಯೆಯಲ್ಲಿ

ಶಿಕ್ಷಕರುಗಳಿರುವುದರಿಂದ ಅವರಿಗೆ ಅನುಕೂಲ ಮಾಡಿಕೊಡಲಿಕ್ಕೆ ತಾವು ಈ ಮಾನದಂಡವನ್ನು ಬದಲಿಸುವ ಬಗ್ಗೆ serious ಆಗಿ consult ಮಾಡಬೇಕೆಂದು ವಿನಂತಿ.

ಮಾನ್ಯ ಸಭಾಪತಿಯವರೆ, ಇನ್ನು ಎರಡನೆಯ ಸಂಗತಿ ಏನೆಂದರೆ, ಪತಿ-ಪತ್ನಿ ಪ್ರಕರಣ ಎಂದು ಎನು ಹೇಳಿದಿರಿ, ಅದು ಗಂಡ ಸರ್ಕಾರಿ ನೌಕರ, ಹೆಂಡತಿ ಸರ್ಕಾರಿ ನೌಕರರಿದ್ದು, ಅವರಿಗೆ ಮಾತ್ರವೇ ಈ ಪ್ರಕರಣ ಆಗಿದೆಯೇ? ಪಾಪ, ಗ್ರಾಮಾಂತರದಲ್ಲಿ ಒಬ್ಬ ರೈತನಿದ್ದು, ಅವನ ಹೆಂಡತಿ ಟೀಚರ್ ಇರುತ್ತಾರೆ. ಅವರಿಬ್ಬರು ಒಟ್ಟಾಗಬೇಕೆನ್ನುವ ಕಲ್ಪನೆ ನಮಗೆ ಇಲ್ಲ. ಪತಿ-ಪತ್ನಿ ಪ್ರಕರಣ ಎಂದು ಹೇಳಿದರೆ ಆದ್ಯತೆ ಮೇರೆಗೆ ಸರ್ಕಾರಿ ಗಂಡ, ಸರ್ಕಾರಿ ಹೆಂಡತಿ ಆದರೆ, ಅವಕಾಶ ಇದೆ. ಇಲ್ಲದಿದ್ದರೆ, ಗಂಡ ಸರ್ಕಾರಿ ಅಥವಾ ಹೆಂಡತಿ ಸರ್ಕಾರಿ ನೌಕರರಾಗಿದ್ದರೆ ಅವರಿಗೆ ಅವಕಾಶ ಇದೆ. ಆದರೆ, ಉಳಿದವರು ಯಾರ್ಯಾದರು ಹೇಳಿದರೆ ಅವರಿಗೆ ಅವಕಾಶವಿಲ್ಲ. ಎಲ್ಲೋ ಒಂದು ಕಡೆ ನೀವು ದಂಪತಿಗಳನ್ನು ಒಟ್ಟು ಮಾಡಬೇಕೆಂದಿದ್ದರೆ ಅದನ್ನು ಸಮಾನವಾಗಿ ಎಲ್ಲರಿಗೂ ಅನ್ವಯವಾಗುವಂತೆ ಮಾಡಬೇಕು. ಈ ವಿಶೇಷ ಆದ್ಯತೆ ಅಡಿಯಲ್ಲಿ ಮಾಡಿಕೊಡುತ್ತೀರಿ. ಅವರಿಗೆ ಸರ್ಕಾರದ್ದು ಬೇರೆ ಕೆಲಸ ಇದೆ. ಆದರೆ, ಸರ್ಕಾರಿ ಗಂಡ, ಸರ್ಕಾರಿ ಹೆಂಡತಿ ಎನ್ನುವಂತಲ್ಲ. ನಿಗಮ-ಮಂಡಳಿಗಳಲ್ಲಿ ಹೆಂಡತಿಯಾಗಲಿ ಅಥವಾ ಗಂಡನಾಗಲಿ ಕೆಲಸ ಮಾಡುತ್ತಿದ್ದಾರೆ, ಈ ಪ್ರಕರಣ ಅನ್ವಯಿಸುವುದಿಲ್ಲ. ಯಾರು ಸರ್ಕಾರಿ ಉದ್ಯೋಗದಲ್ಲಿದ್ದಾರೆ, ಅವರಿಗೆ ಮಾತ್ರ ಇಲ್ಲಿ ಆದ್ಯತೆ. ಹೀಗಾಗಿ, ನನ್ನ ವಿನಂತಿ ಏನೆಂದರೆ, ಈ ದಂಪತಿ ಪ್ರಕರಣ ಎಂದು ಹೇಳುವಾಗ ಎಲ್ಲಾದರೂ ಗಂಡ ಮತ್ತು ಹೆಂಡತಿ ದೂರ-ದೂರದಲ್ಲಿದ್ದರೆ ಅವರಿಗೆ ಅವಕಾಶ ಕೊಡಬೇಕನ್ನುವುದು ಒಂದು ವಿಚಾರ.

ಎರಡನೆಯದಾಗಿ, ಈ ಮಾನದಂಡವನ್ನು ಬದಲಿಸದಿದ್ದರೆ, ಶೇಕಡವಾರು ಜಾಸ್ತಿ ಮಾಡದಿದ್ದರೆ ಶಿಕ್ಷಕರುಗಳಿಗೆ ತೊಂದರೆಯಾಗುತ್ತದೆ. ಈ ವಿಚಾರದಲ್ಲಿ ಇನ್ನೊಂದು ಸಣ್ಣ ಉದಾಹರಣೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ಅವಕಾಶ ಜಾಸ್ತಿ ಇಲ್ಲ. ಇದರಲ್ಲಿ ಎ, ಬಿ, ಮತ್ತು ಸಿ ಎಂದು ವಲಯಗಳನ್ನು

ಮಾಡಿದ್ದಾರೆ. ಯಾರೋ ಒಬ್ಬರು ಎಷ್ಟೋ ವರ್ಷಗಳಿಂದ ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಈ ಕಡೆ ಬರಲಿಕ್ಕೆ ಅವಕಾಶವಿಲ್ಲ. ಜೇಷ್ಠತೆಯನ್ನು ಮಾಡಿದಾಗ, ಯಾರಿಗೆ ಜೇಷ್ಠತೆ ಇದೆ, ಅವನು ಮೊದಲಿಗೆ 'ಸಿ' ವಲಯಕ್ಕೆ ಹೋಗಬೇಕು. ಈ ರೀತಿ ಹೇಳಿದಾಗ ಆದ್ಯತೆ ಇದ್ದರೂ ಕೂಡ ಅವರಿಗೆ ಗ್ರಾಮಾಂತರದಿಂದ ನಗರಕ್ಕೆ ಬರಲಿಕ್ಕೆ ಅವಕಾಶವೇ ಇಲ್ಲ. ಬಡ್ತಿಯಾಗುತ್ತದೆ, ಅವರು ತಮ್ಮ ಸೇವೆಯನ್ನು ಪೂರ್ಣವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಮಾಡಿರುತ್ತಾರೆ. ಬಡ್ತಿಯಾದ ನಂತರ ಗ್ರಾಮಾಂತರದಿಂದ ನಗರಕ್ಕೆ ಬರಲಿಕ್ಕೆ ಅವರಿಗೆ ಅವಕಾಶವಿಲ್ಲ. ಆದ್ದರಿಂದ, ಈ ಒಟ್ಟು ವರ್ಗಾವಣೆ ನೀತಿಯಲ್ಲಿ ಬಹಳ ಕುಂದು-ಕೊರತೆಗಳಿವೆ. ಒಂದು ಅನುಪಾತವನ್ನು ಹೆಚ್ಚು ಮಾಡುವಂತಹದ್ದು ಮತ್ತು ಗ್ರಾಮಾಂತರದಲ್ಲಿರುವಂತಹ ಶಿಕ್ಷಕರುಗಳಿಗೆ ನಗರಗಳಿಗೆ ಬರಲಿಕ್ಕೆ ಅವಕಾಶವನ್ನು ಮಾಡಿಕೊಡುವುದು, ಮತ್ತು ಇದು ವರ್ಗಾವಣೆಯ ನೀತಿಯಾಗಿರುವುದಿಲ್ಲ, ವರ್ಗಾವಣೆಯ ಮಾನದಂಡವಾಗಿದೆ. ಯಾರು ನಿರಂತರವಾಗಿ ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರು ಗ್ರಾಮಾಂತರದಲ್ಲಿಯೇ ಇರಬೇಕು. 20-25 ವರ್ಷಗಳಿಂದ ನಗರ ಪ್ರದೇಶಗಳಲ್ಲಿ ಇರುವವರು ಗ್ರಾಮಾಂತರ ಪ್ರದೇಶಗಳಿಗೆ ಹೋಗಲಿಕ್ಕಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಕರ ಕೊರತೆ ಇದೆ. ಹೀಗಾಗಿ, ವರ್ಗಾವಣೆಯ ನೀತಿಯನ್ನು ತಾವು ಘೋಷಿಸಬೇಕೇ ಹೊರತು ವರ್ಗಾವಣೆಯ ಮಾನದಂಡಗಳನ್ನಲ್ಲ ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ವರ್ಗಾವಣೆಯ ನೀತಿಯ ವಿಷಯದಲ್ಲಿ ಸಾಕಷ್ಟು ತಮ್ಮ ಸಲಹೆ-ಸೂಚನೆಗಳನ್ನು ಕೊಟ್ಟಿದ್ದಾರೆ. ಅದೆಲ್ಲವನ್ನೂ ನಾನು ಪರಿಶೀಲನೆ ಮಾಡುತ್ತೇನೆ. ಆದರೆ, ನಮ್ಮ ಕರ್ನಾಟಕ ರಾಜ್ಯದ ಈ ಶಿಕ್ಷಕರ ವರ್ಗಾವಣೆ ಕಾಯಿದೆ ಏನಿದೆ, ಇದು ಇಡೀ ದೇಶದಲ್ಲಿಯೇ ಒಂದು ಮಾದರಿಯಾದಂತಹ ಕಾಯಿದೆಯಾಗಿದೆ. ಈ ಕೌನ್ಸಿಲಿಂಗ್ ಪದ್ಧತಿ ಇಡೀ ದೇಶದಲ್ಲಿಯೇ ಮಾದರಿಯಾಗಿದೆ. ನಾವು ದೇಶ ಮಟ್ಟದ ಶಿಕ್ಷಣ ಸಚಿವರುಗಳು ಸೇರಿದಾಗ ಕರ್ನಾಟಕದ ಈ ಕಾಯಿದೆ ಬಗ್ಗೆ

ಸಾಕಷ್ಟು ಚರ್ಚೆಯಾಗಿದೆ. ಮತ್ತು ಇದರ ಪ್ರತಿಯನ್ನು ಸಾಕಷ್ಟು ರಾಜ್ಯಗಳು ತರಿಸಿಕೊಂಡಿವೆ. ಇದು ಅತ್ಯಂತ ಶ್ಲಾಘನೀಯವಾದ ಕಾಯಿದೆ ಎಂದು ಒಪ್ಪಿಕೊಂಡಿದೆ. ಇದನ್ನು ಆಧರಿಸಿ, ಬೇರೆ ಬೇರೆ ಇಲಾಖೆಗಳು ಸಹ ಈ ರೀತಿಯಲ್ಲಿ ಮಾಡುವುದಕ್ಕೆ ಮುಂದಾಗಿವೆ. ಶಿಕ್ಷಣ ಇಲಾಖೆ ಒಂದು ಆದ್ಯತೆಯ, ಪ್ರಾಮುಖ್ಯತೆಯುಳ್ಳ ಇಲಾಖೆಯಾಗಿದೆ. ನಮ್ಮ ಮಕ್ಕಳಿಗೆ ಎಲ್ಲಾ ಕಡೆಯಲ್ಲೂ ನಮ್ಮ ಶಿಕ್ಷಕರು ಶಿಕ್ಷಣವನ್ನು ಕೊಡಬೇಕು. ಸರ್ಕಾರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತದೆ. ಏಕೆಂದರೆ, ನಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕೆಂದು ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತದೆ. ಈ ಕಾಯಿದೆಯನ್ನು ಮಾಡಿರುವಂತಹ ಹಿನ್ನೆಲೆಯಲ್ಲಿ ಶ್ರೀಯುತ ಬಸವರಾಜ ಹೊರಟ್ಟಿಯುವರು ಶಿಕ್ಷಣ ಸಚಿವರಾಗಿದ್ದಾಗ ಈ ಕಾಯಿದೆ ಏನು ಸ್ವೀಕಾರವಾಯಿತು, ಕಾಯಿದೆಯ ಸದುದ್ದೇಶದ ಬಗ್ಗೆ ನಾನು ಶ್ರೀಯುತ ಹೊರಟ್ಟಿಯವರನ್ನು ನಾನು ಅಭಿನಂದಿಸುತ್ತೇನೆ. ಕಾಯಿದೆಯ ಸದುದ್ದೇಶ ಶಿಕ್ಷಕರು ಮತ್ತು ಮಕ್ಕಳ ಅನುಪಾತ ಎಲ್ಲಾ ಕಡೆಯಲ್ಲೂ ಸರಿಯಾದ ರೀತಿಯಲ್ಲಿ ಕಾಪಾಡಿಕೊಳ್ಳಬೇಕೆನ್ನುವುದಾಗಿದೆ. ಈ ರೀತಿಯ ಕಾಯಿದೆಯನ್ನು ಮಾಡಿಲ್ಲದಿದ್ದರೆ ಏನಾಗುತ್ತಿತ್ತು ಎನ್ನುವುದನ್ನು ಎಲ್ಲರೂ ಯೋಚನೆ ಮಾಡಬೇಕಾಗಿದೆ. ನಾವೆಲ್ಲರೂ ಹಿಂದಿನಿಂದಲೂ ಅನುಭವಿಸಿದ್ದೇವೆ. ಈ ಕಾಯಿದೆ ಬಂದಿರುವುದರಿಂದ, ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಅನುಪಾತವನ್ನು ನಾವು ಕಾಪಾಡಿಕೊಳ್ಳಲಿಕ್ಕೆ ಸಾಧ್ಯವಾಗುತ್ತಿದೆ. ಅದರಲ್ಲೂ ಅನೇಕ ಕಷ್ಟಗಳನ್ನು ಅನುಭವಿಸಿದ್ದೇವೆ. ಅದನ್ನು ಸರಿಪಡಿಸುವಂತಹ ಅಗತ್ಯ ಇದೆ. ಆದರೆ, ಈ ಅನುಪಾತದಲ್ಲಿ ಬಹಳ ಏರು-ಪೇರುಗಳಾಗುತ್ತಿವೆ. ಉದಾಹರಣೆಗೆ ಹೇಳುವುದಾದರೆ, ನಾನು ಊರುಗಳ ಹೆಸರುಗಳನ್ನು ಹೇಳುವುದಿಲ್ಲ. ಎಲ್ಲೆಲ್ಲಿ ದೊಡ್ಡ ದೊಡ್ಡ ಶಹರುಗಳಿವೆಯೋ ಆ ಶಹರುಗಳಲ್ಲಿ ಸಾವಿರಾರು excess ಇರುತ್ತದೆ. ನಮ್ಮ ಮಲೆನಾಡಿನ ಅಥವಾ ಬಯಲು ಸೀಮೆಯ ಅಥವಾ ಹೈದ್ರಾಬಾದ್-ಕರ್ನಾಟಕದಂತಹ, ಎಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ಹಿಂದುಳಿದ ತಾಲ್ಲೂಕೂಗಳು, ಜಿಲ್ಲೆಗಳು ಹಿಂದುಳಿದಿವೆ ಎಂದು ನಂಜುಂಡಪ್ಪ ವರದಿಯಲ್ಲಿ ಏನು ಹೇಳಲಾಗುತ್ತಿದೆ, ಅಲ್ಲಿ ಶಿಕ್ಷಕರುಗಳ ಕೊರತೆಯಿಂದ

ಈಗಲೂ ಸಮಸ್ಯೆಯನ್ನು ಅನುಭವಿಸುತ್ತಿದ್ದೇವೆ. ನಾವು 1%, 5% ಮಾಡಿದರೂ ಸಹ ಆ ಜಿಲ್ಲೆಯಲ್ಲಿ ಎಲ್ಲಿ 1%, 5% ಆಗುತ್ತದೆ ಎಂದು ಕೇಳಿದರೆ ಆ ಜಿಲ್ಲೆಯ ಅತ್ಯಂತ ಹಿಂದುಳಿದ ತಾಲ್ಲೂಕೂಗಳಲ್ಲಿ ಆಗುತ್ತದೆ. ಒಂದು division ನಲ್ಲಿ ಆಗಬಹುದು ಎಂದರೆ ಆ division ನಲ್ಲಿರುವಂತಹ ಹಿಂದುಳಿದ ಜಿಲ್ಲೆಯಲ್ಲಿ ಖಾಲಿಯಾಗುತ್ತಾರೆ. ಅಲ್ಲಿಯೇ ನಮಗೆ ಆದ್ಯತೆ ಮೇಲೆ ಶಿಕ್ಷಕರುಗಳು ಬೇಕಾಗುತ್ತದೆ. ಅಲ್ಲಿಯೇ ಅವರು ಇರಬೇಕಾದಂತಹರು. ಇಷ್ಟು ಮಾಡಿದರೂ ಸಹ ನಮ್ಮ ಶಿಕ್ಷಕರುಗಳು ತಮ್ಮ ಊರಿನ ಹತ್ತಿರ ಬರುವುದಕ್ಕೆ ರಾಜಕೀಯ ಪ್ರಭಾವ ಬಳಸಿ ಬರುವುದಕ್ಕೆ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇದನ್ನು ಬದಲಾವಣೆ ಮಾಡಬೇಕೆಂದು ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರಿಗೂ ಅಥವಾ ನಮ್ಮ ಎಲ್ಲಾ ಸದಸ್ಯರಿಗೂ ಏತಕ್ಕೆ ಒತ್ತಡ ಇದೆ ಎಂದರೆ ಅವರುಗಳು ತಮ್ಮ ಊರಿನ ಹತ್ತಿರ ಬರಲಿಕ್ಕೆ ಅವರಿಗೆ ಆಗಿಲ್ಲವೆಂದು ಅವರಿಂದ ಒತ್ತಡಗಳು ಬರುತ್ತವೆ. ಹೀಗಾಗಿ, ಒತ್ತಡಗಳಿವೆ. ಆದರೆ, ಸರ್ಕಾರದ ಜವಾಬ್ದಾರಿ ನಮ್ಮ ಶಿಕ್ಷಕರುಗಳು ನಮ್ಮ ವಿದ್ಯಾರ್ಥಿಗಳಿಗೆ ಪಾಠ ಮಾಡಬೇಕು, ಅದಕ್ಕೆ ನಾವು ಸಂಬಳವನ್ನು ಕೊಡುತ್ತೇವೆ. ನಮ್ಮ ವಿದ್ಯಾರ್ಥಿಗಳಿಗೆ ಪಾಠ ಮಾಡಬೇಕಾದ್ದು ಅಗತ್ಯ ಇದೆ. ಆದರೆ, ಮಾನವೀಯತೆಯ ಕಾರಣಕ್ಕೋಸ್ಕರವಾಗಿ ಅವರುಗಳಿಗೆ ವರ್ಗಾವಣೆಗೆ ಅವಕಾಶವಿದೆ. ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಆದಾಗ್ಯೂ ನಾನು ಹೇಳಬಾರದು. ಆದರೆ, ಉಲ್ಲೇಖಿಸುವುದಕ್ಕೆ ಬಯಸುತ್ತೇನೆ. ನನ್ನದೇನೂ ತಪ್ಪಿಲ್ಲ. ಈ ಪತಿ–ಪತ್ನಿ ಪ್ರಕರಣದಲ್ಲೂ ಸರ್ಕಾರದ ಎಲ್ಲಾ ಇಲಾಖೆಗಳಲ್ಲೂ ಅಂದರೆ ಸರ್ಕಾರಿ ಉದ್ಯೋಗದಲ್ಲಿ ಗಂಡ ಇದ್ದರೆ, ಸರ್ಕಾರಿ ಉದ್ಯೋಗದಲ್ಲಿ ಹೆಂಡತಿ ಇದ್ದರೆ ಮಾತ್ರ ಅವಕಾಶವಿದೆ. ನಮ್ಮ ಇಲಾಖೆಯಲ್ಲಿ ಈ ರೀತಿಯಲ್ಲಿ ಎಲ್ಲಿ ಪತ್ನಿ ಇರಲಿ, ಎಲ್ಲಿ ಪತಿ ಇರಲಿ, ಯಾವುದಿದ್ದರೂ ಮಾಡಬೇಕೆನ್ನುವ ಸಲಹೆ ಬಂದಿದೆ. ಆದರೆ, ಈ ರೀತಿಯಲ್ಲಿದೆ. ಆರೋಗ್ಯದ ಕಾರಣದಿಂದ ಸಾವಿರಾರೂ ಫೋರ್ಜರಿ ದಾಖಲೆಗಳನ್ನು ಕೊಟ್ಟು, ಆರೋಗ್ಯದ ಕಾರಣದಿಂದ ವರ್ಗಾವಣೆ ಮಾಡಿಕೊಳ್ಳುವುದಕ್ಕೆ ನೋಡುತ್ತಿದ್ದಾರೆ. ಈ ಎಲ್ಲಾ ಹಿನ್ನೆಲೆಯಲ್ಲಿ ಶಿಕ್ಷಕರಿಗೂ ಮಾನವೀಯತೆಯ ಕಾರಣದಿಂದ ಅನುಕೂಲವಾಗಬೇಕು. ಆದರೆ, ನಮ್ಮ

ಮಕ್ಕಳಿಗೂ ಸಹ ಶಿಕ್ಷಣ ಸಿಗಬೇಕು. ಅದು ನಮ್ಮ ಅದ್ಯತೆ ಆಗಬೇಕು. ಎಲ್ಲಿಯೂ ತಾರತಾಮ್ಯವಾಗಬಾರದು. ಇಡಿ ರಾಜ್ಯದಲ್ಲಿ ಸಮಾನ ಅನುಪಾತ ಕಾಪಾಡಿಕೊಳ್ಳುವಲ್ಲಿ ಅನುಕೂಲವಾಗಬೇಕು. ಈ ಕಾಯಿದೆ ಒಳ್ಳೆಯದು ಇದೆ. ಅಲ್ಲಿ ಸಲಹೆ ಸೂಚನೆಗಳು ಬಂದಿವೆ. ಅದನ್ನು ಅಗತ್ಯವಾಗಿ ಪರಿಶೀಲಿಸಿ, ತಿದ್ದುಪಡಿಗೆ ನಾವು ಪ್ರಯತ್ನ ಮಾಡುತ್ತೇವೆ.

**ಶಿಕ್ಷಕರು ಹಾಗೂ ಉಪನ್ಯಾಸಕರಿಗೆ ವಿಶೇಷ ಭತ್ಯೆ ನೀಡುವ ಬಗ್ಗೆ**

**682; ಶ್ರೀ ವೈ.ಎ.ನಾರಾಯಣಸ್ವಾಮಿ [ಶಿಕ್ಷಕರ ಕ್ಷೇತ್ರ]**

ಅ) ಕರ್ನಾಟಕ ರಾಜ್ಯದಲ್ಲಿ ಪ್ರಾಥಮಿಕ/ಪ್ರೌಢ ಶಾಲೆಗಳ ಶಿಕ್ಷಕರಿಗೆ ಹಾಗೂ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ ನೀಡುತ್ತಿರುವ ವಿಶೇಷ ಭತ್ಯೆ ಎಷ್ಟು;

ಆ) ಇದರಿಂದ ಸರ್ಕಾರಕ್ಕೆ ಆಗಿರುವ ಹೊರೆಯೆಷ್ಟು;

ಇ) ಈ ವಿಶೇಷ ಬಡ್ತಿಯನ್ನು ಪ್ರೌಢ ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ನೀಡದಿರಲು ಕಾರಣಗಳೇನು;

ಈ) 2008 ರಿಂದ ಈಚೆಗೆ ನೇಮಕ ಹೊಂದಿದ ಪ್ರೌಡ ಶಾಲಾ ಸಹ ಶಿಕ್ಷಕರು ಮತ್ತು ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರು ಈ ಸೌಲಭ್ಯದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದರೆ, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) ಸರ್ಕಾರಿ ಆದೇಶ ಸಂಖ್ಯೆ ಆಇ 8 ಎಸ್ಆರ್ಪಿ 2006, ದಿನಾಂಕ: 29-03-2006 ರ ಆದೇಶದಲ್ಲಿ 5ನೇ ರಾಜ್ಯ ವೇತನ ಆಯೋಗದ

ಮಧ್ಯಂತರ ವರದಿಯಲ್ಲಿ ಮಾಡಿರುವ ಶಿಫಾರಸ್ಸಿನನ್ವಯ ಅನುದಾನಿತ ಮತ್ತು ಸ್ಥಳೀಯ ಸಂಸ್ಥೆಗಳ ಪ್ರಾಥಮಿಕ ಶಾಲಾ ಶಿಕ್ಷಕರೂ ಸೇರಿದಂತೆ ರಾಜ್ಯದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ದಿನಾಂಕ:01.04.2006 ರಿಂದ ಜಾರಿಗೆ ಬರುವಂತೆ ಮಾಸಿಕ 200–00 ರೂಗಳ ವಿಶೇಷ ಭತ್ಯೆಯನ್ನು ಮಂಜೂರು ಮಾಡಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ ಆಇ 14 ಎಸ್‌ಆರ್‌ಪಿ 2006, ದಿನಾಂಕ:12–05–2006 ರನ್ವಯ ಅನುದಾನಿತ ಶಿಕ್ಷಣ ಸಂಸ್ಥೆಗಳ ಮತ್ತು ಸ್ಥಳೀಯ ಸಂಸ್ಥೆಗಳ ಪ್ರೌಢಶಾಲಾ ಶಿಕ್ಷಕರೂ ಸೇರಿದಂತೆ ರಾಜ್ಯ ಸರ್ಕಾರಿ ಪ್ರೌಢಶಾಲಾ ಶಿಕ್ಷಕರಿಗೆ ಮತ್ತು ಅನುದಾನಿತ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರೂ ಸೇರಿದಂತೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರುಗಳಿಗೆ ಮಾಸಿಕ 200–00 ರೂ.ಗಳ ವಿಶೇಷ ಭತ್ಯೆಯನ್ನು ದಿನಾಂಕ:01–04–2006 ರಿಂದ ಜಾರಿಗೆ ಬರುವಂತೆ ಮಂಜೂರು ಮಾಡಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ ಇಡಿ 264 ಎಸ್‌ಎಲ್‌ಬಿ 2012. ದಿನಾಂಕ:09–05–2012 ರ ಆದೇಶದಲ್ಲಿ ರಾಜ್ಯದ ಸರ್ಕಾರಿ/ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರುಗಳಿಗೆ ಮಾಸಿಕ 300–00ರೂಗಳಿಗೆ ಸರ್ಕಾರಿ/ಅನುದಾನಿತ ಪ್ರೌಢಶಾಲಾ ಸಹ ಶಿಕ್ಷಕರುಗಳಿಗೆ ಮಾಸಿಕ 400–00 ರೂ. ಗಳಿಗೆ ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರುಗಳಿಗೆ ಮಾಸಿಕ 500–00 ರೂ. ಗಳಿಗೆ ಪರಿಷ್ಕರಿಸಿ ಮಂಜೂರು ಮಾಡಲಾಗಿರುತ್ತದೆ.

**ಆ)** ದಿನಾಂಕ:01.08.2008ರ ಪೂರ್ವದಲ್ಲಿ ನೇಮಕಗೊಂಡ ಸರ್ಕಾರಿ/ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವಿವರ 2007–08 ನೇ ಸಾಲಿನ ಮಾಹಿತಿಯಂತೆ ಈಗ ನೀಡಿರುವ ವಿಶೇಷ ಭತ್ಯೆಯನ್ನು ಲೆಕ್ಕ ಹಾಕಿದಾಗ ಈ ಕೆಳಕಂಡಂತೆ ಅಂದಾಜು ವಾರ್ಷಿಕ 953.67 ಕೋಟಿ ಹೊರೆಯಾಗಿರುತ್ತದೆ.

| ಶಿಕ್ಷಕರುಗಳು | ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ | ವಿಶೇಷ ಭತ್ಯೆ | ವಾರ್ಷಿಕ ಅಂದಾಜು (₹ ಗಳಲ್ಲಿ) |
|---|---|---|---|
| ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು | 180336 | 300–00 | 649209600/ |
| ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರು | 14856 | 300–00 | 53481600/ |
| ಸರ್ಕಾರಿ ಪ್ರೌಢಶಾಲಾ ಶಿಕ್ಷಕರು | 30459 | 400–00 | 146203200/ |
| ಅನುದಾನಿತ ಪ್ರೌಢಶಾಲಾ ಶಿಕ್ಷಕರು | 21833 | 400–00 | 104798400/ |
| | | **ಒಟ್ಟು** | **953692800/** |
| [ತೊಂಭತ್ತೈದು ಕೋಟಿ ಮೂವತ್ತಾರು ಲಕ್ಷದ ತೊಂಭತ್ತೆರಡು ಸಾವಿರದ ಎಂಟು ನೂರು ರೂಪಾಯಿಗಳು] | | | |

ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರುಗಳಿಗೆ ಮಾಸಿಕ 500–00 ರೂ.ಗಳಂತೆ ಮಾಸಿಕ ಅಂದಾಜು ವೆಚ್ಚ 66.12.500–00 ರೂ. ಗಳ ಹೊರೆಯಾಗುತ್ತದೆ. ವಾರ್ಷಿಕ ವೆಚ್ಚ ಒಟ್ಟು 7.93.50.000/–ರೂ.ಗಳ (ಏಳು ಕೋಟಿ ತೋಂಭತ್ಮೂರು ಲಕ್ಷದ ಐವತ್ತು ಸಾವಿರ) ಹೊರೆಯಾಗುತ್ತದೆ.

ಇ) ಈ ವಿಶೇಷ ಬಡ್ತಿಯನ್ನು 5ನೇ ವೇತನ ಆಯೋಗವು ತನ್ನ ಮಧ್ಯಂತರ ವರದಿಯಲ್ಲಿ ಮಾಡಿರುವ ಶಿಫಾರಸ್ಸಿನನ್ವಯ ಮಂಜೂರು ಮಾಡಲಾಗಿದೆ. ಫ್ರೌಢಶಾಲಾ ಮುಖ್ಯೋಪಾಧ್ಯಾಯರು ಮತ್ತು ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಿಗೆ ಈ ವಿಶೇಷ ಭತ್ಯೆಯನ್ನು ಮಂಜೂರು ಮಾಡಲು ವೇತನ ಆಯೋಗವು ಶಿಫಾರಸ್ಸು ಮಾಡದೇ ಇರುವುದರಿಂದ, ಇವರಿಗೆ ವಿಶೇಷ ಭತ್ಯೆಯನ್ನು ನೀಡಿರುವುದಿಲ್ಲ.

ಈ) ಹೌದು.

ಸರ್ಕಾರಿ ಆದೇಶ ಸಂಖ್ಯೆ ಎಫ್.ಡಿ 31 ಎಸ್ಆರ್‌ಪಿ 2007, ದಿನಾಂಕ:28.08.2008 ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹೆಚ್ಚಿನ ವೇತನ ಶ್ರೇಣಿ ₹ 6800–13000 ನ್ನು ನೀಡಲಾಗಿದೆ. ಆದುದರಿಂದ ಇವರು 6250/–ರೂಗಳ ಪ್ರಾರಂಭಿಕ ವೇತನಕ್ಕೆ ಬದಲಾಗಿ 6800/–ರೂ.ಗಳ ಪ್ರಾರಂಭಿಕ ವೇತನಕ್ಕೆ ಅರ್ಹರಾಗುವುದರಿಂದ, ದಿನಾಂಕ:01.08.2008 ರಂದು ಅಥವಾ ನಂತರ ನೇಮಕಾತಿ ಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರು ಸರ್ಕಾರದ ಆದೇಶ ಸಂಖ್ಯೆ ಎಫ್.ಡಿ 8 ಎಸ್.ಆರ್.ಪಿ 2006, ದಿನಾಂಕ:29.03.2006 ರಲ್ಲಿ ಮಂಜೂರು ಮಾಡಿರುವ ಮಾಸಿಕ 200/–ರೂಗಳ ವಿಶೇಷ ಭತ್ಯೆಯನ್ನು ಪಡೆಯಲು ಅರ್ಹರಿರುವುದಿಲ್ಲ.

ಉಳಿದಂತೆ 2008 ರಿಂದ ಈಚೆಗೆ ನೇಮಕಗೊಂಡ ಪ್ರೌಢಶಾಲಾ ಸಹ ಶಿಕ್ಷಕರು ಮತ್ತು ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ ಪ್ರಾರಂಭಿಕ ವೇತನದಲ್ಲಿ ಬದಲಾವಣೆ ಇಲ್ಲದಿರುವುದರಿಂದ ವಿಶೇಷ ಭತ್ಯೆಯನ್ನು ಪಡೆಯಲು ಅರ್ಹರಾಗಿರುವುದಿಲ್ಲ.

ಉ) 2008 ರಿಂದೀಚೆಗೆ ನೇಮಕಗೊಂಡ ಪ್ರೌಢಶಾಲಾ ಸಹ ಶಿಕ್ಷಕರು ಮತ್ತು ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಪ್ರಾರಂಭಿಕ ವೇತನದಲ್ಲಿ ಯಾವುದೇ ಬದಲಾವಣೆ ಇಲ್ಲದಿರುವುದರಿಂದ, ಇವರು ವಿಶೇಷ ಭತ್ಯೆಗೆ ಅರ್ಹರಿರುವುದಿಲ್ಲ.

**ಶ್ರೀ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಟ್ಟಿರುವುದನ್ನು ಓದಿದಾಗ ನನಗೆ ಎಲ್ಲೋ ಒಂದು ಕಡೆ ಖುಷಿಯಾಯಿತು. 5ನೇ ವೇತನ ಆಯೋಗ ಕೇವಲ ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ಮಾತ್ರ exgratia ಕೊಡಿ ಎಂದು ಶಿಫಾರಸ್ಸು ಮಾಡಿದ್ದರೆ ಮಾನ್ಯ ಬಸವರಾಜ ಹೊರಟ್ಟಿಯವರ ಸರ್ಕಾರ ಇದ್ದಾಗ 200 ರೂಪಾಯಿಯನ್ನು ಪ್ರೌಢಶಾಲೆಯವರಿಗೂ ಮತ್ತು ಉಪನ್ಯಾಸಕರಿಗೂ exgratia ಮಾಡಿದ್ದರು.

ನಮ್ಮ ಸರ್ಕಾರ ಬಂದಾಗ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಎಲ್ಲಾ ಸೇರಿ ಅದನ್ನು 300 ರೂಪಾಯಿ ಪ್ರೌಢಶಾಲೆಯವರಿಗೆ, ಮತ್ತು ಪಿ.ಯು ಕಾಲೇಜಿನವರಿಗೆ 500 ರೂಪಾಯಿ, ಮತ್ತು ಸಹ ಶಿಕ್ಷಕರಿಗೆ 400 ರೂಪಾಯಿ ಮಾಡಿದ್ದಾರೆ. ನಾನು ಸರ್ಕಾರಕ್ಕೆ ಅಭಿನಂದಿಸುತ್ತಿದ್ದೇನೆ. ಆದರೆ, 1,95,000 ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ 953 ಕೋಟಿ ರೂಪಾಯಿಗಳ ಹಣವನ್ನು ಕೊಟ್ಟಿದ್ದಾರೆ. ಪ್ರೌಢಶಾಲೆಯಲ್ಲಿ ಕೆಲಸ ಮಾಡುತ್ತಿರುವುದು 52,592 ಜನರು ಮಾತ್ರ ಪಿ.ಯು. ಕಾಲೇಜಿನಲ್ಲಿ ಕೆಲಸ ಮಾಡುತ್ತಿರುವುದು 17,000 ಜನರು ಮಾತ್ರ ಇವರೆಲ್ಲರಿಗೂ ಒಂದಲ್ಲ ಒಂದು ವಿಧದಲ್ಲಿ ಅನುಕೂಲವಾಗಿದೆ. ಒಂದು ಶಾಲೆಯಲ್ಲಿ ಒಬ್ಬ ಹೆಡ್‌ಮಾಸ್ಟರ್ ಕೆಲಸ ಮಾಡುತ್ತಿರುತ್ತಾರೆ. ಒಬ್ಬ ಅಸಿಸ್ಟೆಂಟ್ ಮಾಸ್ಟರ್ ಕೆಲಸ ಮಾಡುತ್ತಿರುತ್ತಾರೆ. ವಿಶೇಷ ಭತ್ಯೆಯನ್ನು ಅಸಿಸ್ಟಂಟ್ ಮಾಸ್ಟರ್ ಒಬ್ಬರಿಗೆ ಮಾತ್ರ exgratia ಕೊಟ್ಟು, ಹೆಡ್‌ಮಾಸ್ಟರ್‌ಗೆ ಕೊಡದಿದ್ದರೆ ಇದು ಯಾವ ನೀತಿ?

**ಸಭಾಪತಿಯವರು:–** ಹೆಡ್‌ಮಾಸ್ಟರ್‌ಗೂ ಕೊಡಬೇಕೆಂದೂ ಕೇಳುತ್ತಿದ್ದೀರಿ. ಅದರ ಬಗ್ಗೆ ಮಾನ್ಯ ಸಚಿವರು ಹೇಳುತ್ತಾರೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಏನು ಪ್ರಶ್ನೆ ಕೇಳಬೇಕೆಂದು ನಮಗೂ ಗೊತ್ತು, ಅವರಿಗೂ ಗೊತ್ತು. ಅಷ್ಟನ್ನು ಕೇಳಿಬಿಟ್ಟರೆ ಬಹಳ ಒಳ್ಳೆಯದು.

**ಸಭಾಪತಿಯವರು:–** ಹೆಡ್‌ಮಾಸ್ಟರ್‌ಗೂ ಕೊಡುತ್ತೀರೋ ಇಲ್ಲವೋ ಎಂಬುದನ್ನು ಹೇಳಿಬಿಡಿ.

**ಡಾ॥ ಎ.ಹೆಚ್.ಶಿವಯೋಗಿಸ್ವಾಮಿ:–** ಮಾನ್ಯ ನಾರಾಯಣ ಸ್ವಾಮಿಯವರೇ, ಹೆಡ್‌ಮಾಸ್ಟರಿಗೂ ಕೊಡಬೇಕು. ಅದನ್ನು ಯಾವಾಗ ಕೊಡುತ್ತೀರಿ ಎಂದು ಅಷ್ಟನ್ನು ಮಾತ್ರ ಹೇಳಿ.

**ಸಭಾಪತಿಯವರು:–** ನಾರಾಯಣಸ್ವಾಮಿಯವರೇ, ಈಗ ಸಮಯವಿಲ್ಲ. ಸುತ್ತಿ ಬಳಸಿ ಪ್ರಶ್ನೆಯನ್ನು ಕೇಳಬೇಡಿ. ನೇರವಾಗಿ ಕೇಳಿ.

**ಶ್ರೀ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಪ್ರೌಢ ಶಾಲಾ ಮುಖ್ಯೋಪಾಧ್ಯಯರಿಗೆ ಮತ್ತು ಪದವಿ ಪೂರ್ವ ಉಪನ್ಯಾಸಕರಿಗೆ ಯಾವಾಗ ಕೊಡುತ್ತಾರೆ ಎಂಬುದು ಮೊದಲ ಪ್ರಶ್ನೆ. ಎರಡನೆ ಪ್ರಶ್ನೆ, 2008 ರಿಂದೀಚೆಗೆ ನೇಮಕಾತಿಯಾದ ಶಿಕ್ಷಕರು ಏನಿದ್ದಾರೆ ಅವರಿಗೆ ವಿಶೇಷ ಭತ್ಯೆ ಯಾವಾಗ ಕೊಡುತ್ತಾರೆ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ಶ್ರೀಯುತ ನಾರಾಯಣಸ್ವಾಮಿಯವರು ಹೆಡ್‌ಮಾಸ್ಟರ್‌ಗಳಿಗೆ ಮತ್ತು ಪ್ರಿನ್ಸಿಪಾಲರಿಗೆ ವಿಶೇಷ ಭತ್ಯೆ ಕೊಡುವಂತಹ ವಿಷಯವನ್ನು ಕೊಡುವ ಪ್ರಸ್ತಾಪ ಮಾಡಿದ್ದಾರೆ. ಎರಡನೆಯ ವಿಷಯ, 2008 ರ ನಂತರ ನೇಮಕವಾದವರಿಗೆ ಕೊಡಬೇಕು ಎನ್ನುವಂತಹ ವಿಷಯ ಇದೆ. ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ವೇತನ ಆಯೋಗದ ವರದಿಗಳನ್ನು ಆಧರಿಸಿ ಸಾಕಷ್ಟು ಸವಿಸ್ತಾರವಾಗಿ ಚರ್ಚೆ ಮಾಡಿದ್ದೇವೆ. ತಾವು ಕೂಡ ಇದ್ದೀರಿ. ನಮ್ಮ ಎಲ್ಲಾ ಸದಸ್ಯರುಗಳು ನಾವು ಭಾಗವಹಿಸಿರುವಂತಹ ಸಭೆಯಲ್ಲಿ ವೇತನ ತಾರತಮ್ಯ ಇದೆ ಎಂದು ನಮ್ಮ ಪ್ರಾಥಮಿಕ ಶಿಕ್ಷಕರುಗಳಿಗೆ 100 ರೂಪಾಯಿ, ಪ್ರೌಢ ಶಾಲೆಯವರಿಗೆ 200 ರೂಪಾಯಿ, ಮತ್ತು ಪಿ.ಯು. ಉಪನ್ಯಾಸಕರಿಗೆ 300 ರೂಪಾಯಿ, ಈ ರೀತಿ 200 ರೂಪಾಯಿಯ ಜೊತೆಗೆ ಹೆಚ್ಚುವರಿ ಮಾಡಿದ್ದೇವೆ. ಅಂದರೆ, ಪ್ರಾಥಮಿಕ ಶಾಲೆಯವರಿಗೆ 300 ರೂಪಾಯಿ, ಪ್ರೌಢ ಶಾಲೆಯವರಿಗೆ 400 ರೂಪಾಯಿ ಜೂನಿಯರ್ ಕಾಲೇಜಿನ ಉಪನ್ಯಾಸಕರಿಗೆ 500 ರೂಪಾಯಿ ವಿಶೇಷ ಭತ್ಯೆಯನ್ನು ಕೊಡುವುದಕ್ಕೆ ನಾವು ಮುಂದಾದೆವು. ಆ ಸಂದರ್ಭದಲ್ಲಿ ಹೆಡ್‌ಮಾಸ್ಟರ್‌ಗೂ ಮತ್ತು ಪ್ರಿನ್ಸಿಪಾಲರಿಗೂ ಕೊಡಬೇಕು ಎನ್ನುವಂಥದ್ದು ಒಂದು ಪ್ರತ್ಯೇಕ ವೇತನ ಶ್ರೇಣಿ ಕೊಡಬೇಕು ಅಥವಾ ಈ ರೀತಿ ವಿಶೇಷ ಭತ್ಯೆಯನ್ನಾದರೂ ಹೆಚ್ಚುವರಿ ಆಗಿ ಕೊಡಬೇಕು ಎನ್ನುವಂಥದ್ದು ತಾತ್ವಿಕವಾಗಿ ನಮ್ಮೆಲ್ಲರಿಗೂ ಒಪ್ಪಿಗೆ ಆಗಿರುವಂತಹ ವಿಷಯ. ಆದರೆ, ಆದೇಶ ಹೊರಡಿಸುವ ಸಂದರ್ಭದಲ್ಲಿ ಹೆಡ್‌ಮಾಸ್ಟರ್‌ಗೂ ಮತ್ತು ಪ್ರಾಂಶುಪಾಲರದ್ದು ಬಿಟ್ಟು ಹೋಗಿದೆ. ಮುಂದಿನ ದಿವಸಗಳಲ್ಲಿ ಈಗಿನ ಮುಖ್ಯಮಂತ್ರಿಗಳಾದ ಶ್ರೀಮಾನ್

ಜಗದೀಶ್ ಶೆಟ್ಟರ್‌ರವರ ಜೊತೆಯಲ್ಲಿ ಮಾತನಾಡಿ ಅವರಿಗೆ ಏನು ಪ್ರತ್ಯೇಕ ವೇತನ ಕೊಡಬೇಕು ಎಂದು ಇದೆಯೋ ಅದಕ್ಕೆ ನಾವು ಸಕರಾತ್ಮಕವಾಗಿ ಪ್ರಯತ್ನ ಮಾಡುತ್ತೇವೆ. ಏಕೆಂದರೆ, ಅದು ತಾತ್ವಿಕವಾಗಿ ಒಪ್ಪಿಕೊಂಡಿರುವ ವಿಷಯವಾಗಿದೆ. ಆದೇಶ ಆಗುವಾಗ ಅದು ಬಿಟ್ಟು ಹೋಗಿದೆ. ಅದನ್ನು ಆದೇಶ ಮಾಡಿಸಿ ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಎರಡನೆಯದು, 2008 ರಲ್ಲಿ ನೇಮಕವಾದ ನಂತರ ವಿಶೇಷ ಭತ್ಯೆ ಬರುತ್ತಿಲ್ಲ. ಏಕೆ ಬರುತ್ತಿಲ್ಲವೆಂದರೆ, 2008 ರಲ್ಲಿ ವೇತನ ಶ್ರೇಣಿಯಲ್ಲಿ ನಾವು ಬದಲಾವಣೆ ಮಾಡಿದ್ದೆವು. ಹಾಗಾಗಿ ವೇತನ ತಾರತಮ್ಯ ಹಿಂದಿನವರಿಗೆ ಇತ್ತೋ ಆ ವೇತನ ಶ್ರೇಣಿಯನ್ನು 2008 ರಲ್ಲಿ ಬದಲಾವಣೆ ಮಾಡಿರುವುದರಿಂದ 6800 ರಿಂದ 12,000ಕ್ಕೆ ವೇತನ ಶ್ರೇಣಿಯನ್ನು ಬದಲಾವಣೆ ಮಾಡಿದ್ದೇವೆ.

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಪ್ರೌಢ ಶಾಲೆಯವರಿಗೆ ಬದಲಾವಣೆ ಮಾಡಿಲ್ಲ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಪ್ರೌಢ ಶಾಲೆಯವರಿಗೆ ವೇತನ ಶ್ರೇಣಿಯನ್ನು ಬದಲಾವಣೆಯನ್ನು ಮಾಡಿಲ್ಲ. ಪ್ರಾಥಮಿಕ ಶಾಲೆಯವರಿಗೆ ವೇತನ ಶ್ರೇಣಿಯನ್ನು ಬದಲಾವಣೆ ಮಾಡಿದ್ದೇವೆ. ವೇತನ ಶ್ರೇಣಿಯನ್ನೇ ಸರಿಪಡಿಸಿರುವುದರಿಂದಾಗಿ ಈ 200 ರೂಪಾಯಿಯನ್ನು ಉಳಿದವರಿಗೆ ಕೊಡುವ ಅಗತ್ಯ ಇಲ್ಲ ಎನ್ನುವುದು ಎಲ್ಲಾ ಹಂತದಲ್ಲಿ ಚರ್ಚೆಯಾಗಿರುವಂಥದ್ದು.

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಪ್ರೌಢ ಶಾಲೆಯವರಿಗೆ ವೇತನ ಶ್ರೇಣಿ ಬದಲಾವಣೆಯಾಗಿಲ್ಲ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಪ್ರೌಢ ಶಾಲೆಯವರಿಗೆ ವೇತನ ಶ್ರೇಣಿ ಬದಲಾವಣೆಯಾಗಿಲ್ಲ. ಅದನ್ನು ಒಪ್ಪುತ್ತೇನೆ. ಉಳಿದಂತೆ ಈ ವಿಷಯವನ್ನು ಪ್ರೌಢ ಶಾಲೆ ಕುರಿತಂತೆ ನಾನು ಪರಿಶೀಲಿಸುತ್ತೇನೆ.

**ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ**

**88; ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ)**

**ಅ)** ಬಿಜಾಪುರ ಜಿಲ್ಲೆಯ ದೇವರ ಹಿಪ್ಪರಗಿ, ಬಸವನ ಬಾಗೇವಾಡಿಯ ನಿಡಗುಂದಿ ಹಾಗೂ ಮುದ್ದೆಬಿಹಾಳ ತಾಲ್ಲೂಕಿನ ತಾಳಿಕೋಟೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ ಆರಂಭಿಸಲು ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

**ಆ)** ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

**ಅ)** ಬಂದಿದೆ. ನಿಡಗುಂದಿಯಲ್ಲಿ ಹೊಸದಾಗಿ ಶೈಕ್ಷಣಿಕ ವಲಯವನ್ನು ಪ್ರಾರಂಭಿಸಲು ಉಪ ನಿರ್ದೇಶಕರು, ಬಿಜಾಪುರ ಇವರು ಪ್ರಸ್ತಾವನೆ ಸಲ್ಲಿಸಿದ್ದು, ಪ್ರಸ್ತಾವನೆಗೆ ಅಗತ್ಯವಾದ ಕೆಲವು ಮಾಹಿತಿಗಳು ಇಲ್ಲದಿರುವುದರಿಂದ ಮಾಹಿತಿಗಳೊಂದಿಗೆ ಪ್ರಸ್ತಾವನೆ ಪಡೆದು ಅಗತ್ಯಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು. ದೇವರ ಹಿಪ್ಪರಗಿ ಮತ್ತು ತಾಳಿಕೋಟೆಗಳಿಗೆ ಸಂಬಂಧಿಸದಂತೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

**ಆ)** ಈ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಧನ್ಯವಾದಗಳು. ಈ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಉತ್ತರದಲ್ಲಿ ಹೇಳಿದ್ದಾರೆ. ಆದಷ್ಟು ಶೀಘ್ರವಾಗಿ ಈ ಮೂರು ಸ್ಥಳಗಳಲ್ಲಿ ಬಿ.ಇ.ಓ ಕಛೇರಿಯನ್ನು ಆರಂಭಿಸಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹ ಮಾಡುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಈಗಾಗಲೇ 204 ಬಿ.ಇ.ಓ ಆಫೀಸುಗಳು ಇವೆ. ಈಗ ವಿಶೇಷವಾಗಿ

ಬಿಜಾಪುರ ಜಿಲ್ಲೆಯಲ್ಲಿ ಐದು ತಾಲ್ಲೂಕುಗಳಿವೆ. ಈಗಾಗಲೇ ಅಲ್ಲಿ ಏಳು ಬಿ.ಇ.ಓ ಆಫೀಸ್‌ಗಳಿವೆ. ಐದು ರೆವಿನ್ಯೂ ತಾಲ್ಲೂಕುಗಳಿವೆ. ಹಾಗಾಗಿ ದೇವರ ಹಿಪ್ಪರಗಿ, ತಾಳಿಕೋಟೆಯಲ್ಲಿ ವಿಶೇಷವಾಗಿ ನಿಡಗುಂದಿಯಲ್ಲಿ ಇನ್ನೂ ಮೂರು ಬಿ.ಇ.ಓ ಆಫೀಸ್‌ಗಳು ಬೇಕೆಂದು ಮಾನ್ಯ ಅರುಣ ಶಹಾಪುರರವರು ಕೇಳುತ್ತಿದ್ದಾರೆ. ನಿಡಗುಂದಿಯಲ್ಲಿ ಮಾಡಬೇಕು ಎನ್ನುವುದಕ್ಕೆ ಒಂದು ಪ್ರಸ್ತಾವನೆ ಬಂದಿದೆ. ನಿಡಗುಂದಿಯಲ್ಲಿ ಮಾಡಬೇಕೋ ದೇವರ ಹಿಪ್ಪರಗಿ, ತಾಳಿಕೋಟೆಯಲ್ಲಿ ಮಾಡಬೇಕೋ ಈ ರೀತಿ ಮೂರು ಸಲಹೆಗಳು ಬಂದಿವೆ. ಹಾಗಾಗಿ ಇನ್ನಷ್ಟು ಅಂಕಿ-ಸಂಖ್ಯೆ ಪೂರ್ಣ ವಿವರಗಳನ್ನೆಲ್ಲವನ್ನು ತೆಗೆದುಕೊಂಡು ಅಲ್ಲಿರುವಂತಹ ವಿದ್ಯಾರ್ಥಿಗಳ ಸಂಖ್ಯೆ, ಅಧ್ಯಾಪಕರ ಸಂಖ್ಯೆ, ಶಾಲೆಗಳ ಸಂಖ್ಯೆ, ಎಲ್ಲವನ್ನು ಆಧರಿಸಿ ನಾವು ಸೂಕ್ತವಾದ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ. ತಾಲ್ಲೂಕುಗಳು ಸ್ವಲ್ಪ ವ್ಯತ್ಯಾಸಗಳಿವೆ. ಆ ಜಿಲ್ಲೆಯಲ್ಲಿ ಇನ್ನೂ ಮೂರು ಬಿ.ಇ.ಓ. ಆಫೀಸ್‌ಗಳು ಬೇಕೆಂದು ಬೇಡಿಕೆ ಇದೆ. ಆದರೆ, ಇದನ್ನು ಸಕಾರತ್ಮಕವಾಗಿ ಪರಿಶೀಲಿಸುತ್ತೇವೆ. ನಿಡಗುಂದಿಯಲ್ಲಿ ಒಂದು ಬಿ.ಇ.ಓ. ಆಫೀಸ್ ಆಗಬೇಕೆನ್ನುವುದು ಇದೆ. ದೇವರ ಹಿಪ್ಪರಗಿ, ತಾಳಿಕೋಟೆಯಲ್ಲಿ ಆಗಬೇಕೆನ್ನುವ ಪ್ರಸ್ತಾವನೆ ಇದೆ. ಆದರೆ. ಒಂದು ಕಡೆಯಲ್ಲೋ ಎರಡು ಕಡೆಯಲ್ಲೋ ಮಾಡುವುದಕ್ಕೆ ಸಾಧ್ಯವಿದೆ. ಎಲ್ಲಾ ಕಡೆ ಮಾಡುವುದಕ್ಕೆ ಸಾಧ್ಯವಿಲ್ಲ. ಅದನ್ನು ಪರಿಶೀಲಿಸಿ, ಉಳಿದವರ ಜೊತೆ ಸಮಾಲೋಚಿಸಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ವರ್ಗಾವಣೆ ಆಗಿರುವ ಶಿಕ್ಷಕರಿಗೆ relieve ಮಾಡುವುದಕ್ಕೂ ಬಿ.ಇ.ಓ ಕಡೆಯಿಂದ ಆಗುತ್ತಿಲ್ಲ. ಹೆಚ್ಚು ಬಿ.ಇ.ಓ ಕಛೇರಿಗಳಾದರೆ ಅವರ ಮೇಲೆ ಇರುವಂತಹ ಕಾರ್ಯ ಒತ್ತಡ ಕಡಿಮೆ ಆಗುತ್ತದೆ. ದಯವಿಟ್ಟು ಆದಷ್ಟು ಶೀಘ್ರವಾಗಿ ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಸಭಾಪತಿಯವರೇ, ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

## ರಾಜ್ಯದ ಸಹಕಾರಿ ಸಂಘಗಳಲ್ಲಿ ನೀಡುವ ಅಲ್ಪಾವಧಿ ಬೆಳೆ ಸಾಲಗಳ ಕುರಿತು

**596; ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ರಾಜ್ಯದ ಸಹಕಾರಿ ಸಂಘಗಳಲ್ಲಿ ನೀಡುವ ಅಲ್ಪಾವಧಿ ಬೆಳೆಸಾಲಗಳ ಬಡ್ಡಿ ರಿಯಾಯತಿಯ ವಿವಿಧ ಸ್ಥರ(slab)ಗಳಾವುವು:

ಆ) ಅಲ್ಪಾವಧಿ ಬೆಳೆ ಸಾಲಕ್ಕೆ ಸರ್ಕಾರವು ಬಡ್ಡಿ ರಿಯಾಯತಿ ನೀಡುವುದು ರೈತರ ಹಿಡುವಳಿ ಆಧಾರಿತವಾಗಿದಯೇ: ಅಥವಾ ಸಾಲದ ಮೊಬಲಗಿನ ಆಧಾರವಾಗಿವೆಯೇ:

ಇ) 3 ಲಕ್ಷಕ್ಕಿಂತ ಹೆಚ್ಚು ಬೆಳೆ ಸಾಲ ಪಡೆದ ರೈತರಿಗೆ ಸರಕಾರದ ಬಡ್ಡಿ ರಿಯಾಯತಿ ಸೌಲಭ್ಯ ಇದೆಯೇ: ಇಲ್ಲವಾದಲ್ಲಿ, ಕಾರಣವೇನು: ರಿಯಾಯತಿ ನೀಡದ ಸರಕಾರದ ತೀರ್ಮಾನವು ಕೃಷಿಗೆ ಮಾರಕವಾಗುವುದಿಲ್ಲವೇ?

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ಸಹಕಾರ ಸಚಿವರು)**

ಅ) ರಾಜ್ಯದ ಸಹಕಾರಿ ಸಂಘಗಳಲ್ಲಿ ನೀಡುವ ಅಲ್ಪಾವಧಿ ಬೆಳೆಸಾಲಗಳ ಬಡ್ಡಿ ರಿಯಾಯತಿಯ ವಿವಿಧ ಸ್ಥರ(slab)ಗಳು ಈ ಕೆಳಗಿನಂತಿವೆ.

| ಅಲ್ಪಾವಧಿ ಬೆಳೆ ಸಾಲದ ಸ್ಥಳ | ಬಡ್ಡಿ ದರ (ಶೇ.) |
|---|---|
| ₹ 1.00 ಲಕ್ಷದವರೆಗಿನ ಸಾಲ | ಶೂನ್ಯ |
| ₹ 3.00 ಲಕ್ಷಗಳವರೆಗಿನ ಸಾಲ(ಸಂಪೂರ್ಣ ಸಾಲಕ್ಕೆ) | 1.00 |
| ₹ 3.00 ಲಕ್ಷಕ್ಕಿಂತ ಮೇಲ್ಪಟ್ಟ ಸಾಲ | ಸಾಮಾನ್ಯ ಬಡ್ಡಿ ದರ |

ಆ) ಅಲ್ಪಾವಧಿ ಬೆಳೆ ಸಾಲಕ್ಕೆ ಸರ್ಕಾರವು ಬಡ್ಡಿ ರಿಯಾಯತಿ ನೀಡುವುದು ಸಾಲದ ಮೊಬಲಗಿನ ಆಧಾರವಾಗಿದೆ.

ಇ) ₹ 3.00 ಲಕ್ಷಕ್ಕಿಂತ ಹೆಚ್ಚು ಬೆಳೆ ಸಾಲ ಪಡೆದ ರೈತರಿಗೆ ಸರ್ಕಾರದ ಬಡ್ಡಿ ರಿಯಾಯತಿ ಸೌಲಭ್ಯ ಇರುವುದಿಲ್ಲ.

ಸರ್ಕಾರದ ಬಡ್ಡಿ ರಿಯಾಯತಿ ಯೋಜನೆಯು ಸಣ್ಣ, ಅತಿ ಸಣ್ಣ ಹಾಗೂ ಮಧ್ಯಮ ವರ್ಗದ ರೈತರಿಗೆ ಕೃಷಿ ಉತ್ತೇಜನ ನೀಡುವ ಉದ್ದೇಶದಿಂದ ರೂಪಿಸಲಾಗಿದೆ ಹಾಗೂ ಸರ್ಕಾರದ ತೀರ್ಮಾನವು ಕೃಷಿಗೆ ಪೂರಕವಾಗಿದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಅಲ್ಪಾವಧಿ ಬೆಳೆ ಸಾಲ ಕೊಡುವಂಥದ್ದು ಹಿಡುವಳಿ ಆಧಾರಿತವಾಗಿದೆಯೇ ಅಥವಾ ಸಾಲದ ಮೊಬಲಗಿನ ಆಧಾರವಾಗಿವೆಯೇ ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಸಣ್ಣ ರೈತರು ಮತ್ತು ಅತಿ ಸಣ್ಣ ರೈತರಿಗೆ ಕೊಡತಕ್ಕಂಥದ್ದು ಎನ್ನುವ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಈ ಟ್ರ್ಯಾಕ್ಟರ್‌ಗಳು ಮತ್ತು power tiller ಗಳು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಿಗುವಂಥಾಗಬೇಕಾದರೆ ಸಹಕಾರಿ ಸಂಘಗಳಿಗೆ ಸಾಲ ಕೊಡಿ ಎಂದು ಹೇಳಿದರೆ ಅದನ್ನು ಅವರಿಗೆ ಕೊಡುವುದಕ್ಕಾಗುವುದ್ದಿಲ್ಲ, ದೊಡ್ಡ ರೈತರುಗಳಿಗೆ ಕೊಡುವುದು ಎಂದು ಹೇಳುತ್ತಾರೆ. ಒಂದು ಕಡೆ ದೊಡ್ಡ ರೈತರುಗಳಿಗೆ ಕೊಡುತ್ತೇವೆ, ಒಂದು ಕಡೆ ಸಣ್ಣ ರೈತರಿಗೆ ಕೊಡುತ್ತೇವೆ ಎನ್ನತಕ್ಕಂಥ ವಾದ ಎದೆ. ಇದು ದ್ವಂದ್ವವಾಗುತ್ತದೆ. ಇಲ್ಲಿ ಕೃಷಿಗೆ ಪ್ರೋತ್ಸಾಹ ಕೊಡುವುದಾದರೆ ಮುಂಚೆ ಏನಿತ್ತು, 2004 ರಿಂದ 2011 ರವರೆಗೆ ಕೃಷಿ ಸಾಲಗಳಿಗೆ ರಿಯಾಯಿತಿ ಸೌಲಭ್ಯ ಇರಲಿಲ್ಲ. ಈಗ ಏಕೆ ಮಾಡಿದ್ದಾರೆ?

(ಈ ಹಂತದಲ್ಲಿ ಮಾನ್ಯ ಸದಸ್ಯರೊಬ್ಬರಿಗೆ ಸದನದಲ್ಲಿ ಕಾಲಿಗೆ ವೈರ್ ತಾಗಿ ಎಡವಿದರು)

**ಸಭಾಪತಿಯವರು:–** ಅಲ್ಲಿ ವೈರ್ ಇದೆ ಮಾನ್ಯ ಸದಸ್ಯರುಗಳೆಲ್ಲರೂ ಸ್ವಲ್ಪ ನೋಡಿಕೊಂಡು ಓಡಾಡಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅಲ್ಲಿಯ ವೈರ್‌ಗಳನ್ನು ಸರಿಮಾಡಬೇಕು.

**ಸಭಾಪತಿಯವರು:–** ಏನು ಮಾಡುವುದಕ್ಕಾಗುವುದಿಲ್ಲ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೇ, ತಾಂತ್ರಿಕವಾಗಿ ಇದನ್ನು ಪರಿಶೀಲನೆ ಮಾಡಿ ಯಾವುದಾದರೂ ವ್ಯವಸ್ಥೆಯನ್ನು ಮಾಡಬೇಕು. ಇದು ಪ್ರತಿಯೊಬ್ಬರಿಗೂ ಆಗುತ್ತಿರುವ ಅನುಭವ, ನಾನು ಹಿಂದೆ ಎರಡು ಸಲ ಹೇಳಿದ್ದೆ. ಪ್ರತಿ ಸಲ ನಿರ್ಲಕ್ಷ್ಯ ಮಾಡುತ್ತಾರೆ. ಆಮೇಲೆ ಇದೇ ರೀತಿ ಆಗುತ್ತದೆ. ಬಹಳಷ್ಟು ಸಲ ಹೇಳಿದ್ದೇವೆ. ಕಾಲಿಗೆ ತಾಗಿ ಎಷ್ಟೋ ಸಲ ಬಿದ್ದಿದ್ದಾರೆ. ಅದನ್ನು ನೋಡಿ ನಕ್ಕು ಎಲ್ಲರೂ ಸುಮ್ಮನೆ ಕುಳಿತುಕೊಳ್ಳುತ್ತಾರೆ. ಆದ್ದರಿಂದ, ಆ ಕಡೆಗೆ ಗಮನ ಹರಿಸಿ ಸರಿ ಮಾಡಿಸಬೇಕು.

**(ಗೊಂದಲ)**

**ಸಭಾಪತಿಯವರು:–** ಇಂಜಿನಿಯರ್ಸ್ ಅನ್ನು ಕರೆಸಿ ಮಾತನಾಡುತ್ತೇನೆ. Automatic ಆಗಿ ಎಳೆದಾಗ ಮುಂದಕ್ಕೆ ಬರಬೇಕು. ಬಿಟ್ಟಾಗ ಅದು ಹಿಂದಕ್ಕೆ ಹೋಗಬೇಕು. ಆ ರೀತಿ ಮಾಡಿಸಿದರೆ ಅನುಕೂಲವಾಗುತ್ತದೆ. Spring ಇರುವಂಥಾದನ್ನು ಅಳವಡಿಸಬೇಕು. ಅದನ್ನು ಅಳವಡಿಸುವುದಕ್ಕೆ ಆದೇಶವನ್ನು ಮಾಡುತ್ತೇನೆ.

**ಶ್ರೀ ವಿ. ಸೋಮಣ್ಣ:–** ಕಾರ್ಪೆಟ್ ಮೇಲುಗಡೆ ವೈರುಗಳು ಬಂದಿರುವುದರಿಂದ ಓಡಾಡುವಾಗ ಕಾಲಿಗೆ ಸಿಕ್ಕಿ ಬೀಳುತ್ತಾರೆ. ಕಾರ್ಪೆಟ್ ಒಳಗಡೆ ಇಲ್ಲವೇ ಅಂಡರ್‌ಗ್ರೌಂಡಿನಲ್ಲಿ wiring ಮಾಡಬೇಕು. ಆ ರೀತಿ ಇದ್ದರೆ ಈ ಸಮಸ್ಯೆ ಬರುವುದಿಲ್ಲ. ಇದು ಸಣ್ಣ ಕೆಲಸ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಗಳೇ ಮತ್ತೊಂದು ವಿಚಾರವನ್ನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮಾಧ್ಯಮದವರು ಅನ್ಯಥಾ ಭಾವಿಸಬಾರದು. ವಿಧಾನ ಸಭೆಯಲ್ಲಿ ಮಾಧ್ಯಮದವರಿಗೆ ಗ್ಯಾಲರಿಯಲ್ಲಿ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಅದೇ ರೀತಿ ಇಲ್ಲೂ ಕೂಡ ವ್ಯವಸ್ಥೆ ಮಾಡಿ ಕೊಟ್ಟರೆ ಸದಸ್ಯರುಗಳಿಗೆ ಓಡಾಡುವುದಕ್ಕೆ ಸ್ವಲ್ಪ ಹೆಚ್ಚಿನ ಸ್ಥಳ ಸಿಗುತ್ತದೆ. ಅವರು ಕೂಡ ವೈರ್‌ಗಳನ್ನು ಹಿಡಿದುಕೊಂಡು ಓಡಾಡುತ್ತಾರೆ. ತಾವು ಅದರ ಬಗ್ಗೆ ಚರ್ಚಿಸಿ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಬೇಕು.

**ಸಭಾಪತಿಯವರು:–** ಏನು ಅನುಕೂಲವಾಗುತ್ತದೋ ನೋಡೋಣ. ಓಡಾಡುವಾಗ ವೈರುಗಳು ಕಾಲಿಗೆ ಸಿಕ್ಕದ ಹಾಗೆವ್ಯವಸ್ಥೆಯಾಗಬೇಕು.

**ಶ್ರೀ ಎಂ.ಸಿ. ನಾಣಯ್ಯ:–** ಮಾಧ್ಯಮದವರು ಮೇಲೆ ಹೋಗಿದ್ದರಿಂದ ಏನೇನು ಅನಾನುಕೂಲವಾಯಿತು ಎಂದು ನಮಗೆ ತಮಗೆಲ್ಲರಿಗೂ ಗೊತ್ತಿದೆ. ಅದೇ ರೀತಿಯ ಅನಾನುಕೂಲ ಇಲ್ಲಿ ಆಗುವುದು ಬೇಡ.

**ಸಭಾಪತಿಯವರು:–** ನಮ್ಮ ಸದನದಲ್ಲಿ ಆ ರೀತಿ ಮಾಡುವವರು ಯಾರೂ ಇಲ್ಲ. ತಾವು ತಮ್ಮ ಪ್ರಶ್ನೆಯನ್ನು ಕೇಳಿಬಿಡಿ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡಿದವರಿಗೆ ಮಾತ್ರ ಬಡ್ಡಿ ರಿಯಾಯ್ತಿ ಸಿಗುತ್ತದೆ ಎಂದು ಹೇಳಿದ್ದೀರಿ. ಸಾಲ ಕಟ್ಟುವುದಕ್ಕೆ ಆಗದೇ ಇರುವುದರಿಂದಲೇ ಸಾಲ ಮರುಪಾವತಿ ಮಾಡುವುದಕ್ಕೆ ತಡವಾಗಿರುತ್ತದೆ. ಈ ಸಾಲ ಮರುಪಾವತಿ ಮಾಡುವುದಕ್ಕೆ ತಡವಾಗಿರುವ ವಿಚಾರವನ್ನು ಕೂಡ ಹೇಳಿದ್ದಿರಿ. ಮತ್ತು ಕೇಂದ್ರ ಸರ್ಕಾರದ್ದನ್ನು ಕೂಡ ಇಲ್ಲಿ ಹೇಳಿದ್ದೀರಿ. ಶೇಕಡಾ 3 ಪರ್ಸೆಂಟ್ ಸಹಾಯಧನವನ್ನು ಕೊಡುತ್ತೇವೆಂದು ಹೇಳಿದ್ದೀರಿ ಇದನ್ನು ನಾನು ಒಪ್ಪುತ್ತೇನೆ. ಸಕಾಲದಲ್ಲಿ ಕಟ್ಟಿದವರಿಗೆ ಮಾತ್ರ ಕೊಡುತ್ತೇವೆಂದು ಏಕೆ ಹೇಳುತ್ತಿದ್ದೀರಿ. ರೈತರ ಪರಿಸ್ಥಿತಿ ತಮಗೆಲ್ಲರಿಗೂ ಗೊತ್ತಿದೆ. ಒಂದು ಸಲ ಕಟ್ಟುತ್ತಾರೆ ಒಂದು ಸಲ ಕಟ್ಟುವುದಿಲ್ಲ. ಕೃಷಿಕರಿಗೆ ಪ್ರೋತ್ಸಾಹ ಕೊಡುವುದಾದರೆ ಇದಕ್ಕೆ ಯಾವುದೇ ಒಂದು ಮಿತಿಯನ್ನು ಹಾಕದೆ ಹಿಂದೆ ಯಾವ ರೀತಿ ಇತ್ತೋ ಅದೇ ರೀತಿ ಮುಂದುವರೆಯುವುದು ಒಳ್ಳೆಯದೆಂದು ಹೇಳಬಯಸುತ್ತೇನೆ.

**ಶ್ರೀ ಬಿ.ಜಿ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಸಾಲವನ್ನು ಮರುಪಾವತಿ ಮಾಡುವುದರಲ್ಲಿ ಎರಡು ವಿಧ ಇದೆ. ಸಣ್ಣ ರೈತರು, ಮತ್ತು ದೊಡ್ಡ ರೈತರು ಅಂದರೆ wilfully defaulter. ಸರ್ಕಾರದಿಂದ ಸಹಾಯವನ್ನು ಏನು ಕೊಟ್ಟಿದೆ ಅದರ ಸದುಪಯೋಗ ಮಾಡಿಕೊಂಡು ಸಾಲವನ್ನು ಪಡೆಯುತ್ತಿದ್ದಾರೆ. ಆ ಸಾಲವನ್ನು ಪಡೆದುಕೊಂಡಂತಹ ಒಟ್ಟು ಸಾಲಗಾರರ ಪೈಕಿ ಸಣ್ಣ ಮತ್ತು ಅತಿ ಸಣ್ಣ ರೈತರು ಶೇಕಡ 83.14 ಪರ್ಸೆಂಟ್

ಇದ್ದಾರೆ. ಮತ್ತು ಆ ಸಾಲಗಾರರಿಂದ collections ಅಂದರೆ ವಸೂಲಿ ಆಗುತ್ತಿರತಕ್ಕಂತಾದ್ದು ಶೇಕಡ 95 ಪರ್ಸೆಂಟ್ ಇದೆ. Large Scale ನಲ್ಲಿ ಸಾಲ ತೆಗೆದುಕೊಂಡಂತಹ ರೈತರು ಕೇವಲ 1.4 ಪರ್ಸೆಂಟ್ ಇದ್ದಾರೆ. ಆ 1.4 ಪರ್ಸೆಂಟ್‌ನಲ್ಲಿ ಕೇವಲ 41 ಪರ್ಸೆಂಟ್ ರೈತರು ಸಾಲವನ್ನು ಕಟ್ಟುತ್ತಿದ್ದಾರೆ. ನಿಜವಾಗಲೂ ಇವತ್ತು ಸರ್ಕಾರದ ಸೌಲಭ್ಯವನ್ನು ಉಪಯೋಗಿಸಿಕೊಂಡು ಈ ದೇಶಕ್ಕೆ ಅನ್ನವನ್ನು ಕೊಡುತ್ತಿದ್ದಾರೆ. ಆದರೆ ಇವತ್ತು ತಾವು ಹೇಳಿದ ಹಾಗೆ ದೀರ್ಘಾವಧಿ ಸಾಲಗಾರರು ರಿಯಾಯ್ತಿ ದರದಲ್ಲಿ ಸಾಲವನ್ನು ಪಡೆಯುವುದು . . . .

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಈ ವಾದ ಎಲ್ಲ ಬೇಡ.

**ಶ್ರೀ ಬಿ.ಜಿ.ಪುಟ್ಟಸ್ವಾಮಿ:–** ನಾನು ಮುಗಿಸಿ ಬಿಡುತ್ತೇನೆ. Willfully they are not paying. ಯಾವುದೋ ಒಂದು concession ಬರುತ್ತದೆ ಯಾವುದೋ ಒಂದು Waive off ಬರುತ್ತದೆ ಎಂಬುದನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಮಾಡುತ್ತಿದ್ದಾರೆ. ಯಾರು ನಿಜವಾಗಿಯೂ ಬಡ ರೈತರಿದ್ದಾರೆ ಮತ್ತು ಈ ಸೌಲಭ್ಯವನ್ನು ಸರಿಯಾದ ರೀತಿಯಲ್ಲಿ ಪಡೆದುಕೊಳ್ಳುತ್ತಾರೆ ಅಂತಹವರಿಗೆ ಸರ್ಕಾರ ಈ ಸೌಲಭ್ಯವನ್ನು ಕೊಟ್ಟಿದೆ. ಮೊದಲು ನೀವು ಹೇಳಿದ ಹಾಗೆ ರಿಯಾಯ್ತಿ ಬಡ್ಡಿ ದರ ಇರಲಿಲ್ಲ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಹೆಚ್ಚಿನ ಅನುಕೂಲ ಮಾಡಬೇಕೆಂಬ ಉದ್ದೇಶದಿಂದ ಇದನ್ನು ಮಾಡಿದೆ. ಇದು ಸಫಲವಾಗಿ ಕೆಲಸ ಆಗುತ್ತಿದೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಯಾವುದೇ ಒಂದು ವಾದವನ್ನು ಮಾಡಬೇಕಾದರೂ ಕೂಡ ಹಿಂದೆ ಹೇಗೆ ಇತ್ತು ಯಾವ ರೀತಿ ಇದೆ ಎಂದು ಹೇಳಬೇಕಾಗುತ್ತದೆ. 2004–05 ರಿಂದ 2010–11 ರತನಕ ಯಾವುದೇ ಮಿತಿಯನ್ನು ಹಾಕಿಲ್ಲ. ಈಗ ಏಕೆ ಕಥೆ ಹೇಳುತ್ತಿದ್ದೀರಿ. ಆಗಲೂ defaulters ಎಲ್ಲವೂ ಇತ್ತು. ಈಗ ಎಲ್ಲಿ ಹೋಯಿತು. ನೀವು ಇಲ್ಲಿ ಉತ್ತರವನ್ನು ಹೇಳುವುದಕ್ಕೆ ಮೊದಲು ತಾವು ತಮ್ಮನ್ನು convince ಮಾಡಿಕೊಳ್ಳಬೇಕು.

**ಶ್ರೀ ಬಿ.ಜಿ.ಪುಟ್ಟಸ್ವಾಮಿ:–** 2011 ರ ಮೇಲೆ ಶೂನ್ಯ ಬಡ್ಡಿ ದರದಲ್ಲಿ ಸಾಲವನ್ನು ಕೊಡುತ್ತಿದ್ದೇವೆ.

**ಶ್ರೀ ಎಸ್.ಆರ್. ಪಾಟೀಲ್:–** ದಾಖಲೆಯಲ್ಲಿ ತಪ್ಪು ಹೋಗುತ್ತಿದೆ. Medium term loan ತೆಗೆದುಕೊಂಡದ್ದು recovery ಕಡಿಮೆ ಇದೆ. ಮಧ್ಯಮಾವಧಿ ಸಾಲವನ್ನು ಸಣ್ಣ ರೈತರು ಮತ್ತು ದೊಡ್ಡ ರೈತರೂ ತೆಗೆದುಕೊಳ್ಳುತ್ತಾರೆ. ಆ ಸಾಲ ಮರುಪಾವತಿ ಸ್ವಲ್ಪ ಕಡಿಮೆ ಇದೆ.. ಶೂನ್ಯ ಬಡ್ಡಿ ಇರುವ ಅಲ್ಪಾವಧಿ ಸಾಲದ recovery ಜಾಸ್ತಿ ಇದೆ. Just to avail that lower rate of interest or to avail zero percent interest they are doing that. Medium term loan ತೆಗೆದುಕೊಂಡವರು ದೊಡ್ಡ ರೈತರು ಎಂದು ಹೇಳುತ್ತಿದ್ದಾರೆ. ಅದು ಸರಿಯಲ್ಲ.

**ಸಭಾಪತಿಯವರು:–** ದೊಡ್ಡ / ಸಣ್ಣ ರೈತರು ಅಲ್ಲ. ಮಧ್ಯಮಾವಧಿ ಸಾಲವನ್ನು ತೆಗೆದುಕೊಂಡವರು ಎಂದು ಹೇಳಬೇಕು ಅಷ್ಟೆ.

**ಶ್ರೀ ಎಸ್. ಆರ್. ಪಾಟೀಲ್:–** ತಾವು ಹೊಸದಾಗಿ ಸಚಿವರಾಗಿದ್ದೀರಿ, recently you have occupied the position. ಇದು ಬಹಳ ಮಹತ್ವದ ಖಾತೆಯಾಗಿದೆ. ಅದು ಹಾಗಲ್ಲ. ಅದು ತಪ್ಪು ಮಾಹಿತಿ. ಮಧ್ಯಮಾವಧಿ ಸಾಲಕ್ಕೆ ಬಡ್ಡಿ ದರ ಹೆಚ್ಚು ಇದೆ ಮತ್ತು ಈ ಸಾಲದ recovery percentage ಕಡಿಮೆ ಇದೆ. ಮಾನ್ಯ ಗೌರವಾನ್ವಿತ ಶಾಸಕರು ಹೇಳಿದ ಹಾಗೆ ಶೇಕಡ 6–4 ಪರ್ಸೆಂಟ್ ಬಡ್ಡಿ ದರ ಇದ್ದಾಗ, ಮತ್ತು 3 ಪರ್ಸೆಂಟ್ ಬಡ್ಡಿ ದರ ಏನು ಇತ್ತು ಆಗ ಅಲ್ಪಾವಧಿ ಸಾಲಕ್ಕೆ ಮಿತಿ ಇರಲಿಲ್ಲ. ಈಗ ಏಕೆ ಮಿತಿಯನ್ನು ಹಾಕಿದ್ದೀರಿ ಎಂದು ಅವರು ಕೇಳುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಚಿವರೆ ತಾವು ಉತ್ತರವನ್ನು ಹೇಳುವಾಗ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಅಂಶವನ್ನು ಗಮನಿಸಿದ್ದಾರೆ. ಮಧ್ಯಮಾವಧಿ ಸಾಲವನ್ನು ಎಲ್ಲರೂ ತೆಗೆದುಕೊಂಡಿದ್ದಾರೆ. ಅದರಲ್ಲಿ recovery ಕಡಿಮೆ ಇದೆ. ಅಲ್ಪಾವಧಿ ಸಾಲದ ರೆಕವರಿ ಜಾಸ್ತಿ ಇದೆ. ಇಷ್ಟಕ್ಕೆ ನಿಲ್ಲಿಸಬೇಕಿತ್ತು. ಅದರ ಬದಲಿಗೆ ಮಧ್ಯಮಾವಧಿ ಸಾಲ

ತೆಗೆದುಕೊಂಡವರು ಶ್ರೀಮಂತ ರೈತರು ಎಂಬ ಪದವನ್ನು ಉಪಯೋಗಿಸಿದಿರಿ ಅದು ಸರಿಯಲ್ಲವೆಂದು ಅವರು ಹೇಳುತ್ತಿದ್ದಾರೆ. ರೆಕಾರ್ಡ್ ಅನ್ನು ಸರಿ ಮಾಡುವ ಸಲುವಾಗಿ ಹೇಳುತ್ತಿದ್ದಾರೆ. You make the record straight ಅಷ್ಟೆ. ದೊಡ್ಡ ರೈತರು ಸಣ್ಣ ರೈತರು ಎಂಬ ಪ್ರಶ್ನೆ ಇಲ್ಲಿ ಬೇಡ.

**ಶ್ರೀ ಬಿ.ಜಿ. ಪುಟ್ಟಸ್ವಾಮಿ:–** ಅಲ್ಪಾವಧಿ ಬೆಳೆ ಸಾಲದ 1 ಲಕ್ಷ ರೂಪಾಯಿಯವರೆಗೆ ಶೂನ್ಯ ಬಡ್ಡಿ, ಮೂರು ಲಕ್ಷ ರೂಪಾಯಿಯವರೆಗೆ 1 ಪರ್ಸೆಂಟ್, 3 ಲಕ್ಷದ ಮೇಲೆ ಸಾಲ ತೆಗೆದುಕೊಂಡರೆ ಸಾಮಾನ್ಯ ಬಡ್ಡಿ.

**ಸಭಾಪತಿಯವರು:–** ಸರಿ ಇದೆ. He has made it straight.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ನೀವು ಒಂದು ಪ್ರಶ್ನೆಗೆ ಉತ್ತರವನ್ನು ಕೊಟ್ಟಿಲ್ಲ. ಈಗ 3 ಪರ್ಸೆಂಟ್, 4 ಪರ್ಸೆಂಟ್ 6 ಪರ್ಸೆಂಟ್ ಇದ್ದಾಗ limitations ಇರಲಿಲ್ಲ. ಈಗ ಏಕೆ limitation ಹಾಕಿದಿರಿ. ತಾವು ಉತ್ತರವನ್ನು ಕೊಡಿ. ಸಕಾಲದಲ್ಲಿ ಸಾಲ ಮರು ಪಾವತಿ ಮಾಡುವ ರೈತರಿಗೆ ಕೇಂದ್ರ ಸರ್ಕಾರ ಶೇಕಡ 3 ಪರ್ಸೆಂಟ್ ಬಡ್ಡಿಯಲ್ಲಿ ಪ್ರೋತ್ಸಾಹಧನವನ್ನು ನೀಡುತ್ತದೆ ಅದು ಸರಿ. ಆದರೆ ನೀವು ಸಕಾಲದಲ್ಲಿ ಕಟ್ಟಿದವರಿಗೆ ಏಕೆ ಬಡ್ಡಿಯಲ್ಲಿ ರಿಯಾಯ್ತಿಯನ್ನು ಕೊಡುತ್ತಿಲ್ಲ. ಇವೆರಡು ಪ್ರಶ್ನೆಗಳಿಗೆ ಉತ್ತರವನ್ನು ಕೊಡಿ.

**ಶ್ರೀ ಬಿ.ಜಿ. ಪುಟ್ಟಸ್ವಾಮಿ:–** ಪ್ರಾಮಾಣಿಕ ರೈತರು ಪಡೆದಂಥ ಸಾಲವನ್ನು ಸರ್ಕಾರಕ್ಕೆ ವಾಪಸ್ ಕೊಟ್ಟಾಗ ಅವರಿಗೆ ಪ್ರೋತ್ಸಾಹವನ್ನು ಕೊಡಲೇಬೇಕು. ಸಾಲವನ್ನು ತೆಗೆದುಕೊಂಡು ಸಾಲವನ್ನು ಕಟ್ಟದಿದ್ದರೆ ಸುಸ್ತಿದಾರರಾದರೆ, ರೈತರಿಗೆ ನಾವು ಸಹಾಯ ಮಾಡುವುದು ಹೇಗೆ? ಈ interest ಏನು? ಸಣ್ಣ ಮತ್ತು ಅತಿ ಸಣ್ಣ ರೈತರು ತಮ್ಮ ಬೆಳೆಗಳನ್ನು ಬೆಳೆಯುವುದಕ್ಕೆ ಅನುಕೂಲವಾಗಲೀ ಎಂಬ ಉದ್ದೇಶದಿಂದ ಶೂನ್ಯ ಬಡ್ಡಿಯಲ್ಲಿ ಸಾಲವನ್ನು ನೀಡಲಾಗಿದೆ. ದೊಡ್ಡ ರೈತರು ಟ್ರ್ಯಾಕ್ಟರ್ ಅನ್ನು ಇಟ್ಟಿರುತ್ತಾರೆ. ದೀರ್ಘಾವಧಿ ಸಾಲವನ್ನು ಪಡೆದವರು ಹೆಚ್ಚಿನ ಬೆಳೆಯನ್ನು ಪಡೆಯುತ್ತಿದ್ದಾರೆ. ಸಾಮಾನ್ಯ ಸಾಮಾಜಿಕ ನ್ಯಾಯವೆಂದು ಏನು ಹೇಳುತ್ತೇವೆ ಮತ್ತು ಸಣ್ಣ ರೈತರು ಏನು ಇದ್ದಾರೆ ಅವರಿಗೆ ಅನುಕೂಲವಾಗಲೀ ಎಂಬ ದೃಷ್ಟಿಯಿಂದ ಈ ರೀತಿ

ಮಾಡಿದ್ದೇವೆ. ಈ ಶೂನ್ಯ ಬಡ್ಡಿಯಲ್ಲಿ ಸಾಲವನ್ನು ನೀಡಿದ ಮೇಲೆ ರೆಕವರಿ ಚೆನ್ನಾಗಿ ಇದೆ. ಮತ್ತು ಸಂಸ್ಥೆ ಕೂಡ ಚೆನ್ನಾಗಿ ನಡೆಯುತ್ತಿದೆ.

**ರಾಜ್ಯದಲ್ಲಿರುವ ದೇವದಾಸಿಯರ ಪುನರ್ವಸತಿ ಬಗ್ಗೆ**

**692; ಶ್ರೀ ಆರ್.ವಿ. ವೆಂಕಟೇಶ್ (ವಿಧಾನಸಭೆಯಿಂದ ಚುನಾಯಿತರಾದವರು)**

**ಅ)** ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಇತ್ತೀಚಿನ ಸರ್ವೇ ಪ್ರಕಾರ ಗುರುತಿಸಲ್ಪಟ್ಟ ದೇವದಾಸಿಯರ ಸಂಖ್ಯೆ ಎಷ್ಟು; ಸರ್ಕಾರವು ಈ ದೇವದಾಸಿ ಪುನರ್ ವಸತಿ ಹಾಗೂ ಕಲ್ಯಾಣ ಕಾರ್ಯಕ್ರಮಗಳಿಗೆ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ; (ಸಂಪೂರ್ಣ ವಿವರ ನೀಡುವುದು)

**ಆ)** ಈ ದೇವದಾಸಿಯರ ಸಂಖ್ಯೆಯಲ್ಲಿ ಪುನರ್ ವಸತಿಯನ್ನು ಹೊಂದಿರುವವರ ಸಂಖ್ಯೆ ಎಷ್ಟು;

**ಇ)** ಉದ್ಯೋಗಿನಿ ಕಾರ್ಯಕ್ರಮದ ಫಲಾನುಭವಿಗಳು ಹಾಗೂ ತರಬೇತಿ ಪಡೆದವರ ಸಂಖ್ಯೆ ಎಷ್ಟು?

**ಶ್ರೀ ಕಳಕಪ್ಪ ಜಿ. ಬಂಡಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)**

**ಅ)** ಸರ್ಕಾರಿ ಆದೇಶ ಸಂಖ್ಯೆ: ಮಮಇ 25 ಮಅನಿ 2009(1), ದಿನಾಂಕ:08-12-2011ರನ್ವಯ 2007-08ನೇ ಸಾಲಿನಲ್ಲಿ ರಾಜ್ಯದ 14 ಜಿಲ್ಲೆಗಳಲ್ಲಿ 23,787 ಮಾಜಿ ದೇವದಾಸಿಯರನ್ನು ಮರು ಸಮೀಕ್ಷೆಯಿಂದ ಗುರುತಿಸಲಾಗಿದೆ. ಮಾಜಿ ದೇವದಾಸಿ ಮಹಿಳೆಯರಿಗೆ ಪುನರ್ವಸತಿ ಕಲ್ಪಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಮಾಜಿ ದೇವದಾಸಿ ಮಹಿಳೆಯರಿಗೆ ಮಾಶಾಸನ,

2. ಮಾಜಿ ದೇವದಾಸಿ ಮಹಿಳೆಯರಿಗೆ ಕಿರುಸಾಲ ಯೋಜನೆ

3. ಮಾಜಿ ದೇವದಾಸಿ ಮಹಿಳೆಯರಿಗೆ ಪುನರ್ವಸತಿ ಯೋಜನೆಗಳಾದ ಆದಾಯ ಉತ್ಪನ್ನಕರ ಚಟುವಟಿಕೆ, ಜಾತ್ರಾ ಜಾಗೃತಿ ಕಾರ್ಯಕ್ರಮಗಳು, ಆರೋಗ್ಯ ಶಿಬಿರ ಕಾರ್ಯಕ್ರಮ,

4. ಮಾಜಿ ದೇವದಾಸಿ ಮಹಿಳೆಯರಿಗೆ ಘಟಕ ವೆಚ್ಚ ₹ 40,000/– ಗಳಲ್ಲಿ ವಸತಿ ಸೌಲಭ್ಯ ಯೋಜನೆ.

ಆ) 2012–13ನೇ ಸಾಲಿನಲ್ಲಿ 4000 ಮಾಜಿ ದೇವದಾಸಿಯರಿಗೆ ಪುನರ್ ವಸತಿ ಕಲ್ಪಿಸಲು ಗುರಿ ಹೊಂದಲಾಗಿದೆ.

ಇ) 2011–12ನೇ ಸಾಲಿನಲ್ಲಿ 14488 ಫಲಾನುಭವಿಗಳಿಗೆ ಸಾಲ ಸೌಲಭ್ಯವನ್ನು ಕಲ್ಪಿಸಿದೆ ಹಾಗೂ ತರಬೇತಿಯನ್ನು ಸಹ ನೀಡಲಾಗಿದೆ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ದೇವದಾಸಿಯರ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ. ಉತ್ತರದಲ್ಲಿ ಮಾಜಿ ದೇವದಾಸಿಯರ ಬಗ್ಗೆ ಕೊಟ್ಟಿದ್ದಾರೆ. ನಮ್ಮ ಸರ್ಕಾರ ಈ ದೇವದಾಸಿಯರ ಪದ್ಧತಿಯನ್ನು ರದ್ದು ಮಾಡಿದ್ದರೂ ಕೂಡ ವಂಶಪಾರಂಪರ್ಯವಾಗಿ ಬಂದಿರತಕ್ಕಂಥಹ ಕಸಬು ಎಂದು ಹೇಳಬಹುದು. ನಮ್ಮ ರಾಜ್ಯದ 14 ಜಿಲ್ಲೆಗಳಲ್ಲಿ ಈ ಒಂದು ಪದ್ಧತಿ ಇದೆ. ಈ 14 ಜಿಲ್ಲೆಗಳ ಪೈಕಿ ಉತ್ತರ ಕರ್ನಾಟಕದ ಜಿಲ್ಲೆಗಳು ಹೆಚ್ಚು ಇವೆ. ಮಾನ್ಯ ಸಚಿವರು ಆ ಜಿಲ್ಲೆಗಳಿಂದಲೇ ಬಂದಿರತಕ್ಕಂಥಹವರು. ಗೊತ್ತು ಗೊತ್ತಿಲ್ಲದ ಹಾಗೆ ಆ ಒಂದು ವೃತ್ತಿ ಇವತ್ತಿಗೂ ಕೂಡ ನಡೆಯುತ್ತಲೇ ಇದೆ. ಆದುದರಿಂದ ಅವರನ್ನು ದೇವದಾಸಿಯರೆಂದೇ ಪರಿಗಣಿಸಿದ್ದು ಇತ್ತೀಚೆಗಿನ ಸರ್ವೆಯಲ್ಲಿ ಅವರನ್ನು ಎಸ್.ಟಿ. ಜನಾಂಗದವರು ಎಂದು ಗುರುತಿಸಿದ್ದೀರಾ ಎಂದು ಪ್ರಶ್ನೆ ಕೇಳುತ್ತಿದ್ದೇನೆ. ಏಕೆಂದರೆ ಆಗಾಗ ಆ ಭಾಗದ ಜನರ ಜೊತೆಗೆ ಮಾತನಾಡುವಾಗ ಕೂಡ ಈ ಒಂದು ವೃತ್ತಿ ಸಂಪೂರ್ಣವಾಗಿ ಬಂದ್ ಆಗಿಲ್ಲ ಎಂದು ಗೊತ್ತಾಗುತ್ತದೆ. ಅದರ ಜೊತೆಗೆ ಆಗಾಗ ಇದು ಮಾಧ್ಯಮಗಳಲ್ಲಿ ಬರುತ್ತಿರುತ್ತದೆ. ನಾನು ಆ ಉದ್ದೇಶದಿಂದ ಈ ಪ್ರಶ್ನೆಯನ್ನು ಕೇಳಿದ್ದೇನೆ. ನೀವು ಮಾಜಿ ದೇವದಾಸಿಯವರು ಎಂದು ಕೊಟ್ಟಿದ್ದೀರಿ. ಅದು ಒಂದು ಕಡೆ ಇರಲಿ. ಮಾಜಿ ದೇವದಾಸಿಯವರಾದರು

ಸಹ 2007–08ನೇ ಸಾಲಿನಲ್ಲಿ ರಾಜ್ಯದಲ್ಲಿ 14 ಜಿಲ್ಲೆಗಳಲ್ಲಿ 23,787 ಮಾಜಿ ದೇವದಾಸಿಯವರನ್ನು ಗುರುತಿಸಿದ್ದೀರಿ. ಅದರಲ್ಲಿ 2011–12ರಲ್ಲಿ 14,488 ಮಾಜಿ ದೇವದಾಸಿಯವರು ಈ ಒಂದು ಕಾರ್ಯಕ್ರಮದಿಂದ ಲಾಭ ಪಡೆದಿದ್ದಾರೆ, ಫಲಾನುಭವಿಗಳಾಗಿದ್ದಾರೆಂದು ಇದೆ. ಹಾಗಾದರೆ ಉಳಿದ ಅರ್ಧದಷ್ಟು ದೇವದಾಸಿಯರು ಏನು ಮಾಡಬೇಕು? ಅವರು ಈ ವೃತ್ತಿಯನ್ನೆ ನಂಬಿಕೊಂಡು ಜೀವನ ನಡೆಸತಕ್ಕಂಥವರು. ಅವರಿಗೆ ಕಂತಿನಲ್ಲಿ ಈ ವರ್ಷ ಇಷ್ಟು ಜನರಿಗೆ ಎಂದು ಕಂತಿನಲ್ಲಿ ಕೊಟ್ಟುಕೊಂಡು ಬಂದರೆ ಅವರು ಮತ್ತೆ ಅದೇ ವೃತ್ತಿಗೆ ಹೋಗುತ್ತಾರೆ. ಅವರಿಗೆ ಏನೇ ಪರಿಹಾರ ಇರಲಿ, ಏನೇ ಸೌಲಭ್ಯ ಇರಲಿ ಅದು one time ಆಗಬೇಕು. ಅವರಿಗೆ ನೀವು package ರೀತಿಯಲ್ಲಿ ಈ ವರ್ಷ 4000 ಜನರಿಗೆ ಕೊಟ್ಟರೆ ಮಿಕ್ಕಿದವರು ಏನು ಮಾಡಬೇಕು? ಆದ್ದರಿಂದ ಮಾನ್ಯ ಸಚಿವರಲ್ಲಿ ಮನವಿ ಏನೆಂದರೆ ಎಲ್ಲರನ್ನು ಒಟ್ಟಿಗೆ ಗುರುತಿಸಿ ಏನು ಸೌಲಭ್ಯಗಳಿವೆ ಅವುಗಳನ್ನು ಒಟ್ಟಿಗೆ ಕೊಟ್ಟರೆ ಆ ಒಂದು community ಆ ಒಂದು ವೃತ್ತಿಯಿಂದ ದೂರ ಆಗಿ ಆ ಅನಿಷ್ಠ ತೊಲಗುತ್ತದೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಕಳಕಪ್ಪ ಬಂಡಿ:–** ಮಾನ್ಯ ಸಭಾಪತಿಯವರೆ, 1989ನೇ ಸಾಲಿನಲ್ಲಿ ದೇವದಾಸಿ ಪದ್ಧತಿಯನ್ನು ನಿಷೇಧ ಮಾಡಲಾಗಿದೆ. 1993–94ರ ಸರ್ವೆ ಪ್ರಕಾರ 22,873 ದೇವದಾಸಿಯರನ್ನು ಗುರುತಿಸಲಾಗಿದೆ. 2007–08ರಲ್ಲಿ 22,780 ದೇವದಾಸಿಯರನ್ನು ಸೇರಿ ಒಟ್ಟು 46,000 ಮಾಜಿ ದೇವದಾಸಿಯರನ್ನು ಗುರುತಿಸಲಾಗಿದೆ. ನಾನು ನಮ್ಮ ಇಲಾಖೆಯಿಂದ ಹಲವಾರು ಯೋಜನೆಗಳನ್ನು ಮಾಡಿದ್ದೇವೆ. 45 ವರ್ಷ ಮೇಲ್ಪಟ್ಟವರಿಗೆ 400 ರೂಪಾಯಿ ಕೊಡುವಂಥ ಯೋಜನೆಗಳನ್ನು ಕೂಡ ನಾವು ಈಗಾಗಲೇ ಜಾರಿಗೆ ತಂದಿದ್ದೇವೆ. ಹಾಗೂ ಕೊಡುತ್ತಿದ್ದೇವೆ. ಅವರದೇ ಆದಂಥ ಮಹಿಳಾ ಸ್ವಸಹಾಯ ಸಂಘಗಳನ್ನು ಮಾಡಿದರೆ ಅವರಿಗೆ ಹತ್ತು ಸಾವಿರ ರೂಪಾಯಿ ಸಹಾಯ ಧನವನ್ನು ಕೊಡುತ್ತಿದೇವೆ. ಮತ್ತು ಬ್ಯಾಂಕ್ ಮುಖಾಂತರ ಕೂಡ ಹತ್ತು ಸಾವಿರ ರೂಪಾಯಿ ಸಾಲವನ್ನು ಕೊಡಿಸುವಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಇಂತಹ ಪದ್ದತಿಯನ್ನು ಹೋಗಲಾಡಿಸಲಿಕ್ಕೆ ನಾವು ಜನ

ಜಾಗೃತಿಯನ್ನು ಮೂಡಿಸುವಂಥ ಕೆಲಸವನ್ನು ಮಾಡುತ್ತಿದ್ದೇವೆ. ಅದರ ಜೊತೆಗೆ ನಮ್ಮ ಉದ್ಯೋಗಿನಿ ಎಂದು ಒಂದು ಕಾರ್ಯಕ್ರಮ ಇದೆ ಅದರಲ್ಲಿ ಕೂಡ ಸಾಲ ಮತ್ತು ಸಹಾಯಧನವನ್ನು ಕೊಡಿಸುವಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಅವರಿಗೆ ಮನೆ ಇಲ್ಲದಿದ್ದರೆ ನಲವತ್ತು ಸಾವಿರ ರೂಪಾಯಿ ವೆಚ್ಚದಲ್ಲಿ ಮನೆಯನ್ನು ಕಟ್ಟಿಸಿ ಕೊಡುವಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಇನ್ನು ಅವರಿಗೆ ಉಪ ಜೀವನವನ್ನು ಮಾಡಲಿಕ್ಕೆ ಏನೇನು ಸಹಕಾರ ಬೇಕೋ ಅದನ್ನು ಮಾಡಿ ಕೊಡುತ್ತೇವೆಂದು ಈ ಮೂಲಕ ಹೇಳಬಯಸುತ್ತೇನೆ.

## ಬೆಂಗಳೂರು ಶಿಕ್ಷಣ ಕ್ಷೇತ್ರ ವ್ಯಾಪ್ತಿಯ ಶಾಲಾಕಾಲೇಜುಗಳಲ್ಲಿ ಹುದ್ದೆ ತುಂಬಲು ಅನುಮತಿ ನೀಡುವ ಬಗ್ಗೆ

### 696; ಶ್ರೀ ಪುಟ್ಟಣ್ಣ [ಶಿಕ್ಷಣ ಕ್ಷೇತ್ರ]

**ಅ)** ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ರಾಮನಗರ ಜಿಲ್ಲೆಯಲ್ಲಿರುವ ಅನುದಾನಿತ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು; [ವಿಳಾಸ ಸಹಿತ ಮಾಹಿತಿ ನೀಡುವುದು]

**ಆ)** ಸದರಿ ಶಾಲಾ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಬೋಧಕೇತರರ ಸಂಖ್ಯೆ ಎಷ್ಟು; [ವಿವರ ನೀಡುವುದು]

**ಇ)** ಸದರಿ ಶಾಲಾ ಕಾಲೇಜುಗಳಲ್ಲಿ ಆರ್ಥಿಕ ಮಿತವ್ಯಯ ಕಾರಣ ನೀಡಿ ನಿವೃತ್ತಿ, ರಾಜೀನಾಮೆ, ಮರಣ ಇತ್ಯಾದಿ ಕಾರಣಗಳಿಂದ ತೆರವಾಗಿರುವ ಹುದ್ದೆಗಳನ್ನು ಭರ್ತಿ ಮಾಡದೆ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಈ)** ಖಾಲಿ ಹುದ್ದೆಗಳನ್ನು ತುಂಬಲುಸರ್ಕಾರಕ್ಕಿರುವ ತೊಂದರೆಗಳೇನು;

**ಉ)** ಯಾವ ಕಾಲಮಿತಿಯಲ್ಲಿ ಹುದ್ದೆ ತುಂಬಲು ಅನುಮತಿ ನೀಡಲಾಗುತ್ತದೆ;

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ)

| ಕ್ರ.ಸಂ | ಜಿಲ್ಲೆಯ ಹೆಸರು | ಅನುದಾನಿತ ಪ್ರೌಢ ಶಾಲೆಗಳ ಸಂಖ್ಯೆ | ಪದವಿ ಪೂರ್ವ ಕಾಲೇಜುಗಳ ಸಂಖ್ಯೆ |
|---|---|---|---|
| 01 | ಬೆಂಗಳೂರು ಉತ್ತರ | 117 | 27 |
| 02 | ಬೆಂಗಳೂರು ದಕ್ಷಿಣ | 147 | 23 |
| 03 | ಬೆಂಗಳೂರು ಗ್ರಾಮಾಂತರ | 39 | 04 |
| 04 | ರಾಮನಗರ | 60 | 05 |

ವಿವರಗಳನ್ನು ಅನುಬಂಧ–01ರಲ್ಲಿ ಲಗ್ಗತ್ತಿಸಿದೆ.

ಆ)

| ಕ್ರ.ಸ | ಜಿಲ್ಲೆಯ ಹೆಸರು | ಅನುದಾನಿತ ಪ್ರೌಢಶಾಲೆಗಳ ಬೋಧಕ ಬೋಧಕೇತರ ಸಂಖ್ಯೆ | | ಪದವಿ ಪೂರ್ವ ಕಾಲೇಜುಗಳ ಬೋಧಕ ಬೋಧಕೇತರ ಸಂಖ್ಯೆ | |
|---|---|---|---|---|---|
| | | ಬೋಧಕ | ಬೋಧಕೇತರ | ಬೋಧಕ | ಬೋಧಕೇತರ |
| 01 | ಬೆಂಗಳೂರು ಉತ್ತರ | 986 | 198 | 275 | 125 |
| 02 | ಬೆಂಗಳೂರು ದಕ್ಷಿಣ | 1282 | 269 | 195 | 129 |
| 03 | ಬೆಂಗಳೂರು ಗ್ರಾಮಾಂತರ | 379 | 125 | 42 | 29 |
| 04 | ರಾಮನಗರ | 428 | 120 | 33 | 14 |

ವಿವರಗಳನ್ನು ಅನುಬಂಧ–02ರಲ್ಲಿ ಲಗ್ಗತ್ತಿಸಿದೆ.

ಇ) ಇಲ್ಲ.

ಈ) (1) 31.12.2088 ರವರೆಗೆ ಖಾಲಿ ಆಗಿರುವ ಪ್ರೌಢ ಶಾಲೆಗಳಲ್ಲಿನ ಬೋಧಕ ಹುದ್ದೆ ತುಂಬಲು ಅನುಮತಿ ನೀಡಲಾಗಿದೆ.

(2) 31.12.2011ರವರೆಗೆ ಖಾಲಿ ಆಗಿರುವ ಪದವಿ ಪೂರ್ವ ಕಾಲೇಜುಗಳಲ್ಲಿನ ಹುದ್ದೆಗಳನ್ನು ತುಂಬಲು ಅನುಮತಿ ನೀಡಲಾಗಿದೆ.

ಉ) ಶಿಕ್ಷಣ ಸಂಸ್ಥೆಗಳಿಂದ ಪ್ರಸ್ತಾವನೆ ಬಂದಂತೆ ನಿಯಮಾನುಸಾರ ಪರಿಶೀಲಿಸಿ ಆಯಾ ಆಯುಕ್ತಾಲಯಗಳಲ್ಲಿ ಹುದ್ದೆ ತುಂಬಲು ಅನುಮತಿ ನೀಡಲಾಗುತ್ತದೆ;

**ಅನುಬಂಧ–1**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಛೇರಿ, ಬೆಂಗಳೂರು**
**ಉತ್ತರ ಜಿಲ್ಲೆ, ಕೆ.ಜಿ. ರಸ್ತೆ, ಬೆಂಗಳೂರು–2**

**ಅನುದಾನಿತ ಪ್ರೌಢ ಶಾಲೆಗಳ ಪಟ್ಟಿ**

| ಕ್ರ. ಸಂ | ಶಾಲೆಯ ಹೆಸರು ಮತ್ತು ವಿಳಾಸ | ವಲಯ |
|---|---|---|
| 1. | ದೀನಸೇವಾ ಪ್ರೌಢಶಾಲೆ, ಕಮಲಾನಗರ, ಬೆಂಗಳೂರು | ಉ.ವ.–1 |
| 2. | ರಾಜಲಕ್ಷ್ಮೀ ಪ್ರೌಢಶಾಲೆ, ಕಮಲಾನಗರ, ಬೆಂಗಳೂರು | ಉ.ವ.–1 |
| 3. | ಎ.ಪಿ.ಪ್ರೌಢಶಾಲೆ, ಅಶೋಕಪುರಂ, ಬೆಂಗಳೂರು | ಉ.ವ.–1 |
| 4. | ಠಕ್ಕರ ಬಾಪಾ ಪ್ರೌಢಶಾಲೆ, ಬಾಷಾ ಗ್ರಾಮ, ಬೆಂಗಳೂರು | ಉ.ವ.–1 |
| 5 | ಶ್ರೀ ಸಿದ್ಧಗಂಗಾ ಪ್ರೌಢಶಾಲೆ, ಜಂಗಮ ಮಠ, ಶಿವನಗರ, ಬೆಂಗಳೂರು. | ಉ.ವ.–1 |
| 6. | ಜಗದ್ಗುರು ಶ್ರೀ ಜಯದೇವ ಪ್ರೌಢಶಾಲೆ, ಕಾಮಾಕ್ಷಿಪಾಳ್ಯ, ಬೆಂಗಳೂರು | ಉ.ವ.–1 |

| | | |
|---|---|---|
| 7. | ಪಿ.ವಿ.ಪಿ. ಬಾಲಕಿಯರ ಪ್ರೌಢಶಾಲೆ, 1ನೇ ಹಂತ ರಾಜಾಜಿನಗರ, ಬೆಂಗಳೂರು. | ಉ.ವ.–1 |
| 8 | ಎಸ್.ವಿ.ಎಸ್. ಪಾಂಡುರಂಗ ಪ್ರೌಢಶಾಲೆ, ಗೊರಗುಂಟೆ ಪಾಳ್ಯ, ಬೆಂಗಳೂರು. | ಉ.ವ.–1 |
| 9. | ಸರ್ವೋದಯ ವಿನೋಬ ಪ್ರೌಢಶಾಲೆ, ಪೀಣ್ಯ 2ನೇ ಹಂತ, ಬೆಂಗಳೂರು. | ಉ.ವ.–1 |
| 10. | ಎಸ್.ವಿ.ಎಸ್. ಸ್ಟ್ಯಾಂಡರ್ಡ್ ಪ್ರೌಢಶಾಲೆ, ಹೆಗ್ಗನಹಳ್ಳಿ ಕ್ರಾಸ್, ಲಕ್ಷ್ಮಣ ನಗರ, ಬೆಂ. | ಉ.ವ.–1 |
| 11 | ಶಂಕರೇಶ್ವರ ಪ್ರೌಢಶಾಲೆ, ಚಾಮುಂಡೇಶ್ವರಿ ನಗರ, ಲಗ್ಗೆರೆ, ಬೆಂಗಳೂರು. | ಉ.ವ.–1 |
| 12. | ಯೂನಿವರ್ಸಲ್ ಎಜುಕೇಷನ್ ಸೊಸೈಟಿ ಪ್ರೌಢಶಾಲೆ, ಪಶ್ಚಿಮ ಕಾರ್ಡ್ ರಸ್ತೆ, ಬೆಂ | ಉ.ವ.–1 |
| 13 | ಮೌಂಟ್ ಹರ್ಮನ್, ಪ್ರೌಢಶಾಲೆ, 6ನೇ ಹಂತ, ರಾಜಾಜಿನಗರ, ಬೆಂಗಳೂರು. | ಉ.ವ.–1 |
| 14. | ವೀಣಾ ಪ್ರೌಢಶಾಲೆ, ಲಕ್ಷ್ಮೀದೇವಿ ನಗರ, ಬೆಂಗಳೂರು. | ಉ.ವ.–1 |
| 15. | ವಿನಾಯಕ ಪ್ರೌಢಶಾಲೆ, ಸುಂಕದ ಕಟ್ಟೆ, ಬೆಂಗಳೂರು. | ಉ.ವ.–1 |
| 16 | ವಿಶ್ವೇಶ್ವರಯ್ಯ ಪ್ರೌಢಶಾಲೆ, ರಾಜಗೋಪಾಲನಗರ, ಪೀಣ್ಯ 2ನೇ ಹಂತ, ಬೆಂಗಳೂರು. | ಉ.ವ.–1 |
| 17. | ಚನ್ನಕೇಶವ ಪ್ರೌಢಶಾಲೆ, ಸೊಂಡೇಕೊಪ್ಪ, ಬೆಂಗಳೂರು. | ಉ.ವ.–1 |
| 18. | ಬಸವೇಶ್ವರ ಬಾಲಕಿಯರ ಪ್ರೌಢಶಾಲೆ, ಮಹಾಲಕ್ಷ್ಮೀಪುರಂ, ಬೆಂಗಳೂರು. | ಉ.ವ.–1 |

| | | |
|---|---|---|
| 19 | ಒಕ್ಕಲಿಗರ ಸಂಘ ಪ್ರೌಢಶಾಲೆ ಶ್ರೀಗಂಧದ ಕಾವಲು | ಉ.ವ.–1 |
| 20 | ಬಸವೇಶ್ವರ ಬಾಲಕರ ಪ್ರೌಢಶಾಲೆ ರಾಜಾಜಿನಗರ ಬೆಂ–86 | ಉ.ವ.–1 |
| 08 | ವಿವಿಎಸ್ ಪದವಿ ಪೂರ್ವ ಕಾಲೇಜು, ರಾಜಾಜಿನಗರ ಬೆಂಗಳೂರು | 08 | 06 |
| 09 | ಎಜಿಸಿಸಿ ಪದವಿ ಪೂರ್ವ ಕಾಲೇಜು(ಮಹಿಳಾ) ಕೆ. ಕಾಮರಾಜ ರಸ್ತೆ ಬೆಂಗಳೂರು | 07 | 05 |
| 10 | ಆರ್ಯ ವೈದ್ಯಶಾಲಾ ಪದವಿ ಪೂರ್ವ ಕಾಲೇಜು ಗಾಂಧಿನಗರ ಬೆಂಗಳೂರು | 05 | 01 |
| 11 | ಬಾಪೂಜಿ ಪದವಿ ಪೂರ್ವ ಕಾಲೇಜು ಮಾಗಡಿ ರಸ್ತೆ ಬೆಂಗಳೂರು | 06 | 04 |
| 12 | ಬಿಎಲ್ ಸಂಯುಕ್ತ ಪದವಿ ಪೂರ್ವ ಕಾಲೇಜು, ಜಾಲಹಳ್ಳಿ ಬೆಂಗಳೂರು | 20 | 07 |
| 13 | ಹಸನತ್ ಪದವಿ ಪೂರ್ವ ಕಾಲೇಜು ಹೆಣ್ಣೂರು ಬಂಡೆ, ಬೆಂಗಳೂರು | 07 | 02 |
| 14 | ಶ್ರೀಗಂಧದ ಕಾವಲು ಪದವಿ ಪೂರ್ವ ಕಾಲೇಜು, ಮಾಗಡಿ ರಸ್ತೆ, ಬೆಂಗಳೂರು | 05 | 01 |
| 15 | ಥಕ್ಕರ್‌ಬಾಪಾ ಪದವಿ ಪೂರ್ವ ಕಾಲೇಜು, ಬಾಪಾಗ್ರಾಮ, ಬೆಂಗಳೂರು | 06 | 01 |

| | | | |
|---|---|---|---|
| 16 | ಬಿಎನ್‌ಇಎಸ್ ಪದವಿ ಪೂರ್ವ ಕಾಲೇಜು ಮಹಾಲಕ್ಷ್ಮೀ ಲೇಔಟ್ ಬೆಂಗಳೂರು | 09 | 05 |
| 17 | ಸಿದ್ದಾರ್ಥ ಸಂಯುಕ್ತ ಪದವಿ ಪೂರ್ವ ಕಾಲೇಜು ಲಿಂಗರಾಜಪುರಂ ಬೆಂಗಳೂರು | 07 | 03 |
| 18 | ಆನಂದ ಸಂಯುಕ್ತ ಪದವಿ ಪೂರ್ವ ಕಾಲೇಜು ಯಶವಂತಪುರ ಬೆಂಗಳೂರು | 06 | 01 |
| 19 | ಪಿವಿಪಿ ಪದವಿ ಪೂರ್ವ ಕಾಲೇಜು, ಮಹಿಳಾ ರಾಜಾಜಿನಗರ ಬೆಂಗಳೂರು | 07 | 01 |
| 20 | ಎಎಂಎಸ್ ಸಂಯುಕ್ತ ಪದವಿ ಪೂರ್ವ ಕಾಲೇಜು ಮಹಾಲಕ್ಷ್ಮಿ ಪುರಂ ಬೆಂಗಳೂರು | 11 | 07 |
| 21 | ಜಿಇಎಸ್ ಪದವಿ ಪೂರ್ವ ಕಾಲೇಜು, ಯಲಹಂಕ ಉಪನಗರ ಬೆಂಗಳೂರು | 09 | 03 |
| 22 | ಸೆಂಟ್ ಆನ್ಸ್ ಬಾಲಕಿಯರ ಪದವಿ ಪೂರ್ವ ಕಾಲೇಜು ರಾಮಮೂರ್ತಿನಗರ ಬೆಂಗಳೂರು. | 12 | 02 |
| 23 | ಸೆಂಟ್ ಆನ್ಸ್ ಬಾಲಕಿಯರ ಪದವಿಪೂರ್ವ ಕಾಲೇಜು ಮಿಲ್ಲರ್ಸ್ ರಸ್ತೆ ಬೆಂಗಳೂರು | 10 | 07 |

| | | | |
|---|---|---|---|
| 24 | ನಳಂದ ರಾಷ್ಟ್ರೀಯ ಪದವಿ ಪೂರ್ವ ಕಾಲೇಜು, ಜೆಸಿ ನಗರ ಬೆಂಗಳೂರು | 07 | 06 |
| 25 | ಪ್ರಗತಿ ಪದವಿ ಪೂರ್ವ ಕಾಲೇಜು ಚಿಕ್ಕಬಾಣಾವರ, ಬೆಂಗಳೂರು | 08 | 05 |
| 26 | ರಾಜಾಜಿನಗರ ಪದವಿಪೂರ್ವ ಕಾಲೇಜು ರಾಜಾಜಿನಗರ ಬೆಂಗಳೂರು | 07 | 01 |
| 27 | ಎಸ್‌ಜೆಪಿ ಪದವಿ ಪೂರ್ವ ಕಾಲೇಜು, ಹುಣಸಮಾರನಹಳ್ಳಿ ಬೆಂಗಳೂರು | 05 | 01 |
| | **ಒಟ್ಟು** | **275** | **125** |
| **ಬೆಂಗಳೂರು ದಕ್ಷಿಣ** | | | |
| 01 | ದಯಾನಂದ ಪದವಿ ಪೂರ್ವ ಕಾಲೇಜು, ಕುಮಾರಸ್ವಾಮಿ ಬಡಾವಣೆ ಬೆಂಗಳೂರು | 10 | 04 |
| 02 | ಬಿಇಎಸ್ ಪದವಿ ಪೂರ್ವ ಕಾಲೇಜು, ಜಯನಗರ, ಬೆಂಗಳೂರು | 15 | 10 |
| 03 | ವಿಜಯ ಪದವಿ ಪೂರ್ವ ಕಾಲೇಜು ಜಯನಗರ 4ನೇ ಬ್ಲಾಕ್ ಬೆಂಗಳೂರು | 27 | 15 |
| 04 | ಕೆಂಗೇರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಕೆಂಗೇರಿ, ಬೆಂಗಳೂರು. | 10 | 06 |

| | | | |
|---|---|---|---|
| 05 | ಎನ್‌ಎಂಕೆಆರ್‌ವಿ ಮಹಿಳಾ ಪದವಿ ಪೂರ್ವ ಕಾಲೇಜು, ಜಯನಗರ 3ನೇ ಬ್ಲಾಕ್, ಬೆಂಗಳೂರು | 16 | 32 |
| 06 | ಬಿಎನ್‌ಎಂ ಪದವಿ ಪೂರ್ವ ಕಾಲೇಜು, ಬನಶಂಕರಿ 3ನೇ ಘಟ್ಟ, ಬೆಂಗಳೂರು | 10 | 09 |
| 07 | ಎಸ್ ಗೋಟಾವತ್ ಹಿಂದಿ ಪದವಿ ಪೂರ್ವ ಕಾಲೇಜು, ಇಂದಿರಾನಗರ, ಬೆಂಗಳೂರು | 04 | -- |
| 08 | ಚಾಮರಾಜಪೇಟೆ ಪದವಿ ಪೂರ್ವ ಕಾಲೇಜು, ಬೆಂಗಳೂರು-18 | 09 | 02 |
| 09 | ಬಿಟಿಎಲ್ ಪದವಿ ಪೂರ್ವ ಕಾಲೇಜು, ಬೊಮ್ಮಸಂದ್ರ, ಬೆಂಗಳೂರು | 03 | 02 |
| 10 | ಬಸವೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜು, ವಿಜಯನಗರ ಬೆಂಗಳೂರು-40 | 04 | 04 |
| 11 | ಜೆಎಸ್‌ಎಸ್ ಸಂಯುಕ್ತ ಪದವಿ ಪೂರ್ವ ಕಾಲೇಜು, ಜಯನಗರ, ಬೆಂಗಳೂರು | 07 | 01 |
| 12 | ಎಂಇಎಸ್ ಪದವಿ ಪೂರ್ವ ಕಾಲೇಜು, ಬಿಟಿಎಂ ಲೇಔಟ್ ಬೆಂಗಳೂರು | 07 | 02 |

| | | | |
|---|---|---|---|
| 13 | ಸರ್‌ಎಂವಿ ಪದವಿ ಪೂರ್ವ ಕಾಲೇಜು, ಏರ್‌ಪೋರ್ಟ್ ರಸ್ತೆ, ಬೆಂಗಳೂರು | 06 | 02 |
| 14 | ಇಂದಿರಾನಗರ ಸಂಯುಕ್ತ ಪದವಿ ಪೂರ್ವ ಕಾಲೇಜು, ಇಂದಿರಾನಗರ, ಬೆಂಗಳೂರು | 12 | 10 |
| 15 | ಸಂಘಮಿತ್ರ ಮಹಿಳಾ ಪದವಿ ಪೂರ್ವ ಕಾಲೇಜು, ವಿಜಯನಗರ, ಬೆಂಗಳೂರು | 09 | 03 |
| 16 | ವಿಶ್ವಚೇತನ ಪದವಿ ಪೂರ್ವ ಕಾಲೇಜು, ವಿಜಯನಗರ, ಬೆಂಗಳೂರು | 07 | 06 |
| 17 | ಶ್ರೀ ಬಾಲಾಜಿ ಮಹಿಳಾ ಪದವಿ ಪೂರ್ವ ಕಾಲೇಜು, ಹನುಮಂತನಗರ, ಬೆಂಗಳೂರು | 07 | 01 |
| 18 | ಶಾರದ ಸಂಯುಕ್ತ ಪದವಿ ಪೂರ್ವ ಕಾಲೇಜು, ಬ್ಯಾಟರಾಯನಪುರ, ಬೆಂಗಳೂರು | 07 | 01 |
| 19 | ಸರ್ವೋತ್ತಮ ಪದವಿ ಪೂರ್ವ ಕಾಲೇಜು, ಚಾಮರಾಜಪೇಟೆ ಬೆಂಗಳೂರು | 05 | 03 |
| 20 | ಉದಯ ಸಂಯುಕ್ತ ಪದವಿ ಪೂರ್ವ ಕಾಲೇಜು, ವಿಜಯನಗರ, ಬೆಂಗಳೂರು | 04 | 01 |

| | | | |
|---|---|---|---|
| 21 | ಸೆಂಟ್ ಆನ್ಸ್ ಪದವಿ ಪೂರ್ವ ಕಾಲೇಜು, (ಬಾಲಕಿಯರ) ರಸ್ತೆ, ಆಲಸೂರು, ಬೆಂಗಳೂರು | 09 | 02 |
| 22 | ಎಸ್‌ವಿಬಿ ಪಟೇಲ್ ಸ್ವತಂತ್ರ ಪದವಿ ಪೂರ್ವ ಕಾಲೇಜು, ಸರ್ಜಾಪುರ, ಆನೇಕಲ್ ತಾಲ್ಲೂಕು, ಬೆಂಗಳೂರು | 04 | 08 |
| 23 | ಜಯಭಾರತಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಅತ್ತೀಬೆಲೆ, ಬೆಂಗಳೂರು | 03 | 05 |
| | **ಒಟ್ಟು** | **195** | **129** |

| **ಬೆಂಗಳೂರು ಗ್ರಾಮಾಂತರ ಜಿಲ್ಲೆ** | | | |
|---|---|---|---|
| 01 | ಶ್ರೀ ಕೊಂಗಾಡಿಯಪ್ಪ ಪದವಿ ಪೂರ್ವ ಕಾಲೇಜು, ದೊಡ್ಡಬಳ್ಳಾಪುರ | 22 | 09 |
| 02 | ಪ್ರಿಯದರ್ಶಿನಿ ಪದವಿ ಪೂರ್ವ ಕಾಲೇಜು, ನೆಲಮಂಗಲ | 07 | 07 |
| 03 | ಶ್ರೀ ಮುರಳಿ ಪದವಿ ಪೂರ್ವ ಕಾಲೇಜು, ನೆಲಮಂಗಲ | 06 | 06 |
| 04 | ಶ್ರೀ ಬಸವೇಶ್ವರ ಪದವಿ ಪೂರ್ವ ಕಾಲೇಜು, ನೆಲಮಂಗಲ | 07 | 07 |
| | | 42 | 29 |

| ರಾಮನಗರ ಜಿಲ್ಲೆ | | | |
|---|---|---|---|
| 01 | ಸಾರ್ವಜನಿಕ ಪದವಿ ಪೂರ್ವ ಕಾಲೇಜು, ರಾಮನಗರ | 07 | 02 |
| 02 | ಶ್ರೀ ಬಸವೇಶ್ವರ ಪದವಿ ಪೂರ್ವ ಕಾಲೇಜು, ಬಿಡದಿ | 08 | 02 |
| 03 | ಶ್ರೀ ಸಿದ್ದಗಂಗಾ ಪದವಿ ಪೂರ್ವ ಕಾಲೇಜು, ಗುಡೇಮಾರನಹಳ್ಳಿ, ರಾಮನಗರ ಜಿಲ್ಲೆ | 11 | 06 |
| 04 | ಸಾರ್ವಜನಿಕ ಪದವಿ ಪೂರ್ವ ಕಾಲೇಜು, ನಾಗವಾರ, ಚನ್ನಪಟ್ಟಣ ತಾಲ್ಲೂಕು | 04 | 03 |
| 05 | ಸಿದ್ದರಾಮೇಶ್ವರ ಪದವಿ ಪೂರ್ವ ಕಾಲೇಜು, ಬೇವೂರು, ರಾಮನಗರ ಜಿಲ್ಲೆ | 03 | 01 |
| **ಒಟ್ಟು** | | **33** | **14** |

# GOVERNMENT OF KARNATAKA
## DEPARTMENT OF PRE UNIVERSITY EDUCATION
## LIST OF AIDED PU COLLEGE AS ON 26/07/2012
## DISTRICT : BANGALORE NORTH

| SL.NO | COLCD | NAME AND ADDRESS |
|---|---|---|
| 1 | AN015 | MLA PU COLLEGE FOR WOMEN, MALESHWARAM 14TH CROSS, BANGALORE-560003 |
| 2 | AN022 | BASAVESHWARA PU COLLEGE, RAJAJINAGAR, II BLOCK, BANGALORE 560010 |
| 3 | AN041 | SHESHADRIPURAM IND PU.COL, SHESHADRIPURAM, BANGALORE 560020 |
| 4 | AN042 | VIVEKANANDA PU COLLEGE, MALLESHWARAM RAJKUMAR ROAD, BANGALORE 560055 |
| 5 | ANO46 | R BANM'S PU COLLEGE 12/A, ANNASWAMY MUDALIAR ROAD, BANGALOE 560042 |
| 6 | AN047 | HASANATH PU COL FOR WOMEN, OICKENSON ROAD NO 43, BANGALORE 560042 |
| 7 | AN051 | ST ALOYSIUS PU COLLEGE, COX TOWN, BANGALORE 560005 |
| 8 | ANO54 | VVS PU COLLEGE, RAJAJINAGAR, I BLOCK, BANGALORE 560010 |
| 9 | ANO70 | AGCC PU COLLEGE FOR WOMEN, K, KAMRAJ ROAD - NO 45, BANGALORE-560042 |
| 10 | ANO72 | ARYVIDYASHALA PU COLLEGE, GANDHINAGAR WH ROAD, BANGALORE 560009 |
| 11 | ANO75 | BAPUJI PU COLLEGE, MAGADI ROAD 1ST CROSS, BANGALORE 560023 |
| 12 | ANO80 | BEL. COMP PU COLLEGE, JALAHALLI BANGALORE 560013 |
| 13 | ANO82 | HASANATH PU COLLEGE, 5 HENNURBANDE KALYANNAGAR, BANGALORE 560043 |
| 14 | ANO91 | SRI GANDHADAKAVAL PU COL, SRI |

| | | |
|---|---|---|
| | | GANDAKAVAL VISHWANEEDAM, BANGALORE 560091 |
| 15 | ANO97 | THAKKAR BAPA PU COLLEGE, SRI BAPAGRAMA, BANGALORE 560091 |
| 16 | ANO98 | BNCS PU COL NO 9/6 4TH MN, MAHALAXMI LAYOUT 3RD CRS, BANGAORE 560086 |
| 17 | AN101 | SIDDARTHA COMP PU COLLEGE, LINGARAJPURAM, BANGALORE 560084 |
| 18 | AN102 | ANANDA COMP PU COLLEGE, YESHAVANATAPURA BK NAGAR, BANGALORE 560022 |
| 19 | AN103 | PVP PU COLLEGE FOR WOMEN, RAJAJINAGAR, I-N BLOCK, BANGALORE 560010 |
| 20 | AN104 | AMS COMP PU COLLEGE, MAHALAXMIPURAM 2 STAGE, BANGALORE 5600066 |
| 21 | AN109 | GES PU COLLEGE NO 1224.88 CRS YELAHANKA NEWTOWN, BANGALORE 560064 |
| 22 | AN116 | ST ANNE'S GIRLS PU COL, RAMAMURTHY NAGAR, BANGALORE 560016 |
| 23 | AN117 | ST ANNE'S GIRLS PU COL, 2 MILLER ROAD VASANTNAGAR, BANGALORE 560052 |
| 24 | AN133 | NALADA NATIONAL PU COL, JC NAGAR PIPELINE RD WCRD, BANGALORE 560086 |
| 25 | AN138 | PRAGATHI PU COLLEGE, NO 57 CHIKKABANAVARA, BANGALORE 560090 |
| 26 | AN170 | RAJAJINAGAR PU COLLEGE, RAJAJI NAGAR V BLK X MAIN, BANGALORE 560010 |
| 27 | AN373 | SJP PU COLLEGE, HUNASAMARANAHALI 1, BANGALORE DT 562157 |

**GOVERNMENT OF KARNATAKA**

**DEPARTMENT OF PRE. UNIVERSITY EDUCATION**

**LIST OF AIDED PU COLLEGE AS ON 26/07/2012**

**DISTRICT : BANGALORE SOUTH**

| SL.NO | COLCD | NAME AND ADDRESS |
|---|---|---|
| 1 | AS004 | DAYANANDA PU COLLEGE, KUMARWSAMYLAYOUT, JP NAGAR, BANGALORE 560078 |
| 2 | AS018 | RES PU COLLEGE 16TH MAIN, JAYANAGAR 4TH BLOCK, BANGALORE 560011 |
| 3 | AS031 | VIJAYA PU COLLEGE, 11TH MN, JAYANAGAR 4TH BLOCK, BANGALORE 560011 |
| 4 | AS033 | KENGERI PU COLLEGE, KENGERI, BANGALORE 560060 |
| 5 | AS048 | NMKRV PU COL FOR WOMEN, JAYANAGAR 3RD BLOCK, BANGALORE 560011 |
| 6 | AS049 | BNM PU COLLEGE, 27 CRS 12 MAIN BSK 11 STG, BANGALORE 560070 |
| 7 | AS061 | SM GOTAWAT HINDI PU COL, INDIRANAGAR 2 STG 17C-CRS, BANGALORE 560038 |
| 8 | AS074 | CHAMARAJPET PU COLLEGE, CHAMRAJPET II MN 8TH CRS, BANGALORE 560018 |
| 9 | AS084 | BTL PU COLLEGE 259-B, BOMMASANDRA HOSUR RD, BANGALORE 562158 |
| 10 | AS088 | BASAVESWARA COMP PU COL, VIJAYANAGAR 14TH MAIN, BANGALORE 560040 |
| 11 | AS095 | JSS PU COLLEGE 38 CROSS, JAYANAGAR 8TH BLOCK, BANGALORE 560082 |
| 12 | AS096 | MES PU COLLEGE CA-2,25 MN 7 CRS 2 STG BTM LYT, BANGALORE 560076 |
| 13 | AS105 | SIR MV PU COLLEGE 1716, KONENA AGRAHARA HAL, BANGALORE 560017 |

| | | |
|---|---|---|
| 14 | AS106 | INDIRANAGAR COMP PU COL, INDIRANAGAR I STG 9TH CRS, BANGALORE 560038 |
| 15 | AS107 | SANGHAMITRE WOMENS PU COL, VIJAYANAGAR II MN CRS, BANGALORE 560040 |
| 16 | AS119 | VISWACHETANA PU COLLEGE, BASAVESWARA LYT II STAGE, VIJAYNAGAR 560040 |
| 17 | AS120 | BALAJI PU COL FOR WOMEN, HANUMANTHANAGAR I CROSS, BANGALORE 560019 |
| 18 | AS125 | SRI SHARADA PU COLLEGE, MYSORE RD BYATARAYANAPURA, BANGALORE 560026 |
| 19 | AS126 | SARVOTHAMA PU COLLEGE 197, CHAMARAJPET IV MAIN, BANGALORE 560018 |
| 20 | AS131 | UDAY PU COLLEGE NO 14, 18MN 18TH CRS VIJAYNAGAR, BANGALORE 560040 |
| 21 | AS137 | ST ANNE'S GIRLS PU COL, ULSOOR NO-2 CAMBRIDGE RD, BANGALORE 560008 |
| 22 | AS190 | SVB PATEL INDP PU COLLEGE, SARJAPURA ANEKAL TQ, BANGALORE DT 562125 |
| 23 | AS191 | JAYABHARATHI COMP PU COL, ATTIBELE ANEKAL TQ, BANGALORE DT 562107 |

**GOVERNMENT OF KARNATAKA**

**DEPARTMENT OF PRE UNIVERSITY EDUCATION**

**LIST OF AIDED PU COLLEGE AS ON 26/07/2012**

**DISTRICT : BANGALORE RURAL**

| SL.NO | COLCD | NAME AND ADDRESS |
|---|---|---|
| 1 | BB009 | SRI KONGADIYAPPA PU COL, DODDABALLAPUR, BANGALORE DT 561203 |
| 2 | BB035 | PRIYADARSHINI PU COLLEGE, NELAMANGALA SUBHASHNAGAR, BANGALORE DT 562123 |
| 3 | BB038 | MAURALI PU COLLEGE, NELAMANGALA, BANGALORE DT 562123 |

| | | |
|---|---|---|
| 4 | BB082 | SRI BASAVESHWARA PU COL, SONDEKPPA ROAD, NELMANGALA, BANGALORE DT 562123 |

**GOVERNMENT OF KARNATAKA**

**DEPARTMENT OF PRE UNIVERSITY EDUCATION**

**LIST OF AIDED PU COLLEGE AS ON 26/07/2012**

**DISTRICT: BANGALORE RURAL**

| SL. NO | COLCD | NAME AND ADDRESS |
|---|---|---|
| 1 | BR014 | SARVAJANIKA PU COLLEGE, CHANNAPATNA, RAMANAGAR DIST |
| 2 | BR028 | BASAVESHWARASWAMY PU COL, BIDADI RAMANAGARAM TQ, RAMANAGAR DIST |
| 3 | BR029 | SRI SIDDAGANGA PU COLLEGE, GUDEMARANAHALLI MAGADI TQ, RAMANAGAR DIST |
| 4 | BR033 | SARVAJANIKA PU COLLEGE, NAGAVARA CHANNAPATNA TQ, RAMANAGAR DIST |
| 5 | BR034 | SIDDARAMESHWARA PU COL, BEVOOR CHANNAPATNA TQ, RAMANAGAR DIST |

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ನಾನು ನೀಡಿರುವ ಉತ್ತರದಲ್ಲಿ 31–12–2008 ಎನ್ನುವ ಬದಲು 31–12–2088 ಎಂದು ತಪ್ಪಾಗಿ ನಮೂದಾಗಿದೆ. ಅದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದು Printing mistake ಆಗಿದೆ.

**ಶ್ರೀ ಪುಟ್ಟಣ್ಣ:** ಮಾನ್ಯ ಸಭಾಪತಿಯವರೆ, ಇಲ್ಲಿ ಉತ್ತರದಲ್ಲಿ 31–12–2011ರವರೆಗೆ ಖಾಲಿ ಆಗಿರುವ ಹುದ್ದೆಗಳನ್ನು ತುಂಬಲಿಕ್ಕೆ ಅನುಮತಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ನಮಗೆ ಇರುವ ಮಾಹಿತಿ ಪ್ರಕಾರ ನೀವು

ಆದೇಶ ಮಾಡಲಿಲ್ಲ. ನಿಮಗೆ ಬೇಕಾಗಿರುವಂಥ ಸಂಸ್ಥೆಗಳಿಗೆ ನೀವು ಅನುಮತಿಯನ್ನು ಕೊಟ್ಟುಕೊಂಡಿದ್ದೀರೇನೋ ನನಗೆ ಗೊತ್ತಿಲ್ಲ. ಒಂದು ವೇಳೆ ಆದೇಶ ಮಾಡಿದ್ದರೆ ಅದರ ಪ್ರತಿಯನ್ನು ನನಗೆ ಕೊಡಿ. ಈ ಉತ್ತರ ತಪ್ಪಾಗಿದೆ ಈ ವಿಷಯದ ಬಗ್ಗೆ Clarify ಮಾಡಲಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ಹೈಸ್ಕೂಲ್‌ನಲ್ಲಿ 2008 ರತನಕ ಖಾಲಿ ಇರುವ ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಅದರ ಆದೇಶದ ಪ್ರತಿ ಕೊಡುತ್ತೇನೆ. ಆ ಪ್ರಕ್ರಿಯೆ ನಡೆಯುತ್ತಿದೆ. ಈ 2008 ರಿಂದ 2011ರ ವರೆಗೆ ಮಾಡಬೇಕೆನ್ನುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆ. ಅದನ್ನು ಮಾಡಿಸುವುದಕ್ಕೆ ನಮ್ಮ ಪ್ರಯತ್ನ ನಡೆಯುತ್ತಿದೆ. ಸಧ್ಯದಲ್ಲಿಯೇ ಹಣಕಾಸು ಇಲಾಖೆಯ ಒಪ್ಪಿಗೆ ಪಡೆದು...

**ಶ್ರೀ ಪುಟ್ಟಣ್ಣ: – ಉತ್ತರದಲ್ಲಿ 2011ರ..**

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ನಾನು ಹೇಳುತ್ತೇನೆ ಮೊದಲು ತಾವು ಕೇಳಿ. ಹೈಸ್ಕೂಲ್‌ದು 2006ರವರೆಗೆ ಇತ್ತು ಅದನ್ನು 2008ರ ವರೆಗೆ ವಿಸ್ತರಣೆಯನ್ನು ಮಾಡಿ ಅನುಮತಿ ಕೊಡುತ್ತಿದ್ದೇವೆ. ಅದನ್ನು ತುಂಬಿಕೊಳ್ಳುತ್ತಿದ್ದಾರೆ. ಅದಕ್ಕೇನೂ ತೊಂದರೆ ಇಲ್ಲ. ನಮ್ಮ ಪ್ರೌಢ ಶಾಲಾ ಶಿಕ್ಷಕರನ್ನು 2008 ರಿಂದ ವಿಸ್ತರಿಸಬೇಕೆಂದು, ಖಾಲಿ ಇರುವ ಹುದ್ದೆ, ನಿವೃತ್ತಿಯಿಂದ, ಮರಣದಿಂದ ಮತ್ತೆ ಇನ್ನಾವುದಾದರು ಕಾರಣದಿಂದ ಅನುದಾನಿತ ಸಂಸ್ಥೆಗಳಲ್ಲಿ ಖಾಲಿಯಾಗಿರುವಂಥ ಹುದ್ದೆಗಳನ್ನು 2011ರವರೆಗೆ ತುಂಬಿಕೊಳ್ಳಬೇಕೆನ್ನುವ ಪ್ರಸ್ತಾವನೆ ನಮ್ಮ ಮುಂದೆ ಇದೆ. ಅದು ಹಣಕಾಸು ಇಲಾಖೆಯ ಮುಂದೆ ಇದೆ. ಅದು ಚರ್ಚೆ ಮಾಡುತ್ತೇವೆ. ಹೈಸ್ಕೂಲಿನ ವಿಷಯದ ಬಗ್ಗೆ ತೊಂದರೆ ಇಲ್ಲ. ಪಿ.ಯು.ಸಿ.ದು ಈಗಾಗಲೇ 2011ರ ವರೆಗೆ ಎಂದು ವಿಸ್ತರಿಸಿಬಿಟ್ಟಿದ್ದೇವೆ. ಅವುಗಳನ್ನು ಈಗ ತುಂಬಿಕೊಳ್ಳುತ್ತಿದ್ದಾರೆ. ಆ ಪ್ರಕ್ರಿಯೆ ನಡೆಯುತ್ತಿದೆ. ಪಿ.ಯು.ಸಿ.ಯ ಸಮಸ್ಯೆ ಇಲ್ಲ. ಹೈಸ್ಕೂಲಿನದು 2008 ರಿಂದ 2011ರ ವರೆಗೆ ಕೊಡಬೇಕಾದ ಅಗತ್ಯತೆ ಇದೆ. ಹಾಗೆಯೇ

ಪ್ರಾಥಮಿಕದ್ದು ಇದೆ. ಪ್ರಾಥಮಿಕ ಶಾಲೆಯ ಖಾಲಿ ಹುದ್ದೆಗಳನ್ನು ತುಂಬಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆ. ಅತೀ ಶೀಘ್ರದಲ್ಲಿ ಹಣಕಾಸು ಇಲಾಖೆಯ ಒಪ್ಪಿಗೆ ಪಡೆದು ಈ ಹೈಸ್ಕೂಲಿನದನ್ನು ಕೂಡ 2011ರವರೆಗೆ ವಿಸ್ತರಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:–** ಪುಟ್ಟಣ್ಣರವರೆ ಈ ಪ್ರಶ್ನೆ ಮುಕ್ತಾಯವಾಯಿತು. ತಮ್ಮದು ತಡೆಹಿಡಿಯಲಾದ ಪ್ರಶ್ನೆ 269 ಇದೆ. ತಾವು ಅದನ್ನು ಕೇಳಿ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಉತ್ತರದಲ್ಲಿ 2011ರ ವರೆಗೆ ಅನುಮತಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಉತ್ತರದಲ್ಲಿ 2011ರ ವರೆಗೆ ಆದೇಶ ಕೊಟ್ಟಿದ್ದೇವೆಂದು ಹೇಳಿದ್ದಾರೆ.

**ಸಭಾಪತಿಯವರು:–** ಅದು ಪಿ.ಯು.ಸಿ. ದು.

**ಶ್ರೀ ಪುಟ್ಟಣ್ಣ: –** ಮಾನ್ಯ ಸಭಾಪತಿಯವರೆ, ಇಲ್ಲ ಹೈಸ್ಕೂಲ್‌ದು ಇದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: –** ಮಾನ್ಯ ಸಭಾಪತಿಯವರೆ, ಉತ್ತರ ಈ ಅನ್ನು ನೋಡಿ. ಅದರಲ್ಲಿ ಸ್ಪಷ್ಟವಾಗಿ ಹೈಸ್ಕೂಲ್‌ದು ಬೇರೆ, ಪದವಿ ಪೂರ್ವ ಕಾಲೇಜಿನದು ಬೇರೆ ಇದೆ.

**ಸಭಾಪತಿಯವರು:–** ಬೇರೆ ಬೇರೆ ಇದೆ. ಹೈಸ್ಕೂಲ್‌ಗೆ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಇದರಲ್ಲಿ 2011ರ ವರೆಗೆ ಹೈಸ್ಕೂಲ್‌ದು ಇಲ್ಲ. ಮಾನ್ಯ ಸಚಿವರು ಹೇಳುತ್ತಿರುವುದು ಸರಿಯಾಗಿದೆ. ತಾವು ಮುಂದಿನ ತಮ್ಮ ತಡೆಹಿಡಿಯಲಾದ ಪ್ರಶ್ನೆಯನ್ನು ಕೇಳಿ

**87 ರಿಂದ 96ರ ವರೆಗೆ ಪ್ರಾರಂಭವಾಗಿರುವ ಪ್ರಾಥಮಿಕ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ವೇತನಾನುದಾನ ನೀಡುವ ಬಗ್ಗೆ**

**269; ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ)**

ಅ) 1986–87ರಿಂದ 1994–95ರವರೆಗೆ ಪ್ರಾರಂಭವಾಗಿರುವ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಿಗೆ ವೇತನಾನುದಾನ ನೀಡಲು ಆರ್ಥಿಕ ಇಲಾಖೆ ನಿರ್ಧರಿಸಿದೆಯೇ;

ಆ) ಈ ಕಾಲೇಜುಗಳಿಗೆ ವೇತನಾನುದಾನ ನೀಡಲು ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು)

ಇ) ಇದುವರೆಗೆ ಎಷ್ಟು ಶಾಲೆ ಕಾಲೇಜುಗಳಿಗೆ ವೇತನಾನುದಾನ ನೀಡಲು ಆರ್ಥಿಕ ಇಲಾಖೆಯಿಂದ ಎಷ್ಟು ಹಣ ಬಿಡುಗಡೆಯಾಗಿದೆ (ವಿವರ ನೀಡುವುದು)

ಈ) ಸದರಿ ಅವಧಿಯಲ್ಲಿ ವೇತನಾನುದಾನ ನೀಡಲು ಇನ್ನು ಬಾಕಿ ಉಳಿದಿರುವ ಶಾಲಾ ಕಾಲೇಜುಗಳೆಷ್ಟು (ವಿವರ ನೀಡುವುದು)

ಉ) ಈ ಶಾಲಾ ಕಾಲೇಜುಗಳಿಗೆ ಯಾವ ಕಾಲಮಿತಿಯಲ್ಲಿ ವೇತನಾನುದಾನಕ್ಕೊಳ್ಳಪಡಿಸಲು ಹಣ ಬಿಡುಗಡೆ ಮಾಡಲಾಗುವುದು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) ರಾಜ್ಯದಲ್ಲಿ, ದಿ. 01.06.1987 ರಿಂದ 94–95 ನೇ ಸಾಲಿನಲ್ಲಿ ಪ್ರಾರಂಭಿಸಿ, ಸತತವಾಗಿ ನಡೆದಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಹಾಗೂ ಆದೇಶ ಸಂಖ್ಯೆ ಇಡಿ 59 ಪಿಎಂಸಿ 2006, ದಿ 6.10.2007 ಮತ್ತು ಸರ್ಕಾರದ ಆದೇಶ ಸಂಖ್ಯೆ ಇಡಿ 217 ಪಿಎಂಸಿ 2008, ದಿ. 8.9.2008ರಲ್ಲಿ ಆಸ್ಪದ ಕಲ್ಪಿಸಲಾಗಿದೆ.

ದಿ. 21.10.2009 ರ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ ಇಡಿ 1 ಬಿಇಎಂ 2008, ದಿ. 21.10.2009ರಲ್ಲಿ ಸಹಾಯಾನುದಾನಕ್ಕೆ ಒಳಪಡಿಸುವ ಯಾವುದೇ ಹೊಸ ಪ್ರಕರಣಗಳನ್ನು ಪರಿಗಣಿಸ ತಕ್ಕದ್ದಲ್ಲವೆಂದು ಆರ್ಥಿಕ ಮಿತವ್ಯಯ ಆದೇಶ ಹೊರಡಿಸಲಾಗಿತ್ತು. ಈ ಮಿತವ್ಯಯ ಆದೇಶ ಈಗಲೂ ಜಾರಿಯಲ್ಲಿರುತ್ತದೆ. ಸರ್ಕಾರದ ಹಂತದಲ್ಲಿ ಬಾಕಿ ಇದ್ದ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ

ಶಾಲೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 551 ವೆಚ್ಚ-8/2011, ದಿ. 12.8.2011ರಲ್ಲಿ ಮತ್ತು ಆಇ 594 ವೆಚ್ಚ-8, 2011, ದಿ. 24.9.2011ರ ಟಿಪ್ಪಣಿಯಲ್ಲಿ 38 ಪದವಿಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಮಿತವ್ಯಯ ಆದೇಶ ಸಡಿಲಿಸಿ, ಆರ್ಥಿಕ ಇಲಾಖೆಯು ಅನುಮತಿ ನೀಡಿರುತ್ತದೆ.

ತದನಂತರ, ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ದಿ: 22-2-2012ರಲ್ಲಿ 1-6-1987 ರಿಂದ 1994-95ನೇ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ಸತತವಾಗಿ ನಡೆಸುತ್ತಿರುವ ಸರ್ಕಾರದ ಹಂತದಲ್ಲಿ ಬಾಕಿಯಿದ್ದ ಪ್ರಸ್ತಾವನೆಗಳಿಗೆ 287+28=315 ಅನುದಾನಿತ ಪ್ರಾಥಮಿಕ ಶಾಲೆಗಳನ್ನು ಹಾಗೂ 332+6=338 ಅನುದಾನರಹಿತ ಪ್ರೌಢಶಾಲೆಗಳನ್ನು ಹಾಗೂ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಆ.ಇ. 116/ವೆಚ್ಚ 8/2012 ದಿ: 26-5-2012ರಲ್ಲಿ ಸರ್ಕಾರದ ಹಂತದಲ್ಲಿ ಬಾಕಿ ಇರುವ 99 ಪದವಿಪೂರ್ವ ಕಾಲೇಜುಗಳನ್ನ ಸಹಾಯಾನುದಾನಕ್ಕೆ ಒಳಪಡಿಸಲು ಸಹಮತಿ ನೀಡಿದ್ದು, ಅದರನ್ವಯ, ಈ ಅವಧಿಯಲ್ಲಿ ಪ್ರಾರಂಭಿಸಿ ಸತತವಾಗಿ ನಡೆಯುತ್ತಿರುವ ಅರ್ಹ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಹಾಗೂ ಪದವಿಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಕ್ರಮ ವಹಿಸಲಾಗುತ್ತಿದೆ.

ಆ) ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 744 ವೆಚ್ಚ 8 2011, ದಿ: 22-10-2011 ರನ್ವಯ, ದಿ: 1-6-1987ರ ಪೂರ್ವದಲ್ಲಿ ಪ್ರಾರಂಭಿಸಿ ಸತತವಾಗಿ ನಡೆಸುತ್ತಿರುವ 87 ಅನುದಾನರಹಿತ ಪ್ರಾಥಮಿಕ ಶಾಲೆ ಹಾಗೂ 6 ಅನುದಾನರಹಿತ ಪ್ರೌಢಶಾಲೆಗಳನ್ನು ಮತ್ತು 1-6-1987ರಿಂದ 1990-91ನೇ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ಸತತವಾಗಿ ನಡೆಸುತ್ತಿರುವ 157 ಅನುದಾನರಹಿತ ಪ್ರಾಥಮಿಕ ಶಾಲೆಗಳು ಹಾಗೂ 71 ಅನುದಾನರಹಿತ ಪ್ರೌಢಶಾಲೆಗಳನ್ನು ಸಹಾಯಾನುದಾನಕ್ಕೆ

ಒಳಪಡಿಸಲು 2012–13ನೇ ಸಾಲಿಗೆ ಜಿಲ್ಲಾ ವಲಯದಡಿಯಲ್ಲಿ ಪ್ರಾಥಮಿಕ ಶಾಲೆಗಳಿಗೆ ₹ 39.94 ಕೋಟಿ, ಪ್ರೌಢಶಾಲೆಗಳಿಗೆ ₹ 77.36 ಕೋಟಿ ಒದಗಿಸಲಾಗಿದೆ.

ತದನಂತರ 287+28=315 ಅನುದಾನರಹಿತ ಪ್ರಾಥಮಿಕ ಶಾಲೆಗಳನ್ನು ಹಾಗೂ 332 ಅನುದಾನರಹಿತ ಪ್ರೌಢಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸಲು 2012–13ನೇ ಸಾಲಿಗೆ ರಾಜ್ಯ ವಲಯದಡಿ ₹ 60.85 ಕೋಟಿ ಒದಗಿಸಲಾಗಿದೆ. ಪದವಿಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ₹ 31.50 ಕೋಟಿಗಳನ್ನು ಒದಗಿಸಿದೆ.

ಇ) ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 551 ವೆಚ್ಚ–8/2011, ದಿ. 12.8.2011ರಲ್ಲಿ ನೀಡಿದ ಸಹಮತಿಯನ್ವಯ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 744 ವೆಚ್ಚ 8 2011, ದಿ:22–10–2011ನೇದ್ದರಲ್ಲಿ ₹ 65.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ತದನಂತರ 2ನೇ ಹಂತವಾಗಿ, ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ದಿ: 22–2–2012 ರ ಸಂಖ್ಯೆ ಆಇ 26 ವೆಚ್ಚ 8/2012ನೇದ್ದರದಲ್ಲಿ ₹ 111.12 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ, ಉಪನ್ಯಾಸಕರ ಕಾರ್ಯಭಾರದ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕಾಗಿದ್ದರಿಂದ ಯಾವುದೇ ಪದವಿ ಪೂರ್ವ ಕಾಲೇಜಿಗೆ ಇನ್ನೂ ವೇತನಾನುದಾನ ಬಿಡುಗಡೆಯಾಗಿಲ್ಲ.

**ಈ)** ಬಾಕಿ ಉಳಿದಿರುವ ಪ್ರಸ್ತಾವನೆಗಳ ಸಂಖ್ಯೆ

| | |
|---|---|
| ಪ್ರಾಥಮಿಕ ಶಾಲೆಗಳು | – 238 |
| ಪ್ರೌಢಶಾಲೆಗಳು | – 281 |
| ಪದವಿ ಪೂರ್ವ ಕಾಲೇಜುಗಳು | – 99 |

ಉ) ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಿ, ಸಹಾಯಾನುದಾನಕ್ಕೆ ಒಳಪಡಿಸಲು ಕ್ರಮ ಜರುಗಿಸಲಾಗುತ್ತಿದೆ.

ಉಪನ್ಯಾಸಕರ ಕಾರ್ಯಭಾರದ ನಿರ್ಣಯವಾದ ನಂತರ 98 ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲಾಗುವುದು.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಅವರಿಗೆ ಗೊತ್ತಿರುವ ಹಾಗೆ ಪ್ರತಿ ಶಾಲಾ ಕಾಲೇಜುಗಳು ಅನುದಾನಕ್ಕೊಳಪಡಬೇಕಾದರೆ ಎಷ್ಟು ಸಮಸ್ಯೆಗಳು ಅನುಭವಿಸುತ್ತಿವೆ ಎನ್ನುವುದು ತಮಗೆ ಗೊತ್ತು. ಇತ್ತೀಚೆಗೆ ಸಚಿವಾಲಯದಲ್ಲಿ ಒಬ್ಬ ಉಪ ಕಾರ್ಯದರ್ಶಿಯವರು ದಿನಕ್ಕೆ ತೆಗೆದುಕೊಂಡು ಹೋಗುತ್ತಿರುವ ಲಂಚವನ್ನು ತಾವು ನೋಡಿದ್ದೀರಿ. ಒಂದು ಹೈಸ್ಕೂಲು ಹಾಗೂ ಒಂದು ಪದವಿ ಪೂರ್ವ ಕಾಲೇಜು ಅನುದಾನಕ್ಕೊಳಪಡಬೇಕೆನ್ನುವ ಕಡತ ಮಂತ್ರಿಯವರೆಗೆ ಬರಬೇಕಾದರೆ ಕನಿಷ್ಟ ಹತ್ತು ಲಕ್ಷ ರೂಪಾಯಿ ಬೇಕು. ಅವರೆಲ್ಲರೂ ದುಡ್ಡು collect ಮಾಡಿಕೊಂಡು ಅಲ್ಲಿಯವರೆಗೆ ತಂದು ಕೊಡಬೇಕು. ಆದರೂ ಕೂಡ ಇವರು ಅಂದುಕೊಂಡ ಹಾಗೆ ಪ್ರಗತಿಯನ್ನು ಸಾಧನೆ ಮಾಡುವುದಕ್ಕಾಗಲಿಲ್ಲ. ಅಂದರೆ ಅನುದಾನ ಕೊಡಲಿಕ್ಕಾಗಲಿಲ್ಲ. ಆದ್ದರಿಂದ ಇದನ್ನು ನೀವು ಯಾವ ರೀತಿಯಾಗಿ ಬಗೆಹರಿಸುತ್ತೀರಿ? ಅತಿ ಶೀಘ್ರವಾಗಿ ಅವರಿಗೆ ಅನುದಾನ ಕೊಡಲಿಕ್ಕೆ ಯಾವ ರೀತಿಯಾದ ತೀರ್ಮಾನವನ್ನು ತೆಗೆದುಕೊಳ್ಳುತ್ತೀರಿ?

ಎರಡನೆಯದಾಗಿ ಪದವಿ ಪೂರ್ವ ಕಾಲೇಜುಗಳಿಗೆ ತಮಗೆ ಗೊತ್ತಿರುವ ಹಾಗೆ ಸ್ವಾತಂತ್ರ್ಯ ಬಂದಾಗಿನಿಂದ ಎಂಟು ಗಂಟೆಗಳು ಎಂದು ಇದೆ. ಅದು ಸರ್ಕಾರಿ ಕಾಲೇಜು ಇರಬಹುದು ಅಥವಾ ಅನುದಾನಿತ ಕಾಲೇಜು ಇರಬಹುದು ಅಲ್ಲಿ ಎರಡೇ ಸೆಕ್ಷನ್ ಇರುತ್ತದೆ. ಒಂದು 1st year PUC ಇರುತ್ತದೆ ಇನ್ನೊಂದು IInd year PUC ಇರುತ್ತದೆ. ಈಗ ಬಂದ ಆಯುಕ್ತರು ಬಹಳ ದೊಡ್ಡದಾಗಿ ಏನೋ ವಿಭಜನೆ ಮಾಡುತ್ತೇವೆಂದು ಹೇಳಿ

ಅವರೆಲ್ಲರಿಗೂ ಸಂಬಳ ನಿಲ್ಲಿಸತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಈಗ ಅನುದಾನಕ್ಕೆ ಒಳಪಟ್ಟಿರುವಂಥ ಕಾಲೇಜುಗಳಿಗೆ ಅನುದಾನವನ್ನು ಕೊಡಬೇಕು. ಮತ್ತು ಯಾವ ಕಾಲೇಜುಗಳಿಗೆ ಸಂಬಳ ನಿಲ್ಲಿಸಿದ್ದೀರಿ. ಆ ಎಲ್ಲಾ ಕಾಲೇಜುಗಳಿಗೆ ನೀವು ಸಂಬಳವನ್ನು release ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ. ಮತ್ತೆ ಎಲ್ಲಿ ಕಾಲೇಜುಗಳಿಗೆ ವೇತನವನ್ನು ನಿಲ್ಲಿಸಲಾಗಿದೆ. ಆ ಎಲ್ಲಾ ಕಾಲೇಜುಗಳೀಗೆ ವೇತನವನ್ನು ಬಿಡುಗಡೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ನಮ್ಮ ಹಿರಿಯ ಸದಸ್ಯರಾದಂತಹ ಪುಟ್ಟಣ್ಣನವರು ಎರಡು ವಿಷಯಗಳನ್ನು ಉಲ್ಲೇಖಿಸಿದ್ದಾರೆ. ಒಂದು 1995ನೇ ಇಸವಿಯವರೆಗೆ ಅನುದಾನಕ್ಕೆ ಒಳಪಡಿಸುವುದನ್ನು ಶೀಘ್ರವಾಗಿ ಕೊಡಬೇಕು, ತೊಂದರೆ ತೊಡಕು ಆಗಬಾರದೆಂದು ಹೇಳಿದ್ದಾರೆ. ಈಗಾಗಲೇ ಹಣಕಾಸಿನ ಲಭ್ಯತೆ ಸಾಕಷ್ಟು ಇದೆ. ಈ ಪ್ರಕ್ರಿಯೆಯನ್ನು ಮಾಡುತ್ತಿದ್ದೇವೆ. ನಮ್ಮ ಹತ್ತಿರ ಹೆಚ್ಚಿನ ಹಣಕಾಸಿನ ನೆರವು ಇದ್ದರೆ ನಾವು ಈ ವರ್ಷವೇ ಹೆಚ್ಚುವರಿ ಬಜೆಟ್‌ನ್ನು ತೆಗೆದುಕೊಂಡು 1995ನೇ ಇಸವಿಯವರೆಗೆ ಪ್ರಾರಂಭವಾಗಿರುವಂತಹ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಅನುದಾನಕ್ಕೆ ಒಳಪಡಿಸುವುದಕ್ಕೆ ಸರ್ಕಾರ ಬದ್ಧವಾಗಿದೆ. ಎಲ್ಲರಿಗೂ ಸಹಾ ನಾವು ಅನುದಾನಕ್ಕೆ ಒಳಪಡಿಸುತ್ತೇವೆ. ಕೊಡುತ್ತೇವೆ. ಹಣಕಾಸಿನ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ. 1995ನೇ ಇಸವಿಯವರೆಗೆ ಆಗಿರುವುದಕ್ಕೆ ಕೊಡುತ್ತೇವೆ. ತಾವು ಹೇಳಿರುವಂತಹ ಘಟನೆ ನಿಜ. ಅನೇಕ ಕಡೆಗಳಲ್ಲಿ ಹಣ ಕೊಟ್ಟ ಹೊರತು ಕೆಲಸವಾಗುವುದಿಲ್ಲ ಎನ್ನುವಂತಹ ಭಾವನೆಯನ್ನು ಹೇಳಿದ್ದಾರೆ. ಸರ್ಕಾರದಲ್ಲಿ ಎನೆಲ್ಲಾ ಎಚ್ಚರಿಕೆಗಳನ್ನು ವಹಿಸಿಕೊಂಡು ಬಿಗಿಯಾದಂತಹ ಕ್ರಮವನ್ನು ತೆಗೆದುಕೊಂಡು ಕಾಲಮಿತಿಯೊಳಗೆ ಅವರು ಕಡತಗಳನ್ನು ಸರ್ಕಾರಕ್ಕೆ ಕಳುಹಿಸಬೇಕು. ಅಲ್ಲಿ ತಡವಾಗದೇ ಇರುವುದಕ್ಕೆ ಏನು ಕಾರಣಗಳು ಇರಲೇಬಾರದು. ಅದಕ್ಕೆ ಬೇಕಾದಂತಹ ಒಂದು ಪಾರದರ್ಶಕವಾದಂತಹ ಸಿಸ್ಟಂ ಅನ್ನು ಮಾಡಿದ್ದೇವೆ.

ಅವರಿಗೆ ಹೇಳಿದ್ದೇವೆ. ಹಾಗಾಗಿಯೂ ಕೆಲವು ಕಡೆಗಳಲ್ಲಿ ಈ ರೀತಿ ನಡೆಯುತ್ತಿರುವುದನ್ನು ಉಲ್ಲೇಖಿಸಲಾಗಿದೆ. ಈಗಾಗಲೇ ಲೋಕಾಯುಕ್ತ ಸಂಸ್ಥೆಯಾಗಲಿ, ನಮ್ಮ ಇಲಾಖೆಯಾಗಲಿ ಬೇರೆ ಬೇರೆ ಹಂತದಲ್ಲಿ ಈ ರೀತಿ ಪ್ರಕರಣಗಳು ಕಂಡು ಬಂದಾಗ ಅವರ ಮೇಲೆ ಕ್ರಮವನ್ನು ತೆಗೆದುಕೊಂಡಿದೆ. ಈಗಲೂ ಸಹಾ ಪಾರದರ್ಶಕವಾಗಿ, ಕಾಲಮಿತಿಯೊಳಗೆ ಈ ಎಲ್ಲಾ ಫೈಲ್‌ಗಳು, ಎಲ್ಲಾ ಹಂತಗಳಲ್ಲಿಯೂ ಕೂಡ ಬರಬೇಕು ಎನ್ನುವುದನ್ನು ನಾನು ಸಹಾ ಮತ್ತೊಮ್ಮೆ ಆಗ್ರಹಿಸುತ್ತೇನೆ. ಎಲ್ಲಿಯೂ ಅನಗತ್ಯವಾಗಿ ವಿಳಂಭವಾಗಬಾರದು. ಈ ರೀತಿಯಲ್ಲಿ ಬೇಕಾದಂತಹ ರೀತಿಯಲ್ಲಿ ಫೈಲ್‌ಗಳು ಬರುವುದಕ್ಕೆ ನಾನು ಸೂಚಿಸುತ್ತೇನೆ. ಮತ್ತೆ 1995 ಇಸವಿಯವರೆಗೆ ಎಲ್ಲೆಲ್ಲಿ ಅನುದಾನಕ್ಕೆ ಒಳಪಡಿಸುವಂಥದ್ದು ಇದೆಯೋ ಎಲ್ಲಾ ಅರ್ಹ ಸಂಸ್ಥೆಗಳನ್ನು ಅನುದಾನಕ್ಕೆ ಒಳಪಡಿಸುತ್ತೇವೆ. ಎರಡನೆಯದಾಗಿ ಕಾರ್ಯಭಾರದ ವಿಷಯದಲ್ಲಿ ಹೇಳಿದ್ದಾರೆ. ಮಾನ್ಯ ಸದಸ್ಯರು ಹೇಳಿರುವಂಥದ್ದು ಸತ್ಯ ಇದೆ. ನಾನು ಅದರ ಕುರಿತಂತೆ ಸಧ್ಯದಲ್ಲಿಯೇ ಒಂದು ಸಭೆಯನ್ನು ಮಾಡುತ್ತಿದ್ದೇನೆ. ಅಧಿವೇಶನ ಮುಗಿದ ಮುಂದಿನ ವಾರದಲ್ಲಿಯೇ ಮಾಡಬೇಕೆಂದು ಒಂದು ದಿನಾಂಕವನ್ನು ಗುರುತಿಸಿಕೊಂಡಿದ್ದೇನೆ. ಇಲ್ಲಿ ಒಂದು ತಾಂತ್ರಿಕವಾದಂತಹ ವಿಷಯ ಬಂದಿರುವುದೇನೆಂದರೆ, ಕಾರ್ಯಭಾರ ಇಲ್ಲದೇ ಇರತಕ್ಕಂತಹ ಉಪನ್ಯಾಸಕರಿಗೆ ಹೇಗೆ ಕಾರ್ಯಭಾರವನ್ನು ಕೊಡಬೇಕೆಂದು. ಕನಿಷ್ಠ ಎಷ್ಟು ಗಂಟೆಗಳ ಕಾಲ ಪಾಠವನ್ನು ಮಾಡಬೇಕೆಂದು ಇದೆ. ಕೆಲವೊಂದು ಕಾಲೇಜಿನಲ್ಲಿ ಅಷ್ಟು ಗಂಟೆಗಳ ಕಾಲ ಪಾಠವನ್ನು ಮಾಡುವುದಕ್ಕೆ ಅವಕಾಶವೇ ಇರುವುದಿಲ್ಲ. ಆಗ ಏನು ಮಾಡಬೇಕೆಂದು ಇರುವುದು. ಸರ್ಕಾರದ ಕಾಲೇಜು ಆದರೆ ಡೆಪ್ಯುಟೇಶನ್ ಆದರೂ ಕಳುಹಿಸಿ ಬೇರೆ ಶಾಲೆಯಲ್ಲಿ 8 ತಾಸು, ಈ ಶಾಲೆಯಲ್ಲಿ 8 ತಾಸು ಪಾಠ ಮಾಡಿ ಎಂದು ಹೇಳುತ್ತೇವೆ. ಅನುದಾನಿತ ಶಾಲಾ ಕಾಲೇಜುಗಳಲ್ಲಿ ಏನು ಮಾಡಬೇಕೆಂದು ಮುಂದಿನ ವಾರ ಸಭೆಯನ್ನು ಮಾಡಿ ಈ ಸಮಸ್ಯೆಯನ್ನು ಬಗೆಹರಿಸುತ್ತೇನೆ. ಹಾಗೂ 1995ನೇ ಇಸವಿಯವರೆಗೆ ಪ್ರಾರಂಭವಾಗಿರತಕ್ಕಂತಹ ಜೂನಿಯರ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿರುವಂತಹ ಉಪನ್ಯಾಸಕರು ಯಾರು ಕೆಲಸ ಮಾಡುತ್ತಿದ್ದಾರೆ,

ಅನುದಾನಕ್ಕೆ ಒಳಪಟ್ಟಿದೆಯೋ ಅವರಿಗೆ ನಾವು ಅನುದಾನವನ್ನು ಕೊಡುವುದಕ್ಕೆ ಎಲ್ಲಾ ಸಹಕಾರವನ್ನು ಕೊಡುತ್ತೇವೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಸಿಂಗಲ್ ವಿಂಡೋ ಎಂದು ಒಂದು ಸಿಸ್ಟಂ ಅನ್ನು ಸರ್ಕಾರ ತೆಗೆದುಕೊಂಡು ಬಂತು.

**ಸಭಾಪತಿಯವರು:–** ಮಾನ್ಯ ಸಚಿವರು ಮೀಟಿಂಗ್ ಮಾಡಿ ಸಮಸ್ಯೆಯನ್ನು ಬಗೆಹರಿಸುತ್ತೇನೆಂದು ಹೇಳಿದ್ದಾರೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಅದಲ್ಲ. ಅನುದಾನಕ್ಕೆ ಒಳಪಡಿಸುವಂತಹ ಸಂದರ್ಭದಲ್ಲಿ ಒಂದು ಸಿಂಗಲ್ ವಿಂಡೋ ಎನ್ನುವಂತಹ ಸಿಸ್ಟಂ ಅನ್ನು ತೆಗೆದುಕೊಂಡು ಬಂದರು. ಆದರೆ ಈಗ ನಮ್ಮ ಆಯುಕ್ತರು ಒಂದು ತ್ರಿಸದಸ್ಯ ಕಮಿಟಿಯನ್ನು ಜೆಡಿ ಅಧ್ಯಕ್ಷತೆಯಲ್ಲಿ ಮಾಡಿಕೊಂಡಿದ್ದಾರೆ. ಇದು ಯಾವ ರೀತಿ ಎಂದರೆ, ಎಲ್ಲಾ ದುಡ್ಡು ಹೊಡೆಯುವಂತಹ ಕಾರ್ಯಕ್ರಮ. ಇದನ್ನು ಮಾಡುವುದರ ಬದಲು ಆಫೀಸಿಯಲ್ ಆಗಿ ಬಿಇಓ ಆಫೀಸ್‌ಗೆ ಇಷ್ಟು, ಡಿಡಿಪಿಐ ಆಫೀಸ್‌ಗೆ ಇಷ್ಟು, ಸೆಕ್ರೆಟರಿಯೇಟ್‌ಗೆ ಇಷ್ಟು ಹಣ ಎಂದು ಆಫೀಸಿಯಲ್ ಆಗಿ ಅನೌನ್ಸ್ ಮಾಡಿಬಿಟ್ಟರೆ ಅಷ್ಟು ಹಣವನ್ನು ಕೊಟ್ಟು ಕೆಲಸವನ್ನು ಮಾಡಿಸಿಕೊಂಡು ಬರುತ್ತಾರೆ. ದಯಮಾಡಿ ಏನು ಮೊದಲೇ ತ್ರಿಸದಸ್ಯರ ಸಮಿತಿ ಇದೆ ಅದೇ ಸಾಕು. ಇದನ್ನು ಏಕೆ ಮಾಡಿಕೊಂಡಿದ್ದಾರೆ. ಇದನ್ನು ಮಾಡಿಕೊಳ್ಳಲು ಸರ್ಕಾರದಿಂದ ಅನುಮತಿಯನ್ನು ನೀಡಲಾಗಿದೆಯೇ? ದುಡ್ಡು ಹೊಡೆಯುವಂತಹ ಕಾರ್ಯಕ್ರಮವಾಗಿರುವುದರಿಂದ ಇದನ್ನು ಮೊದಲು ನಿಲ್ಲಿಸಬೇಕು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ಇಲಾಖೆಯಿಂದ ಮಾಡಿರುವಂತಹ ಸಮಿತಿಗೆ ಸರ್ಕಾರದಿಂದ ಒಪ್ಪಿಗೆ ಕೊಟ್ಟಿರುವಂಥದಲ್ಲ. ಸರ್ಕಾರದಿಂದ ಆದೇಶವಾಗಿ ಸದಸ್ಯತ್ವ ಕಮಿಟಿಯನ್ನು ಮಾಡಿಕೊಂಡಿರುವಂಥದ್ದಲ್ಲ. ಒಮ್ಮೆ ಮಾಡಿಕೊಂಡಿರುವುದರಿಂದ ತೊಂದರೆ ತೊಡಕು ಆಗುತ್ತಿದೆ ಎನ್ನುವುದು ಸರ್ಕಾರದ ಗಮನಕ್ಕೆ ತೆಗೆದುಕೊಂಡು

ಬಂದಿದ್ದಾರೆ. ನಾನು ಅಗತ್ಯ ನಿರ್ದೇಶನವನ್ನು ಪಿ.ಯು. ಆಯುಕ್ತರಿಗೆ ಕೊಡುತ್ತೇನೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಅದನ್ನು ನಿಲ್ಲಿಸಲಾಗುತ್ತದೆಯೇ? ಎರಡೆರಡು ಕಮಿಟಿ ಏಕೆ?

**ಸಭಾಪತಿಯವರು:–** ಅದು ಅಧಿಕೃತ ಸಮಿತಿಯೇ ಅಲ್ಲವೆಂದು ಹೇಳಿದ ಮೇಲೆ ತೆಗೆಯುವಂಥದ್ದು ಎಲ್ಲಿಂದ ಬಂತು?

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಸಿಇಓ ಅಧ್ಯಕ್ಷತೆಯಲ್ಲಿ ಒಂದು ತ್ರಿಸದಸ್ಯರ ಸಮಿತಿ ಇದೆ.

**ಸಭಾಪತಿಯವರು:–** ಸಚಿವರು ಎರಡನೆಯ ಸಮಿತಿಯನ್ನು ಮಾಡಿಕೊಂಡಿರುವಂಥದ್ದು ಅಧಿಕೃತವಲ್ಲವೆಂದು ಹೇಳಿದ್ದಾರೆ. ಅದನ್ನು ತೆಗೆಯುವಂತಹ ಪ್ರಶ್ನೆಯಲ್ಲ. ಅದು ಇರಬಾರದು ಅಷ್ಟೇ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಅದನ್ನು ತೆಗೆಯಬೇಕು.

**ಸಭಾಪತಿಯವರು:–** ಅದು ಅನಧಿಕೃತವಾಗಿರುವುದು ಅದನ್ನು ಇಲ್ಲದೇ ಇರುವಂತೆ ಮಾಡುತ್ತಾರೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ಆ ರೀತಿಯಾಗಿ ಮಾಡಿಕೊಂಡಿರುವುದರಿಂದ ನಿಶ್ಚಿತವಾಗಿ ಈ ಪ್ರಕ್ರಿಯೆಗಳಿಗೆ ವಿಳಂಬವಾಗುತ್ತದೆ ಎನ್ನುವುದಾದರೆ ಅದನ್ನು ತೆಗೆದು ಸರಳಗೊಳಿಸುವುದಕ್ಕೆ ಮತ್ತು ಇನ್ನಷ್ಟು ಪಾರದರ್ಶಕತೆಯನ್ನು ತರುವುದಕ್ಕೆ ಎಲ್ಲಾ ಸಹಕಾರ ಮಾಡುತ್ತೇನೆ.

## ಬೆಂಗಳೂರು ಉತ್ತರ/ದಕ್ಷಿಣ ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳ ಸರ್ಕಾರಿ ಪ್ರಾಥಮಿಕ /ಪ್ರಾಥ ಹಾಗೂ ಪದವಿಪೂರ್ವ ಕಾಲೇಜಿನ ಬೋಧಕ/ಬೋಧಕೇತರ ಸಿಬ್ಬಂದಿಗಳ ವೈದ್ಯಕೀಯ ವೆಚ್ಚವಾರು ಪಾವತಿಗೆ ಅರ್ಜಿ ಸಲ್ಲಿಸಿರುವವರ ಬಗ್ಗೆ

### 397; ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ )

ಅ) ಬೆಂಗಳೂರು ಉತ್ತರ ಬೆಂಗಳೂರು ದಕ್ಷಿಣ, ರಾಮನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಸರ್ಕಾರಿ ಪ್ರಾಥಮಿಕ ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿಗಳ ವೈದ್ಯಕೀಯ ವೆಚ್ಚ ಮರುಪಾವತಿಗೆ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು (ಜಿಲ್ಲೆವಾರು ವಿವರ ನೀಡುವುದು) 2012–13

ಆ) ವೈದ್ಯಕೀಯ ವೆಚ್ಚ ಮರುಪಾವತಿಯ ಮಂಜೂರಾತಿಯ ಅಧಿಕಾರಿವನ್ನು ಯಾವ ಅಧಿಕಾರಿಗಳಿಗೆ ನೀಡಲಾಗಿದೆ; (ಸರ್ಕಾರಿ ಆದೇಶಗಳೊಡನೆ ಜಿಲ್ಲಾವಾರು ವಿವರ ನೀಡುವುದು)

ಇ) ವೈದ್ಯಕೀಯ ವೆಚ್ಚ ಮರುಪಾವತಿಗೆ ಬಂದಿರುವ ಎಷ್ಟು ಅರ್ಜಿಗಳಿಗೆ ಮಂಜೂರಾತಿ ಅನುಮೋದನೆ ನೀಡಲಾಗಿದೆ: ಅದರ ಒಟ್ಟು ಮೊತ್ತವೆಷ್ಟು: (ಜಿಲ್ಲಾವಾರು ವಿವರ ನೀಡಿವುದು)

ಈ) ಮಂಜೂರಾಗಿರುವ ಒಟ್ಟು ಮೊತ್ತದಲ್ಲಿ ಇದುವರೆವಿಗೆ ಬಿಡುಗಡೆಯಾಗಿರುವ ಮೊತ್ತವೆಷ್ಟು: (ಜಿಲ್ಲಾವಾರು ವಿವರ ನೀಡಿವುದು)

ಉ) ಮಂಜೂರಾಗಿರುವ ವೆಚ್ಚ ಮಂಜೂರಾತಿಯಲ್ಲಿ ತುಂಬಾ ವಿಳಂಬ ಉಂಟಾಗಲು ಕಾರಣವೇನು? ಬಾಕಿ ಇರುವ ಅರ್ಜಿಗಳನ್ನು ಯಾವ ಕಾಲಮಿತಿಯಲ್ಲಿ ಮಂಜೂರಾತಿ ಮಾಡಲಾಗುವುದು: (ವಿವರ ನೀಡುವುದು)

ಊ) ಮಂಜೂರಾಗಿ ಬಾಕಿ ಉಳಿದಿರುವ ಮೊತ್ತವನ್ನು ಯಾವ ಕಾಲಮಿತಿಯಲ್ಲಿ ನೀಡಲಾಗುವುದು.

**397; ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)**

**ಅ)** ವೈದ್ಯಕೀಯ ವೆಚ್ಚ ಮರುಪಾವತಿಗೆ ಅರ್ಜಿ ಸಲ್ಲಿಸಿರುವವರ ವಿವರ (ಜಿಲ್ಲಾವಾರು)

| ಜಿಲ್ಲೆಗಳ ಹೆಸರು | ಪ್ರಾಥಮಿಕ ಶಾಲೆಗಳು | ಪ್ರೌಢ ಶಾಲೆಗಳು | ಪದವಿ ಪೂರ್ವ ಶಿಕ್ಷಣ |
|---|---|---|---|
| ಬೆಂಗಳೂರು ಉತ್ತರ | 44 | 27 | 17 |
| ಬೆಂಗಳೂರು ದಕ್ಷಿಣ | 55 | 12 | 24 |
| ರಾಮನಗರ | 91 | 43 | 29 |
| ಬೆಂಗಳೂರು ಗ್ರಾಮಾಂತರ | 53 | 17 | 28 |

**ಆ) ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ**

ಆಯಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಹಾಗೂ ಆಯಾ ಜಿಲ್ಲೆಯ ಉಪನಿರ್ದೇಶಕರು (ಆಡಳಿತ)ರವರಿಗೆ ನೀಡಲಾಗಿದೆ. ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಾರ್ಯಾಲಯದ ದಿನಾಂಕ: 25–08–2011ರ ಸುತ್ತೋಲೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.

**ಪದವಿ ಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದಂತೆ:**

KGS(MA)R 1963 ನಿಯಮ 3ಬಿ (ii) ಹಾಗೂ 3ಬಿ(iii) ರನ್ವಯ ಇಲಾಖಾ ಮುಖ್ಯಸ್ಥರು ಹಾಗೂ ಪ್ರವಾಸ ಭತ್ಯೆ ಬಿಲ್ಲುಗಳನ್ನು ಮೇಲು ಸಹಿ ಮಾಡುವ ಅಧಿಕಾರಿಯು ಸಂಬಂಧಿಸಿದ ಇಲಾಖೆಯ ಸರ್ಕಾರಿ ನೌಕರರ ವೈದ್ಯಕೀಯ ವೆಚ್ಚ ಮರುಪಾವತಿಗೆ ಕ್ಲೇಮು ಇತ್ಯರ್ಥಪಡಿಸುವ ನಿಯಂತ್ರಣಾಧಿಕಾರಿ ಗಳಾಗಿರುತ್ತಾರೆ. ಅದರಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸುತ್ತೋಲೆ ಸಂಖ್ಯೆ: ಪಪೂಶಿ/ಸಿಬ್ಬಂದಿ–1/ವೈ ವೆ ಮ ಪಾ /92/2011–12ದಿ: 31–06–2012

ರಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರಿಗೆ ಅವರ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಎಲ್ಲ ನೌಕರರು (ಪ್ರಾಂಶುಪಾಲರು, ಉಪನ್ಯಾಸಕರು, ಗ್ರೂಪ್–'ಸಿ' ಮತ್ತು 'ಡಿ' ನೌಕರರು) ವೈದ್ಯಕೀಯ ವೆಚ್ಚ ಮರುಪಾವತಿ ನೀಡುವುದು (ಸುತ್ತೋಲೆ ಪ್ರತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ).

ಇ) ವೈದ್ಯಕೀಯ ವೆಚ್ಚದ ಅರ್ಜಿಗಳಿಗೆ ಮಂಜೂರಾತಿ ನೀಡಿರುವ ವಿವರ (ಜಿಲ್ಲಾವಾರು)

| **ಜಿಲ್ಲೆಯ ಹೆಸರು** | **ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಬಂದಿರುವ ಅರ್ಜಿ ಹಾಗೂ ಪಾವತಿಸಿದ ಮೊತ್ತ** | | **ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಬಂದಿರುವ ಅರ್ಜಿ ಹಾಗೂ ಪಾವತಿಸಿದ ಮೊತ್ತ** | |
|---|---|---|---|---|
| | **ಅರ್ಜಿ** | **ಮೊತ್ತ** (ಲಕ್ಷಗಳಲ್ಲಿ) | **ಅರ್ಜಿ** | **ಮೊತ್ತ** (ಲಕ್ಷಗಳಲ್ಲಿ) |
| ಬೆಂಗಳೂರು ಉತ್ತರ ಜಿಲ್ಲೆ | 23 | 4.65 | 00 | 00 |
| ಬೆಂಗಳೂರು ದಕ್ಷಿಣ | 22 | 2.00 | 00 | 00 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 70 | 00.00 | 00 | 00 |
| ರಾಮನಗರ | 71 | 23.50 | 4 | 1.39 |

**ಈ) ಸಾ.ಶಿ.ಇಲಾಖೆ**

| **ಜಿಲ್ಲೆಯ ಹೆಸರು** | **ಮಂಜೂರಾತಿ ವಿವರ** (ಲಕ್ಷಗಳಲ್ಲಿ) | **ಬಿಡುಗಡೆ ಮೊತ್ತದ ವಿವರ** (ಲಕ್ಷಗಳಲ್ಲಿ) | **ಮಂಜೂರಾತಿ ವಿವರ** (ಲಕ್ಷಗಳಲ್ಲಿ) | **ಬಿಡುಗಡೆ ಮೊತ್ತದ ವಿವರ** (ಲಕ್ಷಗಳಲ್ಲಿ) |
|---|---|---|---|---|
| ಬೆಂಗಳೂರು ಉತ್ತರಜಿಲ್ಲೆ | 12.00 | 4.65 | | |
| ಬೆಂಗಳೂರು ದಕ್ಷಿಣ | 39.00 | 2.00 | | |
| ರಾಮನಗರ | 48.00 | 23.50 | 39.13 | 1.38 |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | 00.00 | 00.00 | | |

**ಉ) ಮಂಜೂರಾತಿ ಮಾಡುವಲ್ಲಿ ವಿಳಂಬಕ್ಕೆ ಕಾರಣಗಳು:–**

1) ಜಿಲ್ಲಾ ಪಂಚಾಯತ್ ಹಾಗೂ ಉಪ ನಿರ್ದೇಶಕರುಗಳ ಹಂತದಲ್ಲಿ ಮೇಲು ಸಹಿ ಮಾಡಲು ಅದ್ಯತೆ ನೀಡಲಾಗಿದೆ.

2) ಅಪೂರ್ಣ ಮಾಹಿತಿ ಸಲ್ಲಿಸಿದಲ್ಲಿ

3) ಆರೋಗ್ಯ ಮತ್ತು ಕುಟುಂಬ ಇಲಾಖೆಯ ಆಯುಕ್ತ ರಿಂದ ಸಿ.ಜಿ.ಹೆಚ್.ಎಸ್ ದರಗಳನ್ವಯ ದರ ನಿಗದಿಪಡಿಸುವಲ್ಲಿ ವಿಳಂಬವಾಗುತ್ತದೆ.

**ಊ)** ಬಾಕಿ ಇರುವ ವೈದ್ಯಕೀಯ ವೆಚ್ಚ ಮರುಪಾವತಿ ಬಿಲ್ಲುಗಳನ್ನು ತ್ವರಿತಗತಿಯಲ್ಲಿ ತೀರುವಳಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಏನು ವೈದ್ಯಕೀಯ ವೆಚ್ಚ ಮರುಪಾವತಿ ಇದೆ, ಇದರ ಬಗ್ಗೆ ತಮಗೂ ಕೂಡ ಗೊತ್ತಿದೆ. ಲಿಖಿತ ಉತ್ತರದಲ್ಲಿ ಎಷ್ಟೆಷ್ಟು ಹಣ ಬರಬೇಕೆಂದು ಕೊಡಲಾಗಿದೆ. ನನ್ನ ಹತ್ತಿರ ಕೂಡ ಮಾಹಿತಿ ಇದೆ. ಆದರೆ ಏನು ಸಚಿವರು ಲಿಖಿತವಾಗಿ ಬಾಕಿ ಕೊಡಬೇಕೆಂದು ಕೊಟ್ಟಿರುವಂತಹ ಮೊತ್ತ ಸಮಂಜಸವಾಗಿಲ್ಲ. ನನ್ನ ಹತ್ತಿರ ಮಾಹಿತಿ ಇದೆ. ಬೆಂಗಳೂರು ದಕ್ಷಿಣದಲ್ಲಿ 80 ಲಕ್ಷ ರೂಪಾಯಿಗಳು ಬಾಕಿ ಮತ್ತು ಬೆಂಗಳೂರು ಉತ್ತರದಲ್ಲಿ 60 ಲಕ್ಷ ರೂಪಾಯಿಗಳು ಬಾಕಿ ಇದೆ. ಬೆಂಗಳೂರು ಗ್ರಾಮಾಂತರದಲ್ಲಿ 55 ಲಕ್ಷ ರೂಪಾಯಿಗಳು ಮತ್ತು ರಾಮನಗರ ಜಿಲ್ಲೆಯಲ್ಲಿ 55 ಲಕ್ಷ ಶಿಕ್ಷಕರುಗಳ ವೈದ್ಯಕೀಯ ಮರುಪಾವತಿ ಹಣ ಬಾಕಿ ಇದೆ. ಅಂದರೆ ಇದೊಂದು ನಾಲ್ಕು ಜಿಲ್ಲೆಯಲ್ಲಿ ಮಾತ್ರ ಈ ಸಮಸ್ಯೆ ಇಲ್ಲ. ಇಡೀ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಎಲ್ಲಾ ಶಿಕ್ಷಕರುಗಳಿಗೂ ಕೂಡ ಈ ವೈದ್ಯಕೀಯ ವೆಚ್ಚ ಸಿಗುತ್ತಿಲ್ಲ. ಒಂದು ಜಿಲ್ಲೆಗೆ 3 ರಿಂದ 4 ಲಕ್ಷ ರೂಪಾಯಿಗಳನ್ನುಮಾತ್ರ ಬಿಡುಗಡೆ ಮಾಡಲಾಗುತ್ತಿದೆ. ಮೊದಲು ಏನಾಗುತ್ತಿತ್ತು ಎಂದರೆ ವೇತನದ ಲೆಕ್ಕ ಶೀರ್ಷಿಕೆಯಡಿಯಲ್ಲಿ ಹಣ ಬರುತ್ತಿತ್ತು. ಈ ರೀತಿಯಾಗಿ ಹಣ ಬರುತ್ತಿದ್ದರಿಂದ ತೊಂದರೆ ಇರುತ್ತಿರಲಿಲ್ಲ. ಆದರೆ ವೈದ್ಯಕೀಯ ಮರುಪಾವತಿಗೆ ಒಂದು ಪ್ರತ್ಯೇಕ ಶೀರ್ಷಿಕೆಯನ್ನು ಮಾಡಿ ಒಂದು ಜಿಲ್ಲೆಗೆ 3–4 ಲಕ್ಷ ರೂಪಾಯಿಗಳನ್ನು ಮಾತ್ರ ಕೊಡುತ್ತಿರುವುದರಿಂದ ಎನೇನು ಹಣ ಸಾಕಾಗುತ್ತಿಲ್ಲ. ಕಿಡ್ನಿ, ಕ್ಯಾನ್ಸರ್,

ಹೃದಯದ ಖಾಯಲೆ ಇದ್ದವರು ಸತ್ತು ಹೋದರೂ ಕೂಡ ಹಣ ಸಿಗುತ್ತಿಲ್ಲ. ಅವರ ಹೆಂಡತಿ, ಗಂಡ, ಅವರ ಮಕ್ಕಳುಗಳು ತಿರುಗುತ್ತಿದ್ದರೂ ಹಣ ಸಿಗುತ್ತಿಲ್ಲ. ಬಹಳ ತೊಂದರೆಯಾಗುತ್ತಿದೆ. ಇಲ್ಲ ಇದನ್ನು ವೇತನ ಲೆಕ್ಕ ಶೀರ್ಷಿಕೆ ಅಡಿಯಲ್ಲಿಯೇ ಸೇರಿಸಿ, ಇಲ್ಲವಾ ನೀವು ಬಂದಾಗಿನಿಂದಲೂ ನೀವು ವಿಮೆ ಯೋಜನೆಯನು ತರುತ್ತೇವೆಂದು ಹೇಳುತ್ತಿದ್ದೀರಿ ಅದನ್ನು ನಾವು ಕೇಳುತ್ತಲೇ ಇದ್ದೇವೆ. ಒಂದು ವಿಮಾ ಯೋಜನೆಯನ್ನು ತೆಗೆದುಕೊಂಡು ಬಂದುಬಿಟ್ಟರೆ ಈ ಸಮಸ್ಯೆಯೇ ಇರುವುದಿಲ್ಲ. ಎಲ್ಲರಿಗೂ ಅನುಕೂಲವಾಗುತ್ತದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಸಭಾಪತಿಯವರೆ, ನಿಜ ಶ್ರೀ ಪುಟ್ಟಣ್ಣನವರ ಕಳಕಳಿ, ಅವರು ಸಮಸ್ಯೆಯನ್ನು ವಿಸ್ತರಿಸಿ ಹೇಳಿದ್ದಾರೆ ಅದು ಸತ್ಯ. ನಮ್ಮಲ್ಲಿ ಪಿಯು ಉಪನ್ಯಾಸಕರಿಗೆ ಈ ವರ್ಷ ಕೊರತೆಯಾಗುವುದಿಲ್ಲ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಕರುಗಳಿಗೆ ಕೊರತೆಯಾಗುತ್ತಿದೆ. ನಮಗೆ ಎಷ್ಟರಮಟ್ಟಿಗೆ ಕೊರತೆ ಇದೆ ಎಂದರೆ ಈ ವರ್ಷ 3+3=6 ಕೋಟಿ ರೂಪಾಯಿಗಳನ್ನು ಇಡೀ ರಾಜ್ಯಕ್ಕೆ ಹಣವನ್ನು ಬಿಡುಗಡೆ ಮಾಡಿದ್ದಾರೆ. ಅದು ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಿದ್ದಾರೆ. ಜಿಲ್ಲಾ ಪಂಚಾಯಿತಿಯ ಎಲ್ಲಾ ಇಲಾಖೆಗಳಿಗೆ ಬರುವಂತಹ ಹಣ ಕೇವಲ ಆರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಅದು ನಮ್ಮ ಜಿಲ್ಲೆಗೆ ಬೇಕು. ಆದುದರಿಂದ ಹಣಕಾಸು ಇಲಾಖೆಗೆ ಹೇಳಿದ್ದೇವೆ. ಮೆಡಿಕಲ್ ಬಿಲ್‌ಗಳಿಗೆಲ್ಲಾ ಈ ರೀತಿಯಾಗಿ ವಿಳಂಬ ಮಾಡುವಂಥದ್ದು ಸರಿಯಾದಂತಹ ಕ್ರಮವೇ ಅಲ್ಲ. ಇದು ಮಾನವೀಯತೆಯೇ ಅಲ್ಲ. ಬಾಕಿ ಇರತಕ್ಕಂತಹ ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕು. ಕೋಟ್ಯಾಂತರ ರೂಪಾಯಿಗಳು ಬಾಕಿ ಇದೆ. ವಿಮೆ ವಿಷಯ ಬೇರೆ ಇದೆ. ವೈದ್ಯಕೀಯ ವೆಚ್ಚ ಮರುಪಾವತಿ ಬೇರೆ ಇದೆ. ಇದು ವೈದ್ಯಕೀಯ ವೆಚ್ಚ ಮರುಪಾವತಿ ಬಗ್ಗೆ ಅವರು ಕೇಳುತ್ತಿರುವುದು. ಅನುದಾನಿತ ಶಾಲೆಗಳವರಿಗೆ ವೈದ್ಯಕೀಯ ವೆಚ್ಚ ಮರುಪಾವತಿ ಇಲ್ಲ. ಅವರ ಬಗ್ಗೆ ವಿಮೆ ಯೋಜನೆ ಬಗ್ಗೆ ಸರ್ಕಾರದ ಮುಂದೆ ಇರುವಂತಹ ಪ್ರಸ್ತಾವನೆ. ಅದರೆ ಸರ್ಕಾರಿ ನೌಕರರಿಗೆ ವೈದ್ಯಕೀಯ ವೆಚ್ಚ ಮರುಪಾವತಿಗೆ ಹೆಚ್ಚು ಹಣವನ್ನು ಕೊಡಿ ಎಂದು ಹಣಕಾಸು ಇಲಾಖೆಯವರಿಗೆ ಹೇಳಿದ್ದೇವೆ. ಇನ್ನು

ಹೆಚ್ಚು ಪ್ರಭಾವಿಯಾಗಿ ಮನದಟ್ಟು ಮಾಡಿಕೊಡುತ್ತೇವೆ. ಇನ್ನಷ್ಟು ಹೆಚ್ಚು ಪರಿಣಾಮಕಾರಿಯಾಗಿ ಮನದಟ್ಟು ಮಾಡಿಕೊಡುವ ಪ್ರಯತ್ನವನ್ನು ಮಾಡಿಕೊಡುತ್ತೇವೆ. ಹಣಕಾಸು ಇಲಾಖೆಯವರಿಗೆ ಯಾವ ರೀತಿಯಾಗಿ ಅರ್ಥವಾಗುತ್ತದೆಯೋ ಎನ್ನುವುದು ಗೊತ್ತಿಲ್ಲ. ಮೊನ್ನೆಯ ದಿವಸ ವಿಧಾನ ಸಭೆಯಲ್ಲಿಯೂ ಕೂಡ ಚರ್ಚೆಯಾಯಿತು. ಹಣಕಾಸು ಇಲಾಖೆ ಬಗ್ಗೆ ಹೆಚ್ಚು ಹೇಳವುದಕ್ಕಾಗುವುದಿಲ್ಲ. ಏಕೆಂದರೆ ಅದು ನಮ್ಮ ಸರ್ಕಾರದ ಒಂದು ಭಾಗವೇ ಆಗಿದೆ. ಹಾಗಾಗಿ ವಿಧಾನಸಭೆಯಲ್ಲಿ ಹಣಕಾಸು ಇಲಾಖೆ ಏನು ಅಮೇರಿಕಾ ದೇಶದಲ್ಲಿಯೋ, ಆಕಾಶದಲ್ಲಿಯೋ ಎಂದು ಚರ್ಚೆಯಾಯಿತು. ಅದು ಎಲ್ಲಿಯೂ ಇಲ್ಲ. ಹಣಕಾಸು ಇಲಾಖೆ ನಮ್ಮ ಸರ್ಕಾರ ವ್ಯಾಪ್ತಿಯಲ್ಲಿಯೇ ವಿಧಾನ ಸೌಧದಲ್ಲಿಯೇ ಇದೆ. ಆದರೆ ಹಣಕಾಸು ಇಲಾಖೆಗೆ ಮನದಟ್ಟು ಮಾಡಿಕೊಟ್ಟು ನಮಗೆ ಅಗತ್ಯವಿರುವಂತಹ ಈ ಹಣದ ಬಿಡುಗಡೆಗೆ ಅಗತ್ಯವಾದ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ.

## ಬೆಂಗಳೂರು ನಗರಕ್ಕೆ ಹೊರ ರಾಜ್ಯಗಳಿಂದ ಸರಬರಾಜಾಗುತ್ತಿರುವ ಹಾಲಿನ ಪ್ರಮಾಣದ ಬಗ್ಗೆ.

**310; ಶ್ರೀ ಎಂ. ಶ್ರೀನಿವಾಸ (ವಿಧಾನಸಭೆಯಿಂದ ಚುನಾಯಿತರಾದವರು)**

**ಅ)** ಹೊರ ರಾಜ್ಯಗಳಿಂದ ಬೆಂಗಳೂರು ನಗರಕ್ಕೆ ಸರಬರಾಜು ಆಗುತ್ತಿರುವ ಅಂದಾಜು ಹಾಲಿನ ಪ್ರಮಾಣ ಎಷ್ಟು: (ವಿವರ ನೀಡುವುದು)

**ಆ)** ಹೊರ ರಾಜ್ಯಗಳಿಂದ ಸರಬರಾಜು ಆಗುತ್ತಿರುವ ಹಾಲಿನಲ್ಲಿ ರಾಸಾಯನಿಕ ಮಿಶ್ರಿತ, ಕಳಪೆ ಗುಣಮಟ್ಟದ ಹಾಗೂ ಆರೋಗ್ಯಕ್ಕೆ ಅಪಾಯಕಾರಿ ಆಗಿರುವ ಅಂಶಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ:

**ಇ)** ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು: (ಮಾಹಿತಿ ಒದಗಿಸುವುದು)

**ಈ)** ಇಂತಹ ಚಟುವಟಿಕೆಗಳಲ್ಲಿ ಭಾಗಿಯಾದ ಎಷ್ಟು ವ್ಯಕ್ತಿ ಮತ್ತು ಅಂತಹ ಸಂಸ್ಥೆಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ. (ವಿವರ ಒದಗಿಸುವುದು)

ಉ) ಸಾರ್ವಜನಿಕರಿಗೆ ಶುದ್ಧ ಮತ್ತು ಗುಣಮಟ್ಟದ ಹಾಲು ಪೂರೈಕೆ ಮಾಡುವ ನಿಟ್ಟಿನಲ್ಲಿ ಸರ್ಕಾರದ ನಿಲುವೇನು? (ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು

**ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

ಅ) ಹೊರ ರಾಜ್ಯಗಳಿಂದ ಬೆಂಗಳೂರು ನಗರಕ್ಕೆ ಪ್ರತಿ ದಿನ ಸರಬರಾಜಾಗುತ್ತಿರುವ ಅಂದಾಜು ಹಾಲಿನ ಪ್ರಮಾಣ 7.35 ಲಕ್ಷ ಲೀಟರ್ ಆಗಿರುತ್ತದೆ. ಇದರಲ್ಲಿ ಖಾಸಗಿ ಸಂಸ್ಥೆಗಳಿಂದ ಪ್ಯಾಕೆಟ್ ಹಾಲು 6.50 ಲಕ್ಷ ಲೀಟರ್ ಹಾಗೂ ಬಿಡಿ ಹಾಲು 0.85 ಲಕ್ಷ ಲೀಟರ್ ಒಳಗೊಂಡಿದೆ.

ಆ) ಹೌದು

ಇ) ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ಮತ್ತು ಅದರಡಿ ರಚಿಸಲಾದ ನಿಯಮಗಳು, 2011 ದಿನಾಂಕ: 5-8-2011 ರಿಂದ ರಾಜ್ಯದಲ್ಲಿ ಜಾರಿಗೆ ಬಂದಿದೆ. ಇದರ ಅನ್ವಯ ಹಾಲಿನಲ್ಲಿ ಕಲುಷಿತ ಕಲಬೆರಕೆ , ಅಸುರಕ್ಷಿತ, ಕಳಪೆ ಗುಣಮಟ್ಟ ಮತ್ತು ಮಿಸ್- ಬ್ರಾಂಡ್ ಎಂದು ಕಂಡು ಬಂದ ಪ್ರಕರಣಗಳಲ್ಲಿ ಸಂಬಂಧಪಟ್ಟ ಆಹಾರ ಸುರಕ್ಷತೆ ಅಧಿಕಾರಿಗಳು/ ಅಂಕಿತ ಅಧಿಕಾರಿಗಳು ಸದರಿ ಕಾಯ್ದೆಯನ್ವಯ ಕ್ರಮ ಕೈಗೊಳ್ಳುತ್ತಿದ್ದಾರೆ.

ಈ) 1) ದಿನಾಂಕ: 26-3-2012ರಂದು ಕಲಾಸಿಪಾಳ್ಯದ ವ್ಯಾಪ್ತಿಯಲ್ಲಿ ತಮಿಳುನಾಡಿನಿಂದ ಅನಧಿಕೃತವಾಗಿ 4 ಲಾರಿಗಳಲ್ಲಿ ಮಾರಾಟ ಮಾಡುತ್ತಿದ್ದ ಸುಮಾರು 10,000 ಲೀಟರ್ ಹಾಲನ್ನು ವಶಪಡಿಸಿಕೊಂಡು, ಹಾಲಿನ ಮಾದರಿಯನ್ನು ವಿಶ್ಲೇಷಣೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಿದ್ದು, ಪ್ರಯೋಗಾಲಯದ ವರದಿಯಲ್ಲಿ ಸದರಿ ಹಾಲಿನ ಮಾದರಿಯು ಕಲಬೆರಕೆ ಎಂದು ದೃಢಪಟ್ಟಿದ್ದರಿಂದ 4 ಮಂದಿ ಅಪರಾಧಿಗಳ ಮೇಲೆ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯ, ಬೆಂಗಳೂರು ಇಲ್ಲಿ ಬೃಹತ್ ಬೆಂಗಳೂರು

ಮಹಾನಗರಪಾಲಿಕೆಯ ಆಹಾರ ಸುರಕ್ಷತೆ ಅಧಿಕಾರಿಗಳು ಮೊಕದ್ದಮೆ ದಾಖಲಿಸಿದ್ದಾರೆ. ಅಲ್ಲದೆ, ಸದರಿ ಪ್ರಕರಣದಲ್ಲಿ 8ನೇ ಎ.ಸಿ.ಸಿಎಂ. ನ್ಯಾಯಾಲಯದಲ್ಲಿ ಕಲಾಸಿಪಾಳ್ಯ ಪೋಲೀಸ್ ಠಾಣೆಯ ಪೋಲೀಸ್ ಅಧಿಕಾರಿಗಳು ಸಹ ದಾವೆ ಹೂಡಿರುತ್ತಾರೆ.

2) ದಿನಾಂಕ: 2–6–2012ರಂದು ಬೆಂಗಳೂರಿನ ಹೊಂಬೇಗೌಡ ನಗರದ ಬಳಿ ತಮಿಳುನಾಡಿನಿಂದ ತಂದು ಮಾರಾಟ ಮಾಡುತ್ತಿದ್ದ ಸುಮಾರು 5000 ಲೀಟರ್ ಹಾಲನ್ನು ವಿಲ್ಸನ್ ಗಾರ್ಡನ್ ಪೋಲಿಸ್ ಸಿಬ್ಬಂದಿ ವಶಪಡಿಸಿಕೊಂಡು, ಅಹಾರ ಸುರಕ್ಷತೆ ಅಧಿಕಾರಿಗಳು ಹಾಲಿನ ಮಾದರಿಯನ್ನು ವಿಶ್ಲೇಷಣೆಗೆ ಒಳಪಡಿಸಿ ಸದರಿ ವಿಶ್ಲೇಷಣಾ ವರದಿಯಲ್ಲಿ ಕಳಪೆ ಗುಣಮಟ್ಟ ಎಂದು ದೃಢಪಟ್ಟಿರುವುದರಿಂದ, ಹಾಲನ್ನು ಮಾರಾಟ ಮಾಡುತ್ತಿದ್ದವರ ಮೇಲೆ ನ್ಯಾಯ ನಿರ್ಣಯ ಅಧಿಕಾರಿಗಳು, ಬೆಂಗಳೂರು ಮಹಾನಗರ ಪಾಲಿಕೆಯ ಆಹಾರ ಸುರಕ್ಷತಾಧಿಕಾರಿಗಳು ಮೊಕದ್ದಮೆ ದಾಖಲಿಸಿರುತ್ತಾರೆ.

ರಾಜ್ಯಾದ್ಯಂತ 2011 ನೇ ಸಾಲಿನಲ್ಲಿ 52 ಹಾಲಿನ ಮಾದರಿ ಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೊಳಪಡಿಸಿ, ಇದರಲ್ಲಿ 3 ಹಾಲಿನ ಮಾದರಿಗಳು ಕಲಬೆರಕೆ ಎಂದು ಮತ್ತು 1 ಮಾದರಿಯು ಮಿಸ್–ಬ್ರಾಂಡ್ ಎಂದು ವರದಿಯಾಗಿದ್ದು, ಸಂಬಂಧಿಸಿದ ಆಹಾರ ಸುರಕ್ಷತೆ ಅಧಿಕಾರಿಗಳು ನ್ಯಾಯಾಲಯಗಳಲ್ಲಿ ಮೊಕದ್ದಮೆ ಹೂಡಿರುತ್ತಾರೆ.

ಉ) ಆಹಾರ ಸುರಕ್ಷತೆ ಆಯುಕ್ತರು ದಿನಾಂಕ: 2–1–2012, 2–3–2012 ಹಾಗೂ 6–3–2012ರಂದು ಬಿ.ಬಿ.ಎಂ.ಪಿ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯ ಅನುಷ್ಠಾನ ಅಧಿಕಾರಿಗಳ ಸಭೆ ನಡೆಸಿ, ಹಾಲು ತಯಾರಿಕೆ, ಸರಬರಾಜು ಮತ್ತು ಮಾರಾಟ ಮಾಡುವವರ ತಪಾಸಣೆಗೊಳಿಸಿ, ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಿ, ವಿಶ್ಲೇಷಣಾ ವರದಿಯಲ್ಲಿ ಕಲಬೆರಕೆ ಎಂದು ದೃಢಪಟ್ಟ ಪ್ರಕರಣಗಳಲ್ಲಿ ಕಾನೂನಿನ ಪ್ರಕಾರ ಕ್ರಮಗಳನ್ನು

ಕೈಗೊಳ್ಳಲು ಸೂಚಿಸಲಾಗಿದೆ ಮತ್ತು ಮಾರಾಟಗಾರರಿಗೆ ಸುರಕ್ಷಿತ ವಿಧಾನಗಳನ್ನು ಅಳವಡಿಸಿಕೊಳ್ಳಲು ತಿಳುವಳಿಕೆ ನೀಡಲೂ ಸಹ ತಿಳಿಸಲಾಗಿದೆ.

**ಶ್ರೀ ಎಂ. ಶ್ರೀನಿವಾಸ್:-** ಮಾನ್ಯ ಸಭಾಪತಿಯವರೆ, ನಾನು ಮಂತ್ರಿಯವರಿಗೆ ಕೇಳಿದಂತಹ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಉತ್ತರದಲ್ಲಿ ಹಾಲಿನಲ್ಲಿ ರಾಸಾಯನಿಕ ಮಿಶ್ರಿತವಾಗುತ್ತಿದೆ ಎಂದು ಅವರು ಒಪ್ಪಿಕೊಂಡಿದ್ದಾರೆ. ಅಂದರೆ ನಮ್ಮ ರಾಜ್ಯಕ್ಕೆ ಹಾಲು ಬರುತ್ತಿಲ್ಲ ವಿಷ ಬರುತ್ತಿದೆ. ಈಗ ಅದು ಬೆಂಗಳೂರು ಈ ನಗರಕ್ಕೆ ಮಾತ್ರವಲ್ಲ. ಧಾರವಾಡ, ಬೆಳಗಾಂ, ರಾಯಚೂರು ರಾಜ್ಯದ ಎಲ್ಲಾ ಕಡೆಗೂ ರಾಸಾಯನಿಕ ಹಾಲು ಹೋಗುತ್ತಿದೆ. ಆಮೇಲೆ ಈ ರೀತಿಯ ಹಾಲನ್ನು ಮಾರಾಟ ಮಾಡುವವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂದು ಕೇಳಿದ್ದೆ. ಇದು ಆಹಾರ ಸುರಕ್ಷತೆ ಕಾಯ್ದೆ 2006ನೇ ಇಸವಿಯಲ್ಲಿ ಬಂತು. ಆದರೆ ಅದು ಜಾರಿಗೆ ಬಂದಿದ್ದು 2011ನೇ ಇಸವಿಯಲ್ಲಿ. ಆದರೆ ಸರ್ಕಾರದವರು ರಾಸಾಯನಿಕ ಮಿಶ್ರಿತ ಹಾಲು ಮಾರಾಟ ಮಾಡಿದವರ ಮೇಲೆ ಕೇಸ್‌ಬುಕ್ ಮಾಡಿರುವುದು 2012ನೇ ಇಸವಿಯಲ್ಲಿ. ನನಗೆ ಗೊತ್ತಿರುವಂತೆ 8-10 ವರ್ಷಗಳಿಂದ ಇಂತಹ ಹಾಲು ನಮ್ಮ ರಾಜ್ಯಕ್ಕೆ ಬರುತ್ತಲೇ ಇದೆ. ಅದರೆ ಈಗ ನಮಗೆ ಗೊತ್ತಾಗಿರುವುದು.

ನಾನು ಪತ್ರಿಕೆಯಲ್ಲಿ ಓದಿದೆ, ಅಧಿಕಾರಿಯೊಬ್ಬರು ಹೇಳಿದ್ದಾರೆ. ಬೆಂಗಳೂರಿಗೆ ರಾತ್ರೋರಾತ್ರಿ ಬಂದು ಬಿಡುತ್ತದೆ, ಹಾಗಾಗಿ ನಮಗೆ ಗೊತ್ತಾಗುವುದಿಲ್ಲ. ಯಾರಾದರು ಆ ಬಗ್ಗೆ ನಮ್ಮ ಗಮನಕ್ಕೆ ತಂದರೆ ನಾವು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂತಹ ವಿಚಾರವನ್ನು ತಿಳಿಸಿದರು. ಅಂದರೆ ರಾತ್ರೋರಾತ್ರಿ ಏನು ಬೇಕಾದರೂ ಆಗಬಹುದು, ಯಾವ ಅವ್ಯವಹಾರಗಳು ಬೇಕಾದರೂ ನಡೆಯುಬಹುದು, ಅಂದರೆ ಸರ್ಕಾರ ಮಾತ್ರ ಕಣ್ಣು ಮುಚ್ಚಿಕೊಂಡು ಕುಳಿತಿರುತ್ತದೆ ಎಂದು ಅರ್ಥವೇ? ಸರ್ಕಾರ ಈ ಬಗ್ಗೆ ಏಕೆ ಗಮನ ಹರಿಸುತ್ತಿಲ್ಲ ಎನ್ನುವುದು ನನ್ನ ಪ್ರಶ್ನೆ. ಈ ಕಾಯಿದೆ ಜಾರಿಗೆ ಬಂದು ಸುಮಾರು ಐದಾರು ವರ್ಷಗಳಾದರೂ ಸರ್ಕಾರ ಏಕೆ ಇದನ್ನು ಜಾರಿಗೊಳಿಸುತ್ತಿಲ್ಲ ಮತ್ತು ನಮ್ಮ ಕೆ.ಎಂ.ಎಫ್. ನಲ್ಲಿ ಸಾಕಷ್ಟು ಹಾಲನ್ನು

ಸಂಸ್ಕರಿಸಲಾಗುತ್ತಿಲ್ಲವೇ ಎನ್ನುವುದು ನನ್ನ ಪ್ರಮುಖವಾದ ಪ್ರಶ್ನೆಗಳಾಗಿವೆ. ಸುಮಾರು ಏಳೋವರೆ ಲಕ್ಷ ಲೀಟರ್ ಪ್ರತಿ ದಿವಸ ಹೊರ ರಾಜ್ಯಗಳಿಂದ ಬರುತ್ತಿದೆ ಎಂದರೆ ನಮ್ಮಲ್ಲಿ ಸಾಕಷ್ಟು ಹಾಲು ಉತ್ಪಾದನೆಯಾಗುತ್ತಿಲ್ಲವೆ? ಈ ಪ್ರಶ್ನೆಗಳಿಗೆ ಸರ್ಕಾರ ದಯವಿಟ್ಟು ಉತ್ತರ ಕೊಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಅರವಿಂದ ಲಿಂಬಾವಳಿ:-** ಮಾನ್ಯ ಸಭಾವತಿಯವರೇ, ಹಿರಿಯ ಸದಸ್ಯರಾದಂತಹ ಮಾನ್ಯ ದಯಾನಂದರವರು ಹಾಲಿನ ಗುಣಮಟ್ಟದ ಬಗ್ಗೆ ಮತ್ತು ಅದರ ಕಲಬೆರಕೆಯ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ನಮ್ಮಲ್ಲಿ ಸಾಕಷ್ಟು ಹಾಲು ಉತ್ಪಾದನೆಯಾಗುತ್ತಿಲ್ಲವೇ ಎನ್ನುವಂತಹ ಪ್ರಶ್ನೆ ನನ್ನ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಅದು ಪಶುಸಂಗೋಪನಾ ಇಲಾಖೆ, ಸಹಕಾರ ಇಲಾಖೆಗಳ ಸಚಿವರ ವ್ಯಾಪ್ತಿಗೆ ಬರುತ್ತದೆ. ಆ ದೃಷ್ಟಿಯಿಂದ 2006ರ ಆಹಾರ ಸಂರಕ್ಷಣೆ ಮತ್ತು ಗುಣಮಟ್ಟ ಕಾಯಿದೆ ಅದರಡಿಯಲ್ಲಿ ದಿನಾಂಕ: 05-08-2011 ರಿಂದ ಪ್ರಾಧಿಕಾರ ರಚನೆಗೆ ಅವಕಾಶ ಮಾಡಿಕೊಡಲಾಗಿದೆ. ಅದಕ್ಕೂ ಮೊದಲಿದ್ದ 1954ರ ಆಹಾರ ಕಲಬೆರಕೆ ತಡೆ ಕಾಯಿದೆಯ ಅಡಿಯಲ್ಲಿ, ನಮ್ಮ ಇಲಾಖೆಯಿಂದ ಕೂಡ ಕೆಲವೆಷ್ಟು ಕ್ರಮಗಳನ್ನು ಜರುಗಿಸುವುದಕ್ಕೆ ಅವಕಾಶ ಇತ್ತು ಈಗ ಕೇಂದ್ರ ಸರ್ಕಾರ ಆರೋಗ್ಯ ಇಲಾಖೆಯ ಅಡಿಯಲ್ಲಿ, ಕೇಂದ್ರದ ಪ್ರಾಧಿಕಾರವನ್ನೂ ರಚನೆ ಮಾಡಿದ್ದಾರೆ, ರಾಜ್ಯಗಳು ಮತ್ತು ಜಿಲ್ಲೆಗಳಿಗೂ ಹೇಳಿದ್ದಾರೆ. ಹೀಗಾಗಿ ಕ್ರಮ ಜರುಗಿಸುವಂಥದ್ದಕ್ಕೆ ಮತ್ತು ಇದನ್ನು ಇನ್ನಷ್ಟು ಬಲಪಡಿಸುವ ದೃಷ್ಟಿಯಿಂದ ಈಗ ಸಿದ್ಧತೆಗಳು ನಡೆಯುತ್ತಿವೆ. ಆ ಹಿನ್ನೆಲೆಯಲ್ಲಿ ಇವೊತ್ತು ಹಾಲಿನ ವಿಚಾರವಾಗಿ ಏನು ಪ್ರಸ್ತಾಪ ಮಾಡಿದ್ದಾರೆ ಅಂತಹ ವಿಚಾರಗಳನ್ನು ಪತ್ತೆಹಚ್ಚಿ, reinforce, effective ಆಗಿ ಕೆಲಸ ಮಾಡುತ್ತಿದ್ದೇವೆ. ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವುದಾದರೆ ನಮ್ಮಲ್ಲಿ ಅಷ್ಟು ಸಾಮರ್ಥ್ಯ ಇಲ್ಲ. ನಾವು ಸರ್ಕಾರಕ್ಕೆ 612 ಹುದ್ದೆಗಳನ್ನು ಸೃಜಿಸಬೇಕೆಂದು ಕೇಳಿದ್ದೇವೆ. ಅದು ಪರಿಶೀಲನೆಯಲ್ಲಿದೆ, ಇದಾದರೆ ಇನ್ನೊಂದಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆ. ಅದರರ್ಥ ನಾವು ಏನೂ ಕ್ರಮ ಜರುಗಿಸುತ್ತಿಲ್ಲ ಎನ್ನುವಂತಹ ಪರಿಸ್ಥಿತಿ ಏನೂ ಇಲ್ಲ.

ಹಾಲು ಕಲಬೆರಕೆ ಪ್ರಕರಣಗಳಲ್ಲಿ ಈ ಸಾಲಿನಲ್ಲಿ 87 ಮಾದರಿಗಳನ್ನು ವಿಶ್ಲೇಷಣೆ ಮಾಡಿದ್ದು ಅವುಗಳಲ್ಲಿ 7 ಪ್ರಕರಣಗಳು ದಾಖಲಾಗಿವೆ, ಒಂದು ಮಿಸ್‌ಬ್ರಾಂಡ್ ಆಗಿದೆ. ಈ ಎಲ್ಲಾ 8 ಪ್ರಕರಣಗಳಲ್ಲಿ ಮೊಕದ್ದಮೆಗಳನ್ನು ಹೂಡಿದ್ದೇವೆ. ಅದೇ ರೀತಿ ಮಿನರಲ್ ವಾಟರ್ ವಿಚಾರದಲ್ಲಿಯೂ ಪ್ರಕರಣಗಳನ್ನು ದಾಖಲು ಮಾಡಲಾಗಿದ್ದು 129 ನೀರಿನ ಮಾದರಿಗಳನ್ನು ವಿಶ್ಲೇಷಣೆ ಮಾಡಿದ್ದು 5 ಪ್ರಕರಣಗಳು ದಾಖಲಾಗಿವೆ, 4 ಪ್ರಕರಣಗಳು ಮಿಸ್ ಬ್ರಾಂಡ್ ಆಗಿದೆ. ಅದೇರೀತಿ ಖಾದ್ಯ ತೈಲ ಬೇಳೆಕಾಳುಗಳು, ಉಪ್ಪು, ಸಂಸ್ಕರಿತ ಹಣ್ಣುಗಳು, ಬೆಣ್ಣೆ, ತುಪ್ಪ ಬೇಕರಿ ಪದಾರ್ಥಗಳು ಇತ್ಯಾದಿ ಆಹಾರ ಪದಾರ್ಥಗಳ ಕಲಬೆರಕೆಯ ವಿಚಾರದಲ್ಲಿ ಸಹ 1107 ಮಾದರಿಗಳನ್ನು ವಿಶ್ಲೇಷಿಸಲಾಗಿ 116 ಪ್ರಕರಣಗಳನ್ನು ಕಲಬೆರಕೆ ಎಂದು 64 ಪ್ರಕರಣಗಳು ಮಿಸ್ ಬ್ರಾಂಡ್ ಎಂದೂ ಗುರುತಿಸಲಾಗಿದೆ. ಇಷ್ಟೇಲ್ಲಾ ನಡೆಯುತ್ತಿದೆ.

**ಶ್ರೀ ಎಂ.ಸಿ.ನಾಣಯ್ಯ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾವತಿಯವರೇ, ಒಂದು ವಿಚಾರವನ್ನು ತಮ್ಮ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ದಯವಿಟ್ಟು ಅವರು ತಪ್ಪು ತಿಳಿದುಕೊಳ್ಳಬಾರದು. ಬೆಂಗಳೂರು ನಗರಕ್ಕೆ ತಮಿಳುನಾಡು ಮತ್ತು ಆಂಧ್ರಪ್ರದೇಶದಿಂದ ಸುಮಾರು 7 ಲಕ್ಷ ಲಿಟರ್ ಹಾಲು ಸರಬರಾಜು ಆಗುತ್ತಿದೆ. ಕಳೆದ ಸುಮಾರು ಏಳೆಂಟು ವರ್ಷಗಳಿಂದ ಅವರು ಬೆಂಗಳೂರು ನಗರವನ್ನು ಕೇಂದ್ರೀಕೃತ ಮಾಡಿಕೊಂಡಿದ್ದರು, ಈಗ ಇನ್ನಿತರ ಜಿಲ್ಲೆಗಳಿಗೆ ಕೂಡ ಸರಬರಾಜು ಮಾಡುತ್ತಿದ್ದಾರೆ. ಈ ಹಾಲನ್ನು ಲೀಟರ್‌ಗೆ ₹ 10/- ರಿಂದ ₹ 12/-ಕ್ಕೆ ಮಾಡುತ್ತಿದ್ದಾರೆ. ಕೆಲವು ಭಾಗಗಳಲ್ಲಿ ಕೇವಲ ₹ 6/- ಕ್ಕೆ ಕೂಡ ಸರಬರಾಜು ಮಾಡುತ್ತಿದ್ದಾರೆ. ಈ ಹಾಲಿನಿಂದ ಏನು ಪರಿಸ್ಥಿತಿಯಾಗಬಹುದು ಎಂಬುದನ್ನು ತಾವು ದಯವಿಟ್ಟು ವಿಚಾರ ಮಾಡಬೇಕಾಗುತ್ತದೆ. ನಮ್ಮ ಕೆ.ಎಂ.ಎಫ್. ನಿಂದ ಸುಮಾರು 41 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಅದರಲ್ಲಿ 31 ಲಕ್ಷ ಲೀಟರ್ ಮಾತ್ರ ನಾವು ಖರ್ಚು ಮಾಡುತ್ತಿದ್ದು ಇನ್ನುಳಿದ ಸುಮಾರು 10ಲಕ್ಷ ಲೀಟರ್ ಹಾಲು ಕೆ.ಎಂ.ಎಫ್.ನಲ್ಲಿಯೇ ಉಳಿಯುತ್ತಿದೆ. ಇಂತಹ ಪರಿಸ್ಥಿತಿ ಇದ್ದರೂ ಸುಮಾರು

7 ಲಕ್ಷ ಲೀಟರ್ ಹಾಲು ಹೊರ ರಾಜ್ಯಗಳಿಂದ ನಮ್ಮ ರಾಜ್ಯಕ್ಕೆ ಸರಬರಾಜಾಗುತ್ತಿದೆ ಎಂದರೆ ಆ ಬಗ್ಗೆ ಇದುವರೆಗೂ ಸರ್ಕಾರದ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪೊಲೀಸ್ ಇಲಾಖೆ, ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆ, ಕರ್ನಾಟಕ ಹಾಲು ಒಕ್ಕೂಟ (ಕೆ.ಎಂ.ಎಫ್) ಮತ್ತು ಬೆಂಗಳೂರು ಮಹಾನಗರ ಪಾಲಿಕೆಗಳು ಒಟ್ಟುಗೂಡಿ ಇದನ್ನು ನಿಯಂತ್ರಣ ಮಾಡದಿದ್ದರೆ ಕರ್ನಾಟಕ ರಾಜ್ಯಕ್ಕೆ ಸರಬರಾಜಾಗುತ್ತಿರುವ ಕಳಪೆ ಗುಣಮಟ್ಟದ ಹಾಲಿನ ಪ್ರಮಾಣ ಮತ್ತಷ್ಟು ಹೆಚ್ಚಾಗುತ್ತದೆ. ನಮ್ಮಲ್ಲಿ ಉತ್ಪಾದನೆಯಾಗುತ್ತಿರುವ ಹಾಲಿನ ದರ ಪ್ರತಿ ಲೀಟರ್‌ಗೆ ₹ 20/- ಇರುವಾಗ ಹೊರಗಡೆಯಿಂದ ಬರುವಂತಹ ಹಾಲನ್ನು ಹೇಗೆ ಎಂಟರಿಂದ ಹತ್ತು ರೂಪಾಯಿಗಳಿಗೆ ಮಾರಾಟ ಮಾಡುತ್ತಾರೆ? ಆದ್ದರಿಂದ ದಯವಿಟ್ಟು ಸಂಬಂಧಪಟ್ಟ ಎಲ್ಲ ಇಲಾಖೆಗಳ ಜೊತೆಯಲ್ಲಿ ಒಂದು ಸಭೆ ಕರೆದು ಇದರ ಬಗ್ಗೆ ಗಂಭೀರವಾಗಿ ವಿಚಾರ ಮಾಡಿ ಕಳಪೆ ಹಾಲಿನ ಸರಬರಾಜನ್ನು ನಿಬಂರ್ಧಿಸಬೇಕೆಂದು ವಿನಂತಿಸುತ್ತೇನೆ. ಸಂಬಂಧಪಟ್ಟ ಸಚಿವರು ಗಟ್ಟಿಯಾದ ನಿಲುವನ್ನು ತೆಗೆದುಕೊಂಡರೆ ಈ ಕೆಲಸವನ್ನು ಮಾಡಬಹುದಾಗಿದೆ.

**ಶ್ರೀ ಅರವಿಂದ ಲಿಂಬಾವಳಿ:-** ಮಾನ್ಯ ಸಭಾವತಿಯವರೇ, ಹಿರಿಯ ಸದಸ್ಯರಾದಂತಹ ಮಾನ್ಯ ನಾಣಯ್ಯನವರು ತಿಳಿಸಿರುವಂತಹ ವಿಚಾರ ಸತ್ಯವಾಗಿದೆ, ಮಾನ್ಯ ಸುರೇಶ್‌ಕುಮಾರ್‌ರವರು, ಸೋಮಣ್ಣನವರು ಮುಂತಾದ ಸಚಿವರು ಹಾಗೂ ಬೆಂಗಳೂರಿನ ಶಾಸಕರಿಗೆಲ್ಲಾ ಈ ರೀತಿಯ ಸಾಕಷ್ಟು ಅನುಭವಗಳಾಗಿವೆ.

**ಶ್ರೀ ವಿ. ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯ ರಾದಂತಹ ಮಾನ್ಯ ನಾಣಯ್ಯನವರು ತಿಳಿಸಿರುವಂತಹ ವಿಚಾರದ ಬಗ್ಗೆ ಈಗಾಗಲೇ ಸಾಕಷ್ಟು ಸಲ ಚರ್ಚೆಯಾಗಿದೆ. ಏನೆಲ್ಲಾ ಚರ್ಚೆ ಯಾದರೂ ಸಹ ತಮಿಳುನಾಡಿನ ಈರೋಡ್ ಮತ್ತು ಆಂಧ್ರಪ್ರದೇಶದಿಂದ ಬರತಕ್ಕಂತಹ ಹಾಲನ್ನು ತಡೆಗಟ್ಟುವಲ್ಲಿ ನಮ್ಮ ಅಧಿಕಾರಿಗಳಿಂದ ಎಲ್ಲಿಯೋ ಸ್ವಲ್ಪಮಟ್ಟಿಗೆ ಲೋಪವಾಗಿರುವುದು ಸತ್ಯ, ಅದ್ದರಿಂದ ಕೆಎಂಎಫ್ ಇರಬಹುದು, ಬೃಹತ್

ಬೆಂಗಳೂರು ಮಹಾನಗರ ಪಾಲಿಕೆ ಇರಬಹುದು ಆರೋಗ್ಯ ಮತ್ತು ಕಲ್ಯಾಣ ಇಲಾಖೆ, ನಗರಾಭಿವೃದ್ಧಿ ಇಲಾಖೆ ಈ ರೀತಿ ಈ ವಿಚಾರಕ್ಕೆ ಯಾರೆಲ್ಲಾ ಸಂಬಂಧಪಡುತ್ತಾರೆ ಆ ಎಲ್ಲ ಇಲಾಖೆಗಳ ಅಧಿಕಾರಿಗಳನ್ನೊಳಗೊಂಡ ಒಂದು ಸಭೆಯನ್ನು ಕರೆದು ಚರ್ಚೆ ಮಾಡಿ ಒಂದು ತೀರ್ಮಾರ್ನಕ್ಕೆ ಬರಬೇಕಾಗುತ್ತದೆ. ಹೊರಗಡೆಯಿಂದ ಬರತಕ್ಕಂತಹ ಹಾಲನ್ನು ಕೂಡಲೇ ನಿರ್ಬಂಧಿಸುವುದಕ್ಕೆ ಸಂಬಂಧಿಸಿದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳವುದಕ್ಕಾಗಿ ಒಂದು ವಾರದೊಳಗಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರು ಹಾಗೂ ನಗರಾಭಿವೃದ್ಧಿ ಇಲಾಖೆಯ ಸಚಿವರು ಸಭೆ ಕರೆದು ಚರ್ಚೆ ಮಾಡಿ ತೀಮಾನಕ್ಕೆ ಬರಬೇಕಾಗುತ್ತದೆ. ಏಕೆಂದರೆ ಒಂದು ರೀತಿಯಲ್ಲಿ ನಾಯಿ ಕೊಡೆಗಳಂತೆ ತಲೆ ಎತ್ತುತ್ತಿರುವ ಇವುಗಳನ್ನು ತಪ್ಪಿಸತಕ್ಕಂಥದ್ದು ಬಹಳ ಅವಶ್ಯಕವಾಗಿ ರುವದರಿಂದ ಅದು ಶ್ಲಾಘನೀಯ ಕರ್ತವ್ಯವಾಗುತ್ತದೆ.

**ಸಭಾಪತಿಯವರು:–** ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಗಿಯಿತು, ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

### ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ವಿ.ಸೋಮಣ್ಣ (ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ದಿನಾಂಕ: 27ನೇ ಜುಲೈ 2012 ರ ಸಮೂಹ V ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 65 ಪ್ರಶ್ನೆಗಳ ಪೈಕಿ 52 ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

### 11ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ 9 ಐ.ಐ.ಟಿ.ಗಳನ್ನು ಬೇರೆ ಬೇರೆ ರಾಜ್ಯಗಳಿಗೆ ನೀಡಿ ಕರ್ನಾಟಕಕ್ಕೆ ನೀಡದೆ ಇರುವ ಬಗ್ಗೆ.

### 42; ಡಾ॥ ಎಂ. ಆರ್. ದೊರೆಸ್ವಾಮಿ (ನಾಮ ನಿರ್ದೇಶಿತರು)

**ಅ)** 11ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ 09 ಐ.ಐ.ಟಿ.ಗಳನ್ನು ಬೇರೆ ಬೇರೆ ರಾಜ್ಯಗಳಿಗೆ ನೀಡಿ, ಕರ್ನಾಟಕಕ್ಕೆ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) 12ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿಯಾದರೂ ಕರ್ನಾಟಕಕ್ಕೆ ಐಐಟಿ ಪಡೆಯಲು ರಾಜ್ಯ ಸರ್ಕಾರವು ಕೈಗೊಂಡಿರುವ ಕ್ರಮಗಳೇನು:

ಇ) ಐಐಟಿ ನೀಡಿಕೆಯಲ್ಲಿ ನಮ್ಮ ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವುದಕ್ಕೆ ರಾಜ್ಯ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

**ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು)**

ಅ) ಬಂದಿದೆ.

ಆ) ಕರ್ನಾಟಕದಲ್ಲಿ ಐ.ಐ.ಟಿ. ಸ್ಥಾಪಿಸುವ ಕುರಿತು ಕೇಂದ್ರ ಮಾನವ ಸಂಪನ್ಮೂಲ ಸಚಿವರಿಗೆ ಕಳೆದ 06 ವರ್ಷಗಳಿಂದ ಸತತವಾಗಿ ಕೋರಲಾಗಿದ್ದು, ಕೇಂದ್ರ ಮಾನವ ಸಂಪನ್ಮೂಲ ಸಚಿವರು ದಿನಾಂಕ:17-2-2010 ರಂದು ಕರ್ನಾಟಕದ ಮಾನ್ಯ ಮುಖ್ಯ ಮಂತ್ರಿಯವರಿಗೆ ಪತ್ರ ಬರೆದು ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಐ.ಐ.ಟಿ.ಗಳನ್ನು ಸ್ಥಾಪಿಸಲು ಮೀಸಲಿರಿಸಿದ್ದ ಹಣದಲ್ಲಿ ಈಗಾಗಲೇ ಇತರೆ 08 ರಾಜ್ಯಗಳಲ್ಲಿ ಐ.ಐ.ಟಿ.ಗಳನ್ನು ಮಂಜೂರು ಮಾಡಿರುವುದರಿಂದ ಹಾಗೂ ಕರ್ನಾಟಕದಲ್ಲಿ ಈಗಾಗಲೇ ಇಂಡಿಯನ್ ಇನ್‌ಸ್ಟಿಟ್ಯೂಟ್ ಸೈನ್ಸ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ಕೇಂದ್ರ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲ್ಪಟ್ಟಿರುವುದರಿಂದ ಕರ್ನಾಟಕಕ್ಕೆ ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಐ.ಐ.ಟಿ ಸ್ಥಾಪಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿರುತ್ತಾರೆ. ಪುನಃ ದಿನಾಂಕ: 31-12-2011, 09-03-2012 ಮತ್ತು 02-04-2012 ರಂದು ಕೇಂದ್ರ ಮಾನವ ಸಂಪನ್ಮೂಲ ಸಚಿವರಿಗೆ ಪತ್ರಗಳನ್ನು ಬರೆದು, ಕರ್ನಾಟಕದಲ್ಲಿ ಸುಮಾರು 100 ಕ್ಕೂ ಹೆಚ್ಚು ಅಂತರರಾಷ್ಟ್ರೀಯ ಕಂಪನಿಗಳು ಅಸ್ತಿತ್ವದಲ್ಲಿದ್ದು, ಇಂತಹ ಕಂಪನಿಗಳಲ್ಲಿ ತಾಂತ್ರಿಕ ಗುಣಮಟ್ಟದ ಸಂಶೋಧನೆಯಲ್ಲಿ ಪಾಲ್ಗೊಳ್ಳಲು ಐ.ಐ.ಟಿ.ಗಳಲ್ಲಿ ಅಧ್ಯಯನ ಮಾಡಿ ವಿದ್ಯಾರ್ಥಿಗಳು ಹೆಚ್ಚಿನ ತಾಂತ್ರಿಕ

ಪರಿಣತಿ ಹೊಂದಲು ಕರ್ನಾಟಕಕ್ಕೆ ಒಂದು ಐ.ಐ.ಟಿ ಸ್ಥಾಪಿಸಲು ಕೋರಲಾಗಿದೆ. ದಿನಾಂಕ:09–03–2012ರಂದು ಕೇಂದ್ರ ಮಾನವ ಸಂಪನ್ಮೂಲ ಸಚಿವರು ಮಾನ್ಯ ಮುಖ್ಯ ಮಂತ್ರಿಯವರಿಗೆ ಪತ್ರ ಬರೆದು ಬೆಂಗಳೂರಿನಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ಗುಲ್ಬರ್ಗದಲ್ಲಿ ಕೇಂದ್ರ ವಿಶ್ವವಿದ್ಯಾಲಯ ಸ್ಥಾಪಿತವಾಗಿರುವುದನ್ನು ಪುನರುಚ್ಚರಿಸಿ ಐ.ಐ.ಟಿ. ಗಳನ್ನು ಸ್ಥಾಪಿಸುವ ಕುರಿತು ಹನ್ನೆರಡನೇ ಪಂಚ ವಾರ್ಷಿಕ ಯೋಜನೆ ಅನುಮೋದನೆಯನ್ನು ಕಾಯಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಇ) ಕರ್ನಾಟಕದಲ್ಲಿ ಐ.ಐ.ಟಿ. ಸ್ಥಾಪಿಸುವ ಕುರಿತು ಕೇಂದ್ರ ಮಾನವಸಂಪನ್ಮೂಲ ಸಚಿವರು ಕರ್ನಾಟಕ ಮಾನ್ಯ ಮುಖ್ಯ ಮಂತ್ರಿಯವರಿಗೆ ಪತ್ರ ಬರೆದು ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಐ.ಐ.ಟಿ.ಗಳನ್ನು ಸ್ಥಾಪಿಸಲು ಮೀಸಲಿರಿಸಿದ್ದ ಹಣದಲ್ಲಿ ಈಗಾಗಲೇ ಇತರೆ 08 ರಾಜ್ಯಗಳಲ್ಲಿ ಐ.ಐ.ಟಿ. ಗಳನ್ನು ಮಂಜೂರು ಮಾಡಿರುವುದರಿಂದ ಹಾಗೂ ಕರ್ನಾಟಕದಲ್ಲಿ ಈಗಾಗಲೇ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ಕೇಂದ್ರ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲ್ಪಟ್ಟಿರುವುದರಿಂದ ಕರ್ನಾಟಕಕ್ಕೆ ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಐ.ಐ.ಟಿ. ಸ್ಥಾಪಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿ ಐ.ಐ.ಟಿ.ಗಳನ್ನು ಸ್ಥಾಪಿಸುವ ಕುರಿತು ಹನ್ನೆರಡನೇ ಪಂಚವಾರ್ಷಿಕ ಯೋಜನೆ ಅನುಮೋದನೆಯನ್ನು ಕಾಯಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಈ ಕುರಿತು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಪ್ರಧಾನಮಂತ್ರಿಗಳು ಹಾಗೂ ಮಾನ್ಯ ಕೇಂದ್ರ ಮಾನವ ಸಂಪನ್ಮೂಲ ಸಚಿವರುಗಳನ್ನು ಖುದ್ದಾಗಿ ಭೇಟಿ ಮಾಡಿ ಕರ್ನಾಟಕಕ್ಕೆ ಐ.ಐ.ಟಿ ಸ್ಥಾಪಿಸುವ ಕುರಿತು ಅವರಿಗೆ ಮನವರಿಕೆ ಮಾಡಲಾಗುವುದು.

## ಕರ್ನಾಟಕದಲ್ಲಿನ ಒಟ್ಟು ವಿಶ್ವವಿದ್ಯಾಲಯಗಳ ಸಂಖ್ಯೆ ಬಗ್ಗೆ ಹಾಗೂ ಅವುಗಳಿಗೆ ಮೂಲಭೂತ ಸೌಲಭ್ಯ ಅನುದಾನ ನೀಡುವ ಬಗ್ಗೆ

**43; ಡಾ॥ ಎಂ.ಆರ್. ದೊರೆಸ್ವಾಮಿ (ನಾಮ ನಿರ್ದೇಶಿತರು)**

**ಅ)** ಕರ್ನಾಟಕದಲ್ಲಿ ಹೊಸದಾಗಿ ಆರಂಭಿಸಿರುವ ವಿಶ್ವವಿದ್ಯಾಲಯಗಳನ್ನು ಸೇರಿಸಿ, ಒಟ್ಟು ವಿಶ್ವವಿದ್ಯಾಲಯಗಳ ಸಂಖ್ಯೆ ಎಷ್ಟು

**ಆ)** ಈ ವಿಶ್ವವಿದ್ಯಾಲಯಗಳಿಗೆ ರಾಜ್ಯ ನೀಡಿರುವ ಅನುದಾನ ಎಷ್ಟು? ಮತ್ತು ಯುಜಿಸಿ ಅನುದಾನ ಪಡೆದಿರುವ ವಿಶ್ವವಿದ್ಯಾಲಯಗಳು ಯಾವುದು? ಹಾಗೂ ಯುಜಿಸಿ ಅನುದಾನ ವಿಶ್ವವಿದ್ಯಾಲಯಗಳು ಯಾವುವು

**ಇ)** ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿರುವ ವಿಶ್ವವಿದ್ಯಾಲಯಗಳು ಯಾವುವು? (ಅವುಗಳ ವಿವರ ಒದಗಿಸುವುದು)

**ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು)**

**ಅ)** ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ 17 ವಿಶ್ವವಿದ್ಯಾಲಯಗಳಿವೆ.

**ಆ)** ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ 17 ವಿಶ್ವವಿದ್ಯಾಲಯಗಳಿಗೆ 2012–13ನೇ ಸಾಲಿನಲ್ಲಿ ಯೋಜನೇತರ ಬಾಬ್ತಿನಲ್ಲಿ ಒಟ್ಟು ₹ 27026.00 ಲಕ್ಷಗಳು ಹಾಗೂ ಯೋಜನಾ ಬಾಬ್ತಿನಡಿಯಲ್ಲಿ ಒಟ್ಟು ₹ 5025.13 ಲಕ್ಷಗಳನ್ನು ಒದಗಿಸಲಾಗಿದೆ. ಈ 17 ವಿಶ್ವವಿದ್ಯಾಲಯಗಳ ಪೈಕಿ 12 ವಿಶ್ವವಿದ್ಯಾಲಯಗಳಿಗೆ ವಿಶೇಷ ಘಟಕ ಯೋಜನೆಯಡಿ ಒಟ್ಟು ₹ 990.72 ಲಕ್ಷಗಳು ಮತ್ತು ಗಿರಿಜನ ಉಪಯೋಜನೆಯಡಿ ಒಟ್ಟು ₹ 484.54 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.

ಈ ಕೆಳಕಂಡ ವಿಶ್ವವಿದ್ಯಾಲಯಗಳು ಯು.ಜಿ.ಸಿ ಅನುದಾನ ಪಡೆದಿರುತ್ತವೆ:–

1) ಮೈಸೂರು ವಿಶ್ವವಿದ್ಯಾಲಯ
2) ಬೆಂಗಳೂರು ವಿಶ್ವವಿದ್ಯಾಲಯ

3) ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
4) ಗುಲ್ಬರ್ಗ ವಿಶ್ವವಿದ್ಯಾಲಯ
5) ಕುವೆಂಪು ವಿಶ್ವವಿದ್ಯಾಲಯ
6) ಮಂಗಳೂರು ವಿಶ್ವವಿದ್ಯಾಲಯ
7) ತುಮಕೂರು ವಿಶ್ವವಿದ್ಯಾಲಯ
8) ಕನ್ನಡ ವಿಶ್ವವಿದ್ಯಾಲಯ, ಹಂಪಿ
9) ವಿಜಯನಗರ ಶ್ರೀ ಕೃಷ್ಣದೇವರಾಯ ಬಳ್ಳಾರಿ
10) ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ
11) ದಾವಣಗೆರೆ ವಿಶ್ವವಿದ್ಯಾಲಯ
12) ರಾಣಿಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ,

ಈ ಕೆಳಕಂಡ ವಿಶ್ವವಿದ್ಯಾಲಯಗಳು ಯುಜಿಸಿ ಅನುದಾನ ಪಡೆದಿರುವುದಿಲ್ಲ:-

1) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು
2) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ,
3) ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು.
4) ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು
5) ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ಹಾವೇರಿ.

ಇ) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಇವುಗಳ ಇತ್ತೀಚಿಗೆ ಪ್ರಾರಂಭವಾಗಿದ್ದು, ಈ ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗಳ ಸ್ಥಾಪನೆಗಾಗಿ ಅಗತ್ಯವಾದ ಭೂಮಿಯನ್ನು ಪಡೆಯುವ ಪ್ರಕ್ರಿಯೆಯು ವಿವಿಧ ಹಂತದಲ್ಲಿದೆ. ಈ ಮಧ್ಯೆ ಇವುಗಳ ತತ್‌ಕ್ಷಣದ ಕಾರ್ಯ

ಚಟುವಟಿಕೆಗಳಿಗಾಗಿ ಆಯ್ದ ಸ್ಥಳಗಳಲ್ಲಿ ಅಗತ್ಯ ಕಟ್ಟಡಗಳನ್ನು ಒದಗಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯು ಮುಗಿದ ತಕ್ಷಣವೇ ಈ ವಿಶ್ವವಿದ್ಯಾಲಯಗಳ ಆಡಳಿತ ಮತ್ತು ವಿವಿಧ ಶೈಕ್ಷಣಿಕ ಚಟುವಟಿಕೆಗಳಿಗೆ ಅಗತ್ಯವಾಗಿರುವ ಕಟ್ಟಡಗಳ ನಿರ್ಮಾಣದ ಪ್ರಕ್ರಿಯೆಯು ಪ್ರಾರಂಭವಾಗುವುದು.

**ಬಯಲು ಸೀಮೆ ಅಭಿವೃದ್ಧಿ ಪ್ರಾಧಿಕಾರ ಕಾಮಗಾರಿ ಬಗ್ಗೆ.**

**239; ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ)**

**ಅ)** ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಬಯಲುಸೀಮೆ ಅಭಿವೃದ್ಧಿ ಪ್ರಾಧಿಕಾರದಿಂದ ಕಳೆದ 2 ವರ್ಷಗಳಲ್ಲಿ ತೆಗೆದುಕೊಂಡ ಕಾಮಗಾರಿಗಳಾವುವು

**ಆ)** ಯಾವ ಯಾವ ಕಾಮಗಾರಿಗೆ ಯಾವ ಯಾವ ಶಾಸಕರ ಶಿಫಾರಸ್ಸು ಇದೆ?

**ಶ್ರೀ ಎಸ್ ಶಿವಣ್ಣ (ಯೋಜನೆ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)**

**ಅ) ಮತ್ತು ಆ)** ಅನುಬಂಧ ಲಗತ್ತಿಸಿದೆ.

**ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ: ಚಿತ್ರದುರ್ಗ**

| **ವರ್ಷ: 2010–11** | | | **ಜಿಲ್ಲೆ: ಬಿಜಾಪುರ** |
|---|---|---|---|
| **ಕ್ರ.ಸಂ** | **ಕ್ಷೇತ್ರ** | **ಕಾಮಗಾರಿಯ ವಿವರ** | **ಪ್ರಸ್ತಾವನೆ ಸಲ್ಲಿಸಿದ್ದವರು** |
| 1 | ಬಿಜಾಪುರ | ಬಿಜಾಪುರ (ಕಸಬಾ) ರಿ.ಸ.ನಂ 479 ರಲ್ಲಿ, ಕತಕನಹಳ್ಳಿ ಗ್ರಾಮದ ರಿ.ಸ.ನಂ 54/2 ರಲ್ಲಿ ಹಾಗೂ ಉಕುಮನಾಳ ರಿ.ಸ.ನಂ 123/1ರಲ್ಲಿ ನಾಲಬದು | ಮಾನ್ಯ ಶಾಸಕರು |
| | | ಡಾ॥ ಬಿ.ಆರ್. ಅಂಬೇಡ್ಕರ ಹೈಸ್ಕೂಲ್ ಆವರಣದಲ್ಲಿ ಸಮುದಾಯ ಭವನ (ಕೆ.ಹೆಚ್.ಬಿ.ಕಾಲೋನಿ) ಬಿಜಾಪುರ ಬಿಜಾಪುರ | ಸರ್ಕಾರದ ವಿವೇಚನಾ ನಿಧಿ |

| | | | |
|---|---|---|---|
| | | ಜಿಲ್ಲೆ | |
| | | ಡಾ॥ ಬಿ.ಆರ್. ಅಂಬೇಡ್ಕರ್ ಹೈಸ್ಕೂಲ್ ಆವರಣದಲ್ಲಿ ಸಮುದಾಯ ಭವನದ ಪಕ್ಕದಲ್ಲಿ ಉಚಿತ ಪ್ರಸಾದ ನಿಲಯ ನಿರ್ಮಿಸುವುದು | |
| | | ಶಿವಶರಣೆ ನಿಂಬೆಕ್ಕ ಮಾಲಗಾರ ಸಮಾಜ ಸಮುದಾಯ ಭವನ, ಜಲನಗರ ಬಿಜಾಪುರ, ಬಿಜಾಪುರ ಜಿಲ್ಲೆ | |
| | | ಬಿಜಾಪುರ ವಲಯದ ಬಾಬಾ ನಗರದಲ್ಲಿ ಟ್ರೆಂಚಿಂಗ್ ಹಾಗೂ ಚೆಕ್ ಡ್ಯಾಂ ನಿರ್ಮಾಣ | ಅಧ್ಯಕ್ಷರ ವಿವೇಚನಾ ನಿಧಿ |
| | | ಬಿಜಾಪುರ ತಾ॥ ತೊರವಿ ಗ್ರಾಮದ ರಿ.ಸ.ನಂ 984/2, 855/1+2, 6006/3, 605/1, 605/4 ರಲ್ಲಿ ಕೃಷಿ ಅಭಿವೃದ್ಧಿ ಕಾಮಗಾರಿಗಳು | |
| 2 | ಬ.ಬಾಗೇವಾಡಿ | ಮನಗೂಳಿ ಗ್ರಾಮದ ರಿ.ಸ.ನಂ. 1654ರಲ್ಲಿ (ಬೋರವ್ವ ಕೋಂ.ಸಾಬು ಮಣೂರ) ನಾಲಬದು ನಿರ್ಮಾಣ | ಮಾನ್ಯ ಶಾಸಕರು |
| | | ಬಸವಣಬಾಗೇವಾಡಿ ಪಟ್ಟಣದಲ್ಲಿ ಮಾದರ ಓಣಿಯಲ್ಲಿ ಸಮುದಾಯ ಭವನ | ಸರ್ಕಾರದ ವಿವೇಚನಾ ನಿಧಿ |
| | | ಬಸವಣಬಾಗೇವಾಡಿ ತಾಲ್ಲೂಕಿನ ಉಕ್ಕಲಿ ಗ್ರಾಮದ ಚಲುವಾದಿ ಓಣಿಯಲ್ಲಿ ಸಮುದಾಯ ಭವನ | |
| 3 | ದೇವರಹಿಪ್ಪರಗಿ | ಸಿಂಧಗಿ ತಾ॥ ಮನಕೆಹಾಳ್ ಗ್ರಾಮದ ರಿ.ಸ.ನಂ 57/2 ರಲ್ಲಿ ನಾಲಾಬದು | ಮಾನ್ಯ ಶಾಸಕರು |
| | | ಸಿಂಧಗಿ ತಾ॥ ಜಾಲವಾಡ ಗ್ರಾಮದ ರಿ.ಸ.ನಂ 408 ರಲ್ಲಿ ಲೆವೆಲಿಂಗ್ ಕಾಮಗಾರಿ | ಮಾನ್ಯ ಶಾಸಕರು |
| 4 | ಇಂಡಿ | ಇಂಡಿ ತಾ॥ ಮೈಲಾರ ಗ್ರಾಮದ ಸ.ನಂ 53/2 ರಲ್ಲಿ ಕೃಷಿ ಚಟುವಟಿಕೆ | ಮಾನ್ಯ ಶಾಸಕರು |
| | | ಚಿಕ್ಕಬೇವನೂರು ಸ.ನಂ 162/4 ರಲ್ಲಿ ಕೃಷಿ ಚಟುವಟಿಕೆ | ಮಾನ್ಯ ಶಾಸಕರು |
| | | ಹಂಜಗಿ ಗ್ರಾಮದ ಸನಂ. 291/1 ರಲ್ಲಿ ಕೃಷಿ ಚಟುವಟಿಕೆ. | ಮಾನ್ಯ ಶಾಸಕರು |
| 5 | ನಾಗಠಾಣ | ಮಧಬಾವಿ ಗ್ರಾಮದ ಜಟ್ಟೆಪ್ಪ ರಾಮಣ್ಣ ಲೋಗಾಂವಿ ಸ.ನಂ 370/2ಬ ಭೂಸಾರ ಸಂರಕ್ಷಣೆ | ಮಾನ್ಯ ಶಾಸಕರು |
| | | ಹಡಗಲಿ ಗ್ರಾಮದ ಕಲ್ಲಪ್ಪ ಕೆಂಚಪ್ಪ ಪಡಗಾನೂರ ಸ.ನಂ 39ರಲ್ಲಿ ಭೂಸಾರ | ಮಾನ್ಯ ಶಾಸಕರು |

| | | | |
|---|---|---|---|
| | | ಸಂರಕ್ಷಣೆ | |
| | | ಕವಲಗಿ ಶ್ರೀಶೈಲ ಈರಗೊಂಡಪ್ಪ ಜನಗೊಂಡ ಸ.ನಂ 4/2, 4–03ರಲ್ಲಿ ಬೂಸಾರ ಸಂರಕ್ಷಣೆ | ಮಾನ್ಯ ಶಾಸಕರು |
| 6 | ಬಬಲೇಶ್ವರ | ಬಬಲೇಶ್ವರ ಗ್ರಾಮದ ಸ,ನಂ 1020ರಲ್ಲಿ ನಾಲಬದು ನಿರ್ಮಾಣ | ಮಾನ್ಯ ಶಾಸಕರು |
| | | ಅರಕೇರಿ ಗ್ರಾಮದ ಸ,ನಂ 94/2ರಲ್ಲಿ ನಾಲಬದು | ಮಾನ್ಯ ಶಾಸಕರು |
| | | ತಿಕೋಟ ಗ್ರಾಮದ ಸ,ನಂ 08ರಲ್ಲಿ ನಾಲಬದು ನಿರ್ಮಾಣ | ಮಾನ್ಯ ಶಾಸಕರು |
| | | ಶೇಗುಣಿಸಿ ಗ್ರಾಮದ ಸ,ನಂ 191ರಲ್ಲಿ ನಾಲಬದು ನಿರ್ಮಾಣ | ಮಾನ್ಯ ಶಾಸಕರು |
| | | ಬಬಲೇಶ್ವರ ಗ್ರಾಮದ ಸ,ನಂ 121/1ರಲ್ಲಿ ನಾಲಬದು ನಿರ್ಮಾಣ | ಮಾನ್ಯ ಶಾಸಕರು |
| 7 | ಸಿಂಧಿ | ನಂದಗೇರಿ ಗ್ರಾಮದ ಸ,ನಂ 69/1,81/1 ಮತ್ತು ಬೋರಗಿ ಗ್ರಾಮದ ಸ,ನಂ 127/2ಬಿ, ಮತ್ತು ಚಿಕ್ಕಸಿಂಧಗಿ ಗ್ರಾಮದ ಸ,ನಂ 68/6 ರಲ್ಲಿ ಲೇವಲಿಂಗ್ ಕಾಮಗಾರಿ | ಮಾನ್ಯ ಶಾಸಕರು |
| | | ಆಲಮೇಲ ರಿ.ಸ.ನಂ 541/3 541/2ರಲ್ಲಿ ಭೂ ಅಭಿವೃದ್ಧಿ | ವಿಶೇಷಘಟಕ ಯೋಜನೆ ಮಾನ್ಯ ಶಾಸಕರು ಮತ್ತು ಅಧ್ಯಕ್ಷಕರು |
| 8 | ಮುದ್ದೇಬಿಹಾಳ್ | ಮುದ್ದೇಬಿಹಾಳ್ ತಾ॥ ಬಿದರಕುಂದಿ ಗ್ರಾಮದ ರಿ.ಸ.ನಂ 344/ಎರಲ್ಲಿ ಅಭಿವೃದ್ಧಿ | ಮಾನ್ಯ ಶಾಸಕರು |
| | | ಮುದ್ದೇಬಿಹಾಳ್ ತಾ॥ ನೆರೆಬೆಂಚಿ ಗ್ರಾಮದ ರಿ.ಸ.ನಂ 18 ರಲ್ಲಿ ತಡೆ ಗೋಡೆ ನಿರ್ಮಾಣ | ಮಾನ್ಯ ಶಾಸಕರು |

| ಕ್ರ.ಸಂ | ಕ್ಷೇತ್ರ | ಕಾಮಗಾರಿಯ ವಿವರ | ಪ್ರಸ್ತಾವನೆ ಸಲ್ಲಿಸಿದ್ದವರು |
|---|---|---|---|
| ವರ್ಷ: 2011–12 | | ಜಿಲ್ಲೆ: ಬಿಜಾಪುರ | |
| 1 | ಬಿಜಾಪುರ | ತೊರವಿ ಗ್ರಾಮದ ಸ.ನಂ 1076 ರಲ್ಲಿ ನಾಲಬದು | ಮಾನ್ಯ ಶಾಸಕರು |
| | | ತೊರವಿ ಗ್ರಾಮದ ಸ.ನಂ 937 ರಲ್ಲಿ ನಾಲಬದು | ಮಾನ್ಯ ಶಾಸಕರು |
| | | ತೊರವಿ ಗ್ರಾಮದ ಸ.ನಂ 766ರಲ್ಲಿ ನಾಲಬದು | ಮಾನ್ಯ ಶಾಸಕರು |
| | | ತೊರವಿ ಗ್ರಾಮದ ಸ.ನಂ 621,101/3,374/2, ರಲ್ಲಿ ಕ್ಷೇತ್ರ ನಿರ್ಮಾಣ | ಅಧ್ಯಕ್ಷರ ವಿವೇಚನಾ ನಿಧಿ |
| 2 | ದೇವರಹಿಪ್ಪರಗಿ | ಬಿಜಾಪುರ ಜಿಲ್ಲೆ ಸಿಂಧಗಿ ತಾ॥ ಕೊರವಾರ ಗ್ರಾಮದ ರಿ.ಸ.ನಂ 280/2 ರಲ್ಲಿ ಬದು ನಿರ್ಮಾಣ ಹಾಗೂ ಕೃಷಿ ಚಟುವಟಿಕೆ | ಮಾನ್ಯ ಶಾಸಕರು |
| 3 | ಬ.ಬಾಗೇವಾಡಿ | ಕುಬಕಡ್ಡಿ ಸ.ನಂ 124/1 ಭೂ ಮಟ್ಟ ಮತ್ತು ನಾಲಾಬದು | ಮಾನ್ಯ ಶಾಸಕರು |
| | | ಮುತ್ತಲದಿನ್ನಿ ಸ.ನಂ 23/2ಬ ಭೂ ಮಟ್ಟ ಮತ್ತು ನಾವನಾಬದು | ಮಾನ್ಯ ಶಾಸಕರು |
| | | ವಂದಾಲ ಸ.ನಂ 82 ಭೂ ಮಟ್ಟ ಮತ್ತು ನಾವನಾಬದು | ಮಾನ್ಯ ಶಾಸಕರು |
| 4 | ಇಂಡಿ | ಶ್ಯಾಮರಾಯ ಭೀಮರಾಯ ಕರುರ ಜಮೀನಿನ ಸ.ನಂ 671/1ರಲ್ಲಿ ಭೂಮಿ ಅಭಿವೃದ್ಧಿ ಸಮಪಾತಾಳ ಮತ್ತು ಬದು ನಿರ್ಮಾಣ | ಮಾನ್ಯ ಶಾಸಕರು |
| | | ಅರ್ಜುನ ಗುರಪ್ಪಾ ಕರೂರ ಜಮೀನಿನ ಸ.ನಂ 694 ರಲ್ಲಿ ಭೂಮಿ ಅಭಿವೃದ್ಧಿ, ಸಮಪಾತಾಳ ಮತ್ತು ಬದು ನಿರ್ಮಾಣ | ಮಾನ್ಯ ಶಾಸಕರು |
| | | ನಕುಲ ಗುರಪ್ಪಾ ಕರೂರ ಜಮೀನಿನ ಸ.ನಂ 48/1 ರಲ್ಲಿ ಭೂಮಿ ಅಭಿವೃದ್ಧಿ, ಸಮಪಾತಾಳ ಮತ್ತು ಬದು ನಿರ್ಮಾಣ | ಮಾನ್ಯ ಶಾಸಕರು |
| | | ಸಹದೇವ ಗುರಪ್ಪಾ ಕರೂರ ಜಮೀನಿನ ಸ.ನಂ 648/2 ರಲ್ಲಿ ಭೂಮಿ ಅಭಿವೃದ್ಧಿ, | ಮಾನ್ಯ ಶಾಸಕರು |

| | | | |
|---|---|---|---|
| | | ಸಮಪಾತಾಳ ಮತ್ತು ಬದು ನಿರ್ಮಾಣ | |
| | | ಕರಣ ಕರೂರ ಜಮೀನಿನ ಸ.ನಂ 648/3 ರಲ್ಲಿ ಭೂಮಿ ಅಭಿವೃದ್ಧಿ, ಸಮಪಾತಾಳ ಮತ್ತು ಬದು ನಿರ್ಮಾಣ | ಮಾನ್ಯ ಶಾಸಕರು |
| | ಇಂಡಿ | ಹಿರೇರೂಗಿ ಗ್ರಾಮದ ಶ್ರೀ ಸಿದ್ದಲಿಂಗಯ್ಯ ರುದ್ರಯ್ಯ ಮತಪತಿ ಜಮೀನು ಸ,ನಂ 216ರಲ್ಲಿ ಭೂಅಭಿವೃದ್ಧಿ, ಸಮಪಾತಾಳ ಮತ್ತು ಬದು ನಿರ್ಮಾಣ | ಮಾನ್ಯ ಶಾಸಕರು |
| | | ಉಕಮನಾಳ ರಿ.ಸ.ನಂ 49/1 ರಲ್ಲಿ ನಾಲಾಬದು | ಮಾನ್ಯ ಶಾಸಕರು |
| | | ಕತಕನಹಳ್ಳಿ ರಿ.ಸ.ನಂ 82ರಲ್ಲಿ ಕೃಷಿ ಚಟುವಟಿಕೆ | ಮಾನ್ಯ ಶಾಸಕರು |
| | | ಲಕ್ಷ್ಮಣ ಕಲ್ಲಪ್ಪ ಕಟ್ಟಿಮನಿ ಇವರ ಜಮೀನಿನ ಸ.ನಂ 641 ರಲ್ಲಿ ಭೂ ಅಭಿವೃದ್ಧಿ | ಮಾನ್ಯ ಶಾಸಕರು |
| 5 | ನಾಗಠಾಣ | ಶೋಭ ತಮ್ಮಣ್ಣ ಭಜಂತ್ರಿ ಇವರ ಜಮೀನಿನ ಸ.ನಂ 56/1 ರಲ್ಲಿ ಭೂ ಅಭಿವೃದ್ಧಿ | |
| | | ತಾಯಪ್ಪ ಕೋಂಡಿಬಾ ಮಾನೆ ಇವರ ಜಮೀನಿನ ಸ.ನಂ 96/1 ರಲ್ಲಿ ಭೂ ಅಭಿವೃದ್ಧಿ | ವಿಶೇಷ ಘಟಕ ಯೋಜನೆ ಮಾನ್ಯ ಶಾಸಕರು / ಅಧ್ಯಕ್ಷರು |
| | | ಯಲ್ಲಪ್ಪ ಹೊನ್ನಪ್ಪ ಕಬಾಡೆ ಇವರ ಜಮೀನಿನ ಸ.ನಂ 190ರಲ್ಲಿ ಭೂ ಅಭಿವೃದ್ಧಿ | |
| | | ಸಾಂಯವ್ವ ನಿಂಗಪ್ಪ ತೊರವಿ ಇವರ ಜಮೀನಿನ ಸ.ನಂ 511/1ರಲ್ಲಿ ಭೂ ಅಭಿವೃದ್ಧಿ | |
| 6 | ಸಿಂಧಗಿ | ಇಂಡಿ ತಾ॥ ತಾಂಬಾ ಗ್ರಾಮ ಸರ್ವೆ ನಂ 12/2 ರಲ್ಲಿ ನಾಲಾಬದು | ಮಾನ್ಯ ಶಾಸಕರು |
| | | ಇಂಡಿ ತಾ॥ ತಾಂಬಾ ಗ್ರಾಮ ಸರ್ವೆ ನಂ 12/2 ರಲ್ಲಿ ಕೃಷಿಹೊಂಡ | ಮಾನ್ಯ ಶಾಸಕರು |
| | | ಬಿದರಿಕುಂದಿ ಗ್ರಾಮದ ರಿ.ಸ.ನಂ 74/1 ರಲ್ಲಿ ನಾಲಾಬದು ನಿರ್ಮಾಣ | ಮಾನ್ಯ ಶಾಸಕರು |
| 7 | ಮುದ್ದೇಬಿಹಾಳ್ | ವನಹಳ್ಳಿ ಗ್ರಾಮದ ರಿ.ಸ.ನಂ 84/1+2 ರಲ್ಲಿ ನಾಲಾ ರಿವೆಟ್‌ಮೆಂಟ್ ಮಾಡುವುದು | ಮಾನ್ಯ ಶಾಸಕರು |
| | | ಹುನಕುಂಟಿ ಗ್ರಾಮದ ರಿ.ಸ.ನಂ 83 ಮತ್ತು 84 ರಲ್ಲಿ ಭೂಮಟ್ಟಮಾಡುವುದು | ಮಾನ್ಯ ಶಾಸಕರು |
| 8 | ಬಬಲೇಶ್ವರ | ಸಿದ್ದಾಪುರ ಗ್ರಾಮದ ಸ.ನಂ 43/2ರಲ್ಲಿ ಭೂ ಅಭಿವೃದ್ಧಿ | ಮಾನ್ಯ ಶಾಸಕರು |
| | | ರತ್ನಪುರಿ(ತಾಜಪುರ) ಗ್ರಾಮದ ಸ.ನಂ 49 | ಮಾನ್ಯ |

| | | | |
|---|---|---|---|
| | | ರಲ್ಲಿ ಭೂ ಅಭಿವೃದ್ಧಿ | ಶಾಸಕರು |
| | | ಟಕ್ಕಳಕಿ ಗ್ರಾಮದ ಸ.ನಂ 8/1ಬಿ ರಲ್ಲಿ ಭೂ ಅಭಿವೃದ್ಧಿ | ಮಾನ್ಯ ಶಾಸಕರು |
| | | ಹಂಚನಾಳ ಗ್ರಾಮದ ಸ.ನಂ 517/1ರಲ್ಲಿ ಭೂ ಅಭಿವೃದ್ಧಿ | ಮಾನ್ಯ ಶಾಸಕರು |

## ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ: ಚಿತ್ರದುರ್ಗ

| **ವರ್ಷ: 2010-11** | | **ಜಿಲ್ಲೆ: ಬೆಳಗಾಂ** | |
|---|---|---|---|
| **ಕ್ರ.ಸಂ** | **ಕ್ಷೇತ್ರ** | **ಕಾಮಗಾರಿಯ ವಿವರ** | **ಪ್ರಸ್ತಾವನೆ ಸಲ್ಲಿಸಿದ ಸದಸ್ಯರು/ ಶಾಸಕರು** |
| 1 | ರಾಮದುರ್ಗ | ಉದುಪುಡಿ ಗ್ರಾಮದ ರಿ.ಸ.ನಂ 144, 143 ರಲ್ಲಿ ತಡೆಯಾಣೆ ನಿರ್ಮಾಣ ಮಾಡುವುದು (ಶ್ರೀ ಈಶ್ವರಪ್ಪ ಸಿ ಪಾಟೀಲ, ಶ್ರೀಮತಿ ಲಕ್ಷ್ಮೀಬಾಯಿ ಚಿ. ಅಡವಿ) | ಮಾನ್ಯ ಶಾಸಕರು |
| 2 | ನಿಪ್ಪಾಣಿ | ಚಿಕ್ಕೋಡಿ ತಾ॥ ಚಂದೂರ ಗ್ರಾಮದ ಕಾಳುಗುಡೆ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ (ಸ.ನಂ 347-355) | ಮಾನ್ಯ ಶಾಸಕರು |
| 3 | ಚಿಕ್ಕೋಡಿ-ಸದಲಗಾ | ಚಿಕ್ಕೋಡಿ ತಾ॥ ಚಂದೂರ ಗ್ರಾಮದ ಬ್ಲಾಕ್ ನಂ-1 ರಿ.ಸ.ನಂ 56ರಲ್ಲಿ ನಿಂತ ನೀರನ್ನು ಪೈಪ್ ಮೂಲಕ ಹೊರ ಹಾಕುವುದು. | ಮಾನ್ಯ ಶಾಸಕರು |
| 4 | ರಾಯಭಾಗ | ವಡ್ರಾಳ ಗ್ರಾಮದ ಬಾಗೀರಥ ಹಳ್ಳಕ್ಕೆ ಬಾಂದಾರ ನಿರ್ಮಾಣ | ಮಾನ್ಯ ಶಾಸಕರು |
| | | ಚಿಕ್ಕೋಡಿ ತಾ॥ ಜೈನಾಪುರ ಗ್ರಾಮದ ಎಸ್.ಸಿ. ಕಾಲೋನಿಯಲ್ಲಿ ಸಿ.ಸಿ. ರಸ್ತೆ ನಿರ್ಮಾಣ | ವಿಶೇಷ ಘಟಕ ಯೋಜನೆ ಮಾನ್ಯ ಶಾಸಕರು ಮತ್ತು ಅಧ್ಯಕ್ಷರು |
| | | ಚಿಕ್ಕೋಡಿ ತಾ॥ ಮಜಲಹಟ್ಟಿ ಗ್ರಾಮದ ಎಸ್.ಸಿ.ಕಾಲೋನಿಯಲ್ಲಿ ಸಿ.ಸಿ.ರಸ್ತೆ ಮತ್ತು ಪಕ್ಕಾಗಟರ ನಿರ್ಮಾಣ | |

| | | | |
|---|---|---|---|
| 5 | ಅಥಣಿ | ಅಥಣಿ ತಾ॥ ಅಡಹಳ್ಳಿ ಐಗಳಿ ರಸ್ತೆ ಹಿರೇಹಳ್ಳಕ್ಕೆ ಬ್ರಿಡ್ಜ್ ಕಂ ಬಾಂದಾರಕ್ಕೆ ಪ್ಲಾಂಕ್ ಅಳವಡಿಸುವುದು. | ಮಾನ್ಯ ಶಾಸಕರು |
| 6 | ಕಾಗವಾಡ | ಅಥಣಿ ತಾ॥ ನವಲಿಹಾಳ ಗ್ರಾಮದ ಹತ್ತಿರ ಹಳ್ಳಕ್ಕೆ ಪ್ಲಾಂಕಿಂಗ್ ಅಳವಡಿಸುವುದು | ಮಾನ್ಯ ಶಾಸಕರು |
| | | ಅಥಣಿ ತಾ॥ ಕಿರಣಗಿ ಗ್ರಾಮದ ಹತ್ತಿರ ಹಳ್ಳಕ್ಕೆ ಪ್ಲ್ಯಾಂಕಿಂಗ ಅಳವಡಿಸುವುದು | ಮಾನ್ಯ ಶಾಸಕರು |
| 7 | ಗೋಕಾಕ್ | ಗೋಕಾಕ್ ತಾ॥ ಕ್ಷೇತ್ರ ಕೊಳವಿ ಗ್ರಾಮದಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ | ಮಾನ್ಯ ಶಾಸಕರು |
| | | ಗೋಕಾಕ್ ತಾ॥ ಜಮನಾಳ ಕೊಳವಿ ಗ್ರಾಮದಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ | ಮಾನ್ಯ ಶಾಸಕರು |
| 8 | ಅರಭಾವಿ | ನಾಗನೂರ ಕಿಂಡಿ ಅಣೆಕಟ್ಟು ನಿರ್ಮಾಣ | ಮಾನ್ಯ ಶಾಸಕರು |
| | | ಶಿವಪೂರ (ಹ) ಕಿಂಡಿ ಅಣೆಕಟ್ಟು ನಿರ್ಮಾಣ | ಮಾನ್ಯ ಶಾಸಕರು |
| ವರ್ಷ: 2011–12 | | ಜಿಲ್ಲೆ : ಬೆಳಗಾಂ | |
| 1 | ರಾಮದುರ್ಗ | ಬನ್ನೂರು ಗ್ರಾಮದ ಬ್ಲಾಕ್ ನಂ 1 ಸ.ನಂ. 214 ರಲ್ಲಿ ಚೆಕ್ ಡ್ಯಾಂ ನಿರ್ಮಾಣ (ಸ.ನಂ. 347–355) | ಮಾನ್ಯ ಶಾಸಕರು |
| 2 | ನಿಪ್ಪಾಣಿ | ನಿಪ್ಪಾಣಿ ಮತಕ್ಷೇತ್ರ ನಿಪ್ಪಾಣಿ ಅಮಲಝುರಿ ಮಧ್ಯ ಚೆಕ್ ಡ್ಯಾಂ ನಿರ್ಮಾಣ | ಮಾನ್ಯ ಶಾಸಕರು |
| 3 | ಚಿಕ್ಕೋಡಿ–ಸದಲಗಾ | ಚಿಕ್ಕೋಡಿ ತಾ॥ ಚಂದೂರ ಗ್ರಾಮದ ರಿ.ಸ.ನಂ 9 ರಿಂದ 45 ರಲ್ಲಿ ನೀರು ನಿಂತ ಜಮೀನುಗಳಲ್ಲಿಯ ನೀರನ್ನು ಪೈಪ್ ಮೂಲಕ ಹೊರಹಾಕಿ ಭೂಸಂರಕ್ಷಣೆ ಮಾಡುವುದು. | ಮಾನ್ಯ ಶಾಸಕರು |
| 4 | ರಾಯಭಾಗ | ಚಿಕ್ಕೋಡಿ ತಾ॥ ತೋರಣಹಳ್ಳಿ ಗ್ರಾಮದ ಹಳ್ಳಕ್ಕೆ (ನಗಾರೆಹಳ್ಳ)ಬಾಂದಾರ ನಿರ್ಮಿಸುವುದು | ಮಾನ್ಯ ಶಾಸಕರು |
| | | ಚಿಕ್ಕೋಡಿ ತಾಲ್ಲೂಕಿನ ಕರಗಾಂವ ಗ್ರಾಮದ ಶ್ರೀ ವಿಶ್ವನಾಥ ಭೀಮಪ್ಪಾ ಶೆಟ್ಟೆಪ್ಪಗೋಳ ಇವರ ರಿ.ಸ ನಂ 89/1ಅ ರಲ್ಲಿ ತಡೆ ಹಣೆಕಟ್ಟು ನಿರ್ಮಿಸುವುದು. | ವಿಶೇಷ ಘಟಕ ಯೋಜನೆ ಮಾನ್ಯ ಶಾಸಕರು ಮತ್ತು ಅಧ್ಯಕ್ಷರು |

| | | | |
|---|---|---|---|
| 5 | ಅಥಣಿ | ಅಥಣಿ ತಾ॥ ಕೊಕಟನೂರು ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಪಶುವೈದ್ಯಕೀಯ ಕಾಲೇಜಿನ ಹಿಂಭಾಗದಲ್ಲಿರುವ ಹಳ್ಳಕ್ಕೆ ಬಾಂದಾರ ನಿರ್ಮಾಣ | ಮಾನ್ಯ ಶಾಸಕರು |
| 6 | ಗೋಕಾಕ್ | ಗೋಕಾಕ್ ತಾ॥ ಹಿರೇನಂದಿ ಗ್ರಾಮದಲ್ಲಿಕಿಂಡಿ ಅಣೆಕಟ್ಟು ನಿರ್ಮಾಣ. | ಮಾನ್ಯ ಶಾಸಕರು |
| 7 | ಅಲಭಾವಿ | ಗೋಕಾಕ್ ತಾ॥ಅರಭಾವಿ ಕ್ಷೇತ್ರದ ಗೋಸಬಾಳ ಗ್ರಾಮದಲ್ಲಿ ನಾಲಾಬದು ನಿರ್ಮಾಣ | ಮಾನ್ಯ ಶಾಸಕರು |
| | | ಶ್ರೀ ಮಹಾಶಿವರಶರಣೆ ದಾನಮ್ಮದೇವಿ ದೇವಸ್ಥಾನದ ಆವರಣ ಅಭಿವೃದ್ಧಿ ಕಾಮಗಾರಿ | ಅಧ್ಯಕ್ಷರ ವಿವೇಚನಾ ನಿಧಿ/ ಮಾನ್ಯ ಶಾಸಕರು |
| 8 | ಕಾಗವಾಡ | ಅಥಣಿ ತಾ॥ ಬೇವನೂರ ಗ್ರಾಮದ ಕೆರೆಯ ಹೂಳೆತ್ತುವ ಕಾಮಗಾರಿ | ಮಾನ್ಯ ಶಾಸಕರು |

## ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ: ಚಿತ್ರದುರ್ಗ

| **ವರ್ಷ: 2010–11** | | **ಜಿಲ್ಲೆ: ಬಾಗಲಕೋಟೆ** | |
|---|---|---|---|
| **ಕ್ರ.ಸಂ** | **ಕ್ಷೇತ್ರ** | **ಕಾಮಗಾರಿಯ ವಿವರ** | **ಪ್ರಸ್ತಾವನೆ ಸಲ್ಲಿಸಿದ ಶಾಸಕರು** |
| 1 | ಬಾಗಲಕೋಟೆ | ಬಾಗಲಕೋಟೆ ತಾ॥ ಬೇವೂರು ಗ್ರಾಮದ ರಿ.ಸ.ನಂ 334ರ ಹೊದಲ್ಲಿ ಸಮುದಾಯ ಕೆರೆ ನಿರ್ಮಾಣ ಹಾಗೂ ರಿ.ಸ.ನಂ 335ರಲ್ಲಿ ಹೊಂಡ ನಿರ್ಮಾಣ | ಮಾನ್ಯ ಶಾಸಕರು |
| 2 | ಬಾದಾಮಿ | ಬಾದಾಮಿ ತಾ॥ ವೀರಶೈವ ಮಹಿಳಾ ಸಮುದಾಯ ಭವನ ಕಟ್ಟಡದ ಮುಂದುವರೆದ ಕಾಮಗಾರಿ | ಮಾನ್ಯ ಶಾಸಕರು |
| 3 | ಹುನಗುಂದ | ಹುನಗುಂದ ಪಟ್ಟಣದ ಹುನಗುಂದ ತಾ॥ ಕಪ್ಪನಕೆರೆ ದುರಸ್ತಿ ಮಾಡುವುದು | ಮಾನ್ಯ ಶಾಸಕರು |
| 4 | ಬೀಳಗಿ | ಬೀಳಗಿ ತಾ॥ ಅರಕೇರಿ ಗ್ರಾಮದ ಹಿರೇಹಳ್ಳದಲ್ಲಿ ಜಲಮಟ್ಟವನ್ನು ವೃದ್ಧಿಗೊಳಿಸುವುದು. | ಮಾನ್ಯ ಶಾಸಕರು |

| | | | |
|---|---|---|---|
| | | ಬೀಳಗಿ ತಾ॥ ಹೊನ್ನಿಹಾಳ್ ಗ್ರಾಮದಲ್ಲಿ ಪರಿಶೀಷ್ಟ ಜಾತಿಯ ಜನಾಂಗದ ಹೊಲದ ಹತ್ತಿರ ಏಳುಕುಂಟಿ ನಾಲಾಕ್ಕೆ ಚೆಕ್ ಡ್ಯಾಂ ನಿರ್ಮಾಣ | ವಿಶೇಷ ಘಟಕ ಯೋಜನೆ ಮಾನ್ಯ ಶಾಸಕರು ಮತ್ತು ಅಧ್ಯಕ್ಷರು |

| **ವರ್ಷ: 2011–12** | | **ಜಿಲ್ಲೆ: ಬಾಗಲಕೋಟೆ** | |
|---|---|---|---|
| **ಕ್ರ.ಸಂ** | **ಕ್ಷೇತ್ರ** | **ಕಾಮಗಾರಿಯ ವಿವರ** | **ಪ್ರಸ್ತಾವನೆ ಸಲ್ಲಿಸಿದ ಶಾಸಕರು** |
| 1 | ಬಾಗಲಕೋಟೆ | ಬಾಗಲಕೋಟೆ ತಾ॥ ಬೇವೂರು ಗ್ರಾಮದ ರಿ.ಸ.ನಂ 334 ರಲ್ಲಿ ಸಮುದಾಯ ಕೆರೆಯನ್ನು ಪೂರ್ಣ ಗೊಳಿಸುವುದು | ಮಾನ್ಯ ಶಾಸಕರು |
| 2 | ಬಾದಾಮಿ | ಬಾದಾಮಿ ತಾ॥ ವೀರಶೈವ ಮಹಿಳಾ ಸಮುದಾಯ ಭವನ ಕಟ್ಟಡದ ಮುಂದುವರೆದ ಕಾಮಗಾರಿ | ಮಾನ್ಯ ಶಾಸಕರು |
| 3 | ಹುನಗುಂದ | ಬಲಕುಂದಿ ಗ್ರಾಮದಲ್ಲಿ ಚೆಕ್ ಡ್ಯಾಂ ನಿರ್ಮಾಣ | ಮಾನ್ಯ ಶಾಸಕರು |
| | | ಹಿರೆಓತಗೇರಿ ಗ್ರಾಮದಲ್ಲಿ ಚೆಕ್ ಡ್ಯಾಂ ನಿರ್ಮಾಣ | ಮಾನ್ಯ ಶಾಸಕರು |
| 4 | ಬೀಳಗಿ | ಬೀಳಗಿ ತಾ॥ ಮನಿಕೇರಿ ಗ್ರಾಮದ ರಿ.ಸ.ನಂ 220/ಪಿ22 ರಲ್ಲಿ ನಾಲಾಬದು ನಿರ್ಮಾಣ | ಮಾನ್ಯ ಶಾಸಕರು |

## ವಿಶ್ವವಿದ್ಯಾನಿಲಯಗಳು ವಿದೇಯಕಗಳ ಕುರಿತು

### 406; ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ)

ಅ) ರಾಜ್ಯದಲ್ಲಿ ಬೇರೆ ಬೇರೆ ವಿಶ್ವವಿದ್ಯಾಲಯಗಳ ಆಡಳಿತಾತ್ಮಕ ನಿರ್ವಹಣೆಗಳಿಗಾಗಿ ಎಷ್ಟು ವಿಶ್ವವಿದ್ಯಾಲಯಗಳ ವಿಧೇಯಕಗಳು ಅಂಗೀಕೃತವಾಗಿವೆ.

ಆ) ಈ ರೀತಿ ಒಂದೇ ರಾಜ್ಯದಲ್ಲಿ ಬೇರೆ ಬೇರೆ ವಿಶ್ವವಿದ್ಯಾಲಯಗಳ ಕಾಯ್ದೆ ಇರುವುದು ಸಮಂಜಸವೇ;

ಇ) ರಾಜ್ಯದಲ್ಲಿ ಈ ರೀತಿ ಬೇರೆ ಬೇರೆ ಕಾಯ್ದೆಗಳಿಂದಾಗಿ ಗೊಂದಲ ನಿವಾರಣೆ ಮಾಡಲು ಸರ್ಕಾರ ಏಕ ರೂಪದ ಕಾಯ್ದೆ ರಚಿಸಲು ಚಿಂತನೆ ನಡೆಸಿದೆಯೇ? (ವಿವರ ನೀಡುವುದು)

### ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು)

ಅ) 07

ಆ) ವಿಶ್ವವಿದ್ಯಾಲಯಗಳ ವಿಧೇಯಕಗಳನ್ನು ಕ್ರೋಢೀಕರಿಸಿ ಏಕ ರೂಪದ ಕಾಯ್ದೆಯನ್ನು ರೂಪಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ) ಪರಿಶೀಲಿಸಲಾಗುತ್ತಿದೆ.

## ಆರನೇ ವೇತನ ಸಮಿತಿ ವರದಿ ಕುರಿತು

### 220; ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ)

ಅ) ಆರನೇ ವೇತನ ಸಮಿತಿಯ ವರದಿಯ ಬಳಿಕ ಶಾಲಾ ಶಿಕ್ಷಕರು ಮತ್ತು ಉಪನ್ಯಾಸಕರುಗಳಿಗೆ ನೀಡಿದ ₹ 300/–, ₹ 400/– ಮತ್ತು ₹ 500/–ನ್ನು ಎಲ್ಲಾ ಶಿಕ್ಷಕರು ಮತ್ತು ಉಪನ್ಯಾಸಕರುಗಳಿಗೆ ನೀಡಲಾಗಿದೆಯೇ;

ಆ) ನೀಡಲಾಗದಿದ್ದಲ್ಲಿ ಮುಖ್ಯೋಪಾಧ್ಯಾಯರಿಗೆ, ಪ್ರಾಂಶುಪಾಲರಿಗೆ ಹಾಗೂ 2008ರ ನಂತರ ನೇಮಕಗೊಂಡ ಶಿಕ್ಷಕರು ಮತ್ತು ಉಪನ್ಯಾಸಕರುಗಳಿಗೆ ನೀಡದಿರಲು ಕಾರಣಗಳೇನು;

ಇ) ಈ ವಿಶೇಷ ಭತ್ಯೆಯನ್ನು ಯಾವಾಗ ನೀಡಲಾಗುವುದು?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) ಸರ್ಕಾರದ ಆದೇಶ ಸಂಖ್ಯೆ ಇಡಿ 264 ಎಸ್ ಎಲ್ ಬಿ 2012, ದಿನಾಂಕ: 09-05-2012ರ ಆದೇಶದಲ್ಲಿ ರಾಜ್ಯದ ಸರ್ಕಾರಿ/ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರುಗಳಿಗೆ ಮಾಸಿಕ 300-00 ರೂ. ಸರ್ಕಾರಿ / ಅನುದಾನಿತ ಪ್ರೌಢಶಾಲಾ ಸಹ ಶಿಕ್ಷಕರುಗಳಿಗೆ ಮಾಸಿಕ 400-00 ರೂ. ಸರ್ಕಾರಿ / ಅನುದಾನಿತ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರುಗಳಿಗೆ ಮಾಸಿಕ 500-00 ರೂ. ಗಳ ವಿಶೇಷ ಭತ್ಯೆಯನ್ನು ಪರಿಷ್ಕರಿಸಿ ಮಂಜೂರು ಮಾಡಲಾಗಿದೆ.

ಪ್ರಸ್ತುತ ಈ ಸೌಲಭ್ಯವನ್ನು ಈ ಹಿಂದೆ ಪಡೆಯುತ್ತಿರುವ ಶಿಕ್ಷಕರು / ಉಪನ್ಯಾಸಕರುಗಳಿಗೆ ಮಾತ್ರ ಅನ್ವಯವಾಗುವಂತೆ ಮಂಜೂರು ಮಾಡಲಾಗಿರುತ್ತದೆ.

ಆ) **ಮತ್ತು** ಇ) ಇದರ ಒಂದೇ ಉತ್ತರ ಇರುವುದು. ಸರ್ಕಾರದ ಆದೇಶ ಸಂಖ್ಯೆ. ಎಫ್‌ಡಿ 31 ಎಸ್ ಆರ್ ಪಿ 2007, ದಿನಾಂಕ:28-08-2008 ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹೆಚ್ಚಿನ ವೇತನ ಶ್ರೇಣಿ ₹ 6800-13000 ನೀಡಲಾಗಿದೆ. ಇವರಿಗೆ ₹ 6250/- ಪ್ರಾರಂಭಿಕ ವೇತನ ಶ್ರೇಣಿ ಬದಲಾಗಿ 6800/- ರೂ. ಗಳ ಪ್ರಾರಂಭಿಕ ವೇತನ ಶ್ರೇಣಿಗೆ ಅರ್ಹರಾಗುವುದರಿಂದ, ದಿನಾಂಕ: 01-08-2008 ರಂದು ಅಥವಾ ನಂತರ ನೇಮಕಾತಿ ಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮಾಸಿಕ ವಿಶೇಷ ಭತ್ಯೆಯನ್ನು ಮಂಜೂರು ಮಾಡಿರುವುದಿಲ್ಲ.

5ನೇ ವೇತನ ಆಯೋಗದ ಮಧ್ಯಂತರ ವರದಿಯಲ್ಲಿ ಮಾಡಿರುವ ಶಿಫಾರಸ್ಸಿನನ್ವಯ ವೇತನ ತಾರತಮ್ಯ ಇರುವ ಸಹ ಶಿಕ್ಷಕರು ಮತ್ತು ಉಪನ್ಯಾಸಕರಿಗೆ ಮಾತ್ರ ಈ ಭತ್ಯೆಯನ್ನು ನೀಡಲಾಗಿದೆ. ಈ ವರದಿಯಲ್ಲಿ ಮುಖ್ಯೋಪಾಧ್ಯಾಯರು ಮತ್ತು ಉಪ ಪ್ರಾಂಶುಪಾಲರುಗಳಿಗೆ ಈ ವಿಶೇಷ ಭತ್ಯೆಯನ್ನು ನೀಡಲು ಶಿಫಾರಸ್ಸು ಮಾಡದೇ ಇರುವುದರಿಂದ ಇವರು ವಿಶೇಷ ಭತ್ಯೆಗೆ ಅರ್ಹರಿರುವುದಿಲ್ಲ.

**ಶಿಕ್ಷಕರ ವೇತನ ಕುರಿತು**

**404; ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ)**

**ಅ)** ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಸರ್ಕಾರಿ ಮತ್ತು ಅನುದಾನಿತ ಶಿಕ್ಷಕರುಗಳಿಗೆ ವೇತನ ನೀಡಲು ಯಾವ ಕ್ರಮಗಳನ್ನು ಅನುಸರಿಸಲಾಗುತ್ತಿದೆ.

**ಆ)** ರಾಜ್ಯದಲ್ಲಿ ಬೇರೆ ಬೇರೆ ಜಿಲ್ಲೆಗಳ್ಲಲಿ ಶಿಕ್ಷಕರ ಸಂಬಳ ವಿತರಣೆಯಲ್ಲಿ ಆಗಾಗ ವಿಳಂಬವಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

**ಇ)** ಬಂದಿದ್ದರೆ ಇದಕ್ಕೆ ಕಾರಣವೇನು;

**ಈ)** ಇನ್ನು ಮುಂದೆ ಈ ರೀತಿ ವಿಳಂಬವಾಗದಿರಲು ಮತ್ತು ತಿಂಗಳ ಮೊದಲನೇ ವಾರ ಸಂಬಳ ವಿತರಣೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

**ಉ)** ಬೇರೆ ಬೇರೆ ಇಲಾಖೆಗಳಲ್ಲಿ ವೇತನವನ್ನು ಚೆಕ್ ಮೂಲಕ ನೌಕರರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡುವಂತೆ ಸರ್ಕಾರಿ ಮತ್ತು ಅನುದಾನಿತ ವೇತನವನ್ನು ECS (Electronic Credit System) ಮೂಲಕ ಜಮಾ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)**

**ಅ)** ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರುಗಳಿಗೆ ವೇತನಕ್ಕಾಗಿ ಅನುದಾನವನ್ನು ಆರ್ಥಿಕ ಇಲಾಖೆ ವತಿಯಿಂದ ತ್ರೈಮಾಸಿಕ ಕಂತುಗಳಲ್ಲಿ ನೇರವಾಗಿ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್‌ಗಳಿಂದ ಶಿಕ್ಷಕರುಗಳ ವೇತನಕ್ಕಾಗಿ ಅನುದಾನವನ್ನು ಜಿಲ್ಲಾ ಉಪ ನಿರ್ದೇಶಕರ ಕಚೇರಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗಳ ಡ್ರಾಯಿಂಗ್ ಅಧಿಕಾರಿಗಳು ಪಡೆದು, ವೇತನ ಬಿಲ್ಲುಗಳನ್ನು ಹೆಚ್.ಆರ್.ಎಂ.ಎಸ್. ತಂತ್ರಾಂಶದ ಮೂಲಕ ಖಜಾನೆಗೆ ಸಲ್ಲಿಸಿ ವೇತನ ಡ್ರಾ ಮಾಡಲು ಕ್ರಮವಹಿಸಲಾಗುತ್ತಿದೆ.

**ಆ)** ವೇತನ ಪಾವತಿಯು ವಿಳಂಬವಾಗುತ್ತಿರುವ ಬಗ್ಗೆ ಯಾವುದೇ ದೂರು ಬಂದಿರುವುದಿಲ್ಲ.

**ಇ)** ಸರ್ಕಾರದಿಂದ ಕಾಲಕಾಲಕ್ಕೆ ಅನುದಾನವನ್ನು ಜಿಲ್ಲಾಪಂಚಾಯತ್‌ಗಳಿಗೆ ಬಿಡುಗಡೆ ಮಾಡುತ್ತಿದ್ದು, ವೇತನ ಬಿಲ್ಲುಗಳನ್ನು ಪ್ರತೀ ತಿಂಗಳು 20ನೇ ತಾರೀಖಿನ ಒಳಗಾಗಿ ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ, ಅಳವಡಿಸಿ, ಬಿಲ್ಲುಗಳನ್ನು ಪ್ರತಿ ಮಾಹೆ 26ನೇ ತಾರೀಖಿನೊಳಗಾಗಿ ಖಜಾನೆಗೆ ಸಲ್ಲಿಸಬೇಕಾಗಿರುತ್ತದೆ. ಈ ಬಿಲ್ಲುಗಳನ್ನು ಹೆಚ್.ಆರ್.ಎಂ.ಎಸ್. ಅಳವಡಿಸುವಲ್ಲಿ ವಿಳಂಬವಾದಾಗ, ಬಿಲ್ಲುಗಳಲ್ಲಿ ಲೋಪಗಳಿದ್ದರೆ, ವೇತನ ಪಾವತಿ ವಿಳಂಬವಾಗುತ್ತಿದೆ. ಖಜಾನೆ ಎಸ್.ಬಿ.ಎಂ ಬ್ಯಾಂಕಿಗೆ ಚೆಕ್‌ಗಳನ್ನು ನೀಡುತ್ತಿದ್ದು ಇತರೆ ಬ್ಯಾಂಕಿಗೆ ಜಮಾ ಮಾಡಿದಲ್ಲಿ ಹೊಂದಾಣಿಕೆಯಾಗುವಲ್ಲಿ ವಿಳಂಬವಾಗುತ್ತದೆ.

**ಈ)** ಸರ್ಕಾರದಿಂದ ಕಾಲಕಾಲಕ್ಕೆ ಅನುದಾನವನ್ನು ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಗಳಿಗೆ ಬಿಡುಗಡೆ ಮಾಡಲಾಗುತ್ತಿದ್ದು. ಪ್ರತಿ ಮಾಹೆಯ ಅಂತ್ಯದೊಳಗೆ ವೇತನ ಪಾವತಿಸುವಂತೆ ಕ್ರಮ ಕೈಗೊಂಡು ಹಾಗೂ ಮಾಹಿತಿಯನ್ನು 5ನೇ ತಾರೀಖಿನೊಳಗಾಗಿ

ಸಲ್ಲಿಸುವಂತೆ ತಿಳಿಸಿ ಇಲಾಖಾವತಿಯಿಂದ ಆಗಿಂದಾಗ್ಗೆ ಸುತ್ತೋಲೆಗಳ ಮೂಲಕ ಸೂಕ್ತ ನಿರ್ದೇಶನಗಳನ್ನು ನೀಡಲಾಗುತ್ತದೆ.

ಉ) ಹೆಚ್.ಆರ್.ಎಂ.ಎಸ್. ತಂತ್ರಾಂಶದ ಮೂಲಕ ಸರ್ಕಾರಿ ಹಾಗೂ ಅನುದಾನಿತ ಶಿಕ್ಷಕರುಗಳ ವೇತನ ಬಿಲ್ಲುಗಳನ್ನು ತಯಾರಿಸಲಾಗುತ್ತಿದ್ದು ಖಜಾನೆಗೆ ಸಲ್ಲಿಸಿ ಚೆಕ್ ECS (Electronic Credit System) ಮೂಲಕ ಸಂಬಂಧಿಸಿದ ನೌಕರರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತಿದೆ.

**ಸಹಕಾರಿ ಬ್ಯಾಂಕುಗಳಿಗೆ ನಾಮನಿರ್ದೇಶನ ಮಾಡುವ ಕುರಿತು**

**340; ಶ್ರೀ ವೀರಕುಮಾರ್ ಅಪ್ಪಸೋ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಸಹಕಾರಿ ಬ್ಯಾಂಕುಗಳಿಗೆ ಮತ್ತು ಸಂಘ ಸಂಸ್ಥೆಗಳಿಗೆ ಸರ್ಕಾರದ ವತಿಯಿಂದ ನಾಮನಿರ್ದೇಶನ ಮಾಡಲಾಗುತ್ತಿದೆಯೇ

ಆ) ಹಾಗಿದ್ದಲ್ಲಿ, ನಾಮನಿರ್ದೇಶನ ಮಾಡಲು ಅನುಸರಿಸುತ್ತಿರುವ ನಿಯಮವೇನು

ಇ) ಇದರಲ್ಲಿ ಬೆಳಗಾಂ ಜಿಲ್ಲೆಯಲ್ಲಿ ಯಾವ ಯಾವ ಬ್ಯಾಂಕುಗಳಿಗೆ ನಾಮನಿರ್ದೇಶನ ಮಾಡಲಾಗಿದೆ?

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ಸಹಕಾರ ಸಚಿವರು)**

ಅ) ಸಹಕಾರಿ ಬ್ಯಾಂಕುಗಳಿಗೆ ಸರ್ಕಾರದಿಂದ ನಾಮನಿರ್ದೇಶನ ಮಾಡಲಾಗುತ್ತಿದೆ.

ಆ) ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಕಲಂ 98ಜಿ ರನ್ವಯ ನಾಮನಿರ್ದೇಶನ ಮಾಡಲಾಗುತ್ತದೆ.

ಇ) ಬೆಳಗಾವಿ ಜಿಲ್ಲೆಯ ಈ ಕೆಳಗಿನ 07 ತಾಲ್ಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು (ಪಿಕಾರ್ಡ್) ಗಳಿಗೆ ಸರ್ಕಾರದಿಂದ ನಾಮನಿರ್ದೇಶನ ಮಾಡಲಾಗಿದೆ.

1. ಪಿಕಾರ್ಡ್ ಬ್ಯಾಂಕ್ ನಿ., ಬೆಳಗಾವಿ
2. ಪಿಕಾರ್ಡ್ ಬ್ಯಾಂಕ್ ನಿ., ಖಾನಾಪೂರ
3. ಪಿಕಾರ್ಡ್ ಬ್ಯಾಂಕ್ ನಿ., ಹುಕ್ಕೇರಿ
4. ಪಿಕಾರ್ಡ್ ಬ್ಯಾಂಕ್ ನಿ., ರಾಮದುರ್ಗ
5. ಪಿಕಾರ್ಡ್ ಬ್ಯಾಂಕ್ ನಿ., ಗೋಕಾಕ್
6. ಪಿಕಾರ್ಡ್ ಬ್ಯಾಂಕ್ ನಿ., ಅಥಣಿ
7. ಪಿಕಾರ್ಡ್ ಬ್ಯಾಂಕ್ ನಿ., ಬೈಲಹೊಂಗಲ

**ರದ್ದಾದ/ಅಸ್ತಿತ್ವದಲ್ಲಿರದ ಎರಡು ಸಲ ಅನುದಾನಸಹಿತವಾಗಿ ಕಾನೂನು ಬಾಹಿರವಾಗಿ ಸ್ಥಳಾಂತರಿಸಲು ಅನುಮತಿ ನೀಡುವ ಬಗ್ಗೆ.**

**379; ಶ್ರೀ ಬಸವರಾಜ ಎಸ್ ಹೊರಟ್ಟಿ (ಶಿಕ್ಷಕರ ಕ್ಷೇತ್ರ)**

**ಅ)** ರದ್ದಾದ / ಅಸ್ತಿತ್ವದಲ್ಲಿರದ ರಾಣೆಬೆನ್ನೂರು ತಾಲ್ಲೂಕಿನ ಶ್ರೀ ಜಿ.ಆರ್. ಪಾಟೀಲ ಪ್ರೌಢಶಾಲೆಯನ್ನು ಎರಡು ಸಲ ಅನುದಾನ ಸಹಿತವಾಗಿ ಕಾನೂನುಬಾಹಿರವಾಗಿ ಸ್ಥಳಾಂತರಿಸಲು ಅನುಮತಿ ನೀಡಿರುವುದು. ನಿಜವೇ;

**ಆ)** ಹಾಗಿದ್ದಲ್ಲಿ ಇಂತಹ ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ಅನುದಾನಸಹಿತವಾಗಿ ಅನುಮೋದಿಸಲಾಗುವುದೇ;

**ಇ)** ಇದೇ ಪ್ರೌಢಶಾಲೆಗೆ ಸರ್ಕಾರಿ ಆದೇಶ ಸಂಖ್ಯೆ: ಇಡಿ 357 ಎಲ್.ಬಿ.ಪಿ 2010, ದಿನಾಂಕ: 19–05–2011 ರಂದು ಅನುದಾನರಹಿತವಾಗಿ ಹೊಸ ಶಾಲೆ ಎಂದು ಸರ್ಕಾರಿ ಆದೇಶ ಹೊರಡಿಸಿರುವುದು. ನಿಜವೆ;

**ಈ)** ಹಾಗಿದ್ದಲ್ಲಿ ಸರ್ಕಾರಿ ಆದೇಶ ಸಂಖ್ಯೆ. ಇಡಿ 177 ಎಲ್‌ಬಿಪಿ 2011 [ಭಾ] ದಿನಾಂಕ 21–04–2012 ರನ್ವಯ ಅನುದಾನಸಹಿತವಾಗಿ ರಾಣೆಬೆನ್ನೂರು ತಾಲ್ಲೂಕ್ ಮಾಗೋಡಕ್ಕೆ ಸ್ಥಳಾಂತರರಿಸಲು ಯಾವ ಕಾನೂನಿನಡಿಯಲ್ಲಿ ಸ್ಥಳಾಂತರಿಸಲಾಗಿದೆ. ಅದಕ್ಕೆ ಕಾರಣಗಳೇನು;

ಉ) ರದ್ದಾದ ಅಸ್ತಿತ್ವದಲ್ಲಿಲ್ಲದ ಈ ಪ್ರೌಢಶಾಲೆಯ ಹಿಂದಿನ ಸಿಬ್ಬಂದಿ ಬೇರೆ ಕಡೆ ಸ್ಥಳಾಂತರಗೊಂಡಿದ್ದರೂ ಮತ್ತೆ ಕಾನೂನುಬಾಹಿರ ಶಾಲೆಗೆ ಮರು ನಿಯುಕ್ತಿಗೊಳಿಸುವುದರೊಂದಿಗೆ ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ಪುನಃ ನೀಡಲು ಇರುವ ಕಾರಣಗಳೇನು;

ಊ) ಕಾನೂನುಬಾಹಿರ ಆದೇಶವನ್ನು ರದ್ದುಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) ಮಹಾತ್ಮಾಗಾಂಧಿ ಶಿಕ್ಷಣ ಸಂಸ್ಥೆ, ರಾಣೆಬೆನ್ನೂರ ಈ ಸಂಸ್ಥೆಯಡಿ ಶ್ರೀ ಜಿ.ಆರ್.ಪಾಟೀಲ ಪ್ರೌಢಶಾಲೆಯನ್ನು 1985–96ನೇ ಸಾಲಿನಲ್ಲಿ ರಾಣೆಬೆನ್ನೂರು ತಾಲ್ಲೂಕು, ಮಾಕನೂರು ಗ್ರಾಮದಲ್ಲಿ ಪ್ರಾರಂಭಿಸಲಾಗಿದೆ. ದಿನಾಂಕ:31–03–2000ದಂದು ಸಹಾಯಾನು ದಾನಕ್ಕೆ ಒಳಪಟ್ಟಿರುತ್ತದೆ. ಸದರಿ ಗ್ರಾಮದಲ್ಲಿ 1997–98ನೇ ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆ ಪ್ರಾರಂಭಿಸಿದ್ದರಿಂದ, ಸದರಿ ಶಾಲೆಗೆ ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾದ ಕಾರಣ ಸದರಿ ಶಾಲೆಯನ್ನು ಇಲಾಖೆಯ ಅನುಮತಿಯೊಂದಿಗೆ 2003 ನೇ ಸಾಲಿನಲ್ಲಿ ಅದೇ ತಾಲ್ಲೂಕಿನ ಗಂಗಾಪುರ ಗ್ರಾಮಕ್ಕೆ ಸ್ಥಳಾಂತರಿಸಲಾಗಿದೆ. ಸರ್ಕಾರವು 2006–07ನೇ ಸಾಲಿನಲ್ಲಿ ಗಂಗಾಪುರ ಗ್ರಾಮಕ್ಕೆ ಸರ್ಕಾರಿ ಪ್ರೌಢಶಾಲೆಯನ್ನು ಮಂಜೂರು ಮಾಡಿದ್ದು, ಸರ್ಕಾರಿ ಪ್ರೌಢಶಾಲೆ ಪ್ರಾರಂಭವಾದ ಕಾರಣ ಪ್ರೌಢಶಾಲೆಗೆ ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾದ ಕಾರಣ ಸರ್ಕಾರದ ಪತ್ರ ಸಂಖ್ಯೆ ಇಡಿ 357 ಎಲ್‌ಬಿಪಿ 2010, ದಿನಾಂಕ: 19–05–2011ರನ್ವಯ ಈ ಶಾಲೆಯನ್ನು ರಾಣೆಬೆನ್ನೂರು ತಾಲ್ಲೂಕಿನ ಮಾಗೋಡು ಗ್ರಾಮಕ್ಕೆ ಸ್ಥಳಾಂತರಿಸಲು ಅನುಮತಿ ನೀಡಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಸರ್ಕಾರದ ಪತ್ರ ಸಂಖ್ಯೆ. ಇಡಿ 357 ಎಲ್.ಬಿ.ಪಿ 2010, ದಿನಾಂಕ: 19–05–2011 ರನ್ವಯ ಸದರಿ ಶಾಲೆಯನ್ನು ರಾಣೆಬೆನ್ನೂರು ತಾಲ್ಲೂಕಿನ ಮಾಗೋಡು ಗ್ರಾಮಕ್ಕೆ ಸ್ಥಳಾಂತರಿಸಲು ಅನುಮತಿ ನೀಡಲಾಗಿದೆ.

ಈ) ಸರ್ಕಾರದ ಪತ್ರ ಸಂಖ್ಯೆ. ಇಡಿ 177 ಎಲ್‌ಬಿಪಿ 2011 [ಭಾ] ದಿನಾಂಕ 21–04–2012 ರ ಪತ್ರದಲ್ಲಿ ಸದರಿ ಜಿ.ಆರ್. ಪಾಟೀಲ ಪ್ರೌಢಶಾಲೆ, ಗಂಗಾಪೂರ, ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ ಈ ಪ್ರೌಢಶಾಲೆಯು ಸ್ಥಳಾಂತರಗೊಂಡ ಗಂಗಾಪೂರ ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆ ಪ್ರಾರಂಭಿಸಿದ್ದರಿಂದ ವಿಶೇಷ ಪ್ರಕರಣವೆಂದು ಪರಿಗಣಿಸಿ, ಮಾಗೋಡ ಗ್ರಾಮಕ್ಕೆ ಸ್ಥಳಾಂತರಿಸಲು ಅನುಮತಿ ನೀಡಲಾಗಿದೆ.

ಉ) ಸರ್ಕಾರದ ಪತ್ರ ಸಂಖ್ಯೆ. ಇಡಿ 177 ಎಲ್‌ಬಿಪಿ 2011 [ಭಾ] ದಿನಾಂಕ 21–04–2012 ರ ಪತ್ರದಲ್ಲಿ ಸದರಿ ಶಾಲೆಯು ಅನುದಾನಿತ ಶಾಲೆಯಾಗಿದ್ದು, ಅನುದಾನಸಹಿತವಾಗಿ ಸ್ಥಳಾಂತರಿಸಲು ಅನುಮತಿ ನೀಡಿದ್ದು, ಅದರಂತೆ ಈ ಶಾಲೆಯ ಶಿಕ್ಷಕರನ್ನು ಅದೇ ಶಾಲೆಗೆ ಪುನರ್ ನಿಯುಕ್ತಿಗೊಳಿಸಲು ತಿಳಿಸಲಾಗಿದೆ.

ಊ) ಉದ್ಭವಿಸುವುದಿಲ್ಲ.

**ಮಕ್ಕಳ ಹಕ್ಕುಗಳ ರಕ್ಷಣಾ ಕಾನೂನು ಜಾರಿ ಕುರಿತು**

**378; ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ)**

1) ರಾಜ್ಯದಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಕಾನೂನು ಯಾವಾಗಿನಿಂದ ಜಾರಿಗೆ ಬಂದಿದೆ.

2) ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಸರ್ಕಾರ ಜಾರಿಗೊಳಿಸಿದ ನಿಯಮಾವಳಿಗಳು ಯಾವುವು.

3) ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಶಾಸಕರ ವೇದಿಕೆ ರಚನೆಯಾಗಿದ್ದು, ಇಲ್ಲಿಯವರೆಗೆ ನಡೆಸಿದ ಕಾರ್ಯ ಚಟುವಟಿಕೆಗಳಾವುವು.

4) ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಸರ್ಕಾರ ಹಮ್ಮಿಕೊಂಡ ಜನ ಜಾಗೃತಿ ಕಾರ್ಯಕ್ರಮಗಳು ಯಾವುವು ಮತ್ತು ಅವು ಕಾರ್ಯಗತವಾಗಲು ಸರ್ಕಾರ ಕೈಗೊಂಡ ಕ್ರಮಗಳೇನು?

**ಶ್ರೀ ಕಳಕಪ್ಪ ಜಿ ಬಂಡಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)**

1) ಮಕ್ಕಳ ರಕ್ಷಣೆ ಮತ್ತು ಪೋಷಣೆಗಾಗಿ ಕೇಂದ್ರ ಕಾಯ್ದೆಯಾದ ಬಾಲ ನ್ಯಾಯ (ಮಕ್ಕಳ ರಕ್ಷಣೆ ಮತ್ತು ಪೋಷಣೆ) ಕಾಯ್ದೆ, 2000, ದಿನಾಂಕ: 01.04.2001 ಹಾಗೂ ತಿದ್ದುಪಡಿ ಕಾಯ್ದೆ, 2006 ದಿನಾಂಕ: 23.08.2006 ರಿಂದ ಕರ್ನಾಟಕದಲ್ಲಿ ಜಾರಿಯಲ್ಲಿರುತ್ತದೆ ಹಾಗೂ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕಾಯ್ದೆ, 2005 ರನ್ವಯ ದಿನಾಂಕ: 27–09–2007 ರಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವನ್ನು ಸ್ಥಾಪಿಸಲಾಗಿದೆ.

2) ಮೇಲಿನ ಕಾಯ್ದೆಗಳಿಗೆ ಬಾಲನ್ಯಾಯ (ಮಕ್ಕಳ ರಕ್ಷಣೆ ಮತ್ತು ಪೋಷಣೆ) ಕರ್ನಾಟಕ ನಿಯಮ, 2010ನ್ನು ದಿನಾಂಕ: 30.12.2010 ರಲ್ಲಿ ಹಾಗೂ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನಿಯಮಾವಳಿಗಳನ್ನು ದಿನಾಂಕ: 06.10.2010ರಲ್ಲಿ ರಚಿಸಲಾಗಿದೆ.

3) 2007ರಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಆಸಕ್ತಿಯುಳ್ಳ ಶಾಸಕರು ಮಕ್ಕಳ ರಕ್ಷಣೆಗಾಗಿ Karnatka Legislators Fourm for Child Rights ನ್ನು ರಚಿಸಿಕೊಂಡಿರುತ್ತಾರೆ.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳಗಳಿಗಾಗಿ ಶಾಸಕರ ವೇದಿಕೆಯ

www.childfriendlylegislatorsforumkarnatakblogspot.com ಬ್ಲಾಗಿನ ಮೂಲಕ ಜನರು ಕೇಳುವ ಪ್ರಶ್ನೆಗಳನ್ನು ಕ್ರೋಢೀಕರಿಸುವ ವಿಶ್ಲೇಷಿಸುವ ಹಾಗೂ ಸಾಧ್ಯ ಪರಿಹಾರಗಳನ್ನು ಸೂಚಿಸುವ

ಜವಾಬ್ದಾರಿಯನ್ನು ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ನೆರವಿನಿಂದ ವೇದಿಕೆ ನಿರ್ವಹಿಸುತ್ತಿದೆ.

4) 1. ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಬಾಲ ನ್ಯಾಯ ಕಾಯ್ದೆಯನ್ವಯ ಪ್ರತಿ ಜಿಲ್ಲೆಯಲ್ಲಿ ರಕ್ಷಣೆ ಮತ್ತು ಪೋಷಣೆಯ ಅವಶ್ಯಕತೆ ಇರುವ ಮಕ್ಕಳಿಗಾಗಿ ಮಕ್ಕಳ ಕಲ್ಯಾಣ ಸಮಿತಿಗಳನ್ನು ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳಿಗಾಗಿ ಬಾಲ ನ್ಯಾಯ ಮಂಡಳಿಗಳನ್ನು ರಚಿಸಲಾಗಿದೆ. ಈ ಎಲ್ಲಾ ಸಮಿತಿಗಳು ಕಾರ್ಯನಿರತವಾಗಿವೆ.

2. ಮಕ್ಕಳ ಹಕ್ಕುಗಳ ಬಗ್ಗೆ ಕಿರುಹೊತ್ತಿಗೆಗಳನ್ನು 138 ತಾಲ್ಲೂಕು ಶಾಲಾ ಮಕ್ಕಳಿಗೆ ವಿತರಿಸಲಾಗಿದೆ.

3. ಪ್ರಸಾರಭಾರತಿ ಮತ್ತು ಎಫ್‌ಎಂ ರೈನ್‌ಬೋ ಅಕಾಶವಾಣಿ ಅರಿವು ಕಾರ್ಯಕ್ರಮಗಳನ್ನು ಪ್ರತಿ ಗುರುವಾರ ಬೆಳಿಗ್ಗೆ 7.15 ರಿಂದ 7.30ರ ವರೆಗೆ ಪ್ರಸ್ತುತಪಡಿಸಲಾಗಿರುತ್ತದೆ.

4. "ಮಕ್ಕಳ ಹಕ್ಕುಗಳ ರಕ್ಷಣೆ ಹಾಗೂ ಉನ್ನತಿ" ವಿಷಯ ಕುರಿತು ರಾಜ್ಯಮಟ್ಟದ ಎರಡು ದಿನಗಳ ದುಂಡು ಮೇಜಿನ ಕಾರ್ಯಾಗಾರವನ್ನು ನಡೆಸಲಾಗಿರುತ್ತದೆ.

5. ಮಕ್ಕಳ ಹಕ್ಕುಗಳ ರಕ್ಷಣೆ ಕುರಿತು ಅರಿವು ಮೂಡಿಸಲು ಶಿಕ್ಷಕರು ಪೋಲೀಸರು, ಸ್ವಯಂಸೇವಾ ಪ್ರತಿನಿಧಿಗಳಿಗೆ ತರಬೇತಿಯನ್ನು ಏರ್ಪಡಿಸಲಾಗಿರುತ್ತದೆ.

6. ತಾಲ್ಲೂಕು ಮಟ್ಟದಲ್ಲಿ ಮಕ್ಕಳ ಹಕ್ಕುಗಳ ಕುರಿತು ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ನಡೆಸಲಾಗಿರುತ್ತದೆ.

7. ಮಕ್ಕಳ ಮೇಲಿನ ದೌರ್ಜನ್ಯದ ಪ್ರಕರಣಗಳನ್ನು ತ್ವರಿತಗತಿಯಲ್ಲಿ ನಡೆಸಲು ಬೆಂಗಳೂರು ನಗರದಲ್ಲಿ ಪ್ರತ್ಯೇಕವಾಗಿ ಮಕ್ಕಳ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಲಾಗಿದೆ.

**ಪ್ರಾಥಮಿಕ ಶಾಲೆಗಳಲ್ಲಿ ಗೌರವ ಶಿಕ್ಷಕರುಗಳನ್ನು ಖಾಯಂ ಗೊಳಿಸುವ ಬಗ್ಗೆ.**

**396; ಶ್ರೀ ಡಿ.ಎಸ್. ವೀರಯ್ಯ (ವಿಧಾನ ಸಭಾ ಕ್ಷೇತ್ರ)**

ಅ) ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಗೌರವ ಶಿಕ್ಷಕರಾಗಿ 1988 ರಿಂದಲೂ 163 ಮಂದಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಸೇರಿದ ಶಿಕ್ಷಕರು ₹ 1600/–ಗಳ ವೇತನ ಪಡೆದು ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಈ ಹುದ್ದೆಗಳನ್ನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳಿಗೆ ಲಭ್ಯವಿದ್ದು ಹಿಂಬಾಕಿ (ಬ್ಯಾಕ್‌ಲಾಗ್) ಹುದ್ದೆಗಳಾಗಿ ತುಂಬಲು ತರಬೇತಿ ಪಡೆಯದ ಶಿಕ್ಷಕರನ್ನು ತುಂಬಲಾಗಿದೆಯೇ;

ಇ) 22 ವರ್ಷಗಳ ಸೇವಾ ಅವಧಿಯ ನಂತರವೂ ಕೂಡ ತರಬೇತಿಯನ್ನು ನೀಡಿ ಖಾಯಂ ಮಾಡದಿರುವುದು ಮೀಸಲಾತಿ ನಿಯಮಗಳ ಉಲ್ಲಂಘನೆಯಾಗಿಲ್ಲವೇ;

ಈ) ಇವರ 22–23 ವರ್ಷಗಳ ಸೇವೆಯನ್ನು ತರಬೇತಿ ಎಂದು ಪರಿಗಣಿಸಿ ಎಲ್ಲಾ 163 ಮಂದಿ SC/ST ಗಳಿಗೆ ಸೇರಿದ ಶಿಕ್ಷಕರನ್ನು ಖಾಯಂಗೊಳಿಸಿ ಇವರ ಮೂಲ ವೇತನವನ್ನು ₹ 6800/–ಗಳು ಎಂದು ಪರಿಗಣಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ಈ ಹಿಂದೆ ತರಬೇತಿ ಪಡೆಯದೆ ಸರ್ಕಾರಿ ಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಖಾಯಂ ನೌಕರರಿಗೆ ಮೂಲವೇತನ ನಿಗಧಿ ಪಡಿಸಿದ ರೀತಿಯಲ್ಲಿ 163 ಶಿಕ್ಷಕರನ್ನು ಕೂಡ ಖಾಯಂಗೋಳಿಸಿ ಮೂಲವೇತನ ನಿಗಧಿ ಪಡಿಸಲು ಇರುವ ಅಡಚಣೆಗಳೇನು?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) 67 ಜನ ತರಬೇತಿ ಹೊಂದಿದ ಗೌರವ ಶಿಕ್ಷಕರಿಗೆ ಗೌರವ ಧನವನ್ನು ₹ 1600/–ರಿಂದ 4000/–ಕ್ಕೆ ಹೆಚ್ಚಿಸಲಾಗಿದೆ.

ಆ) ಬ್ಯಾಕ್ ಲಾಗ್ ಹುದ್ದೆಗಳಿಗೆ ತುಂಬಿರುವುದಿಲ್ಲ

ಇ) 163 ತರಬೇತಿ ಹೊಂದದ ಗೌರವ ಶಿಕ್ಷಕರಿಗೆ 120 ದಿನಗಳ ತರಬೇತಿಗೆ ನಿಯೋಜಿಸಲಾಗಿದೆ.

ಈ) ಗೌರವ ಶಿಕ್ಷಕರನ್ನು ಖಾಯಂಗೊಳಿಸುವ ಬಗ್ಗೆ ಎಲ್ಲಾ ಜಿಲ್ಲೆಗಳಿಂದ ಮಾಹಿತಿ ಸಲ್ಲಿಸಲು ಎಲ್ಲಾ ಉಪನಿರ್ದೇಶಕರುಗಳಿಗೆ ತಿಳಿಸಲಾಗಿದೆ.

ಉ) ತರಬೇತಿ ಪಡೆಯದ ಗೌರವ ಶಿಕ್ಷಕರನ್ನು ಖಾಯಂಗೊಳಿಸಲು ಪ್ರಸ್ತುತ ಜಾರಿಯಲ್ಲಿರುವ ನಿಯಮಗಳನ್ವಯ ಅವಕಾಶವಿರುವುದಿಲ್ಲ.

**ಕೃಷಿ ಯೋಗ್ಯ ರಾಸುಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ.**

**421; ಶ್ರೀ ಮುತ್ತಿಕಟ್ಟಿ ವೀರಣ್ಣ (ವಿಧಾನ ಸಭಾ ಕ್ಷೇತ್ರ)**

ಅ) ಗದಗ, ಹಾವೇರಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕೃಷಿ ಯೋಗ್ಯ ರಾಸುಗಳನ್ನು ಅಭಿವೃದ್ಧಿಪಡಿಸಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ

ಆ) ಸದರಿ ಜಿಲ್ಲೆಗಳಲ್ಲಿ ಜಾನುವಾರು ಸಂವರ್ಧನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆಯೇ

ಇ) ಈ ಯೋಜನೆಗಳಿಗಾಗಿ ಕಳೆದ ಮೂರು ವರ್ಷಗಳಲ್ಲಿ ಒದಗಿಸಲಾದ ಹಣವೆಷ್ಟು? ಅದರಂತೆ ಖರ್ಚು ಮಾಡಲಾದ ಹಣವೆಷ್ಟು?

**ಶ್ರೀ ರೇವುನಾಯಕ ಬೆಳಮಗಿ (ಪಶುಸಂಗೋಪನೆ ಸಚಿವರು)**

ಅ) ಗದಗ್, ಹಾವೇರಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕೃಷಿ ಯೋಗ್ಯ ರಾಸುಗಳನ್ನು ಅಭಿವೃದ್ಧಿಪಡಿಸಲು ಖಿಲಾರಿ ತಳಿ ವೀರ್ಯವನ್ನು ಜಾನುವಾರು ಸಂವರ್ಧನಾ ಕೇಂದ್ರ ಧಾರವಾಡ, ಇಲ್ಲಿಂದ ಪಡೆದು ಜಿಲ್ಲೆಗಳ ಎಲ್ಲಾ ಪಶುವೈದ್ಯಕೀಯ ಸಂಸ್ಥೆಗಳ ಮುಖಾಂತರ ವಿತರಿಸಿ ಕೃತಕ ಗರ್ಭಧಾರಣೆಯ ಮೂಲಕ ಕೃಷಿಯೋಗ್ಯವಾದ ಜಾನುವಾರುಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ ಧಾರವಾಡ ಕೇಂದ್ರದಲ್ಲಿ 2009-10, 2010-11, 2011-12ನೇ ಸಾಲಿನಲ್ಲಿ ಒಟ್ಟು 6.56 ಲಕ್ಷ ಘನೀಕೃತ ವೀರ್ಯ ನಳಿಕೆಗಳನ್ನು ಉತ್ಪಾದಿಸಿ ಉಪಯೋಗಿಸಲಾಗುತ್ತಿದೆ. ಇದಲ್ಲದೆ ದೇವಣಿ ತಳಿಯ ಘನೀಕೃತ ವೀರ್ಯವನ್ನೂ ಸಹ ಈ ಜಿಲ್ಲೆಗಳಲ್ಲಿ ಕೃತಕ ಗರ್ಭಧಾರಣೆಯ ಮುಖಾಂತರ ಕೃಷಿಯೋಗ್ಯ ರಾಸುಗಳ ಅಭಿವೃದ್ಧಿಗೆ ಕ್ರಮವಹಿಸಿದೆ.

ಆ) ಹಾವೇರಿ ಮತ್ತು ಧಾರವಾಡ ಜಿಲ್ಲೆಯಲ್ಲಿ ಜಾನುವಾರು ಸಂವರ್ಧನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಗದಗ ಜಿಲ್ಲೆಯಲ್ಲಿ ಜಾನುವಾರು ಸಂವರ್ಧನಾ ಕೇಂದ್ರಗಳನ್ನು ಸ್ಥಾಪಿತವಾಗಿರುವುದಿಲ್ಲ.

ಇ) ಈ ಯೋಜನೆಗಳಿಗಾಗಿ ಕಳೆದ ಮೂರು ವರ್ಷಗಳಲ್ಲಿ ಒದಗಿಸಲಾದ ಮತ್ತು ಖರ್ಚು ಮಾಡಿದ ಹಣದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

## ಅನುಬಂಧ

## ಖಿಲಾರಿ ತಳಿ ಸಂವರ್ಧನಾ ಕೇಂದ್ರ, ಬಂಕಾಪುರ ಮತ್ತು ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ ಧಾರವಾಡ ಇವುಗಳಿಗೆ ಕಳೆದ 3 ವರ್ಷಗಳಿಂದ ಒದಗಿಸಲಾದ ಮತ್ತು ವೆಚ್ಚಮಾಡಲಾದ ಹಣದ ವಿವರ:

(₹ ಲಕ್ಷಗಳಲ್ಲಿ)

| ಕ್ರ.ಸಂ | ಕ್ಷೇತ್ರಗಳು | 2009–10 | | 2010–11 | | 2011–12 | |
|---|---|---|---|---|---|---|---|
| | | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು |
| 1 | ಖಿಲಾರಿ ತಳಿ ಸಂವರ್ಧನಾ ಕೇಂದ್ರ ಬಂಕಾಪುರ | 53.25 | 52.51 | 45.76 | 45.52 | 98.29 | 97.66 |
| 2 | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ ಧಾರವಾಡ | 80.53 | 71.15 | 78.25 | 78.00 | 127.44 | 125.98 |
| ಒಟ್ಟು | | **133.78** | **123.66** | **124.01** | **123.52** | **225.73** | **223.64** |

## ಮೇವು ಅಭಿವೃದ್ಧಿ ಪಡಿಸುವ ಬಗ್ಗೆ.

## 476; ಶ್ರೀ ಮತ್ತಿಕಟ್ಟಿ ವೀರಣ್ಣ (ವಿಧಾನ ಸಭಾಕ್ಷೇತ್ರ)

**ಅ)** ಮೇಲಿಂದ ಮೇಲೆ ಬರುವ ಬರಗಾಲದಿಂದಾಗಿ ಜಾನುವಾರುಗಳಿಗೆ ಮೇವಿನ ಕೊರತೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

**ಆ)** ರಾಜ್ಯದ ಜಾನುವಾರು ಕ್ಷೇತ್ರಗಳಲ್ಲಿ ಹಾಗೂ ರೈತರ ಜಮೀನಿನಲ್ಲಿ ಮೇವು ಅಭಿವೃದ್ಧಿ ಪಡಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು

**ಇ)** ಮೇವು ಅಭಿವೃದ್ಧಿ ಕುರಿತು ರೈತರಿಗೆ ತರಬೇತಿ ನೀಡಲಾಗುವುದೇ?

**ಶ್ರೀ ರೇವುನಾಯಕ ಬೆಳಮಗಿ (ಪಶುಸಂಗೋಪನೆ ಸಚಿವರು)**

ಅ) ಹೌದು

ಆ) 1. ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಹಿಂದುಳಿದ 114 ತಾಲ್ಲೂಕುಗಳಲ್ಲಿ ಬಹುವಾರ್ಷಿಕ ಮೇವಿನ ಬೆಳೆ ಬೆಳೆಯುವುದು ಹಾಗೂ ಶೇ.50 ರ ಸಹಾಯದೊಂದಿಗೆ ಕೈಚಾಲಿತ / ವಿದ್ಯುತ್ ಚಾಲಿತ ಹುಲ್ಲು ಕತ್ತರಿಸುವ ಯಂತ್ರ ಸರಬರಾಜು ಮಾಡುವ ಕಾರ್ಯಕ್ರಮ ಯೋಜಿಸಿದ್ದು ಅನುಷ್ಠಾನ ಗೊಳಿಸಲಾಗುತ್ತಿದೆ.

2. ತ್ವರಿತ ಮೇವು ಅಭಿವೃದ್ಧಿ ಯೋಜನೆಯಡಿ ಹಾಗೂ ಸೆಂಟ್ರಲ್ ಮಿನಿಕಿಟ್ ಟೆಸ್ಟಿಂಗ್ ಪ್ರೋಗ್ರಾಂ ಅಡಿಯಲ್ಲಿ ಮೇವಿನ ಬಿಜದ ಕಿರು ಚೀಲವನ್ನು ಉಚಿತವಾಗಿ ರೈತರಿಗೆ ವಿತರಣೆ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ. ತ್ವರಿತ ಮೇವು ಅಭಿವೃದ್ಧಿ ಯೋಜನೆ ಯಡಿಯಲ್ಲಿ ಪ್ರತಿ ತಾಲ್ಲೂಕಿನಲ್ಲಿ ಮೇವನ್ನು ಸಂಸ್ಕರಿಸಿ ಬಳಕೆಯಲ್ಲಿ ಉಂಟಾಗುವ ನಷ್ಟವನ್ನು ತಪ್ಪಿಸಲು ಹಾಗೂ ಶೇಖರಣೆಯನ್ನು ಉತ್ತಮಪಡಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗಿದೆ.

3. ರಾಜ್ಯದ ಜಾನುವಾರು ಕ್ಷೇತ್ರಗಳು ಹಾಗೂ ವಿವಿಧ ಸರ್ಕಾರಿ ಸ್ವಾಧೀನ ಸಂಸ್ಥೆಗಳಲ್ಲಿ ಮೇವು ಸಂಸ್ಕರಣೆ ಮಾಡಿ ದಾಸ್ತಾನು ಮಾಡುವ ಕ್ರಮವನ್ನು ಉತ್ತೇಜಿಸಲು ಸಂಚಾರಿ ಮೇವು ಅಚ್ಚು ಮಾಡುವ ಘಟಕಗಳನ್ನು (Mobile Fodder Block making Units) ಸ್ಥಾಪಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

4. ಕೆ.ಎಂ.ಎಫ್ ವತಿಯಿಂದ ಮೇವಿನ ಬೀಜವನ್ನು ರೈತರಿಗೆ ನೀಡಿ ಅವರಿಂದ ಉತ್ಪಾದಿತವಾದ ಮೇವಿನ ಬೀಜವನ್ನು ಮರು ಖರೀದಿಸುವ ಕಾರ್ಯಕ್ರಮ ಅನುಷ್ಠಾನದಲ್ಲಿರುತ್ತದೆ.

5. ಅಮೃತ ಮಹಲ್ ತಳಿ ಸಂವರ್ಧನಾ ಕ್ಷೇತ್ರದಲ್ಲಿ (6 ಕಾವಲುಗಳಲ್ಲಿ) 70 ಎಕರೆ ಪ್ರದೇಶಗಳಲ್ಲಿ ಮೇವು ಬೆಳೆಯಲು ಹಾಗೂ 650 ಹೆಕ್ಟೇರ್‌ನಲ್ಲಿ ಸಿಲ್ವಿಪ್ಯಾಶ್ಚರ್ ಅಭಿವೃದ್ಧಿಪಡಿಸುವ ಕಾರ್ಯಕ್ರಮ ಯೋಜಿಸಿದೆ.

6. 10 ಎಕರೆ ಪ್ರದೇಶದಲ್ಲಿ ರೈತರು ಹುಲ್ಲುಗಾವಲು ಅಭಿವೃದ್ಧಿ ಪಡಿಸಲು ಮುಂದೆ ಬಂದಲ್ಲಿ ಈ ಸಂಬಂಧ ತಗುಲುವ ಯೋಜನಾ ವೆಚ್ಚ ₹ 50,000/– ದಲ್ಲಿ 50% ಸಹಾಯಧನ ನೀಡುವ ಕಾರ್ಯಕ್ರಮ ಜಾರಿಯಲ್ಲಿದೆ. ಸದರಿ ಯೋಜನೆಯಲ್ಲಿ ಸ್ಥಳೀಯ ಸಂಸ್ಥೆಗಳು ಗೋಮಾಳದಲ್ಲಿ ಹುಲ್ಲುಗಾವಲು ಅಭಿವೃದ್ಧಿ ಪಡಿಸಲು ಮುಂದೆ ಬಂದಲ್ಲಿ ಅಂತಹ ಸಂಸ್ಥೆಗಳಿಗೂ 50% ಸಹಾಯಧನ ನೀಡಲಾಗುವುದು.

ಇ) ಹೌದು

**ಮಹಿಳೆಯರಿಗಾಗಿ ಹೈನುಗಾರಿಕೆ ಯೋಜನೆಗಳು**

**474; ಶ್ರೀ ಮತ್ತಿಕಟ್ಟಿ ವೀರಣ್ಣ (ವಿಧಾನ ಸಭಾಕ್ಷೇತ್ರ)**

ಅ) ಮಹಿಳೆಯರಿಗಾಗಿ ಹೈನುಗಾರಿಕೆ ಯೋಜನೆಗಳನ್ನು ಸರ್ಕಾರವು ರೂಪಿಸಿದೆಯೇ

ಆ) ಸದರಿ ಯೋಜನೆಗಾಗಿ ಪ್ರಸಕ್ತ ಸಾಲಿನಲ್ಲಿ ಒದಗಿಸಲಾದ ಹಣವೆಷ್ಟು? ಇಲ್ಲಿಯವರಿಗೆ ಮಾಡಲಾದ ವೆಚ್ಚವೆಷ್ಟು

ಇ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ದೇವದಾಸಿಯರು ಮತ್ತು ಮಹಿಳೆಯರಿಗೂ ಈ ಯೋಜನೆಯ ಲಾಭ ಒದಗಿಸಲಾಗುತ್ತಿದೆಯೇ? (ಹಾಗಿದ್ದಲ್ಲಿ ವಿವರಗಳನ್ನು ನೀಡುವುದು)

**ಶ್ರೀ ರೇವುನಾಯಕ ಬೆಳಮಗಿ (ಪಶುಸಂಗೋಪನೆ ಸಚಿವರು)**

ಅ) ಹೌದು

ಆ) ಸದರಿ ಯೋಜನೆಗೆ ಪ್ರಸಕ್ತ ಸಾಲಿನಲ್ಲಿ ₹ 350.00 ಲಕ್ಷಗಳನ್ನು ಒದಗಿಸಲಾಗಿದೆ. ಅದರಲ್ಲಿ ಮೊದಲ ತ್ರೈ ಮಾಸಿಕ ಕಂತಾಗಿ ₹ 87.50 ಲಕ್ಷಗಳನ್ನು ಕರ್ನಾಟಕ ಸಹಕಾರಿ ಹಾಲು ಮಹಾ ಮಂಡಳದ ಮೂಲಕ ಕಾರ್ಯಕ್ರಮ ಅನುಷ್ಠಾನಗೊಳಿಸಲು ಹಾಲು ಒಕ್ಕೂಟಗಳಿಗೆ ಬಿಡುಗಡೆ ಮಾಡಲಾಗಿದೆ. ಫಲಾನುಭವಿಗಳನ್ನು ಗುರುತಿಸುವ ಹಾಗೂ ಆಯ್ಕೆ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಇ) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ದೇವದಾಸಿಯರು ಮತ್ತು ಮಹಿಳೆಯರಿಗೂ ಈ ಯೋಜನೆಯ ಲಾಭ ಒದಗಿಸಲಾಗುತ್ತಿದೆ. ಯೋಜನೆಯಡಿಯಲ್ಲಿ ಒಂದು ಹೈನುರಾಸುವನ್ನು ಖರೀದಿಸಿ ಕೊಡಲಾಗುವುದು. ರಾಸು ಖರೀದಿ, ಸಾಗಾಣಿಕೆ ವೆಚ್ಚ, ವಿಮೆ ಇತ್ಯಾದಿ ಸೇರಿ ₹ 35,000/- ಘಟಕ ವೆಚ್ಚವಿರುತ್ತದೆ. ಅದರಲ್ಲಿ

- ವಿಧವೆಯವರು ಹಾಗೂ ದೇವದಾಸಿಯರಿಗೆ ಶೇ.50ರಷ್ಟು ಅಂದರೆ ₹ 17,500/- ಸಹಾಧನ ಒದಗಿಸಲಾಗುತ್ತದೆ.
- ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಶೇ 60ರಷ್ಟು ಅಂದರೆ ₹ 21,000/- ಸಹಾಯಧನ ಒದಗಿಸಲಾಗುತ್ತದೆ.
- ಪರಿಶಿಷ್ಟ ವರ್ಗದ ಮಹಿಳೆಯರಿಗೆ ಶೇ 75 ರಷ್ಟು ಅಂದರೆ ₹ 26,250/- ಸಹಾಯಧನ ಒದಗಿಸಲಾಗುತ್ತದೆ.

## ವಾಯುಮಾಲಿನ್ಯ ಮತ್ತು ಶಬ್ದ ಮಾಲಿನ್ಯ ತಡೆಗಟ್ಟುವ ಬಗ್ಗೆ.

**475; ಶ್ರೀ. ಮತ್ತಿಕಟ್ಟಿ ವೀರಣ್ಣ (ವಿಧಾನ ಸಭಾಕ್ಷೇತ್ರ)**

1) ಬೆಂಗಳೂರು ಮಹಾನಗರದಲ್ಲಿನ ವಾಹನಗಳ ಸಂಚಾರ ದಟ್ಟಣೆಯಿಂದಾಗಿ ವಾಯು ಮಾಲಿನ್ಯ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಹಾಗಿದ್ದಲ್ಲಿ, ಮಾಲಿನ್ಯ ತಡೆಗಟ್ಟಲು ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದೇ

3) ರಾಜ್ಯ ಸಾರಿಗೆ ಮತ್ತು ಸರ್ಕಾರಿ ವಾಹನಗಳನ್ನೆಲ್ಲಾ ಮಾಲಿನ್ಯರಹಿತ ವಾಹನಗಳನ್ನಾಗಿಸಿ ಸುಸ್ಥಿತಿಯಲ್ಲಿ ಓಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

**ಶ್ರೀ ಎಸ್. ಶಿವಣ್ಣ (ಪರಿಸರ, ಜೀವಿಶಾಸ್ತ್ರ ಹಾಗೂ ಯೋಜನಾ ಮತ್ತು ಸಾಂಖ್ಯಿಕ ಸಚಿವರು)**

1) ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

2) ಬೆಂಗಳೂರು ನಗರದಲ್ಲಿ ವಾಯುಮಾಲಿನ್ಯ ಮತ್ತು ಶಬ್ದ ಮಾಲಿನ್ಯ ನಿಯಂತ್ರಿಸುವ ನಿಟ್ಟಿನಲ್ಲಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

   1. ಕೇಂದ್ರ ಸರ್ಕಾರವು ನಿಗದಿಪಡಿಸಿರುವಂತೆ ದಿನಾಂಕ: 1.4.2010ರಿಂದ ಭಾರತ್ ಸ್ಟೇಜ್–IV ಮಾಪನವುಳ್ಳ ನಾಲ್ಕು ಚಕ್ರದ ವಾಹನಗಳನ್ನು ಮತ್ತು ಭಾರತ್ ಸ್ಟೇಜ್–III ಮಾಪನವುಳ್ಳ ತ್ರಿಚಕ್ರ ವಾಹನಗಳನ್ನು ಮಾತ್ರ ನೋಂದಾಯಿಸಲಾಗುತ್ತಿದೆ.
   2. ಹೆಚ್ಚು ಹೊಗೆ ಹೊರಸೂಸುವ 2–ಸ್ಟ್ರೋಕ್ ಆಟೋರಿಕ್ಷಾಗಳ ಒದಲಿಗೆ 4–ಸ್ಟ್ರೋಕ್ ಎಂಜಿನ್ ವುಳ್ಳ ಅಧಿಕೃತ ಎಲ್.ಪಿ.ಜಿ.ಕಿಟ್

ಅಳವಡಿಸಿದ ಆಟೋ ರಿಕ್ಷಾಗಳನ್ನು ಖರೀದಿಸುವ ಮಾಲೀಕರಿಗೆ ಸರ್ಕಾರದ ವತಿಯಿಂದ ಸಹಾಯಧನ ನೀಡಲಾಗುತ್ತಿದೆ.

3. ಬೆಂಗಳೂರಿನ ಎಲ್ಲಾ ಆಟೋರಿಕ್ಷಾಗಳನ್ನು ದ್ವಿ–ಇಂಧನ (ಪೆಟ್ರೋಲ್+ಎಲ್.ಪಿ.ಜಿ) ವ್ಯವಸ್ಥೆಗೆ ಒಳಪಡಿಸಲಾಗಿದೆ.
4. ಸರ್ಕಾರವು ನೀಡುವ ಅನುದಾನದಿಂದ ಪ್ರತಿ ವರ್ಷ ನವೆಂಬರ್ ಮಾಹೆಯನ್ನು ಮಾಯುಮಾಲಿನ್ಯ ನಿಯಂತ್ರಣ ಜಾಗೃತಿ ಮಾಸವನ್ನಾಗಿ ರಾಜ್ಯಾದ್ಯಂತ ಆಚರಿಸಲಾಗುತ್ತಿದೆ.
5. 2011–12ನೇ ಸಾಲಿನಲ್ಲಿ ಒಟ್ಟು 20,22,450 ವಾಹನಗಳಿಗೆ ವಾಯುಮಾಲಿನ್ಯ ಹತೋಟಿಯಲ್ಲಿದೆ ಎಂಬ ಪ್ರಮಾಣ ಪತ್ರಗಳನ್ನು ನೀಡಲಾಗಿರುತ್ತದೆ.
6. ವಾಹನಗಳಿಂದುಂಟಾಗುವ ಮಾಯುಮಾಲಿನ್ಯಕ್ಕೆ ಸಂಬಂಧಿಸಿ ದಂತೆ, ರಾಜ್ಯಾದ್ಯಂತ ಹೆಚ್ಚು ಹೊಗೆ ಹೊರಸೂಸುವ ವಾಹನಗಳನ್ನು ನಿರಂತರವಾಗಿ ತಪಾಸಣೆ ನಡೆಸಲಾಗುತ್ತಿದ್ದು, 2011–12ರ ತಪಾಸಣಾ ವಿವರಗಳು ಈ ಕೆಳಕಂಡಂತಿವೆ:–

| Checked | Booked | Fine Collected (₹) |
|---|---|---|
| 729394 | 24492 | 1,18,43,160 |

7. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಬೆಂಗಳೂರು ನಗರದಲ್ಲಿ 13 ಸ್ಥಳಗಳಲ್ಲಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿಯಂತೆ ವಾಯು ಮಾಪನ ಮಾಡುತ್ತಿದೆ.
8. ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ 14 ಅಂಶಗಳ ಕಾರ್ಯಕ್ರಮವನ್ನು ಸರ್ಕಾರದ ಸಂಬಂಧಪಟ್ಟ ಇಲಾಖೆಗಳು ಅನುಷ್ಠಾನಗೊಳಿಸುತ್ತಿವೆ. ಈ ಕಾರ್ಯಕ್ರಮಗಳ ಪಟ್ಟಿಯನ್ನು ಲಗತ್ತಿಸಲಾಗಿದೆ. ಅನುಷ್ಠಾನವನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಿರುವ ಕಾರ್ಯಪಡೆ

ಹಾಗೂ ಪರಿಸರ ಮಾಲಿನ್ಯ (ನಿಭಾವಣೆ ಮತ್ತು ನಿಯಂತ್ರಣ) ಪ್ರಾಧಿಕಾರ (EPCA) ನವದೆಹಲಿ ಸಮಿತಿಗಳು ಮೇಲ್ವಿಚಾರಣೆ ಮಾಡುತ್ತಿವೆ.

9. ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯವು ಹೊರಡಿಸಿರುವ ಶಬ್ದಮಾಲಿನ್ಯ (ನಿಬಂಧನೆ ಮತ್ತು ನಿಯಂತ್ರಣ) ನಿಯಮಗಳು, 2000 ಮತ್ತು ಕಾಲಕಾಲಕ್ಕೆ ಮಾಡಿದ ತಿದ್ದುಪಡಿಯನುಸಾರ ಶಬ್ದಮಾಲಿನ್ಯವನ್ನು ನಿಯಂತ್ರಿಸಲಾಗುತ್ತಿದೆ.

3) ಹೌದು, ಸರ್ಕಾರವು ಜೈವಿಕ ಇಂಧನದ ಬಳಕೆಯನ್ನು ಪ್ರೋತ್ಸಾಹಿಸುತ್ತಿದೆ. ಮುಂಬರುವ ದಿನಗಳಲ್ಲಿ ಬೆಂಗಳೂರು ನಗರದಲ್ಲಿ ಸಿ.ಎನ್.ಜಿ. ಇಂಧನವು ಲಭ್ಯವಾಗಲಿದ್ದು, ಸದರಿ ಇಂಧನವನ್ನು ಸಾರ್ವಜನಿಕ ಸಾರಿಗೆ ಸೇವೆ ನೀಡುವ ವಾಹನಗಳಲ್ಲಿ ಬಳಸಿಕೊಳ್ಳಲು ಕ್ರಮವಹಿಸಲಾಗುವುದು.

**ರೈತರ ಕೃಷಿ ಸಾಲ ಮನ್ನಾ ಮಾಡುವ ಬಗ್ಗೆ.**

**473; ಶ್ರೀ ಮತ್ತಿಕಟ್ಟಿ ವೀರಣ್ಣ (ವಿಧಾನ ಸಭಾಕ್ಷೇತ್ರ)**

**ಅ)** ಬರಗಾಲದ ಹಿನ್ನೆಲೆಯಲ್ಲಿ ರೈತರ ಕೃಷಿ ಸಾಲ ಮನ್ನಾ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆಯೇ;

**ಆ)** ಹಾಗಿದ್ದಲ್ಲಿ ವಾಣಿಜ್ಯ ಬ್ಯಾಂಕುಗಳು, ಸಹಕಾರ ಬ್ಯಾಂಕುಗಳಿಂದ ಸಣ್ಣ ಮತ್ತು ಮಧ್ಯಮ ವರ್ಗದ ರೈತರು ಪಡೆದ ಕೃಷಿ ಸಾಲ ಮನ್ನಾ ಮಾಡಲಾಗುವ ಬಗ್ಗೆ ವಿವರಗಳನ್ನು ಒದಗಿಸುವುದು?

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ಸಹಕಾರ ಸಚಿವರು)**

**ಅ)** ದಿನಾಂಕ: 24.07.2012ರಂದು ಸನ್ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿರುವ ಸಾಲ ಮನ್ನಾ ಯೋಜನೆಯ ರೀತ್ಯಾ ಅರ್ಹವಿದ್ದ ಸಾಲಗಳನ್ನು ಈ ಬಗ್ಗೆ ಹೊರಡಿಸುವ ಸರ್ಕಾರಿ ಆದೇಶಕ್ಕೊಳಪಟ್ಟು ಮನ್ನಾ ಮಾಡಲಾಗುವುದು.

ಆ) ವಾಣಿಜ್ಯ ಬ್ಯಾಂಕುಗಳಿಂದ ಸಾಲ ಪಡೆದ ರೈತರಿಗೆ ಸಾಲ ಮನ್ನಾ ಮಾಡುವ ವಿಷಯವು ಈ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.

ರಾಜ್ಯ ಸರ್ಕಾರದ ಸಾಲ ಮನ್ನಾ ಯೋಜನೆಯಡಿಯಲ್ಲಿ ರಾಜ್ಯದ ಎಲ್ಲಾ ರೈತರು ದಿನಾಂಕ: 01.08.2011 ರಿಂದ 30.06.2012 ರ ವರೆಗೆ ಸಾಲ ಪಡೆದು ಈವರೆವಿಗೂ ಬಾಕಿ ಇರುವ ಕೃಷಿ ಸಹಕಾರ ಸಂಘಗಳಿಂದ ಪಡೆದ ಬೆಳೆ ಸಾಲಗಳನ್ನು ಬಡ್ಡಿ ಸೇರಿದಂತೆ ₹ 25,000.00 ದವರೆಗೆ ಮನ್ನಾ ಮಾಡಲು ಉದ್ದೇಶಿಸಿದೆ.

**ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಸಹಕಾರ ಬ್ಯಾಂಕುಗಳ ಬಗ್ಗೆ**

**652; ಶ್ರೀ ಅಲ್ಲಮ ಪ್ರಭು ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಗುಲ್ಬರ್ಗ ಮತ್ತು ಯಾದಗೀರ ಜಿಲ್ಲೆಯಲ್ಲಿ ಕಳೆದ 5 ವರ್ಷಗಳಲ್ಲಿ ಸ್ಥಾಪನೆಗೊಂಡ ಸಹಕಾರ ಬ್ಯಾಂಕುಗಳ ಸಂಖ್ಯೆ ಎಷ್ಟು? ಅದರಲ್ಲಿ ಕೆಲಸ ನಿರ್ವಹಿಸುತ್ತಿರುವ ಸಹಕಾರ ಬ್ಯಾಂಕುಗಳ ಸಂಖ್ಯೆ ಎಷ್ಟು (ಸ್ಥಾಪನೆವಾರು ಮಾಹಿತಿ ನೀಡುವುದು)

ಆ) ಕೆಳದ 5 ವರ್ಷಗಳಲ್ಲಿ ದಿವಾಳಿಯಾದ ಸಹಕಾರ ಬ್ಯಾಂಕುಗಳ ಕುರಿತು ಯಾವುದಾದರೂ ವಿಚಾರಣೆ ಆಗಿದೆಯೇ? ಹಾಗಿದ್ದಲ್ಲಿ ಅದರ ಮಾಹಿತಿ ನೀಡುವುದು?

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ಸಹಕಾರ ಸಚಿವರು)**

ಅ) ಯಾವುದೇ ಸಹಕಾರ ಬ್ಯಾಂಕುಗಳು ಸ್ಥಾಪನೆಗೊಂಡಿರುವುದಿಲ್ಲ.

ಆ) ಯಾವುದೂ ಇರುವುದಿಲ್ಲ.

## ರಾಜ್ಯದಲ್ಲಿ ಚಿತ್ರಕಲಾ ಶಿಕ್ಷಕರ ನೇಮಕಾತಿ ಬಗ್ಗೆ

**650; ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ರಾಜ್ಯದಲ್ಲಿ ಚಿತ್ರಕಲಾ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

**ಆ)** ಇದ್ದಲ್ಲಿ ಅದರಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಚಿತ್ರಕಲಾ ಶಿಕ್ಷಕರ ಹುದ್ದೆಗಳು ಎಷ್ಟು; (ವಿವರ ಒದಗಿಸುವುದು)

**ಇ)** ಪ್ರಾಥಮಿಕ ಮತ್ತು ಪ್ರೌಢ ಶಾಲಾ ಚಿತ್ರಕಲಾ ಶಿಕ್ಷಕರಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಏನು ಮತ್ತು ಅದರ ತತ್ಸಮಾನ ವಿದ್ಯಾರ್ಹತೆಗಳು ಯಾವುವು; (ಸ್ಪಷ್ಟ ವಿವರ ನೀಡುವುದು)

**ಈ)** ಈ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ಹುದ್ದಗೆ ಅರ್ಹ ವಿದ್ಯಾರ್ಹತೆ ಹೊಂದಿರುವವರನ್ನು ವಯೋಮಿತಿ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಯೋಚನೆ ಸರ್ಕಾರಕ್ಕಿದೆಯೇ? (ಸ್ಪಷ್ಟ ವಿವರ ಒದಗಿಸುವುದು)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

**ಅ)** ಖಾಲಿ ಹುದ್ದೆಗಳ ಆಧಾರದಲ್ಲಿ ಭರ್ತಿ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

**ಆ)** ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಚಿತ್ರಕಲಾ ಶಿಕ್ಷಕರ ಸಂಖ್ಯೆ 62 ಖಾಲಿ ಇರುತ್ತವೆ. ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ 171 ಚಿತ್ರಕಲಾ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತದೆ.

**ಇ)** ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಪ್ರಾಥಮಿಕ ಮತ್ತು ಪ್ರೌಢಶಾಲಾ ಚಿತ್ರಕಲಾ ಶಿಕ್ಷಕರಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಕೆಳಕಂಡಂತಿದೆ.

**ಈ)** ಇಲ್ಲ

**ಗುಲ್ಬರ್ಗ ಮತ್ತು ಯಾದಗಿರಿ ಜಿಲ್ಲೆಯ ಗ್ರಂಥಾಲಯಗಳ ಬಗ್ಗೆ**

**471; ಶ್ರೀ ಅಲ್ಲಮ ಪ್ರಭು ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ಗುಲ್ಬರ್ಗ ಮತ್ತು ಯಾದಗಿರಿ ಜಿಲ್ಲೆಯಲ್ಲಿರುವ ಒಟ್ಟು ಸಾರ್ವಜನಿಕ ಗ್ರಂಥಾಲಯಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಆ) ಪ್ರತಿ ವರ್ಷ ಪ್ರತಿ ಗ್ರಂಥಾಲಯಕ್ಕೆ ಮಂಜೂರು ಮಾಡುವ ಅನುದಾನದ ಮೊತ್ತ ಎಷ್ಟು; ಅದರಲ್ಲಿ ಪುಸ್ತಕಗಳ ಖರೀದಿಗಾಗಿ ನೀಡುವ ಅನುದಾನದ ಮೊತ್ತ ಎಷ್ಟು;

ಇ) ಸದರಿ ಗ್ರಂಥಾಲಯಗಳ ಮೇಲ್ವಿಚಾರಣೆಯನ್ನು ಗ್ರಾಮೀಣ ಮಟ್ಟದಲ್ಲಿ ಯಾರಿಗೆ ವಹಿಸಲಾಗಿದೆ.

**ಶ್ರೀ ರೇವುನಾಯಕ ಬೆಳಮಗಿ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು)**

ಅ) ಗುಲ್ಬರ್ಗ ಜಿಲ್ಲೆಯಲ್ಲಿರುವ ಒಟ್ಟು ಸಾರ್ವಜನಿಕ ಗ್ರಂಥಾಲಯಗಳ ಸಂಖ್ಯೆ : 244+63=307

ತಾಲ್ಲೂಕುವಾರು ವಿವರ ಅನುಬಂಧ–1 ಮತ್ತು 2 ಲಗತ್ತಿಸಿದೆ.

ಯಾದಗಿರಿ ಜಿಲ್ಲೆಯಲ್ಲಿರುವ ಒಟ್ಟು ಸಾರ್ವಜನಿಕ ಗ್ರಂಥಾಲಯಗಳ ಸಂಖ್ಯೆ: 137. ತಾಲ್ಲೂಕುವಾರು ವಿವರ ಅನುಬಂಧ–3 ಲಗತಿಸ್ತಿದೆ.

ಆ) ಪ್ರತಿ ವರ್ಷ ಪ್ರತಿ ಗ್ರಂಥಾಲಯಕ್ಕೆ ಮಂಜೂರು ಮಾಡುವ ಅನುದಾನದ ಮೊತ್ತ ₹ 35,000/–

ಪುಸ್ತಕಗಳ ಖರೀದಿಗಾಗಿ ಮಾಡುವ ವೆಚ್ಚ ₹ 10,000/–

ಇ) ಗ್ರಂಥಾಲಯಗಳ ಮೇಲ್ವಿಚಾರಣೆಯನ್ನು ಗ್ರಾಮೀಣ ಮಟ್ಟದಲ್ಲಿ ಗ್ರಾಮ ಪಂಚಾಯತಿ ಮೇಲ್ವಿಚಾರಕರಿಗೆ ವಹಿಸಲಾಗಿದೆ.

## ಅನುಬಂಧ–1

## ಗುಲ್ಬರ್ಗ ಜಿಲ್ಲೆಯಲ್ಲಿರುವ ಸಾರ್ವಜನಿಕ ಗ್ರಂಥಾಲಯಗಳ ಮಾಹಿತಿ

| ಕ್ರ. ಸಂ | ಒಟ್ಟು ತಾಲ್ಲೂಕು | ಗ್ರಾಮ ಪಂಚಾಯತ್ ಸಂಖ್ಯೆ | ಅಲೆಮಾರಿ | ಕೊಳಚೆ ಗ್ರಂಥಾಲಯ | ಶಾಖಾ ಗ್ರಂಥಾಲಯ | ಒಟ್ಟು |
|---|---|---|---|---|---|---|
| **1** | **2** | **3** | **4** | **5** | **6** | **7** |
| 1 | ಅಫಜಲಪೂರ | 23 | – | 1 | 1 | **25** |
| 2 | ಆಳಂದ | 39 | – | 3 | 1 | **43** |
| 3 | ಚಿಂಚೋಳಿ | 32 | 1 | – | 1 | **34** |
| 4 | ಚಿತ್ತಾಪೂರ | 35 | 1 | – | 3 | **39** |
| 5 | ಗುಲಬರ್ಗಾ | 36 | 1 | – | 0 | **37** |
| 6 | ಜೇವರ್ಗಿ | 35 | 5 | – | 1 | **41** |
| 7 | ಸೇಡಂ | 23 | 1 | – | 1 | **25** |
| | **ಒಟ್ಟು** | **223** | **09** | **04** | **08** | **244** |

## ಅನುಬಂಧ–2

## ಗುಲ್ಬರ್ಗ ನಗರದಲ್ಲಿರುವ ಸಾರ್ವಜನಿಕ ಗ್ರಂಥಾಲಯಗಳ ಮಾಹಿತಿ

| ಕ್ರ.ಸಂ | ಮಕ್ಕಳ ಗ್ರಂಥಾಲಯ | ಶಾಖಾ ಗ್ರಂಥಾಲಯ | ಪುಸ್ತಕ ವಿತರಣಾ ಕೇಂದ್ರ | ಸೇವಾ ಕೇಂದ್ರ | ಅನುದಾನ ಗ್ರಂಥಾಲಯ | ಒಟ್ಟು |
|---|---|---|---|---|---|---|
| 1 | 2 | 3 | 4 | 5 | 6 | **7** |
| 1 | 2 | 14 | 31 | 15 | 1 | **63** |

## ಅನುಬಂಧ-3

## ಗುಲ್ಬರ್ಗ ಜಿಲ್ಲೆಯ ಪ್ರತಿ ಗ್ರಂಥಾಲಯಕ್ಕೆ ಮಂಜೂರು ಮಾಡುವ ಅನುದಾನದ ಮೊತ್ತದ ವಿವರ

| ಕ್ರ. ಸಂ | ತಾಲ್ಲೂಕು | ಗೌರವ ಸಂಭಾವನೆ ₹ | ಪತ್ರಿಕೆ ಬಿಲ್ಲು ₹ | ಸಾದಿಲ್ವಾರು ವೆಚ್ಚ ₹ | ಒಟ್ಟು | ಪುಸ್ತಕ ಖರೀದಿಗಾಗಿ ₹ |
|---|---|---|---|---|---|---|
| 1 | 2 | 3 | 4 | 5 | 6 | 7 |
| 01 | ಅಫಜಲಪೂರ | 720000=00 | 115200=00 | 12000=00 | **847200=00** | ಪುಸ್ತಕಗಳ ಖರೀದಿಗಾಗಿ ಮಾಡುವ ವೆಚ್ಚ ₹ 10,000/- |
| 02 | ಆಳಂದ | 1260000=00 | 201600=00 | 21000=00 | **1482600=00** | |
| 03 | ಚಿಂಚೋಳಿ | 990000=00 | 158400=00 | 16500=00 | **1164900=00** | |
| 04 | ಚಿತ್ತಾಪೂರ | 1080000=00 | 172800=00 | 18000=00 | **1270800=00** | |
| 05 | ಗುಲಬರ್ಗಾ | 1110000=00 | 177600=00 | 18500=00 | **1306100=00** | |
| 06 | ಜೇವರ್ಗಿ | 120000=00 | 192000=00 | 20000=00 | **1412000=00** | |
| 07 | ಸೇಡಂ | 720000=00 | 115200=00 | 12000=00 | **847200=00** | |
| | **ಒಟ್ಟು** | **7080000=00** | **1132800=00** | **118000=00** | **8330800=00** | |
| | ಸೂಚನೆ: ಪ್ರತಿ ವರ್ಷ ಪ್ರತಿ ಗ್ರಂಥಾಲಯಕ್ಕೆ ಮಂಜೂರು ಮಾಡುವ ಅನುದಾನ 35300=00 | | | | | |

## ಅನುಬಂಧ-4

## ಯಾದಗಿರಿ ಜಿಲ್ಲೆಯಲ್ಲಿರುವ ಸಾರ್ವಜನಿಕ ಗ್ರಂಥಾಲಯಗಳ ಮಾಹಿತಿ

| ಕ್ರ.ಸಂ | ತಾಲೂಕ ವಾರು | ಶಾಖಾ ಗ್ರಂ | ಗ್ರಾ.ಪ ಗ್ರಂ | ಅಲೆಮಾರಿ ಗ್ರಂಥಾಲಯ | ಮಕ್ಕಳ ಗ್ರಂಥಾಲಯ | ಒಟ್ಟು |
|---|---|---|---|---|---|---|
| 1 | ಶಹಾಪೂರ | 02 | 36 | 06 | 00 | 44 |
| 2 | ಸುರಪುರ | 01 | 44 | 03 | 00 | 48 |
| 3 | ಯಾದಗಿರಿ | 02 | 40 | 02 | 01 | 45 |
| | **ಒಟ್ಟು** | **05** | **120** | **11** | **01** | **137** |

## ಅಂಗನವಾಡಿ ಕೇಂದ್ರಗಳ ಬಗ್ಗೆ

## 472; ಶ್ರೀ ಅಲ್ಲಮ ಪ್ರಭು ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ) ಗುಲ್ಬರ್ಗ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಇರುವ ಅಂಗನವಾಡಿ ಕೇಂದ್ರಗಳು ಎಷ್ಟು;

ಆ) ಅವುಗಳಲ್ಲಿ ಸ್ವಂತ ಕಟ್ಟಡ ಹೊಂದಿರುವ ಅಂಗನವಾಡಿ ಕೇಂದ್ರಗಳು ಎಷ್ಟು: ಸದ್ಯಕ್ಕೆ ಸರ್ಕಾರದಿಂದ ನೀಡುತ್ತಿರುವ ಬಾಡಿಗೆ ಕಟ್ಟಡ ಶುಲ್ಕ

₹ 750/– ಸಾಕಾಗುತ್ತಿಲ್ಲ: ಅದನ್ನು ಹೆಚ್ಚಿಸುವ ಯೋಚನೆ ಸರ್ಕಾರದ ಮುಂದಿದೆಯೇ;

ಇ) ಅಂಗನವಾಡಿ ಕೇಂದ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಸೇವೆಯನ್ನು ಖಾಯಂಗೊಳಿಸುವ ಉದ್ದೇಶ ಸರ್ಕಾರಕ್ಕಿದೆಯೇ, ಇದ್ದರೆ ಇದನ್ನು ಯಾವಾಗ ಜಾರಿಗೊಳಿಸಲಾಗುವುದು;

**ಶ್ರೀ ಕಳಕಪ್ಪ .ಜಿ. ಬಂಡಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)**

ಅ) ಗುಲ್ಬರ್ಗ ಜಿಲ್ಲೆಯಲ್ಲಿ 3034 ಅಂಗನವಾಡಿ ಕೇಂದ್ರಗಳು ಹಾಗೂ ಯಾದಗಿರಿ ಜಿಲ್ಲೆಯಲ್ಲಿ 1300 ಅಂಗನವಾಡಿ ಕೇಂದ್ರಗಳು ಇರುತ್ತವೆ.

ಆ) ಗುಲ್ಬರ್ಗ ಜಿಲ್ಲೆಯಲ್ಲಿ 1594 ಕೇಂದ್ರಕ್ಕೆ ಸ್ವಂತ ಕಟ್ಟಡ ಯಾದಗಿರಿ ಜಿಲ್ಲೆಯಲ್ಲಿ 837 ಕೇಂದ್ರಕ್ಕೆ ಸ್ವಂತ ಕಟ್ಟಡಗಳಿರುತ್ತವೆ. ಕೇಂದ್ರ ಸರ್ಕಾರದ ವತಿಯಿಂದ ಗ್ರಾಮೀಣ ಮತ್ತು ಗುಡ್ಡಗಾಡು ಪ್ರದೇಶ ಅಂಗನವಾಡಿ ಕೇಂದ್ರಗಳಿಗೆ ಪ್ರತಿ ತಿಂಗಳಿಗೆ ಪ್ರತಿ ಕಟ್ಟಡಕ್ಕೆ ₹ 220/– ಬಾಡಿಗೆ 50,000 ಜನಸಂಖ್ಯೆಗಿಂತ ಹೆಚ್ಚಿರುವ ನಗರ ಪ್ರದೇಶ ಅಂಗನವಾಡಿ ಕೇಂದ್ರಗಳಿಗೆ ₹ 500/– ಹಾಗೂ ನಗರಾಡಳಿತ ಮತ್ತು ಮಹಾ ನಗರ ಪಾಲಿಕೆ ಪ್ರದೇಶಗಳಿಗೆ ₹ 750/ ನ್ನು ಪ್ರತಿ ತಿಂಗಳಿಗೆ ಪ್ರತಿ ಕೇಂದ್ರಕ್ಕೆ ಬಾಡಿಗೆಯಾಗಿ ನೀಡಲಾಗುತ್ತಿದ್ದು, ಈ ವೆಚ್ಚವನ್ನು ₹ 2500/–ಕ್ಕೆ ಹೆಚ್ಚಿಸಲು ಕೇಂದ್ರ ಸರ್ಕಾರಕ್ಕೆ ದಿನಾಂಕ: 03–08–2011 ರಂದು ಪ್ರಸ್ತಾವನೆ ಸಲ್ಲಿಸಲಾಗಿದ್ದು, ಪರಿಶೀಲನೆಯಲ್ಲಿರುತ್ತದೆ.

ಇ) ಇಲ್ಲ, ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರು ಗೌರವ ಸೇವೆಗೆ ಸೇರಿರುವುದರಿಂದ ಅವರನ್ನು ಖಾಯಂ ಗೊಳಿಸಲು ಸಾಧ್ಯವಿಲ್ಲವೆಂದು ದಿನಾಂಕ: 07–12–2006ರ ಆದೇಶದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಆದೇಶಿಸಿರುತ್ತದೆ.

**ಅಧ್ಯಾಪಕರು ಸಿಬ್ಬಂದಿಗಳ ನೇಮಕಾತಿ ಬಗ್ಗೆ**

**497; ಡಾ॥ ಎಸ್.ಆರ್. ಲೀಲಾ (ನಾಮನಿರ್ದೇಶನ ಹೊಂದಿದವರು)**

ಅ) ಕೆಎಸ್‌ಜಿಹೆಚ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಸ್ಥಾಪಿತವಾಗಿ 2 ವರ್ಷ ಕಳೆದರು ಇದುವರೆಗೂ ಅಧ್ಯಾಪಕರು ಮತ್ತು ಸಿಬ್ಬಂದಿಯನ್ನು ನೇಮಿಸದಿರಲು ಕಾರಣವೇನು

ಆ) ಸಿಬ್ಬಂದಿಗಳನ್ನು ನೇಮಿಸಲು ಏಕೆ ವಿಳಂಬವಾಗುತ್ತಿದೆ?

**ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು)**

ಅ) ಕೆಎಸ್‌ಜಿಹೆಚ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ 15 ಬೋಧಕ ಸಿಬ್ಬಂದಿ, 19 ಬೋಧಕೇತರ ಸಿಬ್ಬಂದಿ ಒಟ್ಟು 34 ಹುದ್ದೆಗಳನ್ನು ಸೃಜಿಸಲಾಗಿದೆ. ವಿಶ್ವವಿದ್ಯಾಲಯವು ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕಾಗಿದೆ.

ಆ) ವಿಶ್ವವಿದ್ಯಾಲಯವು ಸಿಬ್ಬಂದಿಗಳನ್ನು ನೇಮಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕಾಗಿದೆ.

**ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ.**

**496; ಡಾ॥ ಎಸ್.ಆರ್.ಲೀಲಾ (ನಾಮನಿರ್ದೇಶನ ಹೊಂದಿದವರು)**

ಅ) ಶಿವಮೊಗ್ಗ ಜಿಲ್ಲೆಯ ಸಾಗರದ ಬಿ.ಹೆಚ್.ರಸ್ತೆಯಲ್ಲಿರುವ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಮತ್ತು ವಿಜ್ಞಾನದ ಪ್ರಯೋಗಾಲಯಗಳಲ್ಲಿ ನೀರಿಲ್ಲದಿರುವುದರಿಂದ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಇದರ ಬಗ್ಗೆ ಸರ್ಕಾರ ಏಕೆ ಕ್ರಮ ತೆಗೆದುಕೊಂಡಿರುವುದಿಲ್ಲ; ಹಾಗೂ ಎಷ್ಟು ದಿನಗಳೊಳಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) ಈ ಕಾಲೇಜಿನಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇರುವುದನ್ನು ಗಮನಿಸಿ ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿರುತ್ತದೆ.

ಈ ಕಾಲೇಜಿಗೆ ಮಾನ್ಯ ಮುಖ್ಯ ಮಂತ್ರಿಗಳ ನಿಧಿಯಿಂದ ₹ 1.20ಲಕ್ಷಗಳ ಮೊತ್ತದಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಂಡಿದ್ದು ನೆಲಮಹಡಿ ಮತ್ತು ಮೊದಲ ಮಹಡಿಯಲ್ಲಿನ ತರಗತಿ ಕೊಠಡಿ ಮತ್ತು ಪ್ರಯೋಗಾಲಯ ಕೊಠಡಿ ಮತ್ತು ಪ್ರಯೋಗಾಲಯ ಕೊಠಡಿಗಳ ನಿರ್ಮಾಣದ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿರುತ್ತದೆ. ಮತ್ತು ಈ ಕಟ್ಟಡದ ಕೊಠಡಿಗಳಲ್ಲಿ ತರಗತಿಗಳೂ ಸಹ ನಡೆಯುತ್ತಿವೆ. 2ನೇ ಮಹಡಿಯಲ್ಲಿ ಆರ್‌ಐಡಿಎಫ್ – 16ರ ಯೋಜನೆಯಡಿ ₹ 39.80 ಲಕ್ಷಗಳ ಅನುದಾನದಲ್ಲಿ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಕಾರ್ಯವು ಸಹ ನಡೆಯುತ್ತಿದೆ.

ಸದರಿ ಕಟ್ಟಡದಲ್ಲಿ 2ನೇ ಮಹಡಿ ಕೊಠಡಿಯಲ್ಲಿ ಪ್ರಯೋಗಾಲಯ ಗಳನ್ನು ಸಜ್ಜುಗೊಳಿಸಲಾಗಿದ್ದು, ಇಲ್ಲಿ ಕಾಮಗಾರಿಯು ಪ್ರಗತಿಯಲ್ಲಿ ರುವುದರಿಂದ, ಸದರಿ ಪ್ರಯೋಗಾಲಯ ಕೊಠಡಿಗಳಿಗೆ ಅದಷ್ಟು ಬೇಗ ನೀರಿನ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟು ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಈ ಕಾಲೇಜಿಗೆ 2006–07 ನೇ ಸಾಲಿನಿಂದ, ಈ ವರೆವಿಗೆ ವಿಜ್ಞಾನ ಉಪಕರಣಗಳನ್ನು ಖರೀದಿಸಲು ₹ 260000–00 ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಆ) ಈ ಕಾಲೇಜಿಗೆ ಅವಶ್ಯಕತೆ ಇರುವ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

**ಡಾ॥ ಎಸ್.ಎಲ್. ಬೈರಪ್ಪ. ವಿದ್ಯಾರ್ಥಿ ವೇತನ ನೀಡುವ ಬಗ್ಗೆ**

**495; ಶ್ರೀಮತಿ ಡಾ॥ ಎಸ್ ಆರ್. ಲೀಲಾ (ನಾಮನಿರ್ದೇಶನ ಹೊಂದಿದವರು)**

ಅ) ರಾಜ್ಯಾದ್ಯಂತ ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಮಕ್ಕಳಿಗೆ ಡಾ॥ಎಸ್.ಎಲ್.ಬೈರಪ್ಪ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆಯೇ?

ಆ) ಹಾಗಿದ್ದರೆ ಪ್ರಸಕ್ತ ಸಾಲಿನಲ್ಲಿ ಏನಾದರೂ ಹಣವನ್ನು ವಿದ್ಯಾರ್ಥಿಗಳಿಗೆ ಪಾವತಿಸಲಾಗಿದೆಯೇ:

ಇ) ಇಲ್ಲವೆಂದಾದಲ್ಲಿ ಅದನ್ನು ಕಾರ್ಯಗತಗೊಳಿಸಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಮಕ್ಕಳಿಗೆ ಡಾ॥ಎಸ್.ಎಲ್.ಬೈರಪ್ಪ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

**5 ವರ್ಷಕ್ಕೆ ಮೇಲ್ಪಟ್ಟು ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರವವರಿಗೆ ಅನ್ವಯಿಸುವ ಕಾಯಿದೆ ಬಗ್ಗೆ**

**498; ಡಾ॥ ಎಸ್. ಆರ್. ಲೀಲಾ (ನಾಮನಿರ್ದೇಶನ ಹೊಂದಿದವರು)**

ಅ) ಬೆಂಗಳೂರಿನ ಕಾಲೇಜು ಶಿಕ್ಷಣ ಇಲಾಖೆ ಹಾಗೂ ಕಾಲೇಜುಗಳಲ್ಲಿ ಒಂದೇ ಸ್ಥಳದಲ್ಲಿ ಐದು ವರ್ಷಕ್ಕೂ ಮೇಲ್ಪಟ್ಟು ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು, ಸಿಬ್ಬಂದಿಗಳು, ಉಪನ್ಯಾಸಕರ ಸಂಖ್ಯೆ ಎಷ್ಟು;

ಆ) ಐದು ವರ್ಷಕ್ಕೂ ಮೇಲ್ಪಟ್ಟು ಕರ್ತವ್ಯ ನಿರ್ವಹಿಸುತ್ತಿರುವ ಈ ಅಧಿಕಾರಿಗಳು, ಸಿಬ್ಬಂದಿಗಳು, ಉಪನ್ಯಾಸಕರಿಗೆ ಸರ್ಕಾರದ ಯಾವುದೇ ವರ್ಗಾವಣೆ ನಿಯಮಗಳು, ಆದೇಶಗಳು ಅನ್ವಯಿಸುವುದಿಲ್ಲವೇ;

ಇ) ಅನ್ವಯಿಸದಿದ್ದರೆ, ಇವರಿಗಿರುವ ವಿಶೇಷ ಮಾನದಂಡವೇನು?

**ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು)**

ಅ)

| | |
|---|---|
| ಬೋಧಕರು | 389 |
| ಬೋಧಕೇತರರು | 271 |

ಆ) ಕರ್ನಾಟಕ ರಾಜ್ಯ ನಾಗರೀಕ ಸೇವಾ ನಿಯಮಗಳನ್ವಯ ಸೇವೆಗೆ ಸೇರಿರುವ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರೆಲ್ಲರಿಗೂ ಸರ್ಕಾರವು ಹೊರಡಿಸಿರುವ ವರ್ಗಾವಣೆ ನೀತಿ ನಿಯಮಗಳು ಅನ್ವಯವಾಗುತ್ತದೆ.

ಇ) ಉದ್ಭವಿಸುವುದಿಲ್ಲ.

**ರಾಜ್ಯದಲ್ಲಿರುವ ಖಾಸಗಿ ಅನುದಾನಿತ ಕಾಲೇಜುಗಳ ಬಗ್ಗೆ**

**519; ಶ್ರೀ ಸಿದ್ದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)**

ಅ) ರಾಜ್ಯದಲ್ಲಿರುವ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಆಡಳಿತ ಮಂಡಳಿಯಿಂದ ನೇಮಕಾತಿ ಹೊಂದಿ ಸುಮಾರು 10 ವರ್ಷಗಳಿಗೂ ಹೆಚ್ಚು ಕಾಲದಿಂದ ತಾತ್ಕಾಲಿಕ ನೆಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಉಪನ್ಯಾಸಕರ ಸೇವಾ ಸಕ್ರಮಾತಿಗೆ ತೆಗೆದುಕೊಂಡಿರುವ ಕ್ರಮ ಮತ್ತು ಅವರ ವಿದ್ಯಾರ್ಹತೆಗೆ ಹೊಸ ನಿಯಮಗಳ ಅಡಿಯಲ್ಲಿ ನೀಡುವ ವಿನಾಯತಿ ಏನು; (ಈ ಬಗ್ಗೆ ವಿವರವಾದ ಮಾಹಿತಿ ನೀಡುವುದು)

ಆ) ಖಾಸಗಿ ಅನುದಾನಿತ ಕಾಲೇಜುಗಳಲ್ಲಿ 1993 ರಿಂದ 1994–95ರ ನಂತರ ನೇಮಕಗೊಂಡ ಅರೆಕಾಲಿಕ ಹಾಗೂ ತಾತ್ಕಾಲಿಕ ಉಪನ್ಯಾಸಕರ ಸೇವಾ ಸಕ್ರಮಾತಿಗೆ ಸರ್ಕಾರವು ಕ್ರಮ ಕೈಗೊಳ್ಳುವುದೇ;

ಇ) 1990–91ರ ಪೂರ್ವದಲ್ಲಿ ಸ್ಟಾಪ್–ಗ್ಯಾಪ್ ಶಿಕ್ಷಕರ ಸಕ್ರಮಾತಿಯಲ್ಲಿ ಬಾಕಿ ಉಳಿದ ಶಿಕ್ಷಕರ ಭವಿಷ್ಯದ ಸರ್ಕಾರದ ಕ್ರಮವೇನು;

ಈ) ಹುದ್ದೆ ಖಾಲಿ ಇರುವ ಸ್ಥಾನಗಳಲ್ಲಿ ತಾತ್ಕಾಲಿಕ ಹಾಗೂ ಅರೆಕಾಲಿಕ ನೆಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು (ಈ ಎಲ್ಲಾ ಸಿಬ್ಬಂದಿಗಳ ವಿವರವನ್ನು ಕಾಲೇಜುವಾರು ನೀಡುವುದು)

**ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು)**

ಅ) ದಿನಾಂಕ:01–06–87ರ ನಂತರದಲ್ಲಿ ಪ್ರಾರಂಭಿಸಿರುವ / ಪ್ರಾರಂಭಿಸಲು ಅನುಮತಿಸಲಾದ ಕಾಲೇಜು/ವಿಷಯಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 551 ಯುಪಿಸಿ 99 ದಿನಾಂಕ: 07–08–2003ರ ನಿಯಮ 8/1ರನ್ವಯ ಅನುದಾನ ರಹಿತ ಎಂದು ಪರಿಗಣಿಸಲಾಗಿದೆ. ಈ ಅವಧಿಯಲ್ಲಿ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ನಿವೃತ್ತಿ/ಮರಣ/ರಾಜೀನಾಮೆ ಇತ್ಯಾದಿ ಕಾರಣದಿಂದ ತೆರವಾದ ಹುದ್ದೆಗಳನ್ನು ಶಾಶ್ವತ ಅನುದಾನ ರಹಿತ ಹುದ್ದೆಗಳೆಂದು ಪರಿಗಣಿಸಲಾಗಿದ್ದು, ಈ ಹುದ್ದೆಗಳಿಗೆದುರಾಗಿ ಆಡಳಿತ ಮಂಡಳಿಯು ಉಪನ್ಯಾಸಕರನ್ನು/ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಲ್ಲಿ ಅವರ ಸಂಬಳ ಇತ್ಯಾದಿಗಳನ್ನು ಕಾಲೇಜುಗಳು ತಮ್ಮ ಆಂತರಿಕ ಸಂಪನ್ಮೂಲಗಳಿಂದ ಭರಿಸ ಬೇಕಾಗಿರುತ್ತದೆ.

ಆ) ಸರ್ಕಾರಿ ಆದೇಶ ಸಂಖ್ಯೆ ಇಡಿ 92 ಡಿಸಿಇ 96 ದಿನಾಂಕ: 26–06–1996ರಲ್ಲಿ 1996–97ನೇ ಸಾಲಿನಿಂದ ಅನ್ವಯವಾಗುವಂತೆ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅರೆಕಾಲಿಕ ಉಪನ್ಯಾಸಕರ ನೇಮಕಾತಿಯನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

ಇ) 1990–91 ಕ್ಕೂ ಮೊದಲು ಅಂದರೆ 29–01–1992 ಕ್ಕೂ ಮೊದಲು ಸ್ಟಾಪ್ – ಗ್ರಾಪ್ ಉಪನ್ಯಾಸಕರಾಗಿ ₹ 1040/– ವೇತನದೊಂದಿಗೆ ಅನುಮೋದನೆಗೊಂಡು ಸ್ಟಾಪ್ – ಗ್ಯಾಪ್ ಉಪನ್ಯಾಸಕರಾಗಿ ಮುಂದುವರೆದಿರುವ ಯಾವುದೇ ಉಪನ್ಯಾಸಕರು ಸಕ್ರಮಾತಿಗೆ ಬಾಕಿ ಇರುವುದಿಲ್ಲ.

ಈ) ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು 2003ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 551 ಯುಪಿಸಿ 99 ದಿನಾಂಕ: 07–08–2003ರ ಅಧ್ಯಾಯ–3, ನಿಯಮ 4(1) ರಲ್ಲಿ ಅನುದಾನಿತ ಕಾಲೇಜುಗಳ ಆಡಳಿತ ಮಂಡಳಿಯವರು ನೇಮಕಾತಿ ಪ್ರಾಧಿಕಾರ ಆಗಿರುವುದರಿಂದ ಈ ಅವಧಿಯಲ್ಲಿ ನೇಮಕಗೊಂಡ ಎಲ್ಲಾ ಬೋಧಕೇತರ ಸಿಬ್ಬಂದಿಗಳನ್ನು ಸಂಬಂಧಿಸಿದ ಕಾಲೇಜುಗಳ ಆಡಳಿತ ಮಂಡಳಿಗಳು ತಮ್ಮ ಆಂತರಿಕ ಸಂಪನ್ಮೂಲಗಳನ್ನು ಬಳಸಿ ನೇಮಕಾತಿ ಮಾಡಿಕೊಳ್ಳಬೇಕಾಗಿದ್ದು, ಇಂತಹ ಹುದ್ದೆಗಳು ಅನುದಾನರಹಿತ ಹುದ್ದೆಗಳ ವಿವರಗಳು ಸರ್ಕಾರದಲ್ಲಿ ಲಭ್ಯವಿರುವುದಿಲ್ಲ.

**ಗ್ರಾಮಮಟ್ಟದ ಸಹಕಾರ ಸಂಘಗಳಲ್ಲಿ ಸಿಬ್ಬಂದಿ ನೇಮಕಾತಿ ಮಾಹಿತಿ ಕುರಿತು**

**595; ಶ್ರೀ ಕೆ. ಪ್ರತಾಪ್ ಚಂದ್ರಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ರಾಜ್ಯದಲ್ಲಿ ಸಹಕಾರ ಇಲಾಖೆಯ ಆದೇಶ ಸಂಖ್ಯೆ: ಸಿಒ 15 ಸಿಎಲ್ಎಂ 2005 ದಿನಾಂಕ: 13.06.2011 ಆದೇಶದ ಪ್ರಕಾರ ಗ್ರಾಮಮಟ್ಟದ ಸಹಕಾರ ಸಂಘಗಳು ಒಂದು ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲು ನಿರ್ದೇಶನದ ಕ್ರಮ ಸಂಖ್ಯೆ 9ರ ಪ್ರಕಾರ ಪರೀಕ್ಷೆ ನಡೆಸುವುದು ತುಂಬಾ ವೆಚ್ಚದಾಯಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ವೆಚ್ಚ ಕಡಿಮೆ ಮಾಡಲು 09 ಸರಳೀಕೃತಗೊಳಿಸುವ ಉದ್ದೇಶ ಸರ್ಕಾರ ಹೊಂದಿದೆಯೇ ಹೊಂದಿದ್ದಲ್ಲಿ ಯಾವ ಕ್ರಮ ತೆಗೆದುಕೊಳ್ಳಲಾಗಿದೆ?

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ಸಹಕಾರ ಸಚಿವರು)**

**ಅ)** ಇಲಾಖೆಯ 30ಬಿ ನಿರ್ದೇಶನ ದಿನಾಂಕ:13.06.2011ರಲ್ಲಿ ಸಹಕಾರ ಸಂಘಗಳ ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ನಿರ್ದೇಶನದ ಸಂಖ್ಯೆ 9 ರ ಅನ್ವಯ ಲಿಖಿತ ಪರೀಕ್ಷೆ ಮತ್ತು ಮೌಲ್ಯಮಾಪನವನ್ನು ಬಾಹ್ಯಮೂಲದ ಸಂಸ್ಥೆಗಳಿಂದ ಮಾಡಿಸಬೇಕಾಗಿರುತ್ತದೆ.

ಸಹಕಾರ ಸಂಘಗಳ ಸಿಬ್ಬಂದಿ ನೇಮಕಾತಿಗೆ ಸಂಬಂಧಿಸಿದಂತೆ ಪಾರದರ್ಶಕತೆ, ವೃತ್ತಿಪರತೆ ಮತ್ತು ಮಾನವ ಸಂಪನ್ಮೂಲದ ಅಭಿವೃದ್ಧಿ ದೃಷ್ಟಿಯಿಂದ ಈರೀತಿಯ ವಿಧಿವಿಧಾನ ಅನುಸರಿಸುವುದು ಅವಶ್ಯವಾಗಿದೆ. ಈ ರೀತಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲು ಹೆಚ್ಚಿನ ವೆಚ್ಚವಾಗುವುದಿಲ್ಲ.

**ಆ)** ಈ ರೀತಿಯ ಲಿಖಿತ ಪರೀಕ್ಷೆ ಸರಳೀಕೃತಗೊಳಿಸುವ ಉದ್ದೇಶವಿಲ್ಲ.

**ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಪಶು ಆಸ್ಪತ್ರೆಗಳ ಕುರಿತು**

**599; ಶ್ರೀ ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪಶು ಚಿಕಿತ್ಸಾಲಯ, ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಹಾಗೂ ಪಶು ಆಸ್ಪತ್ರೆಗಳೆಷ್ಟು ಮತ್ತು ಯಾವುವು;

**ಆ)** ಕಂದಾಯ ಹೋಬಳಿ ವ್ಯಾಪ್ತಿಯಲ್ಲಿ ಪಶು ಆಸ್ಪತ್ರೆ ಸೌಲಭ್ಯ ಹೊಂದಿರದ ಕಂದಾಯ ಹೋಬಳಿಗಳು ಯಾವುವು ಇವುಗಳಿಗೆ ಈ ಸೌಲಭ್ಯ ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮವೇನು?

**ಶ್ರೀ ರೇವುನಾಯಕ ಬೆಳಮಗಿ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು)**

**ಅ)** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 13 ಪಶು ಆಸ್ಪತ್ರೆಗಳು, 35 ಪಶು ಚಿಕಿತ್ಸಾಲಯಗಳು, 48 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು, 5 ಸಂಚಾರಿ ಪಶು ಚಿಕಿತ್ಸಾಲಯಗಳು. 7 ಪ್ರಧಾನ ಗ್ರಾಮೀಣ ಯೋಜನೆ ಉಪ–ಕೇಂದ್ರಗಳು. 7 ಕೃತಕ ಗರ್ಭದಾರಣಾ ಉಪ–ಕೇಂದ್ರ ಹಾಗೂ 5 ಇತರೆ ಸಂಸ್ಥೆಗಳು, ಒಟ್ಟು 120 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ವಿವರವನ್ನು **ಅನುಬಂಧ–1**ರಲ್ಲಿ ಲಗತ್ತಿಸಿದೆ.

ಉಡುಪಿ ಜಿಲ್ಲೆಯಲ್ಲಿ 9 ಪಶು ಆಸ್ಪತ್ರೆಗಳು, 37 ಪಶು ಚಿಕಿತ್ಸಾಲಯಗಳು 40 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು, ಒಟ್ಟು 86 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ವಿವರವನ್ನು **ಅನುಬಂಧ–2**ರಲ್ಲಿ ಲಗತ್ತಿಸಿದೆ.

**ಆ)** ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಕಂದಾಯ ಹೋಬಳಿಗಳಲ್ಲಿ ಪಶು ಆಸ್ಪತ್ರೆಯ ಸೌಲಭ್ಯವಿರುತ್ತದೆ.

ಉಡುಪಿ ಜಿಲ್ಲೆಯಲ್ಲಿ ಬೈಂದೂರು, ವಂಡ್ಸೆ ಮತ್ತು ಅಜೆಕಾರು ಕಂದಾಯ ಹೋಬಳಿಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಕಂದಾಯ ಹೋಬಳಿಗಳಲ್ಲಿ ಪಶು ಆಸ್ಪತ್ರೆ ಕಾರ್ಯನಿರ್ವಹಿಸುತ್ತಿವೆ. ರಾಜ್ಯದಲ್ಲಿ ಪಶುವೈದ್ಯರ ಕೊರತೆಯಿಂದಾಗಿ ಸರ್ಕಾರವು ಪಶು ಚಿಕಿತ್ಸಾಲಯಗಳನ್ನು ಪಶು ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವ ಪ್ರಕ್ರಿಯೆಯನ್ನು ಪರಿಗಣಿಸಿರುವುದಿಲ್ಲ

# ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಪಶು ವೈದ್ಯ ಸಂಸ್ಥೆಗಳ ತಾಲ್ಲೂಕುವಾರು ವಿವರಗಳು

| ಕ್ರ. ಸಂ | ತಾಲೂಕು | ಪಶು ಆಸ್ಪತ್ರೆ | ಪಶು ಚಿಕಿತ್ಸಾಲಯ | ಸಂಚಾರಿ ಪಶು ಚಿಕಿತ್ಸಾಲಯ | ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ | ಕೃತಕ ಗರ್ಭದಾರಣ ಕೇಂದ್ರ (*) ಹಾಗೂ ಉಪಕೇಂದ್ರ | ಜಿಲ್ಲಾ ಕೋಳಿ ಸಾಕಣೆ ಮತ್ತು ತರಬೇತಿ ಕೇಂದ್ರ | ದೊಡ್ಡ ರೋಗ ನಿವಾರಣಾ ಯೋಜನೆ | ದೊಡ್ಡ ರೋಗ ತಡೆ ಠಾಣೆ | ಪುಲ್ಲೋರಂ ನಿಯಂತ್ರಣ ಘಟಕ | ನಾಯಿ ಹುಚ್ಚು ತಡೆ ಯೋಜನೆ | ಪ್ರಧಾನ ಗ್ರಾಮೀಣ ಯೋಜನೆ ಮುಖ್ಯ ಕೇಂದ್ರ (+) ಹಾಗು ಉಪ ಕೇಂದ್ರಗಳು |
|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| 1 | ಮಂಗಳೂರು | 1)ಮಂಗಳೂರು<br>2)ಮುಲ್ಕಿ<br>3)ಮೂಡಬಿದ್ರೆ<br>4) ಸುರತ್ಕಲ್ | 1)ಗಂಜಿಮಠ<br>2)ಬಜ್ಜೆ<br>3)ಕೋಟೆಕಾರ್<br>4)ಬೋಳಾರ<br>5)ವಾಮಂಜೂರು<br>6)ಕೆಂಜಾರ್<br>7)ಕೊಂಪದವು<br>8)ಬೆಳುವಾಯಿ<br>9)ಶಿರ್ತಾಡಿ<br>10)ಮೂಡುಮಾರ್ನಾಡು<br>11)ಅಡ್ಯಾರ್<br>12)ಪಾವೂರು | ಮಂಗಳೂರು | 1)ಕುಳಾಯಿ<br>2)ಕೆಮ್ರಾಲ್<br>3)ಕೋಣಾಜೆ<br>4)ಉಳ್ಳಾಲ<br>5)ಬಜಾಲ್<br>6)ಜೋಕಟ್ಟೆ<br>7)ಸೂರಿಂಜೆ<br>8)ಆಮ್ಲಮೊಗರು<br>9)ಕುಪ್ಪೆಪದವು<br>10)ಹೊಸಬೆಟ್ಟು<br>11) ಆಶ್ವಥಪುರ | ಮಂಗಳೂರು (*) | ಮಂಗಳೂರು | ಮಂಗಳೂರು | ತಲಪಾಡಿ | ಮಂಗಳೂರು | ಮಂಗಳೂರು | 1)ಪ್ರಗ್ರಾಯೋ ಕಿನ್ನಿಗೋಳಿ(+)<br>2)ಉಪಕೇಂದ್ರ ಹಳೆಯಂಗಡಿ<br>3) ನೀರುಡೆ<br>4) ಬಳ್ಕುಂಜೆ<br>5)ಕಡಂದಲೆ<br>6)ಎಕ್ಕಾರು<br>7)ನಿಡ್ಡೋಡಿ |
| 2 | ಬಂಟ್ವಾಳ | 1)ಬಂಟ್ವಾಳ<br>2)ಕಲ್ಲಡ್ಕ<br>3)ವಿಟ್ಲ | 1)ವಾಮದಪದವು<br>2)ಕುರ್ನಾಡು<br>3)ವಗ್ಗ<br>4)ಮಾಣಿ<br>5)ಬೆಂಜನಪದವು<br>6)ರಾಯಿ<br>7)ಅಡ್ಯನಡ್ಕ<br>8)ಮೂರ್ಜೆ | ಬಂಟ್ವಾಳ | 1)ಮಾವಿನಕಟ್ಟೆ<br>2)ಪಂಜಿಕಲ್ಲು<br>ಮೇರಮೆಜಲು<br>4)ಸಜಿಪಮೂಡ<br>5)ಕನ್ಯಾನ<br>6)ಪೆರಿಯಲ್ತಡ್ಕ<br>7)ಕುಡ್ತಮುಗೇರು<br>8)ಕಕ್ಕೆಪದವು<br>9)ಪೆರ್ನೆ<br>10)ಮುಂಚಿ | ಬಂಟ್ವಾಳ | – | – | – | – | – | – |
| 3 | ಬೆಳ್ತಂಗಡಿ | 1) ಬೆಳ್ತಂಗಡಿ<br>2)ಧರ್ಮಸ್ಥಳ | 1)ಕಳಂಜೊಟ್ಟು<br>2) ಉಜಿರೆ<br>3)ಚಾರ್ಮಾಡಿ<br>4)ವೇಣೂರು<br>5)ನಾರಾವಿ<br>6)ಅಂಡಿಂಜೆ | ಬೆಳ್ತಂಗಡಿ | 1)ಮಡಂತ್ಯಾರು<br>2)ಕುಪ್ಪೆಟ್ಟು<br>3)ಮೊಗ್ರು<br>4) ಗರ್ಡಾಡಿ<br>5)ಅಳದಂಗಡಿ<br>6)ಮುಂಡಾಜೆ<br>7)ಕೊಕ್ಕಡ<br>8)ಅರಸಿನಮಕ್ಕಿ<br>9)ಕಾಯರ್ತಡ್ಕ | ಬೆಳ್ತಂಗಡಿ | – | – | – | – | – | – |

| | | | | | | | | | | | | |
|---|---|---|---|---|---|---|---|---|---|---|---|---|
| | | | | | 10) ಕನ್ನಾಡಿ<br>11)ಕಿಲ್ಲೂರು | | | | | | | |
| 4 | ಪುತ್ತೂರು | 1)ಪುತ್ತೂರು<br>2)ಉಪ್ಪಿನಂಗಡಿ | 1)ಪಾಣಾಜೆ<br>2)ನರಿಮೊಗ್ರು<br>3)ಕಡಬ<br>4)ಕೊಳ್ತಿಗೆ<br>5)ಕೌಕ್ರಾಡಿ | ಪುತ್ತೂರು | 1)ಶಿರಾಡಿ<br>2)ಕೌಡಿಚಾರ್<br>3)ಬೆಳಂದೂರು<br>4)ಈಶ್ವರ ಮಂಗಲ<br>5)ಕುಂತೂರು ಪದವ<br>6)ಕಲ್ಲುಗುಡ್ಡೆ<br>7)ಕೆದಂಬಾಡಿ<br>8) ಬಲ್ನಾಡು<br>9)ನೆಲ್ಯಾಡಿ<br>10)ಕೋಡಿಂ ಬಾಡಿ | 1) ಪುತ್ತೂರು<br>2)ಉಪ್ಪಿ ನಂಗಡಿ | – | – | – | – | – | – |
| 5 | ಸುಳ್ಯ | 1)ಸುಳ್ಯ<br>2)ಸುಬ್ರಹ್ಮಣ್ಯ | 1)ಪಂಜ<br>2)ಗುತ್ತಿಗಾರು<br>3)ಬೆಳ್ಳಾರೆ<br>4)ಅರಂತೋಡು | ಸುಳ್ಯ | 1)ಮರ್ಕಂಜ<br>2)ಕುಕುಜಡ್ಕ<br>3)ದರ್ಖಾಸ್ತು<br>4)ಕಲ್ಮಡ್ಕ<br>5)ಕೊಲ್ಲಮೊಗ್ಗು<br>6)ಕಳಂಜ | 1) ಸುಳ್ಯ<br>2)ಮಂಡೆ ಕೋಲು | – | – | – | – | – | – |

## ಉಡುಪಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಪಶುವೈದ್ಯ ಸಂಸ್ಥೆಗಳ ತಾಲ್ಲೂಕುವಾರು ವಿವರಗಳು

| **ಉಡುಪಿ ತಾಲ್ಲೂಕು** | **ಕುಂದಾಪೂರ ತಾಲ್ಲೂಕು** | **ಕಾರ್ಕಳ ತಾಲ್ಲೂಕು** |
|---|---|---|
| | **ಪಶು ವೈದ್ಯಕೀಯ ಆಸ್ಪತ್ರೆ** | |
| ಉಡುಪಿ | ಕುಂದಾಪೂರ | ಕಾರ್ಕಳ |
| ಕೋಟ | ಶಂಕರನಾರಾಯಣ | ಹೆಬ್ರಿ |
| ಕಾಪು | | ಬಜಗೋಳಿ |
| ಬ್ರಹ್ಮಾವರ | | |
| | **ಪಶು ಚಿಕಿತಾಲಯಗಳು** | |
| ಸಾಸ್ತಾನ | ಬೈಂದೂರು | ಅಜೇಕಾರು |
| ಮಲ್ಪೆ | ಬೆಳ್ಮೆ | ಬೈಲೂರು |
| ಕಲ್ಯಾಣಪುರ | ಬಿದ್ಕಲ್‌ಕಟ್ಟೆ | ಪಳ್ಳಿ |
| ಕಟಪಾಡಿ | ಗುಜ್ಜಾಡಿ | ನಿಟ್ಟೆ |
| ಶಿರ್ವ | ಕೆದೂರು | ಕಲ್ಯಾ |
| ಮಣಿಪಾಲ | ವಂಡ್ಸೆ | ಮುನಿಯಾಲು |
| ಹಿರಿಯಡ್ಕ | ಕೊಲ್ಲೂರು | ಶಿವಪುರ |
| ಬೈರಂಪಳ್ಳಿ | ಅಮಾಸೆಬೈಲು | ಹೀರ್ಗಾನ |
| ಸ್ಯಾಬರಕಟ್ಟೆ | ಹುಣ್ಸೆಮಕ್ಕಿ | |
| ಪಡುಬೆಳ್ಳೆ | ಹೆಮ್ಮಾಡಿ | |
| ಕಡೇಕಾರು | ಜಡ್ಕಲ್ | |
| ಪಡುಬಿದ್ರಿ | ಹಳ್ಳಿಹೊಳೆ | |
| ಉದ್ಯಾವರ | | |
| ಕಳ್ತೂರುಸಂತೇಕಟ್ಟೆ | | |
| ಶಿರಿಯಾರ | | |
| ಆರ್ವಸೆ | | |
| ಗುಂಡ್ಮಿ | | |
| | **ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು** | |
| ಹಿಲಿಯಾಣ | ನಾಡ | ಮಾಳ |

| | | |
|---|---|---|
| ಮರ್ಣೆ | ಗಂಗೂಳ್ಳಿ | ಬೋಳ |
| ಮಣಿಪುರ | ಕಿರಿಮಂಜೇಶ್ವರ | ಸಾಣೂರು |
| ಅದಮಾರು | ಕಾಲ್ತೋಡು | ಬೆಳ್ಮಣ್ಣು |
| ಮುದರಂಗಡಿ | ಸಿದ್ದಾಪುರ | ಹೊಸ್ತಾರು |
| ಫಲಿಮಾರು | ಅಂಪಾರು | ಮುಂಡ್ಕೂರು |
| ಪೆರ್ಡೂರು | ಕಾಳಾವರ | ನಕ್ರೆ |
| 80–ಬಡಗಬೆಟ್ಟು | ಕೊರ್ಗಿ | ಇರ್ವತ್ತೂರು |
| ಕೊಳಲಗಿರಿ | ಕುಂಭಾಶಿ | ಶಿರ್ಲಾಲು |
| ಪೇತ್ರಿ | ಮಾಂಡಿಮೂರುಕೈ | ಕಬ್ಬಿನಾಲೆ |
| ಕೂರ್ಕರ್ಣಿ | ಬಸ್ರೂರು | ಮುದ್ರಾಡಿ |
| ಕುಕ್ಕೇಹಳ್ಳಿ | ಅರ್ಜಿ | ಕುಚ್ಚೂರು |
| ಹೆಗ್ಗುಂಜೆ | ಕಂಡ್ಲೂರು | ನಾಡ್ಪಾಲು |
| ಧರ್ಮಸಾಲೆ | | |

**ದಕ್ಕಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಶಿಕ್ಷಣ ಸಂಸ್ಥೆಗಳ ಕುರಿತು**

**599; ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಶಿಕ್ಷಣ ಸಂಸ್ಥೆಗಳೆಷ್ಟು; (ಶಿಕ್ಷಣ ಸಂಸ್ಥೆ ಹೆಸರು ಮತ್ತು ಪಾವತಿಸುವ ಬಾಡಿಗೆ ತಾಲ್ಲೂಕುವಾರು ವಿವರ ನೀಡುವುದು.)

ಆ) ಉಡುಪಿ ಜಿಲ್ಲೆಗಳಲ್ಲಿ ಸರ್ಕಾರಿ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿರುವ ಆರ್.ಟಿ.ಸಿ. ಹೊಂದದೇ ಇರುವ ಶಿಕ್ಷಣ ಸಂಸ್ಥೆಗಳಾವುವು; (ಶಿಕ್ಷಣ ಸಂಸ್ಥೆವಾರು, ತಾಲ್ಲೂಕುವಾರು ವಿವರ ನೀಡುವುದು)

ಇ) ಸರ್ಕಾರಿ ಜಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳಿಗೆ ಆರ್.ಟಿ.ಸಿ. ಹೊಂದಲು ಕಾಲಮಿತಿ ನಿರ್ಧರಿಸಿ, ತಪ್ಪಿದಲ್ಲಿ ತಕ್ಷಣ ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನು ಹೊಣೆ ಮಾಡಲಾಗುವುದೇ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

**ಅ)** ಉಡುಪಿ ಜಿಲ್ಲೆಗಳಲ್ಲಿ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಶಿಕ್ಷಣ ಸಂಸ್ಥೆ ಯಾವುದು ಇರುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಬಿಮೂಡ, ಬಂಟ್ವಾಳ ತಾ: ಈ ಕಾಲೇಜು ಕಟ್ಟಡದ ಬಾಡಿಗೆಯಲ್ಲಿ ನಡೆಯುತ್ತಿದ್ದು, ಸದರಿ ಕಟ್ಟಡದ ಬಾಡಿಗೆಯನ್ನು ಸ್ಥಳೀಯ ಶಾಸಕರು ಹಾಗೂ ಶಾಲಾಭಿವೃದ್ಧಿ ಸಮಿತಿ ಮತ್ತು ಸ್ಥಳೀಯ ದಾನಿಗಳು ಬಾಡಿಗೆಯನ್ನು ಪಾವತಿಸುತ್ತಿದ್ದಾರೆ.

**ಆ)** ಯಾವುದು ಇರುವುದಿಲ್ಲ

**ಇ)** ಇಂತಹ ಶಿಕ್ಷಣ ಸಂಸ್ಥೆಗಳು ಯಾವುದು ಕಂಡು ಬಂದಿರುವುದಿಲ್ಲ. ಸರ್ಕಾರಿ ಜಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದಾದರೂ ಶಿಕ್ಷಣ ಸಂಸ್ಥೆಗಳು ಇದ್ದರೆ ಅಂತಹ ಶಿಕ್ಷಣ ಸಂಸ್ಥೆಗಳಿಗೆ ಆರ್.ಟಿ.ಸಿ ಹೊಂದಲು ಕಾಲಮಿತಿಯನ್ನು ನಿಗಧಿಗೊಳಿಸಿ ಸೂಕ್ತ ಕ್ರಮ ಕೈಗೊಳ್ಳಲು ಸುತ್ತೋಲೆ ಹೊರಡಿಸಲಾಗುವುದು. ಮತ್ತು ಆದೇಶವನ್ನು ಪಾಲಿಸದೆ ಇರುವ ಶಿಕ್ಷಣ ಸಂಸ್ಥೆಗಳ ವಿರುದ್ಧ ಕ್ರಮ ಜರುಗಿಸಲಾಗುವುದು.

**ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಧಕ್ಕೆ ಉಂಟು ಮಾಡುತ್ತಿರುವ ಬಗ್ಗೆ**

**606; ಶ್ರೀ ಅಶ್ವಥನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು)**

**ಅ)** ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿ ಸಿಂಡಿಕೇಟ್ ಸಭೆ ಕರೆಯುವುದಿಲ್ಲ. ಜೀವ ಭಯದಿಂದ ವಿಶ್ವವಿದ್ಯಾಲಯ ಕ್ಯಾಂಪಸ್‌ಗೆ ಕಾಲಿಡುವುದಿಲ್ಲ ನನಗೆ ಪ್ರಾಣ ಭಯವಿದೆ. ಸಿಂಡಿಕೇಟ್ ಸಭೆ ನಡೆಸಲು ಸಾಧ್ಯವಿಲ್ಲ ಎಂದು ಒಬ್ಬರನೊಬ್ಬರು ದೂರುತ್ತಾ ಪತ್ರಿಕೆ/ಮಾಧ್ಯಗಳಲ್ಲಿ ಹೇಳಿಕೆ ನೀಡಿ ವಿಶ್ವವಿದ್ಯಾಲಯದ ಗೌರವಕ್ಕೆ ದಕ್ಕೆ ಉಂಟು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

**ಆ)** ಇದರಿಂದ ಮನನೊಂದ ವಿದ್ಯಾರ್ಥಿಗಳು ಮುಷ್ಕರ ಮಾಡುತ್ತಿದ್ದು, ಇದರ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು? (ವಿವರ ನೀಡುವುದು)

**ಶ್ರೀ ಸಿ.ಟಿ.ರವಿ( ಉನ್ನತ ಶಿಕ್ಷಣ ಸಚಿವರು)**

**ಅ)** ಪರಿಹಾರೋಪಾಯಗಳ ಬಗ್ಗೆ ಪರಿಶೀಲಿಸಲಾಗುತ್ತಿದೆ.

**ಆ)** ಪರಿಹಾರೋಪಾಯಗಳ ಬಗ್ಗೆ ಪರಿಶೀಲಿಸಲಾಗುತ್ತಿದೆ.

**ಕು॥ ಸಂಜನ ಸಾವಿನ ಪ್ರಕರಣದ ಬಗ್ಗೆ**

**607; ಶ್ರೀ ಅಶ್ವಥನಾರಾಯಣ (ವಿಧಾನಸಭಾ ಕ್ಷೇತ್ರ)**

**ಅ)** ಬೆಂಗಳೂರಿನ ಹೆಬ್ಬಾಳದ ಬಳಿಯ ಪಶುವೈದ್ಯಕೀಯ ಕಾಲೇಜಿನ ಕಾಂಪೌಂಡ್ ಗೋಡೆ ಕುಸಿದು ಬಾಲಕಿ ಕು॥ ಸಂಜನ ಸಾವಿಗೆ ಗುತ್ತಿಗೆದಾರರೇ ಅಥವಾ ಕಳಪೆ ಕಾಮಗಾರಿಯನ್ನು ಮಾಡಿಸಿರುವ ಅಧಿಕಾರಿಗಳೆ ಎಂಬುದನ್ನು ನಿಖರವಾಗಿ ತಿಳಿಯಲು ಲೋಕಾಯುಕ್ತಕ್ಕೆ ವಹಿಸಲಾಗಿದ್ದು, ಇದರ ವರದಿ ಸರ್ಕಾರಕ್ಕೆ ಬಂದಿದೆಯೇ:

**ಆ)** ಬಂದಿದ್ದರೆ, ತಪ್ಪಿತಸ್ಥರು ಯಾರು ಅವರ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು; (ಕ್ರಮ ತೆಗೆದುಕೊಂಡಿರದಿದ್ದರೆ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು; ವಿವರ ನೀಡುವುದು)

**ಶ್ರೀ ಜಗದೀಶ ಶೆಟ್ಟರ (ಮುಖ್ಯಮಂತ್ರಿಗಳು)**

**ಅ)** ಬಂದಿರುತ್ತದೆ.

**ಆ)** ಆರೋಪಿತ ಅಧಿಕಾರಿಗಳು

1) ಶ್ರೀ ಹೆಚ್.ಬಿ.ಚಿದಾನಂದಯ್ಯ,
   ಕಾರ್ಯಪಾಲಕ ಅಭಿಯಂತರರು (ಪ್ರಭಾರ)
2) ಶ್ರೀ ಟಿ.ಪಿ. ಪದ್ಮನಾಭ,
   ಕಾರ್ಯಪಾಲಕ ಅಭಿಯಂತರರು

3) ಶ್ರೀ ಅಶ್ವತ್ಥನಾರಾಯಣ ರೆಡ್ಡಿ,
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು

4) ಶ್ರೀ ಕೆ.ಸಿ.ಸತೀಶ್,
ಸಹಾಯಕ ಅಭಿಯಂತರರು

**ಆರೋಪಿತ ಗುತ್ತಿಗೆದಾರರು**

1. ಶ್ರೀ ಮುನಿರತ್ನ,
ಮೊದಲನೇಯ ದರ್ಜೆ ಗುತ್ತಿಗೆದಾರರು
2. ಶ್ರೀ ರಾಮಚಂದ್ರ ಕನ್ಸ್ಟ್ರಕ್ಷನ್,
(ಶ್ರೀ ಹುಮೇಶ್‌ಕುಮಾರ್)

ಪ್ರಥಮ ಹಂತದಲ್ಲಿ ಸದರಿ ಅಭಿಯಂತರರುಗಳನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿದ್ದು, ನಂತರ ಇಲಾಖಾ ವಿಚಾರಣೆ ಬಾಕಿ ಇರಿಸಿ ಅಮಾನತ್ತನ್ನು ತೆರೆವುಗೊಳಿಸಿರುತ್ತದೆ. ಪಾಲಿಕೆಯಲ್ಲಿ ರಚಿಸಲಾಗಿದ್ದ ಸಮಿತಿಯು ನೀಡಿರುವ ವರದಿಯ ಆಧಾರದ ಮೇಲೆ ಹಾಗೂ ಮಾನ್ಯ ಲೋಕಾಯುಕ್ತರು ತನಿಖೆ ಮಾಡಿ ನೀಡಿರುವ ವರದಿಯ ಆಧಾರದ ಮೇಲೆ ಸರ್ಕಾರವು ಎಲ್ಲಾ ಅಭಿಯಂತರರುಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲು ಅವರಿಗೆ ದೋಷಾರೋಪಣಾ ಪಟ್ಟಿಯನ್ನು ದಿನಾಂಕ: 16–09–2010 ರಂದು ಜಾರಿಗೊಳಿಸಿದೆ.

ಆರೋಪಗಳ ಬಗ್ಗೆ ಸತ್ಯಾಸತ್ಯತೆಯನ್ನು ಕಂಡುಹಿಡಿಯುವ ಸಲುವಾಗಿ ಜಂಟಿ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿ ಕಾರಿಯನ್ನಾಗಿ ಶ್ರೀ ಎಸ್. ಇಂದೂಧರ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ಹಾಗೂ ಮಂಡನಾಧಿಕಾರಿಯನ್ನಾಗಿ ಶ್ರೀ ಮನೋಹರ್.ಎಸ್.ಹಲಗೇರಿ, ಕಿರಿಯ ಕಾನೂನು ಅಧಿಕಾರಿ, ಬಿ.ಬಿ.ಎಂ.ಪಿ ಇವರನ್ನು ದಿನಾಂಕ: 15–02–2011 ರಂದು ನೇಮಿಸಿ ಆದೇಶ ಹೊರಡಿಸಲಾಗಿಸದ್ದು, ಪ್ರಸ್ತುತ ವಿಚಾರಣೆ ಪ್ರಗತಿಯಲ್ಲಿರುತ್ತದೆ.

ಮಾನ್ಯ ಲೋಕಾಯುಕ್ತರು ಶಿಫಾರಸ್ಸು ಮಾಡಿರುವಂತೆ ಸದರಿ ಅಧಿಕಾರಿ ಹಾಗೂ ಗುತ್ತಿಗೆದಾರರ ವಿರುದ್ಧ ಅಭಿಯೋಜನೆಗೊಳಿಸಲು ಕ್ರಮ ಕೈಗೊಳ್ಳುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸರ್ಕಾರದಿಂದ ನಿರ್ದೇಶನ ನೀಡಲಾಗಿತ್ತು. ಅದರಂತೆ ಮೇಲ್ಕಂಡ ಅಧಿಕಾರಿ ಹಾಗೂ ಗುತ್ತಿಗೆದಾರರ ವಿರುದ್ಧ ಬಿ.ಬಿ.ಎಂ.ಪಿ.ಯು ಸಂಜಯನಗರ ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದೆ.

**ಕೆ.ಎಂ.ಎಫ್ ಹಾಲಿನ ಬೆಲೆ ಹೆಚ್ಚಿಸಲು ಉದ್ದೇಶಿಸಿರುವ ಬಗ್ಗೆ**

**630; ಶ್ರೀ ದಯಾನಂದ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಕೆ.ಎಂ.ಎಫ್ ಹಾಲಿನ ಬೆಲೆ ಹೆಚ್ಚಾಗುತ್ತಿದ್ದಂತೆ ಹಾಲಿನ ಮತ್ತು ಇತರೆ ಉತ್ತನ್ನಗಳ ಗುಣಮಟ್ಟ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

**ಆ)** ಕೆ.ಎಂ.ಎಫ್ ಹಾಲು ಮತ್ತು ಹಾಲಿನ ಎಲ್ಲಾ ಉತ್ಪನ್ನಗಳ ಗುಣಮಟ್ಟ ನಿಯಂತ್ರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು

**ಇ)** ಕೆ.ಎಂ.ಎಫ್ ಹಾಲಿನ ಬೆಲೆಯನ್ನು ಹೆಚ್ಚಿಸಲು ಪ್ರಸ್ತಾವನೆಯು ಬಂದಿದೆಯೆ? ಏಜೆಂಟರ ಮೂಲಕ ಹಾಲನ್ನು ಮಾರುವ ಏಜೆಂಟರಿಗೆ ನೀಡಲಾಗುವ ಕಮಿಷನ್ ಎಷ್ಟು

**ಈ)** ಏಜೆಂಟರಿಗೆ ಅನಾನುಕೂಲವಾಗಿದ್ದರೂ ಸಹ ಭಾನುವಾರವು ಕೇಂದ್ರ ಕಚೇರಿಗೆ ಬಂದು ಹಣವನ್ನು ಪಾವತಿಸಲುವ ಪದ್ಧತಿಯನ್ನು ಬದಲಾಯಿಸಲು ಸರ್ಕಾರವು ಉದ್ದೇಶಿಸಿದೆಯೇ?

**ಶ್ರೀ ರೇವುನಾಯಕ ಬೆಳಮಗಿ (ಪಶುಸಂಗೋಪನೆ ಸಚಿವರು)**

**ಅ)** ಇಲ್ಲ

**ಆ)** ಕೆ.ಎಂ.ಎಫ್.ನಡಿ ಕಾರ್ಯನಿರ್ವಹಿಸುತ್ತಿರುವ ಹಾಲು ಒಕ್ಕೂಟಗಳು ಮತ್ತು ಘಟಕಗಳು ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು

ಮಾರುಕಟ್ಟೆಗೆ ಬಿಡುಗಡೆ ಮಾಡುವ ಮುನ್ನ ಗುಣಮಟ್ಟ ಪರೀಕ್ಷಿಸಿ ದೃಢೀಕರಿಸಿದ ನಂತರ ಸರಬರಾಜು ಮಾಡುತ್ತಿವೆ. ಎಲ್ಲಾ ಡೇರಿ ಮತ್ತು ಘಟಕಗಳು MMPO ಇವುಗಳ ಅನ್ವಯ ಆಹಾರ ಸಂರಕ್ಷಣಾ ನಿಯಮಗಳನ್ನು ಅಳವಡಿಸಿಕೊಂಡಿದ್ದು, ಬಹುತೇಕ ಡೇರಿಗಳು ISO–22000, ISO–9000 ದೃಢೀಕರಣ ಪಡೆದುಕೊಂಡಿದ್ದು, ಹಾಲು ಮತ್ತು ಹಾಲಿನ ಉತ್ಪನ್ನಗಳ ಗುಣಮಟ್ಟವನ್ನು ನಿರಂತರವಾಗಿ ಕಾಪಾಡಿಕೊಂಡು ಬರಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕೆ.ಎಂ.ಎಫ್. ನ ಕೇಂದ್ರ ಗುಣನಿಯಂತ್ರಣ ವಿಭಾಗವು ಮಾರುಕಟ್ಟೆಗೆ ಬಿಡುಗಡೆಯಾಗುತ್ತಿರುವ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾದರಿಗಳನ್ನು ಆಗಿಂದಾಗ್ಗೆ ಪರೀಕ್ಷಿಸಿ ಗುಣಮಟ್ಟವನ್ನು ದೃಢೀಕರಿಸಿ ಕೊಳ್ಳಲಾಗುತ್ತಿದೆ.

ಇ) ಬಂದಿದೆ.

ಹಾಲನ್ನು ಮಾರುವ ಏಜೆಂಟರಿಗೆ ಪ್ರತಿ ಲೀಟರ್ ಹಾಲಿನ ಮಾರಾಟ ಬೆಲೆಯ ಶೇ 3.5 ರಂತೆ ಕಮಿಷನ್ ನೀಡಲಾಗುತ್ತಿದೆ.

**ಈ)** ಏಜೆಂಟರು ಹಣ ಪಾವತಿಸುವ ಪದ್ಧತಿಯನ್ನು ಬದಲಾಯಿಸುವ ಪ್ರಸ್ತಾಪವಿರುವುದಿಲ್ಲ.

**ರಾಜ್ಯದಲ್ಲಿ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನ ತುಂಬುವ ಬಗ್ಗೆ**

**675; ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರ ಕ್ಷೇತ್ರ)**

**ಅ)** ರಾಜ್ಯದಲ್ಲಿ ಎಷ್ಟು ಸರ್ಕಾರಿ ಪ್ರೌಢ ಶಾಲೆಗಳಿವೆ; (ಜಿಲ್ಲಾವಾರು ಮಾಹಿತಿ ನೀಡುವುದು)

**ಆ)** ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಎಷ್ಟು ಬೋಧಕ ಹಾಗೂ ಬೋಧಕೇತರ ಹುದ್ದೆಗಳು ಎಷ್ಟು ದಿನಗಳಿಂದ ಖಾಲಿ ಇವೆ. (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಈ ಹುದ್ದೆಗಳನ್ನು ತುಂಬಲು ಯಾವ ಕ್ರಮ ಕೈಗೊಳ್ಳಲಾಗಿದೆ.

ಈ) ಈ ಹುದ್ದೆಗಳು ಖಾಲಿ ಇರುವುದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ.

ಉ) ಬಹಳ ದಿನಗಳಿಂದ ಈ ಹುದ್ದೆಗಳು ಖಾಲಿ ಇರುವುದರಿಂದ ವಿದ್ಯಾರ್ಥಿಗಳು ಖಾಸಗಿ ಪ್ರೌಢ ಶಾಲೆಗಳಿಗೆ ಹೋಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹೀಗಾಗಿ ಸರ್ಕಾರಿ ಕನ್ನಡ ಪ್ರೌಢ ಶಾಲೆಗಳನ್ನು ಮುಚ್ಚುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿಯೇ;

ಋ) ಬಂದಿದ್ದಲ್ಲಿ ಕೂಡಲೇ ಈ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದೇ;

ೠ) ಬಾಗಲಕೋಟೆ, ಬಿಜಾಪುರ ಹಾಗೂ ಬೆಳಗಾವಿ ಜಿಲ್ಲೆಯ ಶಾಲೆ ಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ? (ತಾಲ್ಲೂಕುವಾರು ವಿವರ ನೀಡುವುದು)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) ರಾಜ್ಯದಲ್ಲಿ ಒಟ್ಟು 4278 ಸರ್ಕಾರಿ ಪ್ರೌಢ ಶಾಲೆಗಳಿವೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ–ಅ** ನಲ್ಲಿ ಲಗತ್ತಿಸಿದೆ.

ಆ) 2012–13ನೇ ಸಾಲಿನ ಪ್ರೌಢ ಶಾಲಾ ಶಿಕ್ಷಕರ ವರ್ಗಾವಣಾ ನಂತರದಲ್ಲಿ ಒಟ್ಟು 3738 (ವಿಶೇಷ ಶಿಕ್ಷಕರು ಸೇರಿದಂತೆ) ಹುದ್ದೆಗಳು ಖಾಲಿ ಇರುತ್ತವೆ. ಜಿಲ್ಲಾವಾರು ಖಾಲಿ ಹುದ್ದೆಗಳ ವಿವರಗಳನ್ನು **ಅನುಬಂಧ–ಆ** ನಲ್ಲಿ ಲಗತ್ತಿಸಿದೆ.

ಬೆಂಗಳೂರು ಮತ್ತು ಮೈಸೂರು ವಿಭಾಗದಲ್ಲಿ ಒಟ್ಟು 1293 ಬೋಧಕೇತರ ಹುದ್ದೆಗಳು ಖಾಲಿ ಇರುತ್ತವೆ. ಜಿಲ್ಲಾವಾರು ಖಾಲಿ ಹುದ್ದೆಗಳ ವಿವರಗಳನ್ನು **ಅನುಬಂಧ–ಇ** ನಲ್ಲಿ ಲಗತ್ತಿಸಿದೆ.

ಇ) ಸರ್ಕಾರಿ ಪ್ರೌಢ ಶಾಲೆಯಲ್ಲಿನ 1065 ಸಹ ಶಿಕ್ಷಕರ ಹುದ್ದೆಗಳನ್ನು ಹಾಗೂ ಆರ್.ಎಂ.ಎಸ್.ಎ ಯೋಜನೆಯಡಿ ಉನ್ನತೀಕರಿಸಲಾದ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 1824 ಮತ್ತು ಆದರ್ಶ ಶಾಲೆಯ 518 ಹುದ್ದೆಗಳು ಸೇರಿದಂತೆ ಒಟ್ಟು 3407 ಪ್ರೌಢಶಾಲಾ ಸಹ ಶಿಕ್ಷಕರ ಹುದ್ದೆಗಳ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದ್ದು, ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

ಡಿ ದರ್ಜೆ ನೌಕರರ ಹುದ್ದೆಗಳನ್ನು ಅನುಕಂಪದ ಆಧಾರದ ಮೇರೆಗೆ ನೇಮಕ ಮಾಡಲಾಗುತ್ತಿದೆ.

**ಈ)** ಈ ಬಗ್ಗೆ ಪರ್ಯಾಯ ವ್ಯವಸ್ಥೆ ಮಾಡಲಾಗುತ್ತಿದ್ದು ಯಾವುದೇ ತೊಂದರೆ ಆಗದಂತೆ ಗಮನ ಹರಿಸಲಾಗಿದೆ.

**ಉ)** ಇಲ್ಲ

**ಊ)** ಇಲ್ಲ

**ಋ)** ಅನ್ವಯಿಸುವುದಿಲ್ಲ

**ೠ)** ತಾಲ್ಲೂಕುವಾರು ಪಟ್ಟಿಯನ್ನು ಲಗತ್ತಿಸಿದೆ. **ಅನುಬಂಧ–ಈ**

ಅನುಬಂಧ–ಅ

## SARVA SHIKSHANA ABHIYANA, KARANATAKA

## S1.3 - Distribution of Schools By Management - Secondary Schools

| Sl.No | District Name | Department of Education |
|---|---|---|
| 1 | BAGALKOT | 146 |
| 2 | BANGALORE RURAL | 59 |
| 3 | BANGALORE U NORTH | 52 |
| 4 | BANGALORE U SOUTH | 79 |
| 5 | BELGAUM | 123 |
| 6 | BELGAUM CHIKKODI | 146 |
| 7 | BELLARY | 172 |
| 8 | BIDAR | 149 |
| 9 | BIJAPUR | 121 |
| 10 | CHAMARAJANAGARA | 84 |
| 11 | CHIKKABALLAPURA | 106 |
| 12 | CHIKKAMANGALORE | 115 |
| 13 | CHITRADURGA | 109 |
| 14 | DAKSHINA KANNADA | 160 |
| 15 | DAVANAGERE | 152 |
| 16 | DHARWAD | 89 |
| 17 | GADAG | 83 |
| 18 | GULBARGA | 254 |
| 19 | HASSAN | 241 |
| 20 | HAVERI | 131 |
| 21 | KODAGU | 47 |
| 22 | KOLAR | 115 |
| 23 | KOPPAL | 128 |
| 24 | MANDYA | 214 |
| 25 | MYSORE | 216 |
| 26 | RAICHUR | 162 |
| 27 | RAMANAGARA | 106 |

| | | |
|---|---|---|
| 28 | SHIMOGA | 155 |
| 29 | TUMKUR | 133 |
| 30 | TUMKUR MADHUGIRI | 94 |
| 31 | UDUPI | 106 |
| 32 | UTTARA KANNADA | 45 |
| 33 | UTTARA KANNADA SIRSI | 70 |
| 34 | YADAGIRI | 116 |
| **Total** | | **4,278** |
| **Source: DISE 2010-11** | | |

## ಅನುಬಂಧ–ಇ

## ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿನ ಬೋದಕೇತರ ನೌಕರರ ಖಾಲಿ ಹುದ್ದೆಗಳ ವಿವರ

| ಕ್ರಮ ಸಂಖ್ಯೆ | ಜಿಲ್ಲೆಗಳ ಹೆಸರು | ಅಧೀಕ್ಷಕರು | ಪ್ರದಸ | ದ್ವಿದಸ | ಡಿ.ದರ್ಜೆ ನೌಕರರು | ಒಟ್ಟು |
|---|---|---|---|---|---|---|
| 1 | ಬೆಂಗಳೂರು ಉತ್ತರ | 00 | 00 | 00 | 48 | **48** |
| 2 | ಬೆಂಗಳೂರು ದಕ್ಷಿಣ | 00 | 00 | 00 | 44 | **44** |
| 3 | ಬೆಂಗಳೂರು ಗ್ರಾಮಾಂತರ | 00 | 00 | 00 | 48 | **48** |
| 4 | ರಾಮನಗರ | 00 | 00 | 00 | 65 | **65** |
| 5 | ಕೋಲಾರ | 00 | 01 | 00 | 78 | **79** |
| 6 | ಚಿಕ್ಕಬಳ್ಳಾಪೂರ | 00 | 02 | 01 | 59 | **62** |
| 7 | ತುಮಕೂರು | 02 | 02 | 02 | 77 | **83** |
| 8 | ಮಧುಗಿರಿ | 00 | 01 | 00 | 48 | **49** |
| 13 | ಕೆಲಸೂರು | ಗ್ರಾಮ ಪಂಚಾಯತಿ ಕಟ್ಟಡ ಸುಸ್ಥಿತಿಯಲ್ಲಿದೆ. ಈ ಗ್ರಾಮ ಪಂಚಾಯತಿ ಸುವರ್ಣ ಗ್ರಾಮೋದಯ ಯೋಜನೆಗೆ ಆಯ್ಕೆಯಾಗಿದೆ. |
| 14 | ಶಿಂಡನಪುರ | ಬಾಡಿಗೆ ಕಟ್ಟಡ ಶಿಥಿಲಾಗಿದೆ. |
| 15 | ಅಗತಗೌಡನಹಳ್ಳಿ | ಗ್ರಂಥಾಲಯವು ಗ್ರಾಮ ಪಂಚಾಯತಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಸದರಿ ಕಟ್ಟಡ ಶಿಥಿಲವಾಗಿದೆ. |
| 16 | ರಾಘವಾಪುರ | ಗ್ರಂಥಾಲಯವು ಆಯುರ್ವೇದ ಆಸ್ಪತ್ರೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಕಟ್ಟಡ ಚಿಕ್ಕದಾಗಿದೆ |
| 17 | ಬರಗಿ | ಗ್ರಂಥಾಲಯವಿರುವ ಕಟ್ಟಡ ಚಿಕ್ಕದಾಗಿದೆ ಮತ್ತು ಶಿಥಿಲವಾಗಿದೆ. |
| 18 | ಬನ್ನೀತಾಳಪುರ | ಗ್ರಾಮ ಪಂಚಾಯತಿ ಕಟ್ಟಡ ಚೆನ್ನಾಗಿದೆ. |

| | | |
|---|---|---|
| 19 | ಬೀಮನಬಿಡು | ಗ್ರಂಥಾಲಯ ಕಟ್ಟಡ ಸುಸ್ಥಿತಿಯಲ್ಲಿದೆ. ಈ ಗ್ರಾಮ ಪಂಚಾಯತಿ ಸುವರ್ಣಗ್ರಾಮೋದಯ ಯೋಜನೆಗೆ ಆಯ್ಕೆಯಾಗಿದೆ. |
| 20 | ಬೊಮ್ಮನಹಳ್ಳಿ | ಗ್ರಂಥಾಲಯವು ಕಟ್ಟಡ ಶಿಥಿಲವಾಗಿದೆ |
| 21 | ಬಾಚಳ್ಳಿ | ಗ್ರಂಥಾಲಯವು ಕಟ್ಟಡ ಶಿಥಿಲವಾಗಿದೆ |
| 22 | ಕೊಟೇಕೆರೆ | ಗ್ರಂಥಾಲಯವು ಪಂಚಾಯತಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ ಸದರಿ ಕಟ್ಟಡ ಸುಸ್ಥಿತಿಯಲ್ಲಿದೆ. |
| 23 | ಕಣ್ಣೇಗಾಲ | ಗ್ರಾಮ ಪಂಚಾಯತಿ ಕಟ್ಟಡ ಶಿಥಿಲವಾಗಿದೆ |
| 24 | ನೇನೆಕಟ್ಟೆ | ಗ್ರಾಮ ಪಂಚಾಯತಿ ಕಟ್ಟಡ ಚೆನ್ನಾಗಿದೆ |
| 25 | ಶಿವಪುರ | ಗ್ರಂಥಾಲಯವು ಬಾಡಿಗೆ ಕಟ್ಟಡದಲ್ಲಿದೆ. |
| 26 | ಬೇರಂಬಾಡಿ | ಗ್ರಂಥಾಲಯವು ಗ್ರಾಮ ಪಂಚಾಯತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ |
| 27 | ಮಂಗಲ | ಗ್ರಂಥಾಲಯವು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ ಸದರಿ ಕಟ್ಟಡ ಸುಸ್ಥಿತಿ ಯಲ್ಲಿದೆ. |
| 28 | ಕಬ್ಬಹಳ್ಳಿ | ಗ್ರಂಥಾಲಯವು ಕಟ್ಟಡ ಶಿಥಿಲವಾಗಿದೆ ಮತ್ತು ಚಿಕ್ಕದಾಗಿದೆ. |
| 29 | ಬೇಗೂರು | ಗ್ರಂಥಾಲಯವು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ ಸದರಿ ಕಟ್ಟಡ ಸುಸ್ಥಿತಿಯಲ್ಲಿದೆ. |
| 30 | ತೆರಕಣಾಂಬಿ | ಕಟ್ಟಡ ಶಿಥಿಲವಾಗಿದೆ. ಕಟ್ಟಡ ನಿರ್ಮಿಸಲು ಆರ್ ಆರ್ ಆರ್ ಎಲ್ ಎಫ್ ಕೊಲ್ಕತ್ತಾ ಇವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ |

| ಯಳಂದೂರು ತಾಲ್ಲೂಕು | | |
|---|---|---|
| ಕ್ರ.ಸಂ | ಗ್ರಾಮ ಪಂಚಾಯತಿ ಗ್ರಂಥಾಲಯದ ಹೆಸರು | ಗ್ರಂಥಾಲಯ ಕಟ್ಟಡದ ಸ್ಥಿತಿಗತಿ |
| 1 | ಕೆಸ್ತೂರು | ಗ್ರಂಥಾಲಯವು ಅಂಗಡಿ ಮಳಿಗೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಗ್ರಾಮ ಪಂಚಾಯತಿ ಸುವರ್ಣಗ್ರಾಮೋದಯ ಯೋಜನೆಗೆ ಆಯ್ಕೆಯಾಗಿದೆ. |
| 2 | ಹೊನ್ನೂರು | ಗ್ರಾಮ ಪಂಚಾಯತಿ ವತಿಯಿಂದ |
| 3 | ಅಗರ | ಗ್ರಾಮ ಪಂಚಾಯತಿಯಲ್ಲಿ ಗ್ರಂಥಾಲಯ ಕಾರ್ಯನಿರ್ವಹಿಸುತ್ತಿದೆ. |
| 4 | ಮಾಂಬಳ್ಳಿ | ಬಾಡಿಗೆ ಕಟ್ಟಡ ಚನ್ನಾಗಿದೆ |
| 5 | ದುಗ್ಗಟ್ಟಿ | ಗ್ರಾಮ ಪಂಚಾಯತಿ ವತಿಯಿಂದ ನೀಡಿರುವ ಗ್ರಂಥಾಲಯ ಕಟ್ಟಡ ಚನ್ನಾಗಿದೆ |
| 6 | ಮದ್ದೂರು | ಗ್ರಂಥಾಲಯವು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಸದರಿ ಕಟ್ಟಡ ಶಿಥಿಲವಾಗಿದೆ. |
| 7 | ಗೌಡಳ್ಳಿ | ಗ್ರಾಮ ಪಂಚಾಯತಿಯಿಂದ ನೀಡಿರುವ ಗ್ರಂಥಾಲಯ ಕಟ್ಟಡ ಶಿಥಿಲವಾಗಿದೆ. |
| 8 | ಯರಿಯೂರು | ಗ್ರಂಥಾಲಯವು ಅಂಗಡಿ ಮಳಿಗೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. |
| 9 | ಯರಗಂಬಳ್ಳಿ | ಗ್ರಂಥಾಲಯವು ಕಟ್ಟಡ ಶಿಥಿಲವಾಗಿದೆ. ಈ ಗ್ರಾಮ ಪಂಚಾಯತಿ ಸುವರ್ಣಗ್ರಾಮೋದಯ ಯೋಜನೆಗೆ ಆಯ್ಕೆಯಾಗಿದೆ. |
| 10 | ಅಂಬಳೆ | ಗ್ರಾಮ ಪಂಚಾಯತಿಯಿಂದ ಕಟ್ಟಡ ನೀಡಲಾಗಿದ್ದು ಸದರಿ ಕಟ್ಟಡ ಚನ್ನಾಗಿದೆ |
| 11 | ಗುಂಬಳ್ಳಿ | ಗ್ರಾಮ ಪಂಚಾಯತಿಯಿಂದ ನೀಡಿರುವ ಗ್ರಂಥಾಲಯ ಕಟ್ಟಡ ಚನ್ನಾಗಿದೆ. |
| 12 | ಯಳಂದೂರು | ಬಾಡಿಗೆ ಕಟ್ಟಡ |

## ಕರೆಕ್ಟಿವ್ ಸರ್ಜರಿ ಯೋಜನೆ ಬಗ್ಗೆ

**519; ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**1)** ಕೊಪ್ಪಳ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕರೆಕ್ಟಿವ್ ಸರ್ಜರಿ ಯೋಜನೆ ಜಾರಿಗೆ ತರಲಾಗಿದೆಯೇ

**2)** ಸದರಿ ಯೋಜನೆಯನ್ವಯ ಯಾವ ಚಿಕಿತ್ಸೆಗಳನ್ನು ವಿದ್ಯಾರ್ಥಿಗಳಿಗೆ ನೀಡಬಹುದು;

**3)** ಇದುವರೆಗೆ ಜಿಲ್ಲೆಯಲ್ಲಿ ಸದರಿ ಯೋಜನೆಯಲ್ಲಿ ಯಾವ ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದೆ; (ತಾಲ್ಲೂಕುವಾರು ಚಿಕಿತ್ಸೆ ನೀಡಿದ ವಿವರಗಳನ್ನು ನೀಡುವುದು)

**4)** ಯೋಜನೆ ಪ್ರಾರಂಭದಿಂದ ಇದುವರೆಗೂ ಸದರಿ ಯೋಜನೆಗಾಗಿ ಸರ್ಕಾರದಿಂದ ಸ್ವೀಕೃತವಾದ ಅನುದಾನ ಎಷ್ಟು; ಬಳಕೆಯಾದ ಅನುದಾನ ಎಷ್ಟು ? (ಬಳಕೆಯಾದ ಅನುದಾನದ ತಾಲ್ಲೂಕುವಾರು ವಿವರಗಳನ್ನು ನೀಡುವುದು)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

**1)** ಹೌದು

**2)** ಸದರಿ ಯೋಜನೆಯನ್ವಯ ದೃಷ್ಟಿದೋಷ ದೈಹಿಕ ನ್ಯೂನ್ಯತೆ, ಶ್ರವಣ ನ್ಯೂನ್ಯತೆ, ಮಾತಿನ ವಿಕಲತೆ ಮುಂತಾದ ಚಿಕಿತ್ಸೆಗಳನ್ನು ವಿದ್ಯಾರ್ಥಿಗಳಿಗೆ ನೀಡಬಹುದು.

**3)** ದೃಷ್ಟಿದೋಷವುಳ್ಳ ಹಾಗೂ ದೈಹಿಕ ನ್ಯೂನ್ಯತೆಯುಳ್ಳ ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದೆ. ವಿವರ ಇಂತಿದೆ.

| ತಾಲ್ಲೂಕು | ಮಕ್ಕಳ ಸಂಖ್ಯೆ |
|---|---|
| ಗಂಗಾವತಿ | 78 |
| ಕೊಪ್ಪಳ | 58 |
| ಕುಷ್ಟಗಿ | 69 |
| ಯಲಬುರ್ಗಾ | 68 |
| **ಒಟ್ಟು** | **273** |

**4)** 2011=12ನೇ ಸಾಲಿನಲ್ಲಿ ಎಸ್ ಎಸ್ ಎ ವತಿಯಿಂದ ₹ 12.64 ಲಕ್ಷ ಅನುದಾನ ಒದಗಿಸಿದೆ.

| ತಾಲ್ಲೂಕು | ಬಳಕೆಯಾದ ಅನುದಾನ (₹ ಲಕ್ಷಗಳಲ್ಲಿ) |
|---|---|
| ಗಂಗಾವತಿ | 3.063 |
| ಕೊಪ್ಪಳ | 2.646 |
| ಕುಷ್ಟಗಿ | 2.877 |
| ಯಲಬುರ್ಗಾ | 1.970 |
| **ಒಟ್ಟು** | **10.556** |

## ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರ ಹುದ್ದೆಗಳ ಪರಿವರ್ತನೆ ಬಗ್ಗೆ

**540; ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಕೊಪ್ಪಳ ಜಿಲ್ಲೆಯಲ್ಲಿ ಶಿಕ್ಷಕರ ಹುದ್ದೆಗಳನ್ನು ಪರಿವರ್ತನೆ ಮಾಡಲಾಗಿದೆ. ಎಂದು ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ವರದಿ ಯಾಗಿರುವ ವಿಷಯ ಸರಕಾರದ ಗಮನಕ್ಕೆ ಬಂದಿದೆಯೇ:

**ಆ)** ಹುದ್ದೆಗಳ ಪರಿವರ್ತನೆಯಿಂದಾಗಿ ಜಿಲ್ಲೆಯಲ್ಲಿ ಉದ್ಭವಿಸಿರುವ ಸಮಸ್ಯೆ ಸರಕಾರದ ಗಮನಕ್ಕೆ ಬಂದಿದೆಯೇ:

ಇ) ಶಿಕ್ಷಕರ ಹುದ್ದೆಗಳ ಪರಿವರ್ತನೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಮಂಡಳಿಯ ನಿರ್ದೇಶಕರು ನಡೆಸಿದ ತನಿಖೆಯ ವಿವರಗಳೇನು; (ತನಿಖಾ ವರದಿಯ ಪ್ರತಿ ನೀಡುವುದು)

ಈ) ಶಿಕ್ಷಕರ ಹುದ್ದೆಗಳ ಪರಿವರ್ತನೆಯ ಪರಿಣಾಮ ಜಿಲ್ಲೆಯ ಹಲವಾರು ಶಾಲೆಗಳಲ್ಲಿ ಒಂದೇ ವಿಷಯದ ಹಲವಾರು ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದರಿಂದ ಶಿಕ್ಷಕರ ವೇತನ, ಬಡ್ತಿ ಹಾಗೂ ಇತರ ಸೌಲಭ್ಯಗಳನ್ನು ನೀಡಲು ತೊಂದರೆಯಾಗಿದ್ದು ಈ ಸಮಸ್ಯೆ ನಿವಾರಣೆಗೆ ಇಲಾಖೆ ಏನು ಕ್ರಮ ಕೈಗೊಂಡಿದೆ.

ಉ) ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯ ನಿರ್ದೇಶಕರ ವರದಿ ಆಧಾರದ ಮೇಲೆ ಯಾವ ಯಾವ ಅಧಿಕಾರಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) **ಮತ್ತು ಆ)** ಹೌದು

ಇ) ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಪ್ರೌಢಶಿಕ್ಷಣ ಮಂಡಳಿಯ ನಿರ್ದೇಶಕರು ತನಿಖೆಯನ್ನು ಮಾಡಿರುವುದಿಲ್ಲ. ಶ್ರೀ ವೈ.ಟಿ. ಗುರುಮೂರ್ತಿ, ಸಹ ನಿರ್ದೇಶಕರು-1, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ತನಿಖೆಯನ್ನು ನಡೆಸಿರುತ್ತಾರೆ. (ವರದಿಯ ಪ್ರತಿ ಲಗತ್ತಿಸಿದೆ.)

ಈ) ಶಿಕ್ಷಕರ ವೇತನ, ಬಡ್ತಿ ಹಾಗೂ ಇತರೆ ಸೌಲಭ್ಯಗಳನ್ನು ಮಂಜೂರಾತಿಗಾಗಿ ಯಾವುದೇ ತೊಂದರೆ ಆಗಿರುವುದಿಲ್ಲ. ಮಂಜೂರಾತಿಗಳನ್ನು ಕಾಲಕಾಲಕ್ಕೆ ನೀಡಲಾಗುತ್ತಿದೆ.

ಉ) ವರದಿಯಲ್ಲಿನ ಅಂಶಗಳನ್ನು ಪರಿಶೀಲಿಸಿ ಕ್ರಮತೆಗೆದುಕೊಳ್ಳಲಾಗುವುದು.

**ಉಪನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೊಪ್ಪಳ ಜಿಲ್ಲೆ ಇವರ ಮೇಲಿನ ದೂರಿನ ಬಗ್ಗೆ ವಿಚಾರಣೆ / ತನಿಖಾ ವರದಿ**

ದೂರಿನ ಸಂಖ್ಯೆ 1, 2 ಮತ್ತು 3 (ಅರ್ಹ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಪ್ರೌಢಶಾಲಾ ಶಿಕ್ಷಕರನ್ನಾಗಿ ಬಡ್ತಿ ನೀಡುವಲ್ಲಿ ನಿಯಮ ಉಲ್ಲಂಘಿಸಿದ್ದಾರೆಂದು ಆರೋಪ ಕುರಿತು)

ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘ (ರಿ) ಕೊಪ್ಪಳ ಜಿಲ್ಲಾ ಘಟಕ ಈ ಸಂಘದ ಪದಾಧಿಕಾರಿಗಳು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಕೊಪ್ಪಳ ಹಾಗೂ ಅವರ ಕಚೇರಿಯ ವಿಷಯ ನಿರ್ವಾಹಕರಾದ ಶ್ರೀ ದಸ್ತಗೀರ್ ಸಾಬ್ ಮತ್ತು ವಿದ್ಯಾಧಿಕಾರಿಗಳಾದ ಶ್ರೀ ಮೌನೇಶ್, ಇವರುಗಳು ಪದವಿ ಮತ್ತು ಬಿ.ಇಡಿ ಪಡೆದು ಪ್ರಾಥಮಿಕ ಶಾಲಾ ಶಿಕ್ಷಕರುಗಳಿಗೆ ಪ್ರೌಢಶಾಲಾ ಶಿಕ್ಷಕರಾಗಿ ಬಡ್ತಿ ನೀಡುವಲ್ಲಿ ನಿಯಮಗಳನ್ನು ಪಾಲಿಸದೇ ಅರ್ಹ ಶಿಕ್ಷಕರನ್ನು ವಂಚಿಸಿರುತ್ತಾರೆಂದು ದೂರಿರುತ್ತಾರೆ. ಅದರಂತೆ ಪರಿಶೀಲಿಸಲಾಗಿ ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರುಗಳಲ್ಲಿ ಪದವಿ ಮತ್ತು ಬಿ.ಇಡಿ ತರಬೇತಿ ಪಡೆದ ಅರ್ಹ ಶಿಕ್ಷಕರುಗಳಿಗೆ ಪ್ರೌಢಶಾಲಾ ಶಿಕ್ಷಕರು ಗ್ರೇಡ್–2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್–1 ಆಗಿ ಬಡ್ತಿ ನೀಡಲು ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್–24 ಎಸ್ ಆರ್ ಇ–95 ದಿ: 25–07–1997 ರಂತೆ ಜಿಲ್ಲೆಯಲ್ಲಿ ಉದ್ಭವಿಸಿರುವ ಖಾಲಿ ಹುದ್ದೆಗಳ ಪೈಕಿ 50:50 ಪ್ರಮಾಣದಲ್ಲಿ ನೇರ ನೇಮಕಾತಿ ಹಾಗೂ ಬಡ್ತಿಗಾಗಿ ಹುದ್ದೆಗಳನ್ನು ಕಾಯ್ದಿರಿಸಬೇಕಾಗಿರುತ್ತದೆ. ಬಡ್ತಿಗಾಗಿ ಕಾಯ್ದಿರಿಸಿದ ಶೇ 50% ರಲ್ಲಿ 45:2:1:1:1ರ ಅನುಪಾತದಲ್ಲಿ ಕ್ರಮವಾಗಿ ಪ್ರಾಥಮಿಕ ಶಾಲಾ ಶಿಕ್ಷಕರು, ವೃತ್ತಿ ಶಿಕ್ಷಕರು, ಸಂಗೀತ ಶಿಕ್ಷಕರು, ಚಿತ್ರಕಲಾ ಶಿಕ್ಷಕರು ಹಾಗೂ ಶಾಲಾ ಮಾತೆಯರಿಗೆ ವಿಷಯವಾರು ಜೇಷ್ಠತಾ ಪಟ್ಟಿ ತಯಾರಿಸಿ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್.ಆರ್.ಇ 77 ದಿ: 27–4–1978ಹಾಗೂ ಸರ್ಕಾರಿ ಅಧಿಸೂಚನೆ ಸಂಖ್ಯೆ: ಡಿ.ಪಿ.ಎ.ಆರ್ 59 ಎಸ್.ಆರ್.ಇ 2002 ದಿ: 24–6–2003ರ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಿರುವ

ವಿದ್ಯಾರ್ಹತೆಗಳಿಗನುಗುಣವಾಗಿ ಪ್ರತಿ ಹಂತದಲ್ಲಿ ಖಚಿತ ಪಡಿಸಿಕೊಂಡು 33 ಸೈಕಲ್ ಬಿಂದುಗಳನ್ನೊಳಗೊಂಡ ಮೀಸಲಾತಿ ನಿಯಮದಂತೆ ಕೌನ್ಸಿಲಿಂಗ್ ಮೂಲಕ ನಿಯುಕ್ತಿಗೊಳಿಸಬೇಕಾಗಿರುತ್ತದೆ.

ಈ ಬಗ್ಗೆ ಪರಿಶೀಲಿಸಲಾಗಿ 2007–08ನೇ ಸಾಲಿನಿಂದ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಿಂದ ಪ್ರೌಢಶಾಲಾ ಶಿಕ್ಷಕರ ವೃಂದದ ವರೆಗೆ ಬಡ್ತಿ ನೀಡಿರುವುದಿಲ್ಲ. ದಿನಾಂಕ: 01–01–2009 ರಲ್ಲಿದ್ದಂತೆ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಪದವಿ ಮತ್ತು ಬಿ.ಇಡಿ ತರಬೇತಿ ಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ವಿಷಯವಾರು ತಯಾರಿಸಿ 30–09–2009 ರಂದು ಪ್ರಕಟಿಸಿ ಆಕ್ಷೇಪಣೆಗಳನ್ನು ಕರೆದು ಪರಿಶೀಲನೆ ನಂತರ ದಿನಾಂಕ: 28–10–2009 ರಂದು ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿರುತ್ತಾರೆ. ಹಾಗೂ ಜೇಷ್ಠತಾ ಪಟ್ಟಿಗನುಗುಣವಾಗಿ ಮೀಸಲಾತಿ ನಿಯಮಗಳನ್ನುನುಸರಿಸಿ ಅಧ್ಯತೆ ಮೇರೆಗೆ ಕೌನ್ಸಿಲಿಂಗ್ ಆ ಪಟ್ಟಿಯನ್ನು ತಯಾರಿಸಿ ದಿನಾಂಕ: 31–10–2009 ರಂದು ಕೌನ್ಸಿಲಿಂಗ್ ಮೂಲಕ ಈ ಕೆಳಕಂಡಂತೆ ವಿಷಯವಾರು ಬಡ್ತಿ ನೀಡಿರುತ್ತಾರೆ.

| | | |
|---|---|---|
| 1. ಕನ್ನಡ ಭಾಷೆ | – | 03 |
| 2. ಆಂಗ್ಲ ಭಾಷೆ | – | 10 |
| 3. ಹಿಂದಿ ಭಾಷೆ | – | 20 |
| 4. ಕಲಾ ಕನ್ನಡ | – | 07 |
| 5. ಪಿಸಿಎಂ ಕನ್ನಡ | – | 05 |
| 6. ಸಿಬಿಜಡ್ ಕನ್ನಡ | – | 05 |
| **ಒಟ್ಟು** | – | **50** |

ಮುಂದುವರೆದು ದಿನಾಂಕ:15–12–2009 ರಿಂದ 19–10–2010ರ ವರೆಗಿನ ಅವಧಿಯಲ್ಲಿ ವಿವಿಧ ಹಂತಗಳಲ್ಲಿ ವಿವಿಧ ವಿಷಯಗಳ 58 ಹುದ್ದೆಗಳಿಗೆ ಬಡ್ತಿ ನೀಡಿರುತ್ತಾರೆ.

2009–10ನೇ ಸಾಲಿನಲ್ಲಿ ನೀಡಿರುವ ಬಡ್ತಿ ಹಾಗೂ ನೇರ ನೇಮಕಾತಿಗಾಗಿ ನೀಡಿರುವ ವಿಷಯವಾರು ವಿವರ ಈ ಕೆಳಗಿನಂತಿದೆ.

| **ವಿಷಯ** | **ನೇರ ನೇಮಕಾತಿ** | **ಬಡ್ತಿ** | **ವ್ಯತ್ಯಾಸ** |
|---|---|---|---|
| ಕನ್ನಡ ಭಾಷೆ | 04 | 09 | +5 |
| ಆಂಗ್ಲ ಭಾಷೆ | 08 | 28 | +20 |
| ಹಿಂದಿ ಭಾಷೆ | 06 | 29 | +23 |
| ಕಲಾ ಕನ್ನಡ | 29 | 19 | –10 |
| ಪಿಸಿಎಂ ಕನ್ನಡ | 28 | 11 | –17 |
| ಸಿಬಿಜಡ್ ಕನ್ನಡ | 14 | 07 | –07 |
| ಕಲಾ ಉರ್ದು | | 01 | +01 |
| ಪಿ.ಸಿ.ಎಂ.ಉರ್ದು | 01 | | –01 |
| ಸಿಬಿಜಡ್ ಉರ್ದು | 01 | | –01 |
| ದೈಹಿಕ ಶಿಕ್ಷಕ ಗ್ರೇಡ್–1 | 07 | 04 | +02 (75.25) |
| **ಒಟ್ಟು** | **98** | **108** | |

ನೇರ ನೇಮಕಾತಿ ಮತ್ತು ಬಡ್ತಿ ಪ್ರಮಾಣ ವ್ಯತ್ಯಾಸಕ್ಕೆ 3–4 ವರ್ಷಗಳಿಂದ ಬಡ್ತಿ ನೀಡದಿರುವ ಕಾರಣ ನೇರ ನೇಮಕಾತಿಗೆ ಉಪಯೋಗಿಸಿಕೊಳ್ಳಲಾಗಿದ್ದ ಹುದ್ದೆಗಳನ್ನು ಈ ವರ್ಷದಲ್ಲಿ ಸಮನ್ವಯ ಗೊಳಿಸಿರುವುದು ಕಡತಗಳಿಂದ ತಿಳಿದು ಬರುತ್ತದೆ. ಹಾಗೂ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರು ಸದಸ್ಯರು ಶಾಲಾ ಮುಖ್ಯಸ್ಥರು ಜಿಲ್ಲಾ ಪಂಚಾಯತಿ ಸದಸ್ಯರು, ಶಾಸಕರು, ಸಂಸದರು ಹಾಗೂ ಜಿಲ್ಲಾಧಿಕಾರಿಗಳು ಪ್ರತಿ ಮಾಹೆಯ ಕೆ.ಡಿ.ಪಿ ಸಭೆಯಲ್ಲಿ ಜಿಲ್ಲೆಯ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ಹಾಗೂ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇಕಡಾವಾರು ಫಲಿತಾಂಶ ಹೆಚ್ಚಿಸಲು ಆಂಗ್ಲ ಭಾಷಾ ಶಿಕ್ಷಕರು ಹಾಗೂ ವಿಜ್ಞಾನ ಮತ್ತು ಗಣಿತ ಶಿಕ್ಷಕರುಗಳನ್ನು ಎಲ್ಲಾ

ಶಾಲೆಗಳಿಗೂ ಕಡ್ಡಾಯವಾಗಿ ನಿಯುಕ್ತಿ ಗೊಳಿಸಲು ಉಪನಿರ್ದೇಶಕರಿಗೆ ಒತ್ತಡ ತಂದಿರುವ ಹಿನ್ನಲೆಯಲ್ಲಿ ಆಂಗ್ಲ ಭಾಷಾ ಶಿಕ್ಷಕರು ಹಾಗೂ ವಿಜ್ಞಾನ ಶಿಕ್ಷಕರುಗಳನ್ನು ಸ್ಥಳ ನಿಯುಕ್ತಿ ಗೊಳಿಸಿರುವುದು ಕಡತಗಳಿಂದ ಕಂಡು ಬರುತ್ತದೆ. ಹಾಗೂ ಹಿಂದಿ ಶಿಕ್ಷಕರು ಗಳಿಗೆ 2003–04 ನೇ ಸಾಲಿನಿಂದ ಭಾರತೀಯ ಶಿಕ್ಷಾ ಪರಿಷತ್, ಲಕ್ನೋ ವಿಶ್ವವಿದ್ಯಾಲಯ ನಡೆಸುವ ಬಿ.ಇಡಿ ತರಬೇತಿ ಕೋರ್ಸ್ ನ್ಯಾಯಾಲಯ ದಲ್ಲಿದ್ದ ಪ್ರಯುಕ್ತ ಹಿಂದಿ ಭಾಷಾ ಶಿಕ್ಷಕರಾಗಿ ಬಡ್ತಿ ನೀಡದಿದ್ದ ಕಾರಣ 2003–04ನೇ ಸಾಲಿನಿಂದ ಬ್ಯಾಕ್ ಲಾಗ್ ಹುದ್ದೆಗಳಿಗೆ ಹಿಂದಿ ಭಾಷಾ ಶಿಕ್ಷಕರಾಗಿ ಬಡ್ತಿ ನೀಡಲಾಗಿದೆ. ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್–1 ಹುದ್ದೆಗೆ ಇಬ್ಬರು ಶಿಕ್ಷಕರಿಗೆ ಹೆಚ್ಚಿಗೆ ಬಡ್ತಿ ನೀಡಲಾಗಿದ್ದು ಇಬ್ಬರು ದೈಹಿಕ ಶಿಕ್ಷಣ ಶಿಕ್ಷಕರಿಗೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ತೀರ್ಪಿನನ್ವಯ 2 ಹುದ್ದೆಗೆ ಹೆಚ್ಚು ಬಡ್ತಿ ನೀಡಿರುವುದು ಕಡತಗಳಿಂದ ತಿಳಿದುಬಂದಿರುತ್ತದೆ.

ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘ, ಕೊಪ್ಪಳ ಜಿಲ್ಲಾ ಘಟಕ, ಕೊಪ್ಪಳ ಪದಾಧಿಕಾರಿಗಳು ದೂರಿನಲ್ಲಿ ವಿಷಯಾವಾರು ಖಾಲಿ ಹುದ್ದೆಗಳಿಗೆ ಎಷ್ಟು ಪ್ರಮಾಣದಲ್ಲಿ ಬಡ್ತಿ ನೀಡಬೇಕಿತ್ತೋ ಅಷ್ಟು ಪ್ರಮಾಣದಲ್ಲಿ ಬಡ್ತಿ ನೀಡಿರುವುದಿಲ್ಲವೆಂದು ದೂರಿರುತ್ತಾರೆ. ಮೇಲಿನ ಅಂಕಿ ಅಂಶಗಳನ್ನು ಪರಿಶೀಲಿಸಿದಾಗ ನೇರ ನೇಮಕಾತಿಗೆ ಒಟ್ಟು 98 ಹುದ್ದೆಗಳನ್ನು ನೀಡಿದ್ದು ಆದರೆ 108 ಹುದ್ದೆಗಳಿಗೆ ಬಡ್ತಿ ನೀಡಿರುತ್ತಾರೆ. ಆದರೆ ವಿಷಯವಾರು ಬಡ್ತಿಯಲ್ಲಿ ವ್ಯತ್ಯಾಸವಿರುತ್ತದೆ. ವ್ಯತ್ಯಾಸಕ್ಕೆ ಕಾರಣಗಳನ್ನು ಮೇಲಿನ ಕಂಡಿಕೆಯಲ್ಲಿ ವಿವರಿಸಲಾಗಿದೆ. ದಿನಾಂಕ 31–10–2009 ರಂದು 50 ಶಿಕ್ಷಕರಿಗೆ ಬಡ್ತಿ ನೀಡಿದಾಗ ಜ್ಯೇಷ್ಟತಾ ಪಟ್ಟಿ ಮತ್ತು ಅರ್ಹ ಶಿಕ್ಷಕರುಗಳ ಕೌನ್ಸಿಲಿಂಗ್ ಪಟ್ಟಿ ತಯಾಸಿರಿ ಬಡ್ತಿ ನೀಡಿರುತ್ತಾರೆ. ಆದರೆ ಮುಂದೆ ವಿವಿಧ ದಿನಾಂಕಗಳಂದು ವಿವಿಧ ವಿಷಯಗಳಿಗೆ ಬಡ್ತಿ ನೀಡುವಾಗ ಜ್ಯೇಷ್ಟತಾ ಪಟ್ಟಿ ಮತ್ತು ಕೌನ್ಸಿಲಿಂಗ್ ಪಟ್ಟಿ ತಯಾರಿಸದೇ ಬಡ್ತಿ ನೀಡಿರುವುದಾಗಿ ದೂರಿರುತ್ತಾರೆ. ಇದಕ್ಕೆ ಸಂಬಂಧಿಸಿದ ವಿಷಯ ನಿರ್ವಾಹಕರು, ವಿಧ್ಯಾಧಿಕಾರಿಗಳು ಹಾಗೂ ಉಪನಿರ್ದೇಶಕರು ಪದವಿ ಮತ್ತು ಬಿ.ಇಡಿ ವ್ಯಾಸಂಗ ಮಾಡಲು ಇಲಾಖಾ

ಪೂರ್ವಾನುಮತಿ ಪಡೆಯದ ಶಿಕ್ಷಕರುಗಳ ಪಟ್ಟಿಯಲ್ಲಿ ಇದ್ದ ಶಿಕ್ಷಕರುಗಳ ಪೂರ್ವಾನುಮತಿ ಪಡೆದ ಆದೇಶದ ಪ್ರತಿಯನ್ನು ಸಲ್ಲಿಸಿದ ನಂತರ ಬಡ್ತಿ ನೀಡಲಾಗಿರುವುದರಿಂದ ಕೌನ್ಸಿಲಿಂಗ್ ದಿನಾಂಕಗಳನ್ನು ನಿಗಧಿಪಡಿಸದೇ ಅವರುಗಳು ಪೂರ್ವಾನುಮತಿ ಪತ್ರ ಸಲ್ಲಿಸಿದ ದಿನಾಂಕಗಳಂದು ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಬಡ್ತಿ ನೀಡಲಾಗಿರುತ್ತದೆಂದು ಹೇಳಿಕೆ ಪತ್ರ ನೀಡಿರುತ್ತಾರೆ.

ಅನುಬಂಧ–1, 2 ಮತ್ತು 3 ರಂತೆ ಇರುತ್ತವೆ. (ಹೇಳಿಕೆ ಪತ್ರಗಳು ಹಾಗೂ ವಿವಿಧ ಶಿಕ್ಷಕರುಗಳಿಂದ ಬಂದ ಕೋರಿಕೆ ಪತ್ರಗಳು)

ಮುಂದುವರಿದು ಸಂಘದ ಪದಾಧಿಕಾರಿಗಳು ವಿಷಯಾವಾರು ಬಡ್ತಿ ನೀಡುವಾಗ ಬಡ್ತಿ ಪಡೆಯುವ ಶಿಕ್ಷಕರು ಯಾವ ವಿಷಯ ಹೊಂದಿದ್ದಾರೆಯೋ ಅವರಿಗೆ ಬೇಕಾದ ಪ್ರೌಢಶಾಲೆಯಲ್ಲಿ ಖಾಲಿ ಇರುವ ಹುದ್ದೆ ಅವರ ವಿಷಯವಾಗಿರದಿದ್ದಲ್ಲಿ ಅಂತಹಾ ಹುದ್ದೆಗಳನ್ನು ಮಾರ್ಪಡಿಸಿ ಬಡ್ತಿ ನೀಡಿರುವುದಾಗಿ ಮತ್ತು ಬಡ್ತಿ ನೀಡುವಾಗ ಸದರಿ ಶಾಲೆಯ ಮುಖ್ಯ ಗುರುಗಳನ್ನಾಗಲೀ ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಗಮನಕ್ಕಾಗಲೀ ತಂದಿರುವುದಿಲ್ಲವೆಂದು ದೂರಿರುತ್ತಾರೆ. ಈ ಬಗ್ಗೆ ಪರಿಶೀಲಿಸಲಾಗಿ ಉಪನಿರ್ದೇಶಕರ ಕಛೇರಿಯ ವಿಷಯ ಪರಿವೀಕ್ಷಕರುಗಳನ್ನು ಜಿಲ್ಲೆಯಲ್ಲಿನ ಶಾಲೆಗಳಲ್ಲಿ ಕೊರತೆ ಇರುವ ಶಿಕ್ಷಕರ ಹುದ್ದೆಗಳನ್ನು ಗುರುತಿಸಿ ಪಟ್ಟಿಯನ್ನು ಪಡೆದು ಅದರಂತೆ ಶಿಕ್ಷಕರ ಕೊರತೆ ಇರುವ ಶಾಲೆಗಳ ಪಟ್ಟಿಯನ್ನು ಸಿದ್ಧಪಡಿಸಿ ಪ್ರೌಢಶಾಲಾ ಶಿಕ್ಷಕರ ಸಮಾನಾಂತರ ಹುದ್ದೆಗಳನ್ನು ಅವಶ್ಯವಿರುವ ಶಾಲೆಗಳಿಗೆ ಪರಿವರ್ತಿಸಿ ಬಡ್ತಿ ನೀಡಿರುತ್ತಾರೆ. **[ಅನುಬಂಧ–4]** ಈ ಬಗ್ಗೆ ಉಪನಿರ್ದೇಶಕರನ್ನು ಕೇಳಲಾಗಿ ಜಿಲ್ಲೆಯಲ್ಲಿ ಶಿಕ್ಷಕರ ಕೊರತೆಯಿಂದ ವಿಷಯ ಬೋಧನಾ ಶಿಕ್ಷಕರು ಇಲ್ಲದಿರುವ ಪ್ರಯುಕ್ತ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ಹಾಗೂ ಎಸ್.ಎಸ್.ಎಲ್.ಸಿ ಶೇಕಡಾವಾರು ಫಲಿತಾಂಶವನ್ನು ಉತ್ತಮಪಡಿಸಲು ಪ್ರತಿ ಕೆ.ಡಿ.ಪಿ. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರುಗಳು ಹಾಗೂ ಜಿಲ್ಲೆಯ ಶಾಸಕರುಗಳು, ಸಂಸದರು, ಎಸ್.ಡಿ.ಎಂ.ಸಿ ಅಧ್ಯಕ್ಷರು ಸಂಬಂಧಪಟ್ಟ ಪ್ರೌಢಶಾಲಾ ಮುಖ್ಯಸ್ಥರುಗಳು ದೂರವಾಣಿ

ಮೂಲಕ ಹಾಗೂ ಮನವಿಗಳ ಮೂಲಕ ಆ ಶಾಲೆಗೆ ಬೇಕಾದ ವಿಷಯವಾರು ಶಿಕ್ಷಕರುಗಳನ್ನು ನಿಯುಕ್ತಿಗೊಳಿಸಲು ಒತ್ತಡ ತರಲಾಗಿರುವ ಹಿನ್ನೆಲೆಯಲ್ಲಿ ಖಾಲಿ ಇರುವ ಸಮಾನಾಂತರ ಹುದ್ದೆಗಳನ್ನು ಅವಶ್ಯವಿರುವ ವಿಷಯಕ್ಕನುಗುಣವಾಗಿ ಹುದ್ದೆಗಳನ್ನು ಮಾರ್ಪಡಿಸಿ ಬಡ್ತಿ ನೀಡಲಾಗಿದೆಯೇ ವಿನಃ ಯಾವುದೇ ದುರುದ್ದೇಶದಿಂದಾಗಲೀ ಶಿಕ್ಷಕರುಗಳನ್ನು ವಂಚಿಸಲಾಗಲೀ ಹುದ್ದೆಗಳನ್ನು ಮಾರ್ಪಡಿಸಿರುವುದಿಲ್ಲವೆಂಬುದಾಗಿ ಈ ಕಛೇರಿಯ ಪ್ರಕ್ರಿಯೆಯಲ್ಲಿ ಯಾವುದೇ ತಾರತಮ್ಯ ಎಸಗಿರುವುದಿಲ್ಲ ಎಂಬುದಾಗಿ ಲಿಖಿತ ಹೇಳಿಕೆ ನೀಡಿರುತ್ತಾರೆ.

ಅನುಬಂಧ–3

**ದೂರಿನ ಕ್ರಮ ಸಂಖ್ಯೆ: 4**

**2010 ಜೂನ್ 17ರಂದು ಗುಲ್ಬರ್ಗಾದ ಆಯುಕ್ತಾಲಯದಲ್ಲಿ ಪ್ರೌಢಶಾಲಾ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ನಡೆದಿದ್ದು, ಖಾಲಿ ಹುದ್ದೆಗಳನ್ನು ತೋರಿಸುವ ಪಟ್ಟಿಯಲ್ಲಿ ಲೋಪವೆಸಗಿರುವ ಕುರಿತು.**

[ಅ] ಗುಲ್ಬರ್ಗಾ ಆಯುಕ್ತಾಲಯಕ್ಕೆ ಕಳುಹಿಸಿರುವ ಖಾಲಿ ಹುದ್ದೆಗಳ ಪಟ್ಟಿಯನ್ನು ಪರಿಶೀಲಿಸಿದಾಗ ಸರ್ಕಾರಿ ಪ್ರೌಢಶಾಲೆ, ಬಂಡಿಹಾಳ, ಯಲಬುರ್ಗಾ ತಾಲ್ಲೂಕು ಇಲ್ಲಿ ಆಂಗ್ಲ ಭಾಷೆ ಹುದ್ದೆ ಖಾಲಿ ಇರುವ ಬಗ್ಗೆ ಪ್ರಕಟಣೆ ನೀಡಿರುತ್ತಾರೆ. ಸಿಬಿಜಡ್ ಹುದ್ದೆ ಖಾಲಿ ಇದ್ದರೂ ಆಂಗ್ಲ ಭಾಷೆ ಇರುವುದಾಗಿ ದೂರು ಕುರಿತು ಪ್ರಶ್ನಿಸಲಾಗಿ ಆಕಸ್ಮಿಕ ಕೈ ತಪ್ಪಿನಿಂದ ಆಗಿದ್ದು, ಅದನ್ನು ಸರಿಪಡಿಸಿಕೊಂಡಿದ್ದು, ಇದರಲ್ಲಿ ಯಾವುದೇ ದುರುದ್ದೇಶ ಇಲ್ಲವೆಂದು ತಿಳಿಸಿದ್ದಾರೆ.

ಪ್ರಕಟಣಾ ಪಟ್ಟಿಯಲ್ಲಿ ಬಿಆರ್‌ಪಿಯಲ್ಲಿನ ಖಾಲಿ ಹುದ್ದೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿನ ಶಿಕ್ಷಣ ಸಂಯೋಜಕರ ಖಾಲಿ ಹುದ್ದೆಗಳ ವಿವರವನ್ನು ಕಾಣಿಸಿರುವುದು ಪಟ್ಟಿಯಲ್ಲಿ ಕಂಡು ಬರುತ್ತದೆ. [ಖಾಲಿ ಹುದ್ದೆ ಮಾಹಿತಿ ಪಟ್ಟಿ ಅನುಬಂಧ–5)

ಕೌನ್ಸಿಲಿಂಗ್ ದಿನದಂದು ಸಾಫ್ಟ್‌ವೇರ್ ತಾಂತ್ರಿಕ ದೋಷದಿಂದ [ಇಸಿಬಿ] ಬದಲಿಗೆ ಸಹಶಿಕ್ಷಕ ಎಂದೇ ಡಿಸ್ಪ್ಲೇ ಆಗುತ್ತಿದ್ದ ಹಿನ್ನೆಲೆಯಲ್ಲಿ ಗೊಂದಲ ಉಂಟಾಗಿತ್ತೆಂದು ತಿಳಿಸಿರುತ್ತಾರೆ.

**ದೂರಿನ ಕ್ರಮ ಸಂಖ್ಯೆ: 5**

**2010–11ನೇ ಸಾಲಿನ ಪ್ರೌಢಶಾಲಾ ಶಿಕ್ಷಕರ ಸ್ಥಳಾಂತರ ಕುರಿತು**

ಒಟ್ಟು ತಾಲ್ಲೂಕುಗಳು–4

[1] ಕೊಪ್ಪಳ

[2] ಗಂಗಾವತಿ

[3] ಯಲುಬುರ್ಗಾ

[4] ಕುಷ್ಠಗಿ

2009–10ನೇ ಸಾಲಿನ ನೇಮಕಾತಿಗಾಗಿ ಪ್ರೌಢಶಾಲಾ ಸಹಶಿಕ್ಷಕರ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್–1 ಹುದ್ದೆಗಳು 'ಬಿ' ವಲಯದಿಂದ 'ಎ' ವಲಯಕ್ಕೆ ಹಾಗೂ 'ಸಿ' ವಲಯದಿಂದ 'ಬಿ' ವಲಯಕ್ಕೆ ಸ್ಥಳಾಂತರಿಸಲು ಎಬಿಸಿ ವಲಯದಲ್ಲಿ ಕೆಲಸ ನಿರ್ವಹಿಸಿದ ಒಟ್ಟು ಅವಧಿ ಆಧರಿಸಿ ಜೇಷ್ಠತಾ ಪಟ್ಟಿ ತಯಾರಿಸಿ ನ್ಯೂನ್ಯತೆಗಳ ಬಗ್ಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಿರುತ್ತಾರೆ.

ದಿ: 30.03.2010 ರಿಂದ 06.04.2010ರವರೆಗೆ ಕೌನ್ಸಿಲಿಂಗ್ ಮುಖೇನ ಶಿಕ್ಷಕರ ಸ್ಥಳಾಂತರ ಮಾಡಲಾಗಿದೆ.

ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಕೊಪ್ಪಳ [ಬಾಲಕರ] ಮತ್ತು ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಭಾಗ್ಯನಗರ, ಕೊಪ್ಪಳ ಜಿಲ್ಲೆಯ ಕನ್ನಡ ಕಲಾ ಹುದ್ದೆಗಳನ್ನು ಆಂಗ್ಲ ಭಾಷಾ ಶಿಕ್ಷಕರ ಹುದ್ದೆಯನ್ನಾಗಿ ಪರಿವರ್ತಿಸಿ ಭರ್ತಿ ಮಾಡಲಾಗಿದೆ.

ಕೆಳಕಂಡಂತೆ ಖಾಲಿ ಇರುವ ಹುದ್ದೆಗಳನ್ನು ಪರಿವರ್ತಿಸಿರುತ್ತಾರೆ.

| ಕ್ರ.ಸಂ. | ಖಾಲಿ ಹುದ್ದೆಯ ವಿಷಯ | ಪರಿವರ್ತಿಸಲಾದ ಹುದ್ದೆಯ ವಿಷಯ | ಒಟ್ಟು |
|---|---|---|---|
| 1 | ಕಲಾ (ಕನ್ನಡ) | ಆಂಗ್ಲ ಭಾಷೆ | 6 |
| 2 | ಪಿಸಿಎಂ | ಸಿಬಿಜಡ್ | 6 |
| 3 | ಪಿಸಿಎಂ | ಆಂಗ್ಲ ಭಾಷೆ | 5 |
| 4 | ಪಿಸಿಎಂ | ಕನ್ನಡ ಭಾಷೆ | 2 |
| 5 | ವೃತ್ತಿ ಶಿಕ್ಷಕರು | ಆಂಗ್ಲ ಭಾಷೆ | 3 |
| 6 | ವೃತ್ತಿ | ಹಿಂದಿ ಭಾಷೆ | 1 |
| 7 | ಪಿಸಿಎಂ | ಹಿಂದಿ ಭಾಷೆ | 6 |
| 8 | ಸಂಗೀತ ಶಿಕ್ಷಕರು | ಕಲಾ | 1 |
| 9 | ವೃತ್ತಿ ಶಿಕ್ಷಕರು | ಕನ್ನಡ ಭಾಷೆ | 2 |
| 10 | ವೃತ್ತಿ ಶಿಕ್ಷಕರು | ಹಿಂದಿ ಭಾಷೆ | 2 |
| 11 | ವೃತ್ತಿ ಶಿಕ್ಷಕರು | ಕಲಾ ಕನ್ನಡ | 1 |
| 12 | ಚಿತ್ರಕಲೆ | ಆಂಗ್ಲ | 1 |
| 13 | – | – | – |
| ಒಟ್ಟು | | | **36** |

(ಎ) ಪ್ರೌಢಶಾಲೆಗಳಿಗೆ ಸ್ಟಾಫ್ ಪ್ಯಾಟ್ರನ್ ಪ್ರಕಾರ ಇಂತಿಷ್ಟು ವಿಷಯವಾರು ಶಿಕ್ಷಕರ ಸಂಖ್ಯೆಯನ್ನು ನಿಗಧಿಗೊಳಿಸಲಾಗಿರುತ್ತದೆ.

ಆದರೆ ಕೊಪ್ಪಳ ಜಿಲ್ಲೆಯಲ್ಲಿ ವೃತ್ತಿ, ಸಂಗೀತ ಮುಂತಾದ ಹುದ್ದೆಗಳನ್ನು ಕೂಡ ಕನ್ನಡ ಭಾಷೆ ಅಥವಾ ಹಿಂದಿ ಅಥವಾ ಆಂಗ್ಲ ಭಾಷೆ ಹುದ್ದೆಗೆ ಪರಿವರ್ತಿಸಿರುತ್ತಾರೆ. ಇದು ಸರಿಯಾದ ಕ್ರಮವಲ್ಲ.

(ಬಿ) ಖಾಲಿ ಹುದ್ದೆಗಳನ್ನು ಪರಿವರ್ತಿಸಿ ಗ್ರಾಮೀಣ ಭಾಗದ ಮೂರು ಶಾಲೆಗಳಿಂದ ಕೊಪ್ಪಳ ನಗರದ ಶಾಲೆಗೆ ಸ್ಥಳಾಂತರಿಸಲಾಗಿದೆ. ಹಾಗೂ ಸ್ಥಳಾಂತರ ಪ್ರಕ್ರಿಯೆ ಒಂದೇ ಬಾರಿಗೆ ಆಗದೆ ವಿವಿಧ ವಿವಿಧ ಹಂತಗಳಲ್ಲಿ ಆಗಿರುತ್ತದೆ.

ಅನುಬಂಧ–6 (ಖಾಲಿ ಹುದ್ದೆ ಪರಿವರ್ತಿಸಿರುವ ಕ್ರೋಢೀಕೃತ ಪಟ್ಟಿ)

**ದೂರಿನ ಕ್ರಮ ಸಂಖ್ಯೆ: 6**

**ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕೊಪ್ಪಳ ಇಲ್ಲಿ ಶಿಕ್ಷಣ ಸಂಯೋಜಕರ ಹುದ್ದೆಗಳಿಗೆ ಎರವಲು ನೀಡುವಲ್ಲಿ ನಿಯಮ ಬಾಹಿರವಾಗಿ ನೀಡಿದ್ದಾರೆಂದು**

ಪ್ರೌಢಶಾಲಾ ಸಹಶಿಕ್ಷಕರ ವರ್ಗಾವಣೆಯನ್ನು ಗುಲ್ಬರ್ಗ ಆಯುಕ್ತಾಲಯದ ಸಹನಿರ್ದೇಶಕರು ಕೌನ್ಸಿಲಿಂಗ್ ಮುಖೇನ ವರ್ಗಾವಣೆ ಮಾಡಿರುತ್ತಾರೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕೊಪ್ಪಳ ಇಲ್ಲಿ ಎರಡು ಶಿಕ್ಷಣ ಸಂಯೋಜಕರ[ಪ್ರೌಢ] ಹುದ್ದೆಗಳು ಖಾಲಿ ಇದ್ದು ಇದರಲ್ಲಿ ಒಂದು ಪಿಸಿಎಂ ಮತ್ತು ಒಂದು ಕಲಾ ಕನ್ನಡ ಹುದ್ದೆಯಾಗಿರುತ್ತದೆ. ಈ ಕಛೇರಿಗೆ ಸದರಿ ಎರಡು ಹುದ್ದೆಗಳನ್ನು ಕೌನ್ಸಿಲಿಂಗ್‌ನಲ್ಲಿ ಭರ್ತಿ ಮಾಡಲಾಗಿದ್ದು, ಒಂದು ಪಿಸಿಎಂ ಮತ್ತು ಒಂದು ಕಲಾ ಕನ್ನಡ ಹುದ್ದೆಯಾಗಿರುತ್ತದೆ. ಈ ಕಛೇರಿಗೆ ಸದರಿ ಎರಡು ಹುದ್ದೆಗಳನ್ನು ಕೌನ್ಸಿಲಿಂಗ್‌ನಲ್ಲಿ ಭರ್ತಿ ಮಾಡಲಾಗಿದ್ದು, ಒಂದು ಪಿಸಿಎಂ ಮತ್ತು ಒಂದು ಕಲಾ ಕನ್ನಡವಾಗಿರುತ್ತದೆ.

ಅನುಬಂಧ–971 (ವರ್ಗಾವಣೆ ಆದೇಶದ ಪ್ರತಿ).

ಈ ಹಿಂದೆ 2010–11ನೇ ಸಾಲಿಗೆ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೊಪ್ಪಳ ಇವರು ತಮ್ಮ ಕಛೇರಿ ಜ್ಞಾಪನ ದಿ:03.06.2010ರಲ್ಲಿ ಶ್ರೀ ಎಸ್.ಬಿ.ಕುರಿ, ಪ್ರಶಿಕ್ಷಕರು, ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆ, ಕೊಪ್ಪಳ ಇವರನ್ನು ತಾತ್ಕಾಲಿಕವಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕೊಪ್ಪಳ ಇಲ್ಲಿಗೆ ಶಿಕ್ಷಣ ಸಂಯೋಜಕರಾಗಿ [ಪ್ರೌಢಶಾಲಾ ಸಹಶಿಕ್ಷಕರ ಗ್ರೇಡ್–1] ತಾತ್ಕಾಲಿಕವಾಗಿ ನಿಯೋಜಿಸಿರುತ್ತಾರೆ. ಈ ಹುದ್ದೆಗೆ ಕೌನ್ಸಿಲಿಂಗ್ ವರ್ಗಾವಣೆ ಮುಖೇನ ಶಿಕ್ಷಣ ಸಂಯೋಜಕರಿಂದ ಭರ್ತಿ ಮಾಡಲ್ಪಟ್ಟಿದ್ದರಿಂದ ನಿಯೋಜನೆಯನ್ನು ರದ್ದುಗೊಳಿಸಲಾಗಿರುತ್ತದೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕೊಪ್ಪಳ ಇವರ ವರದಿ ಪ್ರಕಾರ ಶ್ರೀ.ಎಸ್.ಬಿ.ಕುರಿ ಇವರು ಶಿಕ್ಷಣ ಸಂಯೋಜಕರಾಗಿ ನಿಯೋಜನೆ ಮೇರೆಗೆ ದಿನಾಂಕ: 04.06.2010 ರಿಂದ 26.07.2010 ರವರೆಗೆ ಕರ್ತವ್ಯ ನಿರ್ವಹಿಸಿರುತ್ತಾರೆ.

ಅನುಬಂಧ–8 [ಅ] ನಿಯೋಜನೆ ಆದೇಶದ ಪ್ರತಿ

[ಆ] ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕೊಪ್ಪಳ ಇವರ ವರದಿ ಪತ್ರ ದಿ: 26.11.2010

ಈ ಹಿಂದೆ ಶಿಕ್ಷಣ ಸಂಯೋಜಕರು ಮತ್ತು ಬಿಆರ್‌ಸಿ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆ ನಡೆಸುವ ಮೂಲಕ ಆಯ್ಕೆ ಮಾಡಲಾಗುತ್ತಿತ್ತು. ಅವಧಿ ಮುಗಿದ ನಂತರವೂ ಕೆಲವು ಶಿಕ್ಷಣ ಸಂಯೋಜಕರಾಗಿ ನ್ಯಾಯಾಲಯದಲ್ಲಿ ಪ್ರಶ್ನಿಸಿ ಮುಂದುವರೆದಿದ್ದು, ಇಂತಹ ಪ್ರಕರಣಗಳನ್ನು ತೆರವುಗೊಳಿಸುವಲ್ಲಿ ಇಲಾಖೆ ಕ್ರಮ ತೆಗೆದುಕೊಂಡಿರುವುದಾಗಿ ಉಪ ನಿರ್ದೇಶಕರು ತಿಳಿಸಿದ್ದಾರೆ.

**ಉನ್ನತ ವ್ಯಾಸಂಗಕ್ಕೆ ಅನುಮತಿ ಕುರಿತು:–**

2010–11ನೇ ಸಾಲಿಗೆ ಬಾಹ್ಯವಾಗಿ ಅಂಚೆ ತೆರವಿನ ಮೂಲಕ ಉನ್ನತ ವ್ಯಾಸಂಗ ಪೂರೈಸಲು ಕೊಪ್ಪಳ ಜಿಲ್ಲೆ ಉಪನಿರ್ದೇಶಕರು ಹಾಜರು ಪಡಿಸಿದ ಕಡತಗಳ ಪ್ರಕಾರ ಈ ಕೆಳಕಂಡಂತೆ ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರಿಗೆ ಅನುಮತಿ ನೀಡಿರುತ್ತಾರೆ.

[1] ಬಾಹ್ಯವಾಗಿ ಉನ್ನತ ವ್ಯಾಸಂಗಕ್ಕೆ –109

[2] ಬಾಹ್ಯವಾಗಿ ಉನ್ನತ ವ್ಯಾಸಂಗಕ್ಕೆ ಘಟನೋತ್ತರ– 91

[ಎ] ಕೆಲವು ಪ್ರಸ್ತಾವನೆಗಳನ್ನು ಅಭ್ಯರ್ಥಿಗಳಿಂದ ನೇರವಾಗಿ ಪಡೆದು ಅನುಮತಿ ನೀಡಲಾಗಿದೆ.

[ಬಿ] ಇಲಾಖಾ ಅನುಮತಿ ಪಡೆಯದೇ ಇರುವ ಶಿಕ್ಷಕರುಗಳಿಗೆ ವಿವಿಧ ಹಂತಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಘಟನೋತ್ತರ ಅನುಮತಿ ನೀಡಿರುತ್ತಾರೆ.

ಸರ್ಕಾರಿ ಪ್ರಾಥಮಿಕ/ಪೌಢಶಾಲಾ ಶಿಕ್ಷಕರು ರೆಗ್ಯುಲರ್ ಉನ್ನತ ವ್ಯಾಸಂಗ ಮಾಡಲು 2010–11ನೇ ಸಾಲಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಶಾಲಾ ಮುಖ್ಯಸ್ಥರಿಂದ ಬಂದಿರುವ ಪ್ರಸ್ತಾವನೆ ಆಧರಿಸಿ ಉಪನಿರ್ದೇಶಕರು, ಅಪರ ಆಯುಕ್ತರು, ಗುಲ್ಬರ್ಗಾ ಇವರಿಗೆ ಪ್ರಸ್ತಾವನೆ

ಸಲ್ಲಿಸಿರುತ್ತಾರೆ. ಸಲ್ಲಿಸಿರುವ ಪ್ರಸ್ತಾವನೆಗಳಲ್ಲಿ ಸರ್ಕಾರದಿಂದ ಅನುಮತಿ ಪಡೆದು ಬಿಡುಗಡೆಗೊಳಿಸಿರುವುದನ್ನು ಪರಿಶೀಲನೆಯಲ್ಲಿ ಗಮನಿಸಲಾಗಿದೆ.

ಒಟ್ಟು ರೆಗ್ಯೂಲರ್ ಉನ್ನತ ವ್ಯಾಸಂಗಕ್ಕೆ ಬಂದ ಪ್ರಸ್ತಾವನೆಗಳು–26

ದಿನಾಂಕ: 27–11–20210 ರಂದು ದೂರು ನೀಡಿರುವ ಕೊಪ್ಪಳ ಜಿಲ್ಲಾ ಘಟಕದ ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಪದಾಧಿಕಾರಿಗಳು ಹಾಗೂ ಬಡ್ತಿ ದೊರಕದೆ ತೊಂದರೆಗೀಡಾಗಿರುವ ಶಿಕ್ಷಕರುಗಳನ್ನು ವಿಚಾರಣೆಗೆ ಕರೆಸಿ ತೊಂದರೆಗೀಡಾದ ಶಿಕ್ಷಕರುಗಳ ಮನವಿಗಳನ್ನು [**ಅನುಬಂಧ–05 ಮತ್ತು 10**] ಪಡೆದು ಪರಿಶೀಲಿಸಲಾಗಿ ಶಿಕ್ಷಕರು ಜೇಷ್ಟತೆಯಲ್ಲಿ ಕಿರಿಯರಾದ ಶಿಕ್ಷಕರಿಗೆ ಬಡ್ತಿ ನೀಡಿರುವುದಾಗಿ ತಿಳಿಸಿದ್ದು ಇದನ್ನು ಪರಿಶೀಲಿಸಲಾಗಿ ಶಿಕ್ಷಕರು ಜೇಷ್ಟತೆಯಲ್ಲಿ ಹಿರಿಯರಾದರೂ ಬಿ.ಇಡಿ ಪರೀಕ್ಷೆಯನ್ನು 2010 ರಲ್ಲಿ ತೇರ್ಗಡೆಹೊಂದಿದ್ದು ಕಿರಿಯ ಜೇಷ್ಟತೆ ಹೊಂದಿದ ಶಿಕ್ಷಕರು 2008ಕ್ಕಿಂತ ಮುಂಚೆ ಬಿ.ಇಡಿ., ತೇರ್ಗಡೆಯಾಗಿರುವುದರಿಂದ ಹಾಗೂ ದಿನಾಂಕ: 01–01–2009 ನೇ ಸಾಲಿನ ಜೇಷ್ಟತಾ ಪಟ್ಟಿಯನ್ನು ಸೆಪ್ಟೆಂಬರ್ 2009 ಮಾಹೆಯಲ್ಲಿ ಪ್ರಕಟಿಸಿ ಅಕ್ಟೋಬರ್ 2009 ರ ಮಾಹೆಯಲ್ಲಿ ಅಂತಿಮಗೊಳಿಸಿರುವುದರಿಂದ ಸದರಿ ಹಿರಿಯ ಜೇಷ್ಟತೆಯನ್ನು ಹೊಂದಿರುವ ಶಿಕ್ಷಕರನ್ನು ನಿಯಮಾನುಸಾರ ಜೇಷ್ಟತೆಗೆ ಪರಿಗಣಿಸಲು ಬರುವುದಿಲ್ಲವಾದ್ದರಿಂದ ಅವರನ್ನು ಬಡ್ತಿಗೆ ಪರಿಗಣಿಸದೇ ಇರುವುದು ಕಂಡುಬಂದಿರುತ್ತದೆ, ಅದೇ ಸಂಘದ ಪದಾಧಿಕಾರಿಗಳು ದಿನಾಂಕ: 22–07–2010 ರಂದು ಮಾನ್ಯ ಜಿಲ್ಲಾಧಿಕಾರಿಗಳು ಕೊಪ್ಪಳ ಇವರ ಸರ್ಮುಖದಲ್ಲಿ ನಡೆದ ವಿಚಾರಣೆಯನ್ನು ಉಲ್ಲೇಖಿಸಿ ಅವರ ಅಹವಾಲುಗಳಿಗೆ ನ್ಯಾಯ ದೊರಕಿಸಿಕೊಡುವುದಾಗಿ ತಿಳಿಸಿದ್ದು ಮುಂದೆಯೂ ತಾವು ಸಂಬಂಧಿಸಿ ವಿಷಯಗಳನ್ವಯ ನ್ಯಾಯ ದೊರಕಿಸಿಕೊಡಬೇಕೆಂದು ಕೋರಿರುತ್ತಾರೆ.

[ಅನುಬಂಧ–11]

ಕೊಪ್ಪಳ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಎರಡು ಸಂಘಗಳಿದ್ದು ಅಧಿಕೃತ ಸಂಘದವರೆಂದು ಹೇಳಲಾದ

ಪದಾಧಿಕಾರಿಗಳು ದಿನಾಂಕ: 27–11–2010 ರಂದು ಲಿಖಿತ ಮನವಿ ನೀಡಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಉಪನಿರ್ದೇಶಕರು 4–5 ವರ್ಷಗಳಿಂದ ಕುಂಠಿತವಾಗಿದ್ದ ಪ್ರಾಥಮಿಕ ಶಾಲಾ ಶಿಕ್ಷಕರ ಬಡ್ತಿ ನೀಡುವ ಪ್ರಕ್ರಿಯೆಯನ್ನು ನಿಯಮಾನುಸಾರ ಜೇಷ್ಠತಾ ಪಟ್ಟಿ ತಯಾರಿಸಿ ರೋಷ್ಟರ್ ಪದ್ಧತಿ ಅಳವಡಿಸಿ ಅರ್ಹ ಶಿಕ್ಷಕರುಗಳಿಗೆ ಬಡ್ತಿ ನೀಡಿರುವುದು ಪ್ರಸಂಶಾರ್ಹವಾಗಿದೆ ಎಂದು ಅಭಿನಂದಿಸಿ ಅನಧಿಕೃತ ಸಂಘದ ಪದಾಧಿಕಾರಿಗಳು ನೀಡಿರುವ ದೂರನ್ನು ನಿಜಾಂಶವಿಲ್ಲದ ಹಾಗೂ ಸುಳ್ಳು ದೂರೆಂದು ಪರಿಗಣಿಸಲು ಕೋರಿರುತ್ತಾರೆ.

ದಿನಾಂಕ: 22–07–2010 ರಂದು ದೂರು ನೀಡಿರುವ ಕೊಪ್ಪಳ ಜಿಲ್ಲಾ ಘಟಕದ ಕರ್ನಾಟಕ ರಾಜ್ಯ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘದ ಪದಾಧಿಕಾರಿಗಳು ಮಾನ್ಯ ಜಿಲ್ಲಾಧಿಕಾರಿಗಳು ಕೊಪ್ಪಳ ಇವರ ಸಮ್ಮುಖದಲ್ಲಿ ವಿಚಾರಣೆ ನಡೆಸಿ ದೂರಿನ ಬಗ್ಗೆ ಉಪನಿರ್ದೇಶಕರು ಮತ್ತು ಸಂಘದ ಪದಾಧಿಕಾರಿಗಳು ವಿವರವಾದ ಮಾಹಿತಿಯ ಕೊರತೆಯಿಂದ ಹಾಗೂ ಸಂಪರ್ಕದ ಕೊರತೆಯಿಂದಾಗಿ ಅಪನಂಬಿಕೆಗಳಾಗಿವೆ. ಪೂರ್ವಬಾವಿಯಾಗಿ ಸಂಘದ ಜೊತೆ ಚರ್ಚಿಸದಿದ್ದರೆ ಒಳ್ಳೆಯದಿತ್ತು. ಎಂಬುದು ಸಂಘದ ಅಭಿಪ್ರಾಯವಾಗಿದೆ. ಈ ವಿಚಾರಣೆಯ ಮೂಲಕ ಸಂಘದ ಪದಾಧಿಕಾರಿಗಳಿಗೆ ಎಲ್ಲಾ ವಿಷಯಗಳು ಮನವರಿಕೆಯಾಗಿದೆ ಎಂದು ಈ ಮೂಲಕ ತಮ್ಮ ಸದರಿ ಕಡತವನ್ನು ಮುಕ್ತಾಯಗೊಳಿಸಲು ವಿನಂತಿಸಿರುವುದಾಗಿ ಲಿಖಿತ ಹೇಳಿಕೆಯನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ ನೀಡಿರುತ್ತಾರೆ. [ಅನುಬಂಧ–12]

**ಒಟ್ಟಾರೆ ಅಭಿಪ್ರಾಯ:**

1. ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರೌಢಶಾಲಾ ಶಿಕ್ಷಕರಾಗಿ ಬಡ್ತಿ ನೀಡುವಲ್ಲಿ ಪ್ರಥಮ ಬಾರಿಗೆ ಒಟ್ಟು 50 ಮಂದಿ ಶಿಕ್ಷಕರಿಗೆ ಕೌನ್ಸಿಲಿಂಗ್ ಮಾಡಲಾಗಿದೆ ನಂತರ ಬಿಡಿಬಿಡಿಯಾಗಿ ವಿವಿಧ ಹಂತಗಳಲ್ಲಿ ಬಡ್ತಿ ನೀಡಿರುವುದು ಕಂಡು ಬಂದಿದ್ದು ಇದು ಪಾರದರ್ಶಕ ಕ್ರಮವಾಗಿರುವುದಿಲ್ಲ.

2. ಪ್ರೌಢಶಾಲೆಗಳಲ್ಲಿನ ಶಿಕ್ಷಕರ ಖಾಲಿ ಹುದ್ದೆಗಳನ್ನು ಪರಿವರ್ತಿಸುವಲ್ಲಿ ವೃತ್ತಿ, ಸಂಗೀತ ಮುಂತಾದ ವಿಶೇಷ ಶಿಕ್ಷಕರ ಹುದ್ದೆಗಳನ್ನು ಸಾಮಾನ್ಯ ಶಿಕ್ಷಕರ ಹುದ್ದೆಗಳನ್ನಾಗಿ ಪರಿವರ್ತಿಸಿರುವುದು ಕ್ರಮ ಬದ್ದವಲ್ಲ.
3. ಸ್ಥಳಾಂತರ ಪ್ರಕ್ರಿಯೆಯನ್ನು ಒಂದೇ ಬಾರಿಗೆ ಮಾಡದೇ ವಿವಿಧ ಹಂತಗಳಲ್ಲಿ ಮಾಡಿರುವ ಕ್ರಮದಲ್ಲಿ ಪಾರದರ್ಶಕತೆ ಕಂಡು ಬಂದಿರುವುದಿಲ್ಲ.

**ಸಭಾಪತಿಯವರು:–** ಮಂಡಿಸಲಾಯಿತು.

**2. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**ಶ್ರೀ ವಿ.ಸೋಮಣ್ಣ(ಸಭಾನಾಯಕರು):–** ಮಾನ್ಯ ಸಭಾಪತಿಗಳೇ, ಮಾನ್ಯ ಮುಖ್ಯ ಮಂತ್ರಿಗಳ ಹೆಸರಿನಲ್ಲಿರುವ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ದಿನಾಂಕ: 31ನೇ ಮಾರ್ಚ್ 2011ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ (ಸ್ಥಳೀಯ ಸಂಸ್ಥೆಗಳ) ವರದಿ.

**ಸಭಾಯತಿಯವರು:–** ಮಂಡಿಸಲಾಯಿತು.

## 3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ಹೈದ್ರಾಬಾದ್ ಕರ್ನಾಟಕ ಭಾಗದ ಹಿರಿಯ ಪತ್ರಕರ್ತ ಹಾಗೂ ಸಾಹಿತಿಗಳಾದ ಶ್ರೀ ಲಿಂಗಣ್ಣ ಸತ್ಯಂಪೇಟೆ ಅವರ ಅಸ್ವಾಭಾವಿಕ ಮರಣದ ಬಗ್ಗೆ.

**ಶ್ರೀ ಅಲ್ಲಮಪ್ರಭು ಪಾಟೀಲ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಗುಲ್ಬರ್ಗಾ ಜಿಲ್ಲೆಯ ಹೈದ್ರಾಬಾದ್ ಕರ್ನಾಟಕ ಭಾಗ ಈಗ ಯಾದಗಿರಿ ಜಿಲ್ಲೆಗೆ ಸೇರಿರತಕ್ಕಂತಹ ಸುರಪುರ ತಾಲ್ಲೂಕಿನ ಹಿರಿಯ ಪತ್ರಕರ್ತ ಹಾಗೂ ಸಾಹಿತಿಗಳಾದ ಶ್ರೀ ಲಿಂಗಣ್ಣ ಸತ್ಯಂಪೇಟೆ ಅವರ ಅಸ್ವಾಭಾವಿಕ ಮರಣ ನೆನ್ನೆ ಗುರುವಾರ ಸಂಭವಿಸಿದ್ದು, ನನಗೆ ಅತ್ಯಂತ ನೋವಿನ ಸಂಗತಿಯಾಗಿದೆ. ನಮ್ಮ ಭಾಗದ ಎಲ್ಲಾ ಜನಪರ ಸಮಸ್ಯೆಗಳನ್ನು ಮತ್ತು ಹಿರಿಮೆಗಳನ್ನು ಎಲ್ಲಾ ಪತ್ರಿಕೆಗಳಲ್ಲಿ ಹಾಗೂ ನಿಯತಕಾಲಿಕೆಗಳಲ್ಲಿ ಮತ್ತು ಬಸವ ಮಾರ್ಗ ಎಂಬ ವಾರ ಪತ್ರಿಕೆಯನ್ನು ತಾವೇ ಮುನ್ನಡೆಸುತ್ತಾ ಪ್ರಚುರಪಡಿಸಿ ಈ ಭಾಗದ ನೋವು–ನಲಿವುಗಳಿಗೆ ಸ್ಪಂದಿಸುತ್ತಿದ್ದರು.

ಕಲ್ಬುರ್ಗಿ ಶ್ರೀ ಶರಣಬಸವೇಶ್ವರ ಗುಡಿಯಲ್ಲಿ (ಮಠದಲ್ಲಿ) ಶ್ರಾವಣಮಾಸದ ಕಾರ್ಯಕ್ರಮದಲ್ಲಿ ಭಾಗಿಯಾಗಲು ಅವರು ಶಹಾಪುರದಿಂದ ಕುಲ್ಬರ್ಗಿಗೆ ಬಂದಿದ್ದರು. ಅವರ ಮೃತದೇಹ ಶ್ರೀ ಶರಣಬಸವೇಶ್ವರ ಗುಡಿಯ (ಮಠದ) ಆವರಣದ ಚರಂಡಿಯಲ್ಲಿ ಸಿಕ್ಕಿದೆ. ಇದನ್ನೆಲ್ಲಾ ಕಂಡು ನಮ್ಮಲ್ಲಿಯ ಜನರು ದಿಗ್ಭ್ರಾಂತಗೊಂಡಿದ್ದಾರೆ.

ಈ ಸರ್ಕಾರದಲ್ಲಿ ಸಾಮಾನ್ಯ ಜನರಿಗೆ ಹಾಗೂ ಪತ್ರಕರ್ತರಿಗೂ ಸಹ ರಕ್ಷಣೆ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿರುವುದು ಬಹಳ ನೋವಿನ ಸಂಗತಿ ಹಾಗೂ ಕಾನೂನು ಸುವ್ಯವಸ್ಥೆ ಇಲ್ಲದಂತಾಗಿದೆ. ತಕ್ಷಣ ಇವರ ಸಾವಿಗೆ ಕಾರಣರಾದ ದುಷ್ಕರ್ಮಿಗಳನ್ನು ಪತ್ತೆಹಚ್ಚಿ ಸಮಾಜದಲ್ಲಿ ಸರ್ಕಾರದ ವ್ಯವಸ್ಥೆಯ ಬಗ್ಗೆ ವಿಶ್ವಾಸ ಮೂಡಿಸುವಂತಹ ವಾತಾವರಣ ನಿರ್ಮಿಸಬೇಕೆಂದು ಈ ಸಭೆಯಲ್ಲಿ ಆಗ್ರಹಿಸುತ್ತೇನೆ. ಇದರ ಬಗ್ಗೆ ಸಿಓಡಿ ತನಿಖೆಯಾಗಬೇಕೆಂದು ಒತ್ತಾಯಪಡಿಸುತ್ತೇನೆ.

**ಶ್ರೀ ವಿ.ಸೋಮಣ್ಣ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಸಭಾಪತಿಯವರು:–** ಕೆಲವು ಹಿರಿಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರಿ ಪ್ರಸ್ತಾವನೆಗಳನ್ನು ಕಳುಹಿಸಿಕೊಟ್ಟಿದ್ದೀರಿ, ಅದರಲ್ಲಿ ಒಂದು ವಿಚಾರ ಇವೊತ್ತು ನಿಯಮ 330ರ ಅಡಿಯಲ್ಲಿನ ವಿಷಯಗಳ ಪಟ್ಟಿಯಲ್ಲಿ ಸೇರಿದೆ, ಮತ್ತೊಂದಕ್ಕೆ ಮೊನ್ನೆಯಷ್ಟು ಪ್ರಶ್ನೋತ್ತರ ಅವಧಿಯಲ್ಲಿ ಚರ್ಚೆ ನಡೆದಿದೆ. ಹಾಗಾಗಿ ಆ ವಿಷಯಗಳನ್ನೂ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೊಡುವುದಕ್ಕೆ ಒಪ್ಪುತ್ತಿಲ್ಲ. ಈಗ ಮಾನ್ಯ ವೈ.ಎ.ನಾರಾಯಣಸ್ವಾಮಿಯವರು, ಶ್ರೀ ಶಶಿಲ್ ಜಿ.ನಮೋಶಿಯವರು, ಡಾ॥ಎ.ಹೆಚ್.ಶಿವಯೋಗಿಸ್ವಾಮಿಯವರು ಒಟ್ಟಾಗಿ ಸಹಿ ಮಾಡಿರುವಂತಹ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದಾರೆ. ಅದನ್ನು ಸಹಿ ಮಾಡಿರುವವರಲ್ಲಿ ಯಾರಾದರೊಬ್ಬರು ಓದಬಹುದಾಗಿದೆ.

**ಆ)** ಚಿತ್ರದುರ್ಗ ಜಿಲ್ಲೆಯ ಬಣಜಾರ ಯುವಕ ಸಂಘದ ವತಿಯಿಂದ ನಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರವ ಶಿಕ್ಷಕರನ್ನು ಬೇರೆಡೆಗೆ ವರ್ಗಾಯಿಸಿ ಆಡಳಿತ ಮಂಡಳಿಯನ್ನು ರದ್ದು ಮಾಡುವ ಬಗ್ಗೆ.

– – – –

**ಶ್ರೀ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಚಿತ್ರದುರ್ಗ ಜಿಲ್ಲೆಯ ಬಣಜಾರ ಯುವಕ ಸಂಘದ ವತಿಯಿಂದ ನಡೆಸುತ್ತಿರುವ ಅನುದಾನಿತ ಪ್ರೌಢ ಶಾಲೆ/ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಆಡಳಿತ ಮಂಡಳಿ ಕಿರುಕುಳ ನೀಡುತ್ತಿರುವ ವಿಚಾರದ ಬಗ್ಗೆ ಈ ಸದನದಲ್ಲಿ ಹಲವಾರು ಬಾರಿ ಚರ್ಚೆಯಾಗಿದೆ.

ಸದ್ಯಕ್ಕೆ ಇಲಾಖೆಯ ಆಯುಕ್ತರು ಈ ಎಲ್ಲಾ ಶಾಲೆಗಳ ಮಾನ್ಯತೆಯನ್ನು ರದ್ದುಪಡಿಸಿ, ಶಾಲೆಗಳನ್ನು ಮುಚ್ಚಿ ಅದರಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಬೇರೆ ಶಾಲೆಗಳಿಗೆ ನಿಯೋಜಿಸುವಂತೆ

ಆದೇಶ ಮಾಡಿರುವುದಾಗಿ ತಿಳಿದುಬಂದಿದೆ. ಆದರೆ ಈ ಆದೇಶಕ್ಕೆ ಸರ್ಕಾರದ ಉಪ ಕಾರ್ಯದರ್ಶಿಗಳು ತಡೆಯಾಜ್ಞೆಯನ್ನು ನೀಡಿ 45 ದಿನಗಳೊಳಗಾಗಿ ಎಲ್ಲಾ ಶಾಲೆಗಳ ಮಾನ್ಯತೆ ನವೀಕರಿಸಿಕೊಳ್ಳಬೇಕಾಗಿ ಷರತ್ತನ್ನು ವಿಧಿಸಿದ್ದರು. ಆದರೆ ಈ ಅವಧಿ ಮುಗಿದಿದ್ದು ಈ ಶಾಲೆಗಳಿಗೆ ಯಾವುದೇ ವಿದ್ಯಾರ್ಥಿಗಳು ದಾಖಲು ಪಡೆಯದೇ ಇರುವುದು ನನ್ನ ಗಮನಕ್ಕೆ ಬಂದಿದೆ, ಜೊತೆಗೆ ಆಡಳಿತ ಮಂಡಳಿಯ ಮಧ್ಯೆ ವಿವಾದ ಸಹ ಇದೆ. ಆದ್ದರಿಂದ ತಕ್ಷಣವೇ ಮಾನ್ಯತೆ ಇಲ್ಲದ ಮೇಲ್ಕಂಡ ಶಾಲೆಗಳನ್ನು ಮುಚ್ಚಿ ಅಲ್ಲಿನ ಸಿಬ್ಬಂದಿಯನ್ನು ಬೇರೆಡೆಗೆ ವರ್ಗಾಯಿಸಿ, ಅವರಿಗೆ ದಕ್ಕಬೇಕಾದ ಸಂಬಳವನ್ನು ನೀಡಿ ಆಡಳಿತ ಮಂಡಳಿಯನ್ನು ರದ್ದು ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಕಳೆದ ಆರು ತಿಂಗಳುಗಳಿಂದ ಅಲ್ಲಿನ ಶಿಕ್ಷಕರಿಗೆ ವೇತನ ನೀಡದಿರುವುದರಿಂದ ಆ ಶಿಕ್ಷಕರು ನಾಳೆಯಿಂದ ನಮ್ಮ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಮುಷ್ಕರ ನಡೆಸಲಿದ್ದಾರೆ ಎನ್ನುವಂತಹ ವಿಚಾರವನ್ನು ಸಹ ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಾ, ದಯವಿಟ್ಟು ಇವರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಷಯ ನಿನ್ನೆ ತಾನೆ ವಿಧಾನ ಸಭೆಯಲ್ಲಿ ಪ್ರತಿಪಕ್ಷದ ನಾಯಕರಾದಂತಹ ಶ್ರೀ ಸಿದ್ದರಾಮಯ್ಯನವರು ಈ ವಿಷಯಕ್ಕೆ ಸಂಬಂಧಪಟ್ಟಂತೆ ಬೇರೆ ರೀತಿಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದರು. ಅಂದರೆ ಈ ಸಂಸ್ಥೆಗೆ ತೊಂದರೆಯಾಗುತ್ತಿದೆ ಎಂಬ ಹಿನ್ನಲೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದರು. ಅದೇ ರೀತಿ ಇವತ್ತಿನ ದಿವಸ ಆ ಸಂಸ್ಥೆಯಲ್ಲಿರುವಂತಹ ಶಿಕ್ಷಕರಿಗೆ ಮೂಲಭೂತ ಸೌಕರ್ಯಗಳ ತೊಂದರೆ ಇದೆ ಆ ವಿಷಯದ ಬಗ್ಗೆ ಶೂನ್ಯ ವೇಳೆಯಲ್ಲಿ ಚರ್ಚಿಸಲು ಅವಕಾಶ ನೀಡಬೇಕೆಂದು ಮಾನ್ಯ ಸದಸ್ಯರಾದಂತಹ ಶ್ರೀಯುತ ನಾರಾಯಣಸ್ವಾಮಿಯವರು, ಡಾ॥ ಎ.ಹೆಚ್.ಶಿವಯೋಗಿಸ್ವಾಮಿಯವರು ಮತ್ತು ಮಾನ್ಯ ಶಶಿಲ್ ಜಿ.ನಮೋಶಿಯವರು ಹಾಗೂ ಉಳಿದಂತಹ ಮಾನ್ಯ ಸದಸ್ಯರುಗಳು ಸಹಿ ಮಾಡಿ ಕೊಟ್ಟಿದ್ದಾರೆ. ನಾನು ಈ ಸದನದ ಮೂಲಕ

ಒಂದು ಮಾತನ್ನು ಸ್ಪಷ್ಟಪಡಿಸುವುದಕ್ಕೆ ಬಯಸುತ್ತೇನೆ. ಒಳ್ಳೆಯ ಕೆಲಸ ಮಾಡುತ್ತಿರುವಂತಹ ಬಹಳಷ್ಟು ಖಾಸಗಿ ಆಡಳಿತ ಸಂಸ್ಥೆಗಳು ನಮ್ಮಲ್ಲಿ ಇವೆ. ವಿಶೇಷವಾಗಿ ಪರಿಶಿಷ್ಟ ಜಾತಿ ಪಂಗಡದಲ್ಲಿಯೂ ಖಾಸಗಿ ಆಡಳಿತ ಮಂಡಳಿಗಳು ಬಹಳ ಒಳ್ಳೆಯ ಶಿಕ್ಷಣವನ್ನು ಕೊಡುತ್ತಿದೆ. ನಮಗೆ ಹೆಮ್ಮೆ ಎನ್ನಿಸುವಂಥ ರೀತಿಯಲ್ಲಿ ಪರಿಶಿಷ್ಟ ಜಾತಿಯ ಶಿಕ್ಷಣ ಸಂಸ್ಥೆಗಳು ರಾಜ್ಯದ ಶೈಕ್ಷಣಿಕ ಪ್ರಗತಿಗೆ ಸಹಾಯವನ್ನು ಮಾಡುತ್ತಿವೆ. ಆದರೆ ಕೆಲವು ಸಂಸ್ಥೆಗಳು ಸರ್ಕಾರದ ನಿಯಮಾವಳಿಗಳನ್ನು ಹಾಗೂ ನಮ್ಮ ಎಲ್ಲಾ ಕಾನೂನುಗಳನ್ನು ಮೀರಿ, ಮೂಲಭೂತ ಅಗತ್ಯತೆಗಳನ್ನೂ ಸಹ ಸಂಸ್ಥೆಗೆ ಒದಗಿಸಿಕೊಳ್ಳದೆ ಅಲ್ಲಿಯ ಶಿಕ್ಷಕರಿಗೆ ಕನಿಷ್ಠ ಸೇವಾ ವಿಷಯಗಳ ಬಗ್ಗೆ ಆದ್ಯತೆಯನ್ನು ಕೊಡದೆ ಅಲ್ಲಿಯ ಶಿಕ್ಷಕರ ಜೊತೆ ಆಡಳಿತ ಮಂಡಳಿಯವರು ಒಂದು ಸೌಹಾರ್ದ ಸಂಬಂಧವನ್ನು ಬೆಳಸಿಕೊಳ್ಳದೆ ಅನೇಕ ರೀತಿಯ ಸಮಸ್ಯೆಗಳು ಉದ್ಭವ ಆಗುತ್ತಿರುವದನ್ನು ನಾವು ಕಂಡಿದ್ದೇವೆ. ಈ ರೀತಿ ಆಗದೆ ಇರುವುದನ್ನು ಸರ್ಕಾರ ಕಾನೂನು ಪ್ರಕಾರವಾಗಿ ಯಾವ ರೀತಿಯಾದಂತಹ ಎಚ್ಚರಿಕೆಯನ್ನು ವಹಿಸಿಕೊಳ್ಳಬೇಕೋ ಆ ಎಚ್ಚರಿಕೆಯನ್ನು ಖಚಿತವಾಗಿ ವಹಿಸಿಕೊಳ್ಳುತ್ತದೆ ಎಂದು ಹೇಳುತ್ತಾ, ನಮ್ಮ ಸದಸ್ಯರಾದಂತಹ ಮಾನ್ಯ ನಾರಾಯಣ ಸ್ವಾಮಿಯವರು ಚಿತ್ರದುರ್ಗ ಜಿಲ್ಲೆಯ ಬಣಜಾರ ಯುವಕ ಸಂಘದ ವತಿಯಿಂದ ನಡೆಸುತ್ತಿರುವ ಅನುಧಾನಿತ ಪ್ರೌಢಶಾಲೆ/ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಆಡಳಿತ ಮಂಡಳಿ ಕಿರುಕುಳ ನೀಡುತ್ತಿರುವ ವಿಚಾರವನ್ನು ಹಾಗೂ ಕಳೆದ ಆರು ತಿಂಗಳುಗಳಿಂದ ಶಿಕ್ಷಕರಿಗೆ ವೇತನ ನೀಡದಿರುವುದರಿಂದ ಶಿಕ್ಷಕರು ನಾಳೆಯಿಂದಲೇ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಪ್ರತಿಭಟನೆ ಮಾಡುವುದಕ್ಕೆ ಮುಂದಾಗಿದ್ದಾರೆ. ಹಾಗಾಗಿ ಅವರ ಮಾನ್ಯತೆಯನ್ನು ರದ್ದು ಮಾಡಬೇಕು ಮತ್ತು ನಮ್ಮ ಇಲಾಖೆಯಲ್ಲಿ ಉಪಕಾರ್ಯದರ್ಶಿಗಳು ಏನು ತಡೆಯಾಜ್ಞೆ ಕೊಟ್ಟಿದ್ದಾರೆ ಅದನ್ನು ತೆರವುಗೊಳಿಸಬೇಕೆಂದು ಕೋರಿದ್ದಾರೆ.

**ಶ್ರೀ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಡೆಯಾಜ್ಞೆ ತೆರವು ಆಗಿದೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಆ ಶಾಲೆಯ ಮಾನ್ಯತೆಯನ್ನು ರದ್ದುಪಡಿಸಿ ಸರ್ಕಾರ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಸಂಬಳವನ್ನು ಬಿಡುಗಡೆ ಮಾಡುವುದಕ್ಕೆ ಅಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಆದುದರಿಂದ ನಾನು ಅಲ್ಲಿ ಕೆಲಸ ಮಾಡುತ್ತಿರುವಂಥ ಸಿಬ್ಬಂದಿಗಳಿಗೆ ಯಾವುದೇ ರೀತಿಯಾದಂತಹ ತೊಂದರೆ ಆಗಬಾರದು ವೇತನ ಬಿಡುಗಡೆ ಮಾಡಬೇಕೆಂದು ಇವತ್ತೇ ನಮ್ಮ ಇಲಾಖಾ ಅಧಿಕಾರಿಗಳಿಗೆ ಸೂಚಿಸುತ್ತೇನೆ ಮತ್ತು ಆಡಳಿತ ಮಂಡಳಿಯು ಅಲ್ಲಿಯ ಸಿಬ್ಬಂದಿಗಳ ಜೊತೆ ಸೌಹಾರ್ದಯುತವಾಗಿ ನಡೆದುಕೊಳ್ಳುವುದಕ್ಕೆ ಬೇಕಾದಂತಹ ಕ್ರಮವನ್ನು ತೆಗೆದುಕೊಳ್ಳುವಂತೆ ಸೂಚಿಸುತ್ತೇನೆ ಮತ್ತು ಕಾನೂನು ಪ್ರಕಾರವಾಗಿ ಮೂಲಭೂತ ಸೌಕರ್ಯಗಳನ್ನು ಸಹ ಒದಗಿಸುವುದಕ್ಕೆ ಅಗತ್ಯವಾದ ಸೂಚನೆಯನ್ನು ಕೊಡುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

**ಡಾ॥ಎ.ಹೆಚ್.ಶಿವಯೋಗಿಸ್ವಾಮಿ(ಸರ್ಕಾರ ಮುಖ್ಯ ಸಚೇತರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೂ ಸಹ ಈ ವಿಷಯ ತಿಳಿದಿದೆ. ಚಿತ್ರದುರ್ಗ ಜಿಲ್ಲೆಯ ಬಣಜಾರ ಯುವಕ ಸಂಘ ಏನಿದೆ ಅದರ ಬಗ್ಗೆ ಹೇಳಬೇಕೆಂದರೆ, ಆಡಳಿತ ಮಂಡಳಿಯಲ್ಲಿಯೇ ಡಿಸ್‌ಪ್ಯೂಟ್ ಇದೆ. ಹಾಗಾಗಿ ಕಾರ್ಯದರ್ಶಿಯವರು ಆಡಳಿತ ಮಂಡಳಿ ನಮ್ಮದು ಎಂದು ಏನು ಹೇಳಿಕೊಳ್ಳುತ್ತಿದ್ದಾರೆ ಅದು ಕೋರ್ಟಿನಲ್ಲಿದೆ, ಅದು ಇನ್ನು ತೀರ್ಮಾನ ಆಗಿಲ್ಲ. ಅಂತಹ ವ್ಯಕ್ತಿ ನಮ್ಮ ಕ್ಷೇತ್ರವಾದಂತಹ ಭರಮ ಸಾಗರದಿಂದ ಬರುವಂತಹ ಶಿಕ್ಷಕಿಯರಿಗೆ ಆಡಳಿತ ಮಂಡಳಿಯವರು ಎಷ್ಟು ಕಿರುಕುಳ ಕೊಡುತ್ತಿದ್ದಾರೆಂದರೆ, ಒಂದೇ ಮಾತಿನಲ್ಲಿ ಹೇಳಬೇಕೆಂದರೆ it is totally inhuman. ಯಾವುದೇ ಸಂಸ್ಥೆಯವರು ಆ ರೀತಿ ಮಾಡಬಾರದು. ಅದರಲ್ಲಿಯೂ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವಂಥವರು ಶಿಕ್ಷಕರಿಗೆ exploit ಮಾಡುತ್ತಿದ್ದಾರೆಂದು ಹೇಳುವುದಕ್ಕೆ ಆಗುವುದಿಲ್ಲ. ಆ ಸಂಸ್ಥೆಯಲ್ಲಿರುವಂತಹ ಮಹಿಳಾ ಶಿಕ್ಷಕಿಯರಿಗೆ ರಾತ್ರಿ ಹತ್ತು ಗಂಟೆ, ಹನ್ನೆರೆಡು ಗಂಟೆಯ ಸಮಯದಲ್ಲಿ ರೆಕಾರ್ಡ್ ವೆರಿಫೈ ಮಾಡಬೇಕು ಬನ್ನಿ ಎಂದು ಹೇಳುತ್ತಾರಂತೆ. ರಾತ್ರಿ

ಹನ್ನೆರಡು ಗಂಟೆಯ ಸಮಯದಲ್ಲಿ ವೆರಿಫೈ ಮಾಡುವಂಥ ರೆಕಾರ್ಡ್ಸ್ ಆದರೂ ಏನಿರುತ್ತದೆ? ಅಂಥ ವ್ಯಕ್ತಿಗಳ ಮೇಲೆ ಸರ್ಕಾರ ಕಠಿಣವಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕು. ಅಲ್ಲದೆ ಅಲ್ಲಿರುವಂತಹ ಶಿಕ್ಷಕರಿಗೆ ಆರು ತಿಂಗಳು ಗಳಾದರು ಸಂಬಳವನ್ನು ಕೊಡುವುದಿಲ್ಲ, ಯಾರಾದರು ಒಬ್ಬ ಟೀಚರ್ ಆಡಳಿತ ಮಂಡಳಿಯ ವ್ಯಕ್ತಿಯ ವಿರುದ್ಧ ಏನಾದರೂ ಒಂದು ದೂರನ್ನು ಕೊಟ್ಟರೆ ಅವರಿಗೆ ಕಿರುಕುಳ ಕೊಡುತ್ತಾರೆ. ಅಲ್ಲಿರುವಂತಹ ಟೀಚರ್ಸ್‌ಗಳಲ್ಲಿ ನಾಲ್ಕು ಜನ ಹೃದಯ ಸಂಬಂಧಿ ಕಾಯಿಲೆಯಿಂದ ಅಸುನೀಗಿದರು. ಒಬ್ಬ ಶಿಕ್ಷಕರಿಗೆ ತಮ್ಮ ಶ್ರೀಮತಿಯ ಕ್ಯಾನ್ಸರ್ ರೋಗಕ್ಕೆ ಚಿಕಿತ್ಸೆ ಕೊಡಿಸುವುದಕ್ಕೂ ಸಹ ಹಣ ಇಲ್ಲದಂತಾಯಿತು. ಏಕೆಂದರೆ ಇವರಿಗೆ ಸಂಬಳವನ್ನೇ ಕೊಟ್ಟಿರಲಿಲ್ಲ. ಇಂತಹ ಶಿಕ್ಷಣ ಸಂಸ್ಥೆಗಳಿಗೆ ಏನು ಮಾಡಬೇಕು ನೀವೆ ಹೇಳಿ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ, ಈ ವಿಷಯವಾಗಿ ಕೆಳಗಿನ ಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ವ್ಯಾಪಕವಾಗಿ ಚರ್ಚೆಯಾದ ಮೇಲೆ ಮಾನ್ಯ ಸಚಿವರಿಗೆ ಈ ವಿಷಯದಲ್ಲಿ ಸತ್ಯವಿದೆ ಎಂದು ಕಂಡು ಬಂದರೆ ದಯವಿಟ್ಟು ಹಿರಿಯ ಅಧಿಕಾರಿಗಳೊಂದಿಗೆ ಈಗಲೇ ವರದಿಯನ್ನು ತರಿಸಿ ಆ ಸಂಸ್ಥೆಗೆ ಕೊಡುತ್ತಿರುವಂಥ ಅನುದಾನವನ್ನು ಕೂಡಲೆ ನಿಲ್ಲಿಸಬೇಕು. ಹಾಗೂ ಆ ಶಿಕ್ಷಕರನ್ನು ಏನು ಮಾಡಬೇಕು Apply your mind and re- recognize the institution.

**ಡಾ॥ಎ.ಹೆಚ್.ಶಿವಯೋಗಿಸ್ವಾಮಿ:–** ಆ ರೀತಿಯ ನಿರ್ಣಯಗಳನ್ನು ತೆಗೆದುಕೊಂಡರೂ ಕೋರ್ಟಿಗೆ ಹೋಗುವುದು, ಸ್ಟೇ ತರುವುದು ಮಾಡುತ್ತಾರೆ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ, ಒಂದು ವಿಷಯ ಹೇಳುತ್ತೇನೆ, ಕೋರ್ಟ್ ಮುಂದೆ ನಾವು ಇದಕ್ಕೆ ಸಂಬಂಧಪಟ್ಟಂತಹ ವಿಚಾರಗಳನ್ನು ಪೂರ್ತಿಯಾಗಿ ತಿಳಿಸಿದರೆ ಯಾವ ಕೋರ್ಟಿನವರು ಸಹ ತಡೆಯಾಜ್ಞೆಯನ್ನು ಕೊಡುವುದಿಲ್ಲ. ಕೋರ್ಟಿಗೆ ಕೊಡುವ ಮುನ್ನ ನೀವು ಮೊದಲ ವಿಚಾರ ಮಾಡಿ. ಎಲ್ಲಾ ಮಾಹಿತಿ ಸಂಗ್ರಹಿಸಿ ಕೊಡಿ, de-recognise ಮಾಡಿ ಸರ್ಕಾರ ಅನುದಾನ ಕೊಡುವುದನ್ನು ನಿಲ್ಲಿಸಬೇಕು. Do that.

**ಡಾ॥ಎ.ಹೆಚ್.ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಆ ಸಂಸ್ಥೆಗೆ ಸಂಬಂಧಪಟ್ಟಂತಹ ವಿಷಯವನ್ನು ಮಾತ್ರ ಸಭೆಯ ಗಮನಕ್ಕೆ ತರಬಯಸುತ್ತೇನೆ. ಒಂದು ವಿಷಯದಲ್ಲಿ ಕೋರ್ಟ್ ಸ್ಟೇ ಕೊಡಲಿಲ್ಲ. ಅಂತಹ ಸ್ಟೇ ಕೊಡದೆ ಇದ್ದಂತಹ ಕೇಸಿನಲ್ಲಿಯೂ ಸಹ ಇಲಾಖೆಯ ಉಪ ಕಾರ್ಯದರ್ಶಿಯವರ ಹಂತದಲ್ಲಿ ಸ್ಟೇ ತೆಗೆದುಕೊಂಡರು.

**ಶ್ರೀ.ಎಂ.ಸಿ.ನಾಣಯ್ಯ:–** ಹಾಗಾದರೆ ಆ ಉಪ ಕಾರ್ಯದರ್ಶಿಯವರನ್ನು ಮೊದಲು ಸಸ್ಪೆಂಡ್ ಮಾಡಿ.

**ಡಾ॥ಎ.ಹೆಚ್.ಶಿವಯೋಗಿಸ್ವಾಮಿ:–** ಆ ಉಪ ಕಾರ್ಯದರ್ಶಿಯವರನ್ನು ಸಸ್ಪೆಂಟ್ ಮಾಡುವುದಿಲ್ಲ, ಲೋಕಾಯುಕ್ತರ trap case ಆಗಿ ಸಸ್ಪೆಂಡ್ ಆಗಿ ಮನಗೆ ಹೋದರು. ಈಗ ಅವರು ಜೈಲಿನಲ್ಲಿದ್ದಾರೆ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ, ನಾನು ನಿಮ್ಮ ಸರ್ಕಾರ ನಮ್ಮ ಸರ್ಕಾರವೆಂದು ಹೇಳುವುದಿಲ್ಲ, ಇಲಾಖೆ ಇಂತಹ ಪೋಲಿಗಳಿಗೆ ಸಪೋರ್ಟ್ ಕೊಡುತ್ತಾ ಎಷ್ಟರ ಮಟ್ಟಿಗೆ ಭ್ರಷ್ಟಾಚಾರದಲ್ಲಿ ನಿರತರಾಗಿದ್ದಾರೆಂದು ಹೇಳುವುದಕ್ಕೆ ಇದೊಂದು ನಿರ್ದೇಶನ. ದಯವಿಟ್ಟು ಈ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸೋಣ, ಮೊದಲು ಇದಕ್ಕೆ ಸಂಬಂಧಪಟ್ಟಂತಹ ಸಂಪೂರ್ಣ ವರದಿಯನ್ನು ತರಿಸಿಕೊಳ್ಳಿ Get the stay order vacated. ಅದು ಮಾಡಿದಮೇಲೆ de-recognise the institution. It is fit to be de-recognised. De-recognise ಮಾಡಿದ ಮೇಲೆ ಇಲ್ಲಿ ಇರುವಂತಹ –teachers ಯಾರಿದ್ದಾರೆ ಅವರನ್ನು ಯಾವ ರೀತಿ ಯಾವ ಜಾಗಕ್ಕೆ deploy ಮಾಡಬೇಕು ಎನ್ನುವುದರ ಬಗ್ಗೆ ಕ್ರಮವನ್ನು ಕೈಗೊಳ್ಳಿ.

**ಡಾ॥ಎ.ಹೆಚ್.ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರು ಹೇಳಿದಂತೆ ಶಿಕ್ಷಕರಿಗೆ ಸರ್ಕಾರ ಅನುಕೂಲ ಮಾಡಿಕೊಡುವುದಾದರೆ ಅದನ್ನು ಕಾಲಮಿತಿಯೊಳಗೆ ಮಾಡಿ ಬೇರೆ ಕಡೆಗೆ accommodate ಮಾಡಿ ಎಂದು ಕೋರುತ್ತೇನೆ.

(ಗೊಂದಲ)

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಆ ಕಾಲೇಜಿನವರು ಶಿಕ್ಷಕರಿಗೆ ಬಹಳಷ್ಟು ಕಿರುಕುಳವನ್ನು ಕೊಡುತ್ತಿದ್ದಾರೆ, ಎಷ್ಟು ಕಿರುಕುಳ ಕೊಡುತ್ತಿದ್ದಾರೆಂದರೆ ಹೇಳುವುದಕ್ಕೆ ಆಗುವುದಿಲ್ಲ. ದಯಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

**ಡಾ॥ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೇ, ಆ ಶಾಲೆಯಲ್ಲಿ ಆಡ್ಮಿಷನ್ ಆಗಿರುವಂತಹ ಮಕ್ಕಳನ್ನು ಸಹ ಬೇರೆ ಶಾಲೆಗೆ ಸೇರಿಸುವುದಕ್ಕೆ ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:-** ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಏನು ಹೇಳುತ್ತಾರೆ. ಕೇಳೋಣ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾಯಿ ಕೊಡೆಗಳಂತೆ ಖಾಸಗಿ ಸಂಸ್ಥೆಗಳು ತಲೆಎತ್ತುತ್ತಿವೆ. ಸಂಸ್ಥೆಗಳಲ್ಲಿ ಕೆಲಸ ಮಾಡುವಂಥ ಶಿಕ್ಷಕರಿಗೆ ಸಂಬಳ ಕೊಡುವುದಷ್ಟೇ ಅಲ್ಲ, ಯಾರಿಗೆ ನಿಶ್ಚಿತಾರ್ಥವಾಗಿದೆ ಅವರಿಗೆ ಮದುವೆ ಆಗಿಲ್ಲ, ಮದುವೆ ಆದವರು ಅವರ ಸಂಸಾರವನ್ನು ಕರೆದುಕೊಂಡು ಬಂದು ಮನೆ ಮಾಡಲಾರದಂತಹ ಪರಿಸ್ಥಿತಿಯಲ್ಲಿದ್ದಾರೆ. ಇಷ್ಟು ದುರುಪಯೋಗ ಪಡಿಸಿಕೊಳ್ಳುವಂತಹ ಸಂಸ್ಥೆಯ ಬಗ್ಗೆ ಸರ್ಕಾರ ನಿರ್ಧಾಕ್ಷಣ್ಯವಾದಂತಹ ಕ್ರಮವನ್ನು ಕೈಗೊಳ್ಳಬೇಕು. ಅವರ ಯಾವುದೇ ಮುಲಾಜಿಗೆ ಒಳಗಾಗದೆ ತಕ್ಷಣ ಆ ಸಂಸ್ಥೆಯ ಮೇಲೆ ಕ್ರಮ ಜರುಗಿಸಬೇಕು ಒಂದು ವೇಳೆ ಈ ಸಂಸ್ಥೆ grant in aid ಗೆ admit ಆಗಿದ್ದರೆ ಅದನ್ನು ಕ್ಯಾನ್ಸಲ್ ಮಾಡಿಸಿ. ಸರ್ಕಾರ ಇದರ ಬಗ್ಗೆ ಬಿಸಿ ಮುಟ್ಟಿಸದೆ ಹೋದರೆ ಈ ರೀತಿಯಾದಂತಹ ಅವ್ಯವಸ್ಥೆ ನಿರಾತಂಕವಾಗಿ ನಡೆಯುತ್ತದೆ. ಆದಕಾರಣ ಸರ್ಕಾರ ಇದರ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳುವುದಕ್ಕೆ ಹಿಂದುಮುಂದೆ ನೋಡಬಾರದೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಸಭಾಪತಿಯವರೇ, ಸರ್ಕಾರ ಈ ವಿಷಯದಲ್ಲಿ ಸ್ಪಷ್ಟ ನಿರ್ಧಾರವನ್ನು ತೆಗೆದುಕೊಂಡಿದೆ. ಅದಾಗ್ಯೂ ಅದನ್ನು ಜಾರಿಗೊಳಿಸುವಂತಹ ಸಂದರ್ಭಗಳಲ್ಲಿ ಅನೇಕ ರೀತಿಯ

ತೊಂದರೆಗಳು ನಿರ್ಮಾಣವಾಗುತ್ತಿರುವುದು ನಮಗೆಲ್ಲರಿಗೂ ತಿಳಿದಿರುವಂತಹ ಸಂಗತಿಯಾಗಿದೆ. ಆದಕಾರಣ ಇನ್ನು ಮುಂದೆ ಈ ರೀತಿ ತೊಂದರೆ ಆಗದಿರುವಂತೆ ಮಾಡುವುದಕ್ಕೆ ಸರ್ಕಾರ ಈಗಾಗಲೇ ತೆಗೆದುಕೊಂಡಿರುವಂತಹ ನಿರ್ಧಾರಗಳನ್ನು, ನಿರ್ಣಯಗಳನ್ನು ಜಾರಿಗೊಳಿಸಬೇಕೆಂದು ನಮ್ಮ ಅಧಿಕಾರಿಗಳಿಗೆ ಸ್ಪಷ್ಟವಾಗಿ ಸೂಚಿಸುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ. ಆದರೆ ಕೆಲವು ಸಂದರ್ಭಗಳಲ್ಲಿ ಏನಾಗುತ್ತದೆ ಎಂದರೆ, ಉದಾಹರಣೆಗೆ ಹೇಳಬೇಕೆಂದರೆ, ನಿನ್ನೆ ದಿವಸ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದಂತಹ ಮಾನ್ಯ ಸಿದ್ದರಾಮಯ್ಯನವರು ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದರು. ಅಂದರೆ ಇನ್ನೊಂದು ರೀತಿಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದರು ಅಂದರೆ ಈ ಸಂಸ್ಥೆಗೆ ತೊಂದರೆ-ತೊಡುಕು ಆಗುತ್ತಿದೆ, ಆ ಸಂಸ್ಥೆಗೆ ತೊಂದರೆ ಕೊಡಬೇಡಿ ಅದನ್ನು ರದ್ದು ಮಾಡಬೇಡಿ, ಏಕೆಂದರೆ ಅದೊಂದು ಪರಿಶಿಷ್ಟಜಾತಿ ಪಂಗಡಗಳ ಸಂಸ್ಥೆಗಳು ಎಂದು ಅವರಿಗೆ ಏನು ತಿಳಿದಿದೆ ಅದನ್ನು ಅವರು ಹೇಳಿದ್ದಾರೆ. ಸರ್ಕಾರದ ಪರವಾಗಿ ನಾನು ಏನು ಉತ್ತರವನ್ನು ಹೇಳಬೇಕೋ ಅದನ್ನು ಹೇಳಿದ್ದೇನೆ.

ಸಿದ್ದರಾಮಯ್ಯನವರು, ಹಿರಿಯರು ಹಾಗೂ ವಿರೋಧ ಪಕ್ಷದ ನಾಯಕರು ಅವರು ಈ ಸಂಸ್ಥೆಯ ಪರವಾಗಿ ಈ ಬಗ್ಗೆ ಪರಿಶೀಲನೆಯನ್ನು ಮಾಡಿ ಶಿವಮೂರ್ತಿನಾಯಕ್‌ರವರ ಜೊತೆಯಲ್ಲಿ ಮಾತುಕತೆ ಮಾಡಿ ಎಂದು ಕೂಡ ಅವರು ಹೇಳಿದ್ದಾರೆ. ಈ ಎರಡು ವರ್ಷಗಳಲ್ಲಿ ನಾನು ಅವರ ಜೊತೆಯಲ್ಲಿ ಸಾಕಷ್ಟು ಸಲ ಮಾತನಾಡಿದ್ದೇನೆ. ಇದರಲ್ಲಿ ನಾನು ಒಂದು ಮಾತನ್ನು ಸ್ಪಷ್ಟಪಡಿಸಿದ್ದೇನೆ, ಅದೇನೆಂದರೆ ಆಡಳಿತ ಮಂಡಳಿ ಜವಾಬ್ದಾರಿಯುತವಾಗಿ ಕೆಲಸವನ್ನು ಮಾಡಬೇಕು, ಆಡಳಿತ ಮಂಡಳಿ ಶಿಕ್ಷಕರ ಜೊತೆಯಲ್ಲಿ ಸೌಹಾರ್ದಯುತ ಸಂಬಂಧವನ್ನು ಹೊಂದಿರಬೇಕು. ಮತ್ತು ಅವರ ಜೊತೆಯಲ್ಲಿ ಗೌರವಯುತವಾಗಿ ನಡೆದುಕೊಳ್ಳಬೇಕು. ಆದರೆ ನಮಗೆ ಬಂದಿರುವ ವರದಿಗಳ ಪ್ರಕಾರ ಹಾಗೆ ನಡೆಯುತ್ತಿಲ್ಲ, ಅಲ್ಲಿರತಕ್ಕ ಶಿಕ್ಷಕರಿಗೆ ಹೊಡೆಯುವುದು, ಶಿಕ್ಷಕರನ್ನು ಹೇಗೆ ಬೇಕೋ ಹಾಗೇ ನಡೆಸಿಕೊಳ್ಳುವುದು, harassment ಮಾಡುವುದು ಇವೆಲ್ಲ ನಮ್ಮ ಗಮನಕ್ಕೆ ಬಂದಿದೆ. ಆ

ಹಿನ್ನೆಲೆಯಲ್ಲಿಯೇ ಈ ಶಾಲೆಯ ಮಾನ್ಯತೆಯನ್ನು ರದ್ದು ಮಾಡಬೇಕೆಂದು ಆದೇಶ ನೀಡಿರುವುದು. ಅದು ಈ ಹಂತದಲ್ಲಿ ಬೇರೆ ಬೇರೆ ಅಡೆತಡೆಗಳಿಂದ ಕೋರ್ಟ್ ಇತ್ಯಾದಿಗಳಿಂದ ಅಡೆತಡೆಗಳಾಗಿದೆ. ಆದರೆ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದಲೂ ನಮಗೆ ಅಡೆತಡೆಗಳಿವೆ. ಆಡಳಿತ ಮಂಡಳಿ ಮತ್ತು ಶಿಕ್ಷಕರು ಮಾತ್ರವಲ್ಲದೇ ಒಬ್ಬ ಶಿಕ್ಷಣ ಸಚಿವನಾಗಿ ಮಕ್ಕಳ ಭವಿಷ್ಯ ಕೂಡ ನನ್ನ ಜವಾಬ್ದಾರಿಯಾಗಿದೆ. ಆದ್ದರಿಂದ ಈ ಶಿಕ್ಷಣ ಸಂಸ್ಥೆಗೆ ಸೇರಿದ ಮಕ್ಕಳಿಗೆ ಶಿಕ್ಷಣದ ತೊಂದರೆ ತೊಡಕುಗಳಾದಂತೆ ಅವರಿಗೆ ಪರ್ಯಾಯ ವ್ಯವಸ್ಥೆಯನ್ನು ಮಾಡತಕ್ಕ ಜವಾಬ್ದಾರಿಯನ್ನು ಹೊರುತ್ತಾ, ಶಿಕ್ಷಕರಿಗೂ ಸಹ ವೇತನ ನೀಡುವಂತೆ ಕ್ರಮ ಕೈಗೊಳ್ಳಲಾಗುವುದು. ಈ ಸಂಸ್ಥೆ ಮೂಲಭೂತ ಸೌಕರ್ಯಗಳನ್ನು ಕೂಡ ಹೊಂದಿಸಿಕೊಳ್ಳಬೇಕು, ಇಲ್ಲದಿದ್ದರೆ ಈಗಾಗಲೇ ನಾವು ಈ ಶಾಲೆಯ ಮಾನ್ಯತೆಯನ್ನು ರದ್ದು ಮಾಡಲು ಆದೇಶವನ್ನು ಮಾಡಿದ್ದು, ಆ ಪ್ರಕ್ರಿಯೆಯನ್ನು ಮುಂದುವರೆಸಲಾಗುವುದು.

**ಸಭಾಪತಿಯವರು:–** ದಿನಾಂಕ: 26–07–2012 ರಂದು ನಮೋಶಿಯವರು ಶೂನ್ಯವೇಳೆಯಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದರು, ಅದಕ್ಕೆ ಈಗ ಆರೋಗ್ಯ ಸಚಿವರು ಉತ್ತರವನ್ನು ನೀಡುತ್ತಾರೆ.

## 4. ಸಚಿವರ ಹೇಳಿಕೆ

**ಅ)** ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ಮತ್ತು ಚದರಡಿ ರಚಿಸಲಾದ ನಿಯಮಗಳಡಿ ಆಹಾರ ವಸ್ತುಗಳ ವ್ಯವಹಾರ ಮಾಡುವುದಕ್ಕೆ ಲೈಸೆನ್ಸ್ ಪಡೆಯಲು ಸಣ್ಣಪುಟ್ಟ ವ್ಯಾಪಾರಸ್ತರಿಗೆ ಕಾಲಾವಕಾಶ ನೀಡುವ ಕುರಿತು.

**ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಗಳೇ .....

ಆಹಾರ ಸುರಕ್ಷತೆ ಮತ್ತು ಗುಣಮಟ್ಟಗಳ ಕಾಯ್ದೆ, 2006 ಮತ್ತು ಅದರಡಿ ರಚಿಸಲಾಗಿರುವ ನಿಯಮಗಳು ದಿನಾಂಕ 05–08–2011 ರಿಂದ ರಾಷ್ಟ್ರಾದ್ಯಂತ ಜಾರಿಗೆ ಬಂದಿವೆ. ಇದು ಕೇಂದ್ರ ಸರ್ಕಾರದ ಕಾಯ್ದೆಯಾಗಿದೆ.

ಸದರಿ ಕಾಯ್ದೆಯ ಸೆಕ್ಷನ್ 31ರ ಪ್ರಕಾರ, ಆಹಾರ ವಸ್ತುಗಳ ವ್ಯವಹಾರ ಮಾಡಲು ನೊಂದಣಿ ಮತ್ತು ಲೈಸೆನ್ಸ್ ಪಡೆಯುವುದು ಕಡ್ಡಾಯವಾಗಿದೆ. ಸಣ್ಣ ಪುಟ್ಟ ಆಹಾರ ತಯಾರಕರು, ಚಿಲ್ಲರೆ ಮಾರಾಟಗಾರರು ಅಥವಾ ತಾತ್ಕಾಲಿಕವಾಗಿ ಸಣ್ಣ ಶೆಡ್ಡನ್ನು ಹಾಕಿಕೊಂಡು ಆಹಾರ ವಸ್ತುಗಳ ವ್ಯವಹಾರ ಮಾಡುವಂತಹವರು ಇತ್ಯಾದಿ ರವರ ವಾರ್ಷಿಕ ವಹಿದಾಟು ₹ 12.00 ಲಕ್ಷಗಳು ಮೀರದಿದ್ದಲ್ಲಿ, ಸಂಬಂಧಪಟ್ಟ ಪ್ರಾಧಿಕಾರದಲ್ಲಿ ನೊಂದಣಿ ಮಾಡತಕ್ಕದಾಗಿದೆ.

ನೊಂದಣಿ ಹಾಗೂ ಲೈಸೆನ್ಸ್ ನೀಡಲು ಕಾಯ್ದೆಯಡಿ ನಿರ್ಧಿಷ್ಟವಾದ ಶುಲ್ಕಗಳನ್ನು ವ್ಯಾಪಾರಸ್ಥರು ನಡೆಸುವ ವಹಿವಾಟಿನ ಆಧಾರದ ಮೇಲೆ ನಿಗಧಿಪಡಿಸಲಾಗಿದೆ. ಪ್ರತಿ ಜಿಲ್ಲೆಯಲ್ಲಿ ಒಬ್ಬರಂತೆ 30 ಅಂಕಿತ ಅಧಿಕಾರಿಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಡಿ ಒಬ್ಬರು ಅಂಕಿತ ಅಧಿಕಾರಿ ಇದ್ದು, ಅವರು ಈ ಕಾಯ್ದೆಯನ್ವಯ ಲೈಸನ್ಸ್ ನೀಡುವ ಪ್ರಾಧಿಕಾರವಾಗಿದ್ದಾರೆ. ಮುಂದುವರೆದು, ಪ್ರತಿ ತಾಲ್ಲೂಕಿನಲ್ಲಿ ಒಬ್ಬರು ಆಹಾರ ಸುರಕ್ಷತಾಧಿಕಾರಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಡಿ 6 ಆಹಾರ ಸುರಕ್ಷತಾ ಅಧಿಕಾರಿಗಳು ಮತ್ತು 102 ಆರೋಗ್ಯ ಪರಿವೀಕ್ಷಕರು ಇದ್ದು, ಆಹಾರ ಸುರಕ್ಷತಾಧಿಕಾರಿಗಳು ಈ ಕಾಯ್ದೆಯಡಿ ನೊಂದಣಿ ಪ್ರಾಧಿಕಾರವಾಗಿದ್ದಾರೆ. ರಾಜ್ಯದಲ್ಲಿ ಇದುವರೆವಿಗೆ ಸುಮಾರು 12 ಸಾವಿರ ನೊಂದಣಿಗಳನ್ನು ಮಾಡಲಾಗಿದೆ. ಹಾಗೂ ಸುಮಾರು 3500 ಲೈಸೆನ್ಸ್‌ಗಳನ್ನು ಈ ಕಾಯ್ದೆಯಡಿ ನೀಡಲಾಗಿದೆ. ಸದರಿ ಆಹಾರ ಸುರಕ್ಷತಾ ಮತ್ತು ಗುಣಮಟ್ಟಗಳ ಕಾಯ್ದೆಯು ದಿನಾಂಕ: 5–08–2011 ರಂದು ಜಾರಿಗೆ ಬಂದಿದ್ದು, ಅಲ್ಲಿಂದ ಒಂದು ವರ್ಷದ ಅವಧಿಯೊಳಗೆ ಆಹಾರ ವಸ್ತುಗಳ ಮಾರಾಟಗಾರರು ನೊಂದಣಿ ಮಾಡಿ ಲೈಸೆನ್ಸ್ ಪಡೆಯಬೇಕಾಗಿದ್ದು, ದಿನಾಂಕ: 4–08–2012 ಕೊನೆಯ ದಿನಾಂಕವಾಗಿದೆ. ಈ ಬಗ್ಗೆ ದಿನಪತ್ರಿಕೆಗಳಲ್ಲಿ ಪ್ರಕಟಣೆ ಸಹ ನೀಡಲಾಗಿತ್ತು.

ವಿವಿಧ ರಾಜ್ಯಗಳ ನೊಂದಣಿ ಮತ್ತು ಲೈಸೆನ್ಸ್ ಪ್ರಾಧಿಕಾರಗಳ ಬಳಿ ಬಾಕಿ ಇರುವ ಅರ್ಜಿಗಳನ್ನು ಗಣನೆಗೆ ತೆಗೆದುಕೊಂಡು ಭಾರತದ ಆಹಾರ

ಸುರಕ್ಷತೆ ಮತ್ತು ಗುಣಮಟ್ಟಗಳ ಪ್ರಾಧಿಕಾರವು ದಿನಾಂಕ: 25–07–2012 ರಂದು ಒಂದು ಶಾಸನಬದ್ಧ ಸೂಚನೆಯನ್ನು ಪ್ರಕಟಿಸಿದೆ. ಅದರ ಪ್ರಕಾರ, ಆಹಾರ ವಸ್ತುಗಳ ವ್ಯವಹಾರ ಮಾಡುವವರು ನೊಂದಣಿ ಮತ್ತು ಲೈಸೆನ್ಸ್ ಪಡೆಯಲು ದಿನಾಂಕ: 05–08–2012 ರಿಂದ 6 ತಿಂಗಳ ಅವಧಿಯವರೆಗೆ ಕಾಲಾವಕಾಶ ವಿಸ್ತರಿಸಲಾಗಿದೆ.

**ಶ್ರೀ ಶಶಿಲ್ ಜಿ ನಮೋಶಿ:–** ಮಾನ್ಯ ಸಭಾಪತಿಗಳೇ, ಇದರಿಂದ ಸಣ್ಣ ವ್ಯಾಪಾರಿಗಳಿಗೆ ತೊಂದರೆ ಆಗಬಾರದು.

**ಶ್ರೀ ಅರವಿಂದ ಲಿಂಬಾವಳಿ:–** ಮಾನ್ಯ ಸಭಾಪತಿಗಳೇ, ಈಗಷ್ಟೆ ಹಾಲಿನ ಬಗ್ಗೆ ಚರ್ಚೆ ನಡೆಯಿತು. ನಾಳೆ ಬರುವ ಸಣ್ಣಪುಟ್ಟ ತೊಂದರೆ ತಪ್ಪಿಸಲು ಮತ್ತು ಇವುಗಳ ಮೇಲೆ ನಿಯಂತ್ರಣ ಸಾಧಿಸಲು ನೋಂದಣಿ ಅಗತ್ಯವಿದೆ. ನೋಂದಣಿ ಶುಲ್ಕ ಹೆಚ್ಚಿಗೆ ಏನಿಲ್ಲ. ಎಲ್ಲರ ಹಿತದೃಷ್ಟಿಯಿಂದ ಈ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಸರ್ಕಾರ ಕೂಡ ಇದಕ್ಕೆ ಬದ್ಧ ಆಗಿದೆ. ಇದು ಎಷ್ಟು ಶಕ್ತಿಶಾಲಿಯಾಗಿದೆ ಎಂದರೆ ಕೇಸುಗಳನ್ನು ಹಿಯರ್ ಮಾಡಲು ಒಬ್ಬ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಒಂದು ಪ್ರಾಧಿಕಾರವನ್ನು ರಚನೆ ಮಾಡಬೇಕಾಗಿದೆ. ಅಷ್ಟರಮಟ್ಟಿಗೆ ಕೇಂದ್ರಸರ್ಕಾರ ಅನುವು ಮಾಡಿಕೊಟ್ಟಿದೆ. ನಿಯಂತ್ರಣ ಸಾಧಿಸಲು ನಮಗೆ ನೋಂದಣಿ ಮಾಡಲೇಬೇಕಿದೆ. ಕಿರುಕುಳದ ಪ್ರಕರಣಗಳಿದ್ದಲ್ಲಿ ಅವುಗಳನ್ನು ಇತ್ಯರ್ಥಗೊಳಿಸುವ ಕೆಲಸವನ್ನು ಕೂಡ ಮಾಡಲಾಗುವುದು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಗಳೇ, ನಾನು ಶೂನ್ಯವೇಳೆಯಲ್ಲಿ ಒಂದು ವಿಚಾರವನ್ನು ಪ್ರಸ್ತಾಪಿಸಲು ತಮಗೆ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೆನು.

**ಸಭಾಪತಿಯವರು:–** ಅದನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಆಗುವುದಿಲ್ಲ. ಬೇರೆ ನಿಯಮಗಳಡಿಯಲ್ಲಿ ಚರ್ಚೆಗೆ ಅವಕಾಶ ಕೇಳಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಗಳೇ, ನಾನು ಯಾವ ಸಂದರ್ಭದಲ್ಲಿ ಆ ವಿಚಾರವನ್ನು ತಮಗೆ ಕಳುಹಿಸಿದ್ದೇನೆಂದರೆ....

**ಸಭಾಪತಿಯವರು:–** ಇಲ್ಲಿ ವಾದ ಬೇಡ. ನನ್ನ ಕಚೇರಿಗೆ ಬಂದು ಇದರ ಬಗ್ಗೆ ಚರ್ಚೆಯನ್ನು ಮಾಡಿ, ಅಲ್ಲಿ ಇದರ ಬಗ್ಗೆ ತೀರ್ಮಾನ ಕೈಗೊಳ್ಳೋಣ.

**ಆ)** ಕೆ.ಜಿ.ಎಫ್ ನಗರದ ರಿಮ್ಯಾಂಡ್ ಹೋಂನಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ.

**ಶ್ರೀ ಕಳಕಪ್ಪ ಬಂಡಿ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಗಳೇ,

ಕೆ.ಜಿ.ಎಫ್ ನಗರದಲ್ಲಿರುವ ಬಾಲಕಿಯರ ಬಾಲ ಮುಂದಿರ (ಪ್ರೌಢವಸ್ಥೆಯಲ್ಲಿ ದೌರ್ಜನ್ಯಕ್ಕೊಳಪಟ್ಟ ಮಕ್ಕಳ ಕೇಂದ್ರ) ಇದು ಬಾಲಾನ್ಯಾಯ ಕಾಯ್ದೆ, 2000 ಮತ್ತು ತಿದ್ದುಪಡಿ, 2006 ರ ಅಧಿನಿಯಮದಲ್ಲಿ ಕೆಲಸ ನಿರ್ವಹಿಸುತ್ತಿದೆ. ಅದರಂತೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯು ಕಾರ್ಯನಿರ್ವಹಿಸುತ್ತಿದ್ದು, ಮಕ್ಕಳ ಕಲ್ಯಾಣ ಸಮಿತಿಯ ನಿರ್ದೇಶನದಂತೆ ಪಾಲನೆ ಮತ್ತು ಪೋಷಣೆಯ ಅಗತ್ಯವಿರುವ ಮಕ್ಕಳಿಗೆ ಇಲ್ಲಿ ವಸತಿ, ಶಿಕ್ಷಣ ಮತ್ತು ಪುನರ್ವಸತಿ ಒದಗಿಸಲು ಸಂಸ್ಥೆಗೆ ದಾಖಲು ಮಾಡಲಾಗುತ್ತಿದೆ. ಸಂಸ್ಥೆಗೆ 75 ಮಕ್ಕಳನ್ನು ಇಟ್ಟುಕೊಳ್ಳಲು ಮಂಜೂರಾತಿ ಇದ್ದು ಒಟ್ಟು 6 ಜನ ಸಿಬ್ಬಂದಿಯನ್ನು ಮಂಜೂರಾತಿ ನೀಡಲಾಗಿದೆ. ಸಂಸ್ಥೆಯ ಮುಖ್ಯಸ್ಥರ ಹುದ್ದೆ ಮತ್ತು ಪರಿವೀಕ್ಷಣಾಧಿಕಾರಿಗಳ ದರ್ಜೆ–II ಹುದ್ದೆಗಳು ಖಾಲಿ ಇರುತ್ತವೆ. ಗೃಹಪಾಲಕರ 2 ಹುದ್ದೆಯಲ್ಲಿ 1 ಒಂದು ಹುದ್ದೆಯನ್ನು ಮಾತ್ರ ತುಂಬಲಾಗಿರುತ್ತದೆ. ರಕ್ಷಕರನ್ನು ಬಾಹ್ಯ ಮೂಲದಿಂದ ನೇಮಕ ಮಾಡಲಾಗಿದ್ದು, ದಿನಾಂಕ: 19–7–2012 ಹಾಗೂ 20–07–2012ರಂದು ಅವರು ಕೆಲಸ ನಿರ್ವಹಿಸುತ್ತಿರಲಿಲ್ಲ. ಒಬ್ಬ ಅಡಿಗೆಯವರು ಹಾಗೂ ಒಬ್ಬ ಸ್ವೀಪರ್ ಮಾತ್ರ ಪೂರ್ಣವಾಗಿ ಕೆಲಸದಲ್ಲಿರುತ್ತಾರೆ. ಅಧೀಕ್ಷಕರ ಹುದ್ದೆಯಲ್ಲಿ ಶ್ರೀಮತಿ ರುಕ್ಮಿಣಿ PO-II ಬಾಲಕರ ಬಾಲ ಮಂದಿರ ಕೆ.ಜಿ.ಎಫ್. ಇವರು ಹೆಚ್ಚುವರಿ ಪ್ರಭಾರದಲ್ಲಿದ್ದು, ದಿನನಿತ್ಯದ ಆಡಳಿತಾತ್ಮಕ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾರೆ.

ಅಧೀಕ್ಷಕರ ಹೇಳಿಕೆಯ ಪ್ರಕಾರ ದಿನಾಂಕ: 19–07–2012 ರಂದು 15 ಹುಡುಗಿಯರು ಸಂಸ್ಥೆಯಲ್ಲಿ ಹಾಜರಿದ್ದು, ಅವರಲ್ಲಿ 10 ಜನ ಹುಡುಗಿಯರು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಬಂದು ನಮ್ಮನ್ನು ಸಂಸ್ಥೆಯಿಂದ ಹೊರಗೆ ಹೋಗಲು ಮುಕ್ತ ಅವಕಾಶ ಕೊಡಬೇಕೆಂದು ಕೋರಿಕೊಂಡಿದ್ದು, ಆಗ ಮಕ್ಕಳ ಕಲ್ಯಾಣ ಸಮಿತಿಯವರು ಸಂಸ್ಥೆಯ ಸಿಬ್ಬಂದಿ ಜೊತೆಯಲ್ಲಿ ಹೋಗಿ ಬನ್ನಿ ಎಂದು ಹೇಳಿದರೆಂದು ಆದರೆ ಆ ಹುಡುಗಿಯರು ಅವರ ಮಾತುಗಳನ್ನು ಕೇಳದೆ ತಮ್ಮ ಸಂಸ್ಥೆಗೆ ಬಾಗಿಲು ಹಾಕಬಾರದು ಮತ್ತು ನಮ್ಮನ್ನು ಸ್ವತಂತ್ರವಾಗಿ ಬಿಡಿ ಎಂದು ಸಮಿತಿಯ ಮುಂದೆ ಗಲಾಟೆ ಮಾಡಿ ವಸ್ತುಗಳನ್ನು ನಾಶ ಪಡಿಸಿದರೆಂದು ತಿಳಿಸಿರುತ್ತಾರೆ. ಹಾಗೂ ಅವರ ಜೊತೆ ಸೇರದ ಸಮಿತಿಯ ಕೊಠಡಿಯಲ್ಲಿ ಕುಳಿತುಕೊಂಡಿದ್ದ ಕವಿತ ಮತ್ತು ಶೋಭಾ ಎಂಬ ಬಾಲಕಿಯರಿಗೆ ದೀಪಶ್ರೀ ಎಂಬ ಹುಡುಗಿಯು ಕೈಯಲ್ಲಿ ಚಾಕುವನ್ನು ಹಿಡಿದುಕೊಂಡು ಅವರನ್ನು ಕೊಲೆ ಮಾಡುತ್ತೇನೆಂದು ಬೆದರಿಕೆ ಹಾಕಿರುತ್ತಾಳೆ ಎಂದು ತಿಳಿಸಿರುತ್ತಾರೆ. ಈ ಗಲಾಟೆಯಲ್ಲಿ 10 ಹುಡುಗಿಯರು ಸೇರಿಕೊಂಡು ಸಂಸ್ಥೆಯ ಎಲ್ಲ ಸಾಮಾನುಗಳನ್ನು ಹಾಗೂ ಬಾಲಕಿಯರಿಂದ ಪಡೆದ ನಗ ನಾಣ್ಯಗಳಿರುವ ಆಲ್ಮೆರವನ್ನು ಒಡೆದು ಅವುಗಳನ್ನು ದೋಚಿರುತ್ತಾರೆ. ತಡೆಯಲು ಬಂದ ಸಿಬ್ಬಂದಿಯ ಮೇಲೆ ಗಲಾಟೆ ಮಾಡಿ ಅವ್ಯಾಚ್ಯ ಶಬ್ದಗಳಿಂದ ಬೈದು ಸಂಸ್ಥೆಯ ಹೊರಗಡೆ ಬಂದು ಸಂಸ್ಥೆಯ ಒಳಗೆ ಮತ್ತು ಸುತ್ತಮುತ್ತಲ್ಲಿನ ಸಾರ್ವಜನಿಕರ ವಸತಿಗಳ ಮೇಲೆಯು ಕಲ್ಲು ತುರಾಟ ಮಾಡಿರುವುದಾಗಿಯು ತಿಳಿಸಿರುತ್ತಾರೆ. ಹಾಗೂ ರಾತ್ರಿಯಿಡಿ ಹುಡುಗಿಯರನ್ನು ಸಮಾಧಾನಪಡಿಸಲು ಸಿಬ್ಬಂದಿಗಳು, ಮಕ್ಕಳ ಕಲ್ಯಾಣ ಸಮಿತಿಯವರು ಹಾಗೂ ಪೊಲೀಸರು ಹರ ಸಾಹಸ ನಡೆಸಿದರು, ಮಕ್ಕಳು ಒಪ್ಪದೆ ಸಂಸ್ಥೆಯಲ್ಲಿ ತಯಾರಿಸಿದ ಆಹಾರ ಪದಾರ್ಥಗಳನ್ನು ಹಾಳು ಮಾಡಿರುತ್ತಾರೆ.

ಜಿಲ್ಲಾ ಮಟ್ಟದ ಅಧಿಕಾರಿಗಳು ಆ ಸಮಯದಲ್ಲಿ ಹಾಜರಿದ್ದು, ಗಲಾಟೆಯಲ್ಲಿ ಸೇರಿಕೊಳ್ಳದ ಮಕ್ಕಳನ್ನು ಸುರಕ್ಷಿತವಾಗಿರಿಸಿ, ಗಾಯಗೊಂಡ ಮಕ್ಕಳನ್ನು ಆಸ್ಪತ್ರಗೆ ದಾಖಲಿಸಿರುತ್ತಾರೆ. ದಿನಾಂಕ: 20–7–2012 ರಂದು ಬೆಳಿಗ್ಗೆ ಜಿಲ್ಲಾ ಪೊಲೀಸ್ ವರಷ್ಠಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ

ಕಾರ್ಯ ನಿರ್ವಾಹಣಾಧಿಕಾರಿಗಳು ಹಾಗೂ ಕೇಂದ್ರ ಕಛೇರಿಯ ಅಧಿಕಾರಿಗಳು ಭೇಟಿ ನೀಡಿ ಸಿಬ್ಬಂದಿ ಮತ್ತು ಬಾಲಕಿಯರನ್ನು ವಿಚಾರಿಸಿ, ಅವರನ್ನು ಸಮಾಧಾನಪಡಿಸಿ ಹಾಗೂ ಅವರ ಬೇಡಿಕೆಗಳ ಬಗ್ಗೆ ಪರಿಶೀಲಿಸುವುದಾಗಿ ತಿಳಿಸಿದಾಗ್ಯೂ ಅವರು ತಮ್ಮ ಹಿಂದಿನ ದಿನದ ಕೃತ್ಯಗಳನ್ನು ಪುನರಾವರ್ತಿಸಿರುತ್ತಾರೆ ಹಾಗೂ ಗಲಾಟೆ ಮಾಡಿ ಮಧ್ಯಾಹ್ನ 3 ಗಂಟೆಗೆ 10 ಹುಡುಗಿಯರು ಸಂಸ್ಥೆಯ ಆವರಣದಿಂದ ಓಡಿ ಹೋಗಿರುತ್ತಾರೆ. ಅವರಲ್ಲಿ 4 ಜನರನ್ನು ಪೊಲೀಸರು ಪತ್ತೆ ಹಚ್ಚಿ ಬಾಲನ್ಯಾಯ ಮಂಡಳಿಯ ಮುಂದೆ ಹಾಜರುಪಡಿಸಿ, 10 ಜನರ ಮೇಲೆ ಎಫ್.ಐ.ಆರ್. ದಾಖಲಿಸಿರುತ್ತಾರೆ. ಎಫ್.ಐ.ಆರ್. ಪರಿಶೀಲಿಸಿ ಅದರ ಆಧಾರದ ಮೇಲೆ ಈ ಹುಡುಗಿಯರು ಒಂದೇ ಕಡೆ ಇರುವುದು ಬಾಲಕಿಯರ ಹಿತದೃಷ್ಟಿಯಿಂದ ಸೂಕ್ತವಲ್ಲ ಎಂದು ಪರಿಗಣಿಸಿ ಬಾಲನ್ಯಾಯ ಮಂಡಳಿಯ ಅಧ್ಯಕ್ಷರು (ಪ್ರಿನ್ಸಿಪಲ್ ಸೀನಿಯರ್ ಸಿವಿಲ್ ಜಡ್ಜ್ ಮತ್ತು ಪ್ರಿನ್ಸಿಪಲ್, ಜೆ.ಹೆಚ್.ಎಂ.ಸಿ, ಕೆ.ಜಿ.ಎಫ್) ಈ ಬಾಲಕಿಯರನ್ನು ರಾಜ್ಯದಲ್ಲಿರುವ ಇನ್ನಿತರ ಬಾಲಮಂದಿರಗಳಿಗೆ ವರ್ಗಾವಣೆ ಮಾಡಿರುತ್ತಾರೆ. ದಿನಾಂಕ:21–7–2012 ರಂದು ಪತ್ತೆ ಮಾಡಿದ ಉಳಿದ 6 ಹುಡುಗಿಯರನ್ನು ಸಹ ವರ್ಗಾವಣೆ ಮಾಡಿದ್ದು, ಪೊಲೀಸ್ ಬೆಂಗಾವಲಿನೊಂದಿಗೆ ವರ್ಗಾವಣೆ ಮಾಡಿ ಇತರೆ ಸಂಸ್ಥೆಗಳಿಗೆ ಕಳುಹಿಸಿರುತ್ತಾರೆ.

**ದಿನಾಂಕ:23–7–2012 ರಂದು ನಾನು ಈ ಸ್ಥಳಕ್ಕೆ ಭೇಟಿ ನೀಡಿ ಇಲಾಖಾ ಅಧಿಕಾರಿಗಳನ್ನು, ಸಂಸ್ಥೆಯಲ್ಲಿದ್ದ ಉಳಿದ ಮಕ್ಕಳನ್ನು, ಪೊಲೀಸರನ್ನು ಮತ್ತು ಸಾರ್ವಜನಿಕರನ್ನು ಈ ಘಟನೆಯ ಬಗ್ಗೆ ವಿಚಾರಿಸಿ, ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿ ಈ ಘಟನೆಯ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವಂತೆ ತಿಳಿಸಿರುತ್ತೇನೆ.**

ರಾಜ್ಯದೆಲ್ಲೆಡೆ ಈ ತೆರನಾದ ಸಂಸ್ಥೆಗಳಲ್ಲಿ ಒಟ್ಟು 394 ವಿವಿಧ ಹುದ್ದೆಗಳು ಖಾಲಿ ಇದ್ದು, ಈ ಹುದ್ದೆಗಳನ್ನು ತುಂಬಲು ಅವಶ್ಯ ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ ಇನ್ನು ಮುಂದೆ ರಾಜ್ಯದ ಯಾವುದೇ

ಸಂಸ್ಥೆಗಳಲ್ಲಿ ಈ ತೆರನಾದ ಘಟನೆಗಳು ಮರುಕಳಿಸದಂತೆ ಸೂಕ್ತ ಕ್ರಮವನ್ನು ವಹಿಸಲಾಗುವುದು.

ಇ) ನೆಮ್ಮದಿ ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿರುವವರ ಬಗ್ಗೆ.

**ಶ್ರೀ ವಿ. ಸೋಮಣ್ಣ(ಸಭಾನಾಯಕರು)(ಕೆ.ಎಸ್.ಈಶ್ವರಪ್ಪ, ಉಪ ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಗಳೇ,

ಸಾರ್ವಜನಿಕರಿಗೆ ಅಗತ್ಯವಾದ ಸೇವೆಗಳನ್ನು ಸೂಕ್ತ ಹಾಗೂ ಪರಿಣಾಮಕಾರಿಯಾದ ರೀತಿಯಲ್ಲಿ ಒದಗಿಸುವ ದೃಷ್ಟಿಯಿಂದ ಸರ್ಕಾರ ನೆಮ್ಮದಿ ಯೋಜನೆಯನ್ನು 2006ರಲ್ಲಿ ಜಾರಿಗೆ ತರಲಾಗಿದ್ದು, ಯೋಜನೆಯನ್ನು ಖಾಸಗಿ ಪಾಲುದಾರರ ಸಹಭಾಗಿತ್ವದೊಂದಿಗೆ ಅನುಷ್ಠಾನಗೊಳಿಸಲಾಗಿರುತ್ತದೆ.

ಸದರಿ ಒಪ್ಪಂದದ ಪ್ರಕಾರ ನೆಮ್ಮದಿ ಕೇಂದ್ರದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳನ್ನು ಸರ್ಕಾರ ನೇಮಕಾತಿಗೊಳಿಸಿರುವುದಿಲ್ಲ. ನೆಮ್ಮದಿ ಯೋಜನೆಯ RFP ಯಲ್ಲಿನ ನಿಬಂಧನೆಗಳಂತೆ, ಖಾಸಗಿ ಪಾಲುದಾರರು ನೆಮ್ಮದಿ ಯೋಜನೆಗಾಗಿ ತೊಡಗಿಸಿಕೊಳ್ಳುವ ಅಪರೇಟರ್‌ಗಳು ಕೇವಲ ಖಾಸಗಿ ಸಂಸ್ಥೆಯ ನೌಕರರೇ ಹೊರತು ಸರ್ಕಾರಿ ನೌಕರರಲ್ಲ. ಆದ್ದರಿಂದ ನೆಮ್ಮದಿ ಕೇಂದ್ರಗಳ ಅಪರೇಟರ್‌ಗಳ ಉದ್ಯೋಗ ಭದ್ರತೆ ಮತ್ತು ಅವರಿಗೆ ವೇತನ ಮತ್ತು ಇತರೆ ಸೌಲಭ್ಯಗಳನ್ನು ನೀಡುವ ವಿಷಯವು ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲ. ಸುತ್ತೋಲೆಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

**(ಈ)** ಶಿಕ್ಷಕರ ವರ್ಗಾವಣೆಗಳಾಗಿದ್ದರೂ ಸಹ ಕರ್ತವ್ಯದಿಂದ ಬಿಡುಗಡೆ ವಿಳಂಬ ಆಗುತ್ತಿರುವ ಬಗ್ಗೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:-** ಮಾನ್ಯ ಸಭಾಪತಿಯವರೆ, ಶ್ರೀಯುತ ಅರುಣಾಶಹಾಪುರ ರವರು ಶೂನ್ಯವೇಳೆಯಲ್ಲಿ ಶಿಕ್ಷಕರ ವಗಾವಣೆಗಳಾಗಿದ್ದರೂ ಸಹ ಅವರಿಗೆ ಹಿಂದಿನ ಶಾಲೆಯಿಂದ ಬಿಡುಗಡೆಗೆ ವಿಳಂಬ ಆಗುತ್ತಿರುವ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದಾರೆ. ತೀವ್ರವಾಗಿ 1:30 ಶಿಕ್ಷಕರ ಕೊರತೆ ಇರುವ

ಕಡೆಗಳಲ್ಲಿ ಶಿಕ್ಷಕರನ್ನು ಬಿಡುಗಡೆಗೊಳಿಸ ಬಾರದೆಂದು ಎಸ್.ಡಿ.ಎಂ.ಸಿಯವರು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಯವರು ತೀರ್ಮಾನವನ್ನು ಮಾಡಿ ಕೆಲವು ಕಡೆಗಳಲ್ಲಿ ಶಿಕ್ಷಕರ ಬಿಡುಗಡೆಗೆ ತೊಂದರೆ ಆಗುತ್ತಿರುವುದು ನನ್ನ ಗಮನಕ್ಕೂ ಸಹ ಬಂದಿದೆ. ಅವರುಗಳು ಕಾನೂನಿನ ಪ್ರಕಾರ ವರ್ಗಾವಣೆಯನ್ನು ಹೊಂದಿರುವ ಹಿನ್ನಲೆಯಲ್ಲಿ ಅವರನ್ನು ಬಿಡುಗಡೆ ಮಾಡಲೇಬೇಕಾಗುತ್ತದೆ. ಖಾಲಿ ಇರತಕ್ಕ ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕೆನ್ನುವ ಬಗ್ಗೆ ವಿಧಾನಸಭೆಯಲ್ಲಿ ಬಹಳ ಸುದೀರ್ಘವಾಗಿ ನಡೆದಿದೆ. ಹೈಸ್ಕೂಲುಗಳಲ್ಲಿ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಹಾಗೆ ಪ್ರಾಥಮಿಕ ಶಾಲೆಗಳಲ್ಲೂ ಸಹ ಅತಿಥಿ ನೇಮಕ ಮಾಡಿಕೊಂಡರೆ, ಶಿಕ್ಷಕರ ವರ್ಗಾವಣೆಗೊಂಡಿರುವ ಶಿಕ್ಷಕರನ್ನು ಬಿಡುಗಡೆಗೊಳಿಸುವುದರಿಂದ ಏನೂ ತೊಂದರೆ ಆಗುವುದಿಲ್ಲ. ಅಲ್ಲಿ ಮತ್ತೊಬ್ಬರು ಶಿಕ್ಷಕರು ಬಂದಾಗ ಮಾತ್ರ ಇವರನ್ನು ಬಿಡುಗಡೆಗೊಳಿಸುವುದಾಗಿ ಹೇಳುತ್ತಿದ್ದಾರೆ. ಅದರ ವ್ಯವಸ್ಥೆಯೂ ಈಗ ಆಗುತ್ತಿರುವುದರಿಂದ ಎಲ್ಲಾದರೂ ಈ ರೀತಿಯ ವಿಳಂಬ ಆಗುತ್ತಿರುವ ಪ್ರಕರಣಗಳಿದ್ದರೆ ಅಲ್ಲಿಗೆ ಅತಿಥಿ ಶಿಕ್ಷಕರನ್ನು ನೇಮಿಸುವ ನಿರ್ಣಯ ಸರ್ಕಾರದಲ್ಲಿ ಆಗುತ್ತಿದೆ. ನಂತರ ವರ್ಗಾವಣೆಗೊಂಡಿರುವ ಶಿಕ್ಷಕರಿಗೂ ಸಹ ಇದರಿಂದ ಅನುಕೂಲವಾಗುತ್ತದೆ.

**(ಈ ಹಂತದಲ್ಲಿ ಮಾನ್ಯ ಉಪಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಸಭಾಪತಿಯವರು:-** ನಮ್ಮ ಸದನಕ್ಕೆ ಹೊಸದಾಗಿ ಸದಸ್ಯರಾಗಿ ಬಂದಿರುವ ಶ್ರೀ ಕೆ.ಗೋವಿಂದರಾಜುರವರು ಒಂದು ಗಮನಸೆಳೆಯುವ ಸೂಚನೆಯನ್ನು ನೀಡಿದ್ದಾರೆ, ಇದು ನಮಗೆಲ್ಲರಿಗೂ ಸಂತಸ ತರತಕ್ಕ ಸಂಗತಿ. ಅವರಿಗೆ ಸ್ವಾಗತವನ್ನು ಕೋರುತ್ತಾ, ಗಮನ ಸೆಳೆಯಲು ಅವಕಾಶ ನೀಡುತ್ತಿದ್ದೇನೆ.

## 5. ಗಮನ ಸೆಳೆಯುವ ಸೂಚನೆಗಳು

**ಅ)** ಕರ್ನಾಟಕ ಕ್ರೀಡಾ ಪ್ರಾಧಿಕಾರವು ತನ್ನ ಆಡಳಿತ ಚಟುವಟಿಕೆಗಳನ್ನು ಸಮರ್ಪಕವಾಗಿ ನಿರ್ವಹಿಸದಿರುವ ಹಾಗೂ ಕ್ರೀಡೆ ಮತ್ತು ಕ್ರೀಡಾಪಟುಗಳಿಗೆ ಉತ್ತೇಜನ ನೀಡುವಲ್ಲಿ ಸಂಪೂರ್ಣ ವಿಫಲವಾಗಿರುವ ಬಗ್ಗೆ.

**ಶ್ರೀ ಕೆ.ಗೋವಿಂದರಾಜು(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇದು ನಿಜವಾಗಿ ಕೂಡ ಸಂತಸ ತರತಕ್ಕ ಸಂಗತಿ. ಇವತ್ತು ಲಂಡನ್‌ನಲ್ಲಿ ಒಲಂಪಿಕ್ ಕ್ರೀಡೆಗಳ ಉದ್ಘಾಟನೆ ನಡೆಯುತ್ತಿದೆ. ಅಂತಹ ದಿವಸ ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ರಾಜ್ಯದಲ್ಲಿ ಕ್ರೀಡೆಗಳನ್ನು ಮತ್ತು ಕ್ರೀಡಾಪಟುಗಳನ್ನು ಉತ್ತೇಜಿಸುವ, ಹಾಗೂ ಕ್ರೀಡೆಗಳನ್ನು ಮತ್ತಷ್ಟು ಸ್ಪರ್ಧಾತ್ಮಕವಾಗಿ ಮಾಡಲು ಗಣನೀಯ ಬದಲಾವಣೆಗಳನ್ನು ತರುವ ನಿಟ್ಟಿನಲ್ಲಿ ಒಂದು ಶಿಸ್ತುಬದ್ಧ ಸಂಸ್ಥೆಯ ಅವಶ್ಯಕತೆ ಇದೆ. ಇದನ್ನು ಮನಗಂಡು ಸರ್ಕಾರವು ಕರ್ನಾಟಕ ಕ್ರೀಡಾ ಪ್ರಾಧಿಕಾರವನ್ನು ರಚನೆ ಮಾಡಿದೆ. ಆದರೆ ಕ್ರೀಡೆಗಳನ್ನು ಮತ್ತು ಕ್ರೀಡಾಪಟುಗಳನ್ನು ಆಯೋಜಿಸುವ ನಿಟ್ಟಿನಲ್ಲಿ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಮತ್ತು ಕಾಮಗಾರಿಗಳನ್ನು ನಿರ್ವಹಿಸುವಲ್ಲಿ ಪ್ರಾಧಿಕಾರವು ವಿಫಲಗೊಂಡಿರುವುದನ್ನು ಕಾಣುತ್ತಿದ್ದೇವೆ. ನಿಯಮಾನುಸಾರ ನಡೆಯಬೇಕಿದ್ದ ಸಂಸ್ಥೆಯ ಹಣಕಾಸು ನಿರ್ವಹಣೆ ಪರಿಣತಿ ಇಲ್ಲದ ಸಿಬ್ಬಂದಿ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸಲು ನೀಡಿರುವ ಅವಕಾಶ, ವಾರ್ಷಿಕ ಸಾಮಾನ್ಯ ಸಭೆಯಂತಹ ಚಟುವಟಿಕೆ ಸಹ ನಡೆಯದೇ ಇರುವುದು ಅನುಮಾನಕ್ಕೆ ಕಾರಣವಾಗಿದೆ. ಒಂದು ನೋಂದಾಯಿತ ಕ್ರೀಡಾ ಸಂಸ್ಥೆಯಾಗಿ ತನ್ನ ಚಟುವಟಿಕೆಗಳನ್ನು ಪಾರದರ್ಶಕವಾಗಿ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಕ್ರೀಡಾಪಟುಗಳ ಉತ್ತೇಜನವೂ ಸಂಪೂರ್ಣವಾಗಿ ವಿಫಲವಾಗಿರುವ ಸಾರ್ವಜನಿಕ ಮಹತ್ವದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಒಳ್ಳೆಯ ಕ್ರೀಡಾ ಸಚಿವರನ್ನು ಕೊಟ್ಟಿರುವುದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತಿದ್ದೇನೆ. ಮಾನ್ಯ ಸಚಿವರಿಗೆ ನಿಜವಾಗಿಯೂ ಕ್ರೀಡೆಯ ಬಗ್ಗೆ ಆಸಕ್ತಿ ಇದೆ. ಆದರೆ, ಅಧಿಕಾರಿಗಳು

ಅವರನ್ನು ದಿಕ್ಕು ತಪ್ಪಿಸುತ್ತಿದ್ದಾರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ, 'ಕ್ರೀಡಾಪಟುಗಳ ರೈಲ್ವೆ ಪ್ರಯಾಣದರ, ದಿನಭತ್ಯೆ, ಪ್ರವೇಶ ಶುಲ್ಕ, ಕ್ರೀಡಾಪಟುಗಳಿಗೆ ಕಿಟ್ ಇತ್ಯಾದಿ ಬಾಬ್ತು ಹಾಗೂ ಈ ಸಂಬಂಧ ನಡೆಸುವ ಪೂರ್ವಭಾವಿ ತರಬೇತಿ ಶಿಬಿರಗಳಿಗೆ ಆಯಾ ರಾಜ್ಯ ಕ್ರೀಡಾ ಸಂಸ್ಥೆಗಳಿಗೆ ಅನುದಾನ ಬಿಡುಗಡೆ' ಎಂದು ಹೇಳಿದ್ದಾರೆ. ಆದರೆ, ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಎನ್ನುವ ವಿವರವನ್ನು ನೀಡಿಲ್ಲ. ಈ ಇಲಾಖೆ 1960ರಲ್ಲಿ ಪ್ರಾರಂಭವಾಗಿದೆ. ಅವತ್ತಿನ ದಿವಸ ಈ ಇಲಾಖೆಗೆ ಸನ್ಮಾನ್ಯ ಜೋಗೇಂದ್ರ ಸಿಂಗ್ ಎನ್ನುವ ಐ.ಪಿ.ಎಸ್. ಅಧಿಕಾರಿ ನೇಮಕಗೊಂಡಿದ್ದರು. ಬಹುಶಃ ಬಹಳಷ್ಟು ಜನರಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಇಲ್ಲಿಯವರೆಗೆ ಅಂತಹ ಒಳ್ಳೆಯ ಅಧಿಕಾರಿ ಯಾರೂ ಬರಲೇ ಇಲ್ಲ. ಬೆಂಗಳೂರಿನಲ್ಲಿರುವ ರವೀಂದ್ರ ಕಲಾಕ್ಷೇತ್ರ ಗುರುನಾನಕ್ ಭವನ ಮತ್ತು ಯವನಿಕ ಇವು ಜೋಗೇಂದ್ರ ಸಿಂಗ್‌ರವರ ಕೊಡಗೆ ಆಗಿದೆ. ಇಂತಹ ಒಳ್ಳೆಯ ಕೆಲಸ ಮಾಡಿರುವಂತಹ ಅಧಿಕಾರಿಗಳ ಸಂಖ್ಯೆ ಕೇವಲ ಬೆರಳೆಣಿಕೆಯಷ್ಟು ಮಾತ್ರ ಎಂದು ಹೇಳಬಹುದು. ಅವರು ಕ್ರೀಡಾ ಇಲಾಖೆಗೆ ಒಂದು ಒಳ್ಳೆಯ ತಳಪಾಯವನ್ನು ಹಾಕಿಕೊಟ್ಟರು. ಈ ಇಲಾಖೆ 1960 ರಲ್ಲಿ ಪ್ರಾರಂಭಗೊಂಡರೂ ಇಲ್ಲಿಯವೆರೆಗೆ ಅಭಿವೃದ್ಧಿ ಹೊಂದಲೇ ಇಲ್ಲ. ಅಲ್ಲಿರುವಂತಹ ಭ್ರಷ್ಟಾಚಾರ ಮತ್ತು ರಾಜಕೀಯ ಇದಕ್ಕೆ ಕಾರಣವಾಗಿದೆ. ಒಳ್ಳೆಯ ಮಂತ್ರಿ ಬಂದಾಗ ಒಳ್ಳೆಯ ಅಧಿಕಾರಿ ಇರುವುದಿಲ್ಲ, ಒಳ್ಳೆಯ ಅಧಿಕಾರಿ ಇದ್ದಾಗ ಮಂತ್ರಿಗಳಿಗೆ ಆಸಕ್ತಿ ಇರುವುದಿಲ್ಲ. ಈ ಇಲಾಖೆಗೆ ಬಜೆಟ್ ಇಲ್ಲ, ಇದೊಂದು ಕಡೆಗಾಣಿಸಲ್ಪಟ್ಟಿರುವ ಇಲಾಖೆ ಎನ್ನುವ ರೀತಿಯಲ್ಲಿ ಪರಿಗಣಿಸಲಾಗುತ್ತಿದೆ. ಕ್ರೀಡೆ ಎಂದರೆ ನಿರ್ಲಕ್ಷಿತ ಕ್ಷೇತ್ರ ಎನ್ನುವಂತಹ ಭಾವನೆ ಬಂದು ಬಿಟ್ಟಿದೆ. 'ಬಜೆಟ್ ಇಲ್ಲ ಕೊಡಿ' ಎಂದು ಯಾರಾನ್ನಾದರೂ ಕೇಳಿದರೆ, 'ಆಯಿತು ಮಾಡುತ್ತೇವೆ' ಎನ್ನುವಂತಹ ಉತ್ತರವನ್ನು ನೀಡುತ್ತಾರೆ. ನಾವು ಕಾರಿಡಾರ್‌ನಲ್ಲಿ ಹೋಗುತ್ತಿದ್ದರೆ 'ಏನಪ್ಪಾ ಒಲಂಪಿಕ್ಸ್‌ನಲ್ಲಿ ಮೆಡಲ್ ಬರುತ್ತದೆಯೇ? ಎಂದು ಕೇಳುತ್ತಾರೆ. ನಮಗೆ ಹೇಳುವುದಕ್ಕೆ

ನಾಚಿಕೆಯಾಗುತ್ತದೆ. ಇಲ್ಲಿರುವಂತಹ ಮೂಲಭೂತ ಕೊರತೆಗಳ ಬಗ್ಗೆ ಯಾರೂ ಯೋಚನೆ ಮಾಡುವುದಿಲ್ಲ. ಇಷ್ಟು ದೊಡ್ಡ ರಾಜ್ಯದಲ್ಲಿ ಇರುವಂತಹ ಕ್ರೀಡಾಪಟುಗಳ ಸಾಮರ್ಥ್ಯವನ್ನು ಯಾರೂ ಕೂಡ ಅರ್ಥ ಮಾಡಿಕೊಂಡಿಲ್ಲ. ಅವರಿಗೆ ಬೇಕಾಗಿರುವಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರಲ್ಲಿ ಪ್ರತಿಯೊಂದು ಸರ್ಕಾರವೂ ವಿಫಲಗೊಂಡಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈಗ ಇರುವಂತಹ ಮೂಲಭೂತ ಸೌಕರ್ಯಗಳು ಯಾವ ಲೆಕ್ಕಕ್ಕೂ ಇಲ್ಲ. ಅಂತರಾಷ್ಟ್ರೀಯ ಮಟ್ಟದ ಈಜುಕೊಳ ನಮ್ಮ ರಾಜ್ಯದಲ್ಲಿ ಇಲ್ಲ. Weather control ನಂತಹ ಈಜುಕೊಳವನ್ನು ನಿರ್ಮಾಣ ಮಾಡುವುದರಲ್ಲಿ ನಾವು ಅಸಮರ್ಥರಾಗಿದ್ದೇವೆ. ಜಪಾನ್ ಮತ್ತು ಚೀನಾ ದೇಶಗಳಲ್ಲಿ ಒಂದು ಸಣ್ಣ ಸಣ್ಣ ನಗರಗಳಲ್ಲಿ weather control ನಂತಹ ಅಂತರರಾಷ್ಟ್ರೀಯ ಮಟ್ಟದ ಮೂರು ನಾಲ್ಕು ಈಜುಕೊಳಗಳು ಇರುತ್ತವೆ. ನಮ್ಮ ಇಲಾಖೆಯವರು ರಾಜಕಾರಣಿಗಳಿಗೆ, ಎಂ.ಎಲ್.ಎ.ಗಳಿಗೆ ಮತ್ತು ಮಂತ್ರಿಗಳಿಗೆ ಶಹಭಾಷ್‌ಗಿರಿಯನ್ನು ತೋರಿಸುವುದಕ್ಕೋಸ್ಕರ ಅವರವರ ಜಿಲ್ಲೆಗಳಲ್ಲಿ ಮತ್ತು ತಾಲ್ಲೂಕುಗಳಲ್ಲಿ 25 ಮೀಟರ್‌ನ ಒಂದು ಸಣ್ಣ ಈಜುಕೊಳವನ್ನು ಮಾಡುತ್ತಾರೆ. ಅದು ಒಂದು ಬಾವಿಯಲ್ಲಿ ಈಜು ಹೊಡೆದ ಹಾಗೆ ಇರುತ್ತದೆ. ಸುಮಾರು 25 ಮೀಟರ್‌ನಷ್ಟು ವಿಸ್ತೀರ್ಣದ ಈಜುಕೊಳವನ್ನು ಮಾಡಿ 50 ಮೀಟರ್‌ಗೆ ತಗಲುವ ವೆಚ್ಚದ ಬಿಲ್ ಮಾಡಿರುತ್ತಾರೆ. ರಾಷ್ಟ್ರೀಯ ಮಟ್ಟದ ಈಜುಕೊಳಗಳನ್ನು ಮಾಡಬೇಕಾದರೆ 50 ಮೀಟರ್‌ನಷ್ಟು ವಿಸ್ತ್ರೀರ್ಣದ ಕೊಳಗಳನ್ನು ನಿರ್ಮಾಣ ಮಾಡಬೇಕಾಗುತ್ತದೆ. ಟ್ರಾಕ್ ಹಾಕಿ ಎಂದರೆ, ಯಾವುದೋ ಒಂದು ಕಂಪನಿ ಬೇರೆ ಎಲ್ಲೋ ಹಾಕಿ ಉಳಿದಿರುವ ಸಾಮಗ್ರಿಯನ್ನು ತಂದು ಇಲ್ಲಿ ಟ್ರಾಕ್ ಹಾಕುತ್ತಾರೆ. ಇದರ ಬಗ್ಗೆ ತೀವ್ರವಾಗಿ ತನಿಖೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೋರುತ್ತೇನೆ. ನಿನ್ನೆಯ ಒಂದು ಸಮಾರಂಭದಲ್ಲಿ ಮಾನ್ಯ ಸಚಿವರು 'ರಾಜಕೀಯ ಎನ್ನುವುದು ಚುನಾವಣೆ ಬಂದಾಗಿನಿಂದ ಹಿಡಿದು ಅದು ಮುಗಿಯುವವರೆಗೆ ಅಷ್ಟೆ. ಅದು ಮುಗಿದ ಮೇಲೆ ನನಗೆ ಎಲ್ಲರೂ ಒಂದೇ ಈ ಇಲಾಖೆಯಲ್ಲಿ ರಾಜಕೀಯ ಇರಬಾರದು' ಎಂದು ಅಧಿಕಾರಿಗಳಿಗೆ ಒಂದು

ಕಿವಿ ಮಾತು ಹೇಳಿದ್ದಾರೆ. ಆದರೆ, ಅಧಿಕಾರಿಗಳು ಏನು ಮಾಡುತ್ತಾರೆಂದರೆ ನಾವು ಧ್ವನಿ ಎತ್ತಿದರೆ, 'ನೀವು ಅದು ಕೊಟ್ಟಿಲ್ಲ ಇದು ಕೊಟ್ಟಿಲ್ಲ' ಎಂದು ನಮಗೊಂದು ನೋಟಿಸ್ ಕೊಡುತ್ತಾರೆ. ಅವರು ಕೊಡುವುದು ಮೂರು ಕಾಸಿನ ಅನುದಾನ, ಆ ಅನುದಾನಕ್ಕೆ ನಾವು 25 ರೂಪಾಯಿಗಳನ್ನು ಕೊಟ್ಟು ಹೊರಗಡೆಯಿಂದ 75 ರೂಪಾಯಿಗಳ ಪ್ರಾಯೋಜಕರನ್ನು ತರುತ್ತಿದ್ದೇವೆ. ಈ ಇಲಾಖೆಯ ಬಗ್ಗೆ ಮಾನ್ಯ ಅಪ್ಪಚ್ಚು ರಂಜನ್ ಅವರಿಗೆ ಬಹಳ ಕಳಕಳಿ ಇದೆ. ಯುವನೀತಿಯನ್ನು ತರಬೇಕೆಂದು ಅವರು ಹೊರಟಿದ್ದಾರೆ. ಅದನ್ನು ನಾನು ಪ್ರಶಂಸಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಮೊನ್ನೆ ಮಾನ್ಯ ಸಚಿವರು ಶಾಸಕರ ಭವನದಲ್ಲಿ ಒಂದು ಸಭೆಯನ್ನು ಕರೆದಿದ್ದರು. ಬೇರೆ ಬೇರೆ ಕಾರ್ಯಕ್ರಮಗಳು ಇದ್ದ ಕಾರಣ ಆ ಸಭೆಗೆ 290 ಜನ ಶಾಸಕರ ಪೈಕಿ ಕೇವಲ 9-10 ಜನ ಶಾಸಕರು ಹಾಜರಿದ್ದರು. ಇಂತಹ ಕಾರ್ಯಕ್ರಮಗಳ ಬಗ್ಗೆ 10 ದಿನಗಳ ಮುಂಚಿತವಾಗಿ ಒಂದು ನೋಟಿಸ್ ಕೊಡಬೇಕು, ಎಲ್ಲರನ್ನು ಸೇರಿಸಬೇಕು. ನಮ್ಮ ರಾಷ್ಟ್ರದಲ್ಲಿ ಶೇಕಡಾ 30 ರಿಂದ 35ರಷ್ಟು ಯುವ ಜನರಿದ್ದಾರೆ. ಮೊನ್ನೆ ಒಂದು ಸುದ್ದಿವಾಹಿನಿಯಲ್ಲಿ ಪ್ರಸಾರಗೊಂಡ ಸುದ್ದಿಯ ಪ್ರಕಾರ ಶೇಕಡಾ 28 ರಿಂದ 30ರಷ್ಟು ಪ್ರಮಾಣದ ಯುವಕರು ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಸಂಜೆ 5 ರಿಂದ 6 ಗಂಟೆಗೆ ಬೆಂಗಳೂರಿನಲ್ಲಿರುವ ಬ್ರಿಗೇಡ್ ರೋಡ್‌ಗೆ ಹೋಗಿ ನೋಡಿದರೆ 16 ರಿಂದ 20 ವರ್ಷದೊಳಗಿನ ಯುವಕರು ಮಾದಕ ದ್ರವ್ಯಗಳನ್ನು ತೆಗೆದು ಕೊಳ್ಳುತ್ತಿದ್ದಾರೆ. ಇವರು ಒಳ್ಳೆ ಕ್ಲಾಸ್ ಮಕ್ಕಳು ಮತ್ತು ಒಳ್ಳೆ ಕುಟುಂಬದಿಂದ ಬಂದಿರುವವರು. ಇವತ್ತಿನ ದಿವಸ ಇದರ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುತ್ತಿಲ್ಲ. ಯುವನೀತಿಯನ್ನು ಜಾರಿಗೆ ತರುವುದಕ್ಕೂ ಮೊದಲು ಕಾನೂನು ಇಲಾಖೆ, ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆ ಮತ್ತು ಶಾಸನ ಸಭೆಯಲ್ಲಿ ಶಾಸಕರ ಜೊತೆಗೆ ಚರ್ಚೆ ಮಾಡಿ ಆನಂತರ ಈ ಯುವನೀತಿಯನ್ನು ಜಾರಿಗೆ ತರಬೇಕಾಗಿದೆ. ಯಾರೋ ಅಧಿಕಾರಿ ನಿವೃತ್ತಿಯಾಗುತ್ತಾರೆಂದು ತರಾತುರಿಯಲ್ಲಿ ಇವತ್ತೇ ಆಗಿಬಿಡಬೇಕು ಎಂದು

ಮಂತ್ರಿಗಳ ತಲೆ ತಿನ್ನುತ್ತಿದ್ದಾರೆ. ಅವರಿಗೂ ಅದರ ಬಗ್ಗೆ ಗೊತ್ತಿಲ್ಲ. ಈಗ ಅರಿವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಯುವನೀತಿ ಎನ್ನುವುದು ಒಂದು ಬೈಬಲ್ ಇದ್ದ ಹಾಗೆ. ಇದರ ಜೊತೆಗೆ ಕ್ರೀಡಾನೀತಿಯನ್ನು ಮಾಡಬೇಕೆಂದು ನಾನು ಹಲವಾರು ವರ್ಷಗಳಿಂದ ಒತ್ತಾಯ ಮಾಡುತ್ತಿದ್ದೇನೆ. ಕ್ರೀಡಾನೀತಿಗೆ ಸಂಬಂಧಪಟ್ಟಂತೆ ಸರ್ಕಾರ ಒಂದು ಸಮಿತಿಯನ್ನು ರಚನೆ ಮಾಡಿದೆ. ಕ್ರೀಡಾ ಕಾರ್ಯದರ್ಶಿಗಳಿಗೆ ಮತ್ತು ಇಲಾಖೆಯವರಿಗೆ ಈ ನೀತಿ ಬಗ್ಗೆ ಚರ್ಚೆ ನಡೆಸಲು ಒಂದು ಸಭೆಯನ್ನು ಕರೆಯುವುದಕ್ಕೂ ಸಮಯವಿಲ್ಲ. ನಾವು ಪತ್ರ ಬರೆದರೆ ಅದಕ್ಕೆ ಉತ್ತರ ಬರುವುದೇ ಇಲ್ಲ. ಪ್ರತಿ ಎರಡು ವರ್ಷಕ್ಕೊಮ್ಮೆ ರಾಷ್ಟ್ರೀಯ ಕ್ರೀಡಾಕೂಟ ನಡೆಯುತ್ತದೆ. ಕಳೆದ ಬಾರಿಯ ರಾಷ್ಟ್ರೀಯ ಕ್ರೀಡಾಕೂಟಕ್ಕೆ ಸುಮಾರು 400–500 ಜನ ರಾಜ್ಯ ಕ್ರೀಡಾಪಟುಗಳ ತಂಡವನ್ನು ಕಳುಹಿಸ ಬೇಕಾದಂತಹ ಒಂದು ಸಂದರ್ಭ ಬಂತು. ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಮಾನ್ಯತೆ ಪಡೆದಿರುವ ರಾಜ್ಯ ಕ್ರೀಡಾಸಂಸ್ಥೆಗಳಿಗೆ ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ಕ್ರೀಡಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಕ್ರೀಡಾಪಟುಗಳನ್ನು ಕಳುಹಿಸಬೇಕಾಗುತ್ತದೆ. ಇದು ರಾಷ್ಟ್ರೀಯ ಕ್ರೀಡಾ ಕೂಟದ ನೀತಿ. ನಾವು ಮೊದಲಿಗೆ ಒಂದು ಪ್ರಸ್ತಾವನೆಯನ್ನು ಸಲ್ಲಿಸುತ್ತೇವೆ. ಸುಮಾರು 400–500 ಜನ ಕ್ರೀಡಾಪಟುಗಳಿಗೆ ರೈಲ್ವೆ ದರ ಮತ್ತು ಊಟದ ಭತ್ಯೆ ಮತ್ತು ಕಿಟ್‌ಗೆ ಸುಮಾರು 25 ರಿಂದ 30 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಪ್ರಸ್ತಾವನೆಯನ್ನು ಕೊಟ್ಟರೆ, ಇಲಾಖೆಯ ಅಧಿಕಾರಿಗಳು 'ನಿಮಗೆ 25–30 ಲಕ್ಷ ರೂಪಾಯಿಗಳು ಬರುತ್ತದೆ. ಅದರಲ್ಲಿ ಶೇಕಡಾ 10ರಷ್ಟು ಕಮಿಶನ್ ಕೊಡುತ್ತೀರಾ'? ಎಂದು ಕೇಳುತ್ತಾರೆ. ನಾವು ಕೊಡದೇ ಇದ್ದರೆ ನಮಗೆ ಹಣವನ್ನು ಬಿಡುಗಡೆ ಮಾಡುವುದೇ ಇಲ್ಲ. ಈ ಬಗ್ಗೆ ನಾವು ಪ್ರಧಾನ ಕಾರ್ಯದರ್ಶಿಗಳಿಗೆ ದೂರನ್ನು ಕೊಟ್ಟಿದ್ದೇವೆ. ಅದರ ಪ್ರತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ನಾವು ದೂರು ಬರೆದ ಕಾರಣಕ್ಕೆ ಆ ಇಲಾಖೆಯಿಂದ ನಮಗೆ ಒಂದು ನೋಟಿಸ್‌ನ್ನು ಕೊಡುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೊಸದಾಗಿ ಈ ಖಾತೆಯನ್ನು ವಹಿಸಿಕೊಂಡಿದ್ದಾರೆ. ಈ ಇಲಾಖೆ 1960ನೇ ಮಾಡೆಲ್ ಕಾರಿನ ರೀತಿ ತುಕ್ಕು ಹಿಡಿದಿದೆ. ಇದನ್ನು ಬದಲಾವಣೆ ಮಾಡಬಹುದು ಎನ್ನುವ ಭರವಸೆಯ ಹಿನ್ನೆಲೆಯಲ್ಲಿ ಈ ವಿಷಯಗಳನ್ನು ಹೇಳುತ್ತಿದ್ದೇನೆ. ನಾವು ದೂರು ಕೊಟ್ಟರೆ ನಮಗೇ ಒಂದು ನೋಟೀಸ್‌ನ್ನು ಕೊಡುತ್ತಾರೆ. ತನಿಖೆ ಮಾಡುವುದಿಲ್ಲ. ಆಕಸ್ಮಿಕವಾಗಿ ತನಿಖೆ ಮಾಡುವುದಾದರೆ ಯಾರೂ ದೂರು ಕೊಟ್ಟಿರುತ್ತಾರೆ ಅವರನ್ನು ಕರೆಯಿಸುವುದೇ ಇಲ್ಲ. ನಾವಾಗಿಯೇ ಎರಡನೇ ಬಾರಿ ಪತ್ರವನ್ನು ಬರೆದರೆ, 'ನಾವು ತನಿಖೆ ಮಾಡಿದ್ದೇವೆ ಇದರಲ್ಲಿ ಏನೂ ಇಲ್ಲ' ಎಂದು ಪತ್ರ ಬರೆಯುತ್ತಾರೆ. ಯುವಜನ ಕ್ರೀಡಾ ಇಲಾಖೆ ನಡೆಯುತ್ತಿರುವ ರೀತಿ ಇದು.

ಸನ್ಮಾನ್ಯ ಸಭಾಪತಿಯವರೇ, ಕ್ರೀಡಾ ಹಾಸ್ಟೆಲ್‌ಗಳ ಬಗ್ಗೆ ಹೇಳಬೇಕಾದರೆ, ಹಿಂದೆ ಇದ್ದಂತಹ ಯುವಜನ ಸೇವಾ ಮತ್ತು ಕ್ರೀಡಾ ಸಚಿವರು 2-3 ವರ್ಷಗಳ ಹಿಂದೆ, 'ನೀವೂ ನನ್ನ ಜೊತೆಗೆ ಬನ್ನಿ ನಿಮ್ಮ ಅನುಭವವನ್ನು ಹೇಳಿ' ಎಂದು ರಾಯಚೂರು, ಬಳ್ಳಾರಿ ಮತ್ತು ಬೇರೆ ಜಿಲ್ಲೆಗಳಲ್ಲಿ ಇರುವ ಕ್ರೀಡಾ ಹಾಸ್ಟೆಲ್‌ಗಳಿಗೆ ಭೇಟಿ ನೀಡುವಂತಹ ಸಂದರ್ಭದಲ್ಲಿ ನನ್ನನ್ನು ಕರೆದುಕೊಂಡು ಹೋದರು. ಆ ಸಂದರ್ಭದಲ್ಲಿ ಮಾನ್ಯ ಸಚಿವರು ಕ್ರೀಡಾ ಹಾಸ್ಟಲ್ ಮಕ್ಕಳನ್ನು ಕರೆಯಿಸಿದರು. ಫುಟ್‌ಬಾಲ್ ಆಡುವಾಗ ಹಾಕಿಕೊಳ್ಳುವುದಕ್ಕೆ ಅವರಿಗೆ ಷೂ ಇಲ್ಲ. ಅವರ ಕಾಲಿನಿಂದ ರಕ್ತ ಬರುತ್ತಿತ್ತು. 'ಯಾಕೆ ಹೀಗೆ' ಎಂದು ಕೇಳಿದರೆ, 'ನಮಗೆ ಇನ್ನೂ ಕಿಟ್ ಕೊಟ್ಟಿಲ್ಲ' ಎಂದು ಹೇಳಿದರು. ಅಧಿಕಾರಿಗಳು ಕಿಟ್‌ನ್ನು ಖರೀದಿ ಮಾಡಿ ಕೊಟ್ಟಿದ್ದೇವೆ ಎಂದು ಮೊದಲೇ ಹೇಳಿದ್ದರು. ಆ ಮಕ್ಕಳಿಗೆ ಅಲ್ಲಿ ಕೊಡುವಂತಹ ಊಟದ ವ್ಯವಸ್ಥೆಯ ಬಗ್ಗೆ ಕೇಳಿದಾಗ, 'ನಮಗೆ ಎರಡು ಚಪಾತಿ ಮತ್ತು ದಾಲ್ ಕೊಡುತ್ತಾರೆ' ಎಂದು ಹೇಳಿದರು. ಅವತ್ತಿನ ದಿವಸ ಒಂದು ಊಟಕ್ಕೆ 70 ರೂಪಾಯಿ ಅಥವಾ 90 ರೂಪಾಯಿಯನ್ನು ಕೊಡುತ್ತಿದ್ದರು. ಗುತ್ತಿಗೆದಾರರನ್ನು ಕರೆಯಿಸಿ, 'ಊಟಕ್ಕೆ ನೀನು ಏನೇನು ಕೊಡುತ್ತೀಯಾ?" ಎಂದು ಕೇಳಿದಾಗ, 'ಸ್ವಾಮಿ ನಾನು ಅಧಿಕಾರಿಗಳಿಗೆ ಶೇಕಡಾ 25ರಷ್ಟು ಅಂದರೆ 25

ರೂಪಾಯಿಗಳನ್ನು ಕಮೀಶನ್ ರೂಪದಲ್ಲಿ ಕೊಡಬೇಕಾಗಿದೆ. ಇನ್ನು ಉಳಿದಿರುವಂತಹ 50 ರೂಪಾಯಿಗಳಲ್ಲಿ ಇನ್ನು ಎಷ್ಟು ಒಳ್ಳೆಯ ಊಟವನ್ನು ಕೊಡಬಹುದು? ನನ್ನ ಕೈಯಲ್ಲಿ ಕೊಡುವುದಕ್ಕೆ ಆಗುವುದು ಇಷ್ಟೇನೇ" ಎಂದು ಹೇಳಿದ. ಎಲ್ಲಾ "ಕ್ರೀಡಾ ಹಾಸ್ಟೆಲ್ ಕಳಪೆ ಸಾಮಗ್ರಿ" ಎನ್ನುವ ಶೀರ್ಷಿಕೆಯ ಅಡಿಯಲ್ಲಿ ವರದಿ ಆಗಿದೆ. ಆ ವರದಿಯ ಒಂದು ಪ್ರತಿಯನ್ನು ನಾನು ನಿನ್ನೆ ತಮಗೆ ಕಳುಹಿಸಿಕೊಟ್ಟಿದ್ದೇನೆ. ಇದನ್ನು ಒಬ್ಬ ಅಧಿಕಾರಿ ತನಿಖೆಯನ್ನು ಮಾಡುತ್ತಾರೆ. ಅವರು " ಹೌದು ಇಂತಹ ಸಾಮಗ್ರಿಗಳಿಗೆ ಹಣವನ್ನು ಹೆಚ್ಚುವರಿಯಾಗಿ ಕೊಟ್ಟಿದ್ದಾರೆ. ಬ್ಲಾಕ್ ಲಿಸ್ಟ್ ಆಗಿರುವಂತಹ ಕಂಪನಿಯೇ ಯಾವಾಗಲೂ ಕ್ರೀಡಾ ಹಾಸ್ಟೆಲ್‌ಗಳಿಗೆ ಸಾಮಗ್ರಿಗಳನ್ನು ಸರಬರಾಜು ಮಾಡುವುದು. ಇದರಲ್ಲಿ ಅವ್ಯವಹಾರ ನಡೆದಿದೆ" ಎಂದು ತಿಳಿಸಿದ್ದಾರೆ. ಇದರ ಬಗ್ಗೆಯೂ ಮಾನ್ಯ ಸಚಿವರು ತೀವ್ರವಾಗಿ ಗಮನಹರಿಸಬೇಕಾದರೆ ಮತ್ತು ತನಿಖೆಯನ್ನು ಮಾಡಿಸ ಬೇಕಾಗಿದೆ. ಕಳೆದ ಐದು ವರ್ಷಗಳಲ್ಲಿ ಕ್ರೀಡಾ ಹಾಸ್ಟೆಲ್‌ಗಳಿಗೆ ಎಷ್ಟು ಸಾಮಗ್ರಿಗಳು ಸರಬರಾಜು ಆಗಿವೆ, ಅಲ್ಲಿನ ಮಕ್ಕಳಿಗೆ ಯಾವ ರೀತಿಯ ಊಟವನ್ನು ಕೊಡುತ್ತಿದ್ದಾರೆ ಎನ್ನುವುದನ್ನು ಸಮಗ್ರವಾಗಿ ತನಿಖೆ ಮಾಡಬೇಕಾಗುತ್ತದೆ. ಈ ತನಿಖೆಗೆ ಇಲಾಖಾ ಅಧಿಕಾರಿಗಳನ್ನು ನೇಮಕ ಮಾಡಬಾರದು ಸಿ.ಓ.ಡಿ. ಅಥವಾ ಲೋಕಾಯುಕ್ತದಂತಹ ಹೊರಗಡೆ ಸಂಸ್ಥೆಗೆ ಇದನ್ನು ವಹಿಸಿಕೊಡಬೇಕೆನ್ನುವುದು ನನ್ನ ಒತ್ತಾಯವಾಗಿದೆ.

**ಉಪ ಸಭಾವತಿಯವರು:–** ಮಾನ್ಯ ಗೋವಿಂದರಾಜುರವರೇ, ಇದು ಗಮನ ಸೆಳೆಯುವ ಸೂಚನೆ ಇದರಡಿಯಲ್ಲಿ ವಿಷಯವನ್ನು ಬಹಳ ಸವಿಸ್ತಾರವಾಗಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಅದಷ್ಟು ಸಂಕ್ಷಿಪ್ತವಾಗಿ ಮಾನ್ಯ ಸಚಿವರ ಮತ್ತು ಸರ್ಕಾರದ ಗಮನವನ್ನು ಸೆಳೆಯಿರಿ.

**ಶ್ರೀ ಇ.ಕೃಷ್ಣಪ್ಪ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದ ರಾಜುರವರು ಹೊಸ ಸದಸ್ಯರು ಪ್ರಥಮ ಬಾರಿಗೆ ಮಾತನಾಡುತ್ತಿದ್ದಾರೆ. ತಾವು ಅವರಿಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಅವರು ಈ ಮನೆಯ ಸದಸ್ಯರಾಗಿ ಇದೇ ಮೊದಲನೆಯ ಬಾರಿಗೆ ಮಾತನಾಡುತ್ತಿದ್ದಾರೆ. ದಯವಿಟ್ಟು ಅವರಿಗೆ ತಾವು ಅವಕಾಶವನ್ನು ನೀಡಬೇಕು.

**ಉಪ ಸಭಾವತಿಯವರು:-** ಅವರು ಹೊಸ ಸದಸ್ಯರು ಎನ್ನುವ ಕಾರಣಕ್ಕಾಗಿಯೇ ಅವರಿಗೆ ಇಷ್ಟು ಹೊತ್ತು ಅವಕಾಶವನ್ನು ನೀಡಿರುವುದು.

**ಶ್ರೀ ಕೆ.ಗೋವಿಂದರಾಜ್:-** ಸನ್ಮಾನ್ಯ ಸಭಾಪತಿಯವರೇ, ಯಾರೂ ಅನ್ಯಥಾ ಭಾವಿಸಬಾರದು. ಎಲ್ಲರೂ ಸಹಕರಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಕ್ರೀಡಾಪಟುಗಳು ಏತಕ್ಕಾಗಿ ತೊಂದರೆಗೆ ಒಳಗಾಗಿದ್ದಾರೆ, ನಮ್ಮಲ್ಲಿ ಕ್ರೀಡೆ ಏತಕ್ಕೋಸ್ಕರ ನಶಿಸಿ ಹೋಗುತ್ತಿದೆ ಮತ್ತು ಏನೇನು ಅವ್ಯವಹಾರಗಳು ನಡೆಯುತ್ತಿವೆ ಎನ್ನುವುದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬೇಕಾಗಿದೆ. ಮೊನ್ನೆ ಶಾಸಕರ ಭವನದಲ್ಲಿ ನಡೆದಂತಹ ಶಾಸಕರ ಸಭೆಯಲ್ಲಿ, ಬೆಳಗಾಂನ ಸುಶೀಲ್ ಪಾಟೀಲ್ ಎನ್ನುವವರು ನೇರವಾಗಿ ಮಾನ್ಯ ಸಚಿವರಿಗೆ, 'ಎಲ್ಲ ಇಲಾಖೆಗಳಲ್ಲಿ ಓಡಾಡಿದ್ದೇನೆ, ನಿಮ್ಮ ಇಲಾಖೆಯಷ್ಟು ಭ್ರಷ್ಟ ಇಲಾಖೆಯನ್ನು ನಾನು ನೋಡಿಲ್ಲ' ಎಂದು ಹೇಳಿದರು. ನಿನ್ನೆ ಮಾನ್ಯ ಬಸವರಾಜ ಹೊರಟ್ಟಿಯವರು ಸಹ ಈ ಬಗ್ಗೆ ಪ್ರಸ್ತಾಪ ಮಾಡಿದ್ದರು. ಎಲ್ಲ ಸದಸ್ಯರಿಗೂ ಇದರ ಬಗ್ಗೆ ಅನುಭವವಾಗಿದೆ. ಕೇಂದ್ರ ಸರ್ಕಾರ 100 ಕೋಟಿ ರೂಪಾಯಿಗಳ ಅನುದಾನವನ್ನು ನೀಡಿದೆ. ತಾಲ್ಲೂಕು ಮತ್ತು ಜಿಲ್ಲಾ ಕ್ರೀಡಾಂಗಣಕ್ಕೆ 50 ಲಕ್ಷ ರೂಪಾಯಿಗಳನ್ನು ಕೊಡಬೇಕೆನ್ನುವ ನಿಯಮವಿದೆ. ಈ ರೀತಿ ಕೊಟ್ಟಿದ್ದರೆ, ಕನಿಷ್ಠ 200 ಎಂ.ಎಲ್.ಎ. ಗಳಿಗೆ ಇದರಿಂದ ಸಹಾಯವಾಗುತ್ತಿತ್ತು. ಕೇಂದ್ರ ಸರ್ಕಾರ ಕೊಟ್ಟಿರುವಂತಹ ಹಣವನ್ನು ಬೇರೆ ಕಡೆಗೆ ಉಪಯೋಗ ಮಾಡಿಕೊಂಡಿದ್ದಾರೆ. ಕೇಂದ್ರ ಸರ್ಕಾರ ಎಲ್ಲಿ ಬೇಕಿಲ್ಲವೋ ಅಲ್ಲಿ, ಕುಂಬಳಗೂಡು ಮತ್ತು ವಿದ್ಯಾನಗರಗಳಲ್ಲಿ ನಿರ್ಮಾಣ ಕಾಮಗಾರಿ ಎಂದು ತೋರಿಸಿದ್ದಾರೆ. ಈ ರೀತಿಯ ಅವ್ಯವಹಾರಗಳು ನಡೆದಿವೆ. ಹಿಂದಿನ ಸಚಿವರು ಈ ವಿಚಾರವನ್ನು ಸಿ.ಓ.ಡಿ. ತನಿಖೆಗೆ ಒಳಪಡಿಸಿದ್ದರು. ಎಲ್ಲ ಅಧಿಕಾರಿಗಳು ಸೇರಿ 'ನಾವೆಲ್ಲ ಜೈಲಿಗೆ ಹೋಗಬೇಕಾಗುತ್ತದೆ. ಆದ್ದರಿಂದ ಇದನ್ನು ವಾಪಸ್ಸು ತರಿಸಿ' ಎಂದು ವಾಪಸ್ಸು ತರಿಸಿದಂತಹ ಉದಾಹರಣೆ ಇದೆ. ಈ ಹಿಂದೆ

ಸಿ.ಓ.ಡಿ. ತನಿಖೆಗೆ ಕೊಟ್ಟಿರುವಂತಹ ಸರ್ಕಾರದ ಆದೇಶವನ್ನು ನಾನು ಕಳುಹಿಸಿಕೊಡುತ್ತಿದ್ದೇನೆ.

**ಶ್ರೀ ಅಪ್ಪಚ್ಚು ರಂಜನ್ (ಯುವಜನ ಸೇವೆ ಮತ್ತು ಕ್ರೀಡಾ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಗಮನ ಸೆಳೆಯುತ್ತಿರುವುದು ಕ್ರೀಡಾ ಪ್ರಾಧಿಕಾರದ ವಿಚಾರ. ಆದರೂ ಅವರು ಮಾಹಿತಿಯನ್ನು ಕೊಡುತ್ತಿದ್ದಾರೆ. ಅದಕ್ಕೆ ನಾನು ಉತ್ತರವನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಪ್ರಾಧಿಕಾರದ ವಿಚಾರವೇ ಬೇರೆ, ಇದಕ್ಕೆ ಸಂಬಂಧಪಟ್ಟ ವಿಚಾರವೇ ಬೇರೆ.

**ಶ್ರೀ ಪುಟ್ಟಣ್ಣ:–** ಸನ್ಮಾನ್ಯ ಸಭಾಪತಿಯವರೇ, ಇಡೀ ರಾಜ್ಯಕ್ಕೆ ಸಂಬಂಧಪಟ್ಟ ವಿಚಾರವನ್ನು ಅವರು ಹೇಳುತ್ತಿದ್ದಾರೆ.

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ಇನ್ನು 5 ನಿಮಿಷದಲ್ಲಿ ಅವರು ತಮ್ಮ ಮಾತುಗಳನ್ನು ಮುಕ್ತಾಯಗೊಳಿಸುತ್ತಾರೆ. ಅವರು ಏನೇನು ಮಾಹಿತಿಗಳನ್ನು ನನಗೆ ಕಳುಹಿಸಿಕೊಡುತ್ತಾರೆ. ಅದನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ತಾವು ಅದನ್ನು ನೋಡಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಿ. ಮಾನ್ಯ ಗೋವಿಂದರಾಜ್‌ರವರೇ ಇನ್ನು 5 ನಿಮಿಷದಲ್ಲಿ ತಾವು ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಬೇಕು.

**ಶ್ರೀ ಕೆ.ಗೋವಿಂದರಾಜ್:–** ಸನ್ಮಾನ್ಯ ಸಭಾಪತಿಯವರೇ, ಕ್ರೀಡಾ ಪ್ರಾಧಿಕಾರ ಇಲ್ಲಿಯವರೆಗೆ Registrar of Societies ಯವರಿಗೆ ಅಕೌಂಟ್ಸ್‌ನ್ನು ಕಳುಹಿಸಿಕೊಟ್ಟಿಲ್ಲ. ಇದಕ್ಕೆ ಕಾರಣವೇನು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಸರ್ವ ಸದಸ್ಯರ ಸಭೆಯನ್ನು ಮಾಡಿದ್ದೇವೆಂದು ಹೇಳುತ್ತಾರೆ. ಅವರೇ ಅಕೌಂಟ್ಸ್ ತಯಾರು ಮಾಡಿ ಚಾರ್ಟರ್ಡ್ ಅಕೌಂಟೆಂಟ್ ಅವರ ಹತ್ತಿರ ಸಹಿ ಮಾಡಿಸಿ ಇಟ್ಟುಕೊಂಡಿರುತ್ತಾರೆ. ಪ್ರತಿ ವರ್ಷ ರಿಜಿಸ್ಟ್ರಾರ್ ಆಫ್ ಸೊಸೈಟಿಗೆ ಕಳುಹಿಸಿ ಅವರ ಅನುಮತಿಯನ್ನು ಪಡೆದುಕೊಳ್ಳಬೇಕಾಗಿತ್ತು. ಆದರೆ ಆ ಕೆಲಸ ಮಾಡಿಲ್ಲ, ರಿನಿವಲ್ ಆಗಿಲ್ಲ. ನಾನು ಸುಮಾರು 10–12 ವರ್ಷಗಳಿಂದ ಆ ಸಮಿತಿಯ ಸದಸ್ಯನಾಗಿದ್ದೇನೆ. ಕಳೆದ 10 ವರ್ಷಗಳಿಂದ ಸರ್ವ ಸದಸ್ಯರ ಸಭೆ

ಮಾಡಬೇಕು, ಇದನ್ನು ರಿಜಿಸ್ಟ್ರಾರ್ ಆಫ್ ಸೊಸೈಟಿಗೆ ಕೊಡಬೇಕೆಂದು ಹೇಳುತ್ತಲೇ ಬಂದಿದ್ದೇನೆ. ಅದನ್ನು ಮಾಡುವುದಕ್ಕೆ ಅವರು ತಯಾರಿಲ್ಲ.

**ಶ್ರೀ ಅಪ್ಪಚ್ಚು ರಂಜನ್:–** ಸನ್ಮಾನ್ಯ ಸಭಾಪತಿಯವರೇ, ಕಳೆದ 10–12 ವರ್ಷಗಳಿಂದ ಅವರು ಆ ಸಮಿತಿಯ ಸದಸ್ಯರಾಗಿದ್ದಾರೆ. ಈ ಬಗ್ಗೆ ಅವರು ಏತಕ್ಕೋಸ್ಕರ ಒತ್ತಾಯ ಮಾಡಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಕೆ.ಗೋವಿಂದರಾಜ್:–** ಸನ್ಮಾನ್ಯ ಸಭಾಪತಿಯವರೇ, ಪ್ರತಿಯೊಂದು ಸಭೆಯಲ್ಲಿಯೂ ನಾನು ಈ ಬಗ್ಗೆ ಒತ್ತಾಯ ಮಾಡಿದ್ದೇನೆ. ಆ ಸಭೆಗಳ ನಡವಳಿಕೆಗಳನ್ನು ನಾನು ಮಾನ್ಯ ಸಚಿವರಿಗೆ ಕಳುಹಿಸಿಕೊಡುತ್ತೇನೆ. ಅವರು ಓದಿಕೊಳ್ಳಲಿ.

**ಶ್ರೀ ಅಪ್ಪಚ್ಚು ರಂಜನ್:–** ಸನ್ಮಾನ್ಯ ಸಭಾಪತಿಯವರೇ, 10–12 ವರ್ಷಗಳಿಂದ ಅವರು ಆ ಸಮಿತಿಯ ಸದಸ್ಯರಾಗಿದ್ದ ಸಂದರ್ಭದಲ್ಲಿ ಸಭೆ ನಡೆಯುವಾಗ ತೀರ್ಮಾನಗಳನ್ನು ಆಡಳಿತ ಮಂಡಳಿಯವರೇ ತೆಗೆದುಕೊಳ್ಳುತ್ತಾರೆ. ಅಂತಹ ಸಂದರ್ಭದಲ್ಲಿ ಇವರು ಗಟ್ಟಿಯಾಗಿ ತೀರ್ಮಾನಗಳನ್ನು ನೋಟ್ ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕಾಗಿತ್ತು. ಅದನ್ನು ಏತಕ್ಕೋಸ್ಕರ ಮಾಡಲಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಕೆ.ಗೋವಿಂದರಾಜ್:–** ಸನ್ಮಾನ್ಯ ಸಭಾಪತಿಯವರೇ, ನಾನು ಈ ಬಗ್ಗೆ ಪ್ರಶ್ನೆ ಮಾಡಿದ್ದೇನೆ. ನನ್ನ ಹತ್ತಿರ ಇರುವಂತಹ ನಡವಳಿಕೆಗಳ ಪ್ರತಿಯನ್ನು ಅವರಿಗೆ ಕಳುಹಿಸಿಕೊಡುತ್ತೇನೆ. ಅದರಲ್ಲಿ ಏನಾದರೂ ನ್ಯೂನ್ಯತೆಗಳು ಇದ್ದರೆ ಅವರು ನನಗೆ ಹೇಳಲಿ. ಕ್ರೀಡಾ ಪ್ರಾಧಿಕಾರಕ್ಕೆ ಸಂಬಂಧಪಟ್ಟಂತೆ ಮಲ್ಟಿ ಜೀನ್ಸ್ ಎನ್ನುವಂತಹ ಒಂದು ರಾಕೆಟ್ ಇದೆ. ಕಳೆದ ಆರು ವರ್ಷಗಳಿಂದ ತನಿಖೆ ನಡೆಸುತ್ತಿದ್ದಾರೆ.

**ಉಪ ಸಭಾಪತಿಯವರು:–** ಮಾನ್ಯ ಗೋವಿಂದರಾಜುರವರೇ, ನಿಯಮಾವಳಿಗಳ ಪ್ರಕಾರ ಹೋದರೆ, ಗಮನಸೆಳೆಯುವ ಸೂಚನೆ ಯಡಿಯಲ್ಲಿ ಇಷ್ಟೊಂದು ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ನೀವು ಬೇರೆ

ನಿಯಮದಡಿಯಲ್ಲಿ ಸೂಚನೆಯನ್ನು ನೀಡಿದ್ದರೆ, ಅವಕಾಶವನ್ನು ನೀಡಬಹುದಾಗಿತ್ತು.

**ಶ್ರೀ ಆರ್.ವಿ.ವೆಂಕಟೇಶ್:–** ಸನ್ಮಾನ್ಯ ಸಭಾಪತಿಯವರೇ, ಇದೇ ನಿಯಮದಡಿಯಲ್ಲಿ ಒಬ್ಬರಿಗೆ ಒಂದೂವರೆ ಗಂಟೆಗಳ ಕಾಲಾವಕಾಶವನ್ನು ನೀಡಿದ್ದೀರಿ. ಒಬ್ಬರಿಗೆ ಒಂದು ರೀತಿ ಮತ್ತೊಬ್ಬರಿಗೆ ಮತ್ತೊಂದು ರೀತಿ ಮಾಡುವುದು ಸರಿಯಲ್ಲ.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರೇ, ತಮ್ಮ ಬಳಿ ಇರುವಂತಹ ಎಲ್ಲ ದಾಖಲೆಗಳನ್ನು ಸಚಿವರಿಗೆ ಕೊಟ್ಟು ಮಾನ್ಯ ಮಂತ್ರಿಗಳ ಜೊತೆಗೆ ತಾವು ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ದೇಶದಲ್ಲಿರುವ ಯುವ ಜನಾಂಗವೇ ನಿಜವಾದ ಸಂಪತ್ತು. ಧನ, ದವಲತ್ತು, ಬೆಳ್ಳಿ, ಬಂಗಾರ, ವಜ್ರ, ವೈಢೂರ್ಯ ಇವು ದೇಶದ ಸಂಪತ್ತಲ್ಲ. ಯುವಶಕ್ತಿಯನ್ನು ಕ್ರೀಡೆ ಮುಖಾಂತರ ವೃದ್ಧಿ ಮಾಡುವುದಕ್ಕೆ ಈ ಕ್ರೀಡಾ ಪ್ರಾಧಿಕಾರಕ್ಕೆ ಅವಕಾಶ ಇದೆ. ಕ್ರೀಡಾ ಪ್ರಾಧಿಕಾರ ತನ್ನ ಕೆಲಸವನ್ನು ಸರಿಯಾಗಿ ಮಾಡದೇ ಇದ್ದರೆ ದೇಶದ ಸಂಪತ್ತು ನಶಿಸಿದ ಹಾಗಾಗುತ್ತದೆ. ಯುವಶಕ್ತಿಗೆ ಚೇತನ ಕೊಡುವಂತಹ ಈ ಕ್ರೀಡಾ ಪ್ರಾಧಿಕಾರದಲ್ಲಿ ನಡೆಯುವ ಅವ್ಯವಹಾರಗಳ ಬಗ್ಗೆ ನೂತನವಾಗಿ ಆಯ್ಕೆಯಾಗಿರುವಂತಹ ಮಾನ್ಯ ಸದಸ್ಯರು ಅರ್ಥಪೂರ್ಣವಾದಂಥ ಮಾತುಗಳನ್ನು ಹೇಳುತ್ತಿದ್ದಾರೆ. ದಯಮಾಡಿ ಅವರಿಗೆ ಹೆಚ್ಚು ಸಮಯ ಕೊಡಿ. ಮಾನ್ಯ ಗೋವಿಂದರಾಜುರವರು ಮೇಲ್ಮನೆ ಶಾಸಕರಾದ ನಂತರ ಮೊದಲನೆಯ ಸಲ ಗಮನ ಸೆಳೆಯುವ ಸೂಚನೆ ಅಡಿ, ತಾವು ಯಾವ ಸಂಸ್ಥೆಯಲ್ಲಿ ಸದಸ್ಯರಾಗಿದ್ದಾರೋ ಆ ಸಂಸ್ಥೆಯಲ್ಲಿ ನಡೆಯುವಂತಹ ಅವ್ಯವಹಾರದ ಮೇಲೆ ಬೆಳಕು ಚೆಲ್ಲುವಂತಹ ಕೆಲಸ ಮಾಡುತ್ತಿರುವುದು it shows has real concern. ಆ ದೃಷ್ಟಿಯಿಂದ, ಇದು ಮಾನ್ಯ ಸದಸ್ಯರ maiden speech ಇರುವುದರಿಂದ ತಾವು ಅವರಿಗೆ ಮಾತನಾಡಲು ಹೆಚ್ಚಿನ ಸಮಯ ಕೊಡಬೇಕು. ಯುವ ಜನಾಂಗ ದೇಶದ

ಸಂಪತ್ತು ಎನ್ನುವ ಹಿನ್ನಲೆಯಲ್ಲೂ ಈ ವಿಚಾರ ಮಹತ್ವ ಪಡೆದುಕೊಳ್ಳುತ್ತದೆ. ಈ ಕ್ರೀಡಾ ಪ್ರಾಧಿಕಾರದ ಎಲ್ಲಾ ಅವ್ಯವಹಾರಗಳು, ಎಲ್ಲಾ ಹೂರಣಗಳು ಹೊರಗೆ ಬೀಳುವ ದಿಸೆಯಲ್ಲಿ ಅವರಿಗೆ ಮಾತನಾಡಲು ಅವಕಾಶ ಕೊಡಿ.

**ಶ್ರೀ ಆರ್.ವಿ.ವೆಂಕಟೇಶ್:–** ಸನ್ಮಾನ್ಯ ಸಭಾಪತಿಗಳೆ, ಇವತ್ತು ಒಲಂಪಿಕ್ಸ್‌ನ ಉದ್ಘಾಟನೆ ಆಗುತ್ತಿದೆ. ಮಾನ್ಯ ಸದಸ್ಯರು ಕರ್ನಾಟಕ ಒಲಂಪಿಕ್ ಅಸೋಸಿಯೇಷನ್‌ನ ಅಧ್ಯಕ್ಷರೂ ಆಗಿದ್ದಾರೆ. ಆದ್ದರಿಂದ ಇಂತಹ ಸಂದರ್ಭದಲ್ಲಿ ಅವರಿಗೆ ಹೆಚ್ಚು ಮಾತನಾಡಲು ಅವಕಾಶ ಮಾಡಿಕೊಡಿ.

**ಶ್ರೀ ಕೆ. ಗೋವಿಂದರಾಜು:–** ಸನ್ಮಾನ್ಯ ಸಭಾಪತಿಗಳೆ, ಈ ಕ್ರೀಡಾ ಪ್ರಾಧಿಕಾರದ ಕಾರ್ಯವೈಖರಿ ಬಗ್ಗೆ ನಿನ್ನೆ ಒಂದು ಪತ್ರಿಕೆಯಲ್ಲಿ "ಬಿಳಿ ಆನೆಯಾಗಿರುವ ಕ್ರೀಡಾ ಪ್ರಾಧಿಕಾರ–ಇದು ಬೇಕೆ" ಎಂಬ ಶೀರ್ಷಿಕೆ ಅಡಿಯಲ್ಲಿ ಒಂದು ಲೇಖನ ಬಂದಿದೆ. ಒಬ್ಬ ಉಪಾಧ್ಯಕ್ಷರು 11 ತಿಂಗಳಲ್ಲಿ 15 ಲಕ್ಷ ರೂಪಾಯಿಗಳ ಟಿಎ–ಡಿಎ ಮಾಡುತ್ತಾರೆ, ಒಂದೇ ಒಂದು ಊರಿನಲ್ಲಿ ಓಡಾಡುವುದಕ್ಕೆ ಏಳೂವರೆ ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಇಂಥದ್ದಕ್ಕೆ ಈ ಕ್ರೀಡಾಪ್ರಾಧಿಕಾರ ಬೇಕೆ? ಈ ಕ್ರೀಡಾ ಪ್ರಾಧಿಕಾರವನ್ನು ಮುಚ್ಚುವುದೇ ಒಳ್ಳೆಯದು ಎಂದು ನಾನು ಹೇಳಬಯಸುತ್ತೇನೆ. ಕ್ರೀಡಾ ಪ್ರಾಧಿಕಾರದ ಅಡಿಯಲ್ಲಿ Sunfeast Marathon ಎಂದು ನಡೆಯುತ್ತದೆ. ಇದು ಒಂದು private Event Management Company ಆಗಿದೆ. ಇದನ್ನು ನಮ್ಮ ಇಲಾಖೆಯವರು ಬಹಳ ಮುತುವರ್ಜಿಯಿಂದ ನಡೆಸುತ್ತಾರೆ. ಕಾರಣವೆಂದರೆ.

**ಉಪ ಸಭಾಪತಿಯವರು:–** ನಿಮ್ಮಲ್ಲಿ ಇಷ್ಟೊಂದು ಮಾಹಿತಿ ಇದ್ದಾಗ ಈ ವಿಚಾರದ ಬಗ್ಗೆ ಚರ್ಚಿಸಲು ಬೇರೆ ನಿಯಮದ ಅಡಿ ನೋಟಿಸ್ ಕೊಡಬೇಕು. ಗಮನ ಸೆಳೆಯುವ ಸೂಚನೆ ಅಡಿ ಮಾತನಾಡಲು ಇಷ್ಟೊಂದು ಕಾಲಾವಕಾಶ ಕೊಡುವುದಕ್ಕಾಗುವುದಿಲ್ಲ. ಇನ್ನೂ ಬೇರೆ ವಿಷಯಗಳಿವೆ.

**ಸಭಾನಾಯಕರು:–** ಮಾನ್ಯ ಸದಸ್ಯರು ಈ ವಿಷಯವನ್ನು ಅರ್ಧಗಂಟೆ ಅಡಿ ಚರ್ಚೆ ಮಾಡಬಹುದು.

**ಉಪ ಸಭಾಪತಿಯವರು:-** ಇವತ್ತು ಒಟ್ಟು ಮೂರು ಗಮನ ಸೆಳೆಯುವ ಸೂಚನೆ ಇದೆ. ನಂತರ ಬೇರೆ ಬೇರೆ ನಿಯಮಗಳ ಅಡಿ ಬೇರೆ ಬೇರೆ ವಿಷಯಗಳಿವೆ ಮತ್ತೆ, Finance Bill ಬರುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಇದು ಬಹಳ ಮಹತ್ವದ ವಿಚಾರ ...

**ಉಪಸಭಾವತಿಯವರು:-** ಆದ್ದರಿಂದಲೇ ನಾನು ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟೆ . . .

**ಶ್ರೀ ಎಸ್.ಆರ್.ಪಾಟೀಲ್:-** ನಾನು ಈಗಾಗಲೇ ಮಾತನಾಡುತ್ತಾ ಇದು ಎಷ್ಟು ಮಹತ್ವದ ವಿಚಾರ ಎನ್ನುವ ಮಾತನ್ನು ಹೇಳಿದೆ. ಈ ರಾಜ್ಯದ ಯುವಶಕ್ತಿಯನ್ನು ವೃದ್ಧಿ ಮಾಡುವಂತಹ ಕ್ರೀಡಾ ಪ್ರಾಧಿಕಾರದ ವಿಚಾರವಾಗಿ ಚರ್ಚಿಸಲು ಇಲ್ಲಿ ಅವಕಾಶ ಸಿಗದೇ ಹೋದರೆ ಇನ್ನೆಲ್ಲಿ ಮಾತನಾಡಬೇಕು?

**ಉಪಸಭಾಪತಿಯವರು:-** ಇಲ್ಲಿ ಮಾತನಾಡುವುದಕ್ಕೆ ಅವಕಾಶ ಇದೆ. ಆದರೆ ಇದನ್ನು ಬೇರೆ ನಿಯಮದ ಅಡಿ ತರಬೇಕು. ಮಾನ್ಯ ಗೋವಿಂದರಾಜುರವರು ಮತ್ತು ಮಾನ್ಯ ಕ್ರೀಡಾ ಮಂತ್ರಿಗಳು ಯುವಕರಾಗಿದ್ದಾರೆ. ಬೇರೆ ನಿಯಮದಡಿ ಈ ವಿಷಯವನ್ನು ತಂದಿದ್ದರೆ ಬೇರೆ ಎಲ್ಲಾ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಬಹುದಾಗಿತ್ತು, ಸವಿಸ್ತಾರವಾಗಿ ಚರ್ಚೆ ಮಾಡಬಹುದಿತ್ತು, ಬೆಳಕು ಚೆಲ್ಲಬಹುದಾಗಿತ್ತು. ಆದರೆ ಗಮನ ಸೆಳೆಯುವ ಸೂಚನೆ ಅಡಿ ಹೆಚ್ಚು ವಿಸ್ತಾರವಾಗಿ ಮಾತನಾಡುವುದಕ್ಕೆ ಅವಕಾಶ ಇರುವುದಿಲ್ಲ.

**ಶ್ರೀ ಆರ್.ಕೆ.ಸಿದ್ಧರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಗೋವಿಂದರಾಜುರವರು ಇವತ್ತು ಪ್ರಸ್ತುತವಾಗಿರುವಂತಹ ವಿಚಾರದ ಬಗ್ಗೆ ಮಾತನಾಡುತ್ತಿದ್ದಾರೆ. ಕಾರಣ ಏನೆಂದರೆ ಇವತ್ತು ಒಲಂಪಿಕ್ಸ್ ಪ್ರಾರಂಭವಾಗುತ್ತಿದೆ. ನಮಗೂ ಕೂಡ ಈ ಚರ್ಚೆಯಲ್ಲಿ ಭಾಗವಹಿಸಬೇಕು ಎನ್ನುವ ಆಸಕ್ತಿ ಇದೆ. ಮಾನ್ಯ ಸದಸ್ಯರು ಗಮನವನ್ನು ಸೆಳೆಯುತ್ತಾರೆ ಮತ್ತು ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಈ ವಿಷಯ ಸರಿಯಾದಂಥ ರೀತಿಯಲ್ಲಿ ಚರ್ಚೆ ಆಗುವಂಥದ್ದು ರಾಜ್ಯದ ಹಿತದೃಷ್ಟಿಯಿಂದ

ಬಹಳ ಒಳ್ಳೆಯದು. ದಯಮಾಡಿ ಇದನ್ನು ಬೇರೆ ರೂಪದಲ್ಲಿ ತಂದು ನಮಗೂ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿರುವಂಥದ್ದು ಯಾವುದೋ ಸಣ್ಣ ವಿಚಾರವಲ್ಲ, ಅದು ಬಹಳ ವಿಸ್ತಾರವಾದಂತಹ ವಿಚಾರವಾಗಿದೆ, ಇಂತಹ ವಿಚಾರಗಳ ಬಗ್ಗೆ ಮಾತನಾಡುವುದು ಒಳ್ಳೆಯದೂ ಕೂಡ. ಮಾನ್ಯ ಸದಸ್ಯರಲ್ಲಿ ಕೇಳವುದೇನೆಂದರೆ, ಈ ವಿಷಯವನ್ನು ಬೇರೆ ನಿಯಮದ ಅಡಿ ತಂದು ನೋಟಿಸ್ ಕೊಟ್ಟರೆ ಅದಕ್ಕೆ ನಾವೂ ಕೂಡ ಸಹಿ ಮಾಡಿ ಕೊಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್ :–** ಬೇರೆ ನಿಯಮದಡಿ ಬೇಡ, ಈ ನಿಯಮದಡಿಯಲ್ಲೇ ಚರ್ಚೆ ಮಾಡಿ.

**ಉಪಸಭಾಪತಿಯವರು:–** ಇಲ್ಲ, ಗಮನ ಸೆಳೆಯುವ ಸೂಚನೆಯಡಿ ಇಷ್ಟು ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ಚರ್ಚೆಗೆ ಅವಕಾಶವೇ ಇಲ್ಲದ ಶೂನ್ಯವೇಳೆ ಅಡಿಯಲ್ಲೇ ಗಂಟೆಗಟ್ಟಲೆ ಚರ್ಚೆ ಮಾಡಿದ ಉದಾಹರಣೆಗಳಿವೆ. ನಾವು ನಿಯಮ 330ರ ಅಡಿಯಲ್ಲಿ ಸಾಕಷ್ಟು ನೋಟಿಸ್‌ಗಳನ್ನು ಕೊಟ್ಟಿದ್ದೇವೆ, ಆದರೆ ಅವು ಇನ್ನೂ reach ಆಗಲಿಕ್ಕೆ ಸಾಧ್ಯವಾಗಿಲ್ಲ. ಸದನ ಮುಗಿಯುವುದರೊಳಗಾಗಿ ಅವು reach ಆಗುತ್ತವೆ ಎನ್ನುವ ನಂಬಿಕೆ ಇಲ್ಲ.

**ಉಪಸಭಾಪತಿಯವರು:–** ಬೇರೆ ನಿಯಮಗಳ ಅಡಿ ತಂದರೆ ಖಂಡಿತ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:–** ಬೇರೆ ನಿಯಮದಲ್ಲಿ ಇದು reach ಆಗುವುದಕ್ಕೆ ಸಾಧ್ಯವೇ ಇಲ್ಲ. ಪುಣ್ಯವಶಾತ್ ನೀವು ಈ ವಿಚಾರವನ್ನು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ, ಅದಕ್ಕೆ ತಮಗೆ

ಧನ್ಯವಾದಗಳನ್ನು ಅರ್ಪಿಸುತ್ತೇವೆ. ಮಾನ್ಯ ಸದಸ್ಯರುಗಳಿಗೂ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಉಪಸಭಾವತಿಯವರು:–** ಹಾಗಾದರೆ ಉಳಿದ ಇನ್ನೂ ಎರಡು ಗಮನ ಸೆಳೆಯುವ ಸೂಚನೆಗಳನ್ನು ಬಿಡಬೇಕಾಗುತ್ತದೆ . . .

**ಶ್ರೀ ಎಸ್.ಆರ್.ಪಾಟೀಲ್:–** ಇದು ಮುಗಿದ ಮೇಲೆ ಅವುಗಳನ್ನು ತೆಗೆದುಕೊಳ್ಳಿ ಅವುಗಳ ಬಗ್ಗೆಯೂ ಚರ್ಚೆ ಮಾಡೋಣ.

**ಉಪಸಭಾವತಿಯವರು:–** ಮಾನ್ಯ ಗೋವಿಂದರಾಜುರವರೆ ನೀವು ಮಾತನಾಡುತ್ತಿರುವುದು ನೋಡಿದರೆ ನಿಮ್ಮ ಬತ್ತಳಿಕೆಯಲ್ಲಿ ಬಹಳಷ್ಟು ವಿಷಯಗಳಿವೆ ಎಂದೆನಿಸುತ್ತಿದೆ. ನಮ್ಮ ಅನೇಕ ಜನ ಸದಸ್ಯರಿಗೆ ಈ ವಿಷಯ ಕುರಿತು ಮಾತನಾಡುವ ಆಸಕ್ತಿ ಇದೆ. ಆದ್ದರಿಂದ ಬೇರೆ ನಿಯಮದಡಿ ಇದನ್ನು ತನ್ನಿ. ನೀವು ನಿಯಮ 68ರಲ್ಲಿ ಕೊಟ್ಟರೆ ಕಡೇಪಕ್ಷ ಒಂದು ಗಂಟೆಗಳ ಕಾಲ ಚರ್ಚೆ ಮಾಡಬಹುದು, ಮೇಲ್ಮನೆ ಸದಸ್ಯರು ಅದರಲ್ಲಿ ಭಾಗವಹಿಸಬಹುದು. ಮಾನ್ಯ ಸದಸ್ಯರಾದ ಗೋವಿಂದ್‌ರಾಜ್ ರವರು ಈ ಕುರಿತು ಒಳ್ಳೆಯ ರೀತಿಯಲ್ಲಿ ಬೆಳಕು ಚೆಲ್ಲುತ್ತಿದ್ದಾರೆ. ಅದಕ್ಕೆ ನಿಮ್ಮನ್ನು appreciate ಮಾಡುತ್ತೇನೆ, ಅಭಿನಂದಿಸುತ್ತೇನೆ.

**ಶ್ರೀ ಕೆ.ಗೋವಿಂದರಾಜು:–** ಸೋಮವಾರ ಈ ವಿಷಯವನ್ನು ಚರ್ಚೆ ಮಾಡಲು ಬೇರೆ ನಿಯಮದಡಿ ಕೊಡುತ್ತೇನೆ. ಈಗ ಇದನ್ನು ಮುಗಿಸಿಬಿಡುತ್ತೇನೆ.

ನಾನು ಮತ್ತೊಂದು ವಿಷಯ ಹೇಳಬಯಸುತ್ತೇನೆ. ಅಧಿಕಾರಿಗಳು ನಾವು ಕಳುಹಿಸಿದ ಪತ್ರಕ್ಕೆ ಉತ್ತರ ಬರೆಯುವುದಿಲ್ಲ. ಅವಾರ್ಡ್ ಕೊಡಲು ಕ್ರೀಡಾಪಟುಗಳನ್ನು ಆಯ್ಕೆ ಮಾಡಬೇಕಾದರೆ ಆ ಕ್ರೀಡಾಪಟುಗಳು ಅಧಿಕಾರಗಳಿಗೆ ಶೇಕಡ 50ರಷ್ಟು commission ಕೊಟ್ಟಿರುವಂತಹ ಉದಾಹರಣೆಗಳಿವೆ. ಅದು ಏಕಲವ್ಯ ಆವಾರ್ಡ್ ಆಗಿರಬಹುದು ಅಥವಾ ಮತ್ತೊಂದು ಆವಾರ್ಡ್ ಇರಬಹುದು. ಕೆಳಹಂತದ Assistant Director ಅಥವಾ Joint Director level ನಲ್ಲಿ ಐವತ್ತು ಸಾವಿರ ರೂಪಾಯಿಗಳನ್ನು

ಕೊಟ್ಟರೆ ಅಂತಹ ಕ್ರೀಡಾಪಟುಗಳ ಹೆಸರನ್ನು ಪಟ್ಟಿಯಲ್ಲಿ ಸೇರಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. ನಾನು ಮೊನ್ನೆ ಅಧಿಕಾರಿಗೆ ಪತ್ರ ಕಳುಹಿಸಿದೆ. ಒಬ್ಬ Assistant Director ನಮ್ಮ ಪತ್ರಗಳನ್ನು ನೋಡಿದರೆ, ಅದ್ಯಾವ ಎಂಎಲ್‌ಸಿ ಪತ್ರ, ಬಿಸಾಕು ಎಂದು ಹೇಳುತ್ತಾರೆ. ಈ ಅನುಭವ ಬೇರೆ ಸದಸ್ಯರಿಗೂ ಆಗಿರಬಹುದು. ಇದು ಪ್ರಾಧಿಕಾರದಲ್ಲಿ ತೋರಿಸುವಂತಹ ಅಸಡ್ಡೆ. ಮತ್ತೆ, ಮ್ಯಾರಥಾನ್ ಓಟ ಎಂದು ಕ್ರೀಡಾ ಪ್ರಾಧಿಕಾರದಡಿಯಲ್ಲಿ ನಡೆಯುತ್ತದೆ. . .

**ಶ್ರೀ ಅಪ್ಪಚ್ಚು ರಂಜನ್:-** ಮಾನ್ಯ ಸದಸ್ಯರು ಇಂತಹ ಅಧಿಕಾರಿ ಯಾರು ಎಂದು specific ಆಗಿ ಹೇಳಿದರೆ ಒಳ್ಳೆಯದು. ಮಾನ್ಯ ಸದಸ್ಯರು ಯಾರಿಗೆ ಪತ್ರವನ್ನು ಕೊಟ್ಟಿದ್ದರು, ಯಾರು ಅಸಡ್ಡೆ ತೋರಿಸಿದರು ಎಂದು ಹೇಳಬೇಕು ಅಥವಾ ಮಾನ್ಯ ಸದಸ್ಯರ ಹತ್ತಿರ ಯವುದಾದರೂ ದಾಖಲೆ ಇದ್ದು ಅದನ್ನು ಕೊಟ್ಟರೆ ಯಾವುದೇ ಕಾರಣಕ್ಕೂ ಯಾರನ್ನೂ ರಕ್ಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಇಂಥದ್ದನ್ನು ಗಂಭೀರವಾಗಿ ತೆಗೆದು ಕೊಳ್ಳುತ್ತೇವೆ, ವಿಚಾರಣೆ ಮಾಡುತ್ತೇವೆ. ಇದರಲ್ಲಿ ಎರಡು ಮಾತಿಲ್ಲ.

**Sri S.R. PATIL**: Our Hon'ble Member is prepared to give all evidences. The Hon'ble Minister must initiate action against the concerned person.

**ಶ್ರೀ ಕೆ. ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಮ್ಯಾರಾಥಾನ್ ಓಟದ ಬಗ್ಗೆ ನಾನು ಮಾಹಿತಿ ಕೇಳಿದೆ. ಉದ್ಭವಿಸುವುದಿಲ್ಲ, ಅನ್ವಯಿಸುವುದಿಲ್ಲ ಎಂದು ಈ ರೀತಿ ಮಾಹಿತಿ ಕೊಡುತ್ತಾರೆ. ಎಲ್ಲಾ ಮಾಹಿತಿ ಅವರ ಹತ್ತಿರ ಇದೆ. ಅದನ್ನು ಕೊಟ್ಟರೆ ಅವರು ತೊಂದರೆಗೀಡಾಗುತ್ತಾರೆ ಎಂದು ಹೇಳಿ, ಮಾಹಿತಿಯನ್ನು ಮಾನ್ಯ ಸಚಿವರ ಹತ್ತಿರ ಸಹಿ ಮಾಡಿಸಿ ಅರ್ಧಂಬರ್ಧ ಮಾಹಿತಿ ಕೊಟ್ಟಿದ್ದಾರೆ. ಇದು ಬಹಳ ಗಂಭೀರವಾದ ವಿಷಯ. ಏಕೆಂದರೆ, ಒಬ್ಬ event management company ಯವನು ನಾಲ್ಕು ರಾಜ್ಯದಲ್ಲಿ ನಡೆಸುತ್ತಾನೆ. ಅವನ ಆದಾಯ ವರ್ಷಕ್ಕೆ 40 ರಿಂದ 50 ಕೋಟಿ

ರೂಪಾಯಿಗಳು. ಬೆಂಗಳೂರಿನಲ್ಲಿ ನಡೆದಾಗ ಆದಾಯ ಎಷ್ಟು ಇರಬಹುದು? 10 ರಿಂದ 12 ಕೋಟಿ ರೂಪಾಯಿಗಳು. ಅದರ ಬ್ಯಾಲೆನ್ಸ್ ಶೀಟ್‌ನ್ನು ಕೇಳಿದರೆ ಇದುವರೆಗೂ ಕೊಟ್ಟಿಲ್ಲ. ಯಾವುದೋ ಸಂಸ್ಥೆ ನಡೆಸಿದ್ದಾರೆ ಎಂದು ಸುಳ್ಳು ಮಾಹಿತಿ ಕೊಟ್ಟಿದ್ದಾರೆ. ಮ್ಯಾರಾಥಾನ್ ಓಟ ಅರ್ಧ ಗಂಟೆ ನಡೆಯುತ್ತದೆ. ಭಾನುವಾರದ ದಿವಸ ಅರ್ಧ ಗಂಟೆ ನಡೆಸುವುದಕ್ಕೆ ಇವರು ಇಡೀ ಬೆಂಗಳೂರಿನಲ್ಲಿರುವಂತಹ ಎಲ್ಲಾ ಸ್ಟೇಡಿಯಂಗಳನ್ನು ಬುಕ್ ಮಾಡುತ್ತಾರೆ. ಹತ್ತು ದಿವಸಗಳ ಕಾಲ ಬುಕ್ ಮಾಡುತ್ತಾರೆ. ಅದರಲ್ಲಿ ವಸ್ತುಪ್ರದರ್ಶನ, ಸೇಲ್ಸ್, ಇವೆಲ್ಲಾ ಮಾಡುತ್ತಾರೆ. ಇದರಿಂದ ಯಾರಿಗೆ ಉಪಯೋಗವಾಗುತ್ತದೆ? ಅದೇನೂ ಕಾಂಪಿಟೇಶನ್ ಅಲ್ಲ It is a fun race. ಎಲ್ಲಾ ಸ್ಟೇಡಿಯಂ ಅನ್ನು ಇವರಿಗೆ ಹತ್ತು ದಿವಸ ಪುಕ್ಕಟೆಯಾಗಿ ಕೊಡುತ್ತಾರೆ. ಇದು ಬೇಕೇ? ಅದರಿಂದ ಎಷ್ಟು ಕೋಟಿ ರುಪಾಯಿ ಇವರು ಲಾಭ ಪಡೆಯುತ್ತಿದ್ದಾರೆ? ಅಧಿಕಾರಗಳು ಎಷ್ಟು ಹಣ ಪಡೆದಿದ್ದಾರೆ? ಇದರ ಬಗ್ಗೆ ತನಿಖೆಯಾಗಬೇಕೆಂದು ನಾನು ಹೇಳುತ್ತಿದ್ದೇನೆ.

**ಉಪಸಭಾಪತಿಯವರು:–** ಮಾನ್ಯ ಸಚಿವರು ಈಗ ಉತ್ತರ ಕೊಡುತ್ತಾರೆ.

**ಶ್ರೀ ಕೆ. ಗೋವಿಂದರಾಜ್:–** ಕ್ರೀಡಾ ಇಲಾಖೆಯಲ್ಲಿ ಸಾಮಗ್ರಿಗಳ ಬಗ್ಗೆ ಏನು ...

**ಉಪಸಭಾಪತಿಯವರು:–** ಮಾನ್ಯ ಗೋವಿಂದರಾಜ್‌ರವರೇ, ಮಾನ್ಯ ನಾಣಯ್ಯನವರು ಮಾತನಾಡುವುದಕ್ಕೆ ನಿಂತಿದ್ದಾರೆ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೆ, ಅವರು ಮಾತನಾಡಿದ ನಂತರ ನನಗೆ ಎರಡು ನಿಮಿಷ ಅವಕಾಶ ಕೊಡುತ್ತೀರಾ?

**ಉಪ ಸಭಾಪತಿಯವರು:–** ಆಯಿತು. ತಾವು ಎರಡೇ ನಿಮಿಷದಲ್ಲಿ ಮಾತನಾಡಿ ಮುಗಿಸುವುದಾದರೆ ಅವಕಾಶ ಕೊಡುತ್ತೇನೆ.

**ಶ್ರೀ ಎಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ, ನಿಮಗೆ ಮನಸ್ಸಾಗಿ ನಾಣಯ್ಯ ಮಾತನಾಡುವುದು ಚೆನ್ನಾಗಿದೆ ಎಂದು ಅನಿಸಿದರೆ ಬೇಕದರೆ ಹೆಚ್ಚಿಗೆ ಸಮಯ ಕೊಡಿ.

**ಶ್ರೀ ಅಪ್ಪಚ್ಚು ರಂಜನ್:-** ಮಾನ್ಯ ಸಭಾಪತಿಯವರೇ, ಅವರು ದಾಖಲೆಗಳನ್ನು ಕೊಟ್ಟರೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ, ಯಾರನ್ನೂ ರಕ್ಷಣೆ ಮಾಡುವುದಿಲ್ಲ.

**ಉಪ ಸಭಾವತಿಯವರು:-** ಗೋವಿಂದರಾಜ್‌ರವರೇ, ನಿಮ್ಮ ಹತ್ತಿರ ಮಾಹಿತಿ ಇದ್ದರೆ ಕೊಡಿ, ನಾನು ಮಾನ್ಯ ಸಚಿವರಿಗೆ ಕಳುಹಿಸುತ್ತೇನೆ.

**ಶ್ರೀ ಕೆ.ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಕ್ರೀಡಾ ಇಲಾಖೆಗೆ ಒಂದು ಪರ್ಸೆಂಟ್ ಸೆಸ್ ಕೊಡಬೇಕೆಂದು ನಾನು ಈ ಸದನದ ಮೂಲಕ ಒತ್ತಾಯ ಮಾಡುತ್ತೇನೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ಹಿಂದೆ ಸ್ಪೀಕರ್ ಆಗಿದ್ದಾಗ ಅವರೇ ಶಿಫಾರಸ್ಸು ಮಾಡಿದ್ದಾರೆ. ಇವತ್ತು ಅವರು ಮಾನ್ಯ ಮುಖ್ಯಮಂತ್ರಿಗಳಾಗಿದ್ದಾರೆ. ಇವತ್ತು ಕ್ರೀಡಾ ಇಲಾಖೆಗೆ ಬಜೆಟ್ ಬೇಕಾಗುವುದಿಲ್ಲ. ಅದರಿಂದಲೇ 400 ರಿಂದ 500 ಕೋಟಿ ರೂಪಾಯಿಗಳು ಬರುತ್ತದೆ. ಬಜೆಟ್‌ನಲ್ಲಿ ಮೀಸಲಿಡುವಂತಹ ವ್ಯವಸ್ಥೆಯೇ ಬೇಕಾಗುವುದಿಲ್ಲ. ಆ ಕ್ರೀಡಾ ಸೆಸ್ ಅನ್ನು ಮಾನ್ಯ ಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಯವರ ಜೊತೆ ಮಾತನಾಡಿ ಅದನ್ನು ತರುತ್ತಾರೆ ಎಂದು ನಾನು ಅಂದುಕೊಂಡಿದ್ದೇನೆ. ಇದರ ಕಾಪಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ಕ್ರೀಡಾ ಪ್ರಾಧಿಕಾರದಲ್ಲಿ ನಡೆದಿರುವಂತಹ ಅವ್ಯವಹಾರದ ಬಗ್ಗೆ ಯಾವುದೋ ಒಂದು ಸುದ್ದಿವಾಹಿನಿಯವರು ಈಗ ತಾನೇ ಮಾಹಿತಿ ಕಳುಹಿಸಿಕೊಟ್ಟಿದ್ದಾರೆ. ಅದನ್ನು ತಮ್ಮ ಗಮನಕ್ಕೆ ಕೊಡುತ್ತೇನೆ. ಅದನ್ನು ತಾವು ಮಾನ್ಯ ಮಂತ್ರಿಯವರಿಗೆ ಕೊಟ್ಟು ಅದರಲ್ಲಿ ಏನಿದೆ ಎನ್ನುವುದನ್ನು ನೋಡುವುದಕ್ಕೆ ಹೇಳಿ. ಅವ್ಯವಹಾರದ ಬಗ್ಗೆ ಅವರು ಒಂದು ಕಾರ್ಯಾಚರಣೆ ಮಾಡಿದ್ದಾರೆ. ಇಲ್ಲಿ ಮಾನ್ಯ ಸಚಿವರು ಕೊಟ್ಟಿರುವ ಮಾಹಿತಿಯಲ್ಲಿ ಕ್ರೀಡಾಪಟುಗಳಿಗೆ ಇಷ್ಟು ಹಣ ಕೊಟ್ಟಿದ್ದೇವೆ ಎಂದು ತೋರಿಸಿದ್ದಾರೆ. 1995 ರಿಂದ ಟಿ.ಎ., ಡಿ.ಎ., ಎಷ್ಟು ಕೋಟಿ ಆಗಿದೆ

ಎಂದು ಇದರಲ್ಲಿ ಮಾಹಿತಿ ಇದೆ. ಅದನ್ನು ತಮಗೆ ಕೊಡುತ್ತೇನೆ. ತಾವು ಮಾನ್ಯ ಸಚಿವರ ಗಮನಕ್ಕೆ ಕೊಡಿ. ಈ ಹಣದಲ್ಲಿ 10% ಕೂಡ ಕ್ರೀಡಾ ಸಂಸ್ಥೆಗಳಿಗಾಗಲಿ, ಕ್ರೀಡಾ ಪಟುಗಳಿಗಾಗಲಿ ಹೋಗಿಲ್ಲ. 90% ಹಣ ಕೇವಲ ವಾಹನ ರಿಪೇರಿಗಾಗಿ ಟಿ.ಎ. ಡಿ.ಎ, ಅವರ ಬೇರೆ ವೆಚ್ಚಗಳಿಗೆ ಕಛೇರಿ ವೆಚ್ಚ, ಇವುಗಳಿಗಾಗಿಯೇ ಹಣ ಖರ್ಚಾಗಿದೆಯೇ ಹೊರತು, ಕ್ರೀಡಾ ಪ್ರಾಧಿಕಾರದಿಂದ ಕ್ರೀಡಾಪಟುಗಳಿಗೆ ದೊಡ್ಡ ಮಟ್ಟದಲ್ಲಿ ಏನೂ ಆಗಿಲ್ಲ. ಇತ್ತೀಚೆಗೆ ಮೊನ್ನೆ ಒಲಂಪಿಕ್ಸ್‌ಗೆ ಹೋಗಬೇಕಾದಾಗ ನಾವು, ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಅವರಿಗೆ ಮನವಿ ಮಾಡಿದಾಗ, ಇಲ್ಲ ಅವರನ್ನು ಕರೆದು ಸನ್ಮಾನ ಮಾಡೋಣ ಎಂದು ಹೇಳಿದರು, ಮತ್ತೆ ಹಿಂದೆ ಮಾನ್ಯ ಯಡಿಯೂರಪ್ಪನವರು ಇದ್ದಾಗಲೂ ಕೂಡ ಮನವಿ ಮಾಡಿದಾಗ, ಅವರೂ ಹಿಂದೆ ಒಲಂಪಿಕ್ಸ್‌ಗೆ ಹೋದಾಗ ಅವರನ್ನು ಕರೆದು ಸನ್ಮಾನ ಮಾಡಿ ಅವರ ಮನೆಯಲ್ಲಿ ಚಹಾ ಕೊಟ್ಟು ಕಳುಹಿಸಿಕೊಟ್ಟಿದ್ದಾರೆ. ಕಾಮನ್‌ವೆಲ್ತ್‌ಗೂ ಹೋಗುವಾಗಲೂ ಮಾಡಿದ್ದಾರೆ. ಈ ಕೆಲಸ ಯಾರು ಮುಖ್ಯಮಂತ್ರಿಗಳಿದ್ದಾರೆ, ಅವರ ಲೆವೆಲ್‌ನಲ್ಲಿ ಆಗುತ್ತಿದೆ ಅಷ್ಟೆ ಹೊರತು, ಅಧಿಕಾರಿಗಳ ಲೆವೆಲ್‌ನಲ್ಲಂತೂ ಅಲ್ಲ. ನಾವು ಹೋಗಿ ಮುಖ್ಯಮಂತ್ರಿಗಳಿಗೆ ಹೇಳಿ ಇದನ್ನು ಗಮನಕ್ಕೆ ತಂದಾಗ ಮತ್ತು ಸಚಿವರ ಗಮನಕ್ಕೆ ತಂದಾಗ ಈ ಕೆಲಸ ನಡೆಯುತ್ತಿದೆ ಎನ್ನುವುದು ಬಿಟ್ಟರೆ, ಐದು ವರ್ಷಗಳಲ್ಲಿ ಕ್ರೀಡಾ ಪ್ರಾಧಿಕಾರದಲ್ಲಿ ಏನೇನು ಅವ್ಯವಹಾರ ನಡೆದಿದೆ ಅದನ್ನು ಸಮಗ್ರ ತನಿಖೆ ಮಾಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

**ಉಪಸಭಾಪತಿಯವರು:-** ಮಾನ್ಯ ನಾಣಯ್ಯನವರು ಎರಡು ನಿಮಿಷ ಮಾತನಾಡುತ್ತಾರೆ.

**ಶ್ರೀ ಎಂ.ಸಿ. ನಾಣಯ್ಯ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದರಾಜುರವರು ಈ ಕ್ರೀಡಾ ಪ್ರಾಧಿಕಾರ ಮತ್ತು ಈ ಕ್ರೀಡೆಯಲ್ಲಿ ಆಗುತ್ತಿರತಕ್ಕಂಥದ್ದು ಮತ್ತು ಇತರೆ ಯುವಜನರಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಅವರು ಹೇಳತಕ್ಕಂಥದ್ದರಲ್ಲಿ ಸತ್ಯಾಂಶವಿದೆ. ಏಕೆಂದರೆ ಅವರು ಬಹಳ ವರ್ಷ

ಇಂಡಿಯನ್ ಒಲಂಪಿಕ್ಸ್ ಅಸೋಸಿಯೇಷನ್ ಎಂದು ಹೇಳತಕ್ಕಂಥದ್ದರಲ್ಲಿ ಕರ್ನಾಟಕದಲ್ಲಿ ಅವರು ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಅದರ ಒಳಹೊಕ್ಕು ನೋಡಿದಾಗ, ಅವರಿಗೆ ಎಲ್ಲಾ ಅದರ ಅಭಿಪ್ರಾಯಗಳು, ಅದರ ಮಜಲುಗಳು, ಅದರ ಆಯಾಮಗಳು ಗೊತ್ತಿದೆ ಎನ್ನುವುದರ ಹಿನ್ನೆಲೆಯಲ್ಲಿ ಅವರು ಮಾತನಾಡುತ್ತಿದ್ದಾರೆ. ಈ ರಾಷ್ಟ್ರದಲ್ಲಿರುವ ಯಾವುದೇ ಒಂದು ಕ್ರೀಡಾ ಸಂಸ್ಥೆಯನ್ನು ತೆಗೆದುಕೊಳ್ಳಿ, ಅದು ಹಾಕಿ ಆಗಲಿ, ಕ್ರಿಕೆಟ್ ಆಗಲಿ ಅಥವಾ ಕಾಮನ್‌ವೆಲ್ತ್ ಗೇಮ್ಸ್ ಆಗಲಿ, ಅಥ್ಲೆಟ್ಸ್ ಆಗಲಿ ಯಾರೆಲ್ಲಾ ಅದರಲ್ಲಿದ್ದಾರೆ, ಎಲ್ಲದರಲ್ಲೂ ಕೂಡ ನಾನು ಹೇಳುತ್ತಿದ್ದೇನೆ, ನಿಮ್ಮ ಒಲಂಪಿಕ್ಸ್ ಸಂಸ್ಥೆಯನ್ನೂ ಒಳಗೊಂಡಂತೆ, ನಿಮ್ಮನ್ನು ಹೊರತುಪಡಿಸಿ ಹೇಳುವುದಕ್ಕೆ ನಾನು ತಯಾರಾಗಿಲ್ಲ. ಎಲ್ಲದರಲ್ಲೂ ನಾನು ಹೇಳುತ್ತೇನೆ, ಪಾಪದ ಜನ, ಯಾರು ಕ್ರೀಡೆಯಲ್ಲಿ ಉತ್ತಮವಾಗಿ ಬಲಿಷ್ಠರಾಗಿದ್ದಾರೆ, ಅವರಿಗೆ ಅವಕಾಶ ಸಿಗದೇ ಇರತಕ್ಕಂಥ ಪರಿಸ್ಥಿತಿ ಇದೆ ಎಂದು ನಾನು ಹೇಳುತ್ತಿದ್ದೇನೆ. ದೊಡ್ಡಮಟ್ಟದಲ್ಲಿ ಆಗತಕ್ಕಂಥದ್ದು, ಕೆಳಮಟ್ಟದಲ್ಲಿ ಆಗತಕ್ಕಂಥದ್ದು ಇದೆ. ಕಾಮನ್‌ವೆಲ್ತ್ ಗೇಮ್ಸ್ ಒಂದರಲ್ಲೇ ತಿಂದಿರತಕ್ಕಂಥ ಹಣದ ಮೊತ್ತ ಗೊತ್ತಿಲ್ಲವೆ? ಇವರೆಲ್ಲಾ ಬಹಳ ದೊಡ್ಡ ದೊಡ್ಡ ಜನ, ಬಹಳ ವರ್ಷಗಳವರೆಗೆ ನಿರಂತರವಾಗಿ ಅಧ್ಯಕ್ಷರಾಗಿ, ಸದಸ್ಯರಾಗಿರತಕ್ಕಂಥವರು. ಈಗ ನಮ್ಮ ರಾಜ್ಯದಲ್ಲಿ ಕ್ರಿಕೆಟ್ ಅಸೋಸಿಯೇಷನ್ ಎಂದು ಇದೆ. ಎಲ್ಲಾ ರಾಜ್ಯಗಳಲ್ಲಿಯೂ ಒಂದೊಂದು ಕ್ರಿಕೆಟ್ ಅಸೋಸಿಯೇಷನ್ ಇದೆ. ಅದರಲ್ಲಿತಕ್ಕಂಥ ಅಧ್ಯಕ್ಷರುಗಳೆಲ್ಲಾ ರಾಜಕಾರಣಿಗಳೇ ಆಗಿದ್ದಾರೆ. ಅವರೇನೂ ಕ್ರಿಕೆಟ್ ಆಡುತ್ತಾರಾ?

**ಉಪ ಸಭಾಪತಿಯವರು:-** ಮಾನ್ಯ ನಾಣಯ್ಯನವರೆ, ಅದು ಈ ದೇಶದ ದುರಂತ.

**ಶ್ರೀ ಎಂ.ಸಿ.ನಾಣಯ್ಯ:-**ಮಾನ್ಯ ಸಭಾಪತಿಯವರೇ, ಅದು ಈ ದೇಶದ ದುರಂತ. ಅದಕ್ಕೆ ಈಗ ನಾನು ಹೇಳುತ್ತಿದ್ದೇನೆ. ಮಾನ್ಯ ಅಪ್ಪಚ್ಚುರಂಜನ್‌ರವರೆ, ಅವರು ಹೇಳಿರುವುದರ ಬಗ್ಗೆ ತಾವು ಗಮನಹರಿಸಿ, ಎಲ್ಲೆಲ್ಲಿ ಈ ರೀತಿ ರಾಜಕಾರಣ ಆಗುತ್ತಿದೆ, ಹಣ ಮಾಡುತ್ತಿದ್ದಾರೆ, ಹಣ ಹೊಡೆಯುತ್ತಿದ್ದಾರೆ, ಇಲಾಖೆಯ ಅಧಿಕಾರಿಗಳಾಗಲಿ, ಮಂತ್ರಿಗಳಾಗಲಿ, ಕೊಟ್ಟ ಹಣವೆಲ್ಲಾ 100 ಕ್ಕೆ

10% ಮಾತ್ರ, ಬಾಕಿ 90% ಜೇಬಿಗೆ ಹೋಗುತ್ತಿದೆ ಎಂದು ಅವರು ಹೇಳಿದರು. ಬಹುಶಃ ಇದರಲ್ಲಿ ಸತ್ಯಂಶ ಇರಬಹುದು ನಾನು ಇಲ್ಲವೆಂದು ಹೇಳಲಿಕ್ಕೆ ತಯಾರಾಗಿಲ್ಲ. ಈ ಹಿನ್ನೆಲೆಯಲ್ಲಿ ಇದರ ಬಗ್ಗೆ ಅವರು ಗಮನವನ್ನು ಸೆಳೆದಿದ್ದಾರೆ, ನಾನು ಇಲ್ಲವೆಂದು ಹೇಳಿಲ್ಲ. ಆದ್ದರಿಂದ ಈ ಕ್ರೀಡಾ ಇಲಾಖೆಯಲ್ಲಿ ಯಾರು ನಿಜವಾಗಿಯೂ ಸಮರ್ಥರಾಗಿದ್ದಾರೆ, ಆಡುವುದಕ್ಕೆ ಶಕ್ತಿ ಇರತಕ್ಕಂಥವರು ಹಾಕಿಯಾಗಲಿ, ಕ್ರಿಕೆಟ್ ಆಗಲಿ, ನನಗೆ ಗೊತ್ತಿದೆ ನಮ್ಮ ಕೊಡಗಿನಲ್ಲಿರುವವರು ಹಾಕಿ ಆಡಳಿತಕ್ಕಂಥ ಜನ. ಕರ್ನಾಟಕದಲ್ಲಿರುವ ಹಾಕಿ ಅಸೋಸಿಯೇಷನ್‌ನಲ್ಲಿ, ಕೆಲವು ಸಂದರ್ಭಗಳಲ್ಲಿ 11 ಜನ ಹಾಕಿ ಆಟಗಾರರು ಕೊಡಗಿನವರು ಇದ್ದಂತಹ ಕಾಲ ಇತ್ತು. ಅಂತಹ ಒಂದು ಹಾಕಿ ಅಸೋಸಿಯೇಷನ್ ಇದೆ. ಆ ಹಾಕಿ ಅಸೋಸಿಯೇಷನ್ ಅನ್ನೇ ಮುಚ್ಚುವಂತಹ ಪ್ರಯತ್ನ ಒಂದು ಬಾರಿ ನಡೆಯಿತು. ಅರ್ಜಿಗಳ ಸಮಿತಿಯಲ್ಲಿ ತಾವೇ ಅಧ್ಯಕ್ಷರಾಗಿದ್ದೀರಿ. ಇದು ಏನು ದುರಂತ ಆಯಿತು ಎಂದು ನಾನು ನಿಮ್ಮ ಹತ್ತಿರ ಬಂದು ಕೇಳಿದೆ, ತಪ್ಪು ಮಾಡಿರತಕ್ಕಂಥದ್ದು ಏನು? ಆ ಸಂಸ್ಥೆ ನಡೆಸುತ್ತಿದ್ದಾರೆ, ಅದರಲ್ಲಿ ನಮ್ಮ ಮಕ್ಕಳೂ ಬೇಕಾದಷ್ಟು ಜನ ಇದ್ದಾರೆ. ಏನಾದರೂ ಅಪಚಾರಗಳು ಇದ್ದರೆ, ಲೋಪಗಳು ಇದ್ದರೆ ತನಿಖೆಯನ್ನು ಮಾಡಿಸಿ. ಆದರೆ, ಸಂಸ್ಥೆಯನ್ನೇ ರದ್ದುಪಡಿಸುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತಿರುವುದು ಸರಿಯಲ್ಲ ಎಂದು ತಮ್ಮ ಗಮನಕ್ಕೆ ತಂದಿರುವುದನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಯವರೆ, ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ, ಅವರು ಎತ್ತಿರತಕ್ಕಂಥ ವಿಚಾರದ ಬಗ್ಗೆ ಗಮನಹರಿಸಿ ಅವರು ಹೇಳುತ್ತಿರುರುವುದರಲ್ಲಿ ತಪ್ಪೇನಿಲ್ಲ. ಯಾವ ಇಲಾಖೆ ಬಾಕಿ ಉಳಿದಿದೆ? ಯಾವುದಾದರೂ ಒಂದು ಇಲಾಖೆ ಬಾಕಿ ಉಳಿದಿದೆ? ಯಾವುದಾದರೂ ಒಂದು ಇಲಾಖೆ ಬಾಕಿ ಇದೆಯೇ? ಅದು ಕ್ರೀಡಾ ಇಲಾಖೆಗೂ ಬಂದುಬಿಟ್ಟಿತ್ತಲಾ ಎನ್ನುವುದು ಬೇಸರ ಅಷ್ಟೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ನಾನು ನಿಮ್ಮನ್ನು ಇಷ್ಟೇ ಕೇಳುತ್ತಿದ್ದೇನೆ. ಮಾನ್ಯ ಗೋವಿಂದರಾಜ್‌ರವರು ಎತ್ತಿರತಕ್ಕಂಥ ವಿಚಾರದ ಬಗ್ಗೆ ಒಂದು ಸಮಗ್ರವಾದ ತನಿಖೆ ನಡೆಸಿ. ಬಹುಶಃ ಇವತ್ತು ಕ್ರೀಡಾ ಪ್ರಾಧಿಕಾರದಲ್ಲಿ

ಅವರೂ ಸದಸ್ಯರಾಗಿದ್ದಾರೆ ಎಂದು ಕಾಣಿಸುತ್ತದೆ. ಈಗ ಹೊಸ ಅಧ್ಯಕ್ಷರು ಬಂದಿದ್ದಾರೆ. ಸ್ವಲ್ಪ ಹುರುಪಿನಲ್ಲಿ ಕೆಲಸ ಮಾಡುವ ಶಕ್ತಿ ಅವರಿಗೆ ಇದೆ.

**ಉಪಸಭಾಪತಿಯವರು:–** ಮಾಡುತ್ತಾರೆ.

**ಶ್ರೀ ಎಂ.ಸಿ.ನಾಣಯ್ಯ:–** ಮಾಡುತ್ತಾರೆ. ಶಕ್ತಿ ಇದೆ ಅಲ್ಲವೇ?

**ಶ್ರೀ ಅಪ್ಪುಚ್ಚು ರಂಜನ್:–** ಖಂಡಿತವಾಗಿಯೂ ಕಾಳಜಿ ಇದೆ.

**ಉಪ ಸಭಾಪತಿಯವರು:–** ಮಾನ್ಯ ನಾಣಯ್ಯನವರೆ, ಅವರು ಕೊಡಗಿನ ಕಲಿ. ಮಾಡುತ್ತಾರೆ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ, ನಮ್ಮಲ್ಲಿ ಆತ್ಮಾಭಿಮಾನಕ್ಕೆ ಚ್ಯುತಿ ತರತಕ್ಕಂಥ ಕೆಲಸ ಬಂದಾಗ, ಸ್ಥಾನ ಬಿಟ್ಟು ಹೊರಗಡೆ ಹೋಗತಕ್ಕಂಥ ಪರಿಸ್ಥಿತಿ ಸ್ವಲ್ಪಮಟ್ಟಿಗೆ ನಿರ್ಮಾಣ ಮಾಡಿಕೊಂಡಿದ್ದೇವೆ. ಇಲ್ಲವೆಂದೇನೂ ಇಲ್ಲ. ಆದರೆ ಆ ರೀತಿ ಯಾರಲ್ಲೂ ಇಲ್ಲವೆಂದು ಹೇಳಲಿಕ್ಕೂ ತಯಾರಿಲ್ಲ. ಬಹಳಷ್ಟು ಜನರಿದ್ದಾರೆ. ಈ ಹಿನ್ನೆಲೆಯಲ್ಲಿ ಮಾನ್ಯ ಮಂತ್ರಿಗಳಿಗೆ ನಾನು ಕೇಳುವುದೇನೆಂದರೆ, ಎಲ್ಲೆಲ್ಲಿ ಹಣ ಹೊಡೆಯುತ್ತಿದ್ದಾರೆ? ನಿಮ್ಮ ಇಲಾಖೆಯಲ್ಲಿ, ಬಾಕಿ ಇಲಾಖೆಗಳು ಏನು ಮಾಡುತ್ತಾರೆಯೋ ಮಾಡಿಕೊಳ್ಳಲಿ. ನನಗೆ ಗೊತ್ತಿಲ್ಲ. ಯಾರ್‍ಯಾರ ಇಲಾಖೆಯಲ್ಲಿ ಏನೆಲ್ಲಾ ಹೊಡೆಯುತ್ತಾರೆ ಎನ್ನುವುದು ಗೊತ್ತಿಲ್ಲ. ನಿಮ್ಮ ಇಲಾಖೆಯಲ್ಲಿ ಎಲ್ಲಿಯಾದರೂ ಹಣ ಹೊಡೆಯುವವರು ಇದ್ದರೆ, ಮಾನ್ಯ ಸದಸ್ಯರು ಹೇಳಿದ ಹಾಗೆ 100ಕ್ಕೆ 90 ಪರ್ಸೆಂಟ್ ಹಣ ತಿನ್ನುತ್ತಾರೆ ಎನ್ನುವುದಾದರೆ ಇದರ ಬಗ್ಗೆ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳಬೇಕು. ಆದರೆ ಒಂದು ಮಾತು ಹೇಳುತ್ತೇನೆ, ಮಾನ್ಯ ಗೋವಿಂದರಾಜುರವರೆ, ಇದು ಎಲ್ಲಾ ಮಟ್ಟದಲ್ಲೂ ನಡೆಯತಕ್ಕಂಥದ್ದೆ. ನಿಮ್ಮ ಒಲಂಪಿಕ್ಸ್ ಅಸೋಸಿಯೇಷನ್ ಆಗಲಿ, ಕ್ರಿಕೆಟ್ ಅಸೋಸಿಯೇಷನ್ ಆಗಲಿ, ಫುಟ್‌ಬಾಲ್ ಅಸೋಸಿಯೇಷನ್ ಆಗಲಿ ಅಥವಾ ಯಾವುದೇ ಅಸೋಸಿಯೇಷನ್ ಆಗಲಿ ಎಲ್ಲಾ ಮಟ್ಟದಲ್ಲೂ ನಡೆಯುತ್ತಿರುತ್ತದೆ. ಕರ್ನಾಟಕದಲ್ಲಿ ಫುಟ್‌ಬಾಲ್ ಅಸೋಸಿಯೇಷನ್, ಹಾಕಿ ಅಸೋಸಿಯೇಷನ್, ಕ್ರಿಕೆಟ್ ಅಸೋಸಿಯೇಷನ್, ಅಥ್ಲೆಟಿಕ್ ಅಸೋಸಿಯೇಷನ್ ಇದೆ. ಇದರಲ್ಲಿ

ಒಳ್ಳೆಯವರೂ ಇದ್ದಾರೆ. ಒಳ್ಳೆಯವರು ಇಲ್ಲ ಎಂದು ನಾನು ಹೇಳುವುದಕ್ಕೆ ತಯಾರಿಲ್ಲ. ಆದರೆ ಕೆಲವರು ಭ್ರಷ್ಟರು ಇದ್ದಾರೆ. ನಮ್ಮ ಅಧಿಕಾರಿಗಳಿಗೆ ನಾನು ಹೇಳುತ್ತೇನೆ, ಎಲ್ಲರನ್ನೂ ನಾನು ಸಾರಸಗಟಾಗಿ ಭ್ರಷ್ಟರು ಎಂದು ಹೇಳುವುದಕ್ಕೆ ತಯಾರಿಲ್ಲ. ನಮ್ಮ ಯಾವುದೇ ಇಲಾಖೆಯಾಗಲಿ, ಆ ಇಲಾಖೆಯಲ್ಲಿ ನಿಜವಾಗಿಯೂ ಶೇಕಡ 20 ರಷ್ಟಾದರೂ ಒಳ್ಳೆಯವರು ಇದ್ದಾರೆ ಅಲ್ಲವೆ? ಹಾಗೆಯೇ ರಾಜಕಾರಣಿಗಳು ನಾವೆಲ್ಲರೂ ಸಾಚಾಗಳು ಎಂದು ಹೇಳಲಿಕ್ಕೂ ನಾನು ತಯಾರಿಲ್ಲ. ಆದರೆ ನಿಜವಾಗಿಯೂ ಸಾಚಾಗಳು ಇದ್ದಾರೆ ಎಂದು ಒಪ್ಪಿಕೊಳ್ಳಬೇಕಲ್ಲವೇ? ಆದ್ದರಿಂದ ಎಲ್ಲರನ್ನೂ ಸಾರಾಸಗಟಾಗಿ ಭ್ರಷ್ಟರು ಎಂದು ಹೇಳುವುದು ಸರಿಯಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಎಲ್ಲಾ ಅಸೋಸಿಯೇಷನ್‌ಗಳನ್ನು ಒಳಗೊಂಡು ಬಹುಶಃ ನಿಮಗೆ ಅಧಿಕಾರವಿದ್ದರೆ ಅದರ ಬಗ್ಗೆ ನೀವು ಕ್ರಮ ತೆಗೆದುಕೊಳ್ಳಿ. ನೀವು ಈಗ ಮಂತ್ರಿಗಳಾಗಿದ್ದೀರಿ. ಈಗ ಪ್ರಾಧಿಕಾರವಿದ್ದರೆ ಅದರ ಬಗ್ಗೆ ನೀವು ಕ್ರಮ ತೆಗೆದುಕೊಳ್ಳಿ. ನೀವು ಈಗ ಮಂತ್ರಿಗಳಾಗಿದ್ದೀರಿ. ಈಗ ಪ್ರಾಧಿಕಾರದ ಅಧ್ಯಕ್ಷರೂ ನೀವೇ ಆಗಿದ್ದೀರಿ. ಮಾನ್ಯ ಗೋವಿಂದರಾಜುರವರೆ, ಮಾನ್ಯ ಸಚಿವರು ಪ್ರಾಧಿಕಾರದ ಅಧ್ಯಕ್ಷರಾಗಿದ್ದಾರೆ. ಬಹುಶಃ ಅವರಿಂದ ಏನು ಮಾಡಲಿಕ್ಕೆ ಆಗದಿದ್ದರೆ ನೀವು ಅವರನ್ನು ಬಿಡಬೇಡಿ. ನಿಮ್ಮಲ್ಲೇನಾದರೂ ಆರೋಪಗಳಿದ್ದರೆ, ಅವರು ನಿಮ್ಮನ್ನೂ ಕೂಡ ಬಿಡಬೇಕಾಗಿಲ್ಲ. ಆ ಕೆಲಸವನ್ನು ಮಾಡಿ ಎಂದು ನಾನು ಸಲಹೆಯನ್ನು ಕೊಡುತ್ತಿದ್ದೇನೆ.

**ಶ್ರೀ ಅಶ್ವತ್ ನಾರಾಯಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕಳೆದ ಬಾರಿ ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ಬೆಂಗಳೂರಿನ ಫುಟ್‌ಬಾಲ್ ಮೈದಾನದಲ್ಲಿ ಒಂದು ಪಂದ್ಯಾವಳಿ ನಡೆಯುತ್ತಿತ್ತು. ಫುಟ್‌ಬಾಲ್ ಆಟಗಾರ ಆಟವಾಡುತ್ತಿದ್ದ ಸಂದರ್ಭದಲ್ಲಿ ಏನೋ ಸಮಸ್ಯೆಯಾಗಿ ಉಸಿರುಗಟ್ಟಿ ಸತ್ತು ಹೋದ. ಅವನನ್ನು ಆಸ್ಪತ್ರೆಗೆ ಸಾಗಿಸಲಿಕ್ಕೆ ಅಲ್ಲಿ 15–20 ನಿಮಿಷಗಳಾದರೂ Ambulance ಸೌಲಭ್ಯವಿಲ್ಲದೇ ಫುಟ್‌ಬಾಲ್ ಆಟಗಾರ ಸ್ಥಳದಲ್ಲಿಯೇ ಸತ್ತು ಹೋದ. ಹೀಗಾಗಿ ಮೂಲಭೂತವಾಗಿ ಅಲ್ಲಿ ಪ್ರಥಮ ಚಿಕಿತ್ಸೆ, Ambulance ಇತ್ಯಾದಿಗಳ ಸೌಲಭ್ಯಗಳು ಅವಶ್ಯಕವಾಗಿ

ಬೇಕಾಗಿದ್ದು, ದಯವಿಟ್ಟು ಇದರ ಕಡೆ ಸರ್ಕಾರ ಗಮನಕೊಡಬೇಕೆಂದು ಹೇಳುತ್ತೇನೆ. ಆ ಒಬ್ಬ ಕ್ರೀಡಾ ಪಟುವಿಗೆ ಸರ್ಕಾರದಿಂದ ಪರಿಹಾರವನ್ನು ಕೊಟ್ಟಿದೆಯೋ ಇಲ್ಲವೋ ಗೊತ್ತಿಲ್ಲ.

**ಉಪ ಸಭಾಪತಿಯವರು:–** ಶ್ರೀಯುತ ಅಶ್ವತ್‌ನಾರಾಯಣ್‌ರವರೆ, ಈ ದೇಶದ ದುರಂತ ಎಂದು ನಾನು ಹೇಳಿದ ಹಾಗೆ ಏನಾಗಿದೆ ಎಂದರೆ ದೊಡ್ಡ ಮೀನುಗಳು ಸಣ್ಣ ಮೀನುಗಳನ್ನು ತಿಂದ ಹಾಗೆ ಹಾಗಿದೆ. ಆದರೆ, ಈ ರಾಷ್ಟ್ರಕ್ಕೆ ಮತ್ತು ಈ ರಾಜ್ಯಕ್ಕೆ ಕ್ರೀಡಾಪಟುಗಳಾಗಿ ಸೇವೆ ಸಲ್ಲಿಸಿದವರು ಯಾವ ಒಂದು ಸ್ಥಿತಿಯಲ್ಲಿದ್ದಾರೆಂದರೆ ಇಟ್ಟಿಗೆ ಸುಡುವ ಭಟ್ಟಿಯೊಳಗೆ ಒಬ್ಬ ಹೆಣ್ಣು ಮಗಳು ಕೆಲಸ ಮಾಡುವುದನ್ನು ನೋಡಿ ಹೊಟ್ಟೆ ಹುರಿಯುತ್ತದೆ. ನಾನು ನಿನ್ನೆ ಟಿ.ವಿಯಲ್ಲಿ ನೋಡಿದ ಹಾಗೆ ಒಬ್ಬ ಮುಸ್ಲೀಂ athlete ಬಗ್ಗೆ  ಅವರು ಕತೆ ಹೇಳಿದ್ದನ್ನು ಕೇಳಿ ನನಗೆ ಕಣ್ಣಿನಲ್ಲಿ ನೀರು ಬಂತು. ಚಿನ್ನದ ಪದಕಗಳನ್ನು ಪಡೆದಂತಹ athlete ಇವತ್ತು ಕೂಲಿನಾಲಿ ಮಾಡಿ ಜೀವನ ಮಾಡುತ್ತಾರೆ. ತಿನ್ನುವವರು ತಿನ್ನುತ್ತಿರುತ್ತಾರೆ. ದೋಚುವವರು ದೋಚುತ್ತಿರುತ್ತಾರೆ.

ಶ್ರೀಯುತ ಅಪ್ಪಚ್ಚು ರಂಜನ್‌ರವರೆ, ತಾವು ಬಹಳ ಹುಮ್ಮಸ್ಸಿನಿಂದ ತಾವು ಸಚಿವರಾಗಿದ್ದೀರಿ. ಕೊಡಗಿನವರಾದ ತಮಗೆ ಕ್ರೀಡಾ ಖಾತೆಯನ್ನೇ ಕೊಟ್ಟಿದ್ದಾರೆ. ತಾವು ಸರಿಯಾದ ರೀತಿಯಲ್ಲಿ ಅದಕ್ಕೆ ನ್ಯಾಯವನ್ನು ಒದಗಿಸಬೇಕು.

**ಶ್ರೀಮತಿ ಮೊಟಮ್ಮ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈ ಕ್ರೀಡಾ ಇಲಾಖೆ ಮತ್ತು ಸಂಸ್ಕೃತಿ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಎಂದರೆ ಮೂಗು ಮುರಿದುಕೊಳ್ಳುತ್ತಾರೆ. ಆದರೆ ಕ್ರೀಡಾ ಇಲಾಖೆಗೆ ಯಾವಗಲೂ State Minister ಅನ್ನು ಮಾಡುತ್ತಿದ್ದರು. ಈಗ Cabinet level Minister ಅನ್ನು ಮಾಡಿದ್ದಾರೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಈಗ State Minister ಗಳೇ ಇಲ್ಲ.

**ಶ್ರೀಮತಿ ಮೊಟಮ್ಮ:–** ಈಗ State Minister ಗಳೇ ಇಲ್ಲ. ಮೊದಲು ಆ ರೀತಿಯಲ್ಲಿ ಇರುತ್ತಿತ್ತು. ಅದರೆ, ಈಗ Cabinet Minister ದರ್ಜೆ

ಕೊಟ್ಟಿರುವುದು ಈ ಒಂದು ಇಲಾಖೆಗೆ credit ಎಂದು ನಾನು ತಿಳಿದುಕೊಳ್ಳುತ್ತೇನೆ. ಆದರೆ, ನೀವು ವೀರಭೂಮಿ ಕೊಡಗಿನಿಂದ ಬಂದಿದ್ದೀರಿ. ಈಗ ಈ sportmen ಗಳ ವಿಚಾರದಲ್ಲಿ ಅವರು ನಿಜವಾಗಿಯೂ ಬಹಳ ಕಳಕಳಿಯಿಂದ ಹೇಳಿದ್ದಾರೆ. ಅದರಲ್ಲಿ ಸತ್ಯ ಇರುತ್ತದೆ. ಸತ್ಯ ಇಲ್ಲವೆಂದು ಹೇಳುತ್ತಿಲ್ಲ. ಆದರೆ, ಏನಾಗಿದೆ ಎಂದು ಹೇಳಿದರೆ ಎಲ್ಲಾ ಇಲಾಖೆಯವರು ಒಂದಲ್ಲಾ ಒಂದು ರೀತಿಯಲ್ಲಿ ಮಾನ್ಯ ಶ್ರೀ ನಾಣಯ್ಯನವರು ಹೇಳಿದ ಹಾಗೆ ಕೆಲವರು ಚಾಪೆ ಕೆಳಗಡೆ ನುಸುಳಿದರೆ ಮತ್ತೆ ಕೆಲವರು ರಂಗೋಲಿ ಕೆಳಗಡೆ ನುಸುಳುವಂತಹ ಕೆಲಸವನ್ನು ಮಾಡುತ್ತಾರೆ. ಆದರೆ, ಈ ವಿಚಾರದಲ್ಲಿ ನನ್ನ ಕಳಕಳಿ ಮನವಿ ಏನೆಂದರೆ, sportsmen ವಿಚಾರವಾಗಿ ಹೇಳುವುದಾದರೆ ನಾನು ಸಹ ಒಂದು ಸಮಯದಲ್ಲಿ Volleyball Stateplyer ಆಗಿದ್ದು national level ನಲ್ಲೂ ಆಡಿದ್ದೆ. ಅದು ತಮ್ಮ ಗಮನದಲ್ಲಿ ಇದೆಯೋ ಇಲ್ಲವೋ ಗೊತ್ತಿಲ್ಲ. ಅದು ಏನೇ ಇರಲಿ. ಈಗಲೂ ಕೂಡ ನಾನು flat ಹೊಡೆದರೆ ಅಲ್ಲಿಯೇ ಬಿದ್ದು ಹೋಗುತ್ತಾರೆ.

**ಉಪ ಸಭಾಪತಿಯವರು:–** ಶ್ರೀಮತಿ ಮೊಟಮ್ಮನವರೆ, ಒಂದು ನಿಮಿಷ. ಮಹಾರಾಣೀಸ್ ಕಾಲೇಜ್‌ನಲ್ಲಿ ನಾನು ಮತ್ತು ಮೊಟಮ್ಮನವರು classmates ಆಗಿದ್ದೆವು. ನಾನು debateಗಳಲ್ಲಿ ಬಹುಮಾನಗಳನ್ನು ತರುತ್ತಿದ್ದೆನು. ಮೋಟಮ್ಮನವರು athleticsನಲ್ಲಿ shield ಗಳನ್ನು ಹಿಡಿದುಕೊಂಡು ಬರುತ್ತಿದ್ದರು.

**ಶ್ರೀ ಅಪ್ಪಚ್ಚು ರಂಜನ್ :–** ಸನ್ಮಾನ್ಯ ಸಭಾಪತಿಯವರೆ, ನಾನು ಶಾಸಕರ ಕ್ರೀಡಾಕೂಟದಲ್ಲಿಯೂ ಸಹ ನೋಡಿದ್ದೇನೆ. ಅವರು ಮಹಿಳಾ ವಿಭಾಗದಲ್ಲಿ champion ಆಗಿದ್ದರು, ನಾನು ಪುರುಷರ ವಿಭಾಗದಲ್ಲಿ champion ಆಗಿ ಹೈದ್ರಾಬಾದ್‌ನಿಂದ ಬಂದಿದ್ದೇನೆ. ಹೀಗಾಗಿ, ಅವರು ಈ ವಿಚಾರದಲ್ಲಿ ಏನೇ ಸಲಹೆ ಕೊಟ್ಟರೂ ಕೂಡ ನಾನು ತೆಗೆದುಕೊಳ್ಳುವುದಕ್ಕೆ ತಯಾರಿದ್ದೇನೆ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೆ, ತಾವು ಯಾವ Sports ನಲ್ಲಿ ಭಾಗವಹಿಸುತ್ತಿದ್ದಿರಿ.

**ಉಪ ಸಭಾಪತಿಯವರು:–** ನಾನು Throwball player ಆಗಿದ್ದೆನು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ತಾವು ಆ ಸಮಯದಲ್ಲಿ champion ಆಗಿರಬೇಕೆಂದು ಅನಿಸುತ್ತದೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಇದನ್ನು ಹಗುರವಾಗಿ ತೆಗೆದುಕೊಳ್ಳುವುದು ಬೇಡ. ನಾವು ಏನು ಮಾಡುತ್ತೇವೆಂದರೆ ಒಲಂಪಿಕ್ಸ್ ನಡೆಯುವಾಗ ಅಲ್ಲಿ ಗೆಲ್ಲುವವರಿಗೆ medals ನೀಡಲಾಗುತ್ತದೆ. ಆ medals ಯಾರ್‍ಯಾರಿಗೆ, ಯಾವ್ಯಾವ ದೇಶಕ್ಕೆ ಎಷ್ಟೆಷ್ಟು ಬಂದಿದೆ ಎಂದು ಹೇಳುವಾಗ ನಮಗೆ ಸಿಗಲಿಲ್ಲವೆಂದು ಹೇಳಿದರೆ ನಮಗೆ ಬೇಸರವಾಗುತ್ತದೆ ಮತ್ತು ಬಹಳ ದುಃಖವಾಗುತ್ತದೆ. ಹಾಗೆಯೇ, ರಾಷ್ಟ್ರಮಟ್ಟದ athletics ನ ಒಂದು ಕ್ರೀಡಾಕೂಟ ಇರಬಹುದು ಅಥವಾ ಹಾಕಿಯ ಪಂದ್ಯಾವಳಿಗಳು ಇರಬಹುದು, tournaments ಇರಬಹುದು. ಪುಟಬಾಲ್ ಪಂದ್ಯಾವಳಿಗಳು ಇರಬಹುದು. ಅವುಗಳಲ್ಲಿ ನಮ್ಮ ರಾಜ್ಯದ performance ಇಲ್ಲವೆಂದು ಹೇಳಿದರೆ ಆ ಟೈಮ್‌ನಲ್ಲಿ ನಮಗೆ ಬಹಳ ದುಃಖವಾಗುತ್ತದೆ. ಬೇರೆ ಟೈಮ್‌ನಲ್ಲಿ ನಾವು sportsman ಗಳಿಗೆ ಎಷ್ಟರಮಟ್ಟಿಗೆ ಗೌರವ ಕೊಡುತ್ತೇವೂ ಬಿಡುತ್ತೇವೋ ಅದು ಬೇರೆ ಪ್ರಶ್ನೆ. ಯಾವ್ಯಾವ ಜಿಲ್ಲೆಯಲ್ಲಿ ಉತ್ತಮ ಆಟಗಾರರು ಇದ್ದಾರೆ, ಅವರಿಗೆ ಎಲ್ಲಾ ರೀತಿಯಲ್ಲಿ ಒಂದು ಪ್ರೋತ್ಸಾಹ ಸಿಗಬೇಕು. ಈಗ ಮಾನ್ಯ ಸದಸ್ಯರು ಹೇಳಿದಾಗೆ ಒಬ್ಬ ರಾಷ್ಟ್ರಮಟ್ಟದ ಆಟಗಾರರಾಗಿದ್ದವರು, ಚಿನ್ನದ ಪದಕ ಗಳಿಸಿದ್ದವನು, ಇವತ್ತು ಕೂಲಿ ಮಾಡುತ್ತಾನೆಂದು ಹೇಳಿದರೆ ಅದು ನಮಗೆ ಅವಮಾನ. ಅವನಿಗೆ ಕನಿಷ್ಟ ಪಕ್ಷ ಏನಾದರೂ ಸವಲತ್ತು–ಸೌಲಭ್ಯ ಸಿಗುವಂತೆ ಮಾಡಬೇಕು. ಈಗ ಬೇರೆ ಬೇರೆ awards ಗೆ ಬಹುಮಾನವನ್ನು ಕೊಡುತ್ತಾರೆ. ಬೇರೆ ಬೇರೆ State award, National award ತೆಗೆದುಕೊಂಡವರಿಗೆ ಬಹುಮಾನ ಕೊಡುತ್ತಾರೆ. ಆದರೆ, sportsman ಗೆ ಏಕೆ ಕೊಡಬಾರದು? ಚಿನ್ನದ ಪದಕ ತಂದವರಿಗೆಲ್ಲಾ ಮಾಡಿ. ರಾಷ್ಟ್ರಮಟ್ಟಕ್ಕೆ ಹೋಗಬೇಕಾದರೆ ರಾಜ್ಯಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ನಮ್ಮ performance ಚೆನ್ನಾಗಿ ಆಗಬೇಕಾದರೆ ಸಂಪೂರ್ಣವಾಗಿ ತರಬೇತಿಯನ್ನು ಕೊಡಿಸಬೇಕಾಗುತ್ತದೆ. ಹಣ ದುರುಪಯೋಗ ಆಗುವುದು ಕಡಿಮೆಯಾಗುತ್ತದೆ.

ಅವರಿಗೆ ಕೊಡ ಬೇಕಾದಂತಹ ಎಲ್ಲಾ ಸವಲತ್ತುಗಳನ್ನು ಸರಿಯಾಗಿ ಕೊಡುತ್ತಿದ್ದೇವೆಯೇ? ಎನ್ನುವುದನ್ನು ನೋಡಿಕೊಂಡು ದಯವಿಟ್ಟು ಈ ಇಲಾಖೆಯನ್ನು ಅಭಿವೃದ್ಧಿಮಾಡಿ. ಕ್ರೀಡಾಪಟುಗಳಿಗೆ ಗೌರವ ತರುವಂತಹ ಕೆಲಸವನ್ನು ಮಾಡಿ ಎಂದು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ.

(ಗೊಂದಲ)

**ಉಪ ಸಭಾಪತಿಯವರು:–** ಇದು ತುಂಬಾ ಚರ್ಚೆ ಆಗಲಿಕ್ಕೆ ಆಗುವುದಿಲ್ಲ. ಬೇಡ.

**ಶ್ರೀ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ತಾವು ದಯವಿಟ್ಟು ಶಾಸಕರುಗಳಿಗೆ ಕ್ರೀಡಾಕೂಟವನ್ನು ಆಯೋಜನೆ ಮಾಡಿಸಬೇಕು. ದಯವಿಟ್ಟು, ಇದನ್ನು ಬೇಗ ಮಾಡಿಸಬೇಕು.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರ ಗಮನಕ್ಕೆ ಒಂದು ವಿಚಾರವನ್ನು ತರಲಿಕ್ಕೆ ಬಯಸುತ್ತೇನೆ. ನಿಮ್ಮ ಇಲಾಖೆಯ ಬಗ್ಗೆ ಇಷ್ಟೊಂದು ಚರ್ಚೆ ನಡೆಯುತ್ತಿರುವುದರಿಂದ ಹೇಳಲಿಕ್ಕೆ ಬಯಸುತ್ತೇನೆ. ಕಳೆದ ಎರಡು ತಿಂಗಳ ಹಿಂದೆ ಒಂದು ಹುಡುಗಿ ತಮ್ಮ ಊರಿನವರ ಜೊತೆಗೆ ನನ್ನ ಹತ್ತಿರ ಸಮಸ್ಯೆಯನ್ನು ಹೇಳಿಕೊಳ್ಳುವುದಕ್ಕೆ ಬಂದಿದ್ದಳು. ಅಂದರೆ, ನನಗೆ seat ಸಿಕ್ಕಿದೆ, ನನಗೆ elegibility ಇದೆ ಎಂದು ಹೇಳಿ ನನಗೆ ಕ್ರೀಡಾ ಹಾಸ್ಟೆಲ್‌ಗೆ ಸೇರಿಸಿಕೊಳ್ಳಬೇಕೆನ್ನುವುದು ಆ ಹುಡುಗಿಯ ಕೋರಿಕೆಯಾಗಿತ್ತು. ಆ ಹುಡುಗಿ national level ನಲ್ಲಿ ಆಟ ಆಡಿದ್ದಾಳೆ. ನಿಮ್ಮ ಇಲಾಖೆಯಲ್ಲಿ ಜಂಟಿ ನಿರ್ದೇಶಕರಾಗಿ ಕೆಲಸ ಮಾಡುತ್ತಿರುವ ಕಾಂತ್‌ರಾಜ್ ರವರು ಕ್ರೀಡಾ ಹಾಸ್ಟೆಲ್‌ಗೆ ಅವರಿಗೆ elegibility ಇಲ್ಲವೆಂದು ಹೇಳುತ್ತಾರೆ. ನಿಮ್ಮ ಪ್ರಧಾನ ಕಾರ್ಯದರ್ಶಿ ಯವರು ಅವರಿಗೆ ಪ್ರವೇಶಾವಕಾಶವನ್ನು ಕೊಡಿ ಎಂದು ಹೇಳುತ್ತಾರೆ. ಆದರೆ, ಇವರು ಆಗುವುದಿಲ್ಲವೆಂದು ಹೇಳುತ್ತಾರೆ. ನಾನು ಪ್ರಧಾನ ಕಾರ್ಯದರ್ಶಿಯವರ ಹತ್ತಿರ ಮತ್ತು ಜಂಟಿ ನಿರ್ದೇಶಕರು, ಇವರಿಬ್ಬರ ಹತ್ತಿರವೂ ಮಾತನಾಡಿದೆ. ಆದರೆ, ಕಾಂತ್‌ರಾಜ್‌ರವರು ನನ್ನನ್ನೇ convince ಮಾಡಲಿಕ್ಕೆ ನೋಡುತ್ತಾರೆ. “ಇಲ್ಲ ಸರ್, ಅವಳು ಬಾರಿ ಸಣ್ಣಗಿದ್ದಾಳೆ, ಅವಳ

ಕೈಯಲ್ಲಿ ಆಗುವುದೇ ಇಲ್ಲವೆಂದು" ಹೇಳುತ್ತಾರೆ. ಆದರೆ, ಆ ಹುಡುಗಿ national prize ತಂದಿದ್ದಾಳೆ. ತೀರ್ಮಾನ ಮಾಡಲಿಕ್ಕೆ ಇವರು ಯಾರು? ಇವರೇನು umpire ಆಗಿದ್ದಾರಾ? ಇವರು ಯಾರು? ಅವರಿಗೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಅವರು ದೇವನಹಳ್ಳಿ ತಾಲ್ಲೂಕಿನ ಹಳ್ಳಿಯವರಿದ್ದು, ಈ ರೀತಿಯಲ್ಲಿ ಅರ್ಹತೆ ಹೊಂದಿದವರಿಗೆ ತೊಂದರೆ ಕೊಡುತ್ತಿರುವವರಿಗೆ suspend ಮಾಡಿ ಮನೆ ಕಳುಹಿಸುವಂತಹ ಕೆಲಸವನ್ನು ಮಾಡಿ. ಗ್ರಾಮೀಣ ಪ್ರದೇಶದಲ್ಲಿ ಇರತಕ್ಕಂತಹವರು ನನಗೆ ಪರಿಚಯಸ್ಥರಿದ್ದು, ನನ್ನ ಹತ್ತಿರ ತಮ್ಮ ಸಮಸ್ಯೆಯನ್ನು ಹೇಳಿಕೊಂಡರು. ಪರಿಚಯಸ್ಥರು ಇಲ್ಲದಿದ್ದರೆ, ತಮ್ಮ ಸಮಸ್ಯೆಗಳನ್ನು ಯಾರ ಹತ್ತಿರ ಹೇಳುತ್ತಾರೆ. ಯಾರಿಗೆ ಬಂದು ಹೇಳಿಲಿಕ್ಕೆ ಸಾಧ್ಯ ಹೇಳಿ. ಹೇಗೆ ಸಾಧ್ಯ? ನಿಮ್ಮ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಬಲದೇವ ಕೃಷ್ಣರವರನ್ನು ಕೇಳಿದರೆ ನಾನು ಬರೆದು ಕಳುಹಿಸಿದ್ದೇನೆಂದು ಹೇಳುತ್ತಾರೆ. ಆದರೆ, ಆ ಜಂಟಿ ನಿರ್ದೇಶಕರು ಪ್ರವೇಶಾವಕಾಶವನ್ನು ಕೊಡುತ್ತಿಲ್ಲ. ನಾನು ಮಾತನಾಡಿದರೆ ಆಗುವುದಿಲ್ಲವೆಂದು ಹೇಳುತ್ತಾರೆ. ಆ ಹುಡುಗಿ state level ಮತ್ತು National level ಎರಡಲ್ಲೂ ಆಟವನ್ನು ಆಡಿದ್ದಾಳೆ. ಆದರೆ, ಇವರು ಅರ್ಹತೆ ಇಲ್ಲವೆಂದು ಹೇಳುತ್ತಾರೆ. ಈ ರೀತಿಯಲ್ಲಿ ನಡೆಯುತ್ತಿದೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ನಾನು ಎಲ್ಲವನ್ನೂ ಕೇಳಿದ್ದೇನೆ. ಪುಟ್ಟಣ್ಣನವರು ಹೇಳಿದ ಹಾಗೆ ಆ ಅಧಿಕಾರಿ ಎಲ್ಲಿಯವರೆಗೆ ಅಲ್ಲಿ ಇರುತ್ತಾನೆ, ಈ ಇಲಾಖೆ ಇದೇ ರೀತಿ ಆಗುತ್ತದೆ. ನಾನು ಈ ವಿಚಾರವನ್ನು ಹೇಳಬೇಕೆಂದಿದ್ದೆ. ಯಾರೇ ಹೇಳಿದರೂ ಸಹಿತ ತನ್ನದೇ ಆದಂತಹ ಒಂದು ಕತ್ತರಿ ಹಾಕುವಂತಹ ಕೆಲಸವನ್ನು ಆ ಅಧಿಕಾರಿ ಮಾಡುತ್ತಾರೆಂದು ಶ್ರೀಯುತ ಪುಟ್ಟಣ್ಣನವರು ಹೇಳಿದರು.

ಮಾನ್ಯ ಸಭಾಪತಿಯವರೆ, 1978 ರಲ್ಲಿ ಶ್ರೀಯುತ ಗುಂಡೂರಾವ್ ರವರು ಮುಖ್ಯಮಂತ್ರಿಗಳಿದ್ದಂತಹ ಸಂದರ್ಭದಲ್ಲಿ ನಾನು Sports Council Member ಆಗಿದ್ದೆನು. ಆನಂತರ ನಾನು ಅದರ ಉಪಾಧ್ಯಕ್ಷನಾಗಿದ್ದೆ ಆ ಸಮಯದಲ್ಲಿ ಶ್ರೀ ಪಿ.ರಾಮದೇವ್ ಅಧ್ಯಕ್ಷರಾಗಿದ್ದರು. ಉತ್ತಮವಾದಂತಹ

ಕೆಲಸವನ್ನು ಆ ಪಿ.ರಾಮ್‌ದೇವ್‌ರವರು ಮಾಡುತ್ತಿದ್ದರು. ತದನಂತರ ರಾಘವನ್ ಮತ್ತಿತರರು ಯಾರ್‍ಯಾರೋ ಬಂದು ಸಂಸ್ಥೆಯನ್ನು ನಾಶ ಮಾಡಿದರು. ಇವತ್ತು ನಾನು ಏನು ಹೇಳುತ್ತೇನೆಂದರೆ ಎಲ್ಲಾ ಕ್ರೀಡಾ ಪಟುಗಳಿಗೆ, ಅಲ್ಲಿ ಯಾರು ಉತ್ತಮವಾಗಿ ಆಟ ಆಡುತ್ತಾರೆ. ಅವರಿಗೆ scope ಇಲ್ಲ. ಯಾರು ವಸೂಲಿ ಮೇಲೆ ಬರುತ್ತಾರೆ. ಅವರಿಗೆ ಸ್ಕೋಪ್ ಇದೆ selection ಮಾಡುವಾಗ ಅವರಿಂದ ದುಡ್ಡು ವಸೂಲಿ ಮಾಡಿ selection ಮಾಡುತ್ತಾರೆ. ಈ ರೀತಿಯ ಅವ್ಯವಹಾರಗಳು ನಡೆಯುತ್ತವೆ. ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ನಾನು ಮಾನ್ಯ ಸಚಿವರಲ್ಲಿ ಇಷ್ಟೆ ಒತ್ತಾಯ ಮಾಡುತ್ತೇನೆ. ನಿಮಗೆ ಈ ಇಲಾಖೆಯ ಬಗ್ಗೆ ಬಹಳ ಕಳಕಳಿ ಇದೆ. ನಾನು ಅದಕ್ಕೆ ತಮ್ಮನ್ನು ಅಭಿನಂದಿಸುತ್ತೇನೆ. ಈ ಸರ್ಕಾರದವರು ಒಂದೇ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. Sportmen ಅನ್ನು Sports ಮಂತ್ರಿಯಾಗಿ ಮಾಡಿದ್ದಾರೆ. ಆದರೆ, ಬೇರೆ ಬೇರೆಯವರನ್ನು ಬೇರೆ ಬೇರೆ ಖಾತೆಗಳ ಮಂತ್ರಿಗಳನ್ನಾಗಿ ಮಾಡಿದ್ದಾರೆ. ಇವರು ಒಬ್ಬ ಒಳ್ಳೆಯ Sportmen ಇದ್ದಾರೆ. ಬಹಳ ಮಂದಿ ಇಂತಹ ಇಲಾಖೆಯನ್ನು ನನಗೆ ಏತಕ್ಕೆ ಕೊಟ್ಟರು ಎನ್ನುತ್ತಾರೆ. ಆದರೆ, ಇವರು ಈ ಇಲಾಖೆಯನ್ನು ವಹಿಸಿಕೊಂಡು ಬಹಳ ಖುಷಿಯಿಂದ ಮಾಡುತ್ತಿದ್ದು, ನಮಗೂ ಸಹ ಬಹಳ ಖುಷಿಯಾಗುತ್ತಿದೆ. ಏಕೆಂದರೆ, ಈ ಲೋಕೋಪಯೋಗಿ ಇಲಾಖೆ, ಕಂದಾಯ ಇಲಾಖೆ ಬೇಕೆಂದು ಜಗಳ ಮಾಡಿಕೊಂಡು ತೆಗೆದುಕೊಂಡಿದ್ದಾರಲ್ಲಾ! ಕೆಲವರು 2–3 ಮೂರು ಖಾತೆಗಳನ್ನು ತೆಗೆದುಕೊಂಡಿದ್ದಾರೆ. ಮತ್ತೆ ಕೆಲವರು ನನಗೆ ಈ ಖಾತೆ ಬೇಡ, ಆರ್.ಡಿ.ಪಿ.ಆರ್. ಖಾತೆ ಬೇಕು, ಕಂದಾಯ ಖಾತೆ ಬೇಕು...

**ಉಪ ಸಭಾಪತಿಯವರು:–** ಬೇರೆ ವಿಷಯಕ್ಕೆ ಹೋಗುವುದು ಬೇಡ.

**ಶ್ರೀ ಬಸವರಾಜ ಹೊರಟ್ಟಿ:–** ಮಂತ್ರಿಗಳಿದ್ದಂತಹವರು, senior ಇದ್ದಂತಹವರು junior ಗಳಿಗೆ ಒಳ್ಳೆಯ ಖಾತೆಗಳನ್ನು ಕೊಡಬೇಕು. ನನಗೆ ಬೇಕೆಂದು ಜಗಳವಾಡುವ ಕಾಲದಲ್ಲಿ ಅವರು ಏನೂ ಪ್ರತಿಕ್ರಿಯೆ ಮಾಡದೆ ಉತ್ತಮವಾದ ಕೆಲಸವನ್ನು ಈ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಏನೂ ಇಲ್ಲದಿದ್ದರೂ ಸಹಿತ ಮಾಡುತ್ತಿದ್ದಾರೆ. ಮಂತ್ರಿಯಾಗಬೇಕಾದರೆ ಮೊದಲು

ಅರ್ಹತೆ ಏನಿರಬೇಕು? ಈ ಇಲಾಖೆಯಲ್ಲಿ ಏನು ಕೆಲಸ ಇದೆ, ಬಜೆಟ್ ಎಷ್ಟಿದೆ, ಎಲ್ಲವನ್ನೂ ವಿಚಾರ ಮಾಡುತ್ತಾರೆ. ಇವರ ಬಜೆಟ್ ಬಹಳ ಕಡಿಮೆ ಇದೆ ಎಂದು ನನಗೆ ಗೊತ್ತಿದೆ.

**ಉಪಸಭಾಪತಿಯವರು:–** ಅದಕ್ಕೆ ಶ್ರೀಯುತ ಗೋವಿಂದರಾಜು ಅವರು ಕೊಟ್ಟಿಂತಹ ಸಲಹೆ ಬಹಳ ಚೆನ್ನಾಗಿದೆ. Cess ಹಾಕಿದರೆ ಬಜೆಟ್‌ನಲ್ಲಿ 1% ಹಣವೇ ಬೇಕಾಗುವುದಿಲ್ಲವೆಂದು ಹೇಳಿದರು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಕತೆ ಏನಾಯಿತು ಎಂದು ತಮಗೆ ಹೇಳಲಿಕ್ಕೆ ಬಯಸುತ್ತೇನೆ. ನಾನು ಶಿಕ್ಷಣ ಮಂತ್ರಿ ಇದ್ದಂತಹ ಸಂದರ್ಭದಲ್ಲಿ sports ಗೆ 1–00 ರೂಪಾಯಿ ಇತ್ತು. ಈಗ 5–00 ರೂಪಾಯಿ ಮಾಡಿದ್ದಾರೆ. 5–00 ರೂಪಾಯಿನಲ್ಲಿ 10% ಅನ್ನು ಮಕ್ಕಳಿಗೆ ಖರ್ಚು ಮಾಡಿ ಉಳಿದ 90% ಅನ್ನು ಅಧಿಕಾರಿಗಳು ಹೊಡೆದುಬಿಟ್ಟಿದ್ದಾರೆ. ಅಲ್ಲಿ ಹೋದೆ, ಇಲ್ಲಿ ಹೋದೆ ಎಂದು ಖರ್ಚು ತೋರಿಸಿದರು. ಆದ್ದರಿಂದ ಕಳೆದ 5 ವರ್ಷಗಳಿಂದ ಇಲ್ಲಿ ಏನೇನು ಅವ್ಯವಹಾರಗಳು ನಡೆದಿವೆ, ದಯಮಾಡಿ ತನಿಖೆ ಮಾಡಿ, ಇಂತಹ ಭ್ರಷ್ಟ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಂಡರೆ ಕನಿಷ್ಟ ಪಕ್ಷ ನಮ್ಮ ದೇಶಕ್ಕೆ, ನಮ್ಮ ರಾಜ್ಯಕ್ಕೆ ಒಳ್ಳೆಯ ಕೊಡುಗೆಯನ್ನು ಕೊಡುವಂತಹ ಅನೇಕ ಕ್ರೀಡಾಪಟುಗಳಿದ್ದಾರೆ. ಇವತ್ತು cycling ನಲ್ಲಿ ಇದ್ದಾರೆ. ಇಡಿ ದೇಶದಲ್ಲಿ cycling ನಲ್ಲಿ ಮುಧೋಳ್–ಜಮಖಂಡಿಯಲ್ಲಿ, ಬಿಜಾಪುರ–ಬಾಗಲಕೋಟೆ ಭಾಗದ cycling ಬಗ್ಗೆ ಇಡೀ ಜಗತ್ತಿನಲ್ಲಿ ಹೆಸರು ಮಾಡಿದ್ದರು. ಅವರಿಗೆ ಒಂದು cycle ಕೊಡದಿರುವ ವಿಚಾರ ಪತ್ರಿಕೆಯಲ್ಲಿ ಬಂದಿತ್ತು. ಅದಕ್ಕೆ ಆ ಬಗ್ಗೆ ತನಿಖೆ ಮಾಡಿ ಯೋಗ್ಯರಿಗೆ ಪ್ರೋತ್ಸಾಹ ಕೊಡುವಂತಹ ಕೆಲಸವನ್ನು ಮಾಡಿ ಎಂದು ಕ್ರೀಡಾಪಟುವಾದ ನಿಮಗೆ ಕ್ರೀಡಾಪಟುವಾದ ನಾನು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಆರ್.ಕೆ. ಸಿದ್ದರಾಮಣ್ಣ:–** ಮಾನ್ಯ ಉಪ ಸಭಾಪತಿಯವರೆ, ಕಳೆದ 5 ವರ್ಷಗಳಲ್ಲಿ ನಡೆದಿರುವ ಬಗ್ಗೆ ತನಿಖೆಯನ್ನು ಮಾಡಬೇಕೆಂದು ಹೇಳಿದ್ದಾರೆ. ಬರೀ 5 ವರ್ಷಗಳ ಬಗ್ಗೆ ಮಾತ್ರವಲ್ಲ. ಕಳೆದ 10–15 ವರ್ಷಗಳಲ್ಲಿ

ಏನೇನಾಗುತ್ತಿದೆ ಇಲಾಖೆಯಲ್ಲಿ ಅದರ ಬಗ್ಗೆ ಗಮನವನ್ನು ಹರಿಸುವುದು ಒಳ್ಳೆಯದೆಂದು ಹೇಳಬಯಸುತ್ತೇನೆ.

**ಶ್ರೀ ಅಪ್ಪಚ್ಚು ರಂಜನ್:–** ಮಾನ್ಯ ಉಪ ಸಭಾಪತಿಯವರೆ, ಮಾನ್ಯ ಗೋವಿಂದರಾಜು ಅವರು ಪ್ರಾಧಿಕಾರದ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದರು. ಈ ಪ್ರಾಧಿಕಾರದಲ್ಲಿನ Governing Council Membership ಯಾವ ರೀತಿ ಇದೆ ಎಂದು ಹೇಳಬಯಸುತ್ತೇನೆ. Minister of Sports will be the Chairman, Principal Secretary to Government, Department of Information, Tourism Development and Youth Services and The Principal Secreatary to Government, Education Department are the Members. Along with them, there will be a Commissioner and Director General of Police. ಇಬ್ಬರು ವಿಧಾನ ಸಭಾ ಸದಸ್ಯರು ಇದ್ದು ಆ ಪೈಕಿ ಒಬ್ಬರು ಮಹಿಳಾ ಸದಸ್ಯರಾಗಿದ್ದಾರೆ. ವಿಧಾನ ಪರಿಷತ್ತಿನ ಸದಸ್ಯರು ಒಬ್ಬರು ಇದ್ದಾರೆ. ಜಿಲ್ಲಾ ಪಂಚಾಯತಿಯ ಸದಸ್ಯರು ಒಬ್ಬರು ಈ ರೀತಿ Governing Council Members ಅನ್ನು ರಚನೆ ಮಾಡಿದ್ದಾರೆ.

**ಶ್ರೀ ಕೆ. ಗೋವಿಂದರಾಜ್:–** ಅದನ್ನು ತಿದ್ದುಪಡಿ ಮಾಡಿದ್ದಾರೆ. ಆದರೆ ಅದು ತಮಗೆ ಗೊತ್ತಿಲ್ಲ. ಅದನ್ನು ತಿದ್ದುಪಡಿ ಮಾಡಬೇಕಾದರೆ Registrar of Societies ಯಿಂದ ಇದಕ್ಕೆ ಮಂಜೂರಾತಿ ಆಗಬೇಕು. ಆದರೆ ಈ ಮಂಜೂರಾತಿ ಆಗಿಲ್ಲ. ಇವರು ಇವರೇ ಒಂದು ಆದೇಶವನ್ನು ಹೊರಡಿಸಿದ್ದು, ಅದರಲ್ಲಿ 5–6 ಜನಕ್ಕೆ ಮಾತ್ರ ಮಾಡಿಕೊಂಡಿದ್ದಾರೆ.

**ಉಪ ಸಭಾಪತಿಯವರು:–** ಅವರು ಪೂರ್ತಿ ಉತ್ತರ ಹೇಳುವುದಕ್ಕೆ ಅವಕಾಶ ಮಾಡಿಕೊಡಿ. ನಂತರ ಅಗತ್ಯವಿದ್ದರೆ ಮಾನ್ಯ ಮಂತ್ರಿಗಳ ಹತ್ತಿರ ಹೋಗಿ ಮಾತನಾಡಿ.

**ಶ್ರೀ ಅಪ್ಪಚ್ಚು ರಂಜನ್:–** ನನ್ನ ಹತ್ತಿರ 1994–95 ರ ದಾಖಲೆ ಇದೆ.

**ಶ್ರೀ ಕೆ.ಗೋವಿಂದರಾಜ್:–** ಅವರು ಹೊಸದಾಗಿ ಏನು ಮಾಡಿಕೊಂಡಿದ್ದಾರೆ ಅದನ್ನು ಸರ್ಕಾರದ ಗಮನಕ್ಕೂ ತಂದಿಲ್ಲ ಇದಕ್ಕೆ

Registrar of Societies ಅವರ ಹತ್ತಿರ ಮಂಜೂರಾತಿ ಕೂಡ ಆಗಿಲ್ಲ. ಅದನ್ನು ನಾನು ಹೇಳುತ್ತಿದ್ದೇನೆ.

**ಶ್ರೀ ಅಪ್ಪಚ್ಚು ರಂಜನ್:-** ಆ ರೀತಿ ಮಾಡಿದ್ದರೆ ಅದು ಊರ್ಜಿತವಾಗುವುದಿಲ್ಲ. ತಾವು ಒಂದು ವಿಚಾರವನ್ನು ಹೇಳದಿರಿ. 25 ಮೀಟರ್ ಸ್ವಿಮ್ಮಿಂಗ್ ಪೂಲ್ ಅನ್ನು ಮಾಡಿ 50 ಮೀಟರ್ ಮಾಡಿರುವುದಾಗಿ ಬಿಲ್ ಅನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಿದಿರಿ. ತಾವು ಈ ಮಾಹಿತಿಯನ್ನು ಕೊಟ್ಟರೆ ನಾನು ನಾಳೆಯಿಂದಲೇ ಈ ಬಗ್ಗೆ ವಿಚಾರಣೆಯನ್ನು ಮಾಡಿಸುವುದಕ್ಕೆ ಶುರು ಮಾಡುತ್ತೇನೆ. ಆ ರೀತಿ ಬಿಲ್ ಅನ್ನು ಯಾರು ಕೊಟ್ಟಿದ್ದಾರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವ ವ್ಯವಸ್ಥೆಯನ್ನು ಕೂಡ ಮಾಡುತ್ತೇವೆ. ನಾನು ನಮ್ಮ ಕರ್ನಾಟಕ ರಾಜ್ಯದಲ್ಲಿ ಯುವ ನೀತಿ, ಕ್ರೀಡಾ ನೀತಿಯನ್ನು ತರಬೇಕೆಂದು ಶಾಸಕರನ್ನು ಒಳಗೊಂಡಂತೆ ಎರಡು ಸಭೆಗಳನ್ನು ಕರೆದಿದ್ದೆ. ಎಲ್ಲಾ ಶಾಸಕರಿಗೂ ಕೂಡ ಅದನ್ನು ತಿಳಿಸುವ ಕೆಲಸವನ್ನು ಮಾಡಿದ್ದೆ. ಅಂದು ಕೇವಲ 30 ಜನ ಶಾಸಕರು ಬಂದಿದ್ದರು. ಇವತ್ತು ಕ್ರೀಡೆಯನ್ನು ಗುರುತು ಹಚ್ಚಿ ಬೆಳಸಬೇಕೆಂಬ ಉದ್ದೇಶದಿಂದ ಈ ಯುವ ನೀತಿಯನ್ನು ತರಬೇಕೆಂದು ಮಾಡುತ್ತಿದ್ದೇವೆ. ಅದರ ಜೊತೆಗೆ ಶಾಸಕರೆಲ್ಲರಿಗೂ, ವಿಧಾನ ಪರಿಷತ್ತಿನ ಸದಸ್ಯರೆಲ್ಲರಿಗೂ ಪತ್ರವನ್ನು ಕೂಡ ಬರೆದಿದ್ದೇನೆ. ಈ ಕುರಿತು ತಮ್ಮ ಸಲಹೆಯನ್ನು ಕಳುಹಿಸಿ ಕೊಡಿ ಎಂದು ಹೇಳಿದ್ದೇನೆ. ಇಲ್ಲವಾದರೆ ಒಂದು ಮೀಟಿಂಗ್ ಮತ್ತೊಂದು ಮೀಟಿಂಗ್ ಎಂದು ಹೇಳಿ ಅದರಲ್ಲಿಯೇ ಕಾಲ ಕಳೆದು ಹೋಗುತ್ತದೆ. ಅದು ಕಾರ್ಯಗತವಾಗುವುದಿಲ್ಲ. ವಿಧಾನ ಪರಿಷತ್ತಿನಲ್ಲಿ ನಾನು ತಮ್ಮ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ, ಈ ಯುವ ನೀತಿಯನ್ನು ಯಾವ ರೀತಿ ಮಾಡಬೇಕು ಮತ್ತು ಈ ಕ್ರೀಡೆಗಳನ್ನು ಯಾವ ರೀತಿ ಪತ್ತೆ ಹಚ್ಚಿ, ಅದಕ್ಕೆ ಪ್ರೋತ್ಸಾಹವನ್ನು ಕೊಡಬೇಕು ಎಂಬುದರ ಬಗ್ಗೆ ತಾವೆಲ್ಲರೂ ಆ ನಿಟ್ಟಿನಲ್ಲಿ ತಮ್ಮ ಸಲಹೆ ಸೂಚನೆಗಳನ್ನು ನೀಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ನಮ್ಮ ದೇಶದ ಎಲ್ಲಾ ರಾಜ್ಯಗಳಲ್ಲಿ ಇರುವಂತಹ ಯುವ ನೀತಿ ಮತ್ತು ಕ್ರೀಡಾ ನೀತಿಯನ್ನು ತರಿಸುವಂತಹ ವ್ಯವಸ್ಥೆಯನ್ನು ಮಾಡಿದ್ದೇನೆ.

ಅದೇ ರೀತಿಯಲ್ಲಿ ಹೊರ ದೇಶದಲ್ಲಿ ಯಾವ ರೀತಿ ಈ ಯುವ ಮತ್ತು ಕ್ರೀಡಾ ನೀತಿಗಳು ಇವೆ ಎಂಬ ಬಗ್ಗೆ ಕೂಡ ತರಿಸುವ ವ್ಯವಸ್ಥೆಯನ್ನು ಮಾಡಿದ್ದೇನೆ. ಆದಷ್ಟು ಬೇಗನೆ ತಮ್ಮ ಸಲಹೆಗಳನ್ನು ಕೊಟ್ಟರೆ ಬಹಳ ಉತ್ತಮ.

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ ತಮ್ಮ ಸಲಹೆ ಸೂಚನೆಗಳನ್ನೆಲ್ಲಾ ಬರೆದು ಕಳುಹಿಸಿ ಎಂದು ಹೇಳಿ.

**ಶ್ರೀ ಅಪ್ಪಚ್ಚು ರಂಜನ್:–** ಮಾನ್ಯ ಗೋವಿಂದರಾಜು ಅವರೇ ತಮ್ಮ ಹತ್ತಿರ ಏನು ಮಾಹಿತಿ ಇದೆ ಅದನ್ನು ನಿರ್ದಿಷ್ಟವಾಗಿ ಬರವಣಿಗೆಯ ಮೂಲಕ ಕೊಟ್ಟರೆ ಆಗುತ್ತದೆ. ಎಲ್ಲೋ ಪತ್ರಿಕೆಯಲ್ಲಿ ಬಂದಿದೆ ಎಂದು ಹೇಳಿದರೆ ಅದು ಕಷ್ಟವಾಗುತ್ತದೆ. ಅದರ ಜೊತೆಗೆ ಪತ್ರಿಕೆಯಲ್ಲಿ ಬಂದ ವಿಚಾರವನ್ನು ಹೇಳಿದರು. ಉಪಾಧ್ಯಕ್ಷರು ಸುಮಾರು 13 ಲಕ್ಷ ರೂಪಾಯಿಯನ್ನು ಡ್ರಾ ಮಾಡಿದ್ದಾರೆಂದು ಹೇಳಿದರು. ಅವರಿಗೆ ಏನು ಅರ್ಹತೆ ಇದೆ ಅದರ ಪ್ರಕಾರ ತೆಗೆದುಕೊಂಡಿದ್ದಾರೆಯೇ ಎಂಬುದನ್ನು ಪರಿಶೀಲಿಸುವ ವ್ಯವಸ್ಥೆಯನ್ನು ಮಾಡುತ್ತೇವೆ. ಅವರಿಗೆ ಅದನ್ನು ಡ್ರಾ ಮಾಡುವ ಅರ್ಹತೆ ಇದ್ದರೆ ಅದನ್ನು ಕೊಡುವ ವ್ಯವಸ್ಥೆ ಮಾಡುತ್ತೇನೆ. ಒಂದು ವೇಳೆ ಏನಾದರೂ ಹೆಚ್ಚು ಮೊತ್ತವನ್ನು ನೀಡಿದ್ದರೆ ಅದನ್ನು ರೆಕವರಿ ಮಾಡುವುದಕ್ಕೂ ಕೂಡ ತಯಾರಿದ್ದೇನೆ.

**ಶ್ರೀ ಎಸ್. ಆರ್. ಪಾಟೀಲ್:–** ಮಾನ್ಯ ಸಚಿವರು ಶಾಸಕರು ಮತ್ತು ವಿಧಾನ ಷರಿಷತ್ತಿನ ಸದಸ್ಯರು ಎಂದು ಹೇಳಿದರು. ಹಿಂದೆ ಒಂದು ಘಟನೆ ನಮ್ಮಲ್ಲಿ ಆಗಿದೆ. ಮಾನ್ಯ ಮಂಜುನಾಥ್ ಎನ್ನುವ ವಿಧಾನ ಪರಿಷತ್ತಿನ ಸದಸ್ಯರ ವಿಚಾರದಲ್ಲಿ ಒಬ್ಬ ಜಿಲ್ಲಾಧಿಕಾರಿಗೆ ಇಲ್ಲಿ ವಾಗ್ದಂಡನೆ ಆಗಿದೆ. ಎಲ್ಲರೂ ಕೆಳ ಮನೆಯ ಸದಸ್ಯರು, ಮೇಲ್ಮನೆಯ ಸದಸ್ಯರು ಎಂದು ಸಂಭೋದನೆ ಮಾಡಲಿ ಶಾಸಕರು ಮತ್ತು ವಿಧಾನ ಪರಿಷತ್ತಿನ ಸದಸ್ಯರು ಎಂದು ಹೇಳಿದರು. ಅದು ಬಹುಶಃ ಅವರಿಗೆ ಗೊತ್ತಿರಲಿಕ್ಕಿಲ್ಲ. ಎಲ್ಲರೂ ಶಾಸಕರೇ ಇದ್ದಾರೆ. ಅದು ದಾಖಲೆಯಲ್ಲಿ ಹಾಗೇ ಹೋಯಿತು. ಆ ದಾಖಲೆಯನ್ನು ಸರಿ ಮಾಡಬೇಕೆಂದು ವಿನಂತಿ.

**ಶ್ರೀ ಅಪ್ಪಚ್ಚು ರಂಜನ್:-** ಅದನ್ನು ತಿದ್ದುಪಡಿ ಮಾಡಿ ಬಿಡಿ. ಕೆಳ ಮನೆಯ ಮತ್ತು ಮೇಲ್ಮನೆಯ ಶಾಸಕರು ಎಂದು ಹೇಳುತ್ತೇನೆ.

**ಶ್ರೀ ಎಸ್. ಆರ್. ಪಾಟೀಲ್:-** ತಾವು ಹೊಸದಾಗಿ ಸಚಿವರಾಗಿದ್ದೀರಿ. ಸ್ವಲ್ಪ ಅನುಭವವಿರುವವರ ಮಾತನ್ನು ಕೇಳಿ. ಬಹಳ ಒಳ್ಳೆಯ ಜಿಲ್ಲಾಧಿಕಾರಿಗಳು ತಪ್ಪು ಗ್ರಹಿಕೆಯಿಂದ ಮೇಲ್ಮನೆಯ ಶಾಸಕರಿಗೆ ನೀವು ಶಾಸಕರಲ್ಲವೆಂದು ಹೇಳಿದ್ದಕ್ಕೆ ಇದೇ ಸದನದಲ್ಲಿ ಅವರನ್ನು ಕರೆಸಿ ವಾಗ್ದಂಡನೆ ಮಾಡಲಾಗಿದೆ. ಅವರು ಇಲ್ಲಿ ಕ್ಷಮೆ ಕೇಳಿ ಹೋಗಿದ್ದಾರೆ. ನೀವು ಹೊಸಬರಿದ್ದು, ಯುವಕರಿದ್ದೀರಿ ಮೇಲ್ಮನೆ ಶಾಸಕರು ಮತ್ತು ಕೆಳ ಮನೆಯ ಶಾಸಕರು ಎಂದು ಹೇಳಿ.

**ಉಪ ಸಭಾಪತಿಯವರು:-** ಈ ವಿಷಯದ ಬಗ್ಗೆ ಇಲ್ಲಿಗೆ ಚರ್ಚೆ ಮುಕ್ತಾಯವಾಗಿದೆ.

**ಆ) ಡಾ|| ಹೆಚ್.ಟಿ.ಗಂಗಲ್ ಅವರ ಅಧ್ಯಕ್ಷತೆಯಲ್ಲಿ ತಜ್ಞ ವೈದ್ಯರ ಹಾಗೂ ಶಸ್ತ್ರ ಚಿಕಿತ್ಸಕರ ಮತ್ತು ಸಂಶೋಧನಾಸಕ್ತರ ಒಂದು ಟಾಸ್ಕ್ ಫೋರ್ಸ್ ಅನ್ನು ರಚಿಸಿ, ಪ್ರಾರಂಭಿಕವಾಗಿ 10 ಕೋಟಿ ರೂಪಾಯಿಯ ಅನುದಾನವನ್ನು ಸರ್ಕಾರ ಒದಗಿಸಿ ರಾಜ್ಯದ ಜನತೆಗೆ ತಜ್ಞ ವೈದ್ಯರು ಹಾಗೂ ಸಂಶೋಧಕರಿಂದ ಉತ್ತಮ ಗುಣಮಟ್ಟದ ಸೌಲಭ್ಯಗಳು ಲಭ್ಯವಾಗುವಂತೆ ಸರ್ಕಾರವು ಆದೇಶವನ್ನು ಹೊರಡಿಸುವ ಬಗ್ಗೆ.**

- - - -

**ಶ್ರೀ ಬಸವರಾಜ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಡಾ|| ಹೆಚ್. ಓ. ಗಂಗಲ್ ಅವರ ಅಧ್ಯಕ್ಷತೆಯಲ್ಲಿ ತಜ್ಞ ವೈದ್ಯರ ಹಾಗೂ ಶಸ್ತ್ರ ಚಿಕಿತ್ಸಕರ ಮತ್ತು ಸಂಶೋಧನಾಸಕ್ತರ ಒಂದು ಟಾಸ್ಕ್ ಫೋರ್ಸ್ ಅನ್ನು ರಚಿಸಿ, ಪ್ರಾರಂಭಿಕವಾಗಿ 10 ಕೋಟಿ ರೂಪಾಯಿಯ ಅನುದಾನವನ್ನು ಸರ್ಕಾರ ಒದಗಿಸಿ ರಾಜ್ಯದ ಜನತೆಗೆ ತಜ್ಞ ವೈದ್ಯರು ಹಾಗೂ ಸಂಶೋಧಕರಿಂದ ಉತ್ತಮ ಗುಣಮಟ್ಟದ ಸೌಲಭ್ಯಗಳು ಲಭ್ಯವಾಗುವಂತೆ

ಸರ್ಕಾರವು ಆದೇಶವನ್ನು ಹೊರಡಿಸುವ ಬಗ್ಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

**ಶ್ರೀ ಡಿ.ಎಸ್.ವೀರಯ್ಯ:–** ಅದಕ್ಕಿಂತಲೂ ಮುಖ್ಯವಾದ ವಿಷಯಗಳಿವೆ. ನಿಯಮ 330 ಅನ್ನು ತೆಗೆದುಕೊಳ್ಳಬೇಕೆಂದು ವಿನಂತಿ.

**(ಗೊಂದಲ)**

**ಶ್ರೀ ಎಸ್. ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ನಮ್ಮ ಹಿರಿಯ ಸದಸ್ಯರಾದ ಮಾನ್ಯ ಬಸವರಾಜ ಹೊರಟ್ಟಿಯವರು ನಿಯಮ 72 ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆಯನ್ನು ಪ್ರಸ್ತಾಪ ಮಾಡಿದ್ದಾರೆ. ಡಾ॥ ಗಂಗಲ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ದಿನಾಂಕ: 22–12–2009 ರಲ್ಲಿ ಈ ಒಂದು Task Force ಅನ್ನು ರಚನೆ ಮಾಡಲಾಗಿದೆ. ಹೊಸ innovation and formulations ಅನ್ನು ಡಾ॥ ಗಂಗಲ್ ಅವರು ನಮ್ಮ ಮುಂದಿಟ್ಟಿದ್ದಾರೆ ಅದರ ಆಧಾರದ ಮೇಲೆ ಜನ ಸಾಮಾನ್ಯರಿಗೆ ಅದನ್ನು ದೊರಕಿಸುವ ಕೆಲಸವನ್ನು ಮಾಡಬಹುದಾ ಎಂಬುದರ ಬಗ್ಗೆ ಸಮಗ್ರವಾದ ಚರ್ಚೆಗಳನ್ನು ಮಾಡಿದರು. ಅದರಲ್ಲಿ ಅನುಭವಿಗಳಾದ ಹತ್ತು ಜನರನ್ನು ಕೂಡ ನೇಮಕ ಮಾಡಲಾಗಿತ್ತು. ನಾಲ್ಕು ಸಭೆಗಳನ್ನು ಅವರು ಮಾಡಿದರು. ದಿನಾಂಕ:16–11–2010 ರಲ್ಲಿ ಒಂದು ಮಧ್ಯಂತರ ವರದಿಯನ್ನು ಕೂಡ ಕೊಟ್ಟಿದ್ದು, ಕೆಲವು ಶಿಫಾರಸ್ಸುಗಳನ್ನು ಕೂಡ ಕೊಟ್ಟಿದ್ದರು. ಆ ಒಂದು ಶಿಫಾರಸ್ಸುಗಳಲ್ಲಿ ಹುಬ್ಬಳ್ಳಿಯ ಕಿಮ್ಸ್ ಮತ್ತು ಬೆಳಗಾಂನ ವಿಮ್ಸ್ ಆಸ್ಪತ್ರೆಯಲ್ಲಿ ಒಂದು Intravenous Fluid Formulation and Supply Unit ಅನ್ನು ಪ್ರಾರಂಭ ಮಾಡಬೇಕೆಂದು ಮೊದಲನೆ ಹಂತದಲ್ಲಿ ಸಲಹೆಯನ್ನು ನೀಡಿದರು. ಎರಡನೇ ಹಂತದಲ್ಲಿ ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲಿ ಇದನ್ನು ಪ್ರಾರಂಭ ಮಾಡಬೇಕೆಂದು ಸಲಹೆಯನ್ನು ಕೊಟ್ಟರು. ಇದಕ್ಕೆ ಅಗತ್ಯವಿರುವ ಹತ್ತು ಕೋಟಿ ರೂಪಾಯಿಗಳ ಮಂಜೂರಾತಿಯನ್ನು ಮಾಡಬೇಕೆಂದು ಸಲಹೆಯನ್ನು ಕೊಟ್ಟಿದ್ದರು. ಆದರೆ ಬಹಳ ಮುಖ್ಯವಾಗಿ ಯಾವುದೇ ಒಂದು Intravenous

Fluid ಘಟಕವನ್ನು ಮಾಡುವುದಕ್ಕೆ Pharmaceutical Industry ಬೇರೆಯವರ ಜೊತೆಯಲ್ಲಿ ಸಹಯೋಗವನ್ನು ಮಾಡಬೇಕೆಂಬ ಸಲಹೆಯನ್ನು ಕೂಡ ನೀಡಿದರು. ರಾಜ್ಯದ Department of Drug Control ಇದಕ್ಕೆ ತನ್ನದೇ ಆದ ವಿರೋಧವನ್ನು ವ್ಯಕ್ತ ಪಡಿಸಿದ್ದು ಬಹಳ ಪ್ರಮುಖವಾದ ಅಂಶವಾಗಿತ್ತು. ಇದಕ್ಕಿಂತ ಬಹಳ ಮುಖ್ಯವಾಗಿ, ಯಾವುದೇ ಆಸ್ಪತ್ರೆಯಲ್ಲಿ ಕೇಂದ್ರದ (D.C.G and State Drug Control) Department ಜೊತೆಯಲ್ಲಿ D.G.H.Sನ ನಿಯಮದ ಅಡಿಯಲ್ಲಿ ಯಾವುದೇ ಒಂದು ಘಟಕವನ್ನು ಮಾಡಬೇಕಾದರೆ ಅದನ್ನು ತನ್ನದೇ ಆದ ನಿಯಮಾವಳಿಯಂತೆ ಎಲ್ಲವನ್ನೂ ಮಾಡಬೇಕಾಗುತ್ತದೆ. 2009 ರಲ್ಲಿ ಈ ವಿಚಾರವನ್ನು ಕೊಟ್ಟಾಗ ದೇಶದಲ್ಲಿ ಎರಡೇ ಎರಡು Intravenous Fluid Unit ಗಳು ಇತ್ತು. ಅಲ್ಲಿ strike ಆಗಿ ಆ ಕಂಪೆನಿಗಳು ಮುಚ್ಚುವಂತಹ ವ್ಯವಸ್ಥೆಗಳಾದಾಗ ಬೇರೆ ಎಲ್ಲೂ ಕೂಡ ಈ fluid ಗಳು ಸಿಗುತ್ತಿರಲಿಲ್ಲ. ಆ ನಂತರ ದೇಶದಲ್ಲಿ ನಾಲ್ಕು ಘಟಕಗಳು ಬಂದಿವೆ. ಇವತ್ತು ಈ Intravenous Fluid ಘಟಕವನ್ನು ನಮ್ಮ ಆಸ್ಪತ್ರೆಯಲ್ಲಿ ಹತ್ತು ಕೋಟಿ ರೂಪಾಯಿ ವೆಚ್ಚದಲ್ಲಿ ಪ್ರಾರಂಭ ಮಾಡಿದರೆ, ಅದಕ್ಕೆ average cost ಆಗುವಂಥಾದ್ದು 120-130 ರೂಪಾಯಿ ಆಗುತ್ತದೆ. ಆದರೆ ಇವತ್ತು 42-43 ರೂಪಾಯಿಯಲ್ಲಿ ನಮಗೆ ಸಿಗುತ್ತಿದೆ. ಆವತ್ತು ಆ ಅವಶ್ಯಕತೆ ಇತ್ತು. ಜೊತೆಗೆ ಈ ಖಾಸಗೀ ಕಂಪೆನಿಗಳ ಜೊತೆಯಲ್ಲಿ ನಮ್ಮ ಆಸ್ಪತ್ರೆಯೊಳಗಡೆ ಈ ಘಟಕಗಳನ್ನು ಮಾಡುವಂತಾದ್ದು ಪ್ರಸ್ತುತ ಸರಿಯಲ್ಲ ಎನ್ನುವಂತಹ ಉದ್ದೇಶಕ್ಕೋಸ್ಕರವಾಗಿ ನಾವು ಈ ಯೋಜನೆಯನ್ನು ಮುಕ್ತಾಯಗೊಳಿಸುವ ಕೆಲಸವನ್ನು ಮಾಡಿದ್ದೇವೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:-** ನಾನು ಸಭಾಪತಿ ಇದ್ದಾಗ ಅಂದಿನ ಉನ್ನತ ಶಿಕ್ಷಣ ಸಚಿವರು, ಅಂದಿನ ಆರೋಗ್ಯ ಸಚಿವರು ಮತ್ತು ಈ ಮನೆಯ ಸಭಾ ನಾಯಕರಾಗಿದ್ದ ಡಾ॥ ವಿ.ಎಸ್. ಆಚಾರ್ಯ ಅವರು ಮತ್ತು ಮಾನ್ಯ ಹೊರಟ್ಟಿಯವರು ಎಲ್ಲರೂ ಕೂಡ ಈ ಬಗ್ಗೆ ವಿಚಾರ ಮಾಡಿದ್ದವು. ಡಾ॥ ಗಂಗಲ್ ಅವರು ಈ ದೇಶ ಹೊರಟ್ಟಿಯವರು ಎಲ್ಲರೂ ಕೂಡ ಈ ಬಗ್ಗೆ ವಿಚಾರ ಮಾಡಿದ್ದೆವು ಡಾ॥ ಗಂಗಲ್ ಅವರು ಈ ದೇಶ ಕಂಡಂಥ ಅತ್ಯುತ್ತಮ

ವೈದ್ಯರಾಗಿದ್ದರು. ವೈಜ್ಞಾನಿಕವಾಗಿ ತಿಳಿದುಕೊಂಡಂಥ ವ್ಯಕ್ತಿಯಾಗಿದ್ದರು. ವೈಜ್ಞಾನಿಕವಾಗಿ ತಿಳಿದುಕೊಂಡಂಥ ವ್ಯಕ್ತಿಯಾಗಿದ್ದರು. ನಾವು ಈಗ ಏನು Heart Bypass Surgery ಮಾಡುತ್ತಾರೆಂದು ಹೇಳುತ್ತೇವಲ್ಲ ಆ ಕುರಿತು ಒಂದು ದೊಡ್ಡ invention ಮಾಡಿ ಅದನ್ನು ಕಾರ್ಯ ರೂಪಕ್ಕೆ ತಂದವರಾಗಿದ್ದಾರೆ. ಈ ನೊಬೆಲ್ ಪಾರಿತೋಷಕ ಪಡೆಯುವ ಯೋಗ್ಯತೆಯನ್ನು ಪಡೆಯುವಂಥಹ ಒಬ್ಬ ವ್ಯಕ್ತಿ ನಮ್ಮಲ್ಲಿದ್ದಾರೆ. ಎಂದು ಹೇಳುವುದಕ್ಕೆ ನಮಗೆ ಹೆಮ್ಮೆ ಎನ್ನಿಸುತ್ತದೆ.

He was known for his inventions. ಹೊಸ ಹೊಸ ಆಯಾಮಗಳನ್ನು invent ಮಾಡಿ ಪ್ರಯೋಗಗಳನ್ನು ಮಾಡಿದ್ದಾರೆ. ಅವುಗಳನ್ನೆಲ್ಲಾ ಕ್ರೋಢೀಕರಿಸಿ ನಾವು ಪ್ರಯೋಗಗಳನ್ನು ಮಾಡಬೇಕೆಂದು ನಾನು ಅಂದಿನ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿದ್ದೆ. ತದನಂತರ ನಾನು ಸಭಾಪತಿಯವನಾಗಿದ್ದಾಗ ಡಾ॥ ಆಚಾರ್ಯರವರೊಂದಿಗೆ ಸೇರಿ ಒಂದು ನಿರ್ಧಾರ ಮಾಡಿ ಅಂದಿನ Medical Education ಹಾಗೂ ಆರೋಗ್ಯ ಇಲಾಖೆಯ ಕಾರ್ಯದರ್ಶಿಯವರು ಹಾಗೂ ಡಾ॥ ಗಂಗಲ್‌ರವರು ಸೇರಿ ವಿಚಾರವನ್ನು ಮಾಡಿ ಒಂದು ಸಮಿತಿಯನ್ನು ಮಾಡಿ ಕೇವಲ Fluid ಬಗ್ಗೆ ಅಷ್ಟೇ ಅಲ್ಲ, ಮಾನ್ಯ ಸಚಿವರು ಹೇಳಿದ ಹಾಗೆ ಅಷ್ಟಕ್ಕೆ ಸೀಮಿತವಾಗದೆ, ಅವರ ಎಲ್ಲಾ invention ಗಳನ್ನು ಮಾಡಿದರೆ, ನಮ್ಮ ರಾಜ್ಯಕ್ಕೆ ಬಹಳಷ್ಟು ಅನುಕೂಲವಾಗುತ್ತದೆ. ಅದನ್ನು ನಾವು ಕಾರ್ಯರೂಪಕ್ಕೆ ತಂದರೆ ಜನಸಾಮಾನ್ಯರಿಗೂ ಸಹಿತ ಅತ್ಯಂತ ಕಡಿಮೆ ಹಣದಲ್ಲಿ ನಾವು treatment ಕೊಡಬಹುದು. ಅದು ಅಂತಹ ಮಹತ್ತರವಾದದ್ದು. ಇಡೀ ವಿಶ್ವದಲ್ಲಿಯೇ ಅವರಿಗೆ ಮಾನ್ಯತೆ ಇದೆ. ಅವರು ಎಷ್ಟೋ patents ಗಳನ್ನು ಸಹಿತ ತೆಗೆದುಕೊಂಡಿದ್ದಾರೆ. ಆದರೆ ಎಲ್ಲಾ ಕಡೆ ಪಾಳೆಗಾರಿಕೆ ಇರುವ ಹಾಗೆ ಕೆಲವು ದೊಡ್ಡ ದೊಡ್ಡ Drugs Company ಯವರ ಪಾಳೆಗಾರಿಕೆ ಇದೆ. ಅವರು ಹೊಸದು, ಮತ್ತೊಂದು ಬರುವುದಕ್ಕೆ ಬಿಡುವುದಿಲ್ಲ. ಅದಕ್ಕೆ ಅಡ-ತಡೆ ಒಡ್ಡುತ್ತಾರೆ. ಆ ಶಕ್ತಿಗಳೆಲ್ಲಾ ವಿರೋಧ ಮಾಡಿದ್ದಾರೆಂದು ಅದು ನಿಂತು ಹೋಗಿದೆ. ಈಗ ಹೊಸದಾಗಿ ಮಾಡುವ ಅವಶ್ಯಕತೆ ಏನೂ ಇಲ್ಲ. ಎರಡೂವರೆ ವರ್ಷಗಳ ಹಿಂದೆ ಸರ್ಕಾರ ಅದನ್ನು ಮಾಡುತ್ತದೆಂದು ಹೇಳಿತ್ತು.

ಡಾ॥ ಆಚಾರ್ಯರವರು ಆಗ ಸಚಿವರು ಹಾಗೂ ಸಭಾನಾಯಕರಷ್ಟೇ ಅಲ್ಲ ಅವರು ಒಬ್ಬ ವೈದ್ಯರೂ ಕೂಡ ಹೌದು. ಅವರು ಅದನ್ನು ಯಶಸ್ವಿ ಮಾಡಬೇಕೆಂದು ಹೇಳಿದ್ದರು. ತಾವು ಕೂಡ ಅದರ ಬಗ್ಗೆ ಚಿಂತನೆ ಇಟ್ಟುಕೊಂಡು ಕೆಲಸ ಮಾಡುತ್ತೀರೆಂದು ನನಗೆ ಭರವಸೆ ಇದೆ. ಅವುಗಳನ್ನೆಲ್ಲಾ ಕಾರ್ಯರೂಪಕ್ಕೆ ತರಬೇಕಾದರೆ ಅದಕ್ಕೆ ಬಹಳಷ್ಟು ಹಣ ಬೇಕಾಗುತ್ತದೆ. ಹಣಕಾಸಿನ ಅಭಾವದಿಂದ ವ್ಯಕ್ತಿಗತವಾಗಿ ಅದನ್ನು ಮಾಡುವುದಕ್ಕೆ ಶಕ್ಯ ಆಗುವುದಿಲ್ಲ. ಅದಕ್ಕಾಗಿ ಅದಕ್ಕೆ ಸರ್ಕಾರ ಮುಂದೆ ಬಂದರೆ ಈಗ ಪುನಃ ಅದನ್ನು review ಮಾಡಿ, ಪುನಃ ಅದಕ್ಕೆ ಶಕ್ತಿ ಕೊಡಿ ಅವರ ಎಲ್ಲಾ inventions ಬಗ್ಗೆ ಚಿಂತನೆಯಾಗಲಿ. ಅದನ್ನು ಮಾಡಿದರೆ ನಾವು ವಿಶ್ವದಲ್ಲಿಯೇ ಮಾನ್ಯತೆ ಪಡೆಯುತ್ತೇವೆ. ಅದರಿಂದ ನಮಗೆ ಗೌರವ ಸಿಗುತ್ತದೆ. ನಮ್ಮ ಒಬ್ಬ ವೈದ್ಯರು ಅತ್ಯಂತ ಪರಿಶ್ರಮ ವಹಿಸಿ ಶ್ರದ್ಧೆಯಿಂದ ಕಾರ್ಯನಿರ್ವಹಿಸಿದಕ್ಕಾಗಿ ಅವರ ಮಾಡಿದಂಥ inventionsಗೆ ಬೆಲೆ ಬರುತ್ತದೆ ಅದರಿಂದ ಸಮಾಜಕ್ಕೆ ಅನುಕೂಲವಾಗುತ್ತದೆ. ಆ ದೃಷ್ಟಿಯಿಂದ ಸರ್ಕಾರ ಕ್ರಮಕೈಗೊಳ್ಳಬೇಕೆಂದು ಕೋರುತ್ತೇನೆ.

**ಶ್ರೀ ಎಂ.ಆರ್.ಹುಲಿನಾಯ್ಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಉಪ ಸಭಾಪತಿಯವರೆ, ನಾನು ಡಾ॥ ಹೆಚ್.ಟಿ.ಗಂಗಲ್‌ರವರು ವೈಯಕ್ತಿಕವಾಗಿ ಬಲ್ಲೆ. ಮಾನ್ಯ ಸಚಿವರು Intravenous Fluids ಬಗ್ಗೆ ಮಾತ್ರ ಹೇಳಿದ್ದಾರೆ. ಡಾ॥ ಗಂಗಲ್‌ರವರು 1960 ರಲ್ಲಿ ಒಳ್ಳೆ Surgeon ಆಗಿದ್ದರು. He was working in Mumbai for Sion Hospital, KM Hospital with great doctors like Dr. Dais, Dr Gheewala. They all were very pioneers and academic people. In those days they were doing heart transplantation in dogs, pigs and human beings. They were very pioneer workers. They were very good in specialized subjects. ಅದರ ಮುಂದುವರೆದ ಭಾಗವಾಗಿ ಅನೇಕ innovative ideas ಅವರಲ್ಲಿದೆ ಅವರಿಗೆ 2 DSc degrees ಸಿಕ್ಕಿದೆ ಹಾಗೂ ಅವರಿಗೆ International level ನಲ್ಲಿ ಎಂಟು Patents ಸಿಕ್ಕಿದೆ. ಆ Thesis work ಇದೆಯಲ್ಲ ಅದು Latin Persian ಭಾಷೆಗಳಲ್ಲಿ ತರ್ಜುಮೆಯಾಗಿ ಅದೊಂದು

ಅಂತರಾಷ್ಟ್ರೀಯ ಪುಸ್ತಕವಾಗಿ ಬಹಳಷ್ಟು ಜನರಿಗೆ ಸಿಗುತ್ತಿದೆ. ಅದರ ಜೊತೆಗೆ ಅಂದಿನ ದಿವಸ Pre-cutaneous Endoscopic ಎಂದು ಕರೆಯುತ್ತಿದ್ದೆವು. ಆದರೆ ಇವೊತ್ತು ನಾವು ಕಾಮನ್ ಆಗಿ Laproscopic Surgery (Keyhole Surgery) ಎಂದು ಏನು ಕರೆಯುತ್ತಿದ್ದೇವೆ, ಅದರೆ ಮೊದಲನೇ ಅಂದರೆ 1960–61–62ರಲ್ಲಿ ಪ್ರಾಯೋಗಿಕವಾಗಿ Laproscopic Surgery ಯನ್ನ ಅಂದಿನ ದಿವಸವೇ ಮಾಡುತ್ತಿದ್ದರು. ಅದರ ಮುಂದುವರೆದ ಭಾಗವಾಗಿ ಇವೊತ್ತು ನಾವು ಎಲ್ಲಾ ಕಡೆ ನೋಡುತ್ತಿದ್ದೇವೆ. ಎಲ್ಲಾ Surgery ಗೂ ಸಹಿತ Laproscopic Surgery ಗಳು ಮಾಡುತ್ತಿದ್ದಾರೆ. ಅಂದರೆ ಇವರೊಬ್ಬ ಅದ್ವಿತೀಯವಾಗಿ ವಿಭಿನ್ನವಾಗಿ ವಿಚಾರ ಮಾಡುವಂಥ ಒಳ್ಳೆಯ Surgeon ಇದ್ದಾರೆ. ಅದರ ಜೊತೆಯಲ್ಲಿ ಅವರದೇ ಆದಂಥ ಕೆಲವು innovative ideas ಗಳಿವೆ. ನಾವು Insulin ಅನ್ನು ಸಕ್ಕರೆ ಕಾಯಿಲೆಗೆ ಕೊಡುತ್ತೇವೆಂದು ಹೇಳುತ್ತೇವೆ. Insulin ಅನ್ನು ಅನೇಕ ಕಾಯಿಲೆಗಳಿಗೆ ತುರ್ತು ಪರಿಸ್ಥಿತಿಯಲ್ಲಿ critical ಏರಿಯಾಗಳಲ್ಲಿ ಉಪಯೋಗ ಮಾಡುವಂಥ ಒಂದು innovative idea ಅವರಿಗಿದೆ. ಅದು ಬಿಟ್ಟು ಅವರದೇ ಒಂದು ಫಾರ್ಮ್ಯುಲಾ ಇದೆ. ಜಿ1, ಜಿ2, ಜಿ3, ಜಿ4, ಜಿ5 ಹೀಗೆ ಅವರದೇ ಒಂದು formula ಇದೆ. ಅವರು ಸಕ್ಕರೆ ಕಾಯಿಲೆ ಇಲ್ಲದ ರೋಗಿಗಳಿಗೆ insulin ಉಪಯೋಗ ಮಾಡಿ ಜೀವನ ಉಳಿಸುವಂಥ ಕೆಲಸ ಮಾಡುತ್ತಾರೆ. ಅವೆಲ್ಲಾ ಎಷ್ಟು ಸರಳವಾಗಿದೆ, ಬಹಳಷ್ಟು ಜನರಿಗೆ ಉಪಯೋಗವಾಗುವಂಥದ್ದಿದೆ ಎನ್ನುವುದರ ಬಗ್ಗೆ ಅವರು ಅನೇಕ International Conference ಗಳಲ್ಲಿ ಮಾತನಾಡಿರುವಂಥದ್ದಿದೆ. ಅವರಿಗೆ ಮೂರು ಬಾರಿ ಅವರ ಹೆಸರು ನೋಬೆಲ್ ಪ್ರಶಸ್ತಿಗಾಗಿ ವಿಶ್ವವಿದ್ಯಾಲಯದಿಂದ, Nave Technical University ಇಂದ ಹೀಗೆ ಮೂರು ಬಾರಿ ಶಿಫಾರಸ್ಸಾಗಿರುವ ವಿಷಯ ತಮಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ದುರ್ದೈವವಶಾತ್ ಅದು ಆಗಲಿಲ್ಲ. ನಮ್ಮಲ್ಲಿ DSP ಮತ್ತು ಇತರ Funding Agency ಗಳೇನಿವೆ ಅವರೆಲ್ಲಾ ಇದರಿಂದ ಮುಂದೆ ಬರುತ್ತಿದ್ದಾರೆ. ಆದರೆ ಅವರು ನರ್ಸಿಂಗ್ ಹೋಂನಲ್ಲಿ ಖಾಸಗಿ ಅಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ಅದು ಆಗುತ್ತಿಲ್ಲ. ಇವೆಲ್ಲವನ್ನು ಮಾಡಬೇಕಾದರೆ ಅವರಿಗೆ patents ಬೇಕು. ಈಗಾಗಲೆ

ಅವರಿಗೆ ಇಂಡಿಯಾದಲ್ಲಿ ಚೈನಾದಲ್ಲಿ, ಅಮೇರಿಕಾದಲ್ಲಿ ಹೀಗೆ ಕೆಲವು patents ಗಳನ್ನು ಹೊಂದಿದ್ದಾರೆ. ಆದರೆ ಇನ್ನು ಅನೇಕ ದೇಶಗಳ patents ಅನ್ನು ಅವರು ತೆಗೆದುಕೊಳ್ಳಬೇಕಾಗಿದೆ. ದೊಡ್ಡ ದೊಡ್ಡ ಪ್ರಮಾಣದಲ್ಲಿ ದುಡ್ಡಿನ ಸಹಾಯ ಬೇಕಾಗುತ್ತದೆ. ತಮಗೆ ಇನ್ನೊಂದು ವಿಷಯ ಹೇಳಬೇಕೆಂದರೆ ಅವರನ್ನು ಅಂತರರಾಷ್ಟ್ರೀಯ ಅಕ್ಯಾಡೆಮಿಕ್ ಕೌನ್ಸಿಲ್‌ಗೆ ಚೇರ್ಮನ್‌ರಾಗಿ ಆಯ್ಕೆ ಮಾಡಿದ್ದರು. ಇಂತಹದಕ್ಕೆಲ್ಲಾ ಮಾಡಲು ಪ್ರವಾಸ ಮಾಡಲು ಸ್ವಂತ ದುಡ್ಡನ್ನು ಹಾಕಿ ಖರ್ಚು ಮಾಡುವುದು ತುಂಬಾ ಕಷ್ಟದಾಯಕವಾದದ್ದು. ಅದಕ್ಕೆ ಬ್ರಿಟೀಷ್ ಜರ್ನಲ್‌ನವರು sponsor ಮಾಡಿದ್ದರು. ಆದರೆ ಇವರು ಅದನ್ನು ತೆಗೆದುಕೊಳ್ಳಲಿಕ್ಕೆ ಒಪ್ಪಲಿಲ್ಲ. ನಾನು ಯಾವುದಾದರೂ ಈ ತರಹದ ಸಂಸ್ಥೆಯಿಂದ ಸಹಾಯ ತೆಗೆದುಕೊಂಡರೆ ಅವರಿಗೆ oblige ಮಾಡಬೇಕಾಗುತ್ತದೆ, ನಾನು ಏನನ್ನು ಪ್ರತಿಪಾದನೆ ಮಾಡಬೇಕಾಗುತ್ತದೆ ಅದನ್ನು ಮಾಡುವುದಕ್ಕೆ ಆಗುವುದಿಲ್ಲ. ಅಂದರೆ ಒಬ್ಬ ನಿಷ್ಠುರವಾದಂಥ ವ್ಯಕ್ತಿ, Scientific ideas ತುಂಬಿಕೊಂಡಂಥವರು, ಬಹಳಷ್ಟು innovative ವಿಷಯಗಳನ್ನು ಅರ್ಥ ಮಾಡಿಕೊಂಡವರು. ಅವರಿಗೆ patents ಕೊಡಿಸುವಂಥದ್ದಾಗಲಿ, ಅಥವಾ ಅವರ ವಿಷಯಗಳನ್ನು ಪ್ರತಿಪಾದನೆ ಮಾಡಲಿಕ್ಕೆ ಅವಕಾಶ ಕೊಡಬೇಕೆಂದರೆ ಇಂತಹ ಒಂದು ಸಂಸ್ಥೆಯ ಅವಶ್ಯಕತೆ ಇದೆ. ತಾವು ಹೇಳಿದಂತೆ ಒಂದು Task Force ಮಾಡಿದ್ದು ನಿಜ. ಕೆಲವು ಸಲ ಅವರು ಕೆಲಸ ಕೂಡ ಮಾಡಿದ್ದಾರೆ. ಅವರು Red-tapism ಪರಿಣಾಮವಾಗಿ ಮುಂದುವರೆದು ಕೆಲಸ ಮಾಡವುದಕ್ಕಾಗಲಿಲ್ಲ. ಸರ್ಕಾರ ಈಗಲಾದರು ಅವರ ಅನೇಕ ವಿಚಾರಗಳು ನಮ್ಮ ದೇಶದ ಜನರಿಗೆ ಉಪಯೋಗವಾಗುವುದಕ್ಕಾಗಿ ಜಗತ್ತಿನ ಅನೇಕ ಜನರಿಗೆ ಉಪಯೋಗವಾಗುವುದಕ್ಕಾಗಿ ಅನುಕೂಲ ಮಾಡಿಕೊಡಬೇಕು. ತಾವು ಈಗ ಅಮೇರಿಕಾದಲ್ಲಿ patient Centralized Services ಅಂದರೆ ಯಾವುದೇ ಒಂದು ಔಷಧಿಯಿಂದ ರೋಗಿಯ ಮೇಲೆ ಪರಿಣಾಮ ಏನಾಗುತ್ತದೆ ಆ ದೃಷ್ಟಿಯಿಂದ ನೋಡುವಂಥದ್ದಾಗಬೇಕು. ಇವೊತ್ತು ನಮ್ಮ medical filed ಹೇಗಾಗಿದೆ ಅಂದರೆ Drug Company Oriented ಆಗಿದೆ. ಅಮೇರಿಕಾ ಇರಬಹುದು, ಇಂಗ್ಲೆಂಡ್ ಇರಬಹುದು,

ಔಷಧದ ಕಂಪನಿಯ ಪ್ರಭಾವದಿಂದಾಗಿ ಈ system ನಡೆಯುತ್ತಿದೆ. ಹಾಗಾಗಬಾರದೆಂದು ಕಳೆದ ವರ್ಷ ಒಬಾಮಾರವರು ಹತ್ತು ಮಿಲಿಯನ್ ಡಾಲರ್ಸ್‌ಗಳನ್ನು ಈ ತರಹದ ಪ್ರಾಜೆಕ್ಟ್‌ಗಳಿಗೆ ಅನುವು ಮಾಡಿಕೊಟ್ಟಿದ್ದಾರೆ. ಹಾಗಾಗಿ ನಾವು ಕೂಡ ನಮ್ಮ ದೇಶದಲ್ಲಿ ಇಂತಹ innovative ideas ಗಳಿಗೆ ಪ್ರೋತ್ಸಾಹ ಕೊಡಬೇಕಾಗುತ್ತದೆ. ಅನೇಕ ಅಧಿಕಾರಿಗಳು, ಅದರಲ್ಲಿ ವೈದ್ಯರು ಕೂಡ ಇರಬಹುದು. ಅವರೆಲ್ಲಾ ಈ ಲೆವಲ್‌ಗೆ ಬರುವಾಗ academic matters ಎಲ್ಲಾ ಮರೆತು ಹೋಗಿರುತ್ತಾರೆ. ಹಾಗಾಗಿ ಇವರ opinion ಮೇಲೆ project ಗಳಿಗೆ ಚಾಲನೆ ಕೊಡುವಂಥದ್ದು ಸೂಕ್ತವಾದುದ್ದಲ್ಲ. ಅದಕ್ಕೆ academic ಆಗಿ ಒಂದು body ಇರಬೇಕು. ಅದಕ್ಕೆ ತಜ್ಞರ ಸಲಹೆ ಸಹಕಾರಗಳನ್ನು ಪಡೆದುಕೊಳ್ಳಬೇಕೇ ವಿನಃ ಕೇವಲ ಅಧಿಕಾರಿಗಳು ಸೂಚನೆಗಳ ಮೇಲೆ ಕೆಲಸ ಮಾಡುತ್ತ ಹೋದರೆ ಈ ತರಹದ innovative ideas ಗಳನ್ನು implement ಮಾಡುವುದಕ್ಕೆ ಆಗುವುದಿಲ್ಲ. ದಯಮಾಡಿ ತಾವು ಈ Task Force ಅನ್ನು ಇನ್ನು strong ಮಾಡಿ. ಬೇಕಾದರೆ ಇನ್ನು ಕೆಲವು rules and regulations ಮಾಡಿ ಅದಕ್ಕಾಗಿ ಹತ್ತು ಕೋಟಿ ರೂಪಾಯಿಗಳನ್ನು ಮೀಸಲಾಗಿಡಿ, ಅವರ ಅನೇಕ ವಿಚಾರಗಳನ್ನು ಪ್ರತಿಪಾದನೆ ಮಾಡಲಿಕ್ಕೆ ಅವಕಾಶ ಕೂಡಿ. ಅದರಿಂದ ನಮ್ಮ ದೇಶಕ್ಕೆ, ರಾಷ್ಟ್ರಕ್ಕೆ ಅನೇಕ ವಿಚಾರಗಳ ಬಗ್ಗೆ ಅನುಕೂಲವಾಗುತ್ತದೆ. Ottoman diseases ಹೀಗೆ ಅನೇಕ ಗುಣ ಆಗದೇ ಇರುವಂಥ ಕಾಯಿಲೆಗಳಿವೆ. ಅದಕ್ಕೂ ಸಹಿತ ಅವರ ಹತ್ತಿರ ಉತ್ತಮವಾದಂಥ formula ಇದೆ. ನಾವು ಅನೇಕ ಬಾರಿ ಇದು ರಾಮಬಾಣ ಎಂದು ಏನು ಹೇಳುತ್ತೇವೆ ಆ formula ಆ ತರಹದ್ದಲ್ಲ. Scientific ಆಗಿ ವಿಚಾರ ಮಾಡಿ ಎಲ್ಲರನ್ನು ಒಪ್ಪಿಸುವಂಥ ಒಂದು ವಿಧಾನ ಇದೆ. ಅದಕ್ಕೆ ತಾವು ಪ್ರೋತ್ಸಾಹ ಕೊಡಿ. ಅದಕ್ಕೆ ಹತ್ತು ಕೋಟಿ ರೂಪಾಯಿಗಳನ್ನು ವಿನಿಯೋಗ ಮಾಡಿ ಅದರಿಂದ ಬಡವರಿಗೆ ವೈದ್ಯಶಾಸ್ತ್ರಕ್ಕೆ ಮತ್ತು ನಮ್ಮ ಸರ್ಕಾರಕ್ಕೆ ಮತ್ತು ಅಂತರರಾಷ್ಟ್ರಕ್ಕೆ ಉಪಯೋಗವಾಗುವಂಥ ಕೆಲಸ ಆಗುತ್ತದೆ. ದಯಮಾಡಿ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಡಾ॥ ಎ.ಹೆಚ್.ಶಿವಯೋಗಿ ಸ್ವಾಮಿ (ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಹಿರಿಯ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿಯವರು ಡಾ॥ ಹೆಚ್.ಟಿ.ಗಂಗಲ್‌ರವರ ಬಗ್ಗೆ ಬಹಳ ಒಳ್ಳೆಯ ವಿಷಯದ ಬಗ್ಗೆ ಪ್ರಸ್ತಾಪ ಮಾಡಿ ಸರ್ಕಾರ ಗಮನಕ್ಕೆ ವಿಷಯವನ್ನು ತೆಗೆದುಕೊಂಡು ಬಂದಿದ್ದಾರೆ. ವಿಶೇಷವಾಗಿ ಹುಬ್ಬಳ್ಳಿ–ಧಾರವಾಡ ಕರ್ನಾಟಕ ರಾಜ್ಯ ಅಥವಾ ಭಾರತ ದೇಶಕ್ಕೆ ಮಾತ್ರವಲ್ಲ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಇವತ್ತಿನ ದಿವಸ ನಮ್ಮ ರಾಜ್ಯದಿಂದ ಯಾರಾದರು ವೈದ್ಯರು ಹೆಸರು ಮಾಡಿದ್ದಾರೆಂದು ಹೇಳಿದರೆ ಮೊದಲನೆಯ ಹೆಸರು ಡಾ॥ಹೆಚ್.ಟಿ.ಗಂಗಲ್‌ರವರದು. ಈಗಾಗಲೇ ಉಲ್ಲೇಖ ಮಾಡಿರುವಂತೆ ಡಾ॥ಹೆಚ್.ಟಿ.ಗಂಗಲ್‌ರವರು ವಿಶೇಷವಾಗಿ 1961–62ನೇ ಇಸವಿಯಲ್ಲಿಯೇ ಅವರು open heart surgeries ಪ್ರಾರಂಭ ಮಾಡಿದರು. ಅಂದರೆ 50 ವರ್ಷಗಳ ಹಿಂದೆಯೇ ಅವರು ಮೊಟ್ಟಮೊದಲ ಬಾರಿಗೆ ಬಾಂಬೆಯ ಕೆ.ಎಂ. ಆಸ್ಪತ್ರೆಯಲ್ಲಿ innovative open heart surgeries ಮಾಡುವುದರ ಮುಖಾಂತರ surgery ಪ್ರಾರಂಭ ಮಾಡಿದರು. ಅವರು ತುಂಬ ಪ್ರತಿಬಾನ್ವಿತರು. ನಮ್ಮ ರಾಷ್ಟ್ರದ ಪ್ರಜೆಯಾಗಿದ್ದ ನೀಲಂ ಸಂಜೀವ ರೆಡ್ಡಿಯವರು ರಾಷ್ಟ್ರಪತಿಯಾಗಿದ್ದಂತಹ ಸಮಯದಲ್ಲಿ ಇವರು ಅವರ Honorary Surgeon ಅಗಿದ್ದರು. ನಮ್ಮ ಕರ್ನಾಟಕ ರಾಜ್ಯದಿಂದ ಒಂದು ಗೌರವನ್ವಿತ ಸ್ಥಾನವನ್ನು ಪಡೆದಂತಹ ವೈದ್ಯರು. ಹಾಗಾಗಿ ಅವರು ಬಹಳ ಪ್ರತಿಭಾನ್ವಿತರು. ತುಂಬ innoavative schemes ಗಳನ್ನು innovative ಯೋಜನೆಗಳನ್ನು ರೂಪಿಸಿದ್ದಾರೆ. ಒಂದು ಇಲ್ಲಿ ಅವರ ಬಗ್ಗೆ ಎಲ್ಲರೂ ಮಾತನಾಡಬೇಕಾದರೆ, ವಸ್ತುಸ್ಥಿತಿಯೊಳಗೆ ಶ್ರೀ ಬಸವರಾಜ ಹೊರಟ್ಟಿ ಯವರು ಮತ್ತು ಶ್ರೀ ಮತ್ತಿಕಟ್ಟಿ ವೀರಣ್ಣನವರು ಕೂಡ ಒಪ್ಪಿಕೊಳ್ಳುತ್ತಾರೆ. ಅವರ ಜೊತೆಯಲ್ಲಿ ಯಾರ ಒಡನಾಟ ಇತ್ತು, ಅವರನ್ನು ಯಾರು ನೋಡಿದ್ದಾರೆ ಅವರೆಲ್ಲರಿಗೂ ಕೂಡ ಗೊತ್ತಿರುವಂಥ್ದು ಎಂದರೆ, ಅವರಿಗೆ ವೈಯಕ್ತಿಕವಾಗಿ ಸ್ವಲ್ಪ short temper. ಶೀಘ್ರ ಕೋಪಿ, ಹಠ ಮಾಡುವಂಥದ್ದು, personal character ಅಗಿ ಏನೇ ಇರಲಿ.

**ಶ್ರೀ ಮತ್ತಿಕಟ್ಟಿ ವೀರಣ್ಣ :-** ಮಾನ್ಯ ಸಭಾಪತಿಯವರೆ, ಯಾರು ಭಯಂಕರ intelligent ಇರುತ್ತಾರೆ. ಅವರಿಗೆಲ್ಲಾ ಆ ಒಂದು ಸಮಸ್ಯೆ ಇರುತ್ತದೆ. ಏಕೆಂದರೆ ಅವರುಗಳು ಯಾವಾಗಲೂ ಸತ್ಯದ ಪ್ರತಿಪಾದಕರು.

**ಡಾ॥ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಮತ್ತಿಕಟ್ಟಿ ವೀರಣ್ಣನವರು ಹೇಳಿದಂತೆ highly eccentric or highly intelligent ಎಂದು ಕೂಡ ಇದೆ. ನಾನು ಬಾಂಬೆಯಲ್ಲಿ ಕೆಲಸ ಮಾಡುವಂತಹ ಸಮಯದಲ್ಲಿ ಒಂದು ನಿಮಿಷ ಒಬ್ಬರ ಬಗ್ಗೆ ರೆಫರ್ ಮಾಡುತ್ತೇನೆ. ಡಾ॥ ಪಿ.ಎಂ.ದಲಾಲ್ ಎಂದು ಇದ್ದರು. ಅವರು ENT Specialist. ಅವರು 1982–83ನೇ ಇಸವಿಯಲ್ಲಿ President of Indiaಗೆ ಅವರು Honorary Surgeon ಆಗಿದ್ದರು.

**ಶ್ರೀ ಗೋ.ಮಧುಸೂಧನ್ (ಪದವೀಧರರ ಕ್ಷೇತ್ರ):-** All eminent personalities are eccentric ಆದರೆ all eccentric personalities are not eminent.

**ಡಾ॥ ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೆ, ಶ್ರೀ ಗೋ.ಮಧುಸೂಧನ್ ನಿಂತು ಬಿಟ್ಟರೆ ಎಲ್ಲಿಂದ ಎಲ್ಲಿಗಾದರು ಮುಟ್ಟಿಸಿ ಬಿಡುತ್ತಾರೆ. ಶ್ರೀ ಗೋ.ಮಧುಸೂಧನ್ ಬಗ್ಗೆ ಹೇಳಬೇಕಾದರೆ ನನಗೆ ಡಾ॥ ಎಂ.ಆರ್.ತಂಗಾರವರ ನೆನಪು ಬರುತ್ತದೆ. ಏಕೆಂದರೆ ಶ್ರೀ ಗೋ.ಮಧುಸೂಧನ್‌ರವರು ಮೊದಲನೆಯ ಸಲ ಚುನಾವಣೆಯಲ್ಲಿ ಅವರು ಗೆದ್ದಾಗ ನಾವು ಇಲ್ಲಿ ಕುಳಿತುಕೊಂಡಿದ್ದೇವು. ಇವರ ಚುನಾವಣೆಗೆ ಡಾ॥ ಎಂ.ಆರ್. ತಂಗಾರವರೆ ಇನ್‌ಚಾರ್ಜ್ ಇದ್ದರು. ಡಾ॥ ಎಂ.ಆರ್. ತಂಗಾರವರಿಗೆ ಶ್ರೀ ಗೋ.ಮಧುಸೂಧನ್ ಚುನಾವಣೆಯಲ್ಲಿ ಗೆದ್ದ ಸಾರ್ ಎಂದಾಗ, ನಾವು ವಿರೋಧ ಪಕ್ಷದ ಕಡೆಯಲ್ಲಿ ಕುಳಿತುಕೊಳ್ಳುತ್ತಿದ್ದೇವು. ಅವನನ್ನು ಗೆಲ್ಲಿಸಿದ್ದು ಆಯಿತು, ಅವನು ಒಳಗಡೆ ಬಂದ ಮೇಲೆ ಸಂಭಾಳಿಸುವುದು ಇದೆ ಎಂದು ಹೇಳಿದರು. ಅಂಥವರು. ಡಾ॥ ಎಂ.ಆರ್. ತಂಗಾರವರು ಶ್ರೀ ಗೋ.ಮಧುಸೂಧನ್‌ನ್ನು ಸರಿಯಾಗಿ assess ಮಾಡಿ

diagnose ಮಾಡುತ್ತಿದ್ದರು. ಡಾ॥ ಪಿ.ಎಂ.ದಲಾಲ್ ENT Surgeon ಎಂದು ಹೇಳುತ್ತಿದ್ದೆ, ನಾವೆಲ್ಲರೂ ಪಿ.ಎಂ ಎಂದರೆ ನಾವೆಲ್ಲರೂ ತಮಾಷೆಗಾಗಿ problematic ಕರೆಯುತ್ತಿದ್ದೆವು. ಏಕೆಂದರೆ ಅವರು ಒಂದು ಸಾರಿ ಅವರ ಶ್ರೀಮತಿಯವರ ಜೊತೆ ಆಸ್ಟ್ರೇಲಿಯಕ್ಕೆ ಹೋದಾಗ ಅವರು ಇವರ ಮಾತಿಗೆ ಸರಿಯಾಗಿ respond ಮಾಡಲಿಲ್ಲ ಎನ್ನುವ ಕಾರಣಕ್ಕೆ ಅವರು ಇದ್ದಂತಹ ಹೊಟೇಲ್‌ನ ರೂಂ ಒಳಗೆ ಅವರನ್ನು ಕೂಡಿ ಹಾಕಿ ರೂಂ ಬೀಗ ಹಾಕಿಕೊಂಡು, ಬೀಗದ ಕೀಯನ್ನು ತೆಗೆದುಕೊಂಡು ಡಾಕ್ಟರ್ ಭಾರತ ದೇಶಕ್ಕೆ ವಾಪಸ್ಸು ಬಂದು ಬಿಟ್ಟರು. ಅಂತಹ eccentric. ಅವರಿಗೆ ಪದ್ಮಭೂಷಣ ಅವಾರ್ಡ್ ಅವರಿಗೆ ಸಿಕ್ಕಿತ್ತು. ಅದೇ ರೀತಿಯಲ್ಲಿ ಡಾ॥ಎಚ್.ಟಿ.ಗಂಗಲ್ ಸಾಹೇಬರ ಬಗ್ಗೆಯೂ ಇಂಥದ್ದೆ. ಡಾ॥ಎಚ್.ಟಿ.ಗಂಗಲ್‌ರವರು ತುಂಬಾ ಒಳ್ಳೆಯ ವೈದ್ಯರು ಅದರಲ್ಲಿ ಎರಡನೆಯ ಮಾತುಗಳಿಲ್ಲ. ಅವರು ಅನೇಕ ಅವಿಸ್ಕಾರಗಳನ್ನು ಮಾಡಿದ್ದಾರೆ.

**ಸಭಾಪತಿಯವರು:–** ಡಾ॥ ಎ.ಹೆಚ್.ಶಿವಯೋಗಿಸ್ವಾಮಿಯವರೆ ನೀವು ಈ ಮಾತನ್ನು ಹೇಳಿದಾಗ ನನಗೆ ಒಂದು ನೆನಪಿಗೆ ಬಂದಿದ್ದು ನಮ್ಮಲ್ಲಿ ಸಂಸದರಾಗಿದ್ದ ಪ್ರೊ: ವೆಂಕಟಗಿರಿಗೌಡರು ಅವರನ್ನು ಹತ್ತಿರದಿಂದ ತಿಳಿದುಕೊಂಡಿದ್ದರು ಇವರ ಬಗ್ಗೆ ಇಂತಹ ಅನೇಕ ಕಥೆಗಳನ್ನು ಹೇಳುತ್ತಾರೆ.

**ಡಾ॥ಎ.ಹೆಚ್.ಶಿವಯೋಗಿ ಸ್ವಾಮಿ:–** ಮಾನ್ಯ ಸಭಾಪತಿಯವರೆ, ಡಾ॥ಎಚ್.ಟಿ.ಗಂಗಲ್‌ರವರು ICMR ನಲ್ಲಿ Research Officer ಅಗಿದ್ದಾಗ open heart surgery ಯನ್ನು ಮಾಡಿದ್ದರು. ಅವರು I.V.Infusion ಕಂಡು ಹಿಡಿದಿದ್ದಾರೆ. ಅದು ರೋಗಿಗಳಿಗೆ ಅತ್ಯಂತ ಬಹಳ ಕಡಿಮೆ ದರದಲ್ಲಿ ಆ ಒಂದು Infusion ಸಿಗುವುದಕ್ಕೆ ಅನುಕೂಲವಾಗುತ್ತದೆ. Syringes ಇವತ್ತು ಏನು ರಾಜ್ಯದಲ್ಲಿ ಸಿಗುತ್ತಿದೆ, pharmaceuticals ನಲ್ಲಿ ಕೊಡುತ್ತಿದ್ದಾರೆ ಅದಕ್ಕಿಂತಲೂ ತುಂಬಾ ಒಳ್ಳೆಯ ಕ್ವಾಲಿಟಿಯದು ಅದಾಗುತ್ತದೆ. ಆ ದೃಷ್ಟಿಯಿಂದ ವೈದ್ಯಕೀಯ ಶಿಕ್ಷಣ ಸಚಿವರು ಯೋಜನೆ ಮಾಡಬೇಕು. ಅನೇಕ national and international journals ಗಳಲ್ಲಿ ಅವರ ಪೇಪರ್ಸ್‌ಗಳು ಪ್ರೆಸೆಂಟ್ ಆಗಿದೆ. ಸಮ್ಮೇಳನಗಳಲ್ಲಿ ಪ್ರೆ+ಸೆಂಟ್ ಮಾಡಿದ್ದಾರೆ. HOPKINS ನಮಗೆಲ್ಲಾ

ಗೊತ್ತಿರುವಂತಹ ಪ್ರಪಂಚದ ಅತ್ಯಂತ ದೊಡ್ಡ ಒಂದು ಸಂಶೋಧನಾ ಸಂಸ್ಥೆ ಇದೆ ಅಲ್ಲಿ ಇವರು ಕೆಲಸ ಮಾಡಿದ್ದಾರೆ. ಅಲ್ಲಿಯೂ ಕೂಡ ಇವರ ಮಾತುಗಳಿಗೆ, ಅವಿಸ್ಕಾರಗಳಿಗೆ ಗೌರವಿಸಿದ್ದಾರೆ. ಅನೇಕ patents ಗಳಿವೆ. ಇಂತಹ ಒಬ್ಬ ಡಾಕ್ಟರ್ innovations ಗಳಿವೆ ಅವುಗಳನ್ನು ಜನಗಳಿಗೆ ಮುಟ್ಟಿಸುವಂತಹ ದೃಷ್ಟಿಯಿಂದ ಅನುಕೂಲವಾಗಬೇಕು ಎನ್ನುವ ದೃಷ್ಟಿಯಿಂದ postitive outlook ಯಿಂದ ಸರ್ಕಾರ ಇದನ್ನು ಪರಿಗಣಿಸಬೇಕಾದಂತಹ ಅವಶ್ಯಕತೆ ಇದೆ. ಇದನ್ನು ತುಂಬ ಉದ್ದ ಮಾಡುವುದಕ್ಕೆ ಹೋಗುವುದಿಲ್ಲ. ಅವರ ಏನು ಪ್ರಯತ್ನಗಳಿಗೆ ಸರ್ಕಾರ ಸ್ವಲ್ಪ ಸಕರಾತ್ಮಕವಾಗಿ ಸ್ಪಂದಿಸಿದರೆ ಖಂಡಿತ ಬಡ ಜನಗಳಿಗೆ ಅನುಕೂಲವಾಗುತ್ತದೆ.

**ಶ್ರೀಮತಿ ಭಾರತಿಶೆಟ್ಟಿ:–** ಮಾನ್ಯ ಸಭಾಪತಿಯವರೆ, ಅದೆಲ್ಲಾ ಸರಿ, ಆ ವೈದ್ಯರು ಆ ಹೆಣ್ಣು ಮಗಳನ್ನು ಆಸ್ಟ್ರೇಲಿಯದ ಒಂದು ಹೋಟೇಲ್ ಕೊಠಡಿಯಲ್ಲಿ ಕೂಡಿ ಹಾಕಿ, ಬೀಗದ ಕೀಯನ್ನು ತೆಗೆದುಕೊಂಡು ಬಂದರು ಎಂದು ಹೇಳಿ ಅಷ್ಟೇ ನಿಲ್ಲಿಸಿ ಬಿಟ್ಟರು. ಅವರು ಈಗ ಎಲ್ಲಿದ್ದಾರೆ ಬದುಕಿದ್ದಾರೆಯೇ? ಒಂದು ಹೆಣ್ಣು ಮಗಳ ಮೇಲೆ ಕೊಠಡಿಯ ಬೀಗವನ್ನು ಹಾಕಿ ದೌರ್ಜನ್ಯವನ್ನು ಮಾಡುವಂಥದ್ದು ಎಷ್ಟು ಸರಿ ಇದೆ?

**ಶ್ರೀ ಮತ್ತಿಕಟ್ಟಿ ವೀರಣ್ಣ :–** ಮಾನ್ಯ ಸಭಾಪತಿಯವರೆ, ಆ ಹೆಣ್ಣು ಮಗಳು ಮತ್ತೆ ಭಾರತಕ್ಕೆ ವಾಪಸ್ಸು ಬಂದು ಆ ವೈದ್ಯರ ಜೊತೆಯಲ್ಲಿಯೇ ಬಾಳ್ವೆ ಮಾಡಿ ಮೂರು ಮಕ್ಕಳನ್ನು ಹಡೆದಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಈಗಾಗಲೇ ಇಬ್ಬರು ತಜ್ಞ ವೈದ್ಯರು ಈ ಮನೆಯ ಗೌರವಾನ್ವಿತ ಸದಸ್ಯರಾದ ಡಾ॥ಎ.ಹೆಚ್.ಶಿವಯೋಗಿ ಸ್ವಾಮಿಯವರು ಮತ್ತು ಡಾ॥ ಹುಲಿನಾಯಕ್‌ರವರು ಡಾ॥ಎಚ್.ಟಿ.ಗಂಗಲ್‌ರವರ ಸಂಶೋಧನೆಯ ಬಗ್ಗೆ ಬೆಳಕು ಚೆಲ್ಲುವಂತಹ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಅವರು ನಮ್ಮ ರಾಷ್ಟ್ರಕ್ಕೆ ಮಾತ್ರ ಪ್ರಖ್ಯಾತಿಯನ್ನು ಪಡೆದವರಲ್ಲ. ನಾನು ಅತ್ಯಂತ ಸಮೀಪದಿಂದ ಬಲ್ಲವನಾಗಿರುವುದರಿಂದ ಈ ಮಾತುಗಳನ್ನು ಹೇಳುತ್ತಿದ್ದೇನೆ.

ಅವರು ಇಡೀ ಪ್ರಪಂಚದಲ್ಲಿಯೇ ತಮ್ಮದೇ ಆದಂತಹ ಹೆಸರು ಪಡೆದಂತಹ ಒಬ್ಬ ಶ್ರೇಷ್ಠ ವೈದ್ಯರು ಎಂದು ಹೇಳುವುದಕ್ಕೆ ಬಯಸುತ್ತೇನೆ. ಅವರು ಸಂಶೋಧನೆಯಲ್ಲಿ ಹೊಸ ಹೊಸ innovations ಮುಖಾಂತರ ವೈದ್ಯ ಲೋಕವನ್ನೇ ಆಶ್ಚರ್ಯ್ಯವನ್ನು ಮೂಡಿಸುವಂತಹ ಒಬ್ಬ ಶ್ರೇಷ್ಠ ವೈದ್ಯರಾದ ಡಾ||ಹೆಚ್.ಟಿ.ಗಂಗಲ್‌ರವರ ಬಗ್ಗೆ ಅವರದು ಏನು Task Force ಇದೆ. ಅವರು ಮೂರು ಸಾರಿ ನೋಬಲ್ ಪ್ರಶಸ್ತಿಯನ್ನು ಪಡೆಯುವುದರಲ್ಲಿ ಸ್ವಲ್ಪದರಲ್ಲಿಯೇ ವಂಚಿತರಾಗಿದ್ದಾರೆ ಎನ್ನುವಂತಹ ಮಾತನ್ನು ಡಾ||ಹುಲಿನಾಯಕ್‌ರವರು ಹೇಳಿದರು. ಅವರು ಎಷ್ಟು ತಜ್ಞರಿದ್ದಾರೆ. ಅವರು ಎಷ್ಟು ಅನುಭವವನ್ನು ಪಡೆದುಕೊಂಡಿದ್ದಾರೆ, ಅವರ ಅನುಭವವನ್ನು ನಾವು ಉಪಯೋಗ ಮಾಡಿಕೊಳ್ಳಬೇಕು ಅಲ್ಲವೆ? ಅವರು ಇರುವುದು ಕರ್ನಾಟಕ ರಾಜ್ಯಕ್ಕೆ ಒಂದು ಕೀರ್ತಿ. Task Force ಮುಖಾಂತರ ಅವರಿಗೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟರೆ, ಇವತ್ತು ಬರೀ ಕರ್ನಾಟಕ ರಾಜ್ಯಕ್ಕೆ ಮಾತ್ರವಲ್ಲದೇ ಇಡೀ ರಾಷ್ಟ್ರದಲ್ಲಿರುವಂತಹ ಬಡ ರೋಗಿಗಳಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಸಹಾಯವಾಗುತ್ತದೆ. ಇದರಲ್ಲಿ ಡಾ|| ಹುಲಿನಾಯಕ್‌ರವರು ಹೇಳಿದಂತೆ red tapism ಎಂದು ಹೇಳುವಂತೆ bureaucratic red tapism ಇಂದರೆ ಇಂಥವರಿಗೆ ಅವಕಾಶವನ್ನು ಕಲ್ಪಿಸುವಂತಿಲ್ಲ. ನಮ್ಮ ಶ್ರೀ ಮತ್ತಿಕಟ್ಟಿ ವೀರಣ್ಣನವರು ಸಭಾಪತಿಗಳಾಗಿದ್ದಾಗ ಬಹಳ ಉತ್ತಮವಾದಂತಹ ಕೆಲಸವನ್ನು ಮಾಡಿದ್ದಾರೆ. ಅತ್ಯಂತ ಪ್ರಸಂಶನೀಯವಾದುದ್ದು, ಶ್ಲಾಘನೀಯವಾದುದ್ದು, ಸಮರ್ಥನೀಯವಾದಂತಹ ಕಾರ್ಯವನ್ನು ಮಾಡಿದ್ದಾರೆ. ಅವರು ಕೂಡ ಅವರ ಭಾಗದವರೆ ಆಗಿರುವುದರಿಂದ ಆ ಡಾಕ್ಟರ್ ಬಗ್ಗೆ ಹೆಚ್ಚು ತಿಳಿದುಕೊಂಡಿದ್ದಾರೆ. ಅವರು ಬಹಳ ದೊಡ್ಡ ಕೊಡುಗೆಯನ್ನು ನೀಡಿದಂತಹ ಸಂದರ್ಭದಲ್ಲಿ ಈ red tapism ಗೆ ಏನಾದರೂ ಕಾರಣವನ್ನು ಹುಡುಕಿ ಇದು ಸರ್ಕಾರಿ ಆಸ್ಪತ್ರೆಯೊಳಗೆ ಖಾಸಗಿಯವರಿಗೆ ಸಂಶೋಧನೆ ಕಾರ್ಯದಲ್ಲಿ ಭಾಗವಹಿಸಲು ನಿಷೇಧವನ್ನು ಮಾಡಬೇಕೆಂದು ತೀರ್ಮಾನ ಕೈಗೊಳ್ಳಲಾಗಿರುವುದರಿಂದ ಈ ವಿಷಯವನ್ನು ಮುಕ್ತಾಯಗೊಳಿಸಲಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವರು ಕೊಟ್ಟಿರುವಂತಹ ಲಿಖಿತ ಉತ್ತರದಲ್ಲಿ

ತಿಳಿಸಿದ್ದಾರೆ. Is it a reply from the Government? ಅವರ ಬಗ್ಗೆ ಗುಣಗಾನ ಬೇಕಾಗಿತ್ತು. ಡಾ||ಎ.ಹೆಚ್.ಶಿವಯೋಗಿ ಸ್ವಾಮಿಯವರು ಆ Treasury Bench ನಲ್ಲಿ ಕುಳಿತುಕೊಂಡು ಹೇಳಿದರು. ಅವರು ಅವರ ಬಗ್ಗೆ ಸಾಕಷ್ಟು ಅನುಭವವನ್ನು ಹೇಳಿದರು. ಡಾ||ಎ.ಹೆಚ್.ಶಿವಯೋಗಿ ಸ್ವಾಮಿಯವರು ಸ್ವತಃ ವೈದ್ಯರಿದ್ದು ಬಹಳ ಹತ್ತಿರದ ಸಂಪರ್ಕವನ್ನು ಹೊಂದಿರುವುದರಿಂದ ಡಾ||ಹೆಚ್.ಟಿ.ಗಂಗಲ್‌ರವರ ಬಗ್ಗೆ ತಿಳಿದುಕೊಂಡು ಅನೇಕ ವಿಚಾರಗಳನ್ನು ಹೇಳಿದರು. ಅಂತಹ ಪ್ರಖ್ಯಾತಿಯನ್ನು ಪಡೆದಂಥವರು. ಕೇವಲ ಭಾರತ ದೇಶಕ್ಕೆ ಮಾತ್ರವಲ್ಲ ಕೀರ್ತಿಯನ್ನು ತಂದು ಕೊಡುವವರಲ್ಲ. ಇಡೀ ಪ್ರಪಂಚದಲ್ಲಿಯೇ ಭಾರತ ದೇಶದ ಹೆಸರನ್ನು ಎತ್ತಿ ಹಿಡಿಯುವಂತಹ ಮಹತ್ತರವಾದಂತಹ ಸಾಧನೆ, ದಾಖಲೆಗಳನ್ನು innovative research ಮಾಡುವುದರಲ್ಲಿ ಮೊದಲಿಗರು ಇರುವಂತಹ ಡಾ||ಹೆಚ್.ಸಿ.ಗಂಗಲ್‌ರವರಿಗೆ ಈ Task Force ಮುಖಾಂತರ ಅವಕಾಶಗಳನ್ನು ಕಲ್ಪಿಸಿಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. Multinational ಸಂಸ್ಥೆಗಳಿವೆ ಅವರಿಗೆಲ್ಲಾ ತೊಂದರೆ ಬರುತ್ತದೆ. ಏಕೆಂದರೆ ಅವರುಗಳು ಆ Multinational companies ಮಾಡಿ, ನೂರಾರು, ಸಾವಿರಾರು ಕೋಟಿ ರೂಪಾಯಿಗಳನ್ನು ಗಳಿಸುವಂತಹ ಹುನ್ನಾರ ಇದೆ ಅವರೆಲ್ಲರದು ಒಂದು ದೊಡ್ಡ ಲಾಬಿ ಇದೆ, ಆ ಲಾಬಿಯ ಮುಖಾಂತರ ಅವರು win over ಮಾಡಿದ್ದಾರೆಂದು ನಾನು ಹೇಳಬೇಕಾಗುತ್ತದೆ. ಆ ಲಾಬಿ ಮುಖಾಂತರ, ಹಣದ ಮುಖಾಂತರ ಯಾರನ್ನು ಬೇಕಾದರು ಬುಕ್ ಮಾಡುವಂತಹ ವ್ಯವಸ್ಥೆ ಇವತ್ತು ಪ್ರಚಲಿತವಾಗಿ ನಾವು ಪ್ರತಿನಿತ್ಯ ನೋಡುತ್ತಿದ್ದೇವೆ. ಇಂತಹ ಲಾಬಿಗೆ ಸರ್ಕಾರದವರು ಮಣಿಯಬಾರದು. ಇಂಥವರು ನಮ್ಮ ಕರ್ನಾಟಕ ರಾಜ್ಯದಲ್ಲಿದ್ದಾರೆ ಎಂದು ನಾವು ಅಭಿಮಾನವನ್ನು ಪಟ್ಟುಕೊಳ್ಳಬೇಕು. ಹೆಮ್ಮೆ ಪಟ್ಟುಕೊಂಡು ಇಂಥವರಿಗೆ ಅವಕಾಶವನ್ನು ಕಲ್ಪಿಸುವಂತಹ ಕೆಲಸ ಸರ್ಕಾರದಿಂದ ಆದರೆ ಸರ್ಕಾರಕ್ಕೂ ಕೂಡ ಒಳ್ಳೆಯ ಹೆಸರು ಮತ್ತು ಕೀರ್ತಿ ಬರುತ್ತದೆ. ಆ ದೃಷ್ಟಿಯಿಂದ ಮಾಡಬೇಕು. ಮೊನ್ನೆಯ ದಿವಸ ಇಲ್ಲಿ ಚರ್ಚೆ ಮಾಡುವಂತಹ ಸಮಯದಲ್ಲಿ ವಿಧಾನಸೌಧಕ್ಕೆ ಬಂದಿದ್ದರು. ಶ್ರೀ ಬಸವರಾಜ ಹೊರಟ್ಟಿಯವರು ಬಹಳ

ಒಳ್ಳೆಯ ವಿಷಯವನ್ನು ಇಲ್ಲಿ ತೆಗೆದುಕೊಂಡು ಬಂದಿದ್ದಾರೆ ಅವರನ್ನು ಕೂಡ ನಾನು ಅಭಿನಂದಿಸಬೇಕಾಗುತ್ತದೆ.

ಅವರು ಶ್ರೀಯುತ ಗಂಗಲ್ ಅವರನ್ನು ಬಹಳ ಸಮೀಪದಿಂದ ತಿಳಿದುಕೊಂಡಿದ್ದಾರೆ. ಶ್ರೀಯುತ ಗಂಗಲ್‌ರವರು ತಮ್ಮ ಅಸಹಾಯಕತೆಯನ್ನು ವ್ಯಕ್ತಿಪಡಿಸಿದರು, ಸಂಶೋಧನೆ ನಡೆಸಲು ಮೆನ್ ಅಂಡ್ ಮೆಟೀರಿಯಲ್ಸ್ ಬೇಕು. ಹಣದ ವ್ಯವಸ್ಥೆ ಬೇಕು, ಅವುಗಳಿಲ್ಲದೆ ಸಂಶೋಧನೆಯನ್ನು ಮಾಡುವುದಕ್ಕಾಗುತ್ತದೆಯೇ? ಲ್ಯಾಪ್ರೋಸ್ಕೋಪಿಕ್ ಆಪರೇಷನ್‌ನ್ನು ಪ್ರಥಮ ಬಾರಿಗೆ ಅವರು ಜಾರಿಗೆ ತಂದರು, ಹಾರ್ಟ್ ಸರ್ಜರಿ ಬಗ್ಗೆ, ಇವೊತ್ತು ಎಂ.ಬಿ.ಬಿ.ಎಸ್. ವಿದ್ಯಾರ್ಥಿಗಳಿಗೆ 'ಗಂಗಲ್ ಥಿಯರಿ' ಎನ್ನುವಂತಹ ಒಂದು ಅಧ್ಯಾಯವೇ ಇದೆ. ಹೀಗಾಗಿ ಮೆಡಿಕಲ್ ಓದುವಂತಹ ವಿದ್ಯಾರ್ಥಿಗಳು ಅವರ ಹೆಸರನ್ನು ಹೇಳಿ ಓದುತ್ತಿದ್ದಾರೆ.

ಇಷ್ಟೆಲ್ಲಾ ಪ್ರಖ್ಯಾತಿಯನ್ನು ಪಡೆದು ವಿಶ್ವದಲ್ಲಿಯೇ ಹೆಸರನ್ನು ಮಾಡಿದಂತಹ ಒಬ್ಬ ದೊಡ್ಡ ಸ್ಕಾಲರ್ ನಮ್ಮ ಮಧ್ಯದಲ್ಲಿದ್ದಾರೆ, ಅದರಲ್ಲಿಯೂ ಅವರು ಕರ್ನಾಟಕದವರು ಎಂದಾಗ ನಮಗೆ ಹೆಮ್ಮೆಯಾಗುತ್ತದೆ. ಆದ್ದರಿಂದ ಸರ್ಕಾರ ಬೇರೆ ಯಾವುದಕ್ಕೂ ಮಣಿಯದೆ ಇಂತಹವರಿಗೆ ಅವಕಾಶ ಕಲ್ಪಿಸಿದರೆ ಸಚಿವರ ಹೆಸರು ಸಹ ಇತಿಹಾಸದ ಪುಟಗಳಲ್ಲಿ ಅಜರಾಮರವಾಗಿ ಉಳಿಯುತ್ತದೆ. ಇಂತಹ ಸಚಿವರಿದ್ದಾಗ ಇಂತಹ ಟಾಸ್ಕ್ ಫೋರ್ಸ್‌ಗೆ ಅವಕಾಶ ಮಾಡಿ, ಇವೊತ್ತು ಬಡ ರೋಗಿಗಳಿಗೆ ದೊಡ್ಡ ಪ್ರಮಾಣದ ಕಾಯಕಲ್ಪಕ್ಕೆ ಕಾರಣರಾದರು, ದೊಡ್ಡ ಕೊಡುಗೆಯನ್ನು ನೀಡಿದರು ಎನ್ನುವಂಥದ್ದು ವೈದ್ಯಕೀಯ ಇತಿಹಾಸದಲ್ಲಿಯೇ ಒಂದು ಚರಿತ್ರೆ ನಿರ್ಮಾಣಕ್ಕೆ ಅವಕಾಶವಾಗಲಿದೆ. ಆ ರೀತಿಯ ಒಂದು ಇತಿಹಾಸ ನಿರ್ಮಾಣ ಮಾಡುವಂತಹ ಒಬ್ಬ ಸಮರ್ಥ ವ್ಯಕ್ತಿ ಡಾ॥ ಹೆಚ್.ಟಿ.ಗಂಗಲ್ ಎಂದರೆ ಅದು ಅತಿಶಯೋಕ್ತಿಯ ಮಾತಲ್ಲ, ಇಂತಹ ಒಬ್ಬ ಶ್ರೇಷ್ಠ ವೈದ್ಯನಿಗೆ ಅವಕಾಶ ಕಲ್ಪಿಸಿದರೆ ಕರ್ನಾಟಕ ಸರ್ಕಾರ ಮತ್ತು ಸಂಬಂಧಪಟ್ಟ ಸಚಿವರು ಕೂಡ ಒಳ್ಳೆಯ ಹೆಸರಿಗೆ ಭಾಜನರಾಗುತ್ತಾರೆ. ದಯಮಾಡಿ ಇದಕ್ಕೆ ವಿನಾಕಾರಣ, ಯಾರೋ ಅಧಿಕಾರಿಗಳು ಏನೋ ಬರೆದು ಕಳುಹಿಸಿದರು, ಇದು ಬರುವುದಿಲ್ಲ

ಎಂಬುದಾಗಿ ತಾಂತ್ರಿಕ ಕಾರಣಗಳನ್ನು ಮುಂದಿಟ್ಟುಕೊಂಡು ಇಲ್ಲ, ಇದನ್ನು ನಾವು ರದ್ದು ಮಾಡಿದ್ದೇವೆ ಎಂದರೆ ಅದು ಸರ್ಕಾರಕ್ಕೂ ಭೂಷಣವಲ್ಲ, ನಮ್ಮ ನಾಡಿಗೂ ಭೂಷಣವಲ್ಲ, ಸಚಿವರಿಗೂ ಸಹ ಭೂಷಣವಲ್ಲ.

ಇಂತಹ ಒಬ್ಬ ಶ್ರೇಷ್ಠ ವ್ಯಕ್ತಿ ಅವಕಾಶ ವಂಚಿತರಾಗಬಾರದು, ಅವರು ವಂಚಿತರಾದರೆ ಇಡೀ ಪ್ರಪಂಚದಲ್ಲಿರುವಂತಹ ಎಲ್ಲ ಬಡ ರೋಗಿಗಳಿಗೆ ಕೊಡುಗೆಯಾಗಿರುವಂತಹ ಒಂದು ಅವಕಾಶದಿಂದ ನಾವೇ ಅವರನ್ನು ವಂಚನೆ ಮಾಡಿದಂತಾಗುತ್ತದೆ. ದಯಮಾಡಿ ಸರ್ಕಾರ ಈ ವಿಷಯದಲ್ಲಿ ಪುನರ್ ಪರಿಶೀಲನೆ ಮಾಡಬೇಕಾಗುತ್ತದೆ. Apply your mind, don’t yield to any pressure. ಈ ಲಾಬಿ, ಲೋಬಿಗಳೇನಿವೆ ಇವು ಯಾವುದಕ್ಕೂ ಮಣಿಯಬಾರದು. ಮಾನ್ಯ ಸಚಿವರ ಬಗ್ಗೆ ನಮಗೆ ವಿಶ್ವಾಸ ಇದೆ. ಯಾರ್‍ಯಾರೋ ಏನೇನೋ ಸಲಹೆ ಕೊಡುತ್ತಾರೆ, ಯಾರು ಯಾರಿಗೆ ತೊಂದರೆಯಾಗುತ್ತದೆ, ಯಾರು ಹಣವನ್ನು ಲೂಟಿ ಹೊಡೆಯುವಂತಹ, ಡಕಾಯಿತಿ ಮಾಡುವಂತಹ ಕೆಲಸದಿಂದ ವಿಮುಖರಾಗಬೇಕಾಗಿ ಬಂದಾಗ ಅಂತಹ ಸಂದರ್ಭದಲ್ಲಿ ಅವರು ಏನು ಬೇಕಾದರೂ ಮಾಡುತ್ತಾರೆ. ಇಂಥದ್ದನ್ನು ಮಾಡಬೇಕು, ಇಂಥದ್ದನ್ನು ಮಾಡಬಾರದು ಎನ್ನುವಂತಹ ಇತಿಮಿತಿ ಏನೂ ಅವರಿಗಿರುವುದಿಲ್ಲ. ಹೀಗಾಗಿ ಅವರು ಬೇಕಾದ್ದನ್ನು ಮಾಡುವಂತಹ ಸಾಧ್ಯತೆಗಳಿವೆ.

ಆ ದೃಷ್ಟಿಯಿಂದ ನಾನು ತಮ್ಮ ಮುಖಾಂತರ ಈ ಸರ್ಕಾರಕ್ಕೆ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಿರಿಯ ಸದಸ್ಯರಾದಂತಹ ಮಾನ್ಯ ಬಸವರಾಜ ಹೊರಟ್ಟಿಯವರು ತಂದಿರುವಂತಹ ಈ ಪ್ರಸ್ತಾವನೆ ಬಹಳ ಮಹತ್ವದ್ದಾಗಿದೆ, ಅದರಿಂದಾಗಿ ಇಡೀ ಪ್ರಪಂಚದಲ್ಲಿಯೇ ನಮ್ಮ ರಾಜ್ಯಕ್ಕೆ ಹೆಸರು ಬರುವಂತಹ ಒಂದು ಸುವರ್ಣ ಅವಕಾಶದ ಸದ್ವಿನಿಯೋಗವಾಗಲಿ ಎನ್ನುವಂತಹ ಉದ್ದೇಶದಿಂದ ಸರ್ಕಾರ ಇದನ್ನು ಮರುಚಿಂತನೆ ಮಾಡಿ, ಈ ಟಾಸ್ಕ್ ಫೋರ್ಸ್‌ನ್ನು ಮತ್ತೆ ಪುನರುಜ್ಜೀವನಗೊಳಿಸಿ ಡಾ॥ ಹೆಚ್.ಟಿ.ಗಂಗಲ್‌ರವರಿಗೆ ಸಂಶೋಧನೆ ಮಾಡುವುದಕ್ಕೆ, innovations ಮಾಡುವುದಕ್ಕೆ ಮತ್ತು ವೈದ್ಯ ಲೋಕಕ್ಕೆ

ಅಚ್ಚರಿಯ ಒಂದು ಕೊಡುಗೆಯನ್ನು ನೀಡುವುದಕ್ಕೆ ಅವಕಾಶ ಕಲ್ಪಿಸಬೇಕೆಂದು ತಮ್ಮ ಮುಖಾಂತರ ಸರ್ಕಾರದಲ್ಲಿ ವಿನಂತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಂ.ಸಿ.ನಾಣಯ್ಯ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯದ ಮೇಲಿನ ಚರ್ಚೆಗೆ ನಾವು ಹೆಚ್ಚು ಸಮಯವನ್ನು ವಿನಿಯೋಗಿಸಬೇಕಾದಂತಹ ಅವಶ್ಯಕತೆ ಇಲ್ಲ. ಒಂದು ರಿಸರ್ಚ್ ಲ್ಯಾಬೊರೇಟರಿ ಆಗಬೇಕೆಂಬುದು ಅವರ ಬೇಡಿಕೆ ಇದೆಯಲ್ಲವೆ? Ultimately, it is for a reaserch laboratory. ಡಾ॥ ಹೆಚ್.ಟಿ.ಗಂಗಲ್ ಅವರು ತಮ್ಮ ಇತರ ತಜ್ಞರೊಡನೆ ಕಳೆದ ಸುಮಾರು ಮೂರು-ನಾಲ್ಕು ವರ್ಷಗಳ ಹಿಂದೆ ಮಾನ್ಯ ಹೊರಟ್ಟಿಯವರ ಜೊತೆಯಲ್ಲಿ ಬಂದಾಗ ಸುಮಾರು ಮುಕ್ಕಾಲು ಗಂಟೆ ನಾವೆಲ್ಲಾ ಚರ್ಚೆ ಮಾಡಿದ್ದೇವೆ. A man with lot of insight. Let me tell you, he is a medical scientist. ಈ ವ್ಯಕ್ತಿ ಪ್ರಸ್ತಾಪ ಮಾಡುತ್ತಿರುವಂತಹ ವಿಚಾರವೇನೆಂದರೆ, ಅವರ ಬಳಿ ಸುಮಾರು ಏಳೆಂಟು ಪೇಟೆಂಟ್‌ಗಳುಂಟು. ಆ ಪೇಟೆಂಟ್‌ಗಳನ್ನು ಅವರು ಇನ್ನೂ ಕೂಡ ಯಾರಿಗೂ ಬಿಟ್ಟುಕೊಟ್ಟಿಲ್ಲ, He has not given the patents. ಹಿಂದೆ ಸದನದಲ್ಲಿ ಈ ವಿಚಾರದ ಬಗ್ಗೆ ಚರ್ಚೆ ಮಾಡಿದ ನಂತರ ಸರ್ಕಾರದ ಜೊತೆಯಲ್ಲಿ ಕೂಡ ಬಹಳ ದೊಡ್ಡ ಪ್ರಮಾಣದಲ್ಲಿ ಚರ್ಚೆ ನಡೆಸಲಾಗಿತ್ತು. ಆ ಮನುಷ್ಯನಿಗೆ ಆ ಒಂದು insight ಇದೆಯೇ, whether he can do some research and bring certain new innovative medicines ಎಂಬುದರ ಬಗ್ಗೆ ನಮ್ಮ ಚಿಂತನೆ ಆಗಬೇಕಾದರೆ ಅಲ್ಲವೆ, when we spend the money. ಆ ಸಂದರ್ಭದಲ್ಲಿ ನಾನು ಯೋಚನೆ ಮಾಡಿದ್ದೆ, We have got Karnataka Antibiotics ಅದನ್ನು ಸುಮಾರು ಐದು ವರ್ಷಗಳ ಹಿಂದೆ ಈ ಬಗ್ಗೆ ಪ್ರಸ್ತಾಪವಾದಂತಹ ಸಂದರ್ಭದಲ್ಲಿ ನಾನು ಹೇಳಿದ್ದೆ. ಅದನ್ನು ಅ ಮಟ್ಟಕ್ಕೆ ಎತ್ತರಿಸುವಂತಹ ಕೆಲಸವನ್ನು ನಾವು ಇನ್ನೂ ಸಹ ಮಾಡಲಿಲ್ಲ.

ಸಚಿವರಾದ ಮಾನ್ಯ ರಾಮದಾಸ್‌ರವರಿಗೆ ನಾನು ನೇರವಾಗಿ ಹೇಳಬಯಸುವುದೇನೆಂದರೆ, ಜನರಿಕ್ ಡಿಸೀಸ್‌ಗಳಿಗೆ ಸಂಬಂಧಿಸಿದಂತೆ

ಜನರಿಕ್ ಮೆಡಿಸನ್ ಎಂದು ಸರ್ಕಾರ ಏನು ಸಪ್ಲೈ ಮಾಡುವುದಕ್ಕೆ ಪ್ರಾರಂಭ ಮಾಡಿದೆ ಅದರ ಬಗ್ಗೆ ನಾನು ಸ್ವಲ್ಪ ಮಟ್ಟಿಗೆ ಅಧ್ಯಯನ ಮಾಡಿದ್ದೇನೆ. I am not a doctor and Ramdas is also not a doctor. ಅವರು ಒಂದು ಸಂದರ್ಭದಲ್ಲಿ ಏನು ಹೇಳಿದ್ದಾರೆ ಎಂದರೆ, ಕರ್ನಾಟಕ ರಾಜ್ಯದ ಒಳಗಡೆ ಮತ್ತು ಹೊರಗಡೆ ಈ ರೀತಿಯ ಔಷಧಿಗಳನ್ನು ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಮಾಡುತ್ತಿರತಕ್ಕಂತಹ ಸಂಸ್ಥೆಗಳು ಮತ್ತು ವ್ಯಕ್ತಿಗಳು ಕ್ಲಿನಿಕಲ್ ಟ್ರಯಲ್ ಮಾಡುವುದಕ್ಕೆ ಬೇಕಾದಂತಹ ಪರಿಸ್ಥಿತಿಯನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ನಿರ್ಮಾಣ ಮಾಡುವಂತಹ ಹಂತಕ್ಕೆ ಹೋಗಿದ್ದಾರೆ, ಅವೆಲ್ಲವನ್ನೂ ಕೂಡ ನಾನು ಸಂಪೂರ್ಣವಾಗಿ ನಿಷೇಧ ಮಾಡುತ್ತೇನೆ ಎನ್ನುವಂತಹ ಮಾತನ್ನು ಅವರು ಹೇಳಿರುವುದು ನನ್ನ ಗಮನಕ್ಕೆ ಬಂದಿದೆ. ಅವರು ಆ ರೀತಿ ಹೇಳಿಕೆಯನ್ನು ಕೊಟ್ಟ ನಂತರ ಸರ್ಕಾರದ ವತಿಯಿಂದ ಕೂಡ ಅದಕ್ಕೆ ಒಂದು ಪ್ರತಿ ಹೇಳಿಕೆ ಬಂದಿರತಕ್ಕಂಥದ್ದನ್ನು ಸಹ ನಾನು ಗಮನಿಸಿದ್ದೇನೆ. ಸರ್ಕಾರ generic medicines ತರುವುದಕ್ಕೆ ಏನು ಹೊರಟಿದೆ, ಅದು ಈಗ ಎಲ್ಲಿಯೋ ಒಂದು ಕಡೆ ವಿವಾದಾತ್ಮಕವಾಗಿ ಉಳಿದಿದೆ. ನಾವು ಇವೊತ್ತು ಜನರಿಕ್ ಮೆಡಿಸಿನ್ಸ್ ಬೇಕು ಎಂದು ಏತಕ್ಕೆ ಕೇಳುತ್ತಿದ್ದೇವೆ? ನೀವು ನಮ್ಮ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಜನತಾ ಬಜಾರ್ ಶಾಖೆಯಿಂದ ಜನರಿಕ್ ಮೆಡಿಸಿನ್‌ಗಳನ್ನು ಮಾರಾಟ ಮಾಡುವುದಕ್ಕೆ ಹೊರಟಿದ್ದೀರಿ. ಆ ಮೆಡಿಸಿನ್‌ಗಳನ್ನು ತಯಾರು ಮಾಡುತ್ತಿರುವವರು ಯಾರು?

ಡಾ॥ ಗಂಗಲ್ ಎನ್ನುವಂತಹ ವ್ಯಕ್ತಿ, he is man of international repute. ಆ ವಿಚಾರ ಮೊದಲು ನನಗೆ ಗೊತ್ತಿರಲಿಲ್ಲ, ಮಾನ್ಯ ಸದಸ್ಯರು ಹೇಳಿದಾಗ ಗೊತ್ತಾಯಿತು. His name has been recommended for Nobel Award. Probably, he is a man of terrible intelligence as a medical scientist. Let us not under estimate him. ಈ ಹಿನ್ನೆಲೆಯಲ್ಲಿ ನಾನು ಹೇಳಬಯಸುವುದೇನೆಂದರೆ, ಈಗ ಕ್ಯಾನ್ಸರ್ ಬಗ್ಗೆ, ತಮಗೆ ಗೊತ್ತಿದೆಯೋ ಇಲ್ಲವೋ, ಅಮೇರಿಕದ ನಿಯತಕಾಲಿಕವೊಂದರಲ್ಲಿ ಡಾ॥ಹೆಚ್.ಟಿ.ಗಂಗಲ್‌ರವರು ಕ್ಯಾನ್ಸರ್‌ಗೆ ಮೆಡಿಸಿನ್ ತಯಾರು ಮಾಡುವುದಕ್ಕೆ

ಒಂದು ಸಂಶೋಧನೆಯನ್ನು ನಡೆಸಿದ್ದಾರೆ ಎನ್ನುವಂತಹ ವಿಚಾರ ಪ್ರಕಟವಾಗಿದೆ. On his own he has made a research and this is the write up in one of the American magazines, " What world has not been able to achieve in the control and cure of tobacco induced deceases, Karnataka has achieved it in the name of Dr.Gangal" ಎಂದು ಬರೆದಿದ್ದಾರೆ. This is a matter for investigation. ನಾನು ತಮಗೆ ಒಂದು ವಿಚಾರವನ್ನು ಉದಾಹರಣೆಗಾಗಿ ಹೇಳುತ್ತೇನೆ. ಕ್ಯಾನ್ಸರ್ ಬಗ್ಗೆ I have got certain ideas, ಇದನ್ನು ರಿಸರ್ಚ್ ಮಾಡಿ ನಾನು ಹೊರಗೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ ಎಂದು ಡಾ||ಗಂಗಲ್ ಅವರು ಹೇಳುತ್ತಿದ್ದಾರೆ. It has already come up in one of the American magazines. American Medical Magazineನಲ್ಲಿ ಎಲ್ಲಿಯಾದರೂ ಒಂದು ಆರ್ಟಿಕಲ್ ಬರಬೇಕಾದರೆ, either in the British Medical Journal or in an American Medical Journal ನಲ್ಲಿ ಯಾವುದಾದರೊಂದು ಆರ್ಟಿಕಲ್ ಬರಬೇಕಾದರೆ, it is only after a series of research and examination that article will appear. I know about it.

ಇತ್ತೀಚೆಗೆ ಶ್ರೀಯುತ ಬರಾಕ್ ಒಬಾಮಾ ಅವರು Megan Baker ಎನ್ನುವಂತಹ ಒಂದು ಜರ್ಮನ್ firm, ಅವರ ಒಂದು ಪೇಟೆಂಟ್ ಇದೆ. as far as one cancer drug is concerned. ಇದು ಗೊತ್ತಿದೆ ಅಲ್ಲವೆ? It is a branded drug. ಫೆಲ್ವಿಕ್ಸ್ ಯಾವುದೋ ಒಂದು branded drug ಗೆ ಸಂಬಂಧಿಸಿದಂತೆ Megan Baker ಜರ್ಮನ್ ಫರ್ಮ್‌ನವರದ್ದು ಒಂದು ಪೇಟೆಂಟ್ ಇದೆ, ಅದಕ್ಕೆ ಜನರಿಕ್ ಮೆಡಿಸಿನ್‌ನ್ನು ನಾವು ಇಂಡಿಯಾದಲ್ಲಿ ಮಾಡುತ್ತೇವೆ ಎಂದು ಹೊರಟ ಕೂಡಲೇ, ಅಮೇರಿಕಾದ ಅಧ್ಯಕ್ಷ ಬರಾಕ್ ಒಬಮಾ, ಅವರು ಹೇಳುತ್ತಾರೆ, O.K. I think it is better not to be done. ಏತಕ್ಕೆ ಅಲ್ಲಿ ಪೇಟೆಂಟ್‌ಗೆ ಅವಕಾಶ ಇರುವುದು 5 ವರ್ಷ ಮಾತ್ರ, any drug, let me tell you, in the brand name, of a manufacturer, that will have patent only for a period of five years. Within that five years period,

right from the raw material, thereafter research laboratory, thereafter clinical trial, subsequently acceptance part of it, and subsequently marketing part of it, and then getting into the market, it may involve 10 billion dollors or it may involve 25 billion dollars. ಒಂದು ಡ್ರಗ್ ತಯಾರು ಮಾಡಲು ಸುಮಾರು 10 ರಿಂದ 25 ಬಿಲಿಯನ್ ಡಾಲರ್‌ಗಳಷ್ಟು ವೆಚ್ಚವಾಗುತ್ತದೆ. ಈ ನಿರ್ದಿಷ್ಟವಾದ ಒಂದು ಕ್ಯಾನ್ಸರ್ ಡ್ರಗ್ ಮಾಡತಕ್ಕಂಥದ್ದಕ್ಕೆ, to be manufactured by that firm, Government of India have already accepted it now and we are going to have a generic medicine in respect of this particular brand. ಇದಕ್ಕೆ ವಿರೋಧ ವ್ಯಕ್ತವಾಯಿತು, because it is a multinational company and it affects the multinational companies of America and other countries. ಅದಕ್ಕೆ ಅವರು ಏನು ಮಾಡುತ್ತಾರೆ ಎಂದರೆ, they are bringing pressure.

ದಯವಿಟ್ಟು ಸರ್ಕಾರ ಒಂದು ವಿಚಾರವನ್ನು ತಿಳಿದುಕೊಳ್ಳ ಬೇಕಾಗುತ್ತದೆ, ಜನರಿಕ್ ಮೆಡಿಸಿನ್ಸ್ ತರಲಿಕ್ಕೆ Government of India, for the next few years, they are going to spend 30,000 crore in India. They are spending to avoid branded drugs. ಬ್ರಾಂಡೆಂಡ್ ಡ್ರಗ್ಸ್‌ಗೆ ₹ 250/- ಇದ್ದರೆ ಅದೇ ಜನರಿಕ್ ಡ್ರಗ್, manufactured by a leading company, it may not cost more than 25 or 30 rupees. ಈ ಹಿನ್ನಲೆಯಲ್ಲಿ ಡಾ||ಹೆಚ್.ಟಿ.ಗಂಗಲ್‌ರವರು a man of international repute, ಮುಂದಕ್ಕೆ ಬಂದು I am prepared to do that ಎಂದು ಹೇಳಿದರೆ ನಾವೇಕೆ ಒಪ್ಪಬಾರದು.

ನಾವು ಈ ರಾಜ್ಯದಲ್ಲಿ ಇದಕ್ಕೆ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಿದ್ದು, ಅದರಲ್ಲಿ ಕೋಟಿಗಟ್ಟಲೆ ಹಣ ಲೂಟಿಯಾಗಿ ರುವುದುಂಟು, ಕಳಪೆ ಗುಣಮಟ್ಟದ ಡ್ರಗ್ಸ್‌ಗಳನ್ನು ಖರೀದಿಸಿರುವುದುಂಟು, ಅದು ಹೊರಗೆ ಬರದಿರುವುದುಂಟು, ಆ ಹಣ ಯಾರ್‍ಯಾರದೊ ಜೇಬಿಗೋ ಹೋಗಿರುವುದೂ ಉಂಟು. But this man, let me tell you, not Only for himself. ಡಾ||ಗಂಗಲ್‌ರವರು ಮತ್ತು ಅವರ ಜೊತೆಯಲ್ಲಿರತಕ್ಕಂತಹ ತಜ್ಞರು

ಸೇರಿ ಮಾಡತಕ್ಕಂಥದ್ದು. ಇವರ ಮುಖಾಂತರ ಎಲ್ಲಿಯಾದರೂ ಒಂದು known drug ಅದರ ಪೇಟೆಂಟ್‌ನ್ನು ಮಾಡಿ clinical trial ಮಾಡಿ, ಇಂಟರ್ ನ್ಯಾಷನಲ್ ಮ್ಯಾಗಜಿನ್‌ಗಳಲ್ಲಿ ಪ್ರಕಟಗೊಂಡರೆ, the amount of money we get, ಆ ಪೇಟೆಂಟ್ ಒಂದನ್ನು ಮಾರಾಟ ಮಾಡಿಬಿಟ್ಟರೆ, we may get billions of dollars.

ಮಾನ್ಯ ಸಭಾಪತಿಯವರೆ, why shall we not make use of it? ಇದರ ಬಗ್ಗೆ ನಾವು ಏಕೆ ಯೋಚನೆ ಮಾಡುವುದಕ್ಕೆ ಆಗಿಲ್ಲ? After all, how much you are spending now? Initially you are investing ₹ 10 Crores. ನರೇಗಾದಲ್ಲಿ ನಾವು ಕಳೆದ ಮೂರು ವರ್ಷದಿಂದ ಐದು ಸಾವಿರ ಕೋಟಿ ರೂಪಾಯಿ ಹಣ ಖರ್ಚು ಮಾಡಿ Panchayat Developemnt ನಲ್ಲಿ ನಿಮ್ಮ ಕಾರ್ಯದರ್ಶಿಯವರೇ ಒಮ್ಮೆ ಬಂದು ಹೇಳಿದರು, "I have already suspended about 350 Grama Sabha Secretaries and others and I do not know how much I need have to suspend." The total amount of money ಇದರಲ್ಲಿ ಹೋಗಿರುವಂಥದ್ದು it runs into Crores of Rupees. We know that. In respect of every Department, we know about this. ಈ ಸಂದರ್ಭದಲ್ಲಿ ನೀವು generic medicine ಮಾಡುವುದಕ್ಕೆ ಹೊರಟಿದ್ದೀರಲ್ಲ, ಕರ್ನಾಟಕ ರಾಜ್ಯದಲ್ಲಿರುವಂತಹ ಚಿಕ್ಕಪೇಟೆ, ಬಳೇಪೇಟೆ, ಪೀಣ್ಯ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರದಲ್ಲಿ manufacturers ಇದ್ದಾರಲ್ಲ who are those people? Do they know anything about the manufacture of drugs? ಇದರ ಬಗ್ಗೆ ಈ ಹಿಂದೆ ನಾವು 250 ಕೋಟಿ ರೂಪಾಯಿಯನ್ನು ಬೆಂಗಳೂರು ಒಳಗಡೆ ಇರುವಂತಹ manufacturers ಮುಖಾಂತರ ನಾವು drugs ಖರೀದಿ ಮಾಡಿಲ್ಲವೆ? Have we not purchased it? Mr Madhusudan, kindly tell me now. ಲಕ್ಷಾಂತರ ರೂಪಾಯಿ ಕೊಟ್ಟು ಕಳಪೆ ಗುಣಮಟ್ಟದ ಔಷಧಿಯನ್ನು ಖರೀದಿ ಮಾಡುತ್ತೇವೆ, branded drugs use ಮಾಡಿದರೆ ಮೂರು ದಿವಸದಲ್ಲಿ ವಾಸಿಯಾಗುತ್ತದೆ. ಆದರೆ ಇವರ ಮೆಡಿಸನ್ ತೆಗೆದುಕೊಂಡು ಹೋದರೆ ಹತ್ತು ದಿವಸವಾದರೂ ವಾಸಿ ಆಗುವುದಿಲ್ಲ ಎಂದು ಹೇಳಿದ ಮೇಲೆ now we have

changed the policy. ಇಷ್ಟು ದೊಡ್ಡ ಪ್ರಮಾಣದಲ್ಲಿ ಹಣವನ್ನು ಎಲ್ಲೆಲ್ಲೋ ನಾವು ಈ ರೀತಿ ಖರ್ಚು ಮಾಡಿದಮೇಲೆ one known individual of Karnataka, he is a man of Karnataka, ಅವರು ಅಮೇರಿಕಾದಲ್ಲಿದ್ದರು. ಈ ಹಿಂದೆ ಈ ವಿಷಯದ ಬಗ್ಗೆ ನಾವೆಲ್ಲರೂ ಸೇರಿ ಚರ್ಚೆ ಮಾಡಿದ್ದೇವೆ, ನನ್ನ ಮನಸ್ಸಿಗೆ ಅನ್ನಿಸುತ್ತಿದೆ he is certainly a man of International repute. ಡಾ||ಶಿವಯೋಗಿಸ್ವಾಮಿಗಳು ಮಾತನಾಡುವಾಗ ಏನೆಂದು ಹೇಳಿದರು.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೆ, ಕೆಲವು ಇಲಾಖೆಗಳಲ್ಲಿ redundant apparatus ಗಳನ್ನು ಕೊಂಡುಕೊಂಡು ಉಪಯೋಗವಿಲ್ಲದೆ ಅವು ಹಾಗೆಯೇ ಬಿದ್ದಿವೆ.

**ಶ್ರೀ ಎಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೆ, ನಾವು ಅದರ ಬಗ್ಗೆ ಹೇಳಿದರೆ ನಮ್ಮ ಒಂದು ಲಕ್ಷ ಕೋಟಿ ರೂಪಾಯಿ ಬಜೆಟ್‌ನಲ್ಲಿ Developmental Worksಗೆ ನಾವು ಎಷ್ಟು ಹಣವನ್ನು ಮೀಸಲಿಟ್ಟಿದ್ದೇವೆ, ಅದರ ಅರ್ಧದಷ್ಟು ಅಧಿಕಾರಿಗಳು, ರಾಜಕಾರಣಿಗಳು ಅವರು ಇವರು ಎಲ್ಲರ ಜೇಬಿಗೆ ಹೋಗುತ್ತಿರುವುದು ಕಟು ಸತ್ಯ. ಇದನ್ನು ನಾವು ಒಪ್ಪಿಕೊಳ್ಳೋಣ. ಆದರೆ ಈ ಮನುಷ್ಯ ದುಡ್ಡು ತಿನ್ನುವಂಥ ಮನುಷ್ಯನಲ್ಲ. He is a man with pride. ಅವರಿಗೆ ಅಸಾಧ್ಯವಾದ ಪ್ರೈಡ್ ಇದೆ. I am a man of Karnataka, why should I not do it here? I don't have money, give me some money, I will do it ಎಂದು ಅವರು ಕೇಳುತ್ತಿರುವಾಗ, ಈ ಮನುಷ್ಯ ಏನಾದರೂ fake ಮನುಷ್ಯನಾಗಿದ್ದರೆ, fake ಬಾಬಾಗಳು ಇದ್ದಾರಲ್ಲ ಆ ರೀತಿ fake ಮನುಷ್ಯನಾಗಿದ್ದರೆ ನಾನು ಒಪ್ಪಿಕೊಳ್ಳುತ್ತೇನೆ. ಅಥವಾ ಬೇಕಾದಷ್ಟು ಬ್ಲೇಡ್ ಕಂಪನಿಗಳು ಏನಿವೆ ಆ ರೀತಿ ಆಗಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಆದರೆ ನಾವೆಲ್ಲರೂ ನೋಡುತ್ತಿರುವಂತೆ he is a man of International repute. That much is certain. ನೀವು ಒಂದು ತಿಳಿದುಕೊಳ್ಳಿ, ಈ ಪ್ರಪಂಚದಲ್ಲಿ ನಾವು ನೀವು ಉಪಯೋಗಿಸುತ್ತಿರುವಂಥ ಹತ್ತಾರು ಉಪಕರಣಗಳು, ಸಲಕರಣೆಗಳು, ಮಾಹಿತಿ ತಂತ್ರಜ್ಞಾನದ ವಿಚಾರಗಳು ಇದೆಲ್ಲವೂ ಹೊರಬಂದಿರುವಂಥದ್ದು scientific laboratories ಒಳಗಡೆಯಿಂದ. ಹತ್ತಾರು ವರ್ಷಗಳ ಕಾಲ

ದಿನಕ್ಕೆ 24 ಗಂಟೆಗಳ ಕಾಲ ಕೆಲಸ ಮಾಡಿರುವಂತಹ ನಮ್ಮ ವಿಜ್ಞಾನಿಗಳು ಯಾರಿದ್ದಾರೆ ಆ ವಿಜ್ಞಾನಿಗಳಿಗೆ ಯಾರಾದರು ಒಬ್ಬರು ಕೆಲಸ ಮಾಡದೆ ಇರುವಂಥವನು ಬಂದು ಅವರನ್ನು how are you ಎಂದು ಕೇಳಿದರೆ ಆ ಮನುಷ್ಯನನ್ನು get out ಎಂದು ಹೇಳುತ್ತಾರೆ. ಏಕೆಂದರೆ ಅವರಿಗೆ ಸಮಯವಿಲ್ಲ. ಇಂತಹ ವ್ಯಕ್ತಿಗಳ temperament, bent of mind is only that way ಆದುದರಿಂದ famous Scientists of the World ತೆಗೆದುಕೊಂಡರೆ ಎಲ್ಲರೂ ಸಹ including Einstein, Newton, Murphy ಯಾರನ್ನಾದರೂ ತೆಗೆದುಕೊಳ್ಳಿ ಅವರ life history ಓದಿದರೆ it's a wonderful reading. ಈ ಹಿನ್ನಲೆಯಲ್ಲಿ ನಾನು ಹೇಳುತ್ತೇನೆ, ಇವರಿಗೆ ನಾವು ಒಂದು ಅವಕಾಶವನ್ನು ಕೊಟ್ಟರೆ ಸರ್ಕಾರಕ್ಕೆ ಏನು ತಪ್ಪಾಗುತ್ತದೆ? ಮಾನ್ಯ ರಾಮ್‌ದಾಸ್, ಎಲ್ಲೋ ಒಂದು ಕಡೆ ನಾವು ನಮ್ಮ ಸರ್ಕಾರಿ ಆಸ್ಪತ್ರೆಯನ್ನು ಖಾಸಗಿಯವರಿಗೆ ಸಂಶೋಧನೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ let me tell you ನನಗನ್ನಿಸುತ್ತದೆ there may be another powerful lobby behind this particular statement ಎಂದು ಹೇಳುವಂತಹ ಭಾವನೆಗೆ ನಾನು ಬಂದರೆ ಬಹುಶಃ ತಾವು ದಯವಿಟ್ಟು ನನ್ನನ್ನು ತಪ್ಪು ತಿಳಿಯಬೇಡಿ. ಈ ಹಿಂದೆ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡಿತ್ತು. Let me tell you, revive the whole process ಕೊಡಿ ಅದಕ್ಕೆ, ಅವರ ಜೊತೆಯಲ್ಲಿ ಇರುವಂತಹ ಬಾಕಿ experts ಯಾರಿದ್ದಾರೆ ಅವರನ್ನು ನೇಮಕ ಮಾಡುವಂಥ ಪ್ರಯತ್ನ ಮಾಡಿ, ಎಲ್ಲರೂ ಒಟ್ಟಾರೆ ಸೇರಿ ಕೆಲಸ ಮಾಡುವಾಗ ಎರಡೋ ಮೂರೋ drugs ಆಗುತ್ತದೆ. Pasteur Institute ನಲ್ಲಿ ಕೆಲಸ ಮಾಡುವಂಥ Insulin ಗೆ ಸಂಬಂಧಪಟ್ಟಂತೆ ಅಥವಾ cancer ಗೆ ಸಂಬಂಧಪಟ್ಟಂತೆ ಅಥವಾ ಇನ್ನಾವುದಕ್ಕೋ ಸಂಬಂಧಪಟ್ಟಂತೆ communicable and non-communicable disease ಗೆ ಸಂಬಂಧಪಟ್ಟಂತೆ ಒಂದು ಮೂರ್ನಾಲ್ಕು ಡ್ರಗ್ಸ್ ಅನ್ನು ಎಲ್ಲಾದರು ಮಾಡಿ, ಅದಕ್ಕೆ ಪೇಟೆಂಟ್‌ನ್ನು ತೆಗೆದುಕೊಂಡರೆ if it gets international acceptance, Sir, do you know what is the amount that we can make out of it? ಅದರ ಜೊತೆಗೆ ಹೇಳುತ್ತೇನೆ we can certainly give

drugs at a cheaper rate. ಈಗ branded drugs ಗೆ ಕೊಡುತ್ತಿರುವಂಥದ್ದರಲ್ಲಿ ಹೋಲಿಸಿದರೆ we can give it at a cheaper rate. ಆದುದರಿಂದ generic medicine ಏನಿದೆ, I am now advising because I have already sent a notice. Kindly have a re-look at it. I do not want it to happen now. ಅದು ಮಾಡಬೇಕಾದರೆ Branded Companies ಅವರನ್ನು ಬೇಕಾದರೆ ಸಂಪರ್ಕ ಮಾಡಿ ನಮ್ಮದೇನು ಅಭ್ಯಂತರವಿಲ್ಲ, but not the new manufacturers wherein they want to make money at the cost of some others. ಆದುದರಿಂದ ಇದಕ್ಕೆ ನಾವು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ದಯವಿಟ್ಟು revive ಮಾಡಿ, ಹತ್ತು ಕೋಟಿ ರೂಪಾಯಿ ಏನು ಕೇಳುತ್ತಿದ್ದಾರೆ ಅದನ್ನು ಕೊಡಿ. ನಾವು ಹಣವನ್ನು ಯಾವುದಕ್ಕೂ ವ್ಯಯ ಮಾಡುತ್ತಿಲ್ಲ. ನಾನು ಹೇಳುತ್ತೇನೆ ಒಂದು ವೇಳೆ ಅವರ ಕೈಯಿಗೆ ಹಣ ಕೊಟ್ಟರೂ ಸಹ he is not a person to touch one pie out of it. ಈ ಮನುಷ್ಯ ಹಣವನ್ನು ಮುಟ್ಟುವುದಿಲ್ಲ. ಅವನು ಕೇಳುವುದೇನೆಂದರೆ, ನನ್ನ ಸಂಶೋಧನೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕೊಡಿ ಎಂದು ಕೇಳುತ್ತಿದ್ದಾರೆ. Why not you give it now? Kindly revive it. Postive ಆಗಿ ನೀವು ಹೇಳಬೇಕು, ಇಲ್ಲದೆ ಹೋದರೆ ನಮ್ಮ ಈ ಸದನ we must go there and meet the Chief Minister, bring pressure on him. If he doesn't do either, then I have got the right to accuse the Government of being a party to some other outside forces to prevent this to come to Karnataka.

**ಉಪ ಸಭಾಪತಿಯವರು:-** ಈಗ ಇಷ್ಟು ಒಳ್ಳೆಯ ಆರೋಗ್ಯಕರ ಚರ್ಚೆಯಾಗಿದೆ, ಡಾ॥ಹೆಚ್.ಟಿ.ಗಂಗಲ್‌ರವರ ಬಗ್ಗೆ ನಮಗೆ ಏನು ಗೊತ್ತಿರಲಿಲ್ಲ. ಮೊನ್ನೆ ದಿವಸ ಮಾನ್ಯ ಸಭಾಪತಿಯವರ ಕಛೇರಿಗೆ ಬಂದಾಗ ಅವರನ್ನು ನಾನು ಭೇಟಿ ಮಾಡಿದ್ದೆ. ಅವರ ಬಗ್ಗೆ ಇಷ್ಟೊಂದು ವಿಷಯ ಗೊತ್ತಿರಲಿಲ್ಲ. ಇದನ್ನು ಮುಕ್ತಾಯಗೊಳಿಸಲಾಗಿದೆ ಎಂದು ಸರ್ಕಾರ ಏನು ಉತ್ತರ ಕೊಟ್ಟಿದೆ ಅದನ್ನು ವಾಪಸ್ಸು ತೆಗೆದುಕೊಂಡು ಇದರ ಬಗ್ಗೆ ಮತ್ತೊಮ್ಮೆ ಪರಿಶೀಲನೆ ಮಾಡಿ ಅವರು ಏನು ಕೇಳಿದ್ದಾರೆ ಅದಕ್ಕೆ ವ್ಯವಸ್ಥೆ ಮಾಡುವಂಥ ದಿಸೆಯಲ್ಲಿ

ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ನಾನೂ ಸಹ ಈ ಪೀಠದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎಂ.ಆರ್.ಹುಲಿನಾಯ್ಕರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, I want to add one more information; Nipple retraction ಎಂದು ಒಂದು ಕಂಡೀಷನ್ ಇದೆ, ಅದಕ್ಕೆ Surgery ಇದೆ. Animal Husbandry Department ಅವರು ತಮ್ಮದೇ ಆದಂತಹ ಒಂದು procedure ಉಪಯೋಗ ಮಾಡಿಕೊಂಡು nipple retraction treat ಮಾಡಿ, milk increase ಮಾಡುವುದಕ್ಕೆ ಅದು ಬಹಳ ದೊಡ್ಡ ಸಹಾಯವಾಗಿದೆ. ಅಂದರೆ milk production ಬಗ್ಗೆ Animal Husbandry ಯಲ್ಲಿಯೂ ಈ procedure Internationally adopt ಆಗಿದೆ ಅದು ಒಂದು. ನಂತರ Genes ಮತ್ತು Tuncell. It's a different subject altogether. ಇದಕ್ಕೆ ನಮ್ಮ ಇತ್ತೀಚಿನ ಯುವ ವಿಜ್ಞಾನಿಗಳು ಮೆಡಿಕಲ್ ಸೈನ್ಸ್‌ನಲ್ಲಿ ಕೆಲಸ ಮಾಡುವಂಥವರು Genetic pattern change ಮಾಡುವಂಥದ್ದು ಆ ಜೀನ್ ಲೆವೆಲ್ ಒಳಗೆ ಟ್ರೀಟ್‌ಮೆಂಟ್ ಮಾಡುವಂಥದ್ದು. ಅದರ ಜೊತೆ Tuncell is an internationally accepted practice and they are treating under it. ಇದರ ಬಗ್ಗೆ ಅವರಿಗೆ innovative ideas ಇದೆ, ದಯವಿಟ್ಟು ಇದಕ್ಕೆ ಮಹತ್ವ ಕೊಟ್ಟು ದಯಮಾಡಿ ಇದಕ್ಕೆ ತಾವು ಸಹಿ ಮಾಡಿ, ಸ್ಟ್ರಾಂಗ್ ಆಗಿ ಒಂದು ಟಾಸ್ಕ್‌ಫೋರ್ಸ್ ಮಾಡಿದರೆ ಖಂಡಿತವಾಗಿಯೂ ಸಹಾಯವಾಗುತ್ತದೆ.

**ಉಪ ಸಭಾಪತಿಯವರು:–** ಮಾನ್ಯ ರಾಮ್‌ದಾಸ್‌ರವರೆ, ತಾವು ಇದಕ್ಕೆ ತಕ್ಷಣವೇ ಸ್ಪಂದಿಸಬೇಕಾಗುತ್ತದೆ. ಆದಕಾರಣ ಮೇಲ್ಮನೆಗೆ "ಚಿಂತಕರ ಚಾವಡಿ" ಎಂದು ಹೇಳುವುದು. ಇಂತಹ ಒಂದು ಆರೋಗ್ಯಕರ, ಗಂಭೀರಕರವಾದಂತಹ ವಿಷಯದ ಬಗ್ಗೆ ಚರ್ಚೆ ಮಾಡಿದ್ದೇವೆ ಆದಕಾರಣ ತಾವು ತಕ್ಷಣ ಈ ವಿಷಯಕ್ಕೆ ಸ್ಪಂದಿಸಬೇಕು.

**ಶ್ರೀ ವಿಜಯ ಸಂಕೇಶ್ವರ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಡಾ॥ಹೆಚ್.ಟಿ.ಗಂಗಲ್‌ರವರಿಗೆ ಕೆಳದ 50 ವರ್ಷದಿಂದ ನನ್ನ

ಪರಿಚಯ ಅವರಿಗಿದೆ. ಅವರು 80 ವರ್ಷದ ವಯೋವೃದ್ಧ ವೈದ್ಯರು. ಒಳ್ಳೆಯ ಹೆಸರನ್ನು ಮಾಡಿದ್ದಾರೆ. ರಾಷ್ಟ್ರಪತಿ ಡಾ|| ಸಂಜೀವ್‌ರೆಡ್ಡಿ ಯವರು ಈ ಭಾಗಕ್ಕೆ ಬಂದಾಗ ಅವರಿಗೆ ಒಂದು ರೆಕಮೆಂಡೇಶನ್ ಕೂಡ ಮಾಡಿದ್ದು ನಾನು ನೋಡಿದ್ದೇನೆ. “Gangal’s Theory” ಎನ್ನುವುದು ಕೂಡ ಅನೇಕ ವಿಶ್ವವಿದ್ಯಾಲಯಗಳಲ್ಲಿ ಬಹಳ famous ಆಗಿದೆ. ಅವರ ಜ್ಞಾನದ ಬಗ್ಗೆ, ಅವರ ಸಂಶೋಧನೆ ಬಗ್ಗೆ ಹೇಳುವುದಕ್ಕೆ ನಾನು ವೈದ್ಯನಲ್ಲ I am not a qualified person. ನಾನು ಮಾನ್ಯ ಸಚಿವರಾದಂತಹ ರಾಮ್‌ದಾಸ್‌ರವರಿಗೆ ಹೇಳುವುದಿಷ್ಟೇ, ಅವರು ಒಂದು ಕಾರ್ಪೊರೇಶನ್ ಕಟ್ಟಡದಲ್ಲಿ ಕಳೆದ 40 ವರ್ಷದಿಂದ ಬಾಡಿಗೆದಾರರಾಗಿದ್ದಾರೆ. ಅಲ್ಲಿ ಕಾರ್ಪೊರೇಶನ್‌ಗೆ ಟೆನೆನ್ಸಿ ತುಂಬಿಲ್ಲವೆಂದು ಒಂದು ಸಮಸ್ಯೆ ಪ್ರಾರಂಭವಾಗಿದೆ. ಆದುದರಿಂದ ಮಾನ್ಯ ನಾಣಯ್ಯನವರು ಡಾ||ಹೆಚ್.ಟಿ. ಗಂಗಲ್‌ರವರು ದುಡ್ಡಿನ ಮನುಷ್ಯ ಅಲ್ಲ ಎಂದು ಏನು ಹೇಳಿದರು ಆ ಮಾತನ್ನು ನಾನು ಸಮರ್ಥನೆ ಮಾಡುತ್ತೇನೆ, ಆದರೆ ಈ ವಿಷಯದ ಬಗ್ಗೆಯೂ ಸಹ ಸ್ವಲ್ಪ ಕೂಲಂಕುಷವಾಗಿ ಯೋಚಿಸಿ ನಿರ್ಧಾರ ಮಾಡಿ. ಏಕೆಂದರೆ, ಇವರು ಮುನಿಸಿಪಾಲಿಟಿಯಲ್ಲಿ ಇರುವಂತಹ ಕಟ್ಟಡದ ಬಾಡಿಗೆಯನ್ನು ಕೊಟ್ಟಿಲ್ಲ, ಖಾಲಿಯೂ ಮಾಡಿಲ್ಲ ಅಲ್ಲದೆ ಇವರು ಕೋರ್ಟಿಗೆ ಹೋಗಿದ್ದಾರೆ. There is a suspicion that he may be a man of litigation. ನಾಳೆ ನಮ್ಮ ಸರ್ಕಾರ ಒಂದು ಕೆಟ್ಟ ಹೆಸರನ್ನು ತೆಗೆದುಕೊಳ್ಳಬಾರದು. ಆದುದರಿಂದ ಅದರ ಬಗ್ಗೆ ಕಾಳಜಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನೀವು ಮೊದಲೆ ಆರ್ಡರ್ ಮಾಡಿದ್ದೀರಿ. ಆದರೆ ಈಗ ಸರ್ಕಾರ ಖಾಸಗಿ ಸಂಸ್ಥೆಯಲ್ಲಿ ಭಾಗವಹಿಸಲು ನಿಷೇಧ ಮಾಡಬೇಕೆಂದು ತೀರ್ಮಾನ ಕೈಗೊಂಡು ಈ ವಿಷಯವನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದೀರಿ. ಇದನ್ನು ಯಾವಾಗ ಅರ್ಡರ್ ಮಾಡಿದ್ದೀರಿ. ಏಕೆ ಮಾಡಿದಿರಿ? ಇವರಿಗೆ ಈ ಪೇಟೆಂಟ್‌ಗೆ 25 ಕೋಟಿ ರೂಪಾಯಿ ಕೊಡುವುದಕ್ಕೆ ತಯಾರಿದ್ದಾರೆ. ಆದರೂ ಸಹ ಅವರು ಕೊಡುವುದಕ್ಕೆ ತಯಾರಿಲ್ಲ. ಇವರು

ಇಡೀ ದೇಶದಲ್ಲಿಯೇ ಒಬ್ಬ ಮಾದರಿಯಾದಂತಹ ವೈದ್ಯರು. ಅವರ ಸಲಹೆ ತೆಗೆದುಕೊಳ್ಳುವುದನ್ನು ಮಾಡಿ. ಅವರು ಯಾವುದೇ ಪರಿಸ್ಥಿತಿಯಲ್ಲಿ ಯಾರನ್ನೂ ಹತ್ತು ರೂಪಾಯಿ ಕೇಳುವವರಲ್ಲ. ಅವರು ಇನ್ನೊಬ್ಬರ ದುಡ್ಡನ್ನು ಮುಟ್ಟುವವರಲ್ಲ. ದವಾಖಾನೆ ವಿಚಾರದಲ್ಲಿ ಅವರು ಕೋರ್ಟ್‌ಗೆ ಹೋಗಿರಬಹುದು. ಅದು ಬೇರೆ ವಿಚಾರ. ಇದರ ಬಗ್ಗೆ ಸಾರ್ವಜನಿಕರಿಗೆ ಉಪಯೋಗವಾಗುತ್ತದೆ ಎಂದರೆ ಸರ್ಕಾರದಿಂದ ಇದನ್ನು ಮಾಡಿ ಎನ್ನುವ ಮಾತನ್ನು ಹೇಳಬಯಸುತ್ತೇನೆ.

**ಶ್ರೀ ಎಸ್.ಎ.ರಾಮದಾಸ್(ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೆ, ನಾನು ಉತ್ತರ ಹೇಳುವುದಕ್ಕಿಂತ ಮೊದಲು, ಮಾನ್ಯ ಗಂಗಲ್ ಬಗ್ಗೆ... ಮಾನ್ಯ ನಾಣಯ್ಯನವರು ಹೇಳಿದ ರೀತಿಯಲ್ಲಿ, ನಾನು ಹೊಸದಾಗಿ ಸಚಿವನಾಗಿ ಬಂದ ತಕ್ಷಣ ಕೆಲವು ಸರ್ಕಾರಿ ಆಸ್ಪತ್ರೆಗಳಿಗೆ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಭೇಟಿ ಕೊಟ್ಟ ಸಂದರ್ಭದಲ್ಲಿ drug trial ಮಾಡುತ್ತಿರುವುದನ್ನು ನೋಡಿದೆ. ಆಗ clinical trial and drug trial ಬಗ್ಗೆ ಎಲ್ಲಿಯಾದರು Ethical Committee ಯ approval ಇಲ್ಲದೆ ಮಾಡುತ್ತಿರುವ ಸಂದರ್ಭದಲ್ಲಿ ತಕ್ಷಣ ನಾನು ಅನುಭವಿಗಳನ್ನು ಕರೆದು ಕೇಳಿ, ಈ ರೀತಿ ಆಸ್ಪತ್ರೆಗಳಲ್ಲಿ patients ಗಳಿಗೆ ಯಾವುದೇ affidavit ಇಲ್ಲದೆ ತೆಗೆದುಕೊಳ್ಳುತ್ತಿದ್ದಾರೆ ಎಂದು ತಕ್ಷಣ ಚಿಂತನೆಯನ್ನು ಮಾಡಲು ಪ್ರಾರಂಭ ಮಾಡಿದೆ. ಆಗ ಮಾನ್ಯ ನಾಣಯ್ಯನವರು ಹೇಳಿದ ಹಾಗೆ ನಾನು react ಮಾಡಿದೆ. ಕೇವಲ 24 ಗಂಟೆಯೊಳಗೆ ಅದರ ಬಗ್ಗೆ ನನಗೆ reaction ಏನೆಂದು ಬಂತು.ಲಾ ವಿಚಾರ ಕೂಡ ಪತ್ರಿಕೆಯಲ್ಲಿ ಬಂತು. ಅವತ್ತು ನಾನು ಯಾವುದೇ ಒಂದು ವಿಚಾರಕ್ಕೆ yield ಆಗದೆ ಆ ಕ್ಷಣದಲ್ಲಿಯೇ research ಮಾಡಿದ ವ್ಯಕ್ತಿಗಳು ಯಾರ್ಯಾರು ಇದ್ದಾರೆ ಎನ್ನುವ ಮಾಹಿತಿಯನ್ನು ತೆಗೆದುಕೊಂಡಾಗ, ಗಂಗಲ್ ವಿಚಾರವನ್ನು ಅವತ್ತೇ ತೆಗೆದುಕೊಳ್ಳಲಾಯಿತು. ಆದರೆ ಗಂಗಲ್‌ರವರು ಅವತ್ತು ನಮ್ಮ Drug Committee ಮುಂದೆ ಬಂದು ಓಡಾಡುವಂತಹ ವ್ಯವಸ್ಥೆ ಇಲ್ಲ ಎನ್ನುವ ಕಾರಣಕ್ಕೆ ಮತ್ತೆ ಚರ್ಚೆಯನ್ನು ಮಾಡಿ, ಅದಕ್ಕೆ ಇನ್ನೊಂದು ಮೂರು ಜನರ ಪ್ರತ್ಯೇಕವಾದ ಕಮಿಟಿಯನ್ನು ಮಾಡಿದ್ದೆವು. ಅದರಲ್ಲಿ ಡಾ॥ಮಯ್ಯಾರವರು

ಅಧ್ಯಕ್ಷರು, ಡಾ॥ಅರವಿಂದರವರು ಆ ಕಮಿಟಿಯಲ್ಲಿದ್ದರು. ಅವರ ವರದಿಯನ್ನು ತಮಗೆ ಕೊಡುತ್ತೇನೆ. ಆದರಿಂದ ಸರ್ಕಾರ yield ಆಗುತ್ತದೆ ಎನ್ನುವ ವಿಚಾರವು ಇದೆ. ಆದರೆ ಯಾವುದೇ ಕಾರಣಕ್ಕೆ ಸರ್ಕಾರ yield ಆಗದೆ ಹೆಜ್ಜೆಯನ್ನು ಮುಂದಕ್ಕೆ ಇಟ್ಟಿದ್ದೇವೆ. ನಾನು ಇವರ ಬಗ್ಗೆ study ಮಾಡಿದ ಸಂದರ್ಭದಲ್ಲಿ, ತಾವು ಹೇಳಿದ ಹಾಗೆ ಇವರು ಬರೆದಿರುವ ಎರಡು–ಮೂರು ವಿಚಾರಗಳನ್ನು ನಾನು ಗಮನಿಸಿದೆ. Ethical Guidelines and Bio-chemical research ಬಗ್ಗೆ ಇವರು ಒಂದು ಪುಸ್ತಕವನ್ನು ಬರೆದಿದ್ದಾರೆ. ಅದರ ಆಧಾರದ ಮೇಲೆ, ಇವರು ಬರೆದಿರುವ ಅಂಶಗಳನ್ನು ತೆಗೆದುಕೊಂಡು Ethical Committeeಗೆ ಕೊಟ್ಟಿದ್ದೇವೆ. ನಾನು ಹೆಚ್ಚಿಗೆ ಹೇಳಲು ಹೋಗುವುದಿಲ್ಲ. ನಾಲ್ಕು ಅಂಶಗಳನ್ನು ನಾನು ತೆಗೆದುಕೊಂಡೆ. ಆದರೆ ಇಲ್ಲಿ ಇದಕ್ಕೆ ಸಂಬಂಧಪಟ್ಟ ಹಾಗೆ Task Force ನಿರ್ಮಾಣವಾಯಿತು. ನಾಲ್ಕು ಮೀಟಿಂಗ್‌ಗಳನ್ನು ಮಾಡಿದರು. ನಂತರ 2010ರ ನವೆಂಬರ್ ತಿಂಗಳಿನಲ್ಲಿ Task Force ನ ಅಂತಿಮವಾದ ಮೀಟಿಂಗ್ ಮಾಡಿ ಪ್ರಿಲಿಮಿನರಿ ರಿಪೋರ್ಟ್ ಸಬ್ಮಿಟ್ ಮಾಡಿದ ನಂತರದಲ್ಲಿ ಇದನ್ನು ವಿಶೇಷವಾಗಿ ಕೇಂದ್ರ ಸರ್ಕಾರದ Drug Control Department ನಲ್ಲಿ ಇದಕ್ಕೆ ಅನುಮತಿಯನ್ನು ತೆಗೆದುಕೊಳ್ಳಬೇಕು ಮತ್ತು ಕೇಂದ್ರದಿಂದ ಹಣವನ್ನು ಕೇಳಬೇಕಾಗಿದೆ ಎಂದು ಬರೆದು, ನಂತರ ಇದಕ್ಕೆ ಅನುಮತಿಯನ್ನು ತೆಗೆದುಕೊಳ್ಳಲು ಆಗುವುದಿಲ್ಲ ಎಂದು close ಮಾಡಿದರು. ಇದು ನಾನು ಮಾಡಿರುವುದಲ್ಲ. ಇದು ಆಗಿರುವುದು 2011 ನವೆಂಬರ್‌ನಲ್ಲಿ. ಏನು ಆಗಿದೆ ಎನ್ನುವ ಮಾಹಿತಿಯನ್ನು ನಾನು ಸದನದ ಮುಂದೆ ಇಟ್ಟಿದೇನೆ ಅಷ್ಟೆ. ಇಂತಹ ವ್ಯಕ್ತಿ ನಮ್ಮ ರಾಜ್ಯದಲ್ಲಿದ್ದಾರೆ, ಇವರ ಸೇವೆಯನ್ನು ಉಪಯೋಗಿಸಿಕೊಳ್ಳಬೇಕು ಎನ್ನುವ ಕಾಳಜಿ ಈ ವಿಷಯದ ಬರದೆ ಇದ್ದರು ನನಗೆ ಅವತ್ತಿನಿಂದಲೂ ಇತ್ತು. ತಾವು ಹೇಳಿದ ರೀತಿಯಲ್ಲಿ ಇವರ ಎಲ್ಲ ವಿಚಾರಗಳನ್ನು ನಾನು ಅಭ್ಯಾಸ ಮಾಡಿದ್ದೇನೆ. research papers study ಮಾಡಿದ್ದೇನೆ. ಇದೆಲ್ಲವನ್ನು ನೋಡಿ ನಾನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರವು ಮಾತನಾಡಿದ್ದೇನೆ. ಇದನ್ನು ಮುಕ್ತಾಯ ಮಾಡಲಿ ಎಂದು ಹೇಳಲಿಲ್ಲ, ಏನು ಮಾಹಿತಿ ಇದೆ ಅದನ್ನು ತಮ್ಮ ಮುಂದೆ ಕೊಟ್ಟಿದ್ದೇನೆ. ನಾನು ಮಾನ್ಯ ಮುಖ್ಯಮಂತ್ರಿಗಳ

ಜೊತೆಯಲ್ಲಿ ಈ ವಿಚಾರವಾಗಿ ಚರ್ಚೆಯನ್ನು ಮಾಡಿ ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳುವ ಕೆಲಸವನ್ನು ಮಾಡುತ್ತೇನೆ. ಪ್ರಮಾಣಿಕವಾಗಿ ಹೇಳಬೇಕು ಎಂದರೆ, ಇವರು ತಮ್ಮ research ಗಳಲ್ಲಿ ಕೊಟ್ಟಿರುವಂತಹ ಅಂಶಗಳ ಆಧಾರದ ಮೇಲೆ. ಈಗ ವಿಷಯವನ್ನು ಬಂದಿದೆ ಎನ್ನುವ ಕಾರಣಕ್ಕೆ ಹೇಳುತ್ತಿದ್ದೇನೆ, generic drug ತರಬೇಕು ಎನ್ನುವ concept ಬಂದಿದೆ. ಪ್ರಾಮಾಣಿಕವಾಗಿ ಹೇಳಬೇಕು ಎಂದರೆ ಇವರ research ನ ಆಧಾರದ ಮೇಲೆ. ಈ ದೇಶದಲ್ಲಿ ಆ branded drugs ಗಳ ಬೆಲೆಯನ್ನು Multi National Companies ದಿನ-ದಿನೇ ಬೆಲೆ ಜಾಸ್ತಿ ಮಾಡುತ್ತಿವೆ. ಇದಕ್ಕೆ ಕಾರಣ ಎಂದರೆ, The **General Agreement on Tariffs and Trade (GATT)** ಒಪ್ಪಂದದ ನಂತರ 270 ಔಷಧಿಗಳ ಮೇಲೆ ಇರುವ Price Control ನ್ನು ತೆಗೆದುಹಾಕಿದರು. ಈಗ 270 ಔಷಧಿಗಳಿಗೆ ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ ಯಾವುದೇ ಅನುಮತಿ ಇಲ್ಲದೆ ಎಷ್ಟು ಬೇಕಾದರು ಬೆಲೆಯನ್ನು ಜಾಸ್ತಿ ಮಾಡಬಹುದು ಎಂದು ಆಯಿತು. ತಾವು ಕೇಳಿದ ಅಂಶಕ್ಕೆ ನಾನು ಉತ್ತರ ಕೊಡುತ್ತೇನೆ. ಆದರೆ ಒಂದು ಅಂಶವನ್ನು ಹೇಳಲು ಇಷ್ಟಪಡುತ್ತೇನೆ, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪ್ರಾರಂಭ ಮಾಡಿರುವಂತಹ General Drug House ಗೆ ಈಗಾಗಲೇ ಆದೇಶವನ್ನು ಹೊರಡಿಸಿದ್ದೇವೆ Food Drug Authority (FDA) ನ ಅಡಿಯಲ್ಲಿ ಪ್ರಪಂಚದಲ್ಲಿ approval ಆಗಿರುವಂತಹ ಕೇವಲ 14 ಕಂಪನಿಗಳಿಂದ ಮಾತ್ರ medicine ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ ಹೊರತು ಬೇರೆ ಯಾವ ಕಂಪನಿಯಿಂದ ತೆಗೆದುಕೊಳ್ಳುವುದಿಲ್ಲ. ಇದಕ್ಕೆ ಸಂಬಂಧಪಟ್ಟ ಹಾಗೆ ಎಲ್ಲವನ್ನು.. ಯಾವ-ಯಾವ ಕಂಪನಿಗಳಿಂದ, ಯಾವ ಬೆಲೆಯಲ್ಲಿ ತೆಗೆದುಕೊಂಡಿದ್ದೇವೆ ಎನ್ನುವುದನ್ನು ಮತ್ತು ಯಾವ 397 medicine ಗಳನ್ನು ಇಡಬೇಕೆಂದು ಅಂದುಕೊಂಡಿದ್ದೇವೆ ಅದೆಲ್ಲವನ್ನು ತಮ್ಮ ಮುಂದೆ ಇಡುತ್ತೇವೆ. ಹೆಜ್ಜೆಯನ್ನು ಇಡುವ ಸಂದರ್ಭದಲ್ಲಿ I am not a Doctor ಎಲ್ಲಿಯಾದರು ತಪ್ಪು ಹೆಜ್ಜೆಯನ್ನು ಇಟ್ಟಿದ್ದರೆ ಅದನ್ನು ತಿದ್ದಿಕೊಳ್ಳಲು ತಯಾರಿದ್ದೇನೆ. ಆದರೆ ತಾವು ಹೇಳಿದ ಹಾಗೆ ಇದನ್ನು ಪ್ರಾರಂಭ ಮಾಡುವುದಕ್ಕಿಂತ ಮುಂಚೆ ನಮಗೆ ಖಾಸಗಿ ಕಂಪನಿಗಳಿಂದ, Multi

National Companies ಗಳಿಂದ ಏನೇನು ಹೊಡೆತಗಳು ಬೀಳುತ್ತವೆ ಎನ್ನುವ ಅರಿವನ್ನು ಇಟ್ಟುಕೊಂಡೆ ಹೆಜ್ಜೆಯನ್ನು ಇಟ್ಟಿದ್ದೇವೆ. ಈ ದೃಷ್ಟಿಯಲ್ಲಿ ನಿಮ್ಮ ಸಹಕಾರವನ್ನು ನಾನು ಬಯಸುತ್ತೇನೆ. ಈ ವಿಷಯಕ್ಕೆ ಸಂಬಂದಪಟ್ಟ ಹಾಗೆ ಇವರ researches ನ್ನು ಇವರ knowledge ನ್ನು, ಅವರಲ್ಲಿ ಇರುವ Knowledge Bank ನ್ನು ಉಪಯೋಗ ಮಾಡಿಕೊಳ್ಳುವ ದೃಷ್ಟಿಯಲ್ಲಿ ನಾವು ಏನು ಮಾಡಬೇಕು ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಇದನ್ನು reopen ಮಾಡಲು ನಾವು ಸಿದ್ದರಾಗಿದ್ದೇವೆ.

**ಉಪ ಸಭಾಪತಿಯವರು:–** ಧನ್ಯವಾದಗಳು, ಇನ್ನು ಮಾನ್ಯ ವೀರಣ್ಣ ಮತ್ತೀಕಟ್ಟಿಯವರ ಒಂದು ಗಮನ ಸೆಳೆಯುವ ಸೂಚನೆ ಇದೆ ಅದನ್ನು ಮಧ್ಯಾಹ್ನ ತೆಗೆದುಕೊಳ್ಳುತ್ತೇವೆ. ಸಚಿವರು ತುಂಬಾ ಹೊತ್ತು ಕಾಯ್ದು ಹೋದರು. ಈಗ ಸದನವನ್ನು ಭೋಜನ ವಿರಾಮಕ್ಕಾಗಿ 3–45ವರೆಗೆ ಮುಂದೂಡಲಾಗುತ್ತದೆ.

**ಭೋಜನ ವಿರಾಮಕ್ಕಾಗಿ 2 ಗಂಟೆ 35 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ 4 ಗಂಟೆ 7 ನಿಮಿಷಕ್ಕೆ ಪ್ರಾರಂಭವಾಯಿತು.**

**(ಮಾನ್ಯ ಸಭಾಪತಿಯವರು ಸಭಾಪೀಠದಲ್ಲಿ ಉಪಸ್ಥಿತರಿದ್ದರು)**

**ಗಮನ ಸೆಳೆಯುವ ಸೂಚನೆ**

**ಇ) ಬೆಂಗಳೂರು ಮಹಾನಗರದಲ್ಲಿ ನೀರು ಸರಬರಾಜು ಮಂಡಳಿಯಲ್ಲಿ 2008ರಿಂದಲೂ ಸಾಕಷ್ಟು 'ಡಿ' ದರ್ಜೆಯ ಹುದ್ದೆಗಳು ಖಾಲಿಯಿದ್ದು, ನೌಕರರುಗಳ ಕೊರತೆಯಿಂದಾಗಿ ಬೆಂಗಳೂರು ನಗರದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯು ಸಂಪೂರ್ಣವಾಗಿ ಹದೆಗೆಟ್ಟಿರುವುದರಿಂದ ಸದರಿ ಸಿಬ್ಬಂದಿಯನ್ನು ತುರ್ತಾಗಿ ನೇಮಕ ಮಾಡುವ ಬಗ್ಗೆ**

**ಶ್ರೀ ಮತ್ತಿಕಟ್ಟಿ ವೀರಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬೆಂಗಳೂರು ಮಹಾನಗರದಲ್ಲಿ ನೀರು ಸರಬರಾಜು ಮಂಡಳಿಯಲ್ಲಿ 2008ರಿಂದಲೂ ಸಾಕಷ್ಟು 'ಡಿ' ದರ್ಜೆಯ ಹುದ್ದೆಗಳು ಖಾಲಿಯಿದ್ದು, ನೌಕರರುಗಳ ಕೊರತೆಯಿಂದಾಗಿ ಬೆಂಗಳೂರು ನಗರದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯು ಸಂಪೂರ್ಣವಾಗಿ

ಹದಗೆಟ್ಟಿರುವುದರಿಂದ ಸದರಿ ಸಿಬ್ಬಂದಿಯನ್ನು ತುರ್ತಾಗಿ ನೇಮಕ ಮಾಡುವ ಬಗ್ಗೆ ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರ ಗಮನವನ್ನು ಸೆಳೆಯುತ್ತೇನೆ.

**ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು);-** ಮಾನ್ಯ ಸಭಾಪತಿಯವರೇ, ಬೆಂಗಳೂರು ಜಲಮಂಡಳಿಯಲ್ಲಿ 'ಡಿ' ದರ್ಜೆಯ 5 ವೃಂದಗಳಲ್ಲಿ 288 ಹುದ್ದೆಗಳನ್ನು ತುಂಬಲು ದಿನಾಂಕ 19/11/2007ರಂದು ಸರ್ಕಾರವು ಅನುಮೋದನೆ ನೀಡಿರುತ್ತದೆ. ಈ ಹುದ್ದೆಗಳನ್ನು ದಿನಾಂಕ 22/2/2008ರಂದು ಅಧಿಸೂಚಿಸಲಾಗಿದೆ. 'ಡಿ' ದರ್ಜೆಯ ಹುದ್ದೆಗಳಿಗೆ 7ನೇ ತರಗತಿಯು ಅರ್ಹತಾದಾಯಕ ಪರೀಕ್ಷೆಯಾಗಿರುವುದರಿಂದ ಆಯ್ಕೆಪಟ್ಟಿ ಪ್ರಕಟಣೆ ಪೂರ್ವದಲ್ಲಿ ಶೈಕ್ಷಣಿಕ ದಾಖಲಾತಿಗಳ ನೈಜತೆ ಕುರಿತು ವರದಿಯನ್ನು ಪಡೆದು ಪರಿಶೀಲಿಸಲಾಗುತ್ತದೆ. ಶೀಘ್ರದಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಾಗುವುದು.

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ತಮಗೆಲ್ಲರಿಗೂ ತಿಳಿದಿರುವಂತೆ ಬೆಂಗಳೂರು ನಗರವು ರಾಷ್ಟ್ರದ ಅತ್ಯಂತ ಪ್ರಮುಖ ನಗರವಲ್ಲದೇ ಏಷ್ಯಾದಲ್ಲಿಯೇ ತೀವ್ರಗತಿಯಲ್ಲಿ ಬೆಳೆಯುತ್ತಿರುವ ನಗರವಾಗಿದ್ದು, ವಿಶ್ವದ ಎಲ್ಲಾ ಭಾಗಗಳ ಜನರ ಕಣ್ಣು ಬೆಂಗಳೂರಿನತ್ತ ನೆಟ್ಟಿದೆ. ಬೆಂಗಳೂರು ನಗರದಲ್ಲಿ 80 ಲಕ್ಷಕ್ಕಿಂತ ಜನರು ವಾಸವಾಗಿದ್ದು, ಬೆಂಗಳೂರಿಗೆ ಹೋಗಿ ಬರುವವರ ಸಂಖ್ಯೆ ಸೇರಿಸಿದರೆ ಒಂದು ಕೋಟಿಗೂ ಹೆಚ್ಚು ಮೀರುತ್ತದೆ. ಥೈಲ್ಯಾಂಡ್ ರಾಷ್ಟ್ರಕ್ಕಿಂತ ಬೆಂಗಳೂರಿನ ಜನಸಂಖ್ಯೆ ಹೆಚ್ಚಾಗಿದ್ದು, ಇಂತಹ ಮಹತ್ವದ ನಗರದಲ್ಲಿ ಜನರ ಮೂಲಭೂತ ವ್ಯವಸ್ಥೆಗಳಲ್ಲಿ ನೀರು ಮಹತ್ವದ ಪಾತ್ರ ವಹಿಸುತ್ತಿದ್ದು, ಅದನ್ನು ಒದಗಿಸುವ ಹಾಗೂ ಹರಿದು ಹೋಗಲು drainage ವ್ಯವಸ್ಥೆ ಸುಗಮ ವಾಗಿರಬೇಕಾಗುತ್ತದೆ. ಇದನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಡಿ ಗುಂಪಿನ ನೌಕರರು

ನೋಡಿಕೊಳ್ಳುತ್ತಿದ್ದು, ಇವರ ನೇಮಕಾತಿಯನ್ನು 2008 ರಿಂದ ಖಾಲಿ ಇಟ್ಟುಕೊಂಡು ಬಂದಾಗ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ಮನಗಂಡು ಶೀಘ್ರವಾಗಿ ನೇಮಕಾತಿ ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀಮತಿ ಮೋಟಮ್ಮ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸದಸ್ಯರು ಬಹಳ ಪ್ರಮುಖ ವಿಷಯವನ್ನು ಪ್ರಸ್ತಾಪಿಸಿದ್ದು, ಈಗ ಬೆಂಗಳೂರಿನಲ್ಲಿ ಎಲ್ಲಾ ಕಡೆ ಚರಂಡಿ ವ್ಯವಸ್ಥೆ ಸಮಸ್ಯೆ ಇದೆ. ಮಳೆ ಬಂದಾಗ ನೀರು block ಆಗಿ ಮನೆಯೊಳಗೆ ಅರ್ಧ ಅಡಿಯವರೆಗೂ ನೀರು ನಿಂತಿದ್ದನ್ನು ನೋಡಿದ್ದೇವೆ. ಈಗ ಮಾನ್ಯ ಸಚಿವರು ಪರಿಶೀಲನೆ ಮಾಡುತ್ತಿದ್ದೇನೆ ಎಂದು ತಿಳಿಸಿದ್ದು, ಎಲ್ಲಾ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಪರಿಶೀಲನೆ ಮಾಡುತ್ತಿದ್ದೇವೆ, D.P.A.R. ನಲ್ಲಿ ಕಡತ ಇದೆ, ಹಣಕಾಸಿನ ಇಲಾಖೆಗೆ ಹೋಗಿದೆ ಎಂದು ಶಿಕ್ಷಣ, ಅರಣ್ಯ ಎಲ್ಲಾ ಇಲಾಖೆಗಳಲ್ಲಿ ಇದೇ ರೀತಿ ಹೇಳುತ್ತಾರೆ. ಈ ರೀತಿ ಇದ್ದರೆ ಕೆಲಸ ಆಗೋದು ಯಾವಾಗ ಮತ್ತು ಈ ತೊಂದರೆಯನ್ನು ಯಾವಾಗ ತಪ್ಪಿಸುತ್ತಾರೆ ಎಂಬುದನ್ನು ತಿಳಿಸಬೇಕು. ಮಾನ್ಯ ಸುರೇಶ್‌ಕುಮಾರ್‌ರವರ ಬಗ್ಗೆ ಎಲ್ಲರಿಗೂ ವಿಶ್ವಾಸ ಮತ್ತು ಕಳಕಳಿ ಇದೆ ಹಾಗೂ ಒಳ್ಳೆಯ ಪ್ರಯತ್ನದಿಂದ ಕೆಲಸ ಮಾಡುತ್ತಾರೆಂಬ ನಂಬಿಕೆ ಇದೆ. ದಯವಿಟ್ಟು ಇದನ್ನು ಕೂಡಲೇ ಮಾಡಬೇಕು ಮತ್ತು ತೊಂದರೆಯಾದಾಗ ಅನಾಹುತವನ್ನು ತಪ್ಪಿಸಿ ಜನರ ವಿಶ್ವಾಸಕ್ಕೆ ಪಾತ್ರರಾಗಬೇಕೆಂದು ನನ್ನ ಒತ್ತಾಯ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮತ್ತಿಕಟ್ಟಿ ವೀರಣ್ಣನವರು ಈ ವಿಚಾರವನ್ನು ಪ್ರಸ್ತಾಪಿಸಿದ್ದು, ಡಿ ದರ್ಜೆ ನೌಕರರನ್ನು ಅವಶ್ಯಕತೆ ಇರುವಲ್ಲಿ ನೇಮಕಾತಿ ಮಾಡಿಕೊಳ್ಳಬೇಕು. ಆದರೆ ...

**ಶ್ರೀಮತಿ ಮೋಟಮ್ಮ:-** ಒಳಚರಂಡಿ ಕೆಲಸವನ್ನು ಎ ದರ್ಜೆ ಅಧಿಕಾರಿಗಳು ಮಾಡುತ್ತಾರೆಯೇ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಅವಶ್ಯಕತೆ ಇರುವಲ್ಲಿ ನೇಮಕಾತಿ ಮಾಡಿಕೊಳ್ಳಬೇಕು, ಇದರಲ್ಲಿ ಇಲ್ಲ ಎಂಬ ಪ್ರಶ್ನೆಯೇ ಇಲ್ಲ. ನಗರದ ಒಟ್ಟು

ಆರೋಗ್ಯ ಈ ಸಂಗತಿ ಮೇಲೆ ಅವಲಂಬನೆಯಾಗಿದೆ. ಆದರೆ ಎಲ್ಲೋ ಒಂದು ಕಡೆ ನಿರಂತರವಾಗಿ ಇದರ ಅವಲಂಬನೆಯಾಗುವುದಾದರೆ, ನಗರ ಏಕೆ ವೇಗವಾಗಿ ಬೆಳೆಯುತ್ತಿದ್ದು, ದೊಡ್ಡ ಮಟ್ಟದ ಜನಸಂಖ್ಯೆ ಇದ್ದು, ವೈಯಕ್ತಿಕವಾಗಿ ಈ ಸಮಸ್ಯೆಗಳನ್ನು ಪರಿಹರಿಸಲು ಏನು ಕ್ರಮ ತೆಗೆದುಕೊಂಡಿದ್ದೇವೆ. ಹೊಸ ಬಡಾವಣೆಗಳು ರಚನೆಯಾಗುತ್ತಿದ್ದು, ಅಲ್ಲಿ ಏನು ವ್ಯವಸ್ಥೆ ಇದೆ. ಹೊಸ ಬಡಾವಣೆಗಳಲ್ಲಿ ಹಿಂದೆ ಇದ್ದ ರಸ್ತೆಯಷ್ಟು ಮೂಲ ಸೌಕರ್ಯವನ್ನು ಕೊಡುವ ವ್ಯವಸ್ಥೆ ಆಗುತ್ತಿಲ್ಲ. ರಸ್ತೆ ಇದ್ದು ಪಕ್ಕದಲ್ಲಿ ಚರಂಡಿ ಇರುವುದಿಲ್ಲ, drainage ರಸ್ತೆಯ ಮಧ್ಯದಲ್ಲಿಯೇ ಹೋಗುತ್ತಿದೆ. ಹಳೆಯದ್ದರಲ್ಲಿ ಯಾವುದೋ ಒಂದು alignment ನಲ್ಲಿ ಮಾಡಿದ್ದಾರೆ ಎಂದುಕೊಳ್ಳೋಣ. ಆದರೆ ಹೊಸ ಬಡಾವಣೆಗಳಲ್ಲಿ ಇದನ್ನು ಮಾಡುತ್ತಿಲ್ಲ. ಆದ್ದರಿಂದ ಮುಂದಿನ ದಿನಗಳಲ್ಲಿ ಎಷ್ಟೇ ಡಿ ದರ್ಜೆಯ ನೌಕರರನ್ನು ನೇಮಕಾತಿ ಮಾಡಿದರೂ ಸಮಸ್ಯೆ ಹಾಗೆಯೇ ಉಳಿದುಕೊಳ್ಳುತ್ತದೆ. ನಗರದ ಅಭಿವೃದ್ಧಿ ಯೋಜನೆಗೆ ಹೊಸ ತಂತ್ರಜ್ಞಾನ ಅಥವಾ ಹೊಸ ದೇಶದ ಸಲಹೆ ಬೇಕೆಂದು ಇಲ್ಲ. ನಾವು ಇದನ್ನು ವೃತ್ತಿಪರವಾಗಿ ನಿರ್ವಹಣೆ ಮಾಡಬೇಕು. ಒಂದು ಹೊಸ ಬಡಾವಣೆ ಮಾಡಿದಾಗ ಅಲ್ಲಿ ರಸ್ತೆ ನೇರವಾಗಿ ಇರಬೇಕು ಎನ್ನುವುದನ್ನು ಯಾರು ಹೇಳಬೇಕು. ಇಷ್ಟು ಅಗಲದ ರಸ್ತೆ ಮತ್ತು ಆ ಕಡೆ ಈ ಕಡೆ ಚರಂಡಿಗಳು ಬೇಕು, drainage, sewage ಗಳಿಗೆ ಜಾಗ ಬೇಕು ಎಂಬ ಬಗ್ಗೆ ಏಕೆ ಯೋಜನೆ ಮಾಡುತ್ತಿಲ್ಲ. ನಮ್ಮ ಮ್ಯಾಪ್‌ನಲ್ಲಿ ಇದನ್ನು ಹಾಕಿಕೊಂಡು ಗ್ರಾಮ ಪಂಚಾಯತಿಯಿಂದ ಹಿಡಿದು ಎಲ್ಲಾ ನಗರದ ಇಲಾಖೆಗಳಿಗೆ ಕೊಟ್ಟಾಗ ಆ ರೀತಿ ಮಾಡದಿದ್ದಾಗ ಅವರು ಯಾವುದೇ ಕಟ್ಟಡ ಕಟ್ಟಲು ಅನುಮತಿ ಕೊಡುವುದಿಲ್ಲ. ಕೆರೆ, ರಾಜಕಾಲುವೆ ಮತ್ತು ರಸ್ತೆಗಳು ಒತ್ತುವರಿಯಾಗಲು ನಾವು ವೃತ್ತಿಪರವಾಗಿ ನಿರ್ವಹಣೆ ಮಾಡದಿರುವುದೇ ಕಾರಣ ಎಂದು ಹೇಳಬಯಸುತ್ತೇನೆ. ಡಿ ಗುಂಪಿನ ನೌಕರರನ್ನು ನೇಮಕಾತಿ ಮಾಡಬೇಕು, ಅವರು ಎಷ್ಟು ದಿವಸ ಮಾಡಲು ಸಾಧ್ಯ?

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸದಸ್ಯರ ಸಲಹೆಯನ್ನು ನಾನು ಒಪ್ಪುತ್ತೇನೆ. ಆದರೆ ಅದು ಯೋಜನೆಯಲ್ಲಿ ಬರುತ್ತದೆ. ಅಂದರೆ ಬೆಂಗಳೂರು

ನಗರವನ್ನು ಯಾವ ರೀತಿ ಯೋಜನಾ ಬದ್ಧತೆಯಿಂದ ಬೆಳವಣಿಗೆ ಮಾಡಬೇಕು, drainage ಹಾಗೂ ಕುಡಿಯುವ ನೀರಿನ ವ್ಯವಸ್ಥೆಗಳನ್ನು ಯಾವ ರೀತಿ ಮಾಡಬೇಕು ಎಂಬುದು ಬರುತ್ತದೆ. ಮಾನ್ಯ ಸದಸ್ಯರ ಮುಂದಾಲೋಚನೆಯನ್ನು ನಾನು ಒಪ್ಪುತ್ತೇನೆ. ಅದಕ್ಕೆ 20:20 ಯೋಜನೆ (Vision 2010) ಎಂದು ಮಾಡಿದ್ದಾರೆ. ಆದರೆ ಮುಂದೆ ಮಾಡುವ ಪ್ರಶ್ನೆ ಅಲ್ಲ, ಈಗ ಇದ್ದವರ ಕತೆ ಏನು? ಮೇಲಧಿಕಾರಿಯೊಬ್ಬನಿಗೆ ಎರಡು ಕೆಲಸ ಕೊಟ್ಟು ಮಾರ್ಗದರ್ಶನ ಮಾಡುವಂತೆ ಮಾಡಬಹುದು. ಆತನ ಬುದ್ದಿಮತ್ತೆಯಿಂದ ಕುಳಿತಲ್ಲಿಂದಲೇ ಆತ ಕೆಲಸ ತೆಗೆದುಕೊಳ್ಳಬಹುದು. ಆದರೆ ಕೆಳಹಂತದಲ್ಲಿ ಕೆಲಸ ಮಾಡುವವರು ಇಲ್ಲದಿದ್ದರೆ ಹೇಗೆ? ಈಗ ಮನೆಗಳಲ್ಲಿ ಕಸ ಹೊಡೆಯುವವರು ಇಲ್ಲದಿದ್ದರೆ ಹೇಗೆ? ಈ ಮೂಲಭೂತ ತಿಳುವಳಿಕೆ ಬೇಕಾಗಿದ್ದು, ಇದರ ಬಗ್ಗೆ ಮಾನ್ಯ ಸಚಿವರಿಗೆ ಮನವರಿಕೆಯಾಗಿದ್ದು, ಅದರ ಬಗ್ಗೆ ತೀವ್ರವಾಗಿ ಕ್ರಮ ಕೈಗೊಳ್ಳುತ್ತಾರೆ ಎಂದು ನಂಬಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿಪಕ್ಷ ನಾಯಕರು):-** ಸದನದ ಹಿರಿಯ ಸದಸ್ಯರಾದ ಶ್ರೀ ಮತ್ತಿಕಟ್ಟಿ ವೀರಣ್ಣನವರು ಮುಖ್ಯವಾದ ವಿಷಯವನ್ನು ಪ್ರಸ್ತಾಪಿಸಿದ್ದು, ಇಡೀ ಏಷ್ಯಾ ಖಂಡದಲ್ಲಿ 'fastest growing city is Bangalore' ಎಂಬ ಖ್ಯಾತಿ ಪಡೆದಿದ್ದು, ಐಟಿ ಮತ್ತು ಬಿಟಿಯಲ್ಲಿ ಬೆಂಗಳೂರಿನಿಂದ ಭಾರತಕ್ಕೆ ಹೆಸರು ಬಂದಿದೆ. ಬೆಂಗಳೂರು leader city ಆಗಿದೆ. ಏಕೆಂದರೆ metropolitan ಸಿಟಿಗಳಾದ ದೆಹಲಿ, ಬಾಂಬೆ, ಮದ್ರಾಸ್ ಕೋಲ್ಕಾತ್ತಾಗಳನ್ನು ನೆನಪು ಮಾಡಿಕೊಳ್ಳುವುದಿಲ್ಲ. ಭಾರತ ಎಂದರೆ ಬೆಂಗಳೂರು ಎನ್ನುವ ಖ್ಯಾತಿಗೆ ಪಾತ್ರರಾಗಿದ್ದೇವೆ. ಪ್ರಪಂಚದಲ್ಲಿಯೇ ಪ್ರಾಮುಖ್ಯತೆ ಪಡೆದ ಬೆಂಗಳೂರು ನಗರದಲ್ಲಿ ಕುಡಿಯುವ ರಸ್ತೆ, ನೀರು, ಒಳಚರಂಡಿ ವ್ಯವಸ್ಥೆಯು ಬಹಳ ಮಹತ್ವದ ವಿಷಯವಾಗಿದೆ. ನೀರಿನ ವ್ಯವಸ್ಥೆ ಎಷ್ಟು ಪ್ರಾಮುಖ್ಯತೆ ಪಡೆದಿದೆ ಎಂದರೆ ಬಹುತೇಕವಾಗಿ ಪುರಾತನ ಅಥವಾ ಪ್ರಪಂಚದ ಇತಿಹಾಸದಲ್ಲಿ ಹರಪ್ಪ-ಮೆಹಂಜೊದಾರೋ ನಾಗರೀಕತೆಯು ನೀರಿನ ಮೂಲ ಇರುವಲ್ಲಿ ಬೆಳೆದು ಬಂದಿದೆ. ಅಲ್ಲಿ ಪಟ್ಟಣಗಳು ಬೆಳೆದು ಬಂದಿವೆ. ಆದ್ದರಿಂದ ನೀರು ಅತ್ಯಂತ ಅವಶ್ಯವಾಗಿದೆ. It's precious one.

ಅದರ ಸಲುವಾಗಿ ಒಳಚರಂಡಿ ವ್ಯವಸ್ಥೆಯಲ್ಲಿ ಡಿ ದರ್ಜೆ ನೌಕರರು ಬಹಳ ಪ್ರಾಮುಖ್ಯತೆ ಪಡೆದಿದ್ದು, ಅವರು ಇಲ್ಲದಿದ್ದರೆ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರಬಹುದು. ಅಂದರೆ ಬೇಕಾದಷ್ಟು ಹಣ ಖರ್ಚು ಮಾಡಿದರೆ ನಿರ್ವಹಣೆ ಮಾಡಲು ಡಿ ದರ್ಜೆ ನೌಕರರ ಅವಶ್ಯಕತೆ ಇದೆ. ಎಲ್ಲ ಇದ್ದರೂ ನಿರ್ವಹಣೆ ಮಾಡದಿದ್ದರೆ ಪರಿಸ್ಥಿತಿ ಏನಾಗುತ್ತದೆ? ಪ್ರಪಂಚದ ನಾನಾ ರಾಷ್ಟ್ರಗಳಿಂದ ಬರುವ ಜನ ಈ ಪಟ್ಟಣದ ಮೇಲೆ ಕಣ್ಣಿಟ್ಟು, ಇಲ್ಲಿರುವ ವ್ಯವಸ್ಥೆ ಮೇಲೆ ವಿಶೇಷವಾದ ಕಾಳಜಿ ವಹಿಸಿ ಬರುತ್ತಾರೆ. ಬೆಂಗಳೂರು ಸ್ವಲ್ಪ ಆಕರ್ಷಣೀಯ ಮತ್ತು ultra modern city ಆಗಿದ್ದು, ಇಲ್ಲಿ ಎಲ್ಲಾ ಸೌಲಭ್ಯಗಳನ್ನು ಹೊಂದಿದೆ ಎನ್ನುವ ವಿಚಾರದಲ್ಲಿ ಒಳಚರಂಡಿಗೆ ಅವಶ್ಯಕವಾದ ಡಿ ಗುಂಪಿನ ನೌಕರರನ್ನು ನೇಮಕ ಮಾಡಬೇಕು. ' ಎಮ್ಮೆ ಖರೀದಿ ಮಾಡಿ, ಮೊಗಿ ಖರೀದಿ ಮಾಡಿದಿದ್ದರೆ ' ಎನ್ನುವಂತೆ ಹೆಚ್ಚು ಹಣ ಹೂಡಿಕೆ ಮಾಡಿ ಎಲ್ಲವನ್ನು ಮಾಡಿ ನಿರ್ವಹಣೆ ಸಲುವಾಗಿ ಡಿ ಗುಂಪಿನ ನೌಕರರನ್ನು ನೇಮಕ ಮಾಡಿಕೊಳ್ಳಬೇಕು. ಅವರ ಮಹತ್ವ ಬಹಳ ಇದ್ದು, ಸರ್ಕಾರ ಅದರ ಬಗ್ಗೆ ಗಮನಹರಿಸಬೇಕೆಂದು ನಾನೂ ಧ್ವನಿಗೂಡಿಸುತ್ತೇನೆ.

**ಶ್ರೀ ಮೋಹನ ಎ. ಲಿಂಬೀಕಾಯಿ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ನಾನೊಂದು ಮನವಿ ಮಾಡಿಕೊಳ್ಳಬಯಸುತ್ತೇನೆ. ಈಗಾಗಲೇ ಖಾಲಿ ಇರುವಂತಹ ಹುದ್ದೆಗಳನ್ನು ಬಹಳಷ್ಟು ದಿವಸಗಳಿಂದ ತುಂಬಿಲ್ಲ ಎನ್ನುವುದು ಎಷ್ಟು ಸತ್ಯವೋ ಗುತ್ತಿಗೆ ಆಧಾರದ ಮೇಲೆ ನೌಕರರನ್ನು ತೆಗೆದುಕೊಂಡು ಕೆಲಸ ಮಾಡಿಸುತ್ತಿರುವುದೂ ಅಷ್ಟೇ ಸತ್ಯ. ಒಟ್ಟಾರೆಯಾಗಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವುದರಿಂದ quality work ಆಗುವುದಿಲ್ಲ ಎನ್ನುವುದು ಒಂದಾದರೆ accountability ಯನ್ನು fix ಮಾಡುವುದಕ್ಕಾಗುವುದಿಲ್ಲ ಎನ್ನುವುದು ಇನ್ನೊಂದು. ಆ ಹಿನ್ನೆಲೆಯಲ್ಲಿ ಮಾನ್ಯ ಸಚಿವರು ತಕ್ಷಣ ಡಿ ದರ್ಜೆ ನೌಕರರನ್ನು ನೇಮಕ ಮಾಡಿಕೊಳ್ಳಬೇಕು. ನನ್ನ ವಿನಂತಿ ಏನೆಂದರೆ ದಿನಾಂಕ 1.7.1984ರ ನಂತರ ನೇಮಕವಾಗಿ ದಿನಗೂಲಿ ಆಧಾರದ ಮೇಲೆ

ರಾಜ್ಯದ ಬೇರೆ ಬೇರೆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವವರು ಸುಮಾರು 13700 ಜನ ಇದ್ದಾರೆ. ಅವರನ್ನು ಖಾಯಂ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆ. ಅವರೆಲ್ಲರನ್ನೂ ಖಾಯಂ ಮಾಡಿ ಎಲ್ಲೆಲ್ಲಿ ಇಂತಹ ಡಿ ದರ್ಜೆಯ ಹುದ್ದೆಗಳು ಖಾಲಿ ಇದೆಯೋ ಅಲ್ಲೇ ಅವರನ್ನು post ಮಾಡುವ ಕೆಲಸ ಮಾಡಿದರೆ ಸರ್ಕಾರಕ್ಕೆ ಭಾರ ಕಡಿಮೆಯಾಗುತ್ತದೆ. ಆ ದಿನಗೂಲಿ ನೌಕರರು ಈಗಾಗಲೇ ಖಾಯಂ ನೌಕರರು ಪಡೆಯುತ್ತಿರುವ ಸಂಬಳದ ಅರ್ಧಕ್ಕಿಂತ ಹೆಚ್ಚು ಸಂಬಳ ಪಡೆಯುತ್ತಿದ್ದಾರೆ. ದಿನಗೂಲಿ ನೌಕರರ ಪೈಕಿ ಸುಮಾರು ಶೇಕಡ 10–20ರಷ್ಟು ಸಿ ದರ್ಜೆಯ ನೌಕರರನ್ನು ಬಿಟ್ಟರೆ ಮಿಕ್ಕೆಲ್ಲರೂ ಡಿ ದರ್ಜೆಯ ನೌಕರರೇ ಆಗಿದ್ದಾರೆ. ಇವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿದ್ದಾರೆ, ಅಲ್ಪಸಂಖ್ಯಾತರಿದ್ದಾರೆ. ಅವರನ್ನು ಖಾಯಂ ಮಾಡಿ ಖಾಲಿ ಹುದ್ದೆಗಳಲ್ಲಿ ತುಂಬಿದರೆ ಸರ್ಕಾರಕ್ಕೆ ಆರ್ಥಿಕ ಹೊಣೆ ಕಡಿಮೆಯಾಗುತ್ತದೆ.

ಜಲಮಂಡಳಿ, ಕಾರ್ಪೋರೇಷನ್ ಅಥವಾ ಮುನಿಸಿಪಾಲಿಟಿ ಇರಬಹುದು, ಇಲ್ಲಿ ಕೆಲಸ ಮಾಡುವ ಡಿ ಮತ್ತು ಸಿ ದರ್ಜೆಯ ನೌಕರರು ಅಲ್ಲೇ ನೇಮಕವಾಗಿ ಅಲ್ಲೆ ನಿವೃತ್ತಿ ಹೊಂದುವುದರಿಂದ ಸರಿಯಾಗಿ ಕೆಲಸ ಆಗುವುದಿಲ್ಲ. They develop vested interest in the institution. ಅವರದೇ ಆದ organization ಮಾಡಿಕೊಳ್ಳುತ್ತಾರೆ. ಅದನ್ನು ಮಾಡಿಕೊಳ್ಳಬಾರದು ಎಂದಲ್ಲ. In the larger interest of the Corporation, Municipality or Board ಅವರು organization ಮಾಡಿಕೊಂಡರೆ ಅಡ್ಡಿಯಿಲ್ಲ. ಆದರೆ ಅವರದೇ ಅದ ಸಂಘಟನೆ ಮಾಡಿಕೊಂಡು ಪಟ್ಟಭದ್ರ ಹಿತಾಸಕ್ತಿಯನ್ನು ಬೆಳೆಸಿಕೊಳ್ಳುವುದರಿಂದ quality suffer ಆಗುತ್ತದೆ. ಎಷ್ಟೋ ಬೋರ್ಡ್, ಕಾರ್ಪೋರೇಷನ್ ಮತ್ತು ಮುನಿಸಿಪಾಲಿಟಿಗಳಲ್ಲೇನು ಡಿ ದರ್ಜೆಯ ನೌಕರರಿದ್ದಾರೋ ಅವರು ನೌಕರಿ ಮಾಡುವುದಕ್ಕೆ ಬರದೇ ಅದೇ ಜಾಗದಲ್ಲಿ ಬೇರೆಯವರನ್ನು ಕಳುಹಿಸಿ ಕೆಲಸ ಮಾಡಿಸಿ ಬೇರೆ ಪಗಾರ ಕೊಡುತ್ತಾರೆ. ಆ ರೀತಿ ಆಗಬಾರದು. ಆ ರೀತಿ ಅಗಬಾರದು ಎಂದರೆ, ಸಿ ಮತ್ತು ಡಿ ನೌಕರದಾರರನ್ನು ವಿಶೇಷವಾಗಿ ಎಲ್ಲಾ ನೌಕರುದಾರರನ್ನು ಅವರ ತತ್ಸಮಾನ

ಹುದ್ದೆಯೊಳಗೆ ಬೇರೆ ಇಲಾಖೆಗೆ ವರ್ಗ ಮಾಡಿದರೆ ಈ vested interest ಕಡಿಮೆಯಾಗುತ್ತದೆ, quality suffer ಆಗುವುದಿಲ್ಲ ಮತ್ತು ಕೆಲಸಗಳು ಸರಿಯಾಗಿ ನಡೆಯುತ್ತವೆ. ಆ ಹಿನ್ನೆಲೆಯಲ್ಲಿ ಖಾಲಿ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವಂತಹ ಸಂದರ್ಭದಲ್ಲಿ ಈ ದಿನಗೂಲಿ ನೌಕರರನ್ನು ಖಾಯಂ ಮಾಡಿ ಈ ಹುದ್ದೆಗಳನ್ನು ಕೊಡಬೇಕು, ಇವರನ್ನು ವರ್ಗಾವಣೆ ಮಾಡುವಂತಹ ವ್ಯವಸ್ಥೆ ಮಾಡಬೇಕು ಎಂದು ನಾನು ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಪ್ರೊ:ಪಿ.ವಿ.ಕೃಷ್ಣಭಟ್ (ನಾಮನಿರ್ದೇಶಿತರು):-** ಮಾನ್ಯ ಸಚಿವರು ಈ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಹೇಳಿರುವಂತಹ ಒಂದು ಸಂಗತಿ ಬಹಳ ಆಶ್ಚರ್ಯವನ್ನುಂಟು ಮಾಡುತ್ತಿದೆ. ಡಿ ದರ್ಜೆಯ 5 ವೃಂದಗಳಲ್ಲಿ 288 ಹುದ್ದೆಗಳನ್ನು ತುಂಬಲು ದಿನಾಂಕ 19.11.2007ರಂದು ಸರ್ಕಾರ ಅನುಮೋದನೆ ನೀಡಿರುತ್ತದೆ. ಈ ಹುದ್ದೆಗಳನ್ನು ದಿನಾಂಕ 22.2.2008 ರಂದು ಅಧಿಸೂಚಿಸಲಾಗಿರುತ್ತದೆ ಎಂದು ಹೇಳಿದ್ದಾರೆ. ಅಂದರೆ, ಹುದ್ದೆಗಳನ್ನು ಸೂಚನೆ ಮಾಡಿರುವಂಥದ್ದು 4 ವರ್ಷಗಳ ಹಿಂದೆ. 4 ವರ್ಷಗಳ ಅವಧಿಯಲ್ಲಿ ಈ ರೀತಿಯ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿಲ್ಲ ಎನ್ನುವುದು ಆಶ್ಚರ್ಯಕರವಾಗಿರುವಂಥದ್ದು. ಆವತ್ತಿನ ದಿವಸ 288 ಹುದ್ದೆಗಳ ಅವಶ್ಯಕತೆ ಇತ್ತು, ಆದರೆ ಇವತ್ತಿಗೂ ಕೂಡ ಅಷ್ಟೇ ಸಂಖ್ಯೆ ಸಾಕೇ? ಇವತ್ತಿನ ಅವಶ್ಯಕತೆ ಎಷ್ಟು, ಇವತ್ತಿಗೆ ಎಷ್ಟು ಹುದ್ದೆಗಳ ಅವಶ್ಯಕತೆ ಇದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಚಿಂತಿಸಬೇಕು. ಈ ಅಗತ್ಯತೆಯನ್ನು ಪೂರೈಸುವ ನಿಟ್ಟಿನಲ್ಲಿ ಸಚಿವಾಲಯ ಏನು ಮಾಡುತ್ತಿದೆ ಎನ್ನುವುದರ ಬಗ್ಗೆ ಸ್ವಲ್ಪ ಬಗ್ಗೆ ಸ್ಪಷ್ಟೀಕರಣ ಬೇಕು.

**ಶ್ರೀ ಡಿ.ಎಸ್.ವೀರಯ್ಯ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಏನು ಡಿ ದರ್ಜೆಯ ಹುದ್ದೆಗಳ ಬಗ್ಗೆ ಮಾತನಾಡಿದ್ದಾರೋ ಆ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. 2008ರಲ್ಲಿ ಅಧಿಸೂಚನೆ ಹೊರಡಿಸಲಾಗಿದೆ. 4 ವರ್ಷಗಳಾಗಿವೆ. 288 ಹುದ್ದೆಗಳನ್ನು ತುಂಬಲು 4 ವರ್ಷಗಳ ಅವಶ್ಯಕತೆ ಇರಲಿಲ್ಲ. ಮತ್ತೆ, ಅವರನ್ನು

ಆಯ್ಕೆ ಮಾಡುವ ನಿಟ್ಟಿನಲ್ಲಿ ಅವರಿಂದ ಅಗತ್ಯ ದಾಖಲೆಗಳನ್ನು ಪಡೆಯಬಯಸುವ ಅವಧಿ ಹೆಚ್ಚು ಅಂತರದ್ದು ಎಂದೆನಿಸುತ್ತದೆ. ಈ 4 ವರ್ಷಗಳ ನಂತರ ಕೂಡ ಇನ್ನೂ ಆ ಪಟ್ಟಿ ತಯಾರಾಗಿಲ್ಲ. ಮತ್ತೆ, ಇದನ್ನು ನಿಲ್ಲಿಸಬೇಕು ಎಂದು ಯಾವುದೇ ಕೋರ್ಟಿನ ಆದೇಶ ಕೂಡ ಇಲ್ಲ. ಕೆಲಸಕ್ಕೆ ಅರ್ಜಿ ಹಾಕಿಕೊಂಡಿದ್ದವರು ತಮಗೆ ಇನ್ನು ಮುಂದೆ ಕೆಲಸ ಸಿಗುವುದಿಲ್ಲ ಎಂದು ಯೋಚನೆ ಮಾಡುವ ಮಟ್ಟಕ್ಕೆ ಬಂದುಬಿಟ್ಟಿದ್ದಾರೆ, ಮರೆತುಬಿಟ್ಟಿದ್ದಾರೆ. ಆದಷ್ಟು ಬೇಗ ಒಂದು ಕಾಲಮಿತಿಯಲ್ಲಿ ಈ ಹುದ್ದೆಗಳನ್ನು ತುಂಬಬೇಕು. ಡಿ ದರ್ಜೆಯ ನೌಕರರ ಅಗತ್ಯತೆ ಬಹಳ ಪ್ರಮುಖವಾಗಿರುವಂಥದ್ದು. ನೀರು ಮತ್ತು ಒಳಚರಂಡಿ ಇವೆರಡೂ ಕೂಡ ದಿನನಿತ್ಯ ಮನುಷ್ಯನಿಗೆ ಅಗತ್ಯವಿರುವಂಥದ್ದು. ನೀರನ್ನೂ ಕುಡಿಯಬೇಕು, ವಿಸರ್ಜನೆಯನ್ನೂ ಮಾಡಬೇಕು. ಅಂಥದ್ದಕ್ಕೆ ಪ್ರಾಮುಖ್ಯತೆ ಕೊಡುತ್ತಿಲ್ಲ. ಡಿ ದರ್ಜೆ ನೌಕರರಿಗೆ ಕೇವಲ ಕೆಲಸ ಕೊಡುವುದಲ್ಲ, ಅವರಿಗೆ ಕೆಲವು ಸೌಲಭ್ಯಗಳನ್ನೂ ಕೊಡಬೇಕಾಗುತ್ತದೆ. ಅವರು ಸುಮಾರು 30 ವರ್ಷಗಳಿಗೆ ಸತ್ತು ಹೋಗುತ್ತಾರೆ. ಇವತ್ತಿಗೂ ಕೂಡ ಚರಂಡಿಯಲ್ಲಿ ಕೈ ಹಾಕಿ ತೆಗೆಯುವ ಪದ್ಧತಿ ಇದೆ. ಈ ಕೆಲಸಕ್ಕೆ ಬೇಕಾದಂತಹ ಉಪಕರಣಗಳೂ ಕೂಡ ಅವರಲ್ಲಿ ಇಲ್ಲ. ಅಮೆರಿಕಾ ಅಥವಾ ಆಸ್ಟ್ರೇಲಿಯಾ ದೇಶಗಳಲ್ಲಿ ಇಂಥ ಕೆಲಸ ಮಾಡುವವರು ಮುಖಕ್ಕೆ scarf ಹಾಕಿಕೊಂಡಿರುತ್ತಾರೆ. ಅಲ್ಲಿ Scavenger ಕಾರ್‌ನಲ್ಲಿ ಬರುತ್ತಾನೆ. ಒಬ್ಬ specialist doctor operation ಮಾಡುವುದಕ್ಕೆ ಹೇಗೆ ಹೋಗುತ್ತಾನೋ ಅದೇರೀತಿ ಚರಂಡಿಯನ್ನು clean ಮಾಡಿಕೊಂಡು, ಅವನ standard maintain ಮಾಡಿಕೊಂಡು ಹೋಗುತ್ತಾನೆ. ಇಲ್ಲಿ ಹಾಗಲ್ಲ. ಈತ ಆ ಕೆಲಸ ಮಾಡುವುದರಿಂದ ಕುಡಿಯುತ್ತಾನೆ. ಪ್ರತಿನಿತ್ಯ ಕುಡಿಯುವುದರಿಂದ ಇಂಥವರು 30 ವರ್ಷಕ್ಕೆ ಸತ್ತುಹೋಗುತ್ತಾರೆ. ಅವನ ಹೆಂಡತಿ ವಿಧವೆಯಾಗುತ್ತಾಳೆ. ಮಕ್ಕಳನ್ನೂ ಇದೇ ಕೆಲಸಕ್ಕೆ ಕಳುಹಿಸುತ್ತಾರೆ. ನಾನು ಸಲಹೆ ಕೊಡುವುದು ಇಷ್ಟೆ. ಚರಂಡಿಯನ್ನು clean ಮಾಡುವುದಕ್ಕೆ ಬೇಕಾದ ಸಲಕರಣೆಗಳನ್ನು ಕೊಡಬೇಕು, ಅವರ ಕೆಲಸದ ಭದ್ರತೆಗೆ, ಅವರ ಕುಟುಂಬದ ವೈದ್ಯಕೀಯಕ್ಕೆ ಸೌಲಭ್ಯ ಕಲ್ಪಿಸಿಕೊಡಬೇಕು. ಯಾರು cleaning work ಮಾಡುತ್ತಿದ್ದಾರೋ ಅವರಲ್ಲಿ

ಬಹಳಷ್ಟು ಜನ ಏಡ್ಸ್ ಬಂದು ಸಾಯುತ್ತಿದ್ದಾರೆ, ಅನೇಕ ರೋಗಗಳಿಂದ ನರಳುತ್ತಿದ್ದಾರೆ. ಅವರಿಗೆ ವೈದ್ಯಕೀಯ ಚಿಕಿತ್ಸೆ ಪಡೆಯಲು ಸರ್ಕಾರ ಯಾವುದೇ ಸೌಲಭ್ಯ ಕೊಡುತ್ತಿಲ್ಲ. ಇವರನ್ನು ಕೇವಲ ನೇಮಕ ಮಾಡಿಕೊಳ್ಳುವುದಲ್ಲ, ಅವರು cleaning ಮಾಡುವುದಕ್ಕೆ ಬೇಕಾದ ಪರಿಕರಗಳನ್ನು ನೀಡುವ ದಿಸೆಯಲ್ಲಿ ಹೆಚ್ಚಿನ ಒತ್ತನ್ನು ಕೊಡಬೇಕು, ಕೆಲಸದ ಭದ್ರತೆ ಕೊಡಬೇಕು. ಯಾವುದೇ ಕಾರಣಕ್ಕೂ ಇವರನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಬಾರದು. ಈಗ ಗುತ್ತಿಗೆ ಎನ್ನುವ ಪದ ಅರ್ಥವನ್ನೇ ಕಳೆದುಕೊಂಡಿದೆ. ಯಾವುದೋ ಒಂದು ಕೆಲಸವನ್ನು ಗುತ್ತಿಗೆಗೆ ತೆಗೆದುಕೊಳ್ಳುವುದನ್ನು ನೋಡಿದ್ದೇನೆ, ಆದರೆ ಜನರನ್ನೇ ಗುತ್ತಿಗೆಗೆ ತೆಗೆದುಕೊಳ್ಳುವುದನ್ನು ನಾನು ನೋಡಿಲ್ಲ. 20 ವರ್ಷಗಳವರೆಗೆ ಕೆಲಸ ಮಾಡಿಕೊಂಡು ಅವನಿಗೆ ಸೇವಾ ಭದ್ರತೆ ಇಲ್ಲದೇ ಇದ್ದರೆ, ಅವನಿಗೆ ಪಿಂಚಣಿ ಸೌಲಭ್ಯ ಇಲ್ಲದೇ ಇದ್ದರೆ ಡಿ ದರ್ಜೆ ನೌಕರನ ಕುಟುಂಬ ಏನಾಗಬೇಕು? ಅವರ ಮಕ್ಕಳ ಭವಿಷ್ಯ ಏನಾಗಬೇಕು? ಆ ನಿಟ್ಟಿನಲ್ಲಿ ಡಿ ದರ್ಜೆ ನೌಕರರಿಗೆ ಹೆಚ್ಚಿನ ಸೌಲಭ್ಯ ಕೊಡಬೇಕು. ಅವರು ಒಂದು ದಿವಸ clean ಮಾಡಲಿಲ್ಲ ಎಂದರೆ ನಾವ್ಯಾರೂ ತಿರುಗಾಡುವುದಕ್ಕೆ ಆಗುವುದಿಲ್ಲ. ಇಡೀ ನಗರಕ್ಕೆ ಅಶುಚಿತ್ವ ಕಾಡುತ್ತದೆ. ಇಂತಹ ವೃತ್ತಿಯನ್ನು ಅವಲಂಬಿಸಿರುವ ಕುಟುಂಬಗಳಿಗೆ, ಆ ನೌಕರರಿಗೆ ಸೇವಾ ಭದ್ರತೆ ಕೊಡಬೇಕು, cleaning ಮಾಡಲು ಸಹಾಯವಾಗುವಂತಹ cleaning aids ನ್ನು ಕೊಡಬೇಕು ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಕೊಡುವ ಅವಶ್ಯಕತೆ ಕೂಡ ಇದೆ. ಆದಷ್ಟು ಬೇಗ ಒಂದು ಕಾಲಮಿತಿ ಒಳಗೆ ಈ 288 ಹುದ್ದೆಗಳನ್ನು ತುಂಬಬೇಕು. B.W.S.S.B. ಯಲ್ಲಿ ಕೇವಲ ಡಿ ದರ್ಜೆ ನೌಕರರಲ್ಲ, ಸಿ ಗ್ರೂಪ್‌ನಲ್ಲೂ ಬ್ಯಾಕ್‌ಲಾಗ್ ಇದೆ. ಕಾಲಮಿತಿ ಒಳಗೆ ಈ ಹುದ್ದೆಗಳನ್ನು ಭರ್ತಿ ಮಾಡಬೇಕು ಮತ್ತು ಆ ವರ್ಗಕ್ಕೆ ಕೊಡಬೇಕಾದ ಎಲ್ಲಾ ಸೌಲಭ್ಯಗಳನ್ನು ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ವಿಜಯ ಸಂಕೇಶ್ವರ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಗಳೆ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಒಳ್ಳೆಯ ಪ್ರಶ್ನೆ ಎತ್ತಿದ್ದಾರೆ.

ಅನೇಕ ಹುದ್ದೆಗಳು ಕರ್ನಾಟಕ ಸರ್ಕಾರದಲ್ಲಿ ಖಾಲಿ ಇವೆ. ಇದರಿಂದ ಜನರಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಇದೇರೀತಿ ಪೋಲಿಸ್ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇರುವುದರಿಂದ crime ಗಳು ಹೆಚ್ಚಾಗಲಿಕ್ಕೆ ಕಾರಣವಾಗಿದೆ. ಬೆಂಗಳೂರು ಅನೇಕ ಹಳ್ಳಿಗಳನ್ನು ಸೇರಿಸಿ ಮಾಡಿರುವಂತಹ ಒಂದು ದೊಡ್ಡ ಪಟ್ಟಣವಾಗಿದೆ. ಕಳೆದ 10–15 ವರ್ಷಗಳಲ್ಲಿ ಏನೆನು ಆಗಿವೆ ಅದರ ಬಗ್ಗೆ ಮಾತ್ರ ಹೇಳುತ್ತೇನೆ. ಅದರ ಹಿಂದಿನ ವರ್ಷಗಳ ಲೆಕ್ಕ ಹೇಳುವುದಿಲ್ಲ. ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ, ಈ ನಗರದ ಮೇಲೆ ಬಹಳ ಒತ್ತಡ ಇದೆ ಇದನ್ನು ಸುಧಾರಿಸಬೇಕೇಂದು ಪ್ರಯತ್ನಪಟ್ಟರು. ಕೇಂದ್ರದಲ್ಲಿ ಎನ್.ಡಿ.ಎ. ಸರ್ಕಾರ ಇದ್ದಾಗ ಮಾನ್ಯ ಅನಂತಕುಮಾರರವರು ಸಾಕಷ್ಟು ಹಣ ಬಿಡುಗಡೆ ಮಾಡಿದರು. ಮಾನ್ಯ ಎಸ್.ಎಂ.ಕೃಷ್ಣರವರು ಹಣ ಬಿದುಗಡೆ ಮಾಡಿದರು ಮತ್ತೆ ಮುಂದೆ ಬಂದ ಅನೇಕ ಮಂತ್ರಿಗಳು, ಮುಖ್ಯಮಂತ್ರಿಗಳು ಹಣ ಬಿಡುಗಡೆ ಮಾಡಿ, ಲಕ್ಷಾಂತರ, ಕೋಟ್ಯಾಂತರ ರೂಪಾಯಿ ದೊರಕಿದರೂ ಕೂಡ ಸಮಸ್ಯಗಳು ಬೆಳೆಯುತ್ತಿವೆ. ಆದ್ದರಿಂದ ಸರ್ಕಾರ ಒಂದು ಹೊಸ ಬೆಂಗಳೂರು ಸಿಟಿ ನಿರ್ಮಾಣ ಮಾಡುವಂತಹ ತೀರ್ಮಾನ ತೆಗೆದುಕೊಳ್ಳಬೇಕು. ಆ ಹೊಸ ಸಿಟಿ ಹೇಗಿರಬೇಕೆಂದರೆ, ಅದು ಶಾಂಗೈ ಮಾದರಿಯಲ್ಲಿ ಇರಬೇಕು. ನಾನು ಅನೇಕ ಬಾರಿ ಶಾಂಗೈಗೂ ಕೂಡ ಹೋಗಿದ್ದೇನೆ. ನನಗೆ ಅದು ಇನ್ನು ಇಷ್ಟ ಆಗಲಿಲ್ಲ. ಶಾಂಗೈ ಒಳ್ಳೆ ಸಿಟಿ ಇದ್ದರೂ ಕೂಡ ಅವರು signal free city ಮಾಡಿಲ್ಲ. Signal free ಇಲ್ಲ. Signal free city ಮಾಡಲಿಕ್ಕೆ ಸಾಧ್ಯ ಇದೆ. ಒಂದು ವಿಚಾರ ಹೇಳಬಯಸುತ್ತೇನೆ. ಇದು ಬಹಳ ಅದ್ಭುತ ಹಾಗೂ ಆಶ್ಚರ್ಯ ಎಂದು ತಮಗೆಲ್ಲ ಅನಿಸಬಹುದು, 20–30 ಕಿ.ಮೀ ಉದ್ದ, 20–30 ಕಿ.ಮೀ. ಅಗಲ ಜಮೀನನ್ನು ವಶಪಡಿಸಿಕೊಂಡು ಈ ಹೊಸ ದೇವನಹಳ್ಳಿ ಏರ್‌ಪೋರ್ಟ್ ಹತ್ತಿರ ಹೊಸ ಬೆಂಗಳೂರು ನಗರ ಎಂದು ಮಾಡಿದರೆ, ಹೊಸ ಬೆಂಗಳೂರಿನವರಿಗೆ ಮತ್ತು ಹಳೆ–ಬೆಂಗಳೂರಿನವರಿಗೆ ಏರ್‌ಪೋರ್ಟ್‌ಗೆ ಹೋಗಲು ತೊಂದರೆಯಾಗುವುದಿಲ್ಲ. ನಾನು ಬಾಂಬೆಗೆ ಕಳೆದ 50 ವರ್ಷಗಳಿಂದ ಹೋಗುತ್ತಿದ್ದೇನೆ. ಅಲ್ಲಿ ಫೋರ್ಟ್ ಎನ್ನುವ ಪ್ರದೇಶ ಇದೆ. 250

ವರ್ಷಗಳ ಹಿಂದೆ ಬ್ರಿಟಿಷರು design ಮಾಡಿದ್ದರು. ಆಗ ಕಾರೇ ಹುಟ್ಟಿರಲಿಲ್ಲ. ಚಕ್ಕಡಿಬಂಡಿ ಮತ್ತು ಜಟಕಾಬಂಡಿ ಮೇಲೆ ಜನರು ಬಾಂಬೆಯಲ್ಲಿ ಅಡ್ಡಾಡುತ್ತಿದ್ದರು. ಅಲ್ಲಿಯ ರಸ್ತೆಗಳು ಎಷ್ಟು ಅಗಲವಾಗಿವೆ ಎಂದರೆ, ಬಾಂಬೆಯಲ್ಲಿ ಇವತ್ತಿನ ದಿವಸ 2 ಕೋಟಿ ಜನಸಂಖ್ಯೆ ಇದ್ದರೂ ಕೂಡ ಎಲ್ಲವನ್ನೂ ಸರಿದೂಗಿಸಿಕೊಳ್ಳುವಂತಹ ಸಾಮರ್ಥ್ಯ ಹೊಂದಿವೆ. ನಾನು ಕಳೆದ 50 ವರ್ಷಗಳಿಂದ ಬಾಂಬೆಯಲ್ಲಿ ನೋಡುತ್ತಿದ್ದೆನೆ. ಒಳಚರಂಡಿ, electricity, telephone cable, ನೀರಿನ ಸರಬರಾಜು, ಈ ಎಲ್ಲ ವ್ಯವಸ್ಥೆಗಳನ್ನು ರಸ್ತೆಯ ಕೆಳಗಡೆ ಮಾಡಿ ಮೇಲೆ ಕಾಂಕ್ರೀಟ್ ರಸ್ತೆ ಮಾಡುತ್ತಾರೆ. ಒಂದು ಬಾರಿ ಕಾಂಕ್ರೀಟ್ ರಸ್ತೆ ಮಾಡಿದರೆ, ಕನಿಷ್ಠ 80 ವರ್ಷ ಅದರ life ಇರುತ್ತದೆ. 80 ವರ್ಷದವರೆಗೂ ಮತ್ತೆ ಯಾರಾದರೂ 'ಡಿ' ದರ್ಜೆ ನೌಕರರು ಆಗಲಿ ಅಥವಾ ಯಾರೇ ಕೆಲಸಗಾರರು ಆಗಲಿ ಅದರ ಒಳಗೆ ಹೋಗಿ clean ಮಾಡುವಂತಹ ಅವಶ್ಯಕತೆ ಬೀಳುವುದಿಲ್ಲ. ಆ ವ್ಯವಸ್ತೆಗಳನ್ನು ಅಷ್ಟು ಚೆನ್ನಾಗಿ ಮಾಡುತ್ತಾರೆ. ನಾವು ವಿದೇಶದಲ್ಲಿ ಅಲ್ಲ, ಇಲ್ಲೇ ನಮ್ಮ ಬಾಂಬೆಯಲ್ಲಿ ಕಲೆದ ನೂರಾರು ವರ್ಷಗಳಿಂದ ನಡೆಯುತ್ತಾ ಬಂದಿದೆ. ಮಾನ್ಯ ಮತ್ತಿಕಟ್ಟಿಯವರು, ಹೊರಟ್ಟಿಯವರು ನೋಡಿದ್ದಾರೆ. 1941 ರಲ್ಲಿ ಮೂರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಗದುಗಿನ ಮುನಸಿಪಾಲಿಟಿಯವರು ಇಡೀ ಗದಗ ತುಂಬಾ ಸಿಮೆಂಟ್ ರೋಡ್ ಮಾಡಿದ್ದಾರೆ. ಯಾವುದಾದರೂ ಕೆಲಸಕ್ಕೆ ಆ ರೋಡ್ ನಲ್ಲಿ ತೆಗ್ಗು ತೆಗೆಯಬೇಕೆಂದರೆ ಇವತ್ತು ತೆಗ್ಗು ತೆಗೆಯಲಿಕ್ಕೆ ಆಗುವುದಿಲ್ಲ. ಗದಗ ರೋಡಿನ ಬಗ್ಗೆ ಹೇಳಬೇಕೆಂದರೆ, ಇಡೀ ಕರ್ನಾಟಕದಲ್ಲಿಯೇ ನಂಬರ್ ಒನ್. ಅದರ ಬಳಿಕ ಮೈಸೂರು ಬರುತ್ತದೆ. ಅದರಿಂದ ಈ ವಿಚಾರ ಮಾಡಬೇಕು. ಆದರೆ, ಈ ಬರಗಾಲದಲ್ಲಿ, ಇಂತಹ ಸರ್ಕಾರದಲ್ಲಿ ಕಷ್ಟವಿರುವಾಗ ದುಡ್ಡಿನ ಅಗತ್ಯ ಎಲ್ಲಿದೆ ಎಂದು ಕೆಲವರಿಗೆ ಅನಿಸಬಹುದು. ಒಂದು, ಪರಿಣಿತರ ಅಭಿಪ್ರಾಯವನ್ನು ತೆಗೆದುಕೊಂಡು 20–30 ಕಿ.ಮೀ ಉದ್ದ, 20–30 ಕಿಮೀ ಅಗಲ ಇರುವ ಜಮಿನನ್ನು ವಶಪಡಿಸಿಕೊಂಡು ಯಾವ ರೀತಿ ಸಿಟಿ ಇರಬೇಕೆಂದು ಒಂದು ಮ್ಯಾಪ್ ಮಾಡಿದರೆ, ಅನೇಕ national and international developers ಬಂದು ಆ ಭಾಗಗಳಲ್ಲಿ ಒಳ್ಳೆಯ ಕಟ್ಟಡಗಳನ್ನು

ಕಟ್ಟುತ್ತಾರೆ ಮತ್ತು footpath ಮೇಲೆ ಓಡಾಡುವಾಗ ವಿಶೇಷವಾಗಿ shelter ಬೇಕು. ಅದು ಕೊಡಲಿಕ್ಕೆ ಆಗುವುದಿಲ್ಲಾ. ಇವತ್ತು ನಾವು ಗೋವಾದಲ್ಲಿ ನೋಡಿದರೆ, 100 ವರ್ಷಗಳ ಹಿಂದೆ ಪಣಜಿಯಲ್ಲಿ, ಕಾರ್ಪೋರೇಷನ್ ನವರು footpath ಮೇಲೆ shelter ಕಟ್ಟಿದ್ದಾರೆ. ಅಂದರೆ ಓಡಾಡುವ ಜನಕ್ಕೆ shelter ಇರಬೇಕೆಂದು ಆ ರೀತಿ ಮಾಡಿದ್ದಾರೆ. ಅದೇ ರೀತಿ ಬಾಂಬೆ ಫೋರ್ಟನಲ್ಲಿ ಎಷ್ಟು ಬಿಲ್ಡಿಂಗ್ ಇವೆಯೋ, 7–8 ಅಂತಸ್ತು ಬಿಲ್ಡಿಂಗ್ ಇದ್ದರೂ ಕೂಡ, footpath ಮೇಲೆ 2ನೇ ಅಂತಸ್ತಿನವರೆಗೆ slab ತೆಗೆದುಕೊಂಡು shelter ಮಾಡುತ್ತಾರೆ. Theas all are all small things. ಪರಿಣಿತರ ಜೊತೆ ಚಿಂತನೆ ಮಾಡಿದರೆ, without much difficulty, without much financial problem,

you can have a wonderful and finest city in the world just within a span of 4-5 years. It is possible. ಅನೇಕ ಬಿಲ್ಡರ್ಸ್ ಜೊತೆ ಸಮಾಲೋಚನೆ ಮಾಡಿ ಆ ನಿಟ್ಟಿನಲ್ಲಿ ನಾವು ಬೆಂಗಳೂರನ್ನು ಇನ್ನೊಂದು ಹೊಸ ಬೆಂಗಳೂರನ್ನಾಗಿ ಬೆಳೆಸಬೇಕೆಂದು ನನ್ನ ಅನೇಕ ದಿವಸದ ಕನಸು. ನಾನು ಕಂಡತಹ ಅನೇಕ ಕನಸುಗಳು ನನಸಾಗಿವೆ. ಈ ಕನಸನ್ನು ಕೂಡ ಈ ಸರ್ಕಾರ ನನಸು ಮಾಡುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಅಲ್ಲಮಪ್ರಭು ಪಾಟೀಲ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ವೀರಣ್ಣ ಮತ್ತಿಕಟ್ಟಿಯವರು ಬಹಳ ವಿಶೇಷವಾದಂತಹ ವಿಷಯವನ್ನು ಎತ್ತಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಮೋಹನ್ ಲಿಂಬೀಕಾಯಿಯವರೂ ಕೂಡ ಸರ್ಕಾರಕ್ಕೆ ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಗುಲ್ಬರ್ಗಾ ಮಹಾನಗರಪಾಲಿಕೆಯಲ್ಲಿ 2872 ಹುದ್ದೆಗಳು ಮಂಜೂರಾಗಿದ್ದವು. 2395 ಹುದ್ದೆಗಳು ಖಾಲಿ ಇವೆ. ಸುಮಾರು 80% ಹುದ್ದೆಗಳು ಖಾಲಿ ಇವೆ. ಅಲ್ಲಿ ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಕ್ಯಾಬಿನೆಟ್ ಮೀಟಿಂಗ್ ಪ್ರಥಮವಾಗಿ ತೆಗೆದುಕೊಳ್ಳ ತಕ್ಕಂಥ ಸಂದರ್ಭದಲ್ಲಿ ಎಸ್.ಕೆ. ಕಾಂತರವರ ನೇತ್ರತ್ವದಲ್ಲಿ ದಿನಗೂಲಿ ನೌಕರರು ಸತ್ಯಾಗ್ರಹ ಮಾಡಿದರು. ಲಾಠಿ ಚಾರ್ಜ್ ಸಹ ಆಯಿತು. ಬಸ್

ನಿಲ್ಲಿಸಿದರು. ಸನ್ಮಾನ್ಯ ಮಂತ್ರಿಗಳೂ ಕೂಡ ಆ ಸಮಯದಲ್ಲಿ ಇದ್ದರು. ಎಲ್ಲರ ಮೇಲೂ ಕೇಸ್ ಆಯಿತು. ನಾನು ಸಹಾ ಕೇಸ್‌ನಲ್ಲಿದ್ದೇನೆ. ಮಾನ್ಯ ಮೋಹನ್ ಲಿಂಬೀಕಾಯಿಯವರು ಹೇಳಿರುವುದು ನಮೋಶಿಯವರಿಗೆ ಸಂಪೂರ್ಣವಾಗಿ ಗೊತ್ತಿದೆ. ಮಾನ್ಯ ಮೋಹನ್ ಲಿಂಬೀಕಾಯಿಯವರು ಹೇಳಿರುವುದನ್ನು ಬಹಳ ವಿಶೇಷವಾಗಿ ತಾವು ಅದನ್ನು ಗಮನದಲ್ಲಿಟ್ಟು ಕೊಂಡು 'ಡಿ' ದರ್ಜೆ ನೌಕರರ ಹುದ್ದೆಗಳ ಭರ್ತಿ ಮಾಡಬೇಕು. ಇತ್ತೀಚೆಗೆ ಅಲ್ಲಿ ಕರ್ನಾಟಕ ಪ್ರಾದೇಶಿಕ ಲೋಕ್ ಅದಾಲತ್ ನಡೇಯಿತು. ಆ ಪ್ರಾದೇಶಿಕ ಲೋಕ್ ಅದಾಲತ್ ಮುಂದೆ ಮಹಾನಗರಪಾಲಿಕೆಯಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿ ಅನುಮೋದನೆ ನೀಡಲು ರಾಜ್ಯ ಸರ್ಕಾರಕ್ಕೆ ಪ್ರಾದೇಶಿಕ ಲೋಕ್ ಅದಾಲತ್ ಮೂರು ತಿಂಗಳ ಗಡುವು ನೀಡಿದೆ. ಈ ಮೂರು ತಿಂಗಳೂ ಕೂಡಾ ಮುಗಿಯುತ್ತಾ ಬಂದಿದೆ. ಇಂತಹ strikes ನಡೆದಾಗ, ಚರ್ಚೆ ನಡೆದಾಗ, ಆ ರೀತಿ ಕೆಲಸ ಮಾಡತಕ್ಕಂಥ ದಿನಗೂಲಿ ನೌಕರರನ್ನು ಸಕ್ರಮಗೊಳಿಸುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ನಿಯಮಗಳನ್ನು ಸಡಿಲಿಸಿ ಹುದ್ದೆಗಳನ್ನು ಭರ್ತಿಮಾಡುವುದಕ್ಕೆ ಲೋಕ್ ಅದಾಲತ್ ಗಡುವು ಕೊಟ್ಟಿದೆ. ಲೋಕ್ ಅದಾಲತ್ ಆದೇಶದ ಅನ್ವಯ ನಿಯಮಗಳನ್ನು ಸಡಿಲಗೊಳಿಸಿ ಅವರನ್ನು ನೇಮಕ ಮಾಡಬೇಕು. 2000 ಕ್ಕೆ ಮೇಲ್ಪಟ್ಟು ಹುದ್ದೆಗಳು ಗುಲ್ಬರ್ಗಾ ಮಹಾನಗರ ಪಾಲಿಕೆಯ ಒಳಚರಂಡಿ ವಿಭಾಗದಲ್ಲಿ ಖಾಲಿ ಬಿದ್ದಿವೆ, ಎಲ್ಲಾ ಖಾಲಿ ಇವೆ. ಈ ರೀತಿ ಕೆಲಸಗಳು ಏಕೆ ಆಗುತ್ತಿಲ್ಲವೆಂದು ನಾನು ನಿನ್ನೆ ಕೂಡಾ ಸಚಿವರ ಗಮನಕ್ಕೆ ತಂದಿದ್ದೇನೆ. ಈ ಖಾಲಿ ಹುದ್ದೆಗಳಿಂದಾಗಿ ಅಲ್ಲಿ ಕೆಲಸಗಳು ಆಗುತ್ತಿಲ್ಲವೆಂದು ಸಾಕಷ್ಟು ಪತ್ರಿಕೆಗಳು ಕೂಡಾ ಸರ್ಕಾರದ ಗಮನಕ್ಕೆ ತಂದಿವೆ. ಸನ್ಮಾನ್ಯ ಮಂತ್ರಿಗಳು ಇದನ್ನು ಗಮನದಲ್ಲಿಟ್ಟುಕೊಂಡು ಆ ಹುದ್ದೆಗಳನ್ನು ಭರ್ತಿ ಮಾಡಿಸಬೇಕೆಂದು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಹುದ್ದೆಗಳು ಖಾಲಿ ಆದಾಗಲೆಲ್ಲಾ ಅವುಗಳನ್ನು ಭರ್ತಿ ಮಾಡುವ ವ್ಯವಸ್ಥೆ ಜಾರಿಗೆ ತಂದರೆ ಈ ಸಮಸ್ಯೆ ಉಂಟಾಗುವುದಿಲ್ಲಾ. ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಪಶ್ಚಿಮ ಬಂಗಾಳದಲ್ಲಿ ಒಂದು ಪದ್ಧತಿ ಇದೆ.

ಬರುವ ಮುಂದಿನ ಎರಡು ವರ್ಷಗಳಲ್ಲಿ ಯಾರ್ಯಾರು ನಿವೃತ್ತಿ ಹೊಂದುತ್ತಾರೆಯೋ, ಅವರ ಒಂದು ಪಟ್ಟಿ ತಯಾರಿಸುತ್ತಾರೆ. ರೂಲ್ಸ್ ಪ್ರಕಾರ ಲಿಸ್ಟ್ ತಯಾರು ಮಾಡಿ notification ಮಾಡುತ್ತಾರೆ. ಶಿಕ್ಷಕರು ಹುದ್ದೆಗಳು ಖಾಲಿ ಆದಂತೆಲ್ಲಾ ಆ ಹುದ್ದೆಗಳನ್ನು ಭರ್ತಿ ಮಾಡುತ್ತಾ ಹೋಗುತ್ತಾರೆ. ಆ ಪದ್ಧತಿ ಇಲ್ಲಿಯೂ ಜಾರಿಗೆ ತಂದರೆ ಈ gap ಉಳಿಯುವುದಿಲ್ಲ. Temporary ಯಾಗಿ ಭರ್ತಿ ಮಾಡುವುದು, ನಂತರ ಅವರು permanent ಮಾಡಿ ಎಂದು ಕೇಳುವುದು, ಗಲಾಟೆ ಆಗುವುದು ಇವುಗಳೆಲ್ಲಾ ತಪ್ಪುತ್ತವೆ. ಅದಕ್ಕೆ ಸರ್ಕಾರ ಆ ರೀತಿಯ ಚಿಂತನೆ ಏನಾದರು ಮಾಡುತ್ತಿದೆಯೇ ಎನ್ನುವುದು ಒಂದು. ಎರಡನೇಯದಾಗಿ, ಇದಕ್ಕೆ ಸಂಬಂಧಿಸಿದ ಮತ್ತೊಂದು ವಿಚಾರ ಹೇಳುತ್ತೇನೆ. ಇವರು temporary ಆಗಿ ನೇಮಕ ಆಗುತ್ತಾರೆ, ನಂತರ permanent ಆಗುತ್ತಾರೆ. permanent ಆದನಂತರ ಅವರು ಕೆಲಸವನ್ನೇ ಮಾಡುವುದಿಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ ಇವರನ್ನು ಇತರ ಮಹಾನಗರಪಾಲಿಕೆಗಳಿಗೆ ವರ್ಗಾವಣೆ ಮಾಡುವ ಪದ್ಧತಿ ತರಬೇಕು. ಈಗ ಏನಾಗುತ್ತಿದೆ ಅಂದರೆ, ನಾಲ್ಕನೇ ದರ್ಜೆಯ ನೌಕರರು temporary ಯಾಗಿ ಕೆಲಸಕ್ಕೆ ಸೇರುತ್ತಾರೆ, permanent ಆದ ಕೂಡಲೇ ಕುಡಿಯುವುದಕ್ಕೆ ಶುರು ಮಾಡುತ್ತಾರೆ. ಕುಡಿದು ಸಾಯುತ್ತಾರೆ. ನಂತರ ಅವನ ಮಗನು ಬಂದು ಸಹಾನುಭೂತಿ ಆಧಾರದ ಮೇಲೆ ನನಗೆ ಕೆಲಸ ಕೊಡಿ ಎಂದು ಕೇಳುತ್ತಾನೆ. ಮಹಾನಗರ ಪಾಲಿಕೆ ಅವನಿಗೆ ನೇಮಕ ಮಾಡುತ್ತದೆ. ನೇಮಕ ಮಾಡಿದ ನಂತರ ಅವನು ಕುಡಿದು ಸಾಯುತ್ತಾನೆ. ನಂತರ ಅವನ ಮಗನು ಬಂದು ಕೆಲಸ ಕೇಳುತ್ತಾನೆ. ಅವನಿಗೂ ಕೆಲಸ ಕೊಡಬೇಕಾಗುತ್ತದೆ. ಈ ರೀತಿ ಮೂರು ಮೂರು ಮಂದಿ ನೇಮಕ ಆಗುತ್ತಾರೆ. ಈ ಹಿನ್ನಲೆಯಲ್ಲಿ ನಾನು ಹೇಳುವುದೇನೆಂದರೆ, ಕೆಲಸಕ್ಕೆ ಸೇರಿದ ನಂತರ, 2 ವರ್ಷದ probationary ಅವಧಿ ಇರುತ್ತದೆ. ಆ ಪ್ರೋಬೇಷನರಿ ಅವಧಿ ಪೂರೈಸಿದ ನಂತರ, ಅಂತಹ ನೌಕರರನ್ನು ಇತರ ಮಹಾನಗರಪಾಲಿಕೆಗಳಿಗೆ ವರ್ಗಾವಣೆ ಮಾಡುವಂತಹ ವ್ಯವಸ್ಥೆ ಜಾರಿಗೆ ತರಬೇಕು. ಅದನ್ನು ಜಾರಿಗೆ ತರುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೇ ಎಂದು ಕೇಳುತ್ತಿದ್ದೇನೆ

**ಶ್ರೀ ಎಸ್.ಸುರೇಶಕುಮಾರ(ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಈಗ ಮೊದಲು ವಿಳಂಬವಾಗಿರುವುದಕ್ಕೆ ಅವರು ಕ್ಷಮಾದಾನ ಮಾಡಲಿ. ಆಮೇಲೆ ಇಚ್ಛಾಮರಣ ಪ್ರಾರಂಭವಾಗುತ್ತದೆ. ಸುಮಾರು 36 ನಿಮಿಷಗಳ ಕಾಲ ಮಾನ್ಯ ಸದಸ್ಯರುಗಳು ಅನೇಕ ರೀತಿಯ ಬೆಳಕನ್ನು ಚೆಲ್ಲಿದ್ದಾರೆ. ಅವರೆಲ್ಲರ ಮಾರ್ಗದರ್ಶನ, ಭಾವನೆಗಳನ್ನು ಒಪ್ಪಿಕೊಳ್ಳುತಾ ನಗರಾಭಿವೃದ್ಧಿಗೆ ಯಾವ ಯಾವ ಅಂಶಗಳ ಅಗತ್ಯವಿದೆಯೋ ಎಂಬುದನ್ನು ಅವರ ಅನುಭವದ ಹಿನ್ನೆಲೆಯಲ್ಲಿ ಹೇಳಿದ್ದಾರೆ. ಮೊದಲನೆಯದು, ಯಾವುದೇ ನೌಕರರನ್ನು ನಾವು ಒಳಚರಂಡಿ ಶುಧ್ಧೀಕರಣಕ್ಕೆ ಇಳಿಸುವುದಿಲ್ಲ. ಇಡೀ ರಾಜ್ಯದಲ್ಲಿ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಯಾವುದೇ manhole ನಲ್ಲಿ ಯಾವುದೇ ಕಾರ್ಮಿಕನನ್ನು, ಅದು ಖಾಸಗಿಯಾಗಿರಬಹುದು, ಸರ್ಕಾರಿ ಇರಬಹುದು, ಜಲಮಂಡಳಿಯವರು ಇರಬಹುದು, ಅವರನ್ನು ಇಳಿಸಬಾರದು ಎಂದು ನಾವು ತೀರ್ಮಾನ ತೆಗೆದುಕೊಂಡು ಅದಕ್ಕೆ ಎಲ್ಲಾ ಕಡೆ jetting machine ನ್ನು ತಂದಿದ್ದೇವೆ. ಬೆಂಗಳೂರು ಜಲಮಂಡಳಿಯಲ್ಲಿ ಈಗಾಗಲೇ ಸುಮಾರು 80 jetting machine ಗಳನ್ನು ನಾವು ತಂದಿದ್ದೇವೆ. ಬೆಂಗಳೂರು ಜಲ ಮಂಡಳಿಯಲ್ಲಿ ಈಗಾಗಲೇ ಸುಮಾರು 80 Jetting Machines ತಂದಿದ್ದೇವೆ. ಇನ್ನು 40 Jetting Machines 40-50 ದಿನಗಳಲ್ಲಿ ಅದು ಸಹ ಬರುತ್ತಿದೆ. ಹೀಗಾಗಿ, ಯಾವುದೂ ಸಹ manual cleaning ಇರುವುದಿಲ್ಲ. ಎಲ್ಲಾ mechanical cleaning. ಅಂದರೆ ಯಾರನ್ನೂ ಒಳಗಡೆ ಇಳಿಸುವುದಿಲ್ಲವೆಂದು ಹೇಳಿದೆ.

ನಾನು ಹೇಳುತ್ತಿರುವುದು ನಿಜ. 2008ರ ಫೆಬ್ರವರಿಯಲ್ಲಿ ಈ ಅರ್ಜಿಗಳಿಗೆ ನಾವು ಜಾಹೀರಾತು ಕೊಟ್ಟಿದ್ದೇವೆ. 288 ಹುದ್ದೆಗಳಿಗೆ ನಮ್ಮಲ್ಲಿ ಸುಮಾರು 10,900 ಅರ್ಜಿಗಳು ಬಂದಿದ್ದವು. ಇದಕ್ಕೆ ನಾವು 7ನೇ ತರಗತಿಯ ವಿದ್ಯಾರ್ಹತೆಯನ್ನು ನಿಗದಿ ಮಾಡಿದ್ದೇವೆ. ಇದನ್ನು ನಾವು ಮೂರು ಹಂತಗಳಲ್ಲಿ ಮಾಡಲಿಕ್ಕೆ ಹೊರಟ್ಟಿದ್ದೇವೆ. ಇದರ ವಿಳಂಬಕ್ಕೆ ನಾನು ಯಾವುದೇ ಕಾರಣಗಳನ್ನು ಹುಡುಕುತ್ತಿಲ್ಲ. ನಾನು ಹಂತಗಳನ್ನು ಮಾತ್ರ ಹೇಳುತ್ತಿದ್ದೇನೆ.

ವಿಳಂಬ ಆಗಿದೆ. ಅದಕ್ಕೆ ಹಣಕಾಸಿನ ಕಾರಣ ಅಲ್ಲ. ಈಗ ಸುಮಾರು 288 ಹುದ್ದೆಗಳಲ್ಲಿ 193 ಜನ helper ಹುದ್ದೆಗಳು, Sanitary Workers 78 ಹುದ್ದೆಗಳು, ಆ ಲಾರಿಯ ಜೊತೆಯಲ್ಲಿ ಹೋಗುವವರನ್ನು ಸೇರಿಸಿ ಹೇಳುತ್ತಿದ್ದೇನೆ. Junior Attenders 12 ಹುದ್ದೆಗಳು, Watchmen 4 ಹುದ್ದೆಗಳು ಈ ರೀತಿಯಲ್ಲಿ ಒಟ್ಟು ನಮಗೆ 288 ಹುದ್ದೆಗಳು ಬೇಕಾಗಿದೆ. ಸುಮಾರು 10,937 ಅರ್ಜಿಗಳು ಬಂದಿವೆ. ಅದರಲ್ಲಿ ಮೊದಲನೆ ಹಂತವಾಗಿ ನಾವು ಅರ್ಜಿಗಳನ್ನು ಒಂದು segregate ಮಾಡಿದೆವು. ಮೇಲ್ನೋಟಕ್ಕೆ ನಮಗೆ ಈ 10,937ರಲ್ಲಿ 6,025 ಅರ್ಜಿಗಳು valid ಅರ್ಜಿಗಳೆಂದು ಗುರುತಿಸಿದೆವು. ಇದಾದ ಮೇಲೆ ನಾವು ಅವರುಗಳನ್ನು 2ನೇ ಹಂತದಲ್ಲಿ Medical Test ಮತ್ತು ದಾಖಲಾತಿಗಳ ಪರಿಶೀಲನೆಗೆ ಕರೆದಿದ್ದೆವು. ಅದನ್ನೂ ಕೂಡ ನಾವು ಆಯ್ಕೆ ಮಾಡಿ ಈಗ ಸುಮಾರು 888 ಜನ ಅರ್ಹರಿದ್ದಾರೆಂದು final stage ಗೆ ಬಂದಿದ್ದಾರೆ. ಈಗ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಇದಕ್ಕೆ ಅರ್ಜಿಗಳನ್ನು ಹಾಕಿದ್ದಾರೆ. ನಾವು ಈಗ ಅವರುಗಳನ್ನು ಆಯ್ಕೆ ಮಾಡಬೇಕಾಗಿದೆ. ಆದ್ದರಿಂದ, 7ನೇ ತರಗತಿಯ ಅಂಕಪಟ್ಟಿಯನ್ನು ಪರಿಶೀಲನೆ ಮಾಡಬೇಕೆಂದು ಸಂಬಂಧಪಟ್ಟ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ. ಈಗ ನಾವು ಅದಕ್ಕೋಸ್ಕರ ಕಾಯುತ್ತಿದ್ದೇವೆ. ನನಗೆ ಒಂದು ಭರವಸೆ ಇದೆ. ಈ ಪ್ರಕ್ರಿಯೆ ಕೊನೆಯ ಹಂತಕ್ಕೆ ಬಂದಿದೆ. ಹಣಕಾಸಿನ ತೊಂದರೆಯಲ್ಲ. ಸರ್ಕಾರ ಆಗಲೇ ಅನುಮೋದನೆ ಕೊಟ್ಟಿದೆ. ಎಲ್ಲಾ ಹಂತಗಳನ್ನು ಮುಗಿಸಿದ್ದೇವೆ. ಸೆಪ್ಟೆಂಬರ್ ಕೊನೆಯ ವೇಳೆಗೆ ಇವರೆಲ್ಲರನ್ನೂ ಕೂಡ ನಾವು ನೇಮಕ ಮಾಡಿಕೊಂಡು ಕೆಲಸ ಮಾಡಿಸುವುದಕ್ಕೆ ಪ್ರಾರಂಭ ಮಾಡುತ್ತೇವೆ.

**ಶ್ರೀಮತಿ ಮೋಟಮ್ಮ:-** ಮೊನ್ನೆ ಗದಗ್‌ನಲ್ಲಿ ಈ ಒಂದು ಕೆಲಸ ಮಾಡುವಂತಹ ಸಂದರ್ಭದಲ್ಲಿ ಇಬ್ಬರು ಸತ್ತಿದ್ದಾರೆ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀಮತಿ ಮೋಟಮ್ಮನವರಿಗೆ ಧನ್ಯವಾದಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಈ ವಿಚಾರವನ್ನು ಪ್ರಸ್ತಾಪ ಮಾಡಿ ಸತ್ಯಾಂಶ ಹೊರಗಡೆ ಬರಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಹುಬ್ಬಳ್ಳಿಗೆ ನಾನೇ ಕಳೆದ ತಿಂಗಳು

ಹೋಗಿದ್ದೆನು. ಅಲ್ಲಿ ನಾವು ಹೊಸದಾಗಿ sanitary UGD ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಸುಮಾರು 52 ಕಿ.ಮೀ. ಉದ್ದದ sanitary ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. sanitary ಯನ್ನು ಎಲ್ಲೆಲ್ಲಿ ಕಟ್ಟಿದ್ದಾರೆ, ಇನ್ನೂ ಕೂಡ ಅದು functional manholes ಅಲ್ಲ. ಕಟ್ಟಿರುವ functional manholes ಒಳಗಡೆ ಕೆಲಸ ಅಂದರೆ ಕಟ್ಟಿರುವುದನ್ನು ಬಿಚ್ಚಬೇಕಾಗಿತ್ತು, ಅದರಲ್ಲಿ ಗುತ್ತಿಗೆದಾರರ ಕಡೆಯವರು ಇಳಿದಿದ್ದಕ್ಕೋಸ್ಕರ ಆ ದಿನ ಆ ಘಟನೆ ನಡೆದಿದೆ. ಆ ಘಟನೆ ಕೂಡ ಆಗಬಾರದಿತ್ತು. ಅದಕ್ಕೋಸ್ಕರ ನಾವು ಕೊಡಬೇಕಾದ ಎಲ್ಲಾ ರೀತಿಯ ಪರಿಹಾರಧನವನ್ನು ಗುತ್ತಿಗೆದಾರರ ಮೂಲಕ ಕೊಡಿಸಿದ್ದೇವೆ. ಶ್ರೀಯುತ ಬಸವರಾಜ ಹೊರಟ್ಟಿಯವರು ಅದೇ ನಗರದಿಂದ ಬಂದವರಾಗಿದ್ದು, ಆ ವಿಚಾರ ಅವರಿಗೆ ಕೂಡ ಬಹಳ ಸ್ಪಷ್ಟವಾಗಿ ಗೊತ್ತಿದೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೆ, ಅಲ್ಲಿ ಸತ್ತು ಹೋದವರು ನಮ್ಮ ತಾಲ್ಲೂಕಿನ ನೆಲ್ಲೂರಿನವರು ಆಗಿದ್ದರು. ಪಾಪ, ಅಲ್ಲಿ ಕೆಲಸಕ್ಕೆಂದು ಹೋಗಿ ಸತ್ತು ಹೋಗಿದ್ದಾರೆ.

**ಶ್ರೀ ಎಸ್. ಸುರೇಶ್ ಕುಮಾರ್:-** ಅದಕ್ಕೋಸ್ಕರ ಆ slab ಅನ್ನು ತೆಗೆಯುವಾಗ ಆ ರೀತಿಯಲ್ಲಿ ಒಂದು ದುರ್ಘಟನೆಯಾಗಿರುವುದಾಗಿದೆ. ಆದ್ದರಿಂದ, ಯಾವುದೇ ಕಾರಣದಿಂದ functional manholes ನಲ್ಲಿ ಒಳಚರಂಡಿ ಚಾಲನೆಯಲ್ಲಿರುವ ಇಳಿಸಿಲ್ಲ, ಮತ್ತು ಇಳಿಸೋದಿಲ್ಲ. ಮತ್ತೆ ನೀವು ಏನು ಕೆ.ಜಿ.ಎಫ್‌ನಲ್ಲಿನ ಸಂಗತಿಗಳನ್ನು ಹೇಳಿದ್ದೀರಿ, ಅಲ್ಲಿ ನಾನೇ ಖುದ್ದಾಗಿ ಹೋಗಿದ್ದೇನೆ. ಅಲ್ಲಿ ನಾವು ನೇಮಕ ಮಾಡಿಕೊಂಡಿರುವುದಲ್ಲ. ನಾವು ಅಲ್ಲಿ ಅವಕಾಶವನ್ನು ಕೊಡುತ್ತಿಲ್ಲ. ಕೆಲವು ಖಾಸಗಿ ಹೋಟೆಲ್‌ನವರು ಇಳಿಸುತ್ತಿದ್ದಾರೆ. ಅದಕ್ಕೋಸ್ಕರ ನಾವು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಎಲ್ಲೆಲ್ಲಿ ಒಳಚರಂಡಿಗಳಲ್ಲಿ ಕಾರ್ಮಿಕರನ್ನು ಇಳಿಸಿರುವುದನ್ನು ನೋಡುತ್ತೇವೆ, ಆ ಇಳಿಸಿರುವಂತಹ ವ್ಯಕ್ತಿಯ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕುತ್ತಿದ್ದೇವೆ, the local Revenue Inspector is also responsible. ಯಾವುದೇ ಕಾರಣದಿಂದ ನಾವು ಅವಕಾಶವನ್ನು ಕೊಡುವುದಿಲ್ಲ. ಈ ರೀತಿ ಅನಾಹುತಗಳಾದಾಗ

ಅವರನ್ನು ಜವಾಬ್ದಾರರನ್ನಾಗಿ ಮಾಡಿ ಕ್ರಿಮಿನಲ್ ಕೇಸ್‌ಗಳನ್ನು ಹಾಕುತ್ತಿದ್ದೇವೆ. ಅನಾಹುತಗಳಿಗೆ ನಾವು ಅವಕಾಶಗಳನ್ನು ಕೊಡುವುದಿಲ್ಲ.

**ಶ್ರೀ ವಿಜಯಸಂಕೇಶ್ವರ:–** ಹುಬ್ಬಳ್ಳಿಯಲ್ಲಿ ಇಬ್ಬರು ತೀರಿಹೋಗಿ 4 ದಿವಸಗಳಾಯಿತು, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂದು ಹೇಳಲಿಲ್ಲ.

**ಸಭಾಪತಿಯವರು:–** ಅದೇ ವಿಚಾರವನ್ನು ಮಾನ್ಯ ಸಚಿವರು ಈಗ ಹೇಳಿದ್ದಾರೆ. functional manholes ಅಲ್ಲ, ಅವುಗಳನ್ನು repair ಮಾಡಲಿಕ್ಕೆ ಹೋಗಿ ಈ ರೀತಿ ಆಗಿದೆ ಎಂದು ಹೇಳಿದರು.

**ಶ್ರೀ ವಿಜಯಸಂಕೇಶ್ವರ:–** ಒಳಚರಂಡಿ ಅಷ್ಟೇ ಅಲ್ಲ, ಈಗ ನೀರಿನಲ್ಲೂ ಇಳಿಸುತ್ತಿದ್ದಾರಲ್ಲಾ.

**ಶ್ರೀ ಎಸ್.ಸುರೇಶ್ ಕುಮಾರ್:–** ಸುಮಾರು ಎರಡು ತಿಂಗಳ ಹಿಂದೆ ರಸ್ತೆ ಬದಿಯ ಚರಂಡಿಯನ್ನು clean ಮಾಡಲು ಹೋಗಿ C.D (Cross Drain) ಎಂದು ಏನು ಹೇಳುತ್ತೇವೆ, ಅಲ್ಲಿ ಅವರು ಉಸಿರುಗಟ್ಟಿ ಸತ್ತು ಹೋಗಿದ್ದಾರೆ. ಅದಕ್ಕೂ ಸಹಿತ ಪರಿಹಾರಧನವನ್ನು ಕೊಡಲಿಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಯಾವುದೇ ರೀತಿಯಲ್ಲಿ ಕಾರ್ಪೋರೇಷನ್‌ನ ಬೇಜವಾಬ್ದಾರಿಯಿಂದ, ಅಜಾಗರೂಕತೆಯಿಂದ ಈ ಘಟನೆಯಾಗಿಲ್ಲವೆಂದು ತಿಳಿಸಲಿಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ಧನ್ಯವಾದಗಳು.

## 6. ನಿಯಮ 330 ರ ಮೇರೆಗೆ ಚರ್ಚೆ

## ಅ) 'ಸ್ವ ಇಚ್ಛಾ ಮರಣ'ದ ಕಾಯಿದೆ ಜಾರಿಗೊಳಿಸುವ ಬಗ್ಗೆ.

– – –

**ಡಾ||ಎ.ಎಚ್.ಶಿವಯೋಗಿಸ್ವಾಮಿ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ,

**ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಸಚಿವರು):–** 'ಸ್ವ ಇಚ್ಛಾ ಮರಣ'ದ ಬಗ್ಗೆ ಕೇಳುವುದಕ್ಕೆ ಹೋಗಬೇಡಿ. ಕೆಲವರು ಬಹಳ ಗಟ್ಟಿ ಇರುತ್ತಾರೆ. ಈ ಬಗ್ಗೆ ಯಾವನೋ ಒಬ್ಬ ತೀರ್ಮಾನ ಮಾಡಿ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ತೀರ್ಮಾನ ಮಾಡಿದ. 25–30 ನಿದ್ದೆ ಮಾತ್ರೆಗಳನ್ನು ಒಟ್ಟಿಗೆ ವಿಷದಲ್ಲಿ ತೆಗೆದುಕೊಂಡ. ಆದರೂ ಸಾಯುತ್ತೇನೋ ಇಲ್ಲವೋ ಎಂದು ಅವನಿಗೆ ಅನುಮಾನ. ಯಾವುದೋ ಸಮುದ್ರದ ಸೇತುವೆ ಮೇಲೆ ನೇಣು ಹಾಕಿಕೊಂಡ. ಆದರೂ ನಾನು ಸಾಯುತ್ತೇನೋ ಇಲ್ಲವೋ ಎಂದು ಮತ್ತೂ ಅವನಿಗೆ ಅನುಮಾನ. ಒಂದು ಪಿಸ್ತೂಲ್ ತೆಗೆದುಕೊಂಡು ಗುಂಡು ಹಾರಿಸಿಕೊಂಡ. ಆ ಗುಂಡು ಹೋಗಿ ಹಗ್ಗಕ್ಕೆ ತಗುಲಿ, ಹಗ್ಗ ಕಟ್ಟಾಗಿ ಅವನು ಬಿದ್ದು ಉಪ್ಪು ನೀರು ಕುಡಿದು ಆಚೆ ಬಂದು, ಬದುಕಿಕೊಂಡ. ಅಂತಹವರು ಸಹ ಕೆಲವರು ಇರುತ್ತಾರೆ. ಅದಕ್ಕೋಸ್ಕರ ಕೆಲವರ ಬಗ್ಗೆ ಯೋಚನೆ ಮಾಡಲಿಕ್ಕೆ ಹೋಗಬೇಡಿ.

**ಸಭಾಪತಿಯವರು:–** ಇದನ್ನು ಕೇಳಿದ ಮೇಲೆ 'ಸ್ವ ಇಚ್ಛಾ ಮರಣ'ದ ಬಗ್ಗೆ ಹೇಗೆ?

**ಡಾ||ಎ.ಹೆಚ್.ಶಿವಯೋಗಿಸ್ವಾಮಿ (ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೆ, 'ಸ್ವ ಇಚ್ಛಾ ಮರಣ'ದ ಕಾಯಿದೆ ಜಾರಿಗೊಳಿಸುವ ಬಗ್ಗೆ ಏಕ ರೂಪದ ಕಾನೂನಿಗಾಗಿ ಅಗತ್ಯ ಕ್ರಮ ತೆಗೆದುಕೊಳ್ಳಬೇಕೆಂದು ಕೆಲವು ವ್ಯಕ್ತಿಗಳು ಹಾಗೂ ಸಂಘ–ಸಂಸ್ಥೆಗಳು ಹೋರಾಟ ನಡೆಸುತ್ತಿದ್ದು, ಈ ಕಾಯಿದೆಯನ್ನು ಜಾರಿಗೆ ತರುವದರ ಬಗ್ಗೆ ಬೆಂಗಳೂರಿನಲ್ಲಿ ನಡೆದ ಸಮೀಕ್ಷೆಯಲ್ಲಿ 56% ರಷ್ಟು

ಜನರು ಇದಕ್ಕೆ ಸಮ್ಮತಿಸಿದ್ದಾರೆ. ವಾಸಿ ಮಾಡಲಾಗದ, ಸುಧೀರ್ಘ ಕಾಯಿಲೆಗಳಿಂದ ನರಳುತ್ತಿರುವ ವ್ಯಕ್ತಿಗಳು 'ಸ್ವ ಇಚ್ಛಾ ಮರಣ'ಕ್ಕೆ ಇಚ್ಛೆ ಪಟ್ಟರೂ ಸಾಧ್ಯವಾಗದ ಹಿನ್ನೆಲೆಯಲ್ಲಿ, ನಾನು ಆತ್ಮಹತ್ಯೆ ವಿಚಾರವನ್ನು ಹೇಳಲಿಲ್ಲ. 'ಸ್ವ ಇಚ್ಛಾ ಮರಣ' ಮತ್ತು ದಯಾ ಮರಣ ಆ ಎರಡರ ಬಗ್ಗೆ ಒಂದು ಸಣ್ಣ ವ್ಯತ್ಯಾಸವಿದೆ ದಯಾಮರಣ ...

**ಸಭಾಪತಿಯವರು:–** ಹೇಳಿ...

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ತಾವು ತುಂಬಾ ಧಾರಾಳವಾಗಿಬಿಟ್ಟಿದ್ದೀರಿ. ಬೇರೆ ಸಮಯದಲ್ಲಿ ತಾವು ಗಡಿಬಿಡಿಯಾಗುತ್ತೀರಿ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ತಾವು ಸಹ ಸಹಮತಿಯನ್ನು ನಮಗೆ ಕೊಡುತ್ತಿದ್ದೀರಿ.

**ಸಭಾಪತಿಯವರು:–** ಯಾರೇ ಆಗಲಿ, ಮರಣದ ವಿಚಾರ ಬಂದಾಗ ಸ್ವಲ್ಪ ತಡೆದುಕೊಳ್ಳಪ್ಪ ಎಂದು ಹೇಳಬೇಕು.

**ಡಾ||ಎ.ಹೆಚ್.ಶಿವಯೋಗಿಸ್ವಾಮಿ:–** ಮಾನ್ಯ ಸದಸ್ಯರಾದ ಶ್ರೀ ಶಶಿಲ್ ಜಿ.ನಮೋಶಿಯವರು ಹೇಳುವುದು . . .

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಸ್ವಾಮಿಗಳು, ಹಿರಿಯರು ಏನು ಹೇಳುತ್ತಾರೆಂದರೆ, "ಅಷ್ಟೊಂದು ಅವಸರ ಏತಕ್ಕೆ ಮಾಡುತ್ತಿಯೋ, ತಡಕೋ, ತಡಕೋ, ಸಾಯುವುದಕ್ಕೆ ಅಷ್ಟೇಕೆ ಅವಸರ ಮಾಡುತ್ತೀರೋ" ಎಂದು ಹೇಳುತ್ತಾರೆ.

**ಡಾ|| ಎ.ಹೆಚ್.ಶಿವಯೋಗಿಸ್ವಾಮಿ:–** ನಮ್ಮ ಶ್ರೀಯುತ ನಮೋಶಿ ಯವರ comment ಏನೆಂದರೆ "ಸ್ವಲ್ಪ ತಡೆದುಕೋ ಬಿಲ್ ಪಾಸಾಗಲಿ, ಆಮೇಲೆ ಸಾಯುವೆ ಎಂದು ಎಂದು ಹೇಳುತ್ತಾರೆ. ಮಾನ್ಯ ಸಭಾಪತಿಯವರೆ, ಈ ದಯಾಮರಣ ಅಥವಾ ಸ್ವ–ಇಚ್ಛಾ ಮರಣ ಎನ್ನುವುದು ಏನು ಇದೆ, ಸ್ವ ಇಚ್ಛಾ ಮರಣ. ನಮಗೆ ತಿಳಿದ ಮಟ್ಟಿಗೆ ಈ ಎರಡಕ್ಕೂ ವ್ಯತ್ಯಾಸವಿದೆ. Euthanasia ಎಂದು ನಾವು ಏನು medical terminology ನಲ್ಲಿ

ಕರೆಯುತ್ತೇವೆ, Euthanasia ಎನ್ನುವ ಶಬ್ಧ ದಯಾಮರಣಕ್ಕೆ ಅರ್ಥ ಬರುವಂತಹ ಒಂದು ಶಬ್ಧ 'ಸ್ವ-ಇಚ್ಛಾ ಮರಣ' ಎಂದು ನಾವು ಏನು ಕರೆಯುತ್ತೇವೆ, ಅದನ್ನು Voluntary Euthanasia ಎಂದು ಕರೆಯುತ್ತಾರೆ. ಆದರೆ, ದಯಾಮರಣ ಎನ್ನುವುದು ಯಾವಾಗ ಅತ್ಯಂತ ಅವಸಾನದ ಅವಸ್ಥೆಯಲ್ಲಿ ಇರುತ್ತಾರೆ, ಅವರು ಕೋಮಾದಲ್ಲಿರುತ್ತಾರೆ, ಅವರಿಗೆ ನಿರ್ಣಯ ಮಾಡುವುದಕ್ಕೆ ಸಾಧ್ಯತೆ ಇರುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಸಂಬಂಧಪಟ್ಟ ಪೋಷಕರು, ಅವರ ತಂದೆ-ತಾಯಿ, ಅಥವಾ ಹತ್ತಿರ ಸಂಬಂಧಿಗಳು, ಚಿಕಿತ್ಸೆ ನೀಡುವ ಈ ಡಾಕ್ಟರ್ ಇವರುಗಳು ಏನು ತೀರ್ಮಾನ ಮಾಡುತ್ತಾರೆ, that is mercy killing. ದಯಾ ಮರಣ ಎನ್ನುವುದಕ್ಕೆ ಯಾವಾಗ ಒಪ್ಪಿಗೆಯನ್ನು ಕೊಡುತ್ತಾರೆಂದರೆ terminal stage ನಲ್ಲಿ ಯಾವ patient ಇರುತ್ತಾರೆ ಮತ್ತು coma stage ನಲ್ಲಿರುವ ಆ ವ್ಯಕ್ತಿ ಈ ಬಗ್ಗೆ ನಿರ್ಣಯವನ್ನು ಮಾಡುವುದಕ್ಕೆ ಸಾಧ್ಯತೆ ಇರುವುದಿಲ್ಲ. ಅಂತಹ ಸಂದರ್ಭದಲ್ಲಿ ಸಂಬಂಧಪಟ್ಟ ವ್ಯಕ್ತಿಯ ತಂದೆ ತಾಯಿಗಳು / ಪೋಷಕರು ಇಲ್ಲವೇ ಹತ್ತಿರದ ಸಂಬಂಧಿಗಳು, ಅವರ ವೈದ್ಯರು ಸೇರಿ ಈ ರೀತಿಯ ಒಂದು ತೀರ್ಮಾನವನ್ನು ಮಾಡುತ್ತಾರೆ. That is mercy killing or that is Euthanasia. .

**ಶ್ರೀ ಎಂ.ಆರ್.ಹುಲಿನಾಯ್ಕರ್:-** ಮಾನ್ಯ ಸಭಾಪತಿಯವರೆ, ಇಚ್ಛಾ ಮರಣದ ಬಗ್ಗೆ . . .

**ಸಭಾಪತಿಯವರು:-** ಅವರು ಪೂರ್ತಿ ಮಾತನಾಡಲಿ ನಂತರ ತಮಗೂ ಅವಕಾಶ ಕೊಡುತ್ತೇನೆ. ಅವರು ಇನ್ನೂ ದಯಾ ಮರಣ ಶಾಸನ ಮಾಡಬೇಕು ಎಂದು ಹೇಳಲೇ ಇಲ್ಲ. ಅವರು ಮಾಡಬಾರದು ಎಂದು ಹೇಳುತ್ತಾರೇನೋ ನೋಡೋಣ.

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ:-** ಇಲ್ಲ. ಈ Euthanasia ಎನ್ನುವ ಶಬ್ದ originally it is a Greek word. In Greek Eu means good or well, thanatos means death. So, Euthanasia means well death or dying well ಎನ್ನುವ ಅರ್ಥ ಬರುವ ರೀತಿಯಲ್ಲಿ ಈ ಶಬ್ದವನ್ನು ರಚನೆ ಮಾಡಿದ್ದಾರೆ.

ಇದು ಮೂಲತಃ ಗ್ರೀಕ್ ಶಬ್ದ. ತಾವು ನನಗೆ ಸ್ವಲ್ಪ ಸಮಯ ಕೊಟ್ಟಿರುವುದರಿಂದ ಮತ್ತು ಈ Euthanasia ಬಗ್ಗೆ ನಮ್ಮ ಎಲ್ಲಾ ಮಾನ್ಯ ಸದಸ್ಯರಿಗೆ ತಿಳಿದಿರಲಿ ಎಂಬ ಉದ್ದೇಶದಿಂದ ಈ ಮಾಹಿತಿಯನ್ನು ಕೊಡುತ್ತಿದ್ದೇನೆ.

**ಸಭಾಪತಿಯವರು:–** ಸಮಯ ಕೊಟ್ಟಿದ್ದೇನೆ. ಯದ್ವಾತದ್ವಾ ಅಲ್ಲ. ವಿಷಯವನ್ನು ಪ್ರಸ್ತಾಪನೆ ಮಾಡಲೀ ಎಂಬ ಉದ್ದೇಶದಿಂದ ಅವಕಾಶ ಕೊಟ್ಟಿದ್ದೇನೆ.

**ಡಾ|| ಎ.ಎಚ್.ಶಿವಯೋಗಿ ಸ್ವಾಮಿ:–** ಬಹಳ ಅಪರೂಪವಾದ ವಿಷಯದ ಬಗ್ಗೆ ಮುಖ್ಯವಾದ ವಿಚಾರದ ಬಗ್ಗೆ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಕ್ರಿಸ್ತಪೂರ್ವ 3–4ನೇ ಶತಮಾನದ ಸಂದರ್ಭದೊಳಗೆ ಹೊಸ ವೈದ್ಯರಿಗೆ Hippocratic Oath ಅನ್ನು ಕೊಡುತ್ತಾರೆ ಆ oath ನಲ್ಲಿ ಕೂಡ ಇದಕ್ಕೆ ಸಂಬಂಧಪಟ್ಟಂಥ ಒಂದು ಅಂಶ ದಾಖಲಾಗಿದೆ. ಅದರಲ್ಲಿ "To please no one will I prescribe a deadly drug, nor give advice which may cause his death". ಈ ರೀತಿ ಉಲ್ಲೇಖ ಆಗಿದೆ. ಅಂದರೆ ಯಾವುದೇ ವೈದ್ಯನೂ ಕೂಡ ತಾನು ಮಾಡತಕ್ಕಂಥ ವೈದ್ಯ ವೃತ್ತಿಯಲ್ಲಿ ಯಾವುದೇ ಸಂದರ್ಭದಲ್ಲಿ ಯಾರಿಗೂ ಕೂಡ ಜೀವ ಹಾನಿಯಾಗತಕ್ಕಂತಹ ಔಷಧಿಗಳನ್ನು ಕೊಡುವುದಿಲ್ಲ ಮತ್ತು ಅದನ್ನು ತೆಗೆದುಕೊಳ್ಳುವುದಕ್ಕೆ ಸಲಹೆ ಮಾಡುವುದಿಲ್ಲ ಎನ್ನುವುದು ಇದರ ಅರ್ಥ. ಆ oath ಇದ್ದ ಆ ದಿವಸಗಳಲ್ಲಿಯೇ ಆವತ್ತಿನ ಕಾಲದ Greek ಮತ್ತು Roman ಜನಾಂಗದವರು ಏನು ಇದ್ದರು ಅವರು ಇದನ್ನು dignity of death ಎಂದು ಕರೆಯುತ್ತಿದ್ದರು. ಅವರ ದೃಷ್ಟಿಯಲ್ಲಿ ಈ ದಯಾ ಮರಣ ಎನ್ನುವುದು ಒಬ್ಬ ವ್ಯಕ್ತಿಯ ಹಕ್ಕು ಎಂಬ ಅಭಿಪ್ರಾಯ ಅವರಲ್ಲಿತ್ತು. ಯಾವ ರೀತಿ ಒಬ್ಬ ವ್ಯಕ್ತಿಗೆ ಬದುಕುವುದಕ್ಕೆ ಹಕ್ಕು ಇದೆ, ಯಾವ ರೀತಿ ಜೀವನ ಮಾಡುವುದಕ್ಕೆ ಹಕ್ಕು ಇದೆ, ಅದೇ ರೀತಿಯಲ್ಲಿ ಬದುಕು ಬೇಡವೆಂದು ಅನ್ನಿಸಿದಾಗ ಸಾಯುವುದೂ ಕೂಡ ಅವನ ಹಕ್ಕು ಎಂದು ಪರಿಗಣಿಸುತ್ತಿದ್ದರು. ಅದೇ ರೀತಿಯಾಗಿ 16ನೇ ಶತಮಾನದಲ್ಲಿ Thomas More ಎನ್ನುವ Catholics Saint.

ಅವರು ದಯಾ ಮರಣದ ಬಗ್ಗೆ ಪ್ರತಿಪಾದನೆ ಮಾಡಿದ್ದಾರೆ. ಸಾಮಾನ್ಯವಾಗಿ ನಾವು ಈ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಬೇಕಾದರೆ ಆತ್ಮಹತ್ಯೆ ಎನ್ನುವಂತಹ ಶಬ್ದವನ್ನು ಉಲ್ಲೇಖ ಮಾಡುತ್ತೇವೆ. ನಮ್ಮ ನಂಬಿಕೆಗಳಲ್ಲಿ ಆತ್ಮಕ್ಕೆ ಸಾವು ಇಲ್ಲವೆಂದು ಹೇಳುತ್ತೇವೆ. ಇದರಿಂದಾಗಿ ಆತ್ಮವನ್ನು ಹತ್ಯೆ ಮಾಡುವುದಕ್ಕೆ ಸಾಧ್ಯವಿಲ್ಲ ಬಹುಶಃ ಪ್ರಾಣಹತ್ಯೆ / ಜೀವಹತ್ಯೆ ಎಂದು ಕೊಳ್ಳಬಹುದಿತ್ತೇನೋ ಎಂದು ಅನ್ನಿಸುತ್ತದೆ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೆ, ತಪ್ಪು ಸಂಗತಿಗಳು ಬರಬಾರದೆಂದು ಹೇಳುತ್ತಿದ್ದೇನೆ. ಆತ್ಮಕ್ಕೂ ಈ ಹತ್ಯೆಗೂ ಯಾವುದೇ ಸಂಬಂಧವಿಲ್ಲ. ಸಂಸ್ಕೃತದಲ್ಲಿ ಆತ್ಮ ಎನ್ನುವುದು first person. ಅದಕ್ಕೆ ಪರ್‌ಸ್ಮೈ ಪದ ಎಂದು ಹೇಳುತ್ತಾರೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಆತ್ಮ ಎಂಬ ಪದ . . .

**ಶ್ರೀ ಗೋ. ಮಧುಸೂದನ್:–** ನೀವು ಹೇಳುತ್ತಿರುವ ಆತ್ಮ ಬೇರೆ ನಾನು ಹೇಳುತ್ತಿರುವ ಆತ್ಮ ಬೇರೆ.

**ಸಭಾಪತಿಯವರು:–** ಎರಡೂ ಬೇರೆ ಬೇರೆ ಅದು ಪರಮಾತ್ಮ. . . .

**ಶ್ರೀ ಗೋ. ಮಧುಸೂದನ್:–** ನೀವು ಹೇಳಿದ್ದು ತಪ್ಪಾಗಬಾರದು ಎಂದು ನಾನು ಹೇಳುತ್ತಿದ್ದೇನೆ. ಆತ್ಮಹತ್ಯೆ ಎನ್ನುವುದು ಸಂಸ್ಕೃತ ಶಬ್ದ. ಇದರಲ್ಲಿ first person, second person, third person ಎಂದು ಇದೆ. ನಾನು ಎಂಬುದು first person ನೀವು ಎಂಬುದು second person ಅವರು ಎನ್ನುವುದು third person. ಆದರೆ ಆತ್ಮ ಶಬ್ದ ಬರುವಂಥಾದ್ದು ಆತ್ಮನೀಯ ಪದ ಎಂದು ಸ್ವಂತಕ್ಕೆ, ಪರಸ್ಮೈ ಪದ ಎಂದರೆ ಎರಡನೇ ವ್ಯಕ್ತಿಗೆ, ಮೂರನೇ ವ್ಯಕ್ತಿಗೆ ನಾವು ಉಪಯೋಗಿಸುವುದು ಸರ್ವನಾಮ ಪದ ಎಂದು ಉಪಯೋಗಿಸುತ್ತೇವೆ. I, You and He ಎಂದು ಹೇಳಿ. ಅದಕ್ಕೋಸ್ಕರ ಆತ್ಮ ಅಂದರೆ ಸ್ವಂತಕ್ಕೆ ಸಂಬಂಧಿಸಿದ್ದು ಎಂದು ಅರ್ಥ ಬರುತ್ತದೆ. ಅದಕ್ಕೆ ಬರುವಂತಾದ್ದು ಆತ್ಮಹತ್ಯೆ ಒಂದೇ ಅಲ್ಲ. ಆತ್ಮ ಅಂದರೆ ಸ್ವಂತಕ್ಕೆ ಸಂಬಂಧಪಟ್ಟಿದ್ದು ಯಾವುದ್ಯಾವುದು

ಇದೆ ಅವೆಲ್ಲವೂ ಬರುತ್ತದೆ. ಎಲ್ಲೋ ಶರೀರದೊಳಗೆ ಒಂದು ಆತ್ಮ ಇದೆ ಅದನ್ನು ಹುಡುಕಿಕೊಂಡು ಹೋಗಿ ಹತ್ಯೆ ಮಾಡುವುದು ಎಂದು ಅಲ್ಲ.

**ಡಾ॥ ಎ.ಎಚ್. ಶಿವಯೋಗಿಸ್ವಾಮಿ:–** ಮಾನ್ಯ ಮಧುಸೂದನ್ ಅವರು ಆತ್ಮದ ಬಗ್ಗೆ ವಿಶ್ಲೇಷಣೆಯನ್ನು ಮಾಡಿದ್ದಾರೆ. ಅದಕ್ಕೆ ಬೇರೆ ಬೇರೆ ಅರ್ಥವೂ ಕೂಡ ಇದೆ ಎಂದು ಹೇಳುತ್ತಿದ್ದಾರೆ. ಆದರೆ ನನ್ನ ದೃಷ್ಟಿಯಲ್ಲಿ ಎಲ್ಲರ ಆತ್ಮವೂ ಪರಮಾತ್ಮ ಅಲ್ಲವೇ? ಅವರು ಅವರ ಆತ್ಮವನ್ನು ಶೋಧನೆ ಮಾಡಿಕೊಳ್ಳಲಿ ಎಂದು . . . .

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಶ್ರೇಣೀಕೃತ ಆತ್ಮವೆಂದು ಹೇಳುತ್ತಾರಲ್ಲಾ . . . .

**ಡಾ॥ ಎ.ಎಚ್.ಶಿವಯೋಗಿ ಸ್ವಾಮಿ:–** ಅದು purified ಎಂತಲಾ ತಾವು ಹೇಳುತ್ತಿರುವುದು. ಸಾಮಾನ್ಯವಾಗಿ ನಾವೆಲ್ಲರೂ ಕೂಡ ಭಗವದ್ಗೀತೆಯನ್ನು ಓದುತ್ತೇವೆ. ಆ ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮ ಈ ರೀತಿ ಹೇಳಿದ್ದಾರೆ

**ವಾಸಾಂಸಿ ಜೀರ್ಣಾನಿ ಯಥಾ ವಿಹಾಯ**

**ನವಾನಿ ಗ್ರೀಹ್ಣಾನಿ ನರೋಪರಾನೀ**

**ತಥಾ ಶರೀರಾಣಿ ವಿಹಾಯ**

**ಜೀರ್ಣಾನಿ ಅನ್ಯಾನಿ ಸಮ್ಯತಿ ನವಾನಿ ದೇಹೀ**

ಎಂದು ಹೇಳಿದ್ದಾರೆ.

ಅಂದರೆ ಯಾವ ರೀತಿ ಒಬ್ಬ ವ್ಯಕ್ತಿ ತಾನು ಉಪಯೋಗಿಸತಕ್ಕಂಥ ಬಟ್ಟೆಗಳು ಹಳೆಯದಾದ ಮೇಲೆ ಅಥವಾ ಅದು ಹರಿದು ಹೋದ ಮೇಲೆ ಅವುಗಳನ್ನು ಬಿಸಾಕಿ / ಕಳಚಿ ಹೊಸ ಬಟ್ಟೆಗಳನ್ನು ಧರಿಸುತ್ತಾನೆಯೋ ಅದೇ ರೀತಿಯಲ್ಲಿ ಆತ್ಮ ಎನ್ನುವುದು ದೇಹದೊಳಗಡೆ ಏನು ಇರುತ್ತದೆ ಅದು ಆ ದೇಹ ಮುಪ್ಪಾದಾಗ ಆ ದೇಹ ಕ್ಷೀಣಿಸಿದಾಗ ಆ ದೇಹವನ್ನು ತ್ಯಜಿಸಿ ಇನ್ನೊಂದು ದೇಹದೊಳಗೆ ಹೋಗಿ ಸೇರಿಕೊಳ್ಳುತ್ತದೆ. ಆ ದೃಷ್ಟಿಯಿಂದ ಈ ಆತ್ಮಹತ್ಯೆ

ಎನ್ನುವ ಪದಕ್ಕಿಂತ ಅದನ್ನು ಪ್ರಾಣ ಹತ್ಯೆ ಎಂಬ ಶಬ್ದವನ್ನು ಉಪಯೋಗಿಸಬಹುದೇನೋ ಎಂದು ಅನ್ನಿಸುತ್ತದೆ. ಅದರಲ್ಲಿ ಇನ್ನೊಂದು ಮಾತು ಬರುತ್ತದೆ. **"ಜಾತಸ್ಯ ಮರಣಂ ಧ್ರುವಂ"** ಅಂದರೆ ಹುಟ್ಟಿದ ವ್ಯಕ್ತಿಗಳೆಲ್ಲರೂ ಸಾಯಲೇಬೇಕು. ಸತ್ತ ವ್ಯಕ್ತಿಗಳೆಲ್ಲರೂ ಮತ್ತೆ ಹುಟ್ಟಲೇಬೇಕು ಹುಟ್ಟೇ ಹುಟ್ಟಬೇಕು ಎಂದು ಹೇಳುತ್ತಾರೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ನೀವು ಏನೇ ಹೇಳಿದರೂ ಕೂಡ ನಿಮ್ಮನ್ನು ಮಂತ್ರಿ ಮಾಡುವುದಿಲ್ಲ.

**ಡಾ|| ಎ.ಹೆಚ್. ಶಿವಯೋಗಿ ಸ್ವಾಮಿ:–** ಮಾನ್ಯ ವೀರಣ್ಣನವರೇ, ನಾನು ಇಲ್ಲಿ ಆರಾಮಾಗಿದ್ದೇನೆ. ನಾನು ಇಲ್ಲಿ ಆರಾಮವಾಗಿ ಇರುವುದು ನಿಮಗೆ ಸಮಾಧಾನವಿಲ್ಲವೇ? ಈ ಆತ್ಮ ಎನ್ನುವ ವಿಚಾರ ಬಂದದ್ದರಿಂದ ನಾನು ಶ್ರೀ ಶಂಕರಾಚಾರ್ಯರ ಒಂದು ಮಾತನ್ನು ಇಲ್ಲಿ ಹೇಳ ಬಯಸುತ್ತೇನೆ.

**"ಪುನರಪಿ ಜನನಂ ಪುನರಪಿ ಮರಣಂ**

**ಪುನರಪಿ ಜನನೀ ಜಠವೇ ಶಯನಂ**

**ಇಹ ಸಂಸಾರೆ ಬಹುದುಸ್ತಾರೆ**

**ಕೃಪಯಾ ಪಾಹೆ ಪಾಹಿ ಮುರಾರೆ**

**ಸಂಪ್ರಾಪ್ತೆ ಸನ್ನಿಹಿತೇ ಕಾಲೇ**

**ನಹಿ ನಹಿ ರಕ್ಷತಿ ಢುಪ್ರಂಸರಣೆ"** ಎಂದು ಹೇಳಿದ್ದಾರೆ.

ಅಂದರೆ, ಈ ಜೀವ ಚಕ್ರ ಎನ್ನುವುದು ಏನು ಇದೆ ಅದು ಹುಟ್ಟು ಸಾವುಗಳ ಮಧ್ಯೆ ಇದ್ದೇ ಇರುತ್ತದೆ ಎಂದು ಹೇಳಿದ್ದಾರೆ. ನಮಗೆಲ್ಲಾ ಗೊತ್ತಿರುವಂತೆ ಈ ಹುಟ್ಟು ಎನ್ನುವುದು ಅನಿಶ್ಚಿತ ನಾವು ಯಾವಾಗ ಎಲ್ಲಿ ಹುಟ್ಟುತ್ತೇವೆಂದು ನಮಗೆ ಗೊತ್ತಿಲ್ಲ. ಆದರೆ ಹುಟ್ಟಿದ ಮೇಲೆ ಸಾಯುವುದಂತೂ ನಿಶ್ಚಿತ. ಅದು ನಮಗೆಲ್ಲರಿಗೂ ತಿಳಿದಿದೆ. ಆದರೆ ಇದರ ಮಧ್ಯೆ ನಾವು ಹೇಗೆ ಇರುತ್ತೇವೆ, ಹೇಗೆ ಜೀವನ ಮಾಡುತ್ತೇವೆ ಎನ್ನುವುದು ಬಹಳ ಮುಖ್ಯ. ಆ

ದೃಷ್ಟಿಯಿಂದ ನಾವು ನಮ್ಮ ಬದುಕನ್ನು ಹೆಚ್ಚು ಅರ್ಥ ಪೂರ್ಣವನ್ನಾಗಿ ಮಾಡಿಕೊಳ್ಳಬೇಕು. ಒಬ್ಬ ಇಂಗ್ಲೀಷ್ ಕವಿ ಹೇಳುತ್ತಾನೆ. **"ನನ್ನ ವಿಧಿಯ ಒಡೆಯ ನಾನು, ನನ್ನ ಆತ್ಮದ ಕಪ್ತಾನ ನಾನು" ಎಂದು ಹೇಳುತ್ತಾನೆ**. ಅಂದರೆ ನನ್ನ ಬದುಕಿಗೆ ನಾನು captain ಎಂದು ಅರ್ಥ. ಅಂದರೆ ಇಲ್ಲಿ ಇರುವಂತಹ ಗಣೇಶ್ ಕಾರ್ಣಿಕ್ ಕ್ಯಾಪ್ಟನ್ ಅಲ್ಲ. ನಮ್ಮ ಬದುಕಿನ ಬಗ್ಗೆ ನಮ್ಮ ಜೀವನದ ಆಗು ಹೋಗುಗಳ ಬಗ್ಗೆ ನಿರ್ಣಯ ಮಾಡತಕ್ಕಂಥಹ ಹಕ್ಕು ನನ್ನದು ಎಂದು ಅರ್ಥ. ಯಾವ ವ್ಯಕ್ತಿ ಜೀವನ ಮಾಡುತ್ತಾನೆ ಯಾವಾಗ ಅವನಿಗೆ ಬೇಕು ಎಂದು ಅನ್ನಿಸುತ್ತದೆ ಯಾವಾಗ ಅವನಿಗೆ ಜೀವನ ಸಾಕು ಅನ್ನಿಸುತ್ತದೆ ಯಾವಾಗ ಅದು ಅವಶ್ಯಕತೆ ಇದೆ ಎಂದು ಅನ್ನಿಸುತ್ತದೆ ಆಗ ಅವನು ತನ್ನ ಪ್ರಾಣವನ್ನು ತ್ಯಜಿಸುವುದಕ್ಕೆ ತೆಗೆದುಕೊಳ್ಳತಕ್ಕಂಥಹ ನಿರ್ಣಯ. ಅದು ಅವರ ಹಕ್ಕು ಎನ್ನುವ ದೃಷ್ಟಿಯಿಂದ ಯೋಚನೆ ಮಾಡಬೇಕಾಗುತ್ತದೆ. ಈ ರೀತಿಯ ಸ್ವ ಇಚ್ಛಾ ಮರಣ ಅಥವಾ ದಯಾ ಮರಣ ಎನ್ನುವ ಕಾನೂನು ಇದೆ ಇದು ಅನೇಕ ದೇಶಗಳಲ್ಲಿ ಈಗಾಗಲೇ ಜಾರಿಯಲ್ಲಿ ಇದೆ. ಲಂಡನ್‌ನಲ್ಲಿ, ಇತ್ತೀಚೆಗೆ U.K. ನಲ್ಲಿ ಒಬ್ಬ 13 ವರ್ಷದ ಬಾಲೆ ಕ್ಯಾನ್ಸರ್‌ನಿಂದ suffer ಆಗುತ್ತಿದ್ದು ಅವಳು ನಾನು ಮೆಡಿಸನ್ ಅನ್ನು ತೆಗೆದುಕೊಳ್ಳಬಾರದು ನಾನು ತೀರಿಕೊಳ್ಳಬೇಕು ಎಂದು ಕೋರ್ಟಿನಲ್ಲಿ ಅರ್ಜಿಯನ್ನು ಮೂವ್ ಮಾಡಿ ಹೇಳಿದಳು. ಆಗ ಕೋರ್ಟಿನಲ್ಲಿ dignity of death ಎಂದು ನಾನು ಆಗಲೇ ಏನು ಶಬ್ದವನ್ನು ಉಪಯೋಗ ಮಾಡಿದೆ, ಅದರಂತೆ ಅವಳಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಅದೇ ರೀತಿ Holland, Belgium, ಅಮೆರಿಕಾದ Oregon ರಾಜ್ಯದಲ್ಲಿ, Mexico, Jakarta, Australia, Switzerland, South Korea, ಇಲ್ಲೆಲ್ಲಾ ದಯಾ ಮರಣ/ ಸ್ವ ಇಚ್ಛಾ ಮರಣ ಎಂಬುದರ ಬಗ್ಗೆ ಅಲ್ಲೆಲ್ಲಾ ಕಾನೂನುಗಳು ಆಗಿವೆ. ನಾವು ಈಗ 21ನೇ ಶತಮಾನದಲ್ಲಿ ಇದರ ಬಗ್ಗೆ ಮಾತನಾಡುತ್ತಿದ್ದೇವೆ. ಆದರೆ 19ನೇ ಶತಮಾನದಲ್ಲಿಯೇ North America and Europe ಗಳಲ್ಲಿ ಇದರ ಬಗ್ಗೆ ಸಾರ್ವಜನಿಕವಾಗಿ ಸುಧೀರ್ಘವಾದ ಚರ್ಚೆ ನಡೆದಿದೆ. ಆಗಲೇ ಒಂದು ನಿರ್ಣಯಕ್ಕೆ ಬಂದಿದ್ದರು. 1906ರಲ್ಲಿ ಅಮೆರಿಕಾದ Ohio and Nova State ಗಳಲ್ಲಿ ಈ Euthanasia ಗೆ ಇನ್ನೊಂದು ಪದ PAS

(Physician Assisted Suicide) ಎಂದು ಅಲ್ಲಿ ಉಪಯೋಗಿಸಿದ್ದಾರೆ. ಆ ಒಂದು ಹೆಸರಿನಲ್ಲಿ ಆಗಲೇ Ohio ದಲ್ಲಿ 1906ನೇ ಇಸವಿಯಲ್ಲಿ ಚರ್ಚೆಯಾಗಿ, ನಿರ್ಣಯವಾಗಿ ಅವತ್ತಿನ ದಿವಸ ದಯಾಮರಣ ರೂಢಿಯಲ್ಲಿ ಬಂದಿದೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಈ ದಯಮರಣದ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ತೀರ್ಪು ನೀಡಿದೆ. ಇದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಸರಿಯಲ್ಲ. Already the Court has given its verdict. ಈ ವಿಷಯದ ಬಗ್ಗೆ ತಾವು ಯಾವ ರೀತಿಯಾಗಿ ಚರ್ಚೆಗೆ ಅವಕಾಶ ಮಾಡಿದ್ದೀರಿ ಎನ್ನುವುದೇ ನನಗೆ ಆಶ್ಚರ್ಯವೆನ್ನಿಸುತ್ತಿದೆ.

**ಡಾ|| ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೆ, 2011ನೇ ಇಸವಿಯಲ್ಲಿ ಸುಪ್ರೀಂ ಕೋರ್ಟ್ ಅರುಣ ಶಾನುಭೋಗ್ ಕೇಸ್‌ನಲ್ಲಿ ಏನು ತೀರ್ಪನ್ನು ಕೊಟ್ಟಿದೆ ಎನ್ನುವುದರ ಬಗ್ಗೆಯೂ ಕೂಡ ನಾನು ಮುಂದೆ ಹೇಳುತ್ತೇನೆ. ಅದಕ್ಕೆ ನಾನು ಪ್ರಾರಂಭದಲ್ಲಿಯೇ ಏನು ಹೇಳಿದ್ದು ಎಂದರೆ Euthanasia ಒಳಗೆ voluntary Euthanasia ಯದ ವಿಷಯ ಏನಿದೆ. ಸ್ವ ಇಚ್ಛಾ ಮರಣದ ಬಗ್ಗೆ ಸುಪ್ರೀಂ ಕೋರ್ಟ್ ಏನು ತೀರ್ಪನ್ನು ಕೊಟ್ಟಿಲ್ಲ. ಅವರು ಏನಿರುವಂಥದ್ದು Euthanasia ಬಗ್ಗೆ ಯಾವುದು Passive Euthanasia ಎಂದು ಹೇಳುತ್ತೇವೆಯೋ life support ಅನ್ನು ತೆಗೆಯುವುದರ ಮೂಲಕ ಯಾರು ತುಂಬ terminal stages ನಲ್ಲಿ ಕೋಮದಲ್ಲಿರುವಂತಹ ರೋಗಿಗಳಿಗೆ, ಅವರು they can leave the body ಅನ್ನುವುದಕ್ಕೆ ಏನು ಮಾಡಬೇಕು ಎನ್ನುವುದರ ಬಗ್ಗೆ ಹೇಳಿದ್ದಾರೆ. ಆ ದೃಷ್ಟಿಯಲ್ಲಿ ಮಾತ್ರ ಹೇಳಿದ್ದಾರೆ. Passive Euthanasia ಆಗುತ್ತದೆ. But, I am stressing more on Voluntary Euthanasia. Euthanasia ಇದರ ಒಂದು ಮಹತ್ವವನ್ನು ಮನಗೊಂಡಂತೆ ಅನೇಕ ಸಂಘ ಸಂಸ್ಥೆಗಳು, ಬೇರೆ ಬೇರೆ ದೇಶಗಳಲ್ಲಿ ಹುಟ್ಟಿಕೊಂಡಿರುವಂಥದ್ದು. 1935ನೇ ಇಸವಿಯಲ್ಲಿ England ಒಳಗೆ, 1937 Switzerland ನಲ್ಲಿ, 1938ನೇ ಇಸವಿಯಲ್ಲಿ America ದೇಶದಲ್ಲಿ ಅಲ್ಲಿ ಎಲ್ಲಾ ಕಡೆ ಈ ರೀತಿಯ Euthanasia Societies ಎಂದು ಸಾರ್ವಜನಿಕ ಸಂಸ್ಥೆಗಳು

ಹುಟ್ಟಿಕೊಂಡಿದೆ. ಇದಕ್ಕಿಂತಲೂ ಮೊದಲು ಆ ದೇಶಗಳಲ್ಲಿಯೂ ಕೂಡ Euthanasia ರೂಢಿಯಲ್ಲಿ ಇರಲಿಲ್ಲ. ಹಾಗಾಗಿ ನಾನು ಇವುಗಳನ್ನು ಉಲ್ಲೇಖ ಮಾಡುತ್ತಿದ್ದೇನೆಂದರೆ, ಇವತ್ತು ನಾವು ಮುಂದುವರೆದಂತಹ ದೇಶಗಳು ಎಂದು ತಿಳಿದುಕೊಂಡಂತಹ ದೇಶಗಳಲ್ಲಿ ಈಗಾಗಲೇ 70–80 ವರ್ಷಗಳ ಹಿಂದೆಯೇ ಅವತ್ತಿನ ಕಾಲದಲ್ಲಿಯೇ ಒಂದು ಬಹಳ ಪ್ರಭಾವಿಯಾದಂತಹ ಪರಿಣಾಮಕಾರಿಯಾದಂತಹ ಒಂದು ಕಾನೂನನ್ನು ಏನು ಮಾಡಿದ್ದಾರೆ, ಅದರ ಹಿನ್ನಲೆಯಲ್ಲಿ ಇವತ್ತಿನ ದಿವಸ ನಾವು ಯೋಚನೆ ಮಾಡಬಹುದು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. 1996ನಲ್ಲಿ ಆಸ್ಟ್ರೇಲಿಯದಲ್ಲಿ, ಉತ್ತರ ಪ್ರಾಂತ್ಯದೊಳಗೆ "The Rights of the Terminally III Act 1996" ಎನ್ನುವಂತಹ ಒಂದು Act ಅನ್ನು pass ಮಾಡಿ, ಅದರ ಹಿನ್ನಲೆಯಲ್ಲಿ ನಾಲ್ಕು ಜನರು ಈ ಕಾನೂನಿನ ಸಹಾಯವನ್ನು ಪಡೆದುಕೊಂಡು ಅವರು ತಮ್ಮ ಅಂತ್ಯವನ್ನು ಆಸ್ಟ್ರೇಲಿಯದಲ್ಲಿ ಕಂಡರು. 2009ನೇ ಇಸವಿಯಲ್ಲಿ ಒಬ್ಬ quadriplegia ದಿಂದ ನರಳುತಿದ್ದ. Quadriplegia ಎಂದರೆ ತಮಗೆ ಗೊತ್ತಿದೆ. ನಮ್ಮಲ್ಲಿ ಅನೇಕರು ಅದನ್ನು ನೋಡಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಇತ್ತಿಚೆಗೆ Sanjay Leela Bhansali ಯವರು ತೆಗೆದಂತಹ Guzaarish ಎನ್ನುವಂತಹ ಒಂದು ಒಳ್ಳೆಯ ಚಿತ್ರ ಇತ್ತೀಚೆಗೆ ಬಂದಿತ್ತು. ಆ ಚಿತ್ರದಲ್ಲಿ Hrithik Roshan ಪಾತ್ರವನ್ನು ಮಾಡಿದ್ದರು. ಯಾವ ವ್ಯಕ್ತಿ ತನ್ನ ಕೈ ಮತ್ತು ಕಾಲುಗಳನ್ನು ಅಲುಗಾಡಿಸಲೂ ಕೂಡ ಆಗದೇ ಇರುವಂತಹ ಸ್ಥಿತಿಯಲ್ಲಿರುತ್ತಾನೆ. Quadriplegic ಎಂದು ಹೇಳಬೇಕಾದರೆ ನಮ್ಮ ಡಾಕ್ಟರ್‌ಗಳಿಗೆ ಗೊತ್ತಿದೆ. Hemeplegia partial ಆಗಿ ಆಗುತ್ತದೆ. Quadriplegia ಎಂದಾಗ ದೇಹದ ಅಂಗಾಂಗಳನ್ನೇ ಚಲನೆ ಮಾಡುವುದಕ್ಕಾಗುವುದಿಲ್ಲ. ಮೂಗಿನ ಮೇಲೆ ಒಂದು ಸೊಳ್ಳೆ ಅಥವಾ ನೊಣ ಕುಳಿತುಕೊಂಡರೆ ಅದನ್ನು ಕೈಯಿಂದ ಹೊಡೆದು ಅಥವಾ ಓಡಿಸುವುದಕ್ಕಾಗುವುದಿಲ್ಲ. ಅಂದರೆ ಈ ವಿಷಯವನ್ನು ಏಕೆ ಬಹಳ ಗಂಭೀರವಾಗಿ ಪರಿಗಣಿಸಬೇಕೆಂದು ವಿನಂತಿ ಮಾಡುವುದೆಂದರೆ, ಆ ಮಾನಸಿಕ ಸ್ಥಿತಿಯನ್ನು ನಾವೇನಾದರು ಅನುಭವಿಸಿದರೆ, ನಮ್ಮಲ್ಲಿ ನಮ್ಮ ಕೈ ಕಾಲುಗಳನ್ನೇ ಅಲ್ಲಾಡಿಸುವುದಕ್ಕೆ ಆಗದೇ

ಇರುವಂತಹ ಸ್ಥಿತಿ ಬಂದರೆ, ಅಂತಹ ಸಂದರ್ಭದಲ್ಲಿ ನಮ್ಮ ಜೀವನ ಎಷ್ಟು ದುಸ್ತರವಾಗುತ್ತದೆ, ಎಷ್ಟು ದಯನೀಯವಾಗುತ್ತದೆ, ಎಷ್ಟು ಮಾಸಿಕವಾಗಿ ಹಿಂಸೆಯಾಗುತ್ತದೆ ಎನ್ನುವುದಕ್ಕೆ ಆ ಚಿತ್ರದಲ್ಲಿ ಒಂದು ದೃಶ್ಯ ಬರುತ್ತದೆ. Euthanasia ಗೆ ಇವರು propose ಮಾಡಿಕೊಳ್ಳುತ್ತಾರೆ. ಯಾರು defence council ಇರುತ್ತಾರೆ ಆ ವಕೀಲರು ಬಂದು ಇದನ್ನು allow ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದಾಗ, ಆ ರೋಗಿ ಒಂದು ಸಣ್ಣ ಪರೀಕ್ಷೆಯನ್ನು ಕೊಡುತ್ತಾನೆ. ಯಾವ ವಕೀಲರು Euthansia ಗೆ ಅವಕಾಶವನ್ನು ಕೊಡಬಾರದೆಂದು ವಕೀಲರು ವಾದವನ್ನು ಮಾಡುತ್ತಿರುತ್ತಾರೆಯೋ ಅವರಿಗೆ ಒಂದು ಸಣ್ಣ ಬಾಕ್ಸ್ ಒಳಗೆ ಇಟ್ಟು ಬಾಯಿ ಮತ್ತು ಮೂಗನ್ನು ಮುಚ್ಚಿಕೊಂಡು ಮೂರು ನಿಮಿಷ ಇರು ಎಂದು ಹೇಳುತ್ತಾನೆ. ಆ ವಕೀಲರಿಗೆ ಇರುವುದಕ್ಕಾಗುವುದಿಲ್ಲ. Forcibly ಅವರು open ಮಾಡಿಕೊಂಡು ಹೊರಗೆ ಬರುತ್ತಾರೆ. ಆ ರೋಗಿ ನ್ಯಾಯಾಧೀಶರಿಗೆ ಅವಾಗ ಹೇಳುತ್ತಾರೆ, ಯಾರು ಮೂರು ನಿಮಿಷ ಮೂಗು ಮತ್ತು ಬಾಯಿಯನ್ನು ಮುಚ್ಚಿಕೊಂಡು ಈ ಬಾಕ್ಸ್ ಒಳಗೆ ಇರುವುದಕ್ಕಾಗುವುದಿಲ್ಲವೋ ನಾನು 10–15 ವರ್ಷಗಳಿಂದ ಇದೇ ರೀತಿಯಾಗಿದ್ದಾನೆ, ದೇಹದ ಒಂದು ಅಂಗವನ್ನೂ ಕೂಡ move ಮಾಡುವುದಕ್ಕಾಗುವುದಿಲ್ಲ ಅಂಥದ್ದರಲ್ಲಿ ನಾವು ಹೇಗೆ ಬದುಕಬೇಕು? ಅಂತಹ ವ್ಯಕ್ತಿಗಳಿಗೆ Euthanasia ಕೊಡಬೇಕೋ, ಬೇಡವೋ? ಇದು ಬಹಳ ಪ್ರಮುಖವಾದಂತಹ ಸಂಗತಿ ಎನ್ನುವ ದೃಷ್ಟಿಯಿಂದ ಇದರ ಬಗ್ಗೆ ವ್ಯಕ್ತಿಯಾಗಲಿ, ಯಾರು ಈ ರೀತಿಯ terminal stages ನಲ್ಲಿ ಇರುತ್ತಾರೋ ಅಂಥ ವ್ಯಕ್ತಿಗಳ parents ಯಾರು ಇರುತ್ತಾರೆ. ತಂದೆ, ತಾಯಿ ಅಥವಾ ಪೋಷಕರು ಇರುತ್ತಾರೆ. ಅವರನ್ನು ಯಾರು ನೋಡಿಕೊಳ್ಳುವವರಿರುತ್ತಾರೆ ಅವರ ಮಾನಸಿಕ ಸ್ಥಿತಿ, ಅವರು ಪ್ರತಿಕ್ಷಣ ಅವರು ಸಾಯುತ್ತಿರುತ್ತಾರೆ. ಅರುಣ ಶ್ಯಾನುಬೋಗ್ ದೃಷ್ಟಿಯಲ್ಲಿಯೂ ಕೂಡ ಅದೇ ಆಗಿದೆ. ಹಾಗಾಗಿಯೇ ಅವರು ಸುಪ್ರೀಂ ಕೋರ್ಟ್ ಮೋರೆ ಹೋದರು. ಹೀಗೆ ಆ ವ್ಯಕ್ತಿಗಳ ವಿಚಾರವನ್ನು ಯೋಚನೆ ಮಾಡಿದರೆ, ಬಹುಶಃ ಇವತ್ತಿನ ಈ ಒಂದು ವಿಷಯದ ಮಹತ್ವದ ಬಗ್ಗೆ ಗಮನಿಸಬಹುದು, ಅರ್ಥ ಮಾಡಿಕೊಳ್ಳಬಹುದು ಎನ್ನುವಂತಹ

ದೃಷ್ಟಿಯಿಂದ ಹೇಳುತ್ತಿದ್ದೇನೆ. 1957ನೇ ಇಸವಿಯಲ್ಲಿ England ದೇಶದಲ್ಲಿ, 1993 Netherlands ನಲ್ಲಿ, 2002 Belgium ದಲ್ಲಿ, 1977ನೇ ಇಸವಿಯಲ್ಲಿ ಅಮೇರಿಕಾದ California ದಲ್ಲಿ, 1994ನೇ ಇಸವಿಯಲ್ಲಿ Oregon State ನಲ್ಲಿ, 2005ನೇ ಇಸವಿಯಲ್ಲಿ Florida ದಲ್ಲಿ ಈ ಎಲ್ಲಾ ರಾಜ್ಯಗಳಲ್ಲಿ ಮತ್ತು ಮುಂದುವರೆದ ರಾಷ್ಟ್ರಗಳಲ್ಲಿ Euthanasia ಎನ್ನುವಂತಹ ಕಾನೂನನ್ನು ಮಾಡಿದ್ದಾರೆ. Passive Euthanasia, ಅಲ್ಲಿಗೆ ಬರುತ್ತೇನೆ. ಇದರ ಬಗ್ಗೆ ವಿವರವಾಗಿ ಮಾತನಾಡಬೇಕಾಗಿದೆ. ಪುಣ್ಯಕ್ಕೆ ಇವತ್ತು ಅಪರೂಪಕ್ಕೆ ನನಗೆ ಮಾನ್ಯ ಸಭಾಪತಿಯವರು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಮಾತನಾಡುತ್ತಿದ್ದೇನೆ. ನಾನು ಹೆಚ್ಚು ಮಾತನಾಡುವುದಿಲ್ಲವೆಂದು ತಮಗೆ ಗೊತ್ತಿದೆ. ಅದನ್ನು ನಾವೆಲ್ಲರೂ ಸೇರಿ ಯೋಚನೆ ಮಾಡೋಣ. ನಾನು ವಿಷಯವನ್ನು ಮಾತ್ರ ಪ್ರಸ್ತಾಪ ಮಾಡುತ್ತಿದ್ದೇನೆ. Chaina ಮತ್ತು Hong Kong ನಲ್ಲಿ ಈಗ ಬರತಕ್ಕಂತಹ ಶತಮಾನದಲ್ಲಿ ಭಾರತದ ಶತಮಾನವೆಂದು ಅಂದುಕೊಳ್ಳುತ್ತಿದ್ದೇವೆ. ಆದರೆ ಈ Scientific Advancedments ನಿಂದ ನಮಗೆ ತಟ್ಟಿರುವಂಥದ್ದು ಚೈನಾದಿಂದ ಎಂದು ಗೊತ್ತಾಗುತ್ತಿದೆ. ಅಂತಹ ಒಂದು ಪ್ರಗತಿ ಪರವಾದಂತಹ ದಾಪುಗಾಲನ್ನು ಹಾಕುತ್ತಿರುವಂತಹ Chaina ಮತ್ತು Hong Kong ಅಲ್ಲಿ ಎಲ್ಲಾ Euthanasia ಬಗ್ಗೆ ಬಹಳಷ್ಟು positive ಆಗಿ ಜನಗಳಿಗೆ ಸಕರಾತ್ಮಕವಾಗಿ ಅಭಿಪ್ರಾಯ ಮೂಡುತ್ತಿದೆ. ಹೇಗೆ Voluntary Euthanasia ಎನ್ನುವುದು ಏನಿದೆ, ಇದರ ಉದ್ದೇಶ ಏನೆಂದರೆ, ಏಕೆ ಇದನ್ನು ಏಕೆ ಜಾರಿಗೆ ತರಬೇಕು ಎನ್ನುವುದರ ಬಗ್ಗೆ ಕೆಲವು ಅಂಶಗಳನ್ನು ತರಬೇಕಾಗಿದೆ. ಬದುಕುವುದಕ್ಕೆ ಯಾವ ರೀತಿಯಾಗಿ ಹಕ್ಕು ಇದೆಯೋ, ಅದೇ ರೀತಿ ಸಾಯುವುದಕ್ಕೂ ಹಕ್ಕು ಇರಬೇಕು ಎನ್ನುವುದು ಮೊದಲನೆಯದು. ಸ್ವತಂತ್ರವಾಗಿ, ಆರೋಗ್ಯಕರವಾಗಿ ಬದುಕುವುದಕ್ಕೆ ಸಾಧ್ಯವೇ ಇಲ್ಲ ಎಂದು ಹೇಳುವಂತಹ ವ್ಯಕ್ತಿ ಅವನ ಜೀವನವನ್ನು ಅವನೇ ಗೌರವಯುತವಾಗಿ ಅಂತ್ಯಗೊಳಿಸಿಕೊಳ್ಳುವುದಕ್ಕೆ ಗೌರವಯುತವಾದಂತಹ ಮರಣದ ಹಕ್ಕನ್ನು ನೀಡುವಂಥದ್ದು ಆಗಬೇಕು. ವಾಸಿಯಾಗದಂತಹ, ಮಾರಣಾಂತಿಕ ರೋಗಿಗಳಿಂದ ಏನು ನರಳುತ್ತಿರುತ್ತಾರೆ ಅವರುಗಳಿಗೆ ಸಾಯಬೇಕೆಂದು

ಅನಿಸಿದಾಗ ಆ ರೀತಿಯಾಗಿ ನಿರ್ಣಯವನ್ನು ಮಾಡುವುದಕ್ಕೆ Euthanasia ಕ್ಕೆ ಅವಕಾಶ ಕೊಡಬೇಕು. ವಿಶೇಷವಾಗಿ ಇವತ್ತಿನ ದಿವಸ ಬೆಳಿಗ್ಗೆ ನಾವು ಮೆಡಿಸನ್‌ಗೆ ಸಂಬಂಧಪಟ್ಟಂತೆ ಔಷಧಿಗಳಿಗೆ ಸಂಬಂಧಪಟ್ಟಂತೆ ಸ್ವಲ್ಪ ಚರ್ಚೆಯನ್ನು ಮಾಡಿದ್ದೇವೆ. ಇವತ್ತು ಔಷಧಿಗಳು ಎಷ್ಟು ದುಬಾರಿಯಾಗಿದೆ ಎಂದರೆ, ಕೆಲವೊಂದು ಸಾರಿ ನಮಗೆ ಗೊತ್ತಾಗುತ್ತದೆ. ಆ ರೋಗಿ Terminal stage ನಲ್ಲಿದ್ದಾರೆ ಆ ರೋಗವನ್ನು ಯಾವುದೇ ಕಾರಣಕ್ಕೂ ವಾಸಿಯಾಗುವುದಿಲ್ಲವೆಂದು ಗೊತ್ತಾಗುತ್ತದೆ. ಕೋಮದಲ್ಲಿರುವಂತಹ ರೋಗಿ. ಅವರನ್ನು treat ಮಾಡುವಂಥದ್ದನ್ನು ನಾವು ಮಾಡುತ್ತಲೇ ಹೋಗಬೇಕಾಗುತ್ತದೆ. Terminal stage ನಲ್ಲಿರುವಾಗ ಆ ರೋಗಿಯ ಟ್ರೀಟ್‌ಮೆಂಟ್‌ಗೆ ಏನು ಹಣವನ್ನು ಖರ್ಚು ಮಾಡಬೇಕು, ಆ ಆರ್ಥಿಕ ಹೊರೆಯನ್ನು ಎಲ್ಲರೂ ಸಹಿಸಿಕೊಳ್ಳುವಂತಹ ಶಕ್ತಿ ಇವತ್ತಿನ ದಿವಸ ಎಷ್ಟು ಜನರಿಗೆ ಇರುತ್ತದೆ? ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಇಷ್ಟೆಲ್ಲಾ ಹಣವನ್ನು ಖರ್ಚು ಮಾಡಿದ ಮೇಲೇಯೂ ಕೂಡ ರೋಗಿ ಬದುಕುತ್ತಾನೆಯೇ? ಬದುಕುವುದಿಲ್ಲ. ಅಂತಹ ಸಂದರ್ಭದಲ್ಲಿ ಈ Voluntary Euthanasia ಏನಿದೆ ಅದರ ಬಗ್ಗೆ ಗಮನಿಸಬೇಕು. ವಿಶೇಷವಾಗಿ ಈ ವಿಷಯವನ್ನು ಇಲ್ಲಿ ಉಲ್ಲೇಖ ಮಾಡಿ ಇಲ್ಲಿ ತರುವುದಕ್ಕೆ ಮುಖ್ಯ ಕಾರಣ ಎಂದರೆ, ನಮ್ಮ ದಾವಣಗೆರೆಯಲ್ಲಿ ಶ್ರೀ ಹೆಚ್.ಡಿ.ಕರಿಬಸಮ್ಮ ಎನ್ನುವಂತಹ ಟೀಚರ್ ಇದ್ದಾರೆ. ಕಳೆದ ಅಧಿವೇಶನದಲ್ಲಿ ಮಾನ್ಯ ಬಸವರಾಜ ಹೊರಟ್ಟಿಯವರು Euthanasia ಗೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡಿದ್ದಾರೆ. ಶ್ರೀ ಕೆ.ಮಲ್ಲಪ್ಪ ಎಂದು ಮಾಯಸಂದ್ರ ಕ್ಷೇತ್ರ ಎಂಎಲ್‌ಎ ಇದ್ದರು, ಒಂದು ಅವಧಿಯಲ್ಲಿ ವಿಧಾನ ಪರಿಷತ್ತಿನಲ್ಲಿಯೂ ಕೂಡ ಶಾಸಕರಾಗಿದ್ದರು. ಅವರು ಕೂಡ ಈ ವಿಷಯವನ್ನು ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಶ್ರೀಮತಿ ಕರಿಬಸಮ್ಮ ಟೀಚರ್‌ರವರಿಗೆ slip disc ಆಗಿ ಸಮಸ್ಯೆಯಾಗಿದೆ. ಅದರ ಪರಿಣಾಮ ಇದನ್ನು ಎಷ್ಟು ಗಂಭೀರವಾಗಿ ತೆಗೆದುಕೊಂಡಿದ್ದಾರೆಂದರೆ, ಈ Voluntary Euthanasia ಬಗ್ಗೆ ಒಂದು ಆದೋಲನವನ್ನೇ ಮಾಡಿದ್ದಾರೆ. ನಿಮಗೆ ಆಶ್ಚರ್ಯವಾಗಬಹುದು. ನಾನು ಮಾಧ್ಯಮಿಕ ಶಾಲೆಯಲ್ಲಿ ಓದುವಾಗ ಅವರು

ನನಗೆ ಹಿಂದಿ ವಿಷಯದಲ್ಲಿ ಟೀಚರ್ ಆಗಿದ್ದರು. ದಾವಣಗೆರೆಯಲ್ಲಿ Euthanasia ಬಗ್ಗೆ ಒಂದು ಸೆಮಿನಾರ್ ಮಾಡಿದರು. ಶ್ರೀಮತಿ ನಾಗಮ್ಮ ಕೇಶವಮೂರ್ತಿ, ಹಿಂದಿನ ಶಿಕ್ಷಣ ಸಚಿವರು ಸೆಮಿನಾರ್ ಅನ್ನು ಮಾಡಿದರು. ಅಲ್ಲಿ ತುಂಬ ಒಳ್ಳೆಯ ಬೌದ್ಧಿಕವಾದಂತಹ ಚರ್ಚೆ ಆ ಸಭೆಯಲ್ಲಿ ಆಗಿತ್ತು.ಅವರು 10,000 ಜನರ ಸಹಿಯನ್ನು ಇದರ ಬಗ್ಗೆ ಸಂಗ್ರಹ ಮಾಡಿದ್ದಾರೆ. ಆಶ್ಚರ್ಯವಾಗಬಹುದು. Euthanasia ಬಗ್ಗೆ ಕಗ್ಗಂಟು ಆಗಿರುವಂತಹ ಈ ಕಾನೂನಿಗೆ ಅನುಮತಿ ನೀಡಲು ಕಾನೂನು ಆಯೋಗ ಶಿಫಾರಸ್ಸು ಮಾಡಿದ್ದು, ಈಗಾಗಲೇ recommend ಮಾಡಿದ್ದಾರೆ. ಅದರ reference ಹೇಳುತ್ತೇನೆ. ಸುಪ್ರೀಂ ಕೋರ್ಟ್ ಈ ವಿಚಾರವನ್ನು ವಿಚಾರಣೆಗೆ ಕೈಗೆತ್ತಿಕೊಂಡಿದೆ. ಜನಾಭಿಪ್ರಾಯ ಕಾನೂನಿಗಿಂತಲೂ ಹೆಚ್ಚು ಬಲಯುತವಾದುದ್ದು. ಹಣ ಬಲ, ಜನ ಬಲ ಇಲ್ಲದೇ ಮಾರಣಾಂತಿಕ ರೋಗಗಳಿಗೆ ನರಳುತ್ತಾ ಸಾವು ಬರಬಾರದೇ ಎಂದು ಅಪ ಅಭಿಸುತ್ತಾ, ಸಾವಿನ ಕದ ತಟ್ಟುತ್ತಿರುವ ವೃದ್ಧರಿಗಾಗಿ ಈ ಕಾಯ್ದೆಯ ಅವಶ್ಯಕತೆ ಇದೆ. ತಮ್ಮ ಅಮೂಲ್ಯವಾದ ಸಹಿಯೊಂದಿಗೆ ಬೆಂಬಲ ಕೊಡಬೇಕೆಂದು ಪ್ರಾರ್ಥಿಸುತ್ತೇನೆ ಎಂದು ಶ್ರೀಮತಿ ಕರಿಬಸಮ್ಮ ಟೀಚರ್ ಅವರು recommend ಮಾಡಿದರೆ ಸುಮಾರು 10,000 ಜನರು ಇದಕ್ಕೆ ಬೆಂಬಲವಾಗಿ ಸಹಿ ಹಾಕಿದ್ದಾರೆ. ಇದು ಇನ್ನು ಮತ್ತೆ ಮುಂದುವರೆಯುತ್ತಿದೆ. ಆ ಅಭಿಯಾನದೊಳಗೆ ಅವರು ಬಹಳ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಯಾರು ನಾವು medical terminology ಒಳಗೆ vegetative ಎಂದು ಹೇಳುತ್ತೇವೆ. ಯಾರಿಗೆ ದೈಹಿಕವಾಗಿ ಅಥವಾ brain dead ಆಗಿರುತ್ತದೆ ಅಂಥವರಿಗೆ ಅವರು ಯಾವುದೇ ರೀತಿಯಾಗಿ ಉಪಯುಕ್ತವಾಗುವುದಿಲ್ಲ ಎನ್ನುವಂತಹ ಸಂದರ್ಭದಲ್ಲಿದಾಗ ಅವರಿಗೆ vegetative ಎಂದು ಹೇಳುತ್ತೇವೆ. ಆ ರೀತಿಯ vegetative stageನಲ್ಲಿ ಇರತಕ್ಕಂತಹ ವ್ಯಕ್ತಿಗಳಿಗೆ ಇದು ಬಹಳಷ್ಟು ಪ್ರಮುಖವಾಗಿ ಬೇಕಾಗಿರತಕ್ಕಂತಹ ಸಂಗತಿ. ಹಾಗಾಗಿ ಸ್ಥಿತಿ ನೋಡಿ, ಸಹಕರಿಸುವುದಕ್ಕೂ ಆಗದೇ ಇರತಕ್ಕಂತಹ ಒಂದು ರೀತಿಯಲ್ಲಿ ಸಹಾಯ ಮಾಡಿ ಸರಿಪಡಿಸುವುದಕ್ಕಾಗದೇ ಇರತಕ್ಕಂತಹ ಸ್ಥಿತಿಯೊಳಗೆ ಡಾಕ್ಟರ್‌ಗಳು ಕೂಡ many a time they plead helplessness

ಎಂದು ನನಗನ್ನಿಸುತ್ತದೆ. ಅದು ಇತ್ತೀಚೆಗೆ 2008ನೇ ಇಸವಿಯಲ್ಲಿ ನಾನು ಹೇಳಿದೆ ಕಾನೂನು ಆಯೋಗ ಕೇಂದ್ರ ಸರ್ಕಾರಕ್ಕೆ Euthanasia ವನ್ನು legalise ಮಾಡಬೇಕೆಂದು ಶಿಫಾರಸ್ಸನ್ನು ಮಾಡಿದೆ. ದಿನಾಂಕ 04.07.2008ನೇ ಇಸವಿಯಲ್ಲಿ ಪತ್ರಿಕೆಗಳಲ್ಲಿ ಇದರ ಬಗ್ಗೆ ವರದಿಯಾಗಿದೆ ಕೇಂದ್ರ ಸರ್ಕಾರಕ್ಕೆ ಕಾನೂನು ಆಯೋಗ ಇಚ್ಛಾ ಮರಣ ಅಥವಾ ದಯಾ ಮರಣ ಇದನ್ನು ಜಾರಿಗೆ ತರುವುದರ ಬಗ್ಗೆ ನಿರ್ಣಯಿಸಬೇಕೆಂದು ಒಂದು ಶಿಫಾರಸ್ಸನ್ನು ಕೊಟ್ಟಿದೆ. ದಿನಾಂಕ 31.08.2003ನೇ ಇಸವಿಯಲ್ಲಿ Indian Express ಪತ್ರಿಕೆಯಲ್ಲಿ ಒಂದು internet poll ಅನ್ನು ಮಾಡಿದೆ. ಅವರು ಪ್ರಶ್ನೆ ಏನು ಕೇಳಿದ್ದರು ಎಂದರೆ, Should mercy killing be allowed in India? ಎನ್ನತಕ್ಕಂತಹ ಪ್ರಶ್ನೆಗೆ 55.88% ಹೌದು ಉತ್ತರವನ್ನು ಕೊಟ್ಟಿದ್ದಾರೆ. 35.83% ಬೇಡವೆಂದು ಹೇಳಿದ್ದಾರೆ. ಇನ್ನು 8.27% ಯಾವುದೇ ರೀತಿಯಲ್ಲಿ we do not know ಎನ್ನುವಂತಹ ರೀತಿಯಲ್ಲಿ ಉತ್ತರವನ್ನು ಬೆಂಗಳೂರಿನಲ್ಲಿರುವವರೇ ಹೇಳಿದ್ದಾರೆ. ಇದರ ಬಗ್ಗೆ ಮಾಧ್ಯಮಗಳಲ್ಲಿಯೂ ಕೂಡ ಚರ್ಚೆಯಾಗುತ್ತಿದೆ ಮತ್ತು ಸಾಮಾಜಿಕವಾಗಿಯೂ ಕೂಡ ಚರ್ಚೆಯಾಗುತ್ತಿದೆ. ಅದರಲ್ಲಿಯೂ ಇವತ್ತಿಗೂ ಕೌಟುಂಬಿಕ ವ್ಯವಸ್ಥೆಗಳು ಎಷ್ಟು ಶಿಥಿಲವಾಗಿದೆ ಎನ್ನುವುದನ್ನು ನಾವು ಗಮನಿಸುತ್ತಿದ್ದೇವೆ. ಬಹುಶಃ ಇವತ್ತು ಎಲ್ಲಾ ಮನೆಗಳಲ್ಲಿ ಒಂದು ಎರಡು ಮಕ್ಕಳುಗಳು ಮಾತ್ರ ಇರುತ್ತಾರೆ. ಆ ಮಕ್ಕಳು ಡಾಕ್ಟರ್ ಅಥವಾ ಇಂಜಿನಿಯರ್ invariably ಆಗುತ್ತಾರೆ. ಸಾಮಾನ್ಯವಾಗಿ ಯಾವುದೇ ಗ್ರಾಮೀಣ ಭಾಗದಲ್ಲಿ ಆಗಲಿ ಅಥವಾ ಯಾವುದಾದರು ತಾಲ್ಲೂಕು ಕೇಂದ್ರದಲ್ಲಿ ಹೋಗಿ ನಾವು ಭೇಟಿಯಾದರೆ ನಿಮ್ಮ ಮಗ ಎಲ್ಲಿದ್ದಾರೆಂದರೆ, ವಿಪ್ರೋ ಕಂಪನಿಯಲ್ಲಿ, ಇನ್‌ಫೋಸಿಸ್ ಕಂಪನಿಯಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ ಅಲ್ಲಿಂದ ಎರಡು ವರ್ಷಕ್ಕೆ ಯಾವುದಾದರು ವಿದೇಶಕ್ಕೆ ಹೋಗಿದ್ದಾನೆ ಬರೀ ಇದನ್ನೇ ಹೇಳುತ್ತಾರೆ. ಮನೆಯೊಳಗೆ ಖಾಯಿಲೆಯಿಂದ ಮಲಗಿರತಕ್ಕಂತಹ ತಾಯಿಗೆ ಒಂದು ಲೋಟ ನೀರು ಕೊಡುವುದಕ್ಕೆ ಅವರ ಮನೆಯಲ್ಲಿ ಯಾರು ಇರುವುದಿಲ್ಲ ಇವತ್ತಿನ ಕೌಟುಂಬಿಕ ಪರಿಸ್ಥಿತಿ ಅಷ್ಟು ಸಂಕೀರ್ಣವಾಗಿದೆ. ಅದು ಏಕೆ ಆಯಿತು, ಹೇಗಾಯಿತು ಎನ್ನುವುದಕ್ಕಿಂತಲ್ಲೂ ಮೊದಲು ಎಲ್ಲಾ ನಮ್ಮ

ಹಿರಿಯರು ನೀನು ಬೆಂಗಳೂರಿಗೆ ಹೋಗಿ ಒಂದು ಸಾವಿರ ರೂಪಾಯಿಗಳನ್ನು ದುಡಿಯುವುದಕ್ಕಿಂತಲೂ, ದಾವಣಗೆರೆ ಮನೆಯಲ್ಲಿದ್ದುಕೊಂಡು ಒಂದು ನೂರು ರೂಪಾಯಿಗಳನ್ನು ದುಡಿಯಪ್ಪ ಸಾಕು ಎಂದು ಹೇಳಿಕೊಡುತ್ತಿದ್ದರು. ಅಂದರೆ ಮನೆಯೊಳಗೆ ಇದ್ದು ನಮ್ಮ ಹಿರಿಯರನ್ನು ನೋಡಿಕೊಳ್ಳುವಂಥದ್ದೋ, ನಮ್ಮ ಮನೆಯ ವ್ಯವಹಾರಗಳನ್ನು ನೋಡಿಕೊಳ್ಳೋವಂಥದ್ದೋ ಅದು ಮುಖ್ಯ ಎಂದು ಹೇಳುತ್ತಿದ್ದರು.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಅದಕ್ಕೆ ಡಾ॥ಎ.ಹೆಚ್.ಶಿವಯೋಗಿಸ್ವಾಮಿಯವರು ಅವರ ಊರನ್ನು ಬಿಟ್ಟು ದಾವಣಗೆರೆಗೆ ಬಂದಿದ್ದು.

**ಡಾ॥ ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೆ, ಆದರೆ ಈ ರೀತಿಯ ಸಂದರ್ಭದಲ್ಲಿ ಪ್ರತಿ ಮನೆಯಲ್ಲಿಯೂ ಸಹಾ ಗ್ರಾಮೀಣ ಪ್ರದೇಶಗಳಲ್ಲಂತೂ ಪ್ರತಿಯೊಂದು ಹಳ್ಳಿಯಲ್ಲಿರುವಂತಹ ಮನೆಗಳು ಇವತ್ತು ಒಂದು ವೃದ್ಧಾಶ್ರಮ ಏನೋ ಎನ್ನುವಂತಹ ಸಂದರ್ಭಗಳು ಉಂಟಾಗಿದೆ. ಅನೇಕ ಸಾರಿ ನಾವು ಯಾವ ರೀತಿಯಾಗಿ ಬದುಕುವುದು ಎನ್ನುವಂತಹ ಸ್ಥಿತಿಯಾಗುತ್ತದೆ. ಯಾರು ದಯಾಮರಣಕ್ಕೆ ಅರ್ಹರಿರುತ್ತಾರೆ ಅವರಿಗೆ ಆಸ್ಪತ್ರೆಯಲ್ಲಿ ಡಾಕ್ಟರ್‌ಗಳಾಗಲಿ, ಅವರ ಸಂಬಂಧಿಗಳು ತೀರ್ಮಾನವನ್ನು ಮಾಡುವಂಥದ್ದು ಒಂದು ಭಾಗ. ಆದರೆ voluntary Euthanasia ಗೆ ಏಕೆ ನಾನು ಒತ್ತನ್ನು ಕೊಡುತ್ತಿದ್ದೇನೆಂದರೆ, ಅವರ ದೇಹ ಕ್ಷೀಣವಾಗುತ್ತಿದೆ ಎಂದು ಅನ್ನಿಸುತ್ತಿರುತ್ತದೆ. ನಾನು ಇನ್ನೊಬ್ಬರ ಮೇಲೆ ಅವಲಂಬಿಸಬಾರದು, ಅವರು ಗೌರವಯುತವಾಗಿ ಬದುಕಿಕೊಂಡು ಬಂದಿರುತ್ತಾರೆ. ಇನ್ನೊಬ್ಬರ ಮೇಲೆ ಆರ್ಥಿಕವಾಗಿ ನಾನು ಅವಲಂಬಿಸಬಾರದು, ದೈಹಿಕವಾಗಿ ನಾನು ಅವಲಂಬಿಸಬಾರದು ಎನ್ನುವಂತಹ ಭಾವನೆಗಳಿರುತ್ತದೆ ಮತ್ತು ಅವರ ಜೀವನದಲ್ಲಿ ಯಾವುದೇ ಉದ್ದೇಶಗಳಿರುವುದಿಲ್ಲ. ಅವರೆಲ್ಲರಿಗೂ we have lived our life, it is enough ಏನು ಅನ್ನಿಸುತ್ತದೆ. ಅಂಥವರಿಗೆ Positive Voluntary Euthanasia ಈ ಕಾನೂನು ಅಲ್ಲಿ ಅವರಿಗೆ ಸಹಾಯ ಮಾಡುತ್ತದೆ. ಈಗ ಏನಾಗಿದೆ ಐಪಿಸಿ ಸೆಕ್ಷನ್ 309 ನನಗೆ ಗೊತ್ತಿರುವಂತೆ

ಆತ್ಮಹತ್ಯೆಗೆ ಸಂಬಂಧಪಟ್ಟಂತೆ ನಿಯಮವನ್ನು ಮಾಡಿಕೊಂಡಿದ್ದೇವೆ. ಐಪಿಸಿ ಸೆಕ್ಷನ್ 309 ಅನ್ನು ಗಮನಿಸುತ್ತೇವೆ. "Whoever attempts to commit suicide and does any act towards the commission of such offence shall be punished with simple imprisonment for a term which may extent to one year or with fine or with both". ಯಾರು ಆತ್ಮಹತ್ಯೆಗೆ ಪ್ರಯತ್ನವನ್ನು ಮಾಡಿಕೊಳ್ಳುತ್ತಾರೆ ವ್ಯಕ್ತಿಗೆ ಒಂದು ವರ್ಷದ ಜೈಲುಶಿಕ್ಷೆ ಜೊತೆಗೆ ದಂಡವನ್ನು ವಿಧಿಸಲಾಗುತ್ತದೆ. ಈ ಒಂದು ಸೆಕ್ಷನ್ ಅನ್ನು ತೆಗೆದು ಹಾಕಬೇಕು repeal ಮಾಡಬೇಕೆಂದು ಒಂದು Common Cause ಎನ್ನುವಂತಹ ಎನ್‌ಜಿಓ ಸುಪ್ರೀಂ ಕೋರ್ಟ್‌ನಲ್ಲಿ ಒಂದು ಐಪಿಎಲ್ ಹಾಕಿದ್ದಾರೆ. ಹಾಗಾಗಿ ಐಪಿಸಿ ಸೆಕ್ಷನ್ 309 ಅನ್ನು ರದ್ದುಗೊಳಿಸುವುದರ ಬಗ್ಗೆ ಇವತ್ತಿನ ದಿವಸ ಕೇಂದ್ರ ಸರ್ಕಾರಕ್ಕೆ ನಮ್ಮ ಸದನ ಬಹಳ ಜವಾಬ್ದಾರಿಯುತವಾದಂತಹ ಸದನ. ಈ ವಿಷಯಗಳ ಬಗ್ಗೆ ಚರ್ಚೆ ಮಾಡಿ, ನಮ್ಮ ಸಲಹೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕೆಂದು ನನ್ನ ಒಂದು ವಿನಂತಿ. Medical ethics ಪ್ರಕಾರ ನಮಗೆ ಇರತಕ್ಕಂಥದ್ದು ಎಂದರೆ, ರೋಗಿಯನ್ನು ಗುಣಪಡಿಸತಕ್ಕಂತದ್ದು, ಪ್ರಾಣ ರಕ್ಷಣೆ ಮಾಡತಕ್ಕಂಥದ್ದು ಅದನ್ನು ಬಿಟ್ಟರೆ ಬೇರೆ ಏನಿಲ್ಲ. ಈಗ ಇರುವಂತಹ ಸ್ಥಿತಿಯೊಳಗೆ ಯಾವ ಡಾಕ್ಟರ್‌ಗಳಿಗೂ ಕೂಡ ಸಾಯಿಸುವುದಕ್ಕೆ ಹಕ್ಕು ಇಲ್ಲ ಮತ್ತು ಅಧಿಕಾರವಿಲ್ಲ. ಆದರೆ Voluntary Euthanasia legalise ಮಾಡಿದರೆ, legitimize ಮಾಡಿದರೆ ಆಗ PAS ಎಂದು ನಾನು ಏನು ಹೇಳಿದೆ Physician Assisted Suicide ಅದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದು ಕೂಡ ಯಾರು ತೊಂದರೆಯಲ್ಲಿದ್ದಾರೆ, ಯಾರು ಕಷ್ಟದಲ್ಲಿದ್ದಾರೆ, ಯಾರಿಗೆ ಅವಶ್ಯಕತೆ ಇದೆ ಎಂದು ಅನ್ನಿಸುತ್ತಿದೆ ಅವರುಗಳಿಗೆ ನಾವು ಸಹಾಯ ಮತ್ತು ಸಹಕಾರವನ್ನು ಮಾಡಿದಂತಾಗುತ್ತದೆ. ಈ ದೃಷ್ಟಿಯಿಂದ ನಾವು ಯೋಚನೆಯನ್ನು ಮಾಡಿ ಈ ಒಂದು ಸ್ವ ಇಚ್ಛಾ ಮರಣ ಎನ್ನತಕ್ಕಂತಹ ಕಾನೂನಿಗೆ ಏನಾದರು ತೊಡಕುಗಳಿದ್ದರೆ, ಅದನ್ನು ತಂದರೆ ದುರುಪಯೋಗವಾಗುತ್ತದೆ ಎಂದು ಏನಾದರು ಕಂಡರೆ ಅಥವಾ ಸಂಪ್ರದಾಯಗಳಿದ್ದರೆ ಏನಾದರು ಅಡ್ಡಿ ಬರುತ್ತದೆ ಎನ್ನುವಂತಹ

ಸಂಗತಿಗಳಿದ್ದರೆ ಅವುಗಳ ಬಗ್ಗೆ ನಾವು ಚರ್ಚೆ ಮಾಡಿ ಸಕರಾತ್ಮಕವಾದಂತಹ ರೀತಿಯೊಳಗೆ ಯಾರಿಗೆ ಇದು ಅವಶ್ಯಕತೆ ಇದೆ ಎಂದು ಅನ್ನಿಸುತ್ತದೆ ಅಂಥವರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಒಂದು ನಿರ್ಣಯವನ್ನು ಮಾಡಬೇಕೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನನಗೆ ಮಾತನಾಡಲು ಸಮಯವನ್ನು ಕೊಟ್ಟಿದ್ದಕ್ಕೆ ಧನ್ಯವಾದಗಳು.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಡಾ॥ಎ.ಹೆಚ್.ಶಿವಯೋಗಿಸ್ವಾಮಿಯವರು ಬಹಳ ಚೆನ್ನಾಗಿ ವಿಷಯವನ್ನು ತಿಳಿದುಕೊಂಡಿರುವುದರಿಂದ ಈ ಸ್ವ ಇಚ್ಛಾ ಮರಣದ ಬಗ್ಗೆ ಪಿಹೆಚ್‌ಡಿ ಮಾಡಬೇಕು. ಇದು ಜನಗಳಿಗೆ ಗೊತ್ತಾಗಬೇಕು. ಇದರ ಬಗ್ಗೆ ಒಂದು ಉತ್ತಮವಾದಂತಹ ಪುಸ್ತಕವನ್ನು ಬರೆದರೆ ಒಳ್ಳೆಯದಾಗುತ್ತದೆ. ನಾನು honest ಆಗಿ ಹೇಳುತ್ತಿದ್ದೇನೆ. ಇದು ಜನರಿಗೆ ಗೊತ್ತಾಗಬೇಕು.

**ಡಾ॥ ಎ.ಹೆಚ್.ಶಿವಯೋಗಿ ಸ್ವಾಮಿ:-** ಮಾನ್ಯ ಸಭಾಪತಿಯವರೆ, ನಾನು ತಯಾರಿದ್ದೇನೆ. ನಾನು ದಾವಣಗೆರೆಯಲ್ಲಿ ಸೆಮಿನಾರ್ ಆದಾಗ ನಮ್ಮ ಟೀಚರ್ ಇದ್ದರು. ಅವರು ಬಹಳ ಒಳ್ಳೆಯ ಟೀಚರ್. ಎ.ಹೆಚ್. ಶಿವಯೋಗಿ ಸ್ವಾಮಿಯವರೆ ನೀವೇ ಬಂದು ಇದನ್ನು ಉದ್ಘಾಟನೆ ಮಾಡಬೇಕೆಂದು ಹೇಳಿದರು. ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಬರುತ್ತಾರೆಂದರು. ಆ ಸಭೆಯಲ್ಲಿ ನಾನು ಟೀಚರ್ ಅವರು ಬಂದು ನನಗೆ ಈ ಸ್ವ ಇಚ್ಛಾ ಮರಣದ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಬೇಕೆಂದು ಹೇಳಿದರು ಬದುಕಿದೆ. ಸ್ವ ಇಚ್ಛಾ ಮರಣ ನಿನ್ನಿಂದಲೇ ಉದ್ಘಾಟನೆಯಾಗಲಿ ಎಂದು ಹೇಳಿದ್ದರೆ ನನಗೆ ಕಷ್ಟವಾಗುತ್ತಿತ್ತು ಎಂದು ಹೇಳಿದೆ.

**ಶ್ರೀ ಅಲ್ಲಮ ಪ್ರಭುಪಾಟೀಲ್:-** ಮಾನ್ಯ ಸಭಾಪತಿಯವರೆ, ಮಹಾಭಾರತದ ಕೆಲವು ವಿಷಯಗಳನ್ನು ಹೇಳಿದ್ದರೆ ಇನ್ನು ಚೆನ್ನಾಗಿ ಇರುತ್ತಿತ್ತು.

**ಡಾ॥ ಎ.ಹೆಚ್.ಶಿವಯೋಗಿ ಸ್ವಾಮಿ:-** ಮಾನ್ಯ ಸಭಾಪತಿಯವರೆ, ಕೆಲವೊಂದು ವಿಷಯವನ್ನು ಬೇಕೆಂದೇ ಶ್ರೀ ಗೋ.ಮಧುಸೂಧನ್ ಮಾತನಾಡಲಿ ಎಂದು ಬಿಟ್ಟು ಕೊಟ್ಟಿದ್ದೇನೆ.

**ಶ್ರೀ ಅಲ್ಲಮ ಪ್ರಭು ಪಾಟೀಲ್:-** ಮಾನ್ಯ ಸಭಾಪತಿಯವರೆ, ಭೀಷ್ಮ ಮಾಡಿದ್ದು ಇದೆ.

**ಸಭಾಪತಿಯವರು:-** ನಿಯಮ 330ರ ಅಡಿಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನೋಟೀಸ್‌ಗೆ ಸಹಿ ಮಾಡಿ ಕಳುಹಿಸಿರುವಂತಹ ಶ್ರೀಮತಿ ಭಾರತಿಶೆಟ್ಟಿ ಮತ್ತು ಶ್ರೀ ಗೋ.ಮಧುಸೂಧನ್‌ರವರು ಮಾತನಾಡಿದ ಮೇಲೆ ಬೇರೆ ಯಾರಾದರು ಸದಸ್ಯರು ಮಾತನಾಡ ಬೇಕೆಂದು ಬಯಸಿದರೆ ಅವರುಗಳಿಗೆ ಅವಕಾಶವನ್ನು ಕೊಡುತ್ತೇನೆ. ಡಾ॥ ಎ.ಹೆಚ್.ಶಿವಯೋಗಿ ಸ್ವಾಮಿಯವರ ಹತ್ತಿರ ಏನಾದರು ಕ್ಲಾರಿಫಿಕೇಶನ್ ಕೇಳುವುದಿದ್ದರೆ ಈಗಲೇ ಅವಕಾಶವನ್ನು ಕೊಡುತ್ತೇನೆ.

**ಡಾ॥ ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೆ, ನಾನು ಇನ್ನೊಂದು ವಿಷಯವನ್ನು ಸೇರಿಸಬೇಕು. ನಮ್ಮ ಶ್ರೀ ಅಲ್ಲಮ ಪ್ರಭುಪಾಟೀಲ್ ರವರು ಹೇಳಿದರು ಅದಕ್ಕೆ ನೆನಪಾಯಿತು. ನಮ್ಮಲ್ಲಿ ಅನೇಕ ಪುರಾಣ ಪುರುಷರು, ಅನೇಕ ಋಷಿಮುನಿಗಳು, ಅನೇಕ ಸಾಧು ಸಂತರು ಇವತ್ತು ದೈಹಿಕ ವ್ಯಕ್ತಿಗಳೆಂದು ನಾವು ಏನು ಹೇಳುತ್ತೇವೆ, ಶ್ರೀ ರಾಮನಿಂದ ಹಿಡಿದು ಶ್ರೀ ಬಸವಣ್ಣನವರವರೆಗೆ ಬಹಳಷ್ಟು ಜನರು ಸ್ವ ಇಚ್ಛಾ ಮರಣವನ್ನು ಹೊಂದಿರುವವರನ್ನು ನಾವು ಇತಿಹಾಸದೊಳಗೆ ಕಾಣಬಹುದು. ಸಜೀವ ಸಮಾಧಿಯನ್ನು ಹೊಂದಿದಂತಹ ಶ್ರೀ ಯಡಿಯೂರು ಸಿದ್ದಲಿಂಗೇಶ್ವರರು ಇರಬಹುದು, ಶ್ರೀ ಗುರು ರಾಘವೇಂದ್ರ ಸ್ವಾಮಿಯವರು ಇರಬಹುದು.

**ಶ್ರೀ ಅಲ್ಲಮ ಪ್ರಭು ಪಾಟೀಲ್:-** ಮಾನ್ಯ ಸಭಾಪತಿಯವರೆ, ಜೈನರಲ್ಲಿಯೂ ಕೂಡ ಸ್ವ ಇಚ್ಛಾ ಮರಣವನ್ನು ಹೊಂದುತ್ತಾರೆ.

**ಡಾ॥ ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೆ, ಜೈನರು ಸಲ್ಲೇಖನ ವ್ರತ ಎಂದು ಮಾಡುತ್ತಾರೆ. ಆಹಾರ ಮತ್ತು ನೀರನ್ನು ತ್ಯಜಿಸಿ phased manner ಗಳಲ್ಲಿ ಬಿಡುವಂಥದ್ದು. ಮಾನ್ಯ ಸಭಾಪತಿಯವರೆ, ನಿಮಗೆ ಗೊತ್ತಿರಬಹುದು ಸ್ವಾಮಿ ವಿವೇಕಾನಂದರು . . .

**ಶ್ರೀ ಲೇಹರ್ ಸಿಂಗ್:-** Sir, I have a point

**MR. CHAIRMAN:-** I will give you an opportunity.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಡಾ॥ ಎ.ಹೆಚ್.ಶಿವಯೋಗಿಸ್ವಾಮಿಯವರು ಮಾತನಾಡಿದ ಮೇಲೆ ಒಂದು ಕ್ಲಾರಿಫಿಕೇಷನ್ ಶ್ರೀ ಶಂಕರಚಾರ್ಯರನ್ನು ಕೋಟ್ ಮಾಡಿದರು.

**ಸಭಾಪತಿಯವರು:-** ಅವರು ಯಾವುದೋ ಒಂದು ವಿಷಯ ಮಿಸ್ ಆಗಿಬಿಟ್ಟಿದೆ ಅದೊಂದನ್ನು ಸೇರಿಸುತ್ತೇನೆಂದು ಹೇಳಿದರು.

**ಶ್ರೀ ರಾಮಚಂದ್ರಗೌಡ:-** ತಾವು ಕ್ಲಾರಿಫಿಕೇಷನ್ ಕೇಳಬಹುದೆಂದು ಹೇಳಿದ್ದರಿಂದ ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ.

**ಸಭಾಪತಿಯವರು:-** ಡಾ॥ ಎ.ಹೆಚ್.ಶಿವಯೋಗಿಸ್ವಾಮಿಯವರು ಮಾತನಾಡಿ ಮುಗಿಸಿದ ಮೇಲೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ನಿಮಗೆ ಅವಕಾಶ ಕೊಡುತ್ತೇನೆ.

**SRI RAMACHANDRA GOWDA:-** Before he completes, I want to clarify. ಡಾ॥ ಎ.ಹೆಚ್.ಶಿವಯೋಗಿ ಸ್ವಾಮಿಯವರು ಶ್ರೀ ಶಂಕರಚಾರ್ಯರನ್ನು ಕೋಟ್ ಮಾಡಿದರು. ಶ್ರೀ ಶಂಕರಚಾರ್ಯರನ್ನು ಇನ್ನೊಂದು ಮಾತನ್ನು ಹೇಳುತ್ತಾರೆ. ಲಬ್ದ ವಿದ್ಯಾ ರಾಜಮಾನ್ಯ ತತಸ್ತಿಂ, ಪ್ರಾಪ್ತಾ ಪ್ರಾಭಾವಾಸ್ತ್ಯಾ ಸಂಪತ್ ತತಸ್ತಿಂ, ದುಃಖಃ ನಾರಿ ಸುಂದರಾಗಿ ತತಸ್ತಿಂ, ಅವರು ಹೇಳುತ್ತಾರೆ. ರಾಜಮಾನ್ಯದರಂ ವಿದ್ಯೆಯಂ ಗಳಿಸಿದರೇನಂತೆ, ಹಣ ಸಂಪತ್ತು, ಅಧಿಕಾರವನ್ನು ಎಂತು ಗಳಿಸಿದರೇನಂತೆ, ರೂಪವತಿಯರಲ್ಲಿ ಅತೀ ಸುಂದರಿಯನ್ನು ವರಿಸಿದರೇನಂತೆ, ತನ್ನ ಅಂತರಾತ್ಮವನ್ನು ಅರಿಯದರೆಲ್ಲಾ ಡೊಂಕೇ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಅವರು ಆತ್ಮದ ವಿಚಾರವನ್ನು ಹೇಳಿದಾಗ ಹಾಗೆ ಮುಂದೆ ಹೋಗಿ ಏನು ಹೇಳುತ್ತಾರೆಂದರೆ, 1906ರಲ್ಲಿ ಅಮೆರಿಕಾ Ohio and Nova State ಗಳಲ್ಲಿ ಈ Euthanasia ಗೆ ಇನೊಂದು ಪದ PAS (Physician Assisted Suicide) ಎಂದು ಅಲ್ಲಿ ಉಪಯೋಗಿಸಿದ್ದಾರೆ. ಆ ಒಂದು ಹೆಸರಿನಲ್ಲಿ ಆಗಲೇ Ohio

ದಲ್ಲಿ 1906ನೇ ಇಸವಿಯಲ್ಲಿ ಚರ್ಚೆಯಾಗಿ, ನಿರ್ಣಯವಾಗಿ ಅವತ್ತಿನ ದಿವಸ ದಯಮರಣ ರೂಢಿಯಲ್ಲಿ ಬಂದಿದೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಈ ದಯಮರಣದ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ತೀರ್ಪು ನೀಡಿದೆ. ಇದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಸರಿಯಲ್ಲ. Already the Court has given its verdict. ಈ ವಿಷಯದ ಬಗ್ಗೆ ತಾವು ಯಾವ ರೀತಿಯಲ್ಲಿ ಚರ್ಚೆಗೆ ಅವಕಾಶ ಮಾಡಿದ್ದೀರಿ ಎನ್ನುವುದೇ ನನಗೆ ಆಶ್ಚರ್ಯವೆನ್ನಿಸುತ್ತಿದೆ.

**ಡಾ॥ ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೆ, 2011ನೇ ಇಸವಿಯಲ್ಲಿ ಸುಪ್ರೀಂ ಕೋರ್ಟ್ ಅರುಣ ಶಾನುಭೋಗ್ ಕೇಸ್‌ನಲ್ಲಿ ಏನು ತೀರ್ಪನ್ನು ಕೊಟ್ಟಿದೆ ಎನ್ನುವುದರ ಬಗ್ಗೆಯೂ ಕೂಡ ನಾನು ಮುಂದೆ ಹೇಳುತ್ತೇನೆ. ಅದಕ್ಕೆ ನಾನು ಪ್ರಾರಂಭದಲ್ಲಿಯೇ ಏನು ಹೇಳಿದ್ದು ಎಂದರೆ Euthanasia ಒಳಗೆ voluntary Euthanasia ಯದ ವಿಷಯ ಏನಿದೆ. ಸ್ವ ಇಚ್ಛಾ ಮರಣದ ಬಗ್ಗೆ ಸುಪ್ರೀಂ ಕೋರ್ಟ್ ಏನು ತೀರ್ಪನ್ನು ಕೊಟ್ಟಿಲ್ಲ. ಅವರು ಏನಿರುವಂಥದ್ದು Euthanasia ಬಗ್ಗೆ ಯಾವುದು Passive Euthanasia ಎಂದು ಹೇಳುತ್ತೇವೆಯೋ life support ಅನ್ನು ತೆಗೆಯುವುದರ ಮೂಲಕ ಯಾರು ತುಂಬ terminal stages ನಲ್ಲಿ ಕೋಮದಲ್ಲಿರುವಂತಹ ರೋಗಿಗಳಿಗೆ, ಅವರು they can leave the body ಅನ್ನುವುದಕ್ಕ ಏನು ಮಾಡಬೇಕು ಎನ್ನುವುದರ ಬಗ್ಗೆ ಹೇಳಿದ್ದಾರೆ. ಆ ದೃಷ್ಟಿಯಲ್ಲಿ ಮಾತ್ರ ಹೇಳಿದ್ದಾರೆ. Passive Euthanasia ಆಗುತ್ತದೆ. But, I am stressing more on Voluntary Euthanasia. Euthanasia ಇದರ ಒಂದು ಮಹತ್ವವನ್ನು ಮನಗೊಂಡಂತೆ ಅನೇಕ ಸಂಘ ಸಂಸ್ಥೆಗಳು, ಬೇರೆ ಬೇರೆ ದೇಶಗಳಲ್ಲಿ ಹುಟ್ಟಿಕೊಂಡಿರುವಂಥದ್ದು. 1935ನೇ ಇಸವಿಯಲ್ಲಿ England ಒಳಗೆ, 1937 Switzerland ನಲ್ಲಿ, 1938ನೇ ಇಸವಿಯಲ್ಲಿ America ದೇಶದಲ್ಲಿ ಅಲ್ಲಿ ಎಲ್ಲಾ ಕಡೆ ಈ ರೀತಿಯ Euthanasia Societies ಎಂದು ಸಾರ್ವಜನಿಕ ಸಂಸ್ಥೆಗಳು ಹುಟ್ಟಿಕೊಂಡಿದೆ. ಇದಕ್ಕಿಂತಲೂ ಮೊದಲು ಆ ದೇಶಗಳಲ್ಲಿಯೂ ಕೂಡ Euthanasia ರೂಢಿಯಲ್ಲಿ ಇರಲಿಲ್ಲ. ಹಾಗಾಗಿ ನಾನು ಇವುಗಳನ್ನು ಉಲ್ಲೇಖ

ಮಾಡುತ್ತಿದ್ದೇನೆಂದರೆ, ಇವತ್ತು ನಾವು ಮುಂದುವರೆದಂತಹ ದೇಶಗಳು ಎಂದು ತಿಳಿದುಕೊಂಡಂತಹ ದೇಶಗಳಲ್ಲಿ ಈಗಾಗಲೇ 70–80 ವರ್ಷಗಳ ಹಿಂದೆಯೇ ಅವತ್ತಿನ ಕಾಲದಲ್ಲಿಯೇ ಒಂದು ಬಹಳ ಪ್ರಭಾವಿಯಾದಂತಹ ಪರಿಣಾಮಕಾರಿಯಾದಂತಹ ಒಂದು ಕಾನೂನನ್ನು ಏನು ಮಾಡಿದ್ದಾರೆ. ಅದರ ಹಿನ್ನಲೆಯಲ್ಲಿ ಇವತ್ತಿನ ದಿವಸ ನಾವು ಯೋಚನೆ ಮಾಡಬಹುದು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. 1996ನಲ್ಲಿ ಆಸ್ಟ್ರೇಲಿಯದಲ್ಲಿ, ಉತ್ತರ ಪ್ರಾಂತ್ಯದೊಳಗೆ "The Rights of the Terminally Ill Act 1996" ಎನ್ನುವಂತಹ ಒಂದು Act ಅನ್ನು pass ಮಾಡಿ, ಅದರ ಹಿನ್ನಲೆಯಲ್ಲಿ ನಾಲ್ಕು ಜನರು ಈ ಕಾನೂನಿನ ಸಹಾಯವನ್ನು ಪಡೆದುಕೊಂಡು ಅವರು ತಮ್ಮ ಅಂತ್ಯವನ್ನು ಆಸ್ಟ್ರೇಲಿಯದಲ್ಲಿ ಕಂಡರು. 2009ನೇ ಇಸವಿಯಲ್ಲಿ ಒಬ್ಬ quadriplegia ದಿಂದ ನರಳುತಿದ್ದ. Quadriplegia ಎಂದರೆ ತಮಗೆ ಗೊತ್ತಿದೆ. ನಮ್ಮಲ್ಲಿ ಅನೇಕರು ಅದನ್ನು ನೋಡಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಇತ್ತಿಚೆಗೆ Sanjay Leela Bhansali ಯವರು ತೆಗೆದಂತಹ Guzaarish ಎನ್ನುವಂತಹ ಒಂದು ಒಳ್ಳೆಯ ಚಿತ್ರ ಇತ್ತಿಚೆಗೆ ಬಂದಿತ್ತು. ಆ ಚಿತ್ರದಲ್ಲಿ Hrithik Roshan ಪಾತ್ರವನ್ನು ಮಾಡಿದ್ದರು. ಯಾವ ವ್ಯಕ್ತಿ ತನ್ನ ಕೈ ಮತ್ತು ಕಾಲುಗಳನ್ನು ಅಲುಗಾಡಿಸಲೂ ಕೂಡ ಆಗದೇ ಇರುವಂತಹ ಸ್ಥಿತಿಯಲ್ಲಿರುತ್ತಾನೆ. Quadriplegic ಎಂದು ಹೇಳಬೇಕಾದರೆ ನಮ್ಮ ಡಾಕ್ಟರ್‌ಗಳಿಗೆ ಗೊತ್ತಿದೆ. Hemeplegia partial ಆಗಿ ಆಗುತ್ತದೆ. Quadriplegic ಎಂದಾಗ ದೇಹದ ಅಂಗಾಂಗಗಳನ್ನೇ ಚಲನೆ ಮಾಡುವುದಕ್ಕಾಗುವುದಿಲ್ಲ. ಮೂಗಿನ ಮೇಲೆ ಒಂದು ಸೊಳ್ಳೆ ಅಥವಾ ನೊಣ ಕುಳಿತುಕೊಂಡರೆ ಅದನ್ನು ಕೈ ಯಿಂದ ಹೊಡೆದು ಅಥವಾ ಓಡಿಸುವುದಕ್ಕಾಗುವುದಿಲ್ಲ. ಅಂದರೆ ಈ ವಿಷಯವನ್ನು ಏಕೆ ಬಹಳ ಗಂಭೀರವಾಗಿ ಪರಿಗಣಿಸಬೇಕೆಂದು ವಿನಂತಿ ಮಾಡುವುದೆಂದರೆ, ಆ ಮಾನಸಿಕ ಸ್ಥಿತಿಯನ್ನು ನಾವೇನಾದರು ಅನುಭವಿಸಿದರೆ, ನಮ್ಮಲ್ಲಿ ನಮ್ಮ ಕೈ ಕಾಲುಗಳನ್ನೇ ಅಳಾಡಿಸುವುದಕ್ಕೆ ಆಗದೇ ಇರುವಂತಹ ಸ್ಥಿತಿ ಬಂದರೆ, ಸಂದರ್ಭದಲ್ಲಿ ನಮ್ಮ ಜೀವನ ಎಷ್ಟು ದುಸ್ತರವಾಗುತ್ತದೆ, ಎಷ್ಟು ದಯನೀಯವಾಗುತ್ತದೆ, ಎಷ್ಟು ಮಾನಸಿಕವಾಗಿ

ಹಿಂಸೆಯಾಗುತ್ತದೆ ಎನ್ನುವುದಕ್ಕೆ ಆ ಚಿತ್ರದಲ್ಲಿ ಒಂದು ದೃಶ್ಯ ಬರುತ್ತದೆ. Euthanasiaಗೆ ಇವರು propose ಮಾಡಿಕೊಳ್ಳುತ್ತಾರೆ. ಯಾರು defense council ಇರುತ್ತಾರೆ ಆ ವಕೀಲರು ಬಂದು ಇದನ್ನು allow ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದಾಗ, ಆ ರೋಗಿ ಒಂದು ಸಣ್ಣ ಪರೀಕ್ಷೆಯನ್ನು ಕೊಡುತ್ತಾನೆ. ಯಾವ ವಕೀಲರು Euthanasiaಗೆ ಅವಕಾಶವನ್ನು ಕೊಡಬಾರದೆಂದು ವಕೀಲರು ವಾದವನ್ನು ಮಾಡುತ್ತಿರುತ್ತಾರೆಯೋ ಅವರಿಗೆ ಒಂದು ಸಣ್ಣ ಬಾಕ್ಸ್ ಒಳಗೆ ಇಟ್ಟು ಬಾಯಿ ಮತ್ತು ಮೂಗನ್ನು ಮುಚ್ಚಿಕೊಂಡು ಮೂರು ನಿಮಿಷ ಇರು ಎಂದು ಹೇಳುತ್ತಾನೆ. ಆ ವಕೀಲರಿಗೆ ಇರುವುದಕ್ಕಾಗುವುದಿಲ್ಲ. Forcibly ಅವರು open ಮಾಡಿಕೊಂಡು ಹೊರಗೆ ಬರುತ್ತಾರೆ. ಆ ರೋಗಿ ನ್ಯಾಯಾಧೀಶರಿಗೆ ಆವಾಗ ಹೇಳುತ್ತಾರೆ, ಯಾರು ಮೂರು ನಿಮಿಷ ಮೂಗು ಮತ್ತು ಬಾಯಿಯನ್ನು ಮುಚ್ಚಿಕೊಂಡು ಈ ಬಾಕ್ಸ್ ಒಳಗೆ ಇರುವುದಕ್ಕಾಗುವುದಿಲ್ಲವೋ ನಾನು 10–15 ವರ್ಷಗಳಿಂದ ಇದೇ ರೀತಿಯಾಗಿದ್ದಾನೆ, ದೇಹದ ಒಂದು ಅಂಗವನ್ನೂ ಕೂಡ move ಮಾಡುವುದಕ್ಕಾಗುವುದಿಲ್ಲ ಅಂಥದ್ದರಲ್ಲಿ ನಾವು ಹೇಗೆ ಬದುಕಬೇಕು? ಅಂತಹ ವ್ಯಕ್ತಿಗಳಿಗೆ Euthanasia ಕೊಡಬೇಕೋ, ಬೇಡವೋ? ಇದು ಬಹಳ ಪ್ರಮುಖವಾದಂತಹ ಸಂಗತಿ ಎನ್ನುವ ದೃಷ್ಟಿಯಿಂದ ಇದರ ಬಗ್ಗೆ ವ್ಯಕ್ತಿಯಾಗಲಿ, ಯಾರು ಈ ರೀತಿಯ terminal stage ನಲ್ಲಿ ಇರುತ್ತಾರೋ ಅಂಥ ವ್ಯಕ್ತಿಗಳ parents ಯಾರು ಇರುತ್ತಾರೆ. ತಂದೆ, ತಾಯಿ ಅಥವಾ ಪೋಷಕರು ಇರುತ್ತಾರೆ. ಅವರನ್ನು ನೋಡಿಕೊಳ್ಳುವವರಿರುತ್ತಾರೆ ಅವರ ಮಾನಸಿಕ ಸ್ಥಿತಿ, ಅವರು ಪ್ರತಿಕ್ಷಣ ಅವರು ಸಾಯುತ್ತಿರುತ್ತಾರೆ. ಅರುಣ ಶ್ಯಾನುಬೋಗ್ ದೃಷ್ಟಿಯಲ್ಲಿಯೂ ಕೂಡ ಅದೇ ಆಗಿದೆ. ಹಾಗಾಗಿಯೇ ಅವರು ಸುಪ್ರೀಂ ಕೋರ್ಟ್ ಮೋರೆ ಹೋದರು. ಹೀಗೆ ಆ ವ್ಯಕ್ತಿಗಳ ವಿಚಾರವನ್ನು ಯೋಚನೆ ಮಾಡಿದರೆ, ಬಹುಶಃ ಇವತ್ತಿನ ಈ ಒಂದು ವಿಷಯದ ಮಹತ್ವದ ಬಗ್ಗೆ ಗಮನಿಸಬಹುದು, ಅರ್ಥಮಾಡಿಕೊಳ್ಳಬಹುದು ಎನ್ನುವಂತಹ ದೃಷ್ಟಿಯಿಂದ ಹೇಳುತ್ತಿದ್ದೇನೆ. 1975ನೇ ಇಸವಿಯಲ್ಲಿ England ದೇಶದಲ್ಲಿ, 1993 Netherlands ನಲ್ಲಿ, 2002 Belgium ದಲ್ಲಿ, 1977ನೇ ಇಸವಿಯಲ್ಲಿ

ಅಮೇರಿಕಾದ California ದಲ್ಲಿ, 1994ನೇ ಇಸವಿಯಲ್ಲಿ Oregon Stage ನಲ್ಲಿ, 2005ನೇ ಇಸವಿಯಲ್ಲಿ Florida ದಲ್ಲಿ ಈ ಎಲ್ಲಾ ರಾಜ್ಯಗಳಲ್ಲಿ ಮತ್ತು ಮುಂದುವರೆದ ರಾಷ್ಟ್ರಗಳಲ್ಲಿ Euthanasia ಎನ್ನುವಂತಹ ಕಾನೂನನ್ನು ಮಾಡಿದ್ದಾರೆ. Passive Euthanasia, ಅಲ್ಲಿಗೆ ಬರುತ್ತೇನೆ. ಇದರ ಬಗ್ಗೆ ವಿವರವಾಗಿ ಮಾತನಾಡಬೇಕಾಗಿದೆ. ಪುಣ್ಯಕ್ಕೆ ಇವತ್ತು ಅಪರೂಪಕ್ಕೆ ನನಗೆ ಮಾನ್ಯ ಸಭಾಪತಿಯವರು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಮಾತನಾಡುತ್ತಿದ್ದೇನೆ. ನಾನು ಹೆಚ್ಚು ಮಾತನಾಡುವುದಿಲ್ಲವೆಂದು ತಮಗೆ ಗೊತ್ತಿದೆ. ಅದನ್ನು ನಾವೆಲ್ಲರೂ ಸೇರಿ ಯೋಚನೆ ಮಾಡೋಣ. ನಾನು ವಿಷಯವನ್ನು ಮಾತ್ರ ಪ್ರಸ್ತಾಪ ಮಾಡುತ್ತಿದ್ದೇನೆ. China ಮತ್ತು Hong Kong ನಲ್ಲಿ ಈಗ ಬರತಕ್ಕಂತಹ ಶತಮಾನದಲ್ಲಿ ಭಾರತದ ಶತಮಾನವೆಂದು ಅಂದುಕೊಳ್ಳುತ್ತಿದ್ದೇವೆ. ಆದರೆ ಈ Scientific Advancements ನಿಂದ ನಮಗೆ ತಟ್ಟಿರುವಂಥದ್ದು ಚೈನಾದಿಂದ ಎಂದು ಗೊತ್ತಾಗುತ್ತಿದೆ. ಅಂತಹ ಒಂದು ಪ್ರಗತಿ ಪರವಾದಂತಹ ದಾಪುಗಾಲನ್ನು ಹಾಕುತ್ತಿರುವಂತಹ China ಮತ್ತು Hong Kong ಅಲ್ಲಿ ಎಲ್ಲಾ Euthanasia ಬಗ್ಗೆ ಬಹಳಷ್ಟು positive ಆಗಿ ಜನಗಳಿಗೆ ಸಕರಾತ್ಮಕವಾಗಿ ಅಭಿಪ್ರಾಯ ಮೂಡುತ್ತಿದೆ. ಹೇಗೆ Voluntary Euthanasia ಎನ್ನುವುದು ಏನಿದೆ, ಇದರ ಉದ್ದೇಶ ಏನೆಂದರೆ, ಏಕೆ ಇದನ್ನು ಏಕೆ ಜಾರಿಗೆ ತರಬೇಕು ಎನ್ನುವುದರ ಬಗ್ಗೆ ಕೆಲವು ಅಂಶಗಳನ್ನು ತರಬೇಕಾಗಿದೆ. ಬದುಕುವುದಕ್ಕೆ ಯಾವ ರೀತಿಯಾಗಿ ಹಕ್ಕು ಇದೆಯೋ, ಅದೇ ರೀತಿ ಸಾಯುವುದಕ್ಕೂ ಹಕ್ಕು ಇರಬೇಕು ಎನ್ನುವುದು ಮೊದಲನೆಯದು. ಸ್ವತಂತ್ರವಾಗಿ, ಆರೋಗ್ಯಕರವಾಗಿ ಬದುಕುವುದಕ್ಕೆ ಸಾಧ್ಯವೇ ಇಲ್ಲ ಎಂದು ಹೇಳುವಂತಹ ವ್ಯಕ್ತಿ ಅವನ ಜೀವನವನ್ನು ಅವನೇ ಗೌರವಯುತವಾಗಿ ಅಂತ್ಯಗೊಳಿಸಿಕೊಳ್ಳುವುದಕ್ಕೆ ಗೌರವಯುತವಾದಂತಹ ಮರಣದ ಹಕ್ಕನ್ನು ನೀಡುವಂಥದ್ದು ಆಗಬೇಕು. ವಾಸಿಯಾಗದಂತಹ, ಮಾರಣಾಂತಿಕ ರೋಗಗಳಿಂದ ಏನು ನರಳುತ್ತಿರುತ್ತಾರೆ ಅವರುಗಳಿಗೆ ಸಾಯಬೇಕೆಂದು ಅನಿಸಿದಾಗ ಆ ರೀತಿಯಾಗಿ ನಿರ್ಣಯವನ್ನು ಮಾಡುವುದಕ್ಕೆ Euthanasia ಕ್ಕೆ ಅವಕಾಶ ಕೊಡಬೇಕು. ವಿಶೇಷವಾಗಿ ಇವತ್ತಿನ ದಿವಸ ಬೆಳಿಗ್ಗೆ ನಾವು

ಮೆಡಿಸನ್‌ಗೆ ಸಂಬಂಧಪಟ್ಟಂತೆ ಔಷಧಿಗಳಿಗೆ ಸಂಬಂಧಪಟ್ಟಂತೆ ಸ್ವಲ್ಪ ಚರ್ಚೆಯನ್ನು ಮಾಡಿದ್ದೇವೆ. ಇವತ್ತು ಔಷಧಿಗಳು ಎಷ್ಟು ದುಬಾರಿಯಾಗಿದೆ ಎಂದರೆ, ಕೆಲವೊಂದು ಸಾರಿ ನಮಗೆ ಗೊತ್ತಾಗುತ್ತದೆ. ಆ ರೋಗಿ Terminal stage ನಲ್ಲಿದ್ದಾರೆ ಆ ರೋಗವನ್ನು ಯಾವುದೇ ಕಾರಣಕ್ಕೂ ವಾಸಿಯಾಗುವುದಿಲ್ಲವೆಂದು ಗೊತ್ತಾಗುತ್ತದೆ. ಕೊಮದಲ್ಲಿರುವಂತಹ ರೋಗಿ. ಅವರನ್ನು treat ಮಾಡುವಂಥದ್ದನ್ನು ನಾವು ಮಾಡುತ್ತಲೇ ಹೋಗಬೇಕಾಗುತ್ತದೆ. Terminal stage ನಲ್ಲಿರುವಾಗ ಆ ರೋಗಿಯ ಟ್ರೀಟ್‌ಮೆಂಟ್‌ಗೆ ಏನು ಹಣವನ್ನು ಖರ್ಚು ಮಾಡಬೇಕು, ಆ ಆರ್ಥಿಕ ಹೊರೆಯನ್ನು ಎಲ್ಲರೂ ಸಹಿಸಿಕೊಳ್ಳುವಂತಹ ಶಕ್ತಿ ಇವತ್ತಿನ ದಿವಸ ಎಷ್ಟು ಜನರಿಗಿರುತ್ತದೆ. ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಇಷ್ಟೆಲ್ಲಾ ಹಣವನ್ನು ಖರ್ಚು ಮಾಡಿದ ಮೇಲೆಯೂ ಕೂಡ ರೋಗಿ ಬದುಕುತ್ತಾನೆಯೇ? ಬದುಕುವುದಿಲ್ಲ. ಅಂತಹ ಸಂದರ್ಭದಲ್ಲಿ ಈ Voluntary Euthanasia ಏನಿದೆ ಅದರ ಬಗ್ಗೆ ಗಮನಿಸಬೇಕು. ವಿಶೇಷವಾಗಿ ಈ ವಿಷಯವನ್ನು ಇಲ್ಲಿ ಉಲ್ಲೇಖ ಮಾಡಿ ಇಲ್ಲಿ ತರುವುದಕ್ಕೆ ಮುಖ್ಯ ಕಾರಣ ಎಂದರೆ, ನಮ್ಮ ದಾವಣರೆಗೆಯಲ್ಲಿ ಶ್ರೀ ಹೆಚ್.ಡಿ.ಕರಿಬಸಮ್ಮ ಎನ್ನುವಂತಹ ಟೀಚರ್ ಇದ್ದಾರೆ. ಕಳೆದ ಅಧಿವೇಶನದಲ್ಲಿ ಮಾನ್ಯ ಬಸವರಾಜ ಹೊರಟ್ಟಿಯವರು Euthanasia ಬಂಧಪಟ್ಟಂತೆ ಪ್ರಸ್ತಾಪ ಮಾಡಿದ್ದಾರೆ. ಶ್ರೀ ಕೆ.ಮಲ್ಲಪ್ಪ ಎಂದು ಮಾಯಸಂದ್ರ ಕ್ಷೇತ್ರ ಎಂಎಲ್‌ಎ ಇದ್ದರು, ಒಂದು ಅವಧಿಯಲ್ಲಿ ವಿಧಾನ ಪರಿಷತ್ತಿನಲ್ಲಿಯೂ ಕೂಡ ಶಾಸಕರಾಗಿದ್ದರು. ಅವರು ಕೂಡ ಈ ವಿಷಯವನ್ನು ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಶ್ರೀಮತಿ ಕರಿಬಸಮ್ಮ ಟೀಚರ್‌ರವರಿಗೆ slip disc ಆಗಿ ಸಮಸ್ಯೆಯಾಗಿದೆ. ಅದರ ಪರಿಣಾಮ ಇದನ್ನು ಎಷ್ಟು ಗಂಭೀರವಾಗಿ ತೆಗೆದುಕೊಂಡಿದ್ದಾರೆಂದರೆ, ಈ Voluntary Euthanasia ಬಗ್ಗೆ ಒಂದು ಆಂದೋಲನವನ್ನೆ ಮಾಡಿದ್ದಾರೆ. ನಿಮಗೆ ಆಶ್ಚರ್ಯವಾಗಬಹುದು. ಅವರು ನಾನು ಮಾಧ್ಯಮಿಕ ಶಾಲೆಯಲ್ಲಿ ಓದುವಾಗ ನನಗೆ ಹಿಂದಿ ವಿಷಯದಲ್ಲಿ ಟೀಚರ್ ಆಗಿದ್ದರು. ದಾವಣಗೆರೆಯಲಿ Euthanasia ಬಗ್ಗೆ ಒಂದು ಸೆಮಿನಾರ್ ಮಾಡಿದರು. ಶ್ರೀಮತಿ ನಾಗಮ್ಮ

ಕೇಶವಮೂರ್ತಿ, ಹಿಂದಿನ ಶಿಕ್ಷಣ ಸಚಿವರ ನೇತೃತ್ವದಲ್ಲಿ ಸೆಮಿನಾರ್ ಅನ್ನು ಮಾಡಿದರು. ಅಲ್ಲಿ ತುಂಬ ಒಳ್ಳೆಯ ಬೌದ್ಧಿಕವಾದಂತಹ ಚರ್ಚೆ ಆ ಸಭೆಯಲ್ಲಿ ಆಗಿತ್ತು. ಅವರು 10,000 ಜನರ ಸಹಿಯನ್ನು ಇದರ ಬಗ್ಗೆ ಸಂಗ್ರಹ ಮಾಡಿದ್ದಾರೆ. ಆಶ್ಚರ್ಯವಾಗಬಹುದು. Euthanasia ಬಗ್ಗೆ ಕಗ್ಗಂಟು ಆಗಿರುವಂತಹ ಈ ಕಾನೂನಿಗೆ ಅನುಮತಿ ನೀಡಲು ಕಾನೂನು ಆಯೋಗ ಶಿಫಾರಸ್ಸು ಮಾಡಿದ್ದು, ಈಗಾಗಲೇ recommend ಮಾಡಿದ್ದಾರೆ. ಅದರ reference ಹೇಳುತ್ತೇನೆ. ಸುಪ್ರೀಂ ಕೋರ್ಟ್ ಈ ವಿಚಾರವನ್ನು ವಿಚಾರಣೆಗೆ ಕೈಗೆತ್ತಿಕೊಂಡಿದೆ. ಜನಾಭಿಪ್ರಾಯ ಕಾನೂನಿಗಿಂತಲೂ ಹೆಚ್ಚು ಬಲಯುತವಾದುದ್ದು. ಹಣ ಬಲ, ಜನ ಬಲ ಇಲ್ಲದೇ ಮಾರಣಾಂತಿಕ ರೋಗಗಳಿಂದ ನರಳುತ್ತಾ ಸಾವು ಬರಬಾರದೇ ಎಂದು ಅಪ ಅಭಿಸುತ್ತಾ, ಸಾವಿನ ಕದ ತಟ್ಟುತ್ತಿರುವ ವೃದ್ಧರಿಗಾಗಿ ಈ ಕಾಯ್ದೆಯ ಅವಶ್ಯಕತೆ ಇದೆ. ತಮ್ಮ ಅಮೂಲ್ಯವಾದ ಸಹಿಯೊಂದಿಗೆ ಬೆಂಬಲ ಕೊಡಬೇಕೆಂದು ಪ್ರಾರ್ಥಿಸುತ್ತೇನೆ ಎಂದು ಶ್ರೀಮತಿ ಕರಿಬಸಮ್ಮ ಟೀಚರ್ ಅವರು recommend ಮಾಡಿದರೆ ಸುಮಾರು 10,000 ಜನರು ಇದಕ್ಕೆ ಬೆಂಬಲವಾಗಿ ಸಹಿ ಹಾಕಿದ್ದಾರೆ. ಇದು ಇನ್ನು ಮತ್ತೆ ಮುಂದುವರೆಯುತ್ತಿದೆ. ಆ ಅಭಿಯಾನದೊಳಗೆ ಅವರು ಬಹಳ ಸಕ್ರೀಯವಾಗಿ ತೋಡಗಿಸಿಕೊಂಡಿದ್ದಾರೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಮಾನ್ಯ ಶಿವಯೋಗಿಸ್ವಾಮಿಯವರು ಆತ್ಮದ ವಿಚಾರವನ್ನು ಹೇಳಿದಾಗ ಈ ವಿಚಾರವನ್ನು ಸಹ ಗಮನಿಸಲೇ ಬೇಕಾಗುತ್ತದೆ. ಹಾಗೆಯೇ ಶ್ರೀ ಶಂಕರಾಚಾರ್ಯರು ಮುಂದುವರೆದು ಹೇಳುವುದೇನೆಂದರೆ;

**ಚೆಂದಾದಿ ವಿಭೂತಿಯಲಿ ದೇಹವನೆಂತು ಶೃಂಗರಿಸಿದರೇನಂತೆ**

**ಕಠಿಣೊಪಾಸನದಿ ದೇಹವನೆಂತು ಶ್ರಮಿಸಿದರೇನಂತೆ**

**ಕೋಟಿಕೋಟಿ ಜಪಗಳ ಮಾಡಿದರೇನಂತೆ**

**ತನ್ನಂತರಾತ್ಮವನ್ನು ಅರಿಯದಿರಲೆಲ್ಲ ಡೊಂಕೆ॥**

ಆ ಆತ್ಮವನ್ನು ಇವರು ಶೋಧನೆ ಮಾಡಿದ್ದಾರೆಯೇ? ಏಕೆಂದರೆ ಆತ್ಮಹತ್ಯೆ ಎನ್ನುವಂತಹ ಮಾತನ್ನೇನು ಹೇಳಿದರು ಅದು ಆ ಆತ್ಮಕ್ಕೆ ಹತ್ಯೆಯೇ,

ಆ ಆತ್ಮವನ್ನು ಅವರು ಶೋಧನೆ ಮಾಡಿದ್ದಾರೆಯೇ? ಆ ದಾರಿಯಲ್ಲಿ ಇವರು ಹೋಗಿದ್ದಾರೆಯೇ ಎಂದು ನನಗೆ ಸ್ಪಷ್ಟೀಕರಣ ಬೇಕು.

**ಸಭಾಪತಿಯವರು:–** ಡಾ॥ ಶಿವಯೋಗಿಸ್ವಾಮಿಯವರೇ, ಆ ಬಗ್ಗೆ ಉತ್ತರವನ್ನು ಕೊಡುವುದಕ್ಕೆ ತಮ್ಮಿಂದಾಗುವುದಿಲ್ಲ ಬಿಡಿ.

**ಡಾ॥ ಎ.ಹೆಚ್.ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು ಕೈಲಾಸಕ್ಕೆ ಹೋಗುತ್ತೇನೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಹೇಳುವುದಾದರೆ ಇನ್ನೂ ಬಹಳಷ್ಟಿದೆ, ಒಂದು ಬೃಹತ್ ಗ್ರಂಥವೇ ಇದೆ, ನಾನು ಕೇಲವು ಸ್ಯಾಂಪಲ್‌ಗಾಗಿ ಈ ಶ್ಲೋಕಗಳನ್ನು ಉಲ್ಲೇಖಿಸಿದ್ದೇನೆ. ಇನ್ನೊಂದು ಶ್ಲೋಕ ಈ ರೀತಿ ಇದೆ;

**ಪಕ್ಷಿಯಂತಾಕಾಶದಲಿ ಹಾರಾಡಿದರೇನಂತೆ**

**ಮೀನಿನಂತೆ ನೀರಿನಲ್ಲಿ ನಡೆದಾಡಿದರೇನಂತೆ**

**ಹಾಲಿನಂದದಿ ವಿಷಪಾನ ಮಾಡಿದರೇನಂತೆ**

**ತನ್ನಂತರಾತ್ಮವನ್ನರಿಯದಿರಲೆಲ್ಲ ಡೊಂಕೆ॥**

ಈ ಬಗ್ಗೆ ಹೇಳುತ್ತಾ ಹೋದರೆ ಒಂದು ದೊಡ್ಡ ಕಥೆಯೇ ಆಗುತ್ತದೆ, ಹೀಗಿರುವಾಗ ಇವರು ಈ ಆತ್ಮವನ್ನು ಶೋಧನೆ ಮಾಡಿದ್ದಾರೆಯೇ? ಈ ಆತ್ಮವನ್ನು ಶೋಧನೆ ಮಾಡದೆ ಆತ್ಮಹತ್ಯೆಯ ಬಗ್ಗೆ ಇವರೆಲ್ಲಾ ಏಕೆ ಮಾತನಾಡುತ್ತಾರೆ?

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಕೆಳಮನೆಯಿಂದ ವಿಧೇಯಕಗಳು ಬರುವುದು ಇನ್ನೂ ಬಹಳ ತಡವಾಗಬಹುದು, ಹಾಗಾಗಿ ಇವರು ಅದೆಲ್ಲವನ್ನೂ ಹೇಳಲಿಬಿಡಿ.

**ಡಾ॥ ಎ.ಹೆಚ್.ಶಿವಯೋಗಿಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ರಾಮಚಂದ್ರಗೌಡರೇನು ಹೇಳಿದರು, ಈ ರೀತಿಯ ಆತ್ಮ, ಆಧ್ಯಾತ್ಮ,

ಇದರ ಗಹನತೆ ಬಹಳಷ್ಟು ಜನರಿಗೆ ಅರ್ಥವಾಗದೆ ಇದನ್ನು ಜಾರಿ ಮಾಡಿರಿ, ಮುಂದೆ ಇನ್ನೊಮ್ಮೆ ಹುಟ್ಟಿ ಬಂದರೆ ನೋಡೋಣ ಎಂದು ಸ್ವ ಇಚ್ಛಾ ಮರಣಕ್ಕೆ ಕಾನೂನಿನ ಅಡಿಯಲ್ಲಿ ಅನುಮತಿ ನೀಡಬೇಕೆಂಬ ವಿಷಯದ ಬಗ್ಗೆ ಚರ್ಚಿಸಲು ನಾವು ಅರ್ಜಿ ಹಾಕಿಕೊಂಡಿದ್ದೇವೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ನಾನು ಕೇಳುವುದಿಷ್ಟೇ, ಆತ್ಮವನ್ನು ಶೋಧನೆ ಮಾಡದೆ ಇರುವ ಈ ದೇಹವನ್ನು ಹೇಗೆ ಸಮಾಪ್ತಿಗೊಳಿಸುತ್ತಾರೆ?

**ಡಾ॥ ಎ.ಹೆಚ್.ಶಿವಯೋಗಿಸ್ವಾಮಿ:–** ಛೇ, ಛೇ. . ಮಾನ್ಯ ಸಭಾಪತಿಯವರೇ, ನಾನು ಈ ದೇಹವನ್ನು ಸಮಾಪ್ತಿ ಮಾಡುವುದಕ್ಕೆ ಹೊರಟಿಲ್ಲ, ಈಗ ಇನೊಂದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿತೆಲ್ಲಾ, ಏನು ಮಾಡುವುದು?

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ದೇಹವನ್ನು ಸಮಾಪ್ತಿ ಮಾಡಿಕೊಳ್ಳಿ ಎಂದು ಹಕ್ಕು ಕೊಡುವುದಕ್ಕೆ ಇವರಿಗೇನು ಹಕ್ಕಿದೆ? ಪ್ರತಿಯೊಬ್ಬರಿಗೂ ಎಷ್ಟೋ ಸಂದರ್ಭಗಳಲ್ಲಿ ಸಾಯಬೇಕೆನಿಸಿರುತ್ತದೆ, ಆ ಮನಸ್ಥಿತಿ ಕ್ಷಣಿಕವಾಗಿ ಬರುತ್ತದೆಯೇ ವಿನಃ ಪೂರ್ಣವಾಗಿ ಬರುವುದಿಲ್ಲ. ಯಾರೋ ಒಬ್ಬನನ್ನು ಜೈಲಿಗೆ ಹಾಕುತ್ತಾರೆ ಎಂದಿಟ್ಟುಕೊಳ್ಳೋಣ, ಆ ಸಂದರ್ಭದಲ್ಲಿ ಅವನಿಗೆ ಸದ್ಯ, ಸತ್ತುಹೋದರೆ ಸಾಕಪ್ಪ ಎಂದುಕೊಳ್ಳುತ್ತಾನೆ, ಹಾಗೆಂದು ಅವನನ್ನು ಸತ್ತುಹೋಗಲು ಬಿಟ್ಟುಬಿಡುತ್ತಾರೆಯೇ? ಕಾನೂನನ್ನು ಮಾಡಿದ ತಕ್ಷಣ ನಾನು ಸಾಯಬೇಕೆಂದುಕೊಂಡಾಗ ನೀವು ಸಾಯಲು ಬಿಟ್ಟುಬಿಡುತ್ತೀರಾ?

**ಡಾ॥ ಎ.ಹೆಚ್.ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೇ, ಹಿರಿಯರಾದಂತಹ ಮಾನ್ಯ ರಾಮಚಂದ್ರಗೌಡರನ್ನು ನಾನು ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗಿನಿಂದ ಮತ್ತು ಅವರು ಊರಿನಲ್ಲಿದ್ದಾಗಿನಿಂದಲೂ ನೋಡಿದ್ದೇನೆ. ಹೀಗಾಗಿ ಅವರ ವ್ಯಕ್ತಿತ್ವ, ಅವರ ಸಾಮರ್ಥ್ಯ ಇವೆಲ್ಲವುಗಳ ಬಗ್ಗೆಯೂ ನನಗೆ ಮೊದಲಿನಿಂದಲೂ ಗೊತ್ತಿದೆ, ಅವರೀಗ ನನ್ನ ಪಕ್ಕದಲ್ಲಿಯೇ ಇರುವುದರಿಂದ

ಒಂದು ರೀತಿಯಲ್ಲಿ ನನಗೆ ಭಯವಾಗುತ್ತಿದೆ. 'ಈ ವಿಚಾರವನ್ನು ನೀನು ಸದನದಲ್ಲಿ ಹೇಗೆ ಚರ್ಚೆಗೆ ತಂದೆ' ಎಂದು ಶೂರು ಮಾಡಿಕೊಂಡರೆ ಮತ್ತೆ ನಾನೇನು ಮಾಡಲಿ?

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಹಾಗೇನಿಲ್ಲ, ಚರ್ಚೆ ಮಾಡೋಣ. ಅನೇಕರಿಗೆ ಅನೇಕ ಸಂದರ್ಭಗಳಲ್ಲಿ ಸಾಯಬೇಕೆನಿಸಿರುತ್ತದೆ. ಹತ್ತು ಸಾವಿರ ಜನರೇನು ಬರೆದುಕೊಟ್ಟಿದ್ದಾರೆ, ಅದರಲ್ಲಿ ಎಷ್ಟು ಜನ ಸಾಯಲು ಸಿದ್ಧರಿದ್ದಾರೆ?

**ಡಾ|| ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದು ಗೊತ್ತಿಲ್ಲ, ಅವರು ಬರೆದುಕೊಟ್ಟಿರುವ ವಿಚಾರದ ಬಗ್ಗೆ ನಾನು ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ.

**ಶ್ರೀ ರಾಮಚಂದ್ರಗೌಡ:-** ಅದೇನು ಅಷ್ಟು ಸುಲಭವೇ? Who is he to give that right? ನಿಮಗೇನು ಹಕ್ಕಿದೆ ಕೊಡುವುದಕ್ಕೆ?

**ಡಾ|| ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಚ್ಛಾ ಮರಣ ಬಯಸಿರುವವರು ಹೇಳಿಕೊಂಡಿದ್ದಾರೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಅವರ ಬಗ್ಗೆ ಅವರು ಹೇಳಿಲ್ಲ, ಬೇರೆ ಯಾರಿಗೋ ಸಾಯಲು ಅನುಮತಿ ಕೊಡುತ್ತಿದ್ದಾನೆ. Who is he to give that right? ಅವನ್ಯಾರು ಕೊಡುವುದಕ್ಕೆ.

**ಡಾ|| ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ನಾನು ಇವೊತ್ತು ಸದನದಲ್ಲಿ ಚರ್ಚೆಗೆ ತರಬಾರದಿತ್ತೇನೋ ಅನಿಸುತ್ತಿದೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಹಾಗಿದ್ದರೆ ನಾನು ಸುಮ್ಮನೆ ಹೊರಗಡೆ ಹೋಗಿಬಿಡುತ್ತೇನೆ.

**ಡಾ॥ ಎ.ಹೆಚ್.ಶಿವಯೋಗಿಸ್ವಾಮಿ:–** ಛೇ, ಛೇ! ಎಲ್ಲಿಯಾದರೂ ಉಂಟೇ? ನೀವು ಇರಬೇಕು, ನಾನು ಈ ವಿಚಾರವನ್ನು ತಮಾಷೆಗೆ ಹೇಳಿದ್ದೇನೆ.

**ಶ್ರೀ ವಿ.ಸೋಮಣ್ಣ:–** ಮಾನ್ಯ ರಾಮಚಂದ್ರಗೌಡರೇ, ನಿಮ್ಮ ಪರವಾಗಿ ನಾವಿದ್ದೇವೆ.

**ಶ್ರೀ ಭಾನುಪ್ರಕಾಶ್(ವಿಧಾನಸಭಾ ಕ್ಷೇತ್ರ):–** ಮಾನ್ಯ ರಾಮಚಂದ್ರ ಗೌಡರು ಪ್ರಸ್ತಾಪ ಮಾಡಿರುವಂತಹ ವಿಚಾರಕ್ಕೆ ಪೂರಕವಾಗಿ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮನುಷ್ಯ ಎಂದ ಮೇಲೆ ಎಲ್ಲದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವನಿಗೆ ಹಕ್ಕಿದೆ. ನಾವು ಫಾಗಿಂಗ್ ಮೆಷಿನ್ ತಂದು ಸೊಳ್ಳೆಗಳನ್ನು ಸಾಯಿಸುವುದಕ್ಕೇನೂ ಹೆದರುವುದಿಲ್ಲ, ಬೀದಿ ನಾಯಿಗಳ ಬಗ್ಗೆ ಇತ್ತೀಚೆಗೆ ಸದನದಲ್ಲಿ ಬಹಳ ವಿಸ್ತಾರವಾಗಿ ಚರ್ಚೆಯಾಯಿತು. ಅದರ ಸಂತಾನೋತ್ಪತ್ತಿಯನ್ನೇ ತೆಗೆದು ಹಾಳುಮಾಡಿದ ಮೇಲೆ ನಾಯಿಗೆ ಈ ಜನ್ಮದಲ್ಲಿ ಏನು ಕೆಲಸ ಹೇಳಿ. ಸಂತಾನೋತ್ಪತ್ತಿ ಸಾಮರ್ಥ್ಯವನ್ನೇ ತೆಗೆದ ಮೇಲೆ ನಾಯಿಯ ಬದುಕಿಗೇನಾದರೂ ಅರ್ಥವಿದೆಯೇ ದಯಮಾಡಿ ಹೇಳಿ.

**ಶ್ರೀ ಬಸವರಾಜ ಹೊರಟ್ಟಿ:–** ಮನುಷ್ಯ ಸಂತಾನ ಹರಣ ಶಸ್ತ್ರ ಚಿಕಿತ್ಸೆಗಳನ್ನೆಲ್ಲಾ ನಡೆಸಲಾಗುತ್ತದೆ, ಹಾಗಾದರೆ ಅಂತಹವರ ಬದುಕಿಗೂ ಅರ್ಥವಿಲ್ಲವೇ?

**ಶ್ರೀ ಭಾನುಪ್ರಕಾಶ್:–** ಮನುಷ್ಯ ಸಂತಾನ ಹರಣಕ್ಕೆ ಅರ್ಥವಿದೆ, ಏಕೆಂದರೆ ಸ್ವ ಇಚ್ಛೆಯಿಂದ ಸಂತಾನವಿಲ್ಲದಂತಹ ಮನುಷ್ಯರು ಕೂಡ ಈ ದೇಶದಲ್ಲಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಹಾಗಾದರೆ ಅವರ ಬದುಕಿಗೆ ಅರ್ಥವಿದೆಯೇ? ಅವರೇಕೆ ಬದುಕಬೇಕು?

**ಶ್ರೀ ಭಾನುಪ್ರಕಾಶ್:-** ಅವರೇಕೆ ಬದುಕಬೇಕು ಎಂದರೆ, ಬದುಕಿಗೆ ಬೇರೆ ಅರ್ಥವಿದೆ. ಆದರೆ ಉಳಿದೆಲ್ಲ ಪ್ರಾಣಿಗಳ ಬಗ್ಗೆ ನಾವು ಖಡಾ ಖಂಡಿತವಾಗಿ, ನಿಸ್ಸಂಕೋಚವಾಗಿ ನಮಗೆ ಅಡ್ಡ ಬರುವಂಥದ್ದೆಲ್ಲವನ್ನೂ ನಾಶ ಮಾಡುವುದಕ್ಕೆ ನಾವು ತಯಾರಾದ ಮೇಲೆ ಮನುಷ್ಯರ ಬಗ್ಗೆ ದಯಾಮರಣ ಅಥವಾ ಸ್ವ ಇಚ್ಛಾ ಮರಣದ ಬಗ್ಗೆ ಬಹಳ ಯೋಚನೆ ಮಾಡಿ ನಾವು ಆತ್ಮವನ್ನು ಅರಿತಿದ್ದೇವೆ, ಹಾಗಾದರೆ ಪರಮಾತ್ಮ ಎಲ್ಲರಲ್ಲಿಯೂ ಇಲ್ಲ, ಅವರ ಆತ್ಮವನ್ನು ಅರಿತು ನಾವು ಅದಕ್ಕೆ ಇಚ್ಛಾ ಮರಣವನ್ನು ಕೊಡುತ್ತಿದ್ದೇವೆಯೇ ಎನ್ನುವಂತಹ ಒಂದು ಪೂರಕ ಅಂಶವನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ.

**ಡಾ|| ಎ.ಹೆಚ್.ಶಿವಯೋಗಿಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಚರ್ಚೆಗೆ ಸಂಬಂಧಪಟ್ಟಂತೆ ಕೆಲವು ಮಾತುಗಳನ್ನು ಹೇಳಿ ನನ್ನ ಚರ್ಚೆಯನ್ನು ಮುಕ್ತಾಯಗೊಳಿಸುತ್ತೇನೆ. ಸ್ವಾಮಿ ವಿವೇಕಾನಂದರು ಬದುಕಿದ್ದು ಕೆಲವೇ ವರ್ಷಗಳು ಮಾತ್ರ. ಅವರು ತಮ್ಮ ಒಂದು ಪುಸ್ತಕದಲ್ಲಿ 'I will never see fortieth year in my life' ಎಂದು ಬರೆದುಕೊಂಡಿದ್ದಾರೆ. ಇದನ್ನು ನೋಡಿದಾಗ ಸ್ವಾಮಿ ವಿವೇಕಾನಂದರು ಸಹ ಇಚ್ಛಾಮರಣಿಗಳೆಂದೇ ಹೇಳಬಹುದು. ಹೇಗೆಂದರೆ ಅಂತಿಮ ದಿನಗಳಲ್ಲಿ ಅವರ ಆರೋಗ್ಯ ಕ್ಷೀಣಿಸಿತು ಎನ್ನುವಂತಹ ವಿಚಾರವನ್ನು ಸಹ ನಾವು ಓದಿ ತಿಳಿದುಕೊಂಡಿದ್ದೇವೆ.

ಒಂದು ದಿನ ಅವರು ತಮ್ಮ ಗುರುಬಾಯಿಯನ್ನು ಕರೆದು ಕ್ಯಾಲೆಂಡರ್ ತರುವಂತೆ ತಿಳಿಸಿ ಅದರಲ್ಲಿನ ದಿನಾಂಕಗಳನ್ನು ಹೇಳುತ್ತಾ ಹೋಗುವಂತೆ ಸೂಚಿಸುತ್ತಾರೆ. ಅವರು ಆ ರೀತಿ ಹೇಳಲು ಕಾರಣವೇನೆಂಬುದು ಗುರುಬಾಯಿಗೆ ಗೊತ್ತಿರುವುದಿಲ್ಲ. ಜುಲೈ 4 ಇಂತಹ ವಾರ ಬರುತ್ತದೆ ಎಂದು ಹೇಳುತ್ತಿದ್ದಂತೆಯೇ ಸ್ವಾಮಿ ವಿವೇಕಾನಂದರು ಅಲ್ಲಿಗೆ ನಿಲ್ಲಿಸುವಂತೆ ಹೇಳುತ್ತಾರೆ. ಆ ದಿನಾಂಕಕ್ಕಿಂತ ಸುಮಾರು ಎರಡು ತಿಂಗಳು ಮೊದಲೇ ಅಂದರೆ ಮೇ ತಿಂಗಳಿನಲ್ಲಿ ಅವರು ಕ್ಯಾಲೆಂಡರ್ ತರಿಸಿ ಪರಿಶೀಲಿಸುವಂತಹ ಕೆಲಸವನ್ನು ಮಾಡಿದ್ದಾರೆ. ಜುಲೈ 4ರಂದು ಅವರು ದೇಹತ್ಯಾಗ ಮಾಡುತ್ತಾರೆ. ಇಂತಹ ಅನೇಕ ಘಟನೆಗಳು ನಮ್ಮ ಮುಂದಿವೆ.

ನನಗೆ ಗೊತ್ತಿರುವ ಪ್ರಕಾರ ಸುಮಾರು ನಲವತ್ತು–ಐವತ್ತು ವರ್ಷಗಳ ಕೆಳಗೆ ಒಬ್ಬರು ಸ್ವಾಮೀಜಿ ಇದ್ದರು, ಅವರು ಎಷ್ಟು ಸಮರ್ಥರಿದ್ದರು ಎಂಬುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಒಮ್ಮೆ ಒಂದು ಶನಿವಾರದ ದಿವಸ ಅವರು ತಮ್ಮ ಶಿಷ್ಯಕೋಟಿಯನ್ನೆಲ್ಲಾ ಮಠಕ್ಕೆ ಕರೆಸಿ, 'ನೋಡಿ ಶಿಷ್ಯರೇ, ನಾವು ಸೋಮವಾರ ಹೋಗುತ್ತಿದ್ದೇವೆ' ಎಂದರಂತೆ, ಶಿಷ್ಯರು ಹೇಳಿದರಂತೆ, 'ಹಾಗೆಂದರೆ ಹೇಗೆ ಬುದ್ದಿ, ಇಷ್ಟೊಂದು ಜನ ಶಿಷ್ಯರಿದ್ದೇವೆ, ನೀವು ನಮ್ಮನ್ನು ಬಿಟ್ಟು ಹೋದರೆ ಹೇಗೆ' ಎಂದರಂತೆ, 'ಹಾಗಾದರೆ ನಾನು ಯಾವಾಗ ಹೋಗಲಿ' ಎಂದು ಕೇಳಿದರಂತೆ, ಸ್ವಾಮೀಜಿಯವರು. 'ಇನ್ನೊಂದು ನಾಲ್ಕು ದಿವಸ ಇದ್ದುಹೋಗಿ ಬುದ್ದಿ' ಎಂದರಂತೆ ಶಿಷ್ಯರು. 'ಹಾಗಾದರೆ ಗುರುವಾರ ಹೋಗಲೇ' ಎಂದ ಸ್ವಾಮೀಜಿಯವರ ಮಾತಿಗೆ ಶಿಷ್ಯರು ಆಗಲಿ ಎಂದರಂತೆ.

**ಶ್ರೀ ರಾಮಚಂದ್ರಗೌಡ:–** ನನ್ನ ಪ್ರಶ್ನೆಗೆ ಮಾನ್ಯ ಶಿವಯೋಗಿಸ್ವಾಮಿಯವರು ಉತ್ತರ ಕೊಟ್ಟುಬಿಟ್ಟರು. ಅಂದರೆ ಯಾರು ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಂಡಿರುತ್ತಾರೆ ಅವರು ತಾವಾಗಿಯೇ ಹೋಗಿ ಬಿಡುತ್ತಾರೆ, ಅದಕ್ಕೆ ಅವರಿಗೆ ಯಾವುದೇ ಕಾನೂನಿನ ಅವಶ್ಯಕತೆ ಇರುವುದಿಲ್ಲ.

**ಡಾ|| ಎ.ಹೆಚ್.ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೇ, 'ಹಾಗಾದರೆ ಗುರುವಾರ ಹೋಗಲೇ' ಎಂದು ಹೇಳಿದ ಸ್ವಾಮೀಜಿಯವರು ಮಠದ ಶಿಷ್ಯಕೋಟಿಯನ್ನೆಲ್ಲಾ ಕರೆಸಿ ಗುರುವಾರದ ದಿವಸ ದೇಹತ್ಯಾಗ ಮಾಡಿದರಂತೆ. ಅಂದರೆ ಈ ಸ್ವ ಇಚ್ಛಾ ಮರಣ ಎನ್ನುವಂಥದ್ದೇನಿದೆ ಅಂತಹ ಜ್ಞಾನಿಗಳಿಗೆ ಮಾತ್ರ ಗೊತ್ತಿರುತ್ತದೆ, ಹಾಗಾಗಿ ಅವರು ನಿರ್ಣಯ ಮಾಡುತ್ತಾರೆ. ಅದು ಒಂದು ಭಾಗವಾಗುತ್ತದೆ. ಆದರೆ ಯಾರು ಆ ಸ್ತರವನ್ನು ಮುಟ್ಟಿರುವುದಿಲ್ಲ, ಯಾರಿಗೆ ಅನಿವಾರ್ಯವಾಗಿ ಈ ದೇಹವನ್ನು ನಾನು ಇನ್ನು ಮುಂದುವರೆಯುವುದಕ್ಕಾಗುವುದಿಲ್ಲ ಎನ್ನುವಂತಹ ಭಾವನೆ ಬರುತ್ತದೆ ಅಂತಹ ವ್ಯಕ್ತಿಗಳ ಬಗ್ಗೆ ಈ ಕಾನೂನಿನ ಅಳವಡಿಕೆಯ ಅವಶ್ಯಕತೆ ಇದೆ ಎನ್ನುವಂಥದ್ದರ ಬಗ್ಗೆ ನಾನು ಈ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ್ದೇನೆ. ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**ಶ್ರೀ ಸುರೇಶ್ ಕುಮಾರ್(ನಗರಾಭಿವೃದ್ಧಿ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ನನಗೆ ಸಂಸ್ಕೃತ ಬರುವುದಿಲ್ಲ, ನಾನು ಕವಿಯೂ ಅಲ್ಲ, ನನ್ನದೊಂದು ಮನವಿ ಏನೆಂದರೆ, ನಾನು ಕೆಳಮನೆಗೆ ಹೋಗಬೇಕಾಗಿದೆ, ಸುಮಾರು 5 ಗಂಟೆಗಳ ಕಾಲದಿಂದ ಈ ಇಚ್ಛಾ ಮರಣದ ವಿಷಯದ ಮೇಲಿನ ಚರ್ಚೆಗೆ ಉತ್ತರ ಕೊಡಲು ಕಾಯುತ್ತಿದ್ದೇನೆ. ಅದಕ್ಕೋಸ್ಕರ ಇದಕ್ಕೆ ಒಂದು ಸಮಯವನ್ನು ನಿಗದಿಪಡಿಸಿ, ದಯವಿಟ್ಟು ಈ ಚರ್ಚೆಯನ್ನು ಬೇಗನೆ ಮುಗಿಸಿದರೆ ಒಳ್ಳೆಯದು. ಏಕೆಂದರೆ, ನಾನು ಕೆಳಮನೆಗೆ ಹೋಗಬೇಕಾಗಿದೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ಸಂಸ್ಕೃತ ಬರದವರಿದ್ದಾರೆ ಎನ್ನುವಂತಹ ಕಾರಣಕ್ಕಾಗಿಯೇ ನಾನು ಸಂಸ್ಕೃತದ ಶ್ಲೋಕಗಳನ್ನು ಕನ್ನಡದಲ್ಲಿ ಹೇಳಿದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿರುವುದರಿಂದ ಸಹಕಾರ ಇಲಾಖೆಗೆ ಸಂಬಂಧಿಸಿದಂತೆ ಸ್ಪಷ್ಟೀಕರಣಗಳನ್ನು ನೀಡುವಂತಹ ಸಂದರ್ಭದಲ್ಲಿ ತಾವು ವಿಧಾನ ಸಭೆಯಲ್ಲಿರಬೇಕು ಎಂದು ಪರ್ಸನಲ್ ಆಗಿ ನನಗೆ ತಿಳಿಸಿದ್ದಾರೆ. ಅದಕ್ಕೆ ದಯವಿಟ್ಟು ಬೇಗನೆ ಈ ಚರ್ಚೆಯನ್ನು ಮುಗಿಸಿದರೆ ಸಂಜೆ ಆರು ಗಂಟೆಯ ನಂತರ ನಾನು ಅಲ್ಲಿಗೆ ಹೋಗಲು ಅವಕಾಶವಾಗುತ್ತದೆ.

**ಸಭಾಪತಿಯವರು:–** ಯಾವ ಸಚಿವರು ವಿಧಾನ ಸಭೆಯ ಸದಸ್ಯರಾಗಿದ್ದಾರೆ ಅವರು ಮೇಲ್ಮನೆಗೆ ಹೋಗಬೇಕಾಗಿದೆ ಎಂದು ಕೇಳುತ್ತಿರುವುದು ಸರಿಯಾಗಿದೆ, ಆದರೆ ನಮ್ಮ ಸದನದ ಸದಸ್ಯರು ಯಾರು ಸಚಿವರಿದ್ದೀರಿ ಅವರು ದಯಮಾಡಿ ಸ್ವಲ್ಪ ಸಹಕರಿಸಬೇಕೆಂದು ಕೋರುತ್ತೇನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಬೆಳಿಗ್ಗೆಯಿಂದಲೂ ನಾನು ಇಲ್ಲಿಯೇ ಇದ್ದೇನೆ, ಈಗ ಕೆಳಮನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ನೀಡಿದ ಉತ್ತರದ ಮೇಲೆ ಸ್ಪಷ್ಟೀಕರಣಗಳನ್ನು ನೀಡಬೇಕಾಗಿರುವುದರಿಂದ ಅವರು ನನ್ನನ್ನು ಕರೆದಿದ್ದಾರೆ.

**ಸಭಾಪತಿಯವರು:–** ಈ ವಿಷಯದ ಮೇಲಿನ ಚರ್ಚೆ ಮುಕ್ತಾಯಗೊಳ್ಳುವವರೆಗೆ ತಾವು ಇಲ್ಲಿಯೇ ಇರಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಸ್ವ ಇಚ್ಛಾ ಮರಣದ ಬಗ್ಗೆ . . .

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ, ನಾನು ಈ ಸಂದರ್ಭದಲ್ಲಿ ಒಂದು ವಿಚಾರವನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನಾವು ಈ ಸದನದಲ್ಲಿ ಚರ್ಚೆ ಮಾಡುತ್ತಿರುವಂತಹ ವಿಚಾರವನ್ನು ವಿಸ್ತೃತವಾದ ರೀತಿಯಲ್ಲಿ ಇಡೀ ದಿವಸ ಬೇಕಾದರೂ ಅಕಾಡೆಮಿಕ್ ಡಿಸ್ಕಷನ್ ಮಾಡಿ, ಪರ–ವಿರೋಧ ಎರಡೂ ರೀತಿಯಲ್ಲಿಯೂ ಮಾತನಾಡಬಹುದು. ಆದರೆ ನಾನು ಕೇಳುವುದಿಷ್ಟೆ, ಸ್ವಇಚ್ಛಾ ಮರಣ ಅಥವಾ mercy killing ಎನ್ನುವಂತಹ ವಿಚಾರವನ್ನು ಚರ್ಚೆಗೆ ತಂದಿದ್ದಾರೆ. ಈ ಸದನದಲ್ಲಿ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಾಗಲೀ, ಮುಖ್ಯಮಂತ್ರಿಗಳಾಗಲೀ ಅಥವಾ ಸರ್ಕಾರವೇ ಆಗಲಿ ನಾವು ಏನಾದರೊಂದು ತೀರ್ಮಾನ ತೆಗೆದುಕೊಂಡರೆ ಆ ತೀರ್ಮಾನಕ್ಕೆ ಅನುಗುಣವಾಗಿ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ನಮಗಾಗಲೀ, ನಿಮಗಾಗಲೀ, ಈ ಸರ್ಕಾರಕ್ಕಾಗಲೀ ಆಗುತ್ತದೆಯೇ ಎನ್ನುವುದರ ಬಗ್ಗೆ ಮೊದಲು ವಿಚಾರ ಮಾಡಬೇಕಾಗಿದೆ. ಏಕೆಂದರೆ ಈ ವಿಷಯದ ಬಗ್ಗೆ ಸದನದಲ್ಲಿ ಚರ್ಚೆಗೆ ತಂದ ಮೇಲೆ ಅದಕ್ಕೆ ಒಂದು ಪರಿಹಾರವನ್ನು ಹುಡುಕುವುದಕ್ಕೆ ನಮಗಾಗಲೀ, ನಮ್ಮ ಸರ್ಕಾರಕ್ಕಾಗಲೀ, ಕೇಂದ್ರ ಸರ್ಕಾರಕ್ಕಾಗಲೀ ಶಕ್ತಿ ಇಲ್ಲ ಎಂದು ಗೊತ್ತಾದ ಮೇಲೆಯೂ ಅಕಾಡೆಮಿಕ್ ಡಿಸ್ಕಷನ್ ಮಾಡತಕ್ಕಂತಹ ಪರಿಸ್ಥಿತಿಯಾದರೆ ಅದಕ್ಕೆ ತಾವು ಸಮಯವನ್ನು ನಿಗದಿಪಡಿಸಬೇಕಾಗುತ್ತದೆ. ಈ ಬಗ್ಗೆ ಚರ್ಚೆ ಬೇಡ ಎಂದು ನಾನು ಖಂಡಿತವಾಗಿಯೂ ಹೇಳುವುದಿಲ್ಲ. ಅಕಾಡೆಮಿಕ್ ಡಿಸ್ಕಷನ್ ಆಗಲಿ. ಏಕೆಂದರೆ ಎಲ್ಲರಿಗೂ ವಿಚಾರ ಗೊತ್ತಾಗಲಿ, ನಾನು ಬೇಡವೆಂದು ಹೇಳುವುದಕ್ಕೆ ತಯಾರಿಲ್ಲ. ಆದರೆ ಇವತ್ತು ಮಂತ್ರಿಗಳಿಂದ ನಾನೇನಾದರು ಪರಿಹಾರ ಹುಡುಕಬೇಕು, ನೀವು ಪರಿಹಾರ ಕೊಡುತ್ತೀರ, ಇದಕ್ಕೆ ಸರ್ಕಾರದ ವತಿಯಿಂದ

ಏನಾದರು ಉತ್ತರ ಹೇಳುತ್ತೀರ ಎಂದರೆ, ಖಂಡಿತವಾಗಿ ನಾವೇ ಆ ಭಾಗದಲ್ಲಿ ಇದ್ದರೆ ಖಂಡಿತವಾಗಿ ಹೇಳುವುದಕ್ಕೆ ಆಗುವುದಿಲ್ಲ ಎಂದು ಹೇಳುವುದಾದರೆ academic discussion ಎಂದು ಹೇಳುವಂಥದ್ದನ್ನು ನಾವು ಇಷ್ಟು ವಿಸ್ತಾರವಾಗಿ ತೆಗೆದುಕೊಂಡು ಹೋಗುವುದಕ್ಕೆ ತಾವು ದಯವಿಟ್ಟು ಒಂದು ದಿವಸವನ್ನು ನಿಗದಿಪಡಿಸಿ. ಖಂಡಿತವಾಗಿ ನಮಗೆ ತಿಳಿದಿರುವಂತಹ ಎಲ್ಲಾ ವಿಚಾರಗಳ ಬಗ್ಗೆ ಹೇಳೋಣ. ಆದರೆ ಇವತ್ತಿನ ಸಂದರ್ಭದಲ್ಲಿ ನಿಮ್ಮ ಗಮನವನ್ನು ಸೆಳೆದಿದ್ದೇನೆ ಅಷ್ಟೆ ವಿನಃ ಈ ವಿಚಾರಕ್ಕಾಗಲಿ ಅಥವಾ ಈ ಚರ್ಚೆಗೆ ಅಡ್ಡ ಬರುತ್ತೇನೆ ಎನ್ನುವ ಭಾವನೆ ಬೇಡ.

**ಶ್ರೀ ಎಸ್.ಸುರೇಶ್‌ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು):-** ಮಾನ್ಯ ಸಭಾಪತಿಯವರೇ, ನನ್ನದೊಂದು ಸಲಹೆ ಏನೆಂದರೆ, ಈಗೇನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಸರ್ಕಾರದ ನಿಲುವುವೇನು, ಯಾವ ಹಂತದಲ್ಲಿದೆ ಎಂಬುದನ್ನು ತಮ್ಮ ಮುಂದೆ ಇಡುತ್ತೇನೆ. ಅದರ ನಂತರವೂ ಚರ್ಚೆ ಮಾಡುತ್ತೇವೆ ಎಂದರೆ ದಯವಿಟ್ಟು ಮಾಡಿ.

**ಡಾ॥ ಎ.ಹೆಚ್.ಶಿವಯೋಗಿ ಸ್ವಾಮಿ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಿದರು. ಆದರೆ ನಾವು ಇಲ್ಲಿ present ಮಾಡುತ್ತಿರುವುದು just waste of time ಅಲ್ಲ ಸರ್. ನಾನು ಇದರ ಬಗ್ಗೆ ಸೀರಿಯಸ್ಸಾಗಿಯೇ ಹೇಳಬೇಕೆಂದೇ ತಮಗೆಲ್ಲರಿಗೂ ಹೇಳಿದ್ದು. ನಾನು ಈ ಸದನದೊಳಗೆ ಜವಾಬ್ದಾರಿಯನ್ನು ಇಟ್ಟುಕೊಂಡೇ ಮಾತನಾಡುತ್ತಿದ್ದೇನೆ. ಇಲ್ಲಿ ಪ್ರತಿ ಕ್ಷಣವೂ ಅಮೂಲ್ಯ ಆ ವಿಷಯ ನನಗೂ ತಿಳಿದಿದೆ. ಆದರೆ ಇಂತಹ ಒಂದು ಸಂದರ್ಭದಲ್ಲಿ ಹಿರಿಯರ ಮನೆಯಲ್ಲಿ ಈ ವಿಷಯದ ಬಗ್ಗೆ ಪ್ರಸ್ತಾಪವಾದಾಗ ಎಲ್ಲಾ ಮಾನ್ಯ ಹಿರಿಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಟ್ಟರು. ಆ ಹಿನ್ನಲೆಯಲ್ಲಿ ನಾನು ಎರಡು ವಿಷಯಗಳನ್ನು ಹೇಳಿದ್ದೇನೆ. ಮೊದಲನೆಯದು Section 309 of Indian Penal Code (IPC). ಅದು ನಮ್ಮ ಕೈಯಲ್ಲಿ ಇಲ್ಲ, ಅದು ನನಗೂ ತಿಳಿದಿದೆ. ಆದರೆ ಒಂದು ರಾಜ್ಯದಿಂದ ನಾವೆಲ್ಲರೂ ಇದರ ಬಗ್ಗೆ ರೆಕಮೆಂಡೇಷನ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳಿಸುವುದಕ್ಕೆ

ಸಾಧ್ಯವಿದೆಯೇ? ಅಂದರೆ resolution ಮಾಡುವುದಕ್ಕೆ ಇದರ ಬಗ್ಗೆ ನಿಶ್ಚಿತವಾಗಿ ಚರ್ಚೆ ಆದರೆ ನಮ್ಮ ಅಭಿಪ್ರಾಯವನ್ನು ಅದರೊಳಗೆ IPC Section 309 review ಮಾಡುವುದರ ಬಗ್ಗೆ, ಅದಕ್ಕಿಂತ ಹೆಚ್ಚಾಗಿ ಅದು passive euthanasia ಅಲ್ಲ ಸರ್, ಅದು voluntary euthanasia ಅಂದರೆ ಸ್ವ–ಇಚ್ಛಾ ಮರಣ ಯಾವುದು ಇದೆ, ಅದರ ಬಗ್ಗೆ ನಾನು stress ಮಾಡುತ್ತಿದ್ದೇನೆ. ಆ ದೃಷ್ಟಿಯಿಂದ ತಾವು ಈ ವಿಷಯದ ಬಗ್ಗೆ ಚರ್ಚೆ ಮಾಡಲು ಸಮಯವನ್ನು ಕೊಟ್ಟಿದ್ದೀರಿ ಅದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮಾನ್ಯ ಸಚಿವರು ಉತ್ತರ ಕೊಡುವುದಕ್ಕಿಂತ ಮೊದಲು ಮಾನ್ಯ ಗೌರವಾನ್ವಿತ ಸದಸ್ಯರಿಬ್ಬರು ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಟ್ಟರೆ ಒಳ್ಳೆಯದು.

**ಶ್ರೀ ಎಸ್.ಸುರೇಶ್‌ಕುಮಾರ್:–** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದಂತಹ ಮಾನ್ಯ ನಾಣಯ್ಯನವರ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದಕ್ಕೆ ಏನಾದರು ಒಂದು ultimate ಬರಬೇಕು. ಅದಕ್ಕೋಸ್ಕರ ಚರ್ಚೆ ಆಗಲಿ. ಸರ್ಕಾರದ ನಿಲುವು ಏನು ಎಂದು ಹೇಳಿದ ಮೇಲೆ ಅದನ್ನು ಯಾವ ರೀತಿ ಸರಿಪಡಿಸಬೇಕು ಎಂಬ ಸಲಹೆ ಬಂದ ಮೇಲೆ ನಾನು ರೂಪಿಸುತ್ತೇನೆ.

**ಸಭಾಪತಿಯವರು:–** ಸಾಮಾನ್ಯವಾಗಿ ನಾವು ನಿಯಮ 330 ಮೇಲೆ ಚರ್ಚೆ ಮಾಡುವಾಗ ಯಾರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇವೆ. ಸರ್ಕಾರ ಅದಕ್ಕೆ ಉತ್ತರ ಕೊಡುತ್ತದೆ. ಉತ್ತರ ಕೊಟ್ಟನಂತರ ಸರ್ಕಾರದ ಉತ್ತರದ ಬಗ್ಗೆಯೇ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಆ ಹಿನ್ನಲೆಯಲ್ಲಿ signatories ನಲ್ಲಿ ಮೊದಲು ಒಬ್ಬರು ಮಾತನಾಡಿದ್ದಾರೆ, ಇನ್ನು ಇಬ್ಬರು ಮಾತನಾಡುವವರು ಇದ್ದಾರೆ. ಮಾನ್ಯ ಸಚಿವರು ಏನೋ ತಮ್ಮ ಕಷ್ಟವನ್ನು ಹೇಳಿಕೊಳ್ಳುತ್ತಿದ್ದಾರೆ, ಆದಕಾರಣ ಇನ್ನೊಬ್ಬರು ಮಾತನಾಡಲಿ. ಮಾನ್ಯ ಸಚಿವರು ಉತ್ತರ ಹೇಳಿದಮೇಲೆ ಚರ್ಚೆಯನ್ನು ಮುಂದುವರೆಸೋಣ ಬೇರೆ ಸಚಿವರೊಬ್ಬರಿಗೆ ಅದರ ಜವಾಬ್ದಾರಿಯನ್ನು ಕೊಟ್ಟು ಮಾನ್ಯ ಸಚಿವರು ಕೆಳಮನೆಯಲ್ಲಿ ತಮಗೆ ಇರುವಂತಹ ಕೆಲಸವನ್ನು ಮುಗಿಸಿಕೊಂಡು ಆನಂತರ ಬರಬಹುದು. ಈ

ವಿಷಯದ ಬಗ್ಗೆ ಒಬ್ಬರು ಮಾತ್ರ ಮಾತನಾಡಿ. ಆರು ಗಂಟೆಗೆ ಮಾನ್ಯ ಸಚಿವರು ಇಲ್ಲಿಂದ ಹೊರಡಬಹುದು.

**ಶ್ರೀ ಗೋ.ಮಧುಸೂಧನ್ (ಪಧವೀದರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸ್ವ–ಇಚ್ಛಾ ಮರಣದ ಬಗ್ಗೆ ಪ್ರಪಂಚದ ಯಾವುದೇ ಭಾಗದಲ್ಲಿ ಚರ್ಚೆ ನಡೆದಿರಬಹುದು. ಆದರೆ ಭಾರತಕ್ಕೆ ಅದು ಹೊಸದೂ ಅಲ್ಲ, ಭಾರತಕ್ಕೆ ಅದು ಯಾವತ್ತೂ ಸಹ ಸಹಜವಾದಂತಹ ಸವಾಲಾಗಿಯೇ ಉಳಿದಿದೆ. ಏಕೆಂದರೆ, ನಾವು ರಾಮಾಯಣದಲ್ಲಿ ಕಾಣುತ್ತೇವೆ. ರಾಮಾಯಣದಲ್ಲಿ ಸೀತೆಯ ಆರೋಗ್ಯ ತುಂಬಾ ಚೆನ್ನಾಗಿತ್ತು. ಮಹಾರಾಣಿಯಾಗಿದ್ದಳು. ಆದರೆ ಆಕೆಯ ಮುಂದೆ ಪತಿ ರಾಮಚಂದ್ರನ ವಿರಹದ ಸಂದರ್ಭದಲ್ಲಿ ಬಂದಾಗ ಆಪಾದನೆ ಪ್ರಶ್ನೆ ಬಂದಾಗ ಆಕೆ ಅಗ್ನಿ ಪರೀಕ್ಷೆಯಲ್ಲಿ ಗೆದ್ದು, ಆನಂತರ ಅಗ್ನಿ ಪ್ರವೇಶವನ್ನು ಮಾಡುತ್ತಾಳೆ. ಭೂಮಿ ಬಿರಿದು, ಒಳಗಡೆ ಹೋಗುತ್ತಾಳೆ ಎನ್ನುವ ಕಲ್ಪನೆ ಇದೆ. ಒಟ್ಟಿನಲ್ಲಿ ಸ್ವ–ಇಚ್ಛಾ ಮರಣವನ್ನು ಒಪ್ಪಿಕೊಳ್ಳುತ್ತಾಳೆ. ಇದನ್ನು ಯಾರೂ ಪಲಾಯನವಾದ ಎಂದು ಹೇಳಲಿಲ್ಲ. ನಾವು ಇವತ್ತಿನ ದಿವಸ ಆತ್ಮಹತ್ಯೆ ಎಂದು ಏನು ಕಲ್ಪನೆ ಮಾಡಿಕೊಳ್ಳುತ್ತೇವೆ, ಒಬ್ಬ ಹೇಡಿ ಮಾಡಿಕೊಳ್ಳುವಂಥ ಸಂಗತಿ ಎಂದು ಹೇಳಿ ಆ ರೀತಿಯಾಗಿ ಅದನ್ನು ಯಾರೂ ಸಹ consider ಮಾಡಿರಲಿಲ್ಲ. ಭೀಷ್ಮ ಇಚ್ಛಾ ಮರಣಿ. ಅವರ ಬಗ್ಗೆ ಹೇಳುವುದೇ ಇಚ್ಛಾ–ಮರಣಿ ಎಂದು. ಆ ರೀತಿಯಿಂದ ಅವರು ತಮ್ಮ ತಂದೆಯಿಂದ ವರವನ್ನು ಪಡೆದಿದ್ದರು. ಅವರು ಯಾವ ರೀತಿ ಮರಣವನ್ನಪ್ಪಿದರೆಂದರೆ ಅವರ ಅವಸಾನಕ್ಕಿಂತ ಮೊದಲು ಅವರೇನು ಯುದ್ಧದಲ್ಲಿ ಸೋಲುತ್ತಾರೆ ಅದಾದನಂತರ ಶರಷಯ್ಯೆಯ ಮೇಲೆ ಕೇವಲ ನೀರನ್ನು ಮಾತ್ರ ಕುಡಿದುಕೊಂಡು, ಅವರ ದೇಹದಲ್ಲಿದ್ದಂತಹ ಎಲ್ಲಾ ರಕ್ತ ಬಸಿದುಹೋದನಂತರವು ಸಹ ಆತ್ಮಶಕ್ತಿಯಿಂದ ಬದುಕಿರುತ್ತಾರೆ. ಆ ರೀತಿಯ ಭೀಷ್ಮನನ್ನು ನಾವು ಇತಿಹಾಸದಲ್ಲಿ ಕಾಣುತ್ತೇವೆ. ಇತಿಹಾಸದ ಕಾಲದಲ್ಲಿ ಶಂಕರಾಚಾರ್ಯರಿಗೂ ಮತ್ತು ಮಂಡನಮಿಶ್ರರಿಗೂ ಬಹಳ ದೊಡ್ಡದಾದಂತಹ ತಾತ್ವಿಕ ಚರ್ಚೆ ನಡೆಯುತ್ತದೆ. ಮಂಡನಮಿಶ್ರ ಬೌದ್ಧ, ಶಂಕರಾಚಾರ್ಯ ಸನಾತನಿ. ಆಗ ಮಂಡನಮಿಶ್ರ ಸೋತ ನಂತರದಲ್ಲಿ ಆತ

ಹೊಟ್ಟಿನ ನಡುವೆ ತನ್ನ ದೇಹವನ್ನು ಇಟ್ಟುಕೊಂಡು ಪ್ರತಿಕ್ಷಣ ಸುಟ್ಟಿಕೊಂಡು ಸಾಯುತ್ತಾನೆ. ಆದರೆ ಅದೇ ರೀತಿ ರಾಘವೇಂದ್ರ ಗುರುಗಳ ಬಗ್ಗೆ ಕಂಡಿದ್ದೇವೆ. ಅವರು ಸಮಾಧಿಯನ್ನು ಪಡೆದಂಥವರು. ಅದನ್ನು ಬೃಂದಾವನ ಎಂದು ಪೂಜೆ ಮಾಡುತ್ತಾರೆ. ವಾದಿರಾಜರ ಬೃಂದಾವನವನ್ನು ಪೂಜೆ ಮಾಡುತ್ತೇವೆ. ಮುಳಬಾಗಿಲಿನಲ್ಲಿರುವಂಥ ಶ್ರೀಪಾದರಾಜರ ಬೃಂದಾವನ್ನು ಪೂಜೆ ಮಾಡುತ್ತಾರೆ. ಅಷ್ಟೇ ಏಕೆ, ನಮ್ಮ ಸನ್ಯಾಸಿಗಳ ಬಗ್ಗೆ ಇರುವಂತಹ ಕಲ್ಪನೆ ಏನೆಂದರೆ, ಸನ್ಯಾಸಿಗಳಿಗೆ ಸಾವಿಲ್ಲ. ಅವರು ದೇಹ ತ್ಯಾಗವನ್ನು ಮಾಡುತ್ತಾರೆಂದು ಹೇಳುತ್ತಾರೆ. ದೇಹತ್ಯಾಗ ಹೇಗೆ ಮಾಡುತ್ತಾರೆಂದು ಕಲ್ಪನೆ ಮಾಡಿದರೆ, ತಲೆಯಲ್ಲಿ ಬ್ರಹ್ಮರಂಧ್ರ ಎಂದು ಏನಿರುತ್ತದೆ, ಆ ಬ್ರಹ್ಮರಂಧ್ರದಿಂದ ಅವರು ತಮ್ಮ ವಾಯುವನ್ನು ತೆಗೆದುಕೊಳ್ಳುವಂಥ ಪ್ರಾಣವಾಯು ಇದೆ, ಅದನ್ನು ಸ್ತಂಭನ ಮಾಡಿ, ಅವರು ಬ್ರಹ್ಮರಂಧ್ರದಿಂದ ಜೀವವನ್ನು ಬಿಡುತ್ತಾರೆ ಎನ್ನುವ ಕಲ್ಪನೆ ಇದೆ. ಅದಕ್ಕೋಸ್ಕರವೆ ಸನ್ಯಾಸಿಗಳು ಸತ್ತರೆ ಅವರ ತಲೆಯ ಮೇಲೆ ತೆಂಗಿನಕಾಯಿಯನ್ನು ಹೊಡೆದು ಅವರ ತಲೆಯನ್ನು ಹೋಳು ಮಾಡುವಂತಹ ಪದ್ಧತಿ ಈಗಲೂ ಸಹ ಇದೆ. ಆ ಕಾರಣಕ್ಕಾಗಿಯೇ ಆ ಪದ್ಧತಿ ಉಳಿದುಕೊಂಡು ಬಂದಿರುವುದು. ಬ್ರಹ್ಮರಂಧ್ರದಿಂದ ಪ್ರಾಣ ಬಿಡುವಂಥದ್ದು. ಇನ್ನು ನಮ್ಮ ಸಾವಿನಬಗ್ಗೆ ಪ್ರಪಂಚದಲ್ಲಿ ಎಲ್ಲೆಲ್ಲಿ ಏನು ಬೇಕಾದರೂ ಹೇಳಬಹುದು. ನಮ್ಮ ಭಾರತ ಸದಾಕಾಲ ಸಾವನ್ನು ಸ್ವಾಗತ ಮಾಡಿದಂತಹ ದೇಶ. ಪ್ರತಿನಿತ್ಯ ನಮ್ಮ ಭಾರತದಲ್ಲಿ ಮಹಾ ಮೃತ್ಯುಂಜಯ್ಯನ ಮಂತ್ರವನ್ನು ಹೇಳುತ್ತಾರೆ.

"ಓಂ ತ್ರ್ಯಂಬಕಮ್ ಯಜಾಮಹೇ

ಸುಂಗಧಿಮ್ ಪುಷ್ಟಿ ವರ್ಧನಮ್

ಉರ್ವಾರುಕಮಿವ ಬಂಧನಾನ್

ಮೃತ್ಯೋರ್ಮುಕ್ಷೀಯ ಮಾಮೃತಾತ್"

ಪ್ರತಿನಿತ್ಯ ಶಿವನ ಮುಂದೆ ಯಾವ ರೀತಿ ಸಾವು ಬೇಕೆಂದು ಕೇಳಿಕೊಳ್ಳುತ್ತಾರೆಂದರೆ, ಭಗವಂತ ನಿನ್ನ ಆಶ್ರಯದಲ್ಲಿ ಅತ್ಯಂತ ಸುಖವಾಗಿ

ಬೆಳೆದಿದ್ದೇನೆ, ನಾನು ಯಾವ ರೀತಿ ಸಾಯಬೇಕೆಂದರೆ, ಸೌತೆಕಾಯಿ ಬಲಿತ ನಂತರದಲ್ಲಿ ತನ್ನ ತೊಟ್ಟಿನಿಂದ ಯಾವ ರೀತಿ ಕಳಚಿಕೊಳ್ಳುತ್ತದೋ ಆ ರೀತಿ ಅಷ್ಟು ಸುಲಭವಾಗಿ ನಾನು ಸಾಯಬೇಕೆಂದು ಕೇಳಿಕೊಳ್ಳುತ್ತಾರೆ. ನಮ್ಮ ದೇಶದಲ್ಲಿ ಸಾಮಾನ್ಯ ವ್ಯಕ್ತಿ ಕೇಳಿಕೊಳ್ಳುವುದೇನೆಂದರೆ,

"ಅನಾಯಾಸೇನ ಮರಣಂ

ವಿನಾದೈನ್ಯೇನ ಜೀವನಂ"

ಅಂದರೆ ಯಾರ ಮುಂದೆಯೂ ಕೈ ಒಡ್ಡದಂತೆ ಬದುಕಬೇಕು, ಯಾವ ನೋವನ್ನು ಅನುಭವಿಸದೆ ಸುಖವಾಗಿ ಸಾಯಬೇಕು. ಈ ರೀತಿಯಾಗಿ ಪ್ರತಿನಿತ್ಯ ಸಾವಿನ ಬಗ್ಗೆ ಪ್ರತಿನಿತ್ಯ ಭಗವಂತನಲ್ಲಿ ಬೇಡುವಂಥ ಸಮಾಜ ಪ್ರಪಂಚದಲ್ಲಿ ಯಾವುದಾದರು ಇದ್ದರೆ ಅದು ಭಾರತದ ಸಮಾಜ. ಅದಕ್ಕೋಸ್ಕರವೆ ಈ ಸಮಾಜವನ್ನು ಮೃತ್ಯಂಜಯೀ ಸಮಾಜವೆಂದು ಕಲ್ಪನೆ ಮಾಡಿಕೊಂಡಿರುವಂಥದ್ದು. ಅದಕ್ಕೋಸ್ಕರವೇ ನಮ್ಮ ಸಮಾಜವನ್ನು ಮೃತ್ಯುಂಜಯ ಸಮಾಜವೆಂದು ಕಲ್ಪನೆ ಮಾಡಿಕೊಂಡಿರುವುದು. ಜೈನರಲ್ಲಿ ಸಲ್ಲೇಖನ ವ್ರತ ಇದ್ದೇ ಇದೆ. ಜೈನರು ಈ ಸಲ್ಲೇಖನ ವ್ರತವನ್ನು ಕೈಗೊಂಡರೆ ಆಹಾರ ಮತ್ತು ನೀರಿನ ಸೇವನೆಯನ್ನು ದಿನೇ ದಿನೇ ಕಡಿಮೆ ಮಾಡಿಕೊಂಡು ಬಂದು ತಮ್ಮ ದೇಹವನ್ನು ತ್ಯಾಗ ಮಾಡುತ್ತಾರೆ. ನಾವು ಎರಡನೆಯ ಬಾರಿಯೂ ಯೋಚನೆ ಮಾಡಿಕೊಂಡು ಬಂದಿರುವುದು ಏನೆಂದರೆ ಜರ ಮುಪ್ಪು ಬರುವಂಥದ್ದು, ರೋಗ ಮತ್ತು ಮರಣ, ಈ ಮೂರು ಸಂಗತಿಗಳು ಇರುವಂಥದ್ದು ದೇಹಕ್ಕೆ ಮಾತ್ರ. ಜನ್ಮ, ಜರ, ಮುಪ್ಪು ಮತ್ತು ರೋಗ ಈ ನಾಲ್ಕು ಭಯ ಇರುವುದು ಸಹ ದೇಹಕ್ಕೆ ಮಾತ್ರ ಆತ್ಮಕ್ಕೆ ಯಾವುದು ಇಲ್ಲ. ಇಲ್ಲಿಯವರೆಗೆ ಆತ್ಮದ ಬಗ್ಗೆ ಆತ್ಮ ಎಲ್ಲಿದೆ, ಪರಮಾತ್ಮ ಎಂದರೆ ಏನು ಎಂದು ಯಾರ್‍ಯಾರೋ ಏನೇನೋ ಮಾತನಾಡುತ್ತಿದ್ದರು. ಈ ಬಗ್ಗೆ Communist Russia ದಲ್ಲಿ Scientist ಗಳು Kirlian photography ಯನ್ನು ತೆಗೆದರು. ಆ Kirlian photography ನಲ್ಲಿ ಆತ್ಮ ದೇಹವನ್ನು ಬಿಡತಕ್ಕ ಸಂದರ್ಭದ ಒಂದು ಚಿತ್ರೀಕರಣವನ್ನು ಮಾಡಿಟ್ಟಿದ್ದಾರೆ. ಅಂದರೆ ಆತ್ಮ ಈ ದೇಹದಲ್ಲಿರುವುದು

ನಿಶ್ಚಿತ. ಇದಕ್ಕೆ ತಕ್ಕ ಹಾಗೆ ನಮಗೆ ಕನಸುಗಳು ಬೀಳುವುದು, ಯಾರೋ ಒಬ್ಬ ವ್ಯಕ್ತಿಯನ್ನು ನೋಡಿದಾಗ ಆತ ಬಹಳ ಆತ್ಮೀಯ ಏನಿಸುವುದು, ಯಾವುದೋ ಜಾಗಕ್ಕೆ ಹೋದಲ್ಲಿ ಆ ಜಾಗವನ್ನು ಈ ಮೊದಲೇ ನೋಡಿದ್ದೇನೆ ಎಂದು ಅನಿಸುವಂತಹ ಭಾವನೆಗಳಿಗೆ ಕಾರಣ ನಮ್ಮ ಪೂರ್ವ ಜನ್ಮದ ಸ್ಮರಣೆಗಳು. ಈಗಲೂ ಸಹ ಕೆಲವರು ತಮ್ಮ ಪೂರ್ವಜನ್ಮದ ಬಗ್ಗೆ ಹೇಳುತ್ತಾರೆ, ನಾನು ಇದೇ ಮನೆಯಲ್ಲಿದ್ದೆನು, ಇವಳು ನನ್ನ ಹೆಂಡತಿ, ಇವನು ನಮ್ಮ ಅಪ್ಪ ಆಗಿದ್ದನು, ಇದು ನನ್ನ ಆಸ್ತಿ ಎನ್ನುವಂತಹ ಅನೇಕ ಘಟನೆಗಳು ನಾವು ಕಂಡಿದ್ದೇವೆ. ಇಂತಹ ಜ್ಞಾನ ಇರುವುದು ಸಾಮಾನ್ಯ ಜ್ಞಾನವಲ್ಲ, ಅದು ಪೂರ್ವ ಜನ್ಮದ ಜ್ಞಾನ. ಅಥವಾ ಮುಂದಿನ ಜನ್ಮದಲ್ಲಿ ಏನಾಗುತ್ತದೆ ಎಂದು ಹೇಳುವವರು ಅಪರಕ್ಷ ಜ್ಞಾನಿ. ಪೂರ್ವ ಜ್ಞಾನ ಮತ್ತು ಅಪರಕ್ಷ ಜ್ಞಾನ ಇಲ್ಲದೆ ನಾನೊಬ್ಬ ಸಾಮಾನ್ಯ ಜ್ಞಾನಿ. ನನಗೆ ನನ್ನ ಮುಂದೆ ಕುಳಿತಿರುವವರು ಕಾಣುತ್ತಿದ್ದಾರೆ, ಅದು ಸಾಮಾನ್ಯ ಜ್ಞಾನ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಗಳೇ, ಇಲ್ಲಿರುವ ನಾವು ಸಾಮಾನ್ಯ ಜ್ಞಾನಿಗಳು, ಮಧುಸೂದನ್‌ರವರಷ್ಟು ಜ್ಞಾನ ನಮಗೆ ಇಲ್ಲ. ನಮಗೆ ಹಿಂದಿನ ಮತ್ತು ಮುಂದಿನ ಜನ್ಮದ ಬಗ್ಗೆ ಗೊತ್ತಿಲ್ಲ. ಆದರೆ ಈ ಜನ್ಮದಲ್ಲಿ ಇಲ್ಲಿಯೇ ಈ ಕ್ಷಣದಲ್ಲಿಯೇ ಸ್ವರ್ಗ, ನರಕ ಎಲ್ಲವೂ ಇಲ್ಲಿಯೇ ಇದೆ.

**ಶ್ರೀ ಗೋ.ಮಧುಸೂದನ್:–** ಹಾಗೆಯೇ ಸಾಮಾನ್ಯ ಜ್ಞಾನದ ಬಗ್ಗೆ ಕೂಡ ಒಂದು ಮಾತನ್ನು ಹೇಳಿದ್ದಾರೆ. Common sense is that sense which is not commonly found in common man.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಗಳೇ, ಇವತ್ತು ಸದನ ಏಕೆ ಹೀಗೆ ನಡೆಯುತ್ತಿದೆ ಎನ್ನುವುದು ನನಗೆ ತಿಳಿಯುತ್ತಿಲ್ಲ. ತಾವು ಮಾತಿಗೂ, ಮಾತಿಗೂ ಸಮಯ ಆಯ್ತು, ಕುಳಿತುಕೊಳ್ಳಿ, ವೇಳೆಯ ಮಹತ್ವ ಇದೆ, ಎಂದು ಹೇಳುತ್ತಿದ್ದರು. ಈಗ ಇವರು ಪುರಾಣಗಳನ್ನು ಹೇಳುತ್ತಿದ್ದಾರೆ. ನಾವು ಈ ಪುರಾಣಗಳನ್ನು ಬಹಳಷ್ಟು ಕೇಳಿದ್ದೇವೆ. ಅದನ್ನು ಹೇಳಲು ನೀವು ಈಗ ಅವಕಾಶ ನೀಡಿರುವುದು ನಮಗೆ ಭಯಂಕರವಾಗಿದೆ.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಗಳೇ, ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ನಮ್ಮ ಭಾರತದಂತಹ ದೇಶದಲ್ಲಿ ಸ್ವ ಇಚ್ಛಾ ಮರಣಕ್ಕೆ ಪರಂಪರಾನುಗತವಾಗಿ ಇದಕ್ಕೆ ಒಪ್ಪಿಗೆಯನ್ನು ನೀಡಿದ್ದಾರೆ. ಸಾಮಾಜಿಕ ಒಪ್ಪಿಗೆ ಇದೆ, ಇದನ್ನು ದೇಹ ತ್ಯಾಗ ಮಾಡುವುದು ಎಂದು ಇದನ್ನು ಒಂದು ರೀತಿಯಲ್ಲಿ ಶೌರ್ಯ ಎಂದು ಕೂಡ ಯೋಚನೆ ಮಾಡಿದ್ದಾರೆ. ಯಾರು ಮರಣವನ್ನು ಅಪ್ಪುತ್ತಾರೆ, ಶೌರ್ಯವನ್ನು ಪ್ರದರ್ಶನ ಮಾಡುತ್ತಾರೆ ಎನ್ನುವ ಒಂದು ಕಲ್ಪನೆ ಇದೆ. ಆ ಕಾರಣಕ್ಕಾಗಿಯೇ ಇದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ ಎನ್ನುವುದಕ್ಕಾಗಿ ಇವತ್ತು ಕಾನೂನಿನಲ್ಲಿ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತಿದ್ದೇವೆ. ಇವತ್ತು ಈ ಸದನದ ಒಪ್ಪಿಗೆಯನ್ನು ಪಡೆದು ಅದರ ಬಗ್ಗೆ ಒಂದು ರೆಶಲ್ಯೂಶನ್ ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು. ಆದರೆ ಈ ಕಾನೂನನ್ನು ಮಾಡುವಾಗ ನಾವು ಕೆಲವು ಎಚ್ಚರಿಕೆಗಳನ್ನು ಮಾಡಬೇಕಾಗುತ್ತದೆ. ಯಾರೋ ಒಬ್ಬ ಹೇಡಿ ಸಾಯುವುದಕ್ಕೆ ಈ ಕಾನೂನಿನಲ್ಲಿ ಅವಕಾಶ ಇರಬಾರದು. ಈ ಕಾನೂನಿನ ಅಡಿಯಲ್ಲಿ ನಾನು ಪರೀಕ್ಷೆಯಲ್ಲಿ ಫೇಲಾದೆ, ಚುನಾವಣೆಯಲ್ಲಿ ಸೋತುಹೋದೆ, ಸಿಕ್ಕಾಪಟ್ಟೆ ಸಾಲ ಮಾಡಿದೆ, ಕುಡಿದು ಯಾರದೋ ಬಳಿ ನಾನು ಅವ್ಯವಹಾರವನ್ನು ಮಾಡಿದ್ದೇನೆ ಆ ಕಾರಣಕ್ಕಾಗಿ ಸಾಯುತ್ತಿದ್ದೇವೆ ಎಂದು ಹೇಳತಕ್ಕ ವ್ಯಕ್ತಿಗಳಿಗೆ ಅಪರಾಧಿ ಪ್ರಜ್ಞೆಯಿಂದ ಸಾಯುತ್ತೇನೆ ಎನ್ನುವವರಿಗೆ ಈ ಕಾನೂನಿನಲ್ಲಿ ಅವಕಾಶ ನೀಡಬಾರದು. ಇದಕ್ಕೆ ಏನು ಮಾಡಬೇಕು ಎನ್ನುವುದಕ್ಕೆ ನಮ್ಮ ಕಾನೂನಿನಲ್ಲಿ ನಾವು ಅನೇಕ ವಿಷಯಗಳನ್ನು ಉಲ್ಲೇಖ ಮಾಡಬೇಕು. ಯಾವುದೇ ವ್ಯಕ್ತಿ ತಾನು ಸಾಯುವುದಕ್ಕೆ ಹಕ್ಕು ಅಧಿಕಾರವಿದೆ. ಹಾಗಾಗಿ ಅದನ್ನು ಪ್ರತಿಪಾದನೆ ಮಾಡುವಂಥದ್ದು ಪರಂಪರಾನುಗತವಾಗಿ ನಮ್ಮ ದೇಶದ ಸಂಸ್ಕೃತಿ ಮತ್ತು ಸಂಸ್ಕಾರ ನಡೆದುಕೊಂಡು ಬಂದಿದೆ. ಆದ್ದರಿಂದ ಇದಕ್ಕೆ ಬೇಕಾದ ಒಂದು resolution ಅನ್ನು ನಮ್ಮ ಸದನದ ಎಲ್ಲಾ ಸದಸ್ಯರು ಒಪ್ಪಿ, ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಬೇಕು. ಅವರು ಇದನ್ನು ಪಾಸ್ ಮಾಡಬೇಕೆಂದು ನಾನು ಎಲ್ಲರಲ್ಲಿ ಮನವಿಯನ್ನು ಮಾಡುತ್ತಾ, ತಮ್ಮ ಅನುಮತಿಯನ್ನು ಬೇಡಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಗಳೇ, ಇಷ್ಟೆಲ್ಲಾ ಕನ್‌ವಿನ್ಸ್ ಆದಮೇಲೆ ಮಧುಸೂದನ್‌ರವರ ಏನಾದರೂ ಇಚ್ಛಾ ಮರಣವನ್ನು ಕೇಳುತ್ತಿದ್ದಾರೆಯೇ?

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಗಳೇ, ಇಂತಹ ಇಚ್ಛಾ ಮರಣಕ್ಕೆ ಒಪ್ಪಿಕೊಂಡೇ ನಾನು ಪಂಜಾಬ್ ಹತ್ತಿ ಉರಿಯುತ್ತಿದ್ದಂತಹ ಸಂದರ್ಭದಲ್ಲಿ ನಾನು ಪಂಜಾಬ್‌ನಲ್ಲಿ ಕೆಲಸವನ್ನು ಮಾಡಿದ್ದೇನೆ.

**ಶ್ರೀಮತಿ ಮೋಟಮ್ಮ:-** ಅದಕ್ಕೆ ನಾವೆಲ್ಲರೂ ಶಹಬ್ಬಾಸ್‌ಗಿರಿಯನ್ನು ಸಲ್ಲಿಸುತ್ತೇವೆ.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಗಳೇ, ನಾನು ಬದುಕಿ ಬರುತ್ತೇನೆ ಎನ್ನುವ ನಂಬಿಕೆಯಿಂದ ಪಂಜಾಬ್‌ಗೆ ಹೋಗಿರಲಿಲ್ಲ. ನಾನು ಎರಡು ವರ್ಷಗಳ ಕಾಲ ಪಂಜಾಬ್‌ನಲ್ಲಿದ್ದೆನು. ಪ್ರತಿಕ್ಷಣ ಅಕ್ಕಪಕ್ಕ ಬುಲೆಟ್‌ನಲ್ಲಿ ಓಡಾಡಿಕೊಂಡು ಬಂದಿದ್ದೇನೆ.

**Smt. Motamma:-** Really you are great!

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಗಳೇ, ಆಗಲೇ ತಾವು ಪೀಠದಲ್ಲಿ ಇರದಿದ್ದ ಸಂದರ್ಭದಲ್ಲಿ ಕಾನೂನು ಸಚಿವರು ಮಧುಸೂದನ್ ಹೇಗೆ ಎನ್ನುವ ಮಾತನ್ನು ಹೇಳಿದರು. ಹಾಗಾಗಿ ಅವರು ಸಾಯುವುದಿಲ್ಲವೆನ್ನುವ ನಂಬಿಕೆ ನಮಗಿದೆ.

**ಶ್ರೀ ಗೋ. ಮಧುಸೂದನ್:-** ಮಾನ್ಯ ಸಭಾಪತಿಗಳೇ, **"ದಾನೇ ದಾನೇಪರ್ ಲಿಖ್ಖಾ ಹೈ ಖಾನೇವಾಲೋ ಕಾ ನಾಮ್, ಗೋಲಿ ಗೋಲಿ ಪರ್ ಲಿಖ್ಖಾ ಹೈ ಮರ್ನೇವಾಲೋ ಕಾ ನಾಮ್"** ಎನ್ನುವ ಗಾದೆ ಮಾತಿದೆ.

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಗಳೇ, ಮಧುಸೂದನ್‌ರವರ ವಾದವನ್ನು ನಾವು ಒಪ್ಪೋಣ. ಆದರೆ ......

**ಶ್ರೀ ಭಾನುಪ್ರಕಾಶ:-** ಮಾನ್ಯ ಸಭಾಪತಿಗಳೇ, ನನ್ನದೊಂದು ಸಲಹೆ, ಇಲ್ಲಿ ಆಡತಕ್ಕ ಮಾತುಗಳು ದಾಖಲೆ ಆಗುವ ಹಿನ್ನಲೆಯಲ್ಲಿ ಒಂದು

ತಿದ್ದುಪಡಿಯನ್ನು ಹೇಳುತ್ತಿದ್ದೇನೆ. ಮೊದಲನೆಯದು 'ಮುಂಡನಮಿಶ್ರ' ಬೌದ್ಧರಲ್ಲ, ಅವರು ಒಬ್ಬ ವೈದಿಕ ಕರ್ಮಟ, ಆತನ ಹೆಂಡತಿಯ ಹೆಸರು ಭಾರತಿ. ಅಗ್ನಿಯಲ್ಲಿ ಸುಟ್ಟುಕೊಂಡು, ಹೊಟ್ಟಿನಲ್ಲಿ ಇದ್ದವರು ಕುಮಾರಿಲಿ ಭಟ್ಟ. ಈ ಎರಡು ತಿದ್ದುಪಡಿಗಳನ್ನು ಮಾಡಬೇಕು.

**ಶ್ರೀ ಎಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಗಳೇ, ಇವತ್ತಿನ ಚರ್ಚೆಗೆ ಮಧುಸೂದನ್‌ರವರೆ ಉತ್ತರವನ್ನು ಕೊಟ್ಟುಬಿಟ್ಟಿದ್ದಾರೆ. ಅವರು ಭೀಷ್ಮ, ಸೀತೆ, ನಮ್ಮ ರಾಘವೇಂದ್ರಸ್ವಾಮಿಗಳು ಸತ್ತಿರುವುದು ಯಾವ ರೀತಿ ಎನ್ನುವುದನ್ನು ಹೇಳಿದರು. ಅದರ ಜೊತೆಗೆ ವಿವೇಕಾನಂದರವರು ಹೇಳಿರತಕ್ಕ ಮಾತುಗಳು, ಮತ್ಯಾರೋ ನೀಡಿದಂತಹ ದಿನಾಂಕಗಳ ಬಗ್ಗೆ ಇಲ್ಲಿ ಹೇಳಿದರು. ಆದರೆ ಆ ರೀತಿ ಸಾಯಲಿಕ್ಕೆ ನಮಗೆ ಯಾವುದೇ ನಿರ್ಣಯದ ಅಗತ್ಯವಿಲ್ಲ. ಸ್ವ ಇಚ್ಛಾ ಮರಣದ ಮಟ್ಟಕ್ಕೆ ಯಾರಾದರೂ ತಲುಪಿದರೆ ಕಾನೂನು ಸಚಿವರಾದ ಸುರೇಶ್‌ಕುಮಾರ್‌ರವರಿಗೆ ಕಾನೂನು ಮಾಡಿ ಎಂದು ನಾವು ಏಕೆ ಕೇಳಬೇಕು? ಈಗಾಗಲೇ ಸತ್ತಿರುವವರು ನಮ್ಮ ಸುರೇಶ್‌ಕುಮಾರ್ ಮತ್ತು ಮಧುಸೂದನ್‌ಗಿಂತ ಮೇಲೆ ಹೋದವರು, ಇವರು ಮಾಡುವುದಾದರೆ ನಾವೆಲ್ಲರೂ ಖಂಡಿತ ಒಪ್ಪಿಕೊಳ್ಳೋಣ. ಆದರೆ ಇದಕ್ಕೆ ಸರ್ಕಾರದ ಒಪ್ಪಿಗೆ ಬೇಕಾಗಿಲ್ಲ. ಆ ಮಟ್ಟಕ್ಕೆ ಹೋಗುವ ಪರಿಸ್ಥಿತಿ ನಿರ್ಮಾಣ ಆದಲ್ಲಿ ನಾವೆಲ್ಲರೂ ಮಾಡೋಣ. ಅದಕ್ಕೆ ಯಾವ ಸರ್ಕಾರದ ಅನುಮತಿಯೂ ನಮಗೆ ಬೇಕಾಗಿಲ್ಲ. ಮತ್ಯಾಕೆ ಈ ಚರ್ಚೆ

**ಸಭಾಪತಿಯವರು:-** ವೀರಣ್ಣ ಮತ್ತಿಕಟ್ಟಿಯವರ ಜೊತೆಗೆ ಹಲವರು ಈ ವಿಚಾರ ಹೇಗೆ ಚರ್ಚೆಗೆ ಬಂತು ಎನ್ನುವುದನ್ನು ಪ್ರಸ್ತಾವಿಕವಾಗಿ ಪ್ರಸ್ತಾಪಿಸಿದರು. ನಮ್ಮ ಕಚೇರಿಗೆ ಯಾವ ಸದಸ್ಯರು ಚರ್ಚೆಗೆ ಅನುಮತಿಯನ್ನು ಕೋರಿ ಬರೆದುಕೊಡುತ್ತಾರೆ ಅದನ್ನು ಆದ್ಯತೆಯ ಮೇರೆಗೆ ಮತ್ತು ಆಯಾ ದಿನಗಳಲ್ಲಿ ಯಾವ ಸಚಿವರುಗಳು ಲಭ್ಯ ಇರುತ್ತಾರೆ ಅದನ್ನೆಲ್ಲ ನೋಡಿಕೊಂಡು ಅನುಮತಿಯನ್ನು ನೀಡುತ್ತೇನೆ. ಅದಲ್ಲದೇ ಒಂದೇ ಇಲಾಖೆಯ ಬಗ್ಗೆ ಮಾತ್ರವಲ್ಲದೇ ಬೇರೆ ಬೇರೆ ಇಲಾಖೆಗಳ ಬಗ್ಗೆ ಕೂಡ ಚರ್ಚೆ ಮಾಡಬೇಕೆನ್ನುವುದನ್ನು ಮನದಲ್ಲಿಟ್ಟುಕೊಂಡು ಸದನದಲ್ಲಿ ಬರತಕ್ಕ ವಿಚಾರಗಳ

ಪಟ್ಟಿಯನ್ನು ಮಾಡುತ್ತೇನೆ. ಮಾನ್ಯ ಶಿವಯೋಗಿಸ್ವಾಮಿಯವರು ನನ್ನ ಕಚೇರಿಗೆ ಬಂದು ಒಂದು ವಿಚಾರವನ್ನು ಪ್ರಸ್ತಾಪಿಸಿದರು, ಅವರು ಚಿಕ್ಕ ವಯಸ್ಸಿನಲ್ಲಿ ಅವರಿಗೆ ಹಿಂದಿ ಪಾಠವನ್ನು ಹೇಳಿಕೊಟ್ಟಂತಹ ಶಿಕ್ಷಕಿ ಬಗ್ಗೆ ಹೇಳಿದರು. ನಾನು ಕೂಡ ದಾವಣಗೆರೆಗೆ ಹೋಗಿದಂತಹ ಸಂದರ್ಭದಲ್ಲಿ ನನ್ನನ್ನೂ ಸಹ ಅವರು ಭೇಟಿ ಮಾಡಿ ವಿಚಾರವನ್ನು ತಿಳಿಸಿದ್ದರು. ಶಿವಯೋಗಿಸ್ವಾಮಿಗಳು ಸಹ ನನ್ನ ಬಳಿ ಬಂದು ನನಗಂತೂ ಈ ವಿಚಾರ ಕೇಳಿ ಕಾನೂನು ಮಾಡತಕ್ಕ ಅವಶ್ಯಕತೆ ಇದೆ ಎನಿಸುತ್ತಿರುವ ಹಿನ್ನಲೆಯಲ್ಲಿ ನಾನು ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪಿಸುತ್ತೇನೆ, ಆದರೆ ಕಾನೂನು ಆಗುವುದು ಬಿಡುವುದು ಯಾರ ಕೈಯಲ್ಲೂ ಇಲ್ಲ, ಆದರೆ ಈ ವಿಷಯವನ್ನು ಪಟ್ಟಿ ಮಾಡಿ ಎಂದು ಒಂದು ವಾರದಿಂದಲೂ ಸಹ ನನ್ನನ್ನು ಪ್ರತಿನಿತ್ಯ ಬಂದು ಕೇಳುತ್ತಿದ್ದರು. ಯೋಗಯೋಗ ಇವತ್ತು ಈ ವಿಷಯ ಲಿಸ್ಟ್ ಆಗಿದೆ. ಎಷ್ಟೋ ವಿಚಾರಗಳು ಅಜೆಂಡಾದಲ್ಲಿ ಬಂದರೂ ಸಹ ಆ ವಿಷಯದ ಬಗ್ಗೆ ತಲುಪುವ ತನಕ ಸದನ ನಡೆಯುವುದಿಲ್ಲ. ಸಮಯ ಆಗಿದೆ, ಸಾಕು ಎಂದು ಸದನ ಮುಗಿದು ಬಿಡುತ್ತದೆ. ಆದರೆ ಇವತ್ತು ಸ್ವಲ್ಪ ಸಮಯ ಲಭ್ಯ ಇರುವ ಕಾರಣಕ್ಕಾಗಿ ಅವರಿಗೆ ಈ ವಿಚಾರದ ಬಗ್ಗೆ ಚರ್ಚೆ ಮಾಡಲು ಅವಕಾಶವನ್ನು ನೀಡಿದ್ದೇನೆ. ಅದನ್ನು ಬಹಳ ಅದ್ಭುತವಾದ ಪಾಂಡಿತ್ಯದ ರೂಪದಲ್ಲಿ ಮನಸ್ಸಿನ ನಾಟುವ ಹಾಗೆ ಇಲ್ಲಿ ಚರ್ಚೆ ನಡೆಯುತ್ತಿದೆ. ಈ ಚರ್ಚೆಯನ್ನು ನಾವು ಮುಂದುವರೆಸೋಣ. ಅದಕ್ಕೆ ಮುಂಚೆ ನಾನು ಹೇಳಿದ ಹಾಗೆ ನಮ್ಮ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ಸುರೇಶ್‌ಕುಮಾರ್‌ರವರು ಕೆಳಮನೆಯಲ್ಲಿ ಸದ್ಯದಲ್ಲಿ ಧನವಿನಿಯೋಗ ವಿಧೇಯಕವನ್ನು ಮತಕ್ಕೆ ಹಾಕುವುದರಿಂದ ಅವರು ಅಲ್ಲಿಗೆ ಹೋಗಬೇಕಾಗಿದೆ. ಅವರು ಅಲ್ಲಿಗೆ ಹೋಗಿ ಮತ್ತೆ ಬರುವುದಾಗಿ ಹೇಳುತ್ತಿದ್ದಾರೆ. ಹಾಗಾಗಿ ಈ ಸ್ವಇಚ್ಛಾ ಮರಣದ ಬಗ್ಗೆ ಸರ್ಕಾರದ ಉತ್ತರವನ್ನು ಅವರು ಕೊಡಲಿ. ಯಾವಾಗಲೂ ನಿಯಮ 330ರ ಅಡಿಯಲ್ಲಿ ಚರ್ಚೆ ನಡೆದಾಗ ಸರ್ಕಾರದಿಂದ ಉತ್ತರ ಬಂದ ಮೇಲೂ ಸಹ ಒಂದು ಗಂಟೆಗಳ ಕಾಲ ಚರ್ಚೆ ನಡೆಯುತ್ತದೆ. ಬೆಳಿಗ್ಗೆಯೂ ಸಹ ಅದೇ ರೀತಿ ನಡೆದಿದೆ. ಅದೇ ರೀತಿ ಈ ವಿಚಾರದಲ್ಲೂ ಕೂಡ ಸರ್ಕಾರದ ಉತ್ತರ ಆದ

ಮೇಲೆ ಅದರ ಬಗ್ಗೆ ಕ್ಲಾರಿಫಿಕೇಶನ್‌ಗೆ ಕೆಲವರಿಗೆ ಅವಕಾಶವನ್ನು ನೀಡಲಾಗುವುದು. ಈಗ ಸಚಿವರು ಉತ್ತರ ನೀಡುತ್ತಾರೆ.

**ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು):–** ಮಾನ್ಯ ಸಭಾಪತಿಗಳೆ, ಮಾನ್ಯ ಮೇಲ್ಕಂಡ ಸದಸ್ಯರುಗಳು ಇಚ್ಛಾ ಮರಣದ ಬಗ್ಗೆ ಕೇಳಿರುವ ವಿಚಾರದ ಬಗ್ಗೆ ಕರ್ನಾಟಕ ಕಾನೂನು ಆಯೋಗವು ದಾವಣಗೆರೆಯ ಶ್ರೀಮತಿ ಕರಿಬಸಮ್ಮನವರ ಇಚ್ಛಾ ಮರಣದ ಬಗ್ಗೆ ಅಹವಾಲನ್ನು ಕೂಲಂಕುಷವಾಗಿ ಪರಿಶೀಲನೆ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಕೆಳಕಂಡ ಅಂಶಗಳನ್ನು ಗಂಭೀರವಾಗಿ ಪರಿಗಣಿಸಬಹುದಾಗಿದೆ.

1. ಇಚ್ಛಾ ಮರಣವನ್ನು ಅನುಮೋದಿಸುವ ಕಾನೂನು ಭಾರತದಲ್ಲಿ ಯಾವುದು ಇರುವುದಿಲ್ಲ.

2. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅರುಣಾ ರಾಮಚಂದ್ರ ಶಾನ್‌ಬೋಗ್ ಇದೊಂದು ಬಹಳ ದಯನೀಯ ಪ್ರಸಂಗ ಮುಂಬೈನಲ್ಲಾಗಿರುವುದು. For the last 38 years, she (Aruna Ramchandra Shanbaug) is lying in the KEM Hospital. ಪ್ರತಿವಾದಿ ಯುನಿಯನ್ ಆಫ್ ಇಂಡಿಯಾ ಮತ್ತು ಇತರರು ಮೊಕದ್ದಮೆಯಲ್ಲಿ (2011)4 ಎಸ್‌ಸಿಸಿ 454, ಇಚ್ಛಾ ಮರಣಕ್ಕೆ ಅನುಮತಿ ಕೊಡಬಹುದೆ ಬೇಡವೇ ಅನ್ನುವ ಪ್ರಶ್ನೆಯನ್ನು ದೀರ್ಘವಾಗಿ ಪರಿಶೀಲನೆ ಮಾಡಿರುತ್ತದೆ.

3. ಇಚ್ಛಾ ಮರಣದಲ್ಲಿ ಎರಡು ಪ್ರಭೇಧಗಳನ್ನು ನ್ಯಾಯಾಲಯವು ಗಮನಿಸಿರುತ್ತದೆ.

ಎ) Active – (ಸಕ್ರಿಯಾ) ಇಚ್ಛಾ ಮರಣ, ಹಾಗೂ

ಬಿ) Passive – (ನಿಷ್ಕ್ರಿಯ) ಇಚ್ಛಾ ಮರಣ ಎಂದು ಗುರುತಿಸಲಾಗಿದೆ.

ನಿಷ್ಕ್ರಿಯ ಇಚ್ಛಾಮರಣವೆಂದರೆ ವ್ಯಕ್ತಿಯು ಜೀವಿಸಲು ಅವಶ್ಯಕವಾಗಿ ಕೊಡುತ್ತಿರುವ ಔಷಧೋಪಚಾರಗಳನ್ನು ನಿಲ್ಲಿಸುವುದರಿಂದ ವ್ಯಕ್ತಿ ಸ್ವಾಭಾವಿಕವಾಗಿ ಸಾಯಲು ಅವಕಾಶ ಮಾಡಿಕೊಡುವುದು.

4. ಸಕ್ರಿಯ ಇಚ್ಛಾಮರಣ ಎಂದರೆ ಬೇರೆಯವರ ಸಹಾಯದಿಂದ ಪಡೆದುಕೊಳ್ಳತಕ್ಕ ಇಚ್ಛಾ ಮರಣವು ಕಾನೂನು ರೀತ್ಯ ಕೊಲೆಯಾಗುತ್ತದೆ ಮತ್ತು ಕಲಂ 302 ಭಾರತ ದಂಡ ಸಂಹಿತೆ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ ಸಕ್ರಿಯ ಇಚ್ಛಾಮರಣವು ಕಾನೂನಿನ ಅನುಮತಿ ಇಲ್ಲದ ಕಾರಣ ಹಾಲಿ ಸಂಪೂರ್ಣವಾಗಿ ನಿಷೇಧ ಇರುತ್ತದೆ.

5. ನಿಷ್ಕ್ರಿಯ ಇಚ್ಛಾ ಮರಣದ ಬಗ್ಗೆ ಯಾವ ಕಾನೂನು ಸಹ ಇಲ್ಲದಿರುವ ಕಾರಣ ಆಯಾ ರಾಜ್ಯದ ಶ್ರೇಷ್ಠ ನ್ಯಾಯಾಲಯಗಳಿಗೆ ನಿಷ್ಕ್ರಿಯ ಇಚ್ಛಾ ಮರಣ ಹೊಂದಲು ಇಚ್ಛಿಸುವ ವ್ಯಕ್ತಿ ಅರ್ಜಿ ಹಾಕಿ ನಂತರ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮೇಲ್ಕಂಡ ತೀರ್ಪಿನಲ್ಲಿ ಹೇಳಿರುವ ಸೂತ್ರಗಳನ್ನು ಅನುಸರಿಸಿ, ಉಚ್ಚ ನ್ಯಾಯಾಲಯದ ಆದೇಶ ಪಡೆದುಕೊಂಡು ಕ್ರಮ ತೆಗೆದುಕೊಳ್ಳಬಹುದಾಗಿದೆ. ಈ ಬಗ್ಗೆ ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಪ್ಯಾರಾ 134ನ್ನು ಗಮನಿಸಬಹುದಾಗಿದೆ.

6. ಕರ್ನಾಟಕ ಕಾನೂನು ಆಯೋಗದ ಸಂಪೂರ್ಣ ವರದಿಯು ಬಂದನಂತರ ಕಾನೂನಿನ ಸೂಕ್ಷ್ಮತೆಗಳನ್ನು ಪರಿಗಣನೆ ಮಾಡಿ ಇದಕ್ಕಾಗಿ ಸೂಕ್ತ ಕಾನೂನನ್ನು ತರಬಹುದೇ ಎಂಬ ಬಗ್ಗೆ ಚಿಂತನೆ ನಡೆಸಬಹುದಾಗಿದೆ.

ಇನ್ನು ನಾನು ಇಲ್ಲಿ ನಾಲ್ಕು ಅಂಶಗಳನ್ನು ಹೇಳುತ್ತೇನೆ. ಈಗಾಗಲೇ ನಾನು ಹೇಳಿರುವಂತಹ **Aruna Ramchandra Shanbaug Vs Union of India and others [ (2011) 4 SCC 454) ]** ಪ್ರಕರಣದಲ್ಲಿ ನೀಡಲಾಗಿರುವ ತೀರ್ಪಿನ ಕೆಲವು ಭಾಗಗಳನ್ನು ಹೇಳುತ್ತೇನೆ. ಇದು ಬಹಳ ಮುಖ್ಯವಾದ ಕೇಸಾಗಿದೆ. It (Eighteenth Report of Law Commission of Karnataka) reads thus:-

> "That is a case of Ms. Aruna Ramachandra Shanbaug aged about 60 years who being in a persistent vegetative state can not see or hear anything nor can she express or communicate in any manner whatsoever. … … …"

ಆಕೆಯು ಆ ಸ್ಥಿತಿಗೆ ಬಂದದ್ದೂ ಸಹ ಬಹಳ ದೊಡ್ಡ tragedy ನಲ್ಲಿ. ಅದೇ ಆಸ್ಪತ್ರೆಯ ಕೆಲವರು ಆಕೆಯ ಮೇಲೆ ಮಾಡಿದಂತಹ ಗ್ಯಾಂಗ್ ರೇಪಿನಿಂದಾಗಿ ಆಕೆಯು ಆ ಸ್ಥಿತಿಯನ್ನು ತಲುಪಿದರು. She cannot speak. It further reads thus:

> " ... The Doctors treating her have opined that there is not the slightest possibility of any improvement in Her condition. Her body is lying in bed in KEM Hospital, Mumbai for the last 36 years. The prayer made by a Public spirited well wisher on humanitarian considerations is to direct the hospital authorities to stop feeding Aruna and to let her die peacefully. … …"

Ventilators ಮುಂತಾದ ಸಿಸ್ಟಂಗಳನ್ನು ತೆಗೆದುಬಿಡಬೇಕೆಂದು ಅವರು ಕೇಳಿಕೊಂಡರು. Irony ಏನೆಂದರೆ:

> " .... The staff of the hospital attending on her, (Sri Suresh Kumar adds: "for the last 36 years" ) however, opposed the prayer and stated that they will continue to feed and take care of her. It is in this context that the Supreme Court had to examine the issue of

Euthanasia. We have extracted below a few relevant paragraphs from the Judgment:-

"Para 39. xxxxxxxxx "The general legal position all over the world seems to be that while active euthanasia is illegal unless there is legislation permitting it, passive euthanasia is legal even without legislation provided certain conditions and safeguards are maintained."

Para 41. xxxxxxxxx In India active euthanasia is illegal and a crime under section 302 or at least section 304 IPC. Physician assisted suicide …."

ಬಹಳ ಮುಖ್ಯ ಇದು. It further reads thus:

" … Physician assisted suicide is a crime under section 306 IPC (abetment to suicide). Active euthanasia is taking specific steps to cause the patient's death, such as injecting the patient with some lethal substance, e.g. sodium pentothal which causes a person deep sleep in a few seconds, and the person instantaneously and painlessly dies in this deep sleep."

ಇಲ್ಲಿ ಬಹಳ ಮುಖ್ಯವಾಗುತ್ತಿರುವುದು ಈ ಅಂಶ. ಪ್ಯಾರಾ ನಂಬರ್ 134 ಎಂದೇನು ಹೇಳುತ್ತಿದ್ದೇವೆ, ಅದು ಬಹಳ ಮುಖ್ಯ. It reads thus:

" After critically examining the pros and cons, we have permitted passive euthanasia subject to obtaining permission after following the procedure prescribed

by us. As far as active euthanasia is concerned, it has been painted out that it is illegal and a crime under IPC. It has been pointed out that Active Euthanasia is illegal in all States in U.S.A. and in most of the other countries in the World. As regards Active Euthanasia is concerned, .. .. .. .. "

ಏತಕ್ಕೆ ಇದನ್ನು ನಾವು ಅಲೋ ಮಾಡುವುದಿಲ್ಲವೆನ್ನುವುದು ಬಹಳ ಮುಖ್ಯ. It further reads thus:

" …. The Supreme Court has expressed that there is always a risk our country …."

ನಮ್ಮ ದೇಶದಲ್ಲಿ ಯಾವ ಪರಿಸ್ಥಿತಿಯಲ್ಲಿದ್ದೇವೆ ಎನ್ನುವುದನ್ನು ಇಲ್ಲಿ ಹೇಳಿದ್ದಾರೆ. It further reads thus:

"… there is always a risk in our country of its being misused by unscrupulous persons that are keen to inherit or otherwise grab the property of the patient…."

ಯಾರನ್ನೋ ಸೇರಿಸುವುದು, ಸಾಯಿಸುವುದು, ಅವರ ಪ್ರಾಪರ್ಟಿಯನ್ನು ತೆಗೆದುಕೊಳ್ಳುವುದು ಮಾಡುತ್ತಾರೆ. ಅದಕ್ಕೆ "ಇಚ್ಛಾ ಮರಣ" ಎಂದು ಹೇಳುವರು. ಆದರೆ ಅದು "ಇಚ್ಛಾ acquisition", "ಇಚ್ಛಾ ಮರಣ" ಅಲ್ಲ. It futher reads thus:

"Considering the low ethical level …."

Unfortunately, ಈ ಪದಗಳನ್ನು ಹೇಳುವಾಗ ಬಹಳ ಸಂತೋಷದಿಂದ ಯಾರೂ ಹೇಳುವುದಿಲ್ಲ. It further reads thus:

"Considering the low ethical levels prevailing in our society today, rampant commercialisation and corruption, we can not rule out the possibility of unscrupulous persons with the help of some unscrupulous doctors fabricating materials to show that the patient is in a terminal stage with no chance of recovery. There are doctors and doctors. While many doctors may be upright, there are others who are willing to do anything for money. As commercialiazation of our society has crossed all limits, we have to guard against the possible misuse. Besides, there is no evidence to show that there are large number of persons who would like to take assistance from others to die. …."

ಇಲ್ಲಿ ನಮ್ಮ ಮುಂದಿರುವುದು ಶ್ರೀಮತಿ ಕರಿಬಸಮ್ಮನವರ ಕೇಸು. ಬಹಳ ಜನ ಹಾತೊರೆಯುತ್ತಿದ್ದಾರೆ ಎನ್ನುವಂತಹ ಪರಿಸ್ಥಿತಿ ಏನಿಲ್ಲ. 'ನಾನು ಸಾಯಬೇಕು ಯಾರಾದರೂ ಸಹಾಯ ಕೊಡಿ' ಎನ್ನುವಂತಹ ಪರಿಸ್ಥಿತಿ ಏನಿಲ್ಲ. ಶ್ರೀಮತಿ ಮೋಟಮ್ಮನವರು ಹತ್ತು ಸಾವಿರ ಜನ ಏಕೆ ಸಹಿ ಮಾಡಿದ್ದಾರೆಂದರೆ, ಸಾಯುವವರು ಬೇರೆ ಯಾರೋ ಎಂದು ಬಹಳ ಚೆನ್ನಾಗಿ ಹೇಳಿದರು. It further reads thus:

"Besides, there is no evidence to show that there are large number of persons who would like to take assistance from others to die. Persons who have determined to die (Sri Suresh Kumar adds: "ಈಗಾಗಲೇ ಮಾನ್ಯ ನಾಣಯ್ಯನವರು ಹೇಳಿದಂತೆ") would secretly commit suicide rather than taking some one else's

assistance. One who has decided to die would prefer to keep his decision a secret and not share it with others. … … …"

ನಾಳೆ ಬೆಳಿಗ್ಗೆ ಸಾಯುತ್ತಿರುವುದರಿಂದ ದಯವಿಟ್ಟು ಬನ್ನಿ ಎಂದು ಯಾರೂ ಜಾಹಿರಾತು ಕೊಡುವುದಿಲ್ಲ. ಆ ಸ್ಥಿತಿ ಇನ್ನೂ ಬಂದಿಲ್ಲ. It further reads thus:

"Besides, it may be extremely difficult to find persons who are willing to render assistance to help the person die. … … …"

ನೀನು ಸಾಯಿ, ನಾನಿದ್ದೇನಪ್ಪ, ನಿನಗೇನು ಬೇಕೋ ಸಹಾಯ ಮಾಡುತ್ತೇನೆ ಎನ್ನುವ ವ್ಯಕ್ತಿಗಳು ಯಾರೂ ಇಲ್ಲ. It further reads thus:

"It may be considered quite risky as he may be implicated for murder. … … …"

ಅಂದರೆ ಒಳ್ಳೆಯ ಉದ್ದೇಶದಿಂದ ಅಲ್ಲ, ನನ್ನ ಮೇಲೆ ಏಕಪ್ಪ ಗ್ರಹಚಾರ ಎಂದು ಅಷ್ಟೇ. It further reads thus:

"Many would decline on moral or religious grounds or for psychological reasons. Some many be afraid of reactions of the family members and friends. …"

ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡಿದ್ದಾರೆ. ಡಾ|| ಶಿವಯೋಗಿಸ್ವಾಮಿಯವರು ಪ್ರಸ್ತಾಪಿಸಿರುವುದಕ್ಕೆ ಇದು ಬಹಳ ಮುಖ್ಯವಾಗಿದೆ. ಪ್ರಾಯಶಃ ನಾವೆಲ್ಲರೂ ಇದನ್ನು ಒಪ್ಪಿಕೊಳ್ಳುತ್ತೇವೆ. It further reads thus:

"As Section 309 IPC under which abetment of suicide is an offence is likely to be misused, the Law Commission is not in favour of its deletion. Those

who wish to die would rather prefer to commit suicide secretly without seeking anybody's help. We don't think that are many persons like Smt. Karibasamma who wish to die not by committing suicide but by taking assistance from others. Perhaps that is the reason for the Supreme Court not prescribing any procedure to legalise active Euthanasia …. …"

ಇದು ಬಹಳ ಮುಖ್ಯವಾದದ್ದು. It further reads thus:

"… until Parliament enacts a law in this behalf."

ಸುಪ್ರೀಂಕೋರ್ಟ್ ಇದರ ಬಗ್ಗೆ ಪಾರ್ಲಿಮೆಂಟ್ ಸೂಕ್ತವಾದ ನಿರ್ಣಯವನ್ನು ತೆಗೆದುಕೊಂಡು ಶಾಸನವನ್ನು ರಚಿಸಲಿ ಎಂದು ಹೇಳಿದೆ. It further reads thus:

" After giving our anxious consideration, we feel that time is not ripe to consider enacting a law to legalise active euthanasia ….."

ಮಾನ್ಯ ಸಭಾಪತಿಯವರೇ, 'active euthanasia', 'passive euthanasia' ಗಳ ಬಗ್ಗೆ ಬಹಳ distinct ಇದೆ. 'active euthanasia' ನಲ್ಲಿಯೂ ಕೂಡ ಈ ರೀತಿ ಬದುಕಿಸುವುದಕ್ಕೆ ಆಗುವುದಿಲ್ಲ ಎಂಬ ಸ್ಥಿತಿಯಲ್ಲಿ ತೀರ್ಮಾನ ತೆಗೆದುಕೊಳ್ಳುವವರು ಯಾರು? KEM Hospital ನವರು ನೋಡಿಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಯಾರೋ ಒಬ್ಬ social activist, ಆಕೆಯ (Smt.Aruna Ramachandra Shanbaug) vegetative ಸ್ಥಿತಿ ನೋಡಿ, ಅವರಿಗೆ ದಯವಿಟ್ಟು ಸಾಯುವುದಕ್ಕೆ ಬಿಡಿ ಎಂದು ಹೇಳುತ್ತಾರೆ. ಸುಪ್ರೀಂಕೊರ್ಟ್ ಆಕೆಯ ಹಿತರಕ್ಷಣೆ ನೋಡಿಕೊಳ್ಳುವವರ ತೀರ್ಮಾನ ಬಹಳ ಮುಖ್ಯ ಎಂದು ಹೇಳುತ್ತದೆ. ಅವರ ತೀರ್ಮಾನ ಮುಖ್ಯ ಆದರೂ ಹೈಕೋರ್ಟ್‌ಗೆ ಹೋಗಿ

ಅಲ್ಲಿನ "Panel of Doctors' ತೀರ್ಮಾನ ತೆಗೆದುಕೊಳ್ಳಬೇಕು ಎಂದು ಸ್ಪಷ್ಟವಾಗಿ ಹೇಳಿದೆ.

ಮಾನ್ಯ ಸಭಾಪತಿಯವರೇ, ನಾನು ಒಂದು ಸಲಹೆ ಕೊಡುವುದೇನೆಂದರೆ, ಬೆಂಗಳೂರಿನಲ್ಲಿ "ಕರುಣಾಶ್ರಯ" ಎಂಬ ಸಂಸ್ಥೆ ಇದ್ದು, it is one of the greatest institution that I have seen. ಮನೆಯಲ್ಲಿ ನೋಡಿಕೊಳ್ಳುವುದಕ್ಕೆ ಆಗದೇ ಕ್ಯಾನ್ಸರ್ ರೋಗದಲ್ಲಿ terminal stage ನಲ್ಲಿರುವವರನ್ನು ಸಾಕುವ ಸಂಸ್ಥೆ ಎಂದರೆ ಕರುಣಾಶ್ರಯ. ಅವರು ಏತಕ್ಕೆ ಬದುಕಿಸುತ್ತಾರೆ? ಹೇಗಿದ್ದರೂ ಕ್ಯಾನ್ಸರ್ terminsal stage ಇರುವವರು ಹೋಗಿಬಿಡಬಹುದಲ್ಲವೇ? ಆದರೂ ಕೂಡ ಅವರು ಬದುಕಿಸುವ ಪ್ರಯತ್ನ ಮಾಡುತ್ತಿದ್ದಾರೆ ಅಥವಾ ಬದುಕಿರುವಷ್ಟು ಕಾಲ ಚೆನ್ನಾಗಿ ಬದುಕಿಸಬೇಕು ಎಂಬ ಪ್ರಯತ್ನವನ್ನು ಮಾಡುತ್ತಿದ್ದಾರೆ. ದಯವಿಟ್ಟು HAL ಬಳಿ ಇರುವ ಸಂಸ್ಥೆಗೆ ಎಲ್ಲರೂ ಹೋಗಬೇಕು.

**ಸಭಾಪತಿಯವರು:-** ಕರುಣಾಶ್ರಯ ಸಂಸ್ಥೆಗೆ ನಾನು ಸ್ನೇಹಿತರ ಜೊತೆ ಭೇಟಿ ಮಾಡಿದ ಹಿನ್ನೆಲೆಯಲ್ಲಿ ಕರುಣಾಶ್ರಯದ ಮಾದರಿಯಲ್ಲಿಯೇ ಏನೂ ವ್ಯತ್ಯಾಸ ಇಲ್ಲದಂತೆ ಶಿವಮೊಗ್ಗದಲ್ಲಿ ನನ್ನ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ, ಅನೇಕ ಜನ ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ಕೊಡುತ್ತಿದ್ದೇವೆ. ಆ ಕೆಲಸವನ್ನೂ ನಾವು ಮಾಡುತ್ತಿದ್ದೇವೆ.

**ಶ್ರೀ ಎಸ್.ಸುರೇಶ್‌ಕುಮಾರ್:-** ಆ ಕೆಲಸವನ್ನು ನಾವೆಲ್ಲರೂ ಮಾಡಬೇಕು. Euthanasia ಗಿಂತ ಜಾಸ್ತಿ ಒತ್ತನ್ನು ಅದಕ್ಕೆ ಕೊಡಬೇಕು. ಎರಡನೆಯದಾಗಿ ಅರುಣಾ ಶಾನುಭೋಗ್ ರೀತಿ ಇನ್ನೊಂದು ಒಂದು ಉದಾಹರಣೆಯನ್ನು ಹೇಳುತ್ತೇನೆ. ನಿಮಾನ್ಸ್‌ನಲ್ಲಿ ಡಾ॥ ಗಂಗಾಧರ್ ಎಂಬ ವೈದ್ಯರ ಬಗ್ಗೆ ತಮಗೆಲ್ಲರಿಗೂ ಗೊತ್ತು. ಅವರು Superintendent ಆಗಿದ್ದಾರೆ. This is a very very touching incident. He is a Superintendent ನಾನು ಬಾಲ್ಯದಿಂದಲೂ ನೋಡಿರುವಂತೆ He is one of the brilliant Doctors. ಅವರ ಹೆಂಡತಿಯೂ ವೈದ್ಯರಾಗಿದ್ದು, ಅವರು M.B.B.S., M.D., ಓದಿದ್ದಾರೆ. ಇವರ

ಸಂಸಾರ ಚೆನ್ನಾಗಿದೆ ಅಲ್ಲವೇ? ಗಂಡ M.S., ಹೆಂಡತಿ M.B.B.S., M.D., ಓದಿದ್ದಾರೆ. 10 ವರ್ಷಗಳ ಹಿಂದೆ ಅವರಿಬ್ಬರೂ ಸ್ಕೂಟರ್‌ನಲ್ಲಿ ಹೋಗುವಾಗ ಬನ್ನೇರುಘಟ್ಟದ ಬಳಿ ಒಂದು ಲಾರಿ ಡಿಕ್ಕಿ ಹೊಡೆದು, ಆತ ಒಂದು ಕಡೆ ಮತ್ತೊಂದು ಕಡೆ ಆಕೆ ಬಿದ್ದರು. ಆತ ತಯಾರಾಗುವುದಕ್ಕೆ ಒಂದು ವರ್ಷ ಬೇಕಾಯಿತು. ಆದರೆ ಆಕೆಗೆ M.B.B.S., M.D., ಮತ್ತು ವೈದ್ಯೆ ಎನ್ನುವುದೆಲ್ಲಾ ಮರೆತುಹೋಯಿತು. She became a house wife ಅಥವಾ ಮನೆಯಲ್ಲಿರುವ ವ್ಯಕ್ತಿಯಾದರು. ಆದರೂ ಆಕೆಯ ಗಂಡ ನೋಡಿಕೊಳ್ಳುತ್ತಿದ್ದರು. ಈಗ್ಗೆ 6 ವರ್ಷಗಳ ಹಿಂದೆ ಅವರ ಮಗಳು ಶಾಲೆಗೆ ಹೋಗಬೇಕೆಂದು ಗಲಾಟೆ ಮಾಡಿದಾಗ, ಅವರ ತಂದೆ ಗಂಗಾಧರ್‌ರವರು ಡ್ರಾಪ್ ಕೊಡುವುದಾಗಿ ಹೇಳಿ ಕ್ಯಾರಿಯರ್ ತರಲು ಮನೆಗೆ ಕಳುಹಿಸಿದರು. ಅವರ ಮಗಳು ಮನೆಗೆ ಬಂದು "ಅಮ್ಮಾ" ಎಂದು ಕ್ಯಾರಿಯರ್‌ಗಾಗಿ ಜೋರಾಗಿ ಕೂಗಿದಳು. ತಕ್ಷಣ ಅವರ ತಾಯಿಗೆ ಏನಾಯಿತೆಂದು ಗೊತ್ತಿಲ್ಲ, She collapsed. Within one hour she was on the operation table. ಪ್ರಾಯಶಃ ಅವರು ವೈದ್ಯರಾಗಿದ್ದರಿಂದ ಇದು ಸಾಧ್ಯವಾಗಿರಬಹುದು. ಆಪರೇಷನ್ ಆಗಿ ಉಳಿದುಕೊಂಡರು, ಆದರೆ ಅಂದಿನಿಂದ ಇಂದಿನವರೆಗೂ ಅಂದರೆ ಕಳೆದ 6 ವರ್ಷಗಳಿಂದಲೂ She is there, but she is not there. ಆಕೆಗೆ ಏನೂ ಗೊತ್ತಾಗುವುದಿಲ್ಲ. ಬಟ್ಟೆ ಸೀರೆ ಉಡಿಸಬೇಕು, ಸ್ನಾನ ಮಾಡಿಸಬೇಕು, ಟಾಯ್ಲೆಟ್‌ಗೆ ಬಲವಂತವಾಗಿ ಕರೆದುಕೊಂಡು ಹೋಗಿ ಮಾಡಿಸಬೇಕು ಮತ್ತು ಫೀಡ್ ಮಾಡಬೇಕು. ನಾನು ಏಕೆ euthanasia ಕೊಡುವುದಿಲ್ಲ ಎಂದು ಬಹಳ ಯೋಚನೆ ಮಾಡಿದೆ. ಅವರ ಗಂಡ 'ನಾನು ನೋಡಿಕೊಳ್ಳುತ್ತೇನೆ ಮತ್ತು ಚೆನ್ನಾಗಿ ನೋಡಿಕೊಳ್ಳುತ್ತೇನೆ' ಎಂದು ಹೇಳಿದರು. ತಾಯಿ-ತಂದೆಗೆ ಅಂತಹ ಸ್ಥಿತಿ ಇದ್ದರೂ 9ನೇ ತರಗತಿ ಓದುತ್ತಿದ್ದ ಅವರ ಮಗಳು ಇವತ್ತು ಮೆರಿಟ್‌ನಲ್ಲಿ M.B.B.S, 3ನೇ ವರ್ಷದಲ್ಲಿ ಓದುತ್ತಿದ್ದಾಳೆ. ಅದಕ್ಕಾಗಿ ನಾವೆಲ್ಲ ಪ್ರಯತ್ನವನ್ನು ಈ ದಿಸೆಯಲ್ಲಿ 'passive euthanasia' ಬಗ್ಗೆ ಯೋಚನೆ ಮಾಡಬೇಕು. ಈಗಾಗಲೇ ಸುಪ್ರೀಂಕೋರ್ಟ್ ಒಂದು ನಿರ್ದೇಶನ ಕೊಟ್ಟಿದ್ದು, ಈ ರೀತಿ ಮಾಡಬಹುದು, ಮಾಡುವುದಕ್ಕೆ ಒಂದು ಗೈಡ್‌ಲೈನ್ಸ್ ಕೊಟ್ಟಿದ್ದು, ಇದನ್ನು ಶಾಸನ ಮಾಡುವವರೆಗೂ

ಮಾಡಬಹುದಾಗಿದೆ. ಸುಪ್ರೀಂಕೋರ್ಟ್ ಶಾಸನ ಮಾಡುವ ಅಧಿಕಾರವನ್ನು ಪಾರ್ಲಿಮೆಂಟ್‌ಗೆ ಕೊಟ್ಟಿದೆ. ನೇರವಾಗಿ ಅವರು ಮಾಡಬಹುದಾಗಿದ್ದು, ಅದು 'concurrent list' ನಲ್ಲಿ ಇದೆ. ಆದರೆ ಇಡೀ ಭಾರತದಲ್ಲಿ ಒಂದೇ ರೀತಿಯ ಕಾನೂನು ಬರಲಿ ಎಂದು ಪಾರ್ಲಿಮೆಂಟ್‌ಗೆ ಅಧಿಕಾರವನ್ನು ಕೊಟ್ಟಿದೆ. ನಮ್ಮ ರಾಜ್ಯದಲ್ಲಿ ಒಂದು ಶಾಸನ ಮಾಡಿಬಿಟ್ಟಾಗ ಸಾಯುವವರೆಲ್ಲರೂ ಇಲ್ಲೇ ಬಂದರೆ ಹೇಗೆ? ಕರ್ನಾಟಕ ಒಳ್ಳೆಯ ಸ್ಥಳ, ಇಲ್ಲಿ ಹೋದರೆ ಏನೋ ಸಿಗುತ್ತದೆ ಎಂಬ ಖ್ಯಾತಿಗೆ ಬರುವುದು ಬೇಡ. Therefore, they (Karnataka Law Commission ) have said that the Parliament is the best forum for this issue to be discussed and a legislation is made. ಶಾಸನ ಆಗುವವರೆಗೂ ಸುಪ್ರೀಂಕೋರ್ಟ್ ನೀಡಿರುವ ಗೈಡ್‌ಲೈನ್ಸ್ ಅನುಸರಿಸಬೇಕೆಂದು ಹೇಳಿದೆ. ಈ ಸಮಯದಲ್ಲಿ ನಾನು ಒಂದು ಪುಸ್ತಕವನ್ನು ಓದಲು ಸಲಹೆ ಮಾಡುತ್ತೇನೆ. ಅದೇನೆಂದರೆ 'Tuesdays with Morrie' ಎಂಬ ಪುಸ್ತಕವು, It is one of the excellent books. ಕನ್ನಡದ ಮೋರಿ ಅಲ್ಲ. ಒಬ್ಬ ವ್ಯಕ್ತಿ ಆತನ ಅನುಭವಗಳನ್ನು ಬರೆದಿದ್ದಾನೆ. ಆತನ ಬದುಕಿನ ಅನುಭವವನ್ನು ಸಮಾಜಕ್ಕೆ ಹೇಗೆ ತಿಳಿಸಬೇಕು ಎನ್ನುವುದಕ್ಕೆ ಒಂದು ಉತ್ತಮವಾದ ಪುಸ್ತಕವಾಗಿದೆ. ಅದನ್ನು ಓದಿದಾಗ ಒಂದು ರೀತಿಯ ಜೀವನೋಲ್ಲಾಸ ಬರುತ್ತದೆ. ಆದ್ದರಿಂದ ಮಾನ್ಯ ಶಿವಯೋಗಿಸ್ವಾಮಿಯವರು ದಾವಣಗೆರೆಯಲ್ಲಿ ಕಂಡ ಪ್ರಸಂಗದ ಬಗ್ಗೆ ಇಲ್ಲಿ ತಂದಿದ್ದಾರೆ. ಕರಿಬಸಮ್ಮನವರು ಬಂದಿರುವುದು slip disk ತೊಂದರೆಗಾಗಿ. ನಾವೆಲ್ಲರೂ slip disk ಗಾಗಿ ಇವತ್ತು ಆಪರೇಷನ್ ಮಾಡಿಕೊಂಡು ಚೆನ್ನಾಗಿ ಓಡಾಡಿ, swimming, cycling – ಎಲ್ಲಾ ಅಭ್ಯಾಸಗಳನ್ನು ಮಾಡಿಕೊಂಡು ಈ ಮಟ್ಟಕ್ಕೆ ಬಂದಿದ್ದೇವೆ. ಆದ್ದರಿಂದ ಇದ್ಯಾವುದೂ ವಾಸಿಯಾಗದಿರುವ terminal stage ಗೆ ಹೋಗಿಲ್ಲ, ಬದಲಿಗೆ ಆಕೆ ಜೀವನದಲ್ಲಿ ಭರವಸೆ ಉಂಟು ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಆದ್ದರಿಂದ ಕಾನೂನು ಆಯೋಗದ ಅಂತಿಮ ವರದಿ ಬಂದ ನಂತರ ಸದನದ ಮುಂದೆ ಇಡುತ್ತೇನೆ. ಅಷ್ಟರಲ್ಲಿ ಪಾರ್ಲಿಮೆಂಟ್ ಇದರ ಬಗ್ಗೆ ಕಾನೂನು ಮಾಡಬೇಕೆಂದು ಅನಿಸಿದರೆ ನೋಡೋಣ. ನಾವೆಲ್ಲರೂ ಈ ಸದನದಿಂದ

ಒಂದು ಒಳ್ಳೆಯ ಮಾಹಿತಿ ಕೊಡೋಣ. ಈ ಸದನ, ಸರ್ಕಾರ ಮತ್ತು ಆಡಳಿತವು ಬದುಕಲು ಸಹಾಯ ಮಾಡುವುದಕ್ಕಾಗಿ ಇರುವುದು. ಜೀವಂತದಿಂದ ಇರುವುದಕ್ಕೆ ಸಹಾಯ ಮಾಡುವುದು, ಜೀವಿತಾವಧಿಯಲ್ಲಿರುವವರಿಗೆ 6ಏನೇನು ಸೌಲಭ್ಯಗಳು ಬೇಕೋ, ಅವುಗಳನ್ನು ಕೊಡಲು ಇದೆ. ಈ ರೀತಿ ಆಗುವುದಿಲ್ಲ ಎಂದ ಪಕ್ಷದಲ್ಲಿ ಸುಪ್ರೀಂಕೋರ್ಟ್ ಗೈಡ್‌ಲೈನ್ ಪ್ರಕಾರ ಆ ಮನೆಯವರು ಹಾಗೂ ವೈದ್ಯರು ಹೈಕೋರ್ಟ್‌ಗೆ ಹೋದರೆ ಅಲ್ಲಿ ಅನುಮತಿ ಸಿಗಬಹುದು. ಇಷ್ಟನ್ನು ನಿವೇದನೆ ಮಾಡಿಕೊಳ್ಳಬಯಸುತ್ತೇನೆ.

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಳ್ಳೆಯ ಉತ್ತರವನ್ನು ನೀಡಿದ್ದು, ನಾನು ನೋಟ್ ಮಾಡಿಕೊಂಡಿರುವಂತೆ ಹಾಗೂ ಕಡತಕ್ಕೆ ತಪ್ಪು ಮಾಹಿತಿ ಹೋಗಬಾರದೆಂಬ ದೃಷ್ಟಿಯಿಂದ ಮಾನ್ಯ ಸಚಿವರ ಗಮನಕ್ಕೆ ತರಲು ಬಯಸುತ್ತೇನೆ. ಮಾನ್ಯ ಸಚಿವರು ಮಾತನಾಡುತ್ತಾ, "In all states of U.S.A. Euthanasia is illegal" ಎಂದು ಹೇಳಿದರು.

**Sri S. SURESH KUMAR:-** I am just quoting the Supreme Court judgment. It's not mine.

**Dr. A.H. SHIVAYOGI SWAMY:-** I understand... May be. ಕಡತದಲ್ಲಿ ಕರೆಕ್ಟ್ ಆಗಲಿ ಎನ್ನುವ ದೃಷ್ಟಿಯಿಂದ...

**ಸಭಾಪತಿಯವರು:-** ಅವರು ಸುಪ್ರೀಂಕೋರ್ಟ್ ತೀರ್ಪನ್ನು ಕೋಟ್ ಮಾಡಿದ್ದಾರೆ, ಇದರಲ್ಲಿ ಮಾಹಿತಿ ತಪ್ಪು ಅಥವಾ ಸರಿ ಎಂಬ ಪ್ರಶ್ನೆ ಅಲ್ಲ. ಅವರು ಕೋಟ್ ಮಾಡುವಾಗ ತಪ್ಪಾಗಿ ಕೋಟ್ ಮಾಡಿದ್ದರೆ ತಿದ್ದೋಣ. ಇಲ್ಲದಿದ್ದರೆ ಹಾಗೆ ಇರುತ್ತದೆ. ಸುಪ್ರೀಂಕೋರ್ಟ್‌ನಲ್ಲಿ ಆ ರೀತಿ ಹೇಳಿಲ್ಲದಿದ್ದರೆ, ಬೇರೆ ಪದ ಪ್ರಯೋಗ ಆಗಿ ಪ್ರಿಂಟ್ ತಪ್ಪಾಗಿದ್ದರೆ ಸರಿಮಾಡೋಣ.

**Sri S. SURESH KUMAR:-** I don't know. I have just quoted. That's all.

**Mr. CHAIRMAN:-** We will look into it.

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ:-** ಸುಪ್ರೀಂಕೋರ್ಟ್ ಹೇಳಿರುವ ಪದಗಳನ್ನು ಸರಿಮಾಡುವುದಕ್ಕೆ ಹೋಗುತ್ತಿಲ್ಲ. ಕ್ಯಾಲಿಫೋರ್ನಿಯಾ, 2001ನಲ್ಲಿ ಓರೆಗಾನ್‌ನಲ್ಲಿ, 2008ರಲ್ಲಿ ವಾಷಿಂಗ್‌ಟನ್‌ನಲ್ಲಿ, Florida ದಲ್ಲಿ, ಇಲ್ಲೆಲ್ಲವೂ ಆಗಿದೆ.

**ಸಭಾಪತಿಯವರು:-** ತಾವು ಹೇಳಿದ್ದೆಲ್ಲವೂ ಕಡತಕ್ಕೆ ಹೋಗಿದೆ.

**ಶ್ರೀ ಎಂ.ಸಿ.ನಾಣಯ್ಯ:-** ಅದಕ್ಕೂ ಉತ್ತರ ಹೇಳಿದರು. What is happening in our country is the most important thing.

**Dr. A.H. SHIVAYOGI SWAMY:-** I understand.

**ಶ್ರೀ ಎಂ.ಸಿ.ನಾಣಯ್ಯ:-** ನಮ್ಮ ದೇಶದಲ್ಲಿ ಎಂದು ನಿರ್ದಿಷ್ಟವಾಗಿ ಹೇಳಿ ಬಹಳ serious charge ಮಾಡಿದರು. ನಮಗೂ ಅವರಿಗೂ ಅದೇ ವ್ಯತ್ಯಾಸ.

**ಸಭಾಪತಿಯವರು:-** ಮಾನ್ಯ ಸದಸ್ಯರು ಹೇಳಿರುವುದು ಕಡತಕ್ಕೆ ಹೋಗಿದೆ. ಅಮೇರಿಕಾ ಮತ್ತು ಇತರ ಕೆಲವು ಕಡೆ ಆಗಿವೆ ಎಂದು ಹೇಳಿದ್ದೀರಿ. ಮಾನ್ಯ ಸಚಿವರು ಸುಪ್ರೀಂಕೋರ್ಟ್‌ನ ಪ್ರಿಂಟೆಡ್ ವಿಷಯವನ್ನು ಓದಿದ್ದಾರೆ. ಅದನ್ನು ಓದುವುದು ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ ಮತ್ತು ಅದನ್ನು ತಿದ್ದಲು ನಮಗೆ ಅಧಿಕಾರ ಇಲ್ಲ. ಅವರು ಹೇಳಿದಷ್ಟೇ ಕಡತಕ್ಕೆ ಹೋಗಿದೆ ಮತ್ತು ಅದು ಸಚಿವರ ಅಭಿಪ್ರಾಯವೂ ಅಲ್ಲ. ಅವರು ಸುಪ್ರೀಂಕೋರ್ಟ್ ಹೇಳಿರುವ ಪುಸ್ತಕವನ್ನು ಓದಿದ್ದಾರೆ, ಅವರು ಓದಿದ ಪುಸ್ತಕದಲ್ಲಿ ಪ್ರಿಂಟ್ ತಪ್ಪಾಗಿದ್ದರೆ rectify ಮಾಡಲು ಸಾಧ್ಯ. ನಾವು ಶಿವಮೊಗ್ಗದಲ್ಲಿ ನಡೆಸುವ ಸಂಸ್ಥೆ ಬಗ್ಗೆ ಹೇಳಿದಾಗ ಮಾನ್ಯ ಸಂಕೇಶ್ವರ್‌ರವರು ನನ್ನ ಕಡೆ ಸನ್ನೆ ಮಾಡಿ ಕೇಳಿದರು. ಶರಣ್ಯ ಎಂಬ ಸಂಸ್ಥೆಯ ಮುಖಾಂತರ ಈ ರೀತಿಯ ದೊಡ್ಡ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಇದು ಬೆಂಗಳೂರಿನಲ್ಲಿ ಮಾತ್ರವಲ್ಲ, ಶಿವಮೊಗ್ಗಕ್ಕೆ ಬಂದವರು ನೋಡಬಹುದೆಂದು ನಾನು ಉಲ್ಲೇಖ ಮಾಡಿದೆ.

**ಶ್ರೀ ಎಸ್.ಸುರೇಶ್‌ಕುಮಾರ್:–** ಒಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ, ಇದು ಇತಿಹಾಸದಲ್ಲಿ ಗೊತ್ತಿರುವುದು ಹಾಗೂ ಇತ್ತೀಚೆಗೆ ನಡೆದಿದೆ. ತುರ್ತು ಪರಿಸ್ಥಿತಿಗೆ ಮುಂಚೆ ಗುಜರಾಥ್ ಮತ್ತು ಬಿಹಾರ್ ಹೋರಾಟಕ್ಕೂ ಮುಂಚೆ ಈ ಆಂದೋಲನದಲ್ಲಿ ಒಬ್ಬರೂ ನಾಯಕರು ಸಿಕ್ಕಿರಲಿಲ್ಲ. Jayaprakash Narayan was reluctant to come before Bihar agitation. ಶ್ರೀ ರಾಮನಾಥ್ ಗೋಯೆಂಕಾರವರು ಜಯಪ್ರಕಾಶ್‌ರವರನ್ನು ಈ ನಾಯಕತ್ವ ವಹಿಸಬೇಕೆಂಬ ಎಷ್ಟೆಷ್ಟೋ ಕೇಳಿಕೊಂಡರು. ಆದರೆ ಜಯಪ್ರಕಾಶ್ ನಾರಾಯಣ್‌ರವರು ಬೇರೆ ಬೇರೆ ಕಾರಣಗಳಿಂದ ಒಪ್ಪಿಕೊಳ್ಳುತ್ತಿರಲಿಲ್ಲ. ಇದೊಂದು ಬಹಳ ರೋಮಾಂಚನವಾಗುವ ಘಟನೆ. ಬೆಂಗಳೂರಿನ ಇಂಡಿಯನ್ ಎಕ್ಸಪ್ರೆಸ್‌ನ Brunton Road ನಲ್ಲಿ ಒಂದು ಗೆಸ್ಟ್‌ಹೌಸ್ ಇದೆ. ಅಲ್ಲಿ ರಾಮನಾಥ್ ಗೋಯೆಂಕಾರವರು, ಜಯಪ್ರಕಾಶ್ ನಾರಾಯಣ್‌ರವರು ಹಾಗೂ ಬಿಹಾರದ ಒಬ್ಬರು ಕವಿ ರಾಮಧಾರಿರವರು ಹಾಗೂ ತಮಿಳುನಾಡಿನ Chartered Accountant ಮತ್ತು intellectual ಆದ ಎಸ್. ಗುರುಮೂರ್ತಿ, ನಾನಾಜಿ ದೇಶ್‌ಮುಖ್ ಸೇರಿದಂತೆ 5 ಜನರು ಗೆಸ್ಟ್‌ಹೌಸ್‌ನಲ್ಲಿ ಕುಳಿತು ಜಯಪ್ರಕಾಶ್ ನಾರಾಯಣ್‌ರವರ ಮನಸ್ಸನ್ನು ಒಲಿಸಲು ಪ್ರಯತ್ನ ಮಾಡುತ್ತಿದ್ದರು. ಜಯಪ್ರಕಾಶ್ ನಾರಾಯಣ್‌ರವರು 'ನನಗೆ ಆರೋಗ್ಯ ಸರಿಯಿಲ್ಲ, ಎಷ್ಟು ದಿವಸ ಬದುಕುತ್ತೇನೋ ಗೊತ್ತಿಲ್ಲ, ನಾನು ಬಹಳ ಬಳಲಿದ್ದೇನೆ, ನನ್ನ ಕೈಯಲ್ಲಿ ಆಗುವುದಿಲ್ಲ' ಎಂದು ಆರೋಗ್ಯದ ನೆವ ಹೇಳುತ್ತಿದ್ದರು. ಆಗ ರಾಮನಾಥ್ ಗೋಯೆಂಕಾರವರು ಚರ್ಚೆಯನ್ನು ಅಲ್ಲಿಗೆ ನಿಲ್ಲಿಸಿ, ಒಂದು ರೌಂಡ್ ತಿರುಪತಿಗೆ ಹೋಗೋಣ ಎಂದು ಬೆಂಗಳೂರಿನಿಂದ ತಿರುಪತಿಗೆ ಕರೆದುಕೊಂಡು ಹೋದರು. ಇದು ಬಹಳ ಖಚಿತವಾಗಿ ಆಗಿರುವ ಘಟನೆ ಬಗ್ಗೆ ವ್ಯಕ್ತಿಯೊಬ್ಬರು ಹೇಳಿದ್ದಾರೆ. ತಿರುಪತಿಯಲ್ಲಿ ಪ್ರಾಯಶಃ ಇಷ್ಟು rush ಆಗ ಇರಲಿಲ್ಲ. ಆಗ ತಿರುಪತಿ ವೆಂಕಟೇಶ್ವರನ ಪಾದದ ಹತ್ತಿರ ಕವಿ ರಾಮಧಾರಿ ದಿನಕರ್‌ರವರು 'ನನ್ನ ಬದುಕಿನ ಎಲ್ಲಾ ಉಳಿದ ಆರೋಗ್ಯ ಮತ್ತು ಆಯುಷ್ಯನ್ನು ಜಯಪ್ರಕಾಶ್ ನಾರಾಯಣ್‌ರವರಿಗೆ ವರ್ಗಾಯಿಸುತ್ತಿದ್ದೇನೆ, ಅದಕ್ಕೆ ಅನುಕೂಲ ಮಾಡು ದೇವರೇ' ಎಂದು ಹೇಳಿದರು. ನಂತರ ಅಲ್ಲಿಂದ

ಚೆನ್ನೈಗೆ ಬಂದರು. ಚೆನ್ನೈನಲ್ಲಿ ಇದೇ ವಿಚಾರ ಪ್ರಸ್ತಾಪ ಮಾಡುತ್ತಿದ್ದಾಗ ಕವಿ ದಿನಕರ್‌ರವರು ಹಾಗೆಯೇ ಜಯಪ್ರಕಾಶ್ ನಾರಾಯಣ್‌ರವರ ತೊಡೆ ಮೇಲೆ ಮಲಗಿ ತೀರಿಹೋದರು. ನಮಸ್ಕಾರ.

**ಸಭಾಪತಿಯವರು:-** ಈಗ ಮಾನ್ಯ ಸಚಿವರೇ, ತಾವು ಕೆಳಮನೆಗೆ ಹೋಗುತ್ತಿದ್ದೀರಿ ಮತ್ತು ಆದಷ್ಟು ಬೇಗ ವಾಪಸ್ಸು ಬನ್ನಿ. ಈ ಚರ್ಚೆಯಲ್ಲಿ ಸಹಿ ಮಾಡದೇ ಇರುವವರು ಯಾರಾದರೂ ಇದ್ದರೆ ಮಾತನಾಡಿ. ಬೇರೆಯವರೆಲ್ಲರಿಗೂ ಅವಕಾಶ ಕೊಡುತ್ತೇನೆ.

**ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಹೇಳಬೇಕಾದ್ದನ್ನು ಶ್ರೀಮತಿ ಮೋಟಮ್ಮನವರು ಹೇಳುವುದಕ್ಕೆ ಪ್ರಾರಂಭ ಮಾಡಿದರು. ಪ್ರಾರಂಭದಲ್ಲಿ ಒಂದು ತಿಳಿ ಹಾಸ್ಯದೊಂದಿಗೆ ಪ್ರಾರಂಭವಾದರೂ ಅತ್ಯಂತ ಗಂಭೀರವಾದ ವಿಷಯದ ಬಗ್ಗೆ ಅತ್ಯಂತ ಒಳ್ಳೆಯ ಚರ್ಚೆ ನಡೆದಿದೆ. ಕಾನೂನು ಮಾಡಬೇಕಾದರೆ progressive legislation ಎಂದು ಇದೆ. ಇವತ್ತಿನ ಕಾನೂನಿನ ಚೌಕಟ್ಟಿನಲ್ಲಿ ಆಲೋಚನೆ ಮಾಡಿದರೂ ಸರಿಹೋಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

ಯಾರೋ ಒಬ್ಬ ವೈದ್ಯ ಮತ್ತು ವೈದ್ಯನ ಹೆಂಡತಿ ಅಪಘಾತಕ್ಕೆ ಒಳಗಾಗಿರುತ್ತಾರೆ. ವೈದ್ಯ ಹೆಂಡತಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಹಾಗಾಗಿ ಎಲ್ಲರೂ ಹಾಗೆ ನೋಡಿಕೊಳ್ಳುತ್ತಾರೆ ಎಂದು ಯೋಚಿಸುವುದು ಸರಿ ಹೋಗುವುದಿಲ್ಲ. ಪ್ರಾರಂಭದಲ್ಲಿ ಮಾನ್ಯ ಮಂತ್ರಿಯವರು ತಿಳಿ ಹಾಸ್ಯದ ಘಟನೆ ಹೇಳಿದರು. ಅಲ್ಲಿ ಕುಳಿತು ಚರ್ಚೆ ಮಾಡಬೇಕೆಂದರೆ ಆತ ಹೇಗೆ 25 ಮಾತ್ರೆ ತೆಗೆದುಕೊಂಡು, ವಿಷ ತೆಗೆದುಕೊಂಡು, ನೇಣು ಹಾಕಿಕೊಂಡು, ಗುಂಡು ಹಾರಿಸಿಕೊಂಡರೂ ಬದುಕಿ ಉಳಿಯುತ್ತಾನೆ ಎಂಬ ಘಟನೆಯಂತೆ ಇನ್ನೊಂದು ಘಟನೆಯನ್ನು ಉಲ್ಲೇಖ ಮಾಡಿದರು. ಆತ ಸಾಯಬೇಕೆಂದು ವಿಷ ಕುಡಿದರೆ ಅದು ಕಲಬೆರೆಕೆ ವಿಷ. ಆದರೆ ಒಳಗೆ ಹೋಗಿ ಸಮಸ್ಯೆಯಾಗಿ ಆಸ್ಪತ್ರೆಗೆ

ಹಾಕಿದಾಗ ಆಸ್ಪತ್ರೆಯಲ್ಲಿ ಗುಣ ಹಾಕಬೇಕೆಂದು ಇಂಜೆಕ್ಷನ್ ಕೊಟ್ಟಾಗ ಆ ಇಂಜೆಕ್ಷನ್ ಕಲಬೆರೆಕೆ ಇಂಜಕ್ಷನ್ ಆಗಿದ್ದು ಅದರಿಂದ ಸತ್ತು ಹೋಗುತ್ತಾನೆ ಪಾಪಿ ಸಮುದ್ರಕ್ಕೆ ಹೋದರೂ ಮೊಳಕಾಲುದ್ದ ನೀರು ಎಂದಂತೆ ಸಂಗತಿಗಳು ತಿಳಿಹಾಸ್ಯ ಎನಿಸಿದರೂ ......

ಇನ್ನು ನಾನು ನೋಡಿದ ಒಂದು ಘಟನೆ ಹೇಳಬೇಕೆಂದರೆ, ನಮ್ಮ ಹಳ್ಳಿಯ ಒಂದು ಮನೆಯಲ್ಲಿ ಗಂಡ, ಹೆಂಡತಿಗೆ ಮದುವೆ ಆಗಿ ಮಗು ಜನನವಾಗಿದೆ. I don't know what you call it in medical terms. ಆ ಮಗುಗೆ 14–15 ವರ್ಷ ಆಗಿದ್ದರೂ ಎತ್ತಿಕೊಂಡು ಹೋಗಬೇಕು. ಗಂಡ–ಹೆಂಡತಿ ಕೂಲಿ ಕೆಲಸ ಮಾಡಿ ಬದುಕುತ್ತಿದ್ದಾರೆ. ಗಂಡ ಕೂಲಿ ಕೆಲಸ ಮಾಡಬೇಕೆಂದರೆ ಮರ ಹತ್ತಿದ್ದಾಗ ಬಿದ್ದು ಆತನ ಎಲ್ಲಾ movement ಗಳನ್ನು ಕಳೆದುಕೊಳ್ಳುತ್ತಾನೆ. ಆ ಹೆಂಗಸು ಗಂಡ ಮತ್ತು ಮಗುವನ್ನು ಕಟ್ಟಿಕೊಂಡು ಜೀವನ ಮಾಡಬೇಕು. ನಾವೇನೋ ಹೋದಾಗ ಸ್ವಲ್ಪ ಸಹಾಯ ಮಾಡಬಹುದು. ಆದರೆ ಹೋದಾಗೆಲ್ಲಾ ಗಂಡ ಹೆಂಡತಿ ಕಣ್ಣೀರು ಹಾಕಿ, 'ಭಗವಂತ ಏಕೆ ಇಷ್ಟು ಕಷ್ಟ ಕೊಡುತ್ತಿದ್ದಾನೆ, ಹೇಗೆ ಹುಡುಗನನ್ನು ಸಾಕಬೇಕು' ಎಂದು ಹೇಳುತ್ತಾರೆ. ಗಂಡ 'ಭಗವಂತನ ಹತ್ತಿರ ಪ್ರಾರ್ಥನೆ ಮಾಡಿ ನನ್ನ ಜೀವನವನ್ನು ಮುಕ್ತಿಗೊಳಿಸಿ' ಎನ್ನುತ್ತಾನೆ. ಇಂತಹ ಸಾವಿರಾರು ಪ್ರಕರಣಗಳು ಇರಬಹುದು. ಅರುಣ ಶಾನುಭೋಗ್ ಮನಸ್ಸಿನಲ್ಲಿ ಏನಿದೆ ಎಂದು ಗೊತ್ತಿಲ್ಲ. ಆಕೆ ಎಷ್ಟು ಕಷ್ಟ ಅನುಭವಿಸುತ್ತಿದ್ದಾಳೋ ಗೊತ್ತಿಲ್ಲ. ಈ ರೀತಿ ಜನರ ಭಾವನೆಗಳನ್ನು ಅರ್ಥಮಾಡಿಕೊಂಡು ನಾವು ಯೋಚನೆ ಮಾಡಿದ್ದೇವೆಯೇ? ಕರುಣಾಶ್ರಯ, ಶರಣ್ಯ ಪವಿತ್ರವಾದ ಕೆಲಸ ಮಾಡುತ್ತಿವೆ, ಇದರಲ್ಲಿ ಸಂದೇಹ ಇಲ್ಲ. ಇಂತಹ ಸಂಸ್ಥೆಗಳು ಕಷ್ಟದಲ್ಲಿರುವ ಹಾಗೂ ನಿತ್ಯ ದುಃಖದಲ್ಲಿರುವ ಅವರ ಮಲ–ಮೂತ್ರಗಳಲ್ಲಿಯೇ ಹೊರಳಾಡುವಂತಹ..... ನಾನು ಒಂದು ಮನೆಯಲ್ಲಿ ನೋಡಿರುವಂತೆ Water Bed ಇಲ್ಲದ ಬಡವರ ಮನೆಯಲ್ಲಿ ಹುಣ್ಣುಗಳಾಗಿ, ಅದರಲ್ಲಿ ಹುಳುಗಳು ಇದ್ದು, ನೋಡಿಕೊಳ್ಳಲು ವ್ಯವಸ್ಥೆ ಇಲ್ಲ. ಇದನ್ನು ಅನುಭವಿಸಿ ನೋಡಿದ್ದೇವೆಯೇ? ಅವರ ದುಃಖ ಮನಸ್ಸಿಗೆ ನಾಟಿದೆಯೇ? ಅಂತಹವರು ಬದುಕಲು ಸಾಧ್ಯವೇ ಇಲ್ಲ, ಮರಣಕ್ಕೆ ಒಂದು

ಅವಕಾಶ ಮಾಡಿಕೊಡಿ ಎಂದು ನಾವು ಕಾನೂನು ಮಾತನಾಡುತ್ತೇವೆ, ಯಾವುದೋ ಎಲ್ಲೋ ಚೆನ್ನಾಗಿ ನೋಡಿಕೊಳ್ಳುವ ಕತೆ ಹೇಳುತ್ತೇವೆ. ಬದುಕಲು ಅವಕಾಶ ಕೊಡಬೇಕು ಎಂದು ಬಹಳ ಸುಂದರವಾಗಿ ಹೇಳಿದರು. ಆದರೆ ಎಷ್ಟು ಸುಂದರವಾಗಿ ಬದುಕಲು ಅವಕಾಶ ಕೊಡುತ್ತೇವೆ? ಯಾವ ರೀತಿ ಬದುಕಲು ಅವಕಾಶ ಮಾಡಿಕೊಡುತ್ತಿದ್ದೇವೆ. 65 ವರ್ಷಗಳ ನಾಗರಿಕ ಸಮಾಜದಲ್ಲಿ ಎಲ್ಲವೂ ಸರಿಯಿದ್ದ ಜನಸಾಮಾನ್ಯರಿಗೆ ನಾವು ಏನು ಅವಕಾಶಗಳನ್ನು ಕೊಡುತ್ತಿದ್ದೇವೆ?

ನಾನು ಯೂರೋಪಿಗೆ ಹೋಗುತ್ತಿದ್ದಾಗ ಹಿಂದಿಯ ಗುಜಾರಿಷ್ ಸಿನಿಮಾವನ್ನು ನೋಡಿದ ನೆನಪಿದೆ. ಮಾನ್ಯ ಶಿವಯೋಗಿಸ್ವಾಮಿಗಳಿಗೆ, ದಯವಿಟ್ಟು ನೀವು ಆ ಸಿನಿಮಾ ನೋಡಿ ಎಂದು ಹೇಳಿದೆ. ಬಹುಶಃ ಸಿನಿಮಾದಲ್ಲಿ ವೈಭವೀಕರಣ ಇದೆ. ಆ ಚಿತ್ರದಲ್ಲಿ ನಟಿಸಿರುವ ಹೃತಿಕ್‌ರೋಷನ್‌ನನ್ನು ನೋಡಿದಾಗ, ಐಶ್ವರ್ಯರೈಯನ್ನು ನೋಡಿದಾಗ ಕಷ್ಟದ ಅನುಭವ ಆಗದೇ ಇದ್ದರೂ ಕೂಡ ಎಲ್ಲೋ ಒಂದು ಕಡೆ ಸಮಸ್ಯೆಯ ಅನುಭವವಾಗಿತ್ತು. ಆದರೆ ನಿಜವಾಗಿಯೂ ಕಷ್ಟವನ್ನು ಅನುಭವಿಸುತ್ತಿರುವ ಬಡವರ ಮನೆಗೆ ಹೋಗಿ ನೋಡಿದರೆ ಎಲ್ಲೋ ಒಂದು ಕಡೆ ಆ progressive legislation ನಿಂದ ಇದಕ್ಕೊಂದು ಪರಿಹಾರ ಕಂಡುಕೊಳ್ಳಬೇಕಾದ ಅವಶ್ಯಕತೆ ಇದೆ ಎನಿಸುತ್ತದೆ. ಕಾನೂನಿನ ದುರುಪಯೋಗ ಆಗಬಹುದು ಎನ್ನುವ ಕಾರಣಕ್ಕೆ ನಾವು ಮಾತನಾಡುತ್ತಿದ್ದೇವೆ. ಈ ದೇಶದಲ್ಲಿ ಯಾವ ಯಾವ ಕಾನೂನುಗಳ ದುರುಪಯೋಗ ಆಗುತ್ತಿಲ್ಲ? ನಾವೆಲ್ಲ ಸರಿ ಇದ್ದವರು ಕಾನೂನನ್ನು ಸದುಪಯೋಗ ಮಾಡಿಕೊಳ್ಳುತ್ತಿದ್ದೇವೆಯೇ? ದುರುಪಯೋಗ ನಿಲ್ಲಿಸುವುದಕ್ಕೆ ನಮ್ಮ ಕೈಯಲ್ಲಿ ಸಾಧ್ಯವಾಗಿದೆಯೇ? ಕಾನೂನು ದುರುಪಯೋಗ ಆಗಬಹುದು ಎನ್ನುವ ಒಂದು ನೆಪವೊಡ್ಡಿ ಇವರ ಬದುಕಿಗೆ, ಅವರ ಅಪೇಕ್ಷೆಯಂತೆ . . . ಬಹುಶಃ ಪೌರಾಣಿಕವಾಗಿ ನಮ್ಮ ದೇಶದಲ್ಲಿ ಏನು ನಡೆಯಿತು, ಐತಿಹಾಸಿಕವಾಗಿ ಏನು ನಡೆಯಿತು, ಸಲ್ಲೇಖನ ಎಂದರೇನು, ಇಚ್ಛಾಮರಣ ಎಂದರೇನು, ಇದನ್ನು ನಮ್ಮ ದೇಶದಲ್ಲಿ ಹೇಗೆ ನೋಡುತ್ತಿದ್ದರು ಎಂಬುದನ್ನು ಉಲ್ಲೇಖ ಮಾಡಿದರು. ಎಲ್ಲೋ ಒಂದು ಕಡೆ ಭಾರತೀಯ

ಪರಂಪರೆಯಲ್ಲಿ ಇದನ್ನು ಭಿನ್ನವಾಗಿ ನೋಡುತ್ತಿದ್ದರು ಎಂದು ನಾನು ಭಾವಿಸುತ್ತೇನೆ. ತಾವೇ ಇಚ್ಛೆಪಟ್ಟು ಸಮಾಧಿಗೆ ಹೋಗುವಂತಹ ಬೌದ್ಧಿಕ ಮಟ್ಟಕ್ಕೆ ಏರಿದ್ದರೆ ಅಂಥವರಿಗೆ ನಾವು ಅವಕಾಶ ಕೊಡಬಹುದು ಎಂದು ಮಾನ್ಯ ನಾಣಯ್ಯನವರು ಹೇಳಿದರು. ಈ ದೇಶದಲ್ಲಿ ಕಾನೂನು ಇದೆ. ಒಬ್ಬ ವ್ಯಕ್ತಿಗೆ ಜೀವನ ಭಾರವಾಗಿ, ಕ್ಷಣಿಕ ಆವೇಗಕ್ಕೆ ಒಳಗಾಗಿ ನೇಣು ಹಾಕಿಕೊಳ್ಳುತ್ತಾನೆ, ಆತ್ಮಹತ್ಯೆ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಾನೆ. ಆತ ಒಂದು ವೇಳೆ ಬದುಕುಳಿದರೆ, ಅವನಿಗೆ ಒಂದು ವರ್ಷ ಶಿಕ್ಷೆ ಕೊಡಿ, ಒಂದಷ್ಟು fine ಹಾಕಿ ಎಂದು ಕಾನೂನು ಹೇಳುತ್ತದೆ. Counseling ಮಾಡಿ, ಅವನಿಗೆ ಸಾಂತ್ವನ ಹೇಳಿ, ಅವನಿಗೆ ಆತ್ಮ ವಿಶ್ವಾಸ ತುಂಬಿ, ಬದುಕುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಹೇಳುವುದಿಲ್ಲ. ದುಃಖ ಅನುಭವಿಸಿ ಆತ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಹೋಗುತ್ತಾನೆ, ನಾವು ಒಂದು ನಾಗರಿಕ ಸಮಾಜವಾಗಿ counseling ಮಾಡುವುದಕ್ಕೆ ಹೋಗುವುದಿಲ್ಲ. ಆತನಿಗೆ ಸಾಂತ್ವನ ಹೇಳುವುದಿಲ್ಲ, ಆತನಿಗೆ ಬದುಕುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ, ಆತನ ಸಮಸ್ಯೆಯನ್ನು ಪರಿಹಾರ ಮಾಡಿಕೊಡುವುದಿಲ್ಲ. ಅವನಿಗೆ ಕರೆದುಕೊಂಡು ಹೋಗಿ ಒಂದು ವರ್ಷ ಜೈಲಿನಲ್ಲಿಟ್ಟು ಶಿಕ್ಷೆ ಅನುಭವಿಸು ಎಂದು ಹೇಳುತ್ತೇವೆ. ಇದು ಕಾನೂನಿನ ಆಶಯವೇ? ಅಂತಹ ಕಾನೂನನ್ನು ಉಲ್ಲೇಖ ಮಾಡಿಕೊಂಡು ಜೀವನದಲ್ಲಿ ಸಾಧ್ಯವೇ ಇಲ್ಲದಂತಹ ದುಃಖ ಅನುಭವಿಸುತ್ತಿರುವವರ ಬಗ್ಗೆ ನಮ್ಮಲ್ಲಿ ಚಿಂತನೆ ಎನ್ನುವುದು ಎಲ್ಲಿದೆ? ಇಂಥದ್ದನ್ನು ಸದನದಲ್ಲಿ ಕುಳಿತು ನಾವೇಕೆ ಚಿಂತನೆ ಮಾಡಬೇಕು? ಈ ಸದನಗಳಲ್ಲಿ ಇಂತಹ ಸಮಸ್ಯೆಗಳ ಬಗ್ಗೆ ಚರ್ಚೆ ಆಗದೇ ಇದ್ದರೆ, ಈ ಸಮಸ್ಯೆಗಳ ಬಗ್ಗೆ ನಾವು ಅರ್ಥ ಮಾಡಿಕೊಳ್ಳದೇ ಇದ್ದರೆ, ಅವರ ನೋವಿಗೆ ಸ್ಪಂದಿಸದೇ ಇದ್ದರೆ ನಾವು ಇಲ್ಲಿ ಕುಳಿತುಕೊಂಡು ಏನು ಪ್ರಯೋಜನ? ಸುಪ್ರೀಂ ಕೋರ್ಟಿನಲ್ಲಿ ಇದಕ್ಕೆ ಅವಕಾಶವಿಲ್ಲ, ಇದು ಲೋಕಸಭೆಯಲ್ಲಿ ಚರ್ಚೆ ಆಗಬೇಕು. ಮಾನ್ಯ ಸಭಾಪತಿಗಳೆ, ಇಲ್ಲಿಂದ ಕೆಟ್ಟ ಸಂದೇಶ ಹೋಗಬಾರದು. ಇಲ್ಲಿಂದ ಒಳ್ಳೆಯ ಸಂದೇಶ ಏಕೆ ಹೋಗುವುದಕ್ಕೆ ಸಾಧ್ಯವಿಲ್ಲ? ನಾವು Euthanasia (ಇಚ್ಛಾಮರಣ)ದ ಬಗ್ಗೆ ಮಾತನಾಡಿದರೆ ಕೆಟ್ಟ ಸಂದೇಶ

ಹೋಗುವುದಕ್ಕೆ ಸಾಧ್ಯವಿದೆಯೇ? ಈ ಜಗತ್ತಿನ ಯಾವ ರಾಜ್ಯಗಳಲ್ಲಿ, ಯಾವ ರಾಷ್ಟ್ರಗಳಲ್ಲಿ ಇದರ ಬಗ್ಗೆ ಚರ್ಚೆ ಮಾಡಿದ್ದಾರೆಯೋ, ಕಾನೂನು ಮೂಲಕ ಕ್ರಮ ತೆಗೆದುಕೊಂಡಿದ್ದಾರೋ ಅವರಿಗೆ ತಲೆ ಕೆಟ್ಟು ಹೋಗಿದೆಯೇ? ಅವರು ಇದರ ಬಗ್ಗೆ ಆಲೋಚನೆ ಮಾಡಿಲ್ಲವೇ? ಅವರು ಜಗತ್ತಿನ ಕೆಟ್ಟ ಸಂದೇಶ ಕಳುಹಿಸಿದ್ದಾರೆಯೇ? ಎಲ್ಲೋ ಒಂದು ಕಡೆ ಒಂದು ಸಮಸ್ಯೆಯ ಬಗ್ಗೆ ಚರ್ಚೆ ಮಾಡಬೇಕಾದರೆ, ಸಮಸ್ಯೆಗೆ ಪರಿಹಾರ ಹುಡುಕುವ ಪ್ರಯತ್ನ ಮಾಡಬೇಕಾದರೆ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡು ಚರ್ಚೆ ಮಾಡುವ ಅವಶ್ಯಕತೆ ಇರುತ್ತದೆ. ಮಾನ್ಯ ಭಾನುಪ್ರಕಾಶ್‌ಯವರು ಒಂದು ಉಲ್ಲೇಖ ಮಾಡಿದರು. 'Human Harmony' ಬಗ್ಗೆ ಒಂದು ಸೆಮಿನಾರ್ ನಡೆಯುತ್ತಿತ್ತು. ಪ್ರೊ:ರಾಮಸುಬ್ರಹ್ಮಣ್ಯಂ ಎನ್ನುವ ಒಬ್ಬ IIT, Powai ನ Professor ಬಂದಿದ್ದರು. ಅವರು ಮಾತನಾಡುತ್ತಾ ಈ ಜಗತ್ತಿನಲ್ಲಿ ಏಕೆ disharmony ಇದೆ ಎಂಬ ಬಗ್ಗೆ ಹೇಳಿದರು. "ಈ ಜಗತ್ತಿನಲ್ಲಿ ಮಾನವ ಎನ್ನುವ ಜೀವಿ ಒಟ್ಟು ಜೀವರಾಶಿಗಳಲ್ಲಿ he is not even 1%. He is less than 1%. ಆದರೆ ಇವತ್ತು ನಮ್ಮ ಪ್ರಕೃತಿಯಲ್ಲಿ ಏನು ವಿಕೋಪವಾಗುತ್ತಿದೆಯೋ, ಏನು ಸಮಸ್ಯೆಗಳನ್ನು ಸೃಷ್ಟಿ ಮಾಡಿದ್ದೇವೆಯೋ ಅದಕ್ಕೆ ಕಾರಣಕರ್ತರು ಯಾರು ಎಂದು ಲೆಕ್ಕ ಹಾಕುತ್ತಾ ಹೋದರೆ 99.99% is all creation of this less than 1% race" ಎಂದು ಅವರು ಹೇಳಿದರು. ನಾವು ನಾಯಿಗಳನ್ನು ಸಾಯಿಸಬೇಕೆಂದು ಹೇಳುತ್ತೇವೆ. ಶೇಕಡ 33 ಇದ್ದ ಕಾಡನ್ನು ಕಡಿದು ಹಾಕಿದ್ದೇವೆ. ಮಾನ್ಯ ನಾಣಯ್ಯನವರು ಮೊನ್ನೆ ಆನೆಗಳ ಹಾವಳಿ ಬಗ್ಗೆ ಮಾತನಾಡಿದರು. ಅದರ ಬಗ್ಗೆ ಮಾತನಾಡಿದರು. ಅದರ ಬಗ್ಗೆ ನಾವು ಚಿಂತನೆ ಮಾಡಿಲ್ಲ. 33 ಪರ್ಸೆಂಟ್ ಇದ್ದ ಕಾಡು ಏಕೆ 11 ಪರ್ಸೆಂಟ್ ಆಯಿತು? ಇಡೀ ಜಗತ್ತಿನ ಜೀವ ಸಂಕುಲದ ಮೇಲೆ ಅದರ ಪರಿಣಾಮವೇನು? ನಾವು, ನಮಗೆ ಎಲ್ಲದಕ್ಕೂ ಅಧಿಕಾರ ಇದೆ, ನಾವು ಯಾವುದಾದರೂ ಕಾನೂನನ್ನು ಮಾಡಿಕೊಳ್ಳಬಹುದು ಎಂದುಕೊಂಡಿದ್ದೇವೆ. ಗಾಂಧೀಜಿಯವರು ಹೋಗುತ್ತಾ, ಪ್ರಕೃತಿಯನ್ನು ಇದಕ್ಕಿಂತಲೂ ಚೆನ್ನಾಗಿ ಇಡುವುದಕ್ಕೆ ಆಗದೇ ಹೋದರೆ ಮುಂದಿನ ತಲೆಮಾರಿನವರಿಗೆ ಇದ್ದಷ್ಟಾದರೂ ಚೆನ್ನಾಗಿ ಇಟ್ಟು ಹೋಗು ಎಂಬ ಮಾತನ್ನು

ಹೇಳಿ ಹೋದರು. ನಾವು ಇವತ್ತು ಗಾಂಧಿಜಿಯವರನ್ನು ಮರೆತುಬಿಟ್ಟಿದ್ದೇವೆ. ಫ್ರೇಮ್‌ನಲ್ಲಿ ಹಾಕಿ ಕೂರಿಸಿದ್ದೇವೆ. ಮಾನ್ಯ ಸಭಾಪತಿಗಳೆ, ಎಲ್ಲಾ ಸಮಸ್ಯೆಗಳ ಹಿಂದೆ ನಮ್ಮ ಸ್ವಾರ್ಥ ಇದೆ. ಕರಿಬಸಮ್ಮನ ಬಗ್ಗೆ ಉಲ್ಲೇಖ ಮಾಡುತ್ತಾ ಆಕೆಗೆ ಕೇವಲ ಸ್ಲಿಪ್ ಡಿಸ್ಕ್ ಸಮಸ್ಯೆ ಇದೆ ಎಂದು ಹೇಳಿದರು. ಸ್ಲಿಪ್ ಡಿಸ್ಕ್‌ನ ನೋವನ್ನು ಅನುಭವಿಸುತ್ತಿದ್ದ ಕರಿಬಸಮ್ಮನವರ ಸಮಸ್ಯೆ ಸಣ್ಣದಿರಬಹುದು ಆದರೆ terminally ill cases ಏನಿದೆ, ದಿನನಿತ್ಯ ಬೆಳಗಿನಿಂದ ಸಂಜೆಯವರೆಗೆ ಕಣ್ಣೀರಿನಲ್ಲಿ ಕೈತೊಳೆಯುವಂತಹ ಬವಣೆ ಏನೆದೆ ಅದನ್ನು ಅರ್ಥ ಮಾಡಿಕೊಳ್ಳಬೇಕು. ಆಕೆ ಒಬ್ಬ ಶಾಲೆಯ ನಿವೃತ್ತ ಶಿಕ್ಷಕಿ. ಆಕೆ ಒಂದು ಸಮಾಜದಲ್ಲಿ ಜಾಗೃತಿ ಉಂಟು ಮಾಡುವುದಕ್ಕೆ ಪರಿಶ್ರಮ ಪಡುತ್ತಿದ್ದಾರೆ. ಎಲ್ಲೋ ಒಂದು ಕಡೆ commitment to that cause – ಇದು ನಮಗೆ ಅರ್ಥವಾಗಬೇಕೋ ಬೇಡವೋ? ಅರುಣ ಶಾನುಭೋಗ್‌ರವರನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ, ಚೆನ್ನಾಗಿ ನೋಡಿಕೊಳ್ಳುವವರ ಮಾನಸಿಕ ಸ್ಥಿತಿಯ ಹಿನ್ನೆಲೆಯಲ್ಲಿ ಅವಕಾಶ ಕೊಟ್ಟಿದ್ದರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ, ಅದಕ್ಕೆ ನನ್ನದೇನೂ ಅಭ್ಯಂತರ ಇಲ್ಲ. ಆದರೆ ನಮ್ಮ ಜಗತ್ತಿನಲ್ಲಿ, ರಾಷ್ಟ್ರದಲ್ಲಿ ಅಥವಾ ನಮ್ಮ ರಾಜ್ಯದಲ್ಲಿ ದುಃಖ ಅನುಭವಿಸುವ ಎಷ್ಟು ಜನರಿಗೆ ಈ ರೀತಿ team ನ ಸಹಾಯ ಇದೆ? ಮನೆಯಲ್ಲಿರುವ ಅಂಗವಿಕಲ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ. ಈ ದೇಶದಲ್ಲಿ ಮಕ್ಕಳನ್ನು ಕದ್ದು ಅವರನ್ನು ಅಂಗವಿಕಲರನ್ನಾಗಿ ಮಾಡಿ ಭಿಕ್ಷೆ ಬೇಡುವಂತೆ ಮಾಡುತ್ತೇವೆ. ಅವರ ಸಮಸ್ಯೆ ಅರ್ಥ ಮಾಡಿಕೊಳ್ಳುವುದಿಲ್ಲ. ಆದರೆ ಎಲ್ಲೋ ಒಂದು ಕಡೆ ಈ ಕಷ್ಟ ಅನುಭವಿಸುವವರ ಬಗ್ಗೆ ನಾವು ಅತ್ಯಂತ ಗಭೀರವಾಗಿ ಆಲೋಚನೆ ಮಾಡಿಕೊಂಡು ಕಾನೂನಿನ ಚೌಕಟ್ಟಿನಲ್ಲಿ ದುರುಪಯೋಗ ಆಗದ ಹಾಗೆ ಏನು ಮಾಡಬೇಕು ಎಂಬ ಬಗ್ಗೆ ಚರ್ಚೆ ಮಾಡಬೇಕೇ ಹೊರತು ಅಸಹಾಯಕರಾಗಿ, ಕೈಕಟ್ಟಿ ಕುಳಿತುಕೊಳ್ಳುವಂತಹ ಸಮಯ ಇದಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ದಯಾಮರಣ, ಇಚ್ಛಾಮರಣ, ಆತ್ಮಹತ್ಯೆ, ಕೊಲೆ ಇವುಗಳ ಮಧ್ಯೆ ಸೂಕ್ಷ್ಮ ಎಳೆಯಷ್ಟು ವ್ಯತ್ಯಾಸಗಳಿವೆ. ದಯಾಮರಣವನ್ನು ಕೊಲೆ ಎಂದು ನೋಡುವುದಾದರೆ, ಒಂದು ಇಚ್ಛಾಮರಣವನ್ನು ಆತ್ಮಹತ್ಯೆಗೆ ಸಮೀಕರಣ

ಮಾಡಿ ನೋಡುವುದಾದರೆ ಬಹುಶಃ ಈ ಸಮಸ್ಯೆಗೆ ನಾವು ಪರಿಹಾರ ಹುಡುಕುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಭಾವಿಸುತ್ತೇನೆ. ನಮ್ಮ ದೇಶದ ಗಡಿ ಕಾಯುವಂತಹ ಯೋಧರ ಬಗ್ಗೆ ಉಲ್ಲೇಖ ಮಾಡಿದರು. ನಾನೊಂದು ಸಣ್ಣ ಘಟನೆ ಹೇಳುತ್ತೇನೆ. ಕಾರ್ಗಿಲ್ ಯುದ್ಧದಲ್ಲಿ ಭಾಗವಹಿಸಿದ್ದ, ಮಾನ್ಯ ಎಸ್.ಆರ್.ಪಾಟೀಲ್‌ರವರ ಊರಿನ ಹತ್ತಿರದವನಾದ ರಂಗಪ್ಪ ಎನ್ನುವ ಯೋಧ ಬಾಂಬ್ ಸ್ಫೋಟದಲ್ಲಿ ತನ್ನ ಎರಡು ಕೈ ಕಳೆದುಕೊಳ್ಳುತ್ತಾನೆ, ಒಂದು ಕಾಲನ್ನೂ ಕಳೆದುಕೊಳ್ಳುತ್ತಾನೆ. 525 ಜನ ಯೋಧರ ಪ್ರಾಣಾರ್ಪಣೆ ಮಾಡುತ್ತಾರೆ. ಆ ಕಾರ್ಗಿಲ್ ಪ್ರದೇಶದಲ್ಲಿ ಅವರ್‍ಯಾರಿಗೂ ಬಂಧುಗಳಿಲ್ಲ. ಅವರ್‍ಯಾರಿಗೂ ಸಂಬಂಧಿಕರಿಲ್ಲ. ಅವರ್‍ಯಾರಿಗೂ ಆಸ್ತಿ–ಪಾಸ್ತಿ ಕೈ ಕಳೆದುಕೊಂಡ ರಂಗಪ್ಪನನ್ನು ಕಾರ್ಗಿಲ್ ದಶಮಾನೋತ್ಸವ ಸಂದರ್ಭದಲ್ಲಿ ನಾನು ಕಲಿತ ಕಾಲೇಜಿನಲ್ಲಿ ಒಂದು ಸನ್ಮಾನ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಆ ಸನ್ಮಾನ ಕಾರ್ಯಕ್ರಮದಲ್ಲಿ ಒಂದು ಶಾಲು, ತುರಾಯಿ, ಹಣ್ಣಿನ ತಟ್ಟೆಯನ್ನು ಕೊಟ್ಟು 43 ಸಾವಿರ ರೂಪಾಯಿ ದುಡ್ಡನ್ನೂ ಕೊಟ್ಟರು. ಆ ದುಡ್ಡು ಎಲ್ಲಿಂದ ಬಂತು ಎಂದು ಕೇಳಿದರೆ, ಆ ಕಾಲೇಜಿನ ಒಬ್ಬ ವಿದ್ಯಾರ್ಥಿ ಕಾರ್ಗಿಲ್‌ನ ದಶಮಾನೋತ್ಸವದ ಸಂದರ್ಭದಲ್ಲಿ ಕಾರ್ಕಳ ತಾಲ್ಲೂಕಿನ ಎಲ್ಲಾ ಹೈಸ್ಕೂಲಿಗೆ ಹೋಗಿ ಭೇಟಿ ಮಾಡಿ, ಅಲ್ಲಿನ ವಿದ್ಯಾರ್ಥಿಗಳಿಗೆ ಕಾರ್ಗಿಲ್ ಯುದ್ಧದ ಕತೆ ಹೇಳುತ್ತಾನೆ. ನಂತರ, ಇದರ ಬಗ್ಗೆ ನಿಮಗೇನಾದರೂ ಅನ್ನಿಸಿದರೆ ನಾನು ಇಡುವಂತಹ ಹುಂಡಿಯಲ್ಲಿ ದುಡ್ಡು ಹಾಕಿ ಎಂದು ಹೇಳಿ ಒಂದು ಹುಂಡಿಯನ್ನು ಅಲ್ಲಿಟ್ಟು ಒಂದು ತಿಂಗಳ ನಂತರ ಅದನ್ನು collect ಮಾಡುತ್ತಾನೆ. ಹೈಸ್ಕೂಲ್‌ನ ವಿದ್ಯಾರ್ಥಿಗಳು ಕಾರ್ಗಿಲ್ ಯೋಧರ ಸ್ಮರಣೆಗಾಗಿ 43 ಸಾವಿರ ರೂಪಾಯಿಗಳನ್ನು ಹುಂಡಿಯಲ್ಲಿ ಹಾಕಿರುತ್ತಾರೆ. ಅದನ್ನೇ ತಂದು ಈ ಯೋಧನಿಗೆ ಕೊಡುತ್ತಾರೆ. ನಾನು ಮಾಜಿ ಸೈನಿಕ ಎನ್ನುವ ಕಾರಣಕ್ಕಾಗಿ ನನ್ನನ್ನು ಆ ಸಮಾರಂಭಕ್ಕೆ ಕರೆದಿದ್ದರು. ಸನ್ಮಾನ್ ಆದಮೇಲೆ ರಂಗಪ್ಪ ಮಾತಾನಾಡಬೇಕು ಎಂದು ಆತ ಕುಳಿತಲ್ಲಿಯೇ ತಂದು ಮೈಕ್ ಕೊಟ್ಟರು. ಆ ಸಂದರ್ಭದಲ್ಲಿ ರಂಗಪ್ಪ ನಾನೇನು ಮಾತನಾಡಲಿ ಎಂದು ಕೇಳಿದ. ನಾನು, ಮಕ್ಕಳು ನೀನು ಹೇಳಿದ್ದನ್ನು ಕೇಳುತ್ತಾರೆ ಎಂದು ಹೇಳಿದೆ. ನೀನು

ಬಾಗಲಕೋಟೆ ಹತ್ತಿರದವನು, ಪರಿಶಿಷ್ಟ ಜಾತಿಯ ಕುಟುಂಬದಲ್ಲಿ ಹುಟ್ಟಿರುವಂಥವನು, ತಂದೆ ತೀರಿಕೊಂಡಿದ್ದಾರೆ, ತಾಯಿ ಹಣ್ಣುಹಣ್ಣು ಮುದುಕಿ, ನಿನ್ನ ಒಬ್ಬ ತಂಗಿಗೆ ಮದುವೆಗೆ ಆಗಿಲ್ಲ, ಇದ್ದ ಒಬ್ಬ ತಮ್ಮ ಹುಟ್ಟು ಕುರುಡ, ಹುಟ್ಟು ಕಿವುಡ. ನಮ್ಮ ಸರ್ಕಾರ ನಿನ್ನ ಸೇವೆಯನ್ನು, ತ್ಯಾಗವನ್ನು ನೋಡಿ ಜುಜುಬಿ ತಿಂಗಳಿಗೆ ಐದು ಸಾವಿರ ರೂಪಾಯಿಗಳ ಪಿಂಚಣಿಯನ್ನು ಕೊಡುತ್ತಿದೆ. ನಿನಗೆ ಕಾರ್ಗಿಲ್ ಯುದ್ಧ ಆದಮೇಲೆ 8 ತಿಂಗಳುಗಳ ಕಾಲ ಭಾರತೀಯ ಸೇನೆಯ 4 ಆಸ್ಪತ್ರೆಗಳಲ್ಲಿ 28 ಬಾರಿ ಶಸ್ತ್ರ ಚಿಕಿತ್ಸೆಯಾಗಿದೆ. ಸಾವು–ಬದುಕಿನ ನಡುವೆ ಹೋರಾಟ ಮಾಡಿ ಬಂದಿರುವೆ. ಈ ಸಂಗತಿಗಳೆಲ್ಲವನ್ನೂ ಮಕ್ಕಳಿಗೆ ಹೇಳು ಅರ್ಥವಾಗುತ್ತದೆ ಎಂದು ಹೇಳಿದೆ. ರಂಗಪ್ಪ ಭಾಷಣ ಮಾಡಿದ ಆದರೆ ಇದ್ಯಾವುದನ್ನೂ ಹೇಳಲಿಲ್ಲ. ಸಾಹೇಬರೇ ನನಗೆ ಭಾಷಣ ಮಾಡುವುದಕ್ಕೆ ಬರುವುದಿಲ್ಲ, ಈ ಜನ್ಮದಲ್ಲಿ ಎರಡು ಕೈಕಳೆದುಕೊಂಡು, ಒಂದು ಕಾಲು ಕಳೆದುಕೊಂಡು ಮತ್ತೆ ಸೈನಿಕ ಆಗುವುದಕ್ಕೆ ಆಗುವುದಿಲ್ಲ. ಮತ್ತೆ ಹುಟ್ಟಿ ಬರುತ್ತೇನೆ, ಮತ್ತೆ ಸೈನಿಕ ಆಗುತ್ತೇನೆ ಎನ್ನುವ ಮಾತನ್ನು ಹೇಳಿದ. ಇದನ್ನು ನಾನು ಏಕೆ ಉಲ್ಲೇಖ ಮಾಡಿದೆ ಎಂದರೆ, ನಮ್ಮ ಸೈನಿಕರು ಇಚ್ಛಾ ಮರಣಿಗಳು. ತರಬೇತಿಯಾದ ಮೇಲೆ ನಾವು ನಂಬಿದ ಧರ್ಮ ಗ್ರಂಥಗಳ ಮೇಲೆ ಕೈ ಇಟ್ಟು ನಮ್ಮ ಹತ್ತಿರ ಒಂದು ಮಾತನ್ನು ಹೇಳಿಸುತ್ತಾರೆ. ನಾವು ಇಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡುತ್ತೇವೆ. ಆದರೆ, ಸನ್ಮಾನ್ಯ ನಾಣಯ್ಯನವರೇ, ಅಲ್ಲಿಯ ಪ್ರಮಾಣ ವಚನದಲ್ಲಿ ಒಂದು ವ್ಯಾಕ್ಯ ಬೇರೆ ಇದೆ. ಈ ದೇಶದ ಪ್ರಶ್ನೆ ಕಣ್ಣು ಮುಂದೆ ಬಂದಾಗ ನಾನು ಅತ್ಯಂತ ಶ್ರೇಷ್ಟವಾದ ಬಲಿದಾನಕ್ಕೆ ಸದಾ ಸಿದ್ಧನಾಗಿರುತ್ತೇನೆ ಎಂದು ಪ್ರಮಾಣ ವಚನ ಸ್ವೀಕಾರ ಮಾಡಬೇಕು. ಯಾವುದೋ ಒಂದು ಶ್ರೇಷ್ಟ ಧ್ಯೇಯಕ್ಕಾಗಿ, ಉದ್ದೇಶಕ್ಕಾಗಿ, ಒಬ್ಬ ಸೈನಿಕ ತನ್ನ ಪ್ರಾಣಾರ್ಪಣೆ ಮಾಡುವುದಕ್ಕೆ ಯಾವಾಗಲೂ ತಯಾರಾಗಿರುತ್ತಾನೆ. ಹಿಂದೆ ಇತ್ತು, ಈಗ ಬಹಳ ಜನ ಕಡಿಮೆಯಾಗುತ್ತಿದ್ದಾರೆ. ಇದು ನಾಣಯ್ಯನವರಿಗೆ ಗೊತ್ತಿದೆ. ಅದೇನೆ ಇರಲಿ, ಆ ಒಂದು ಧ್ಯೇಯಕ್ಕಾಗಿ ಪ್ರಾಣಾರ್ಪಣೆ ಮಾಡುವಂತಹ ಅವಕಾಶ ನಮಗಿದೆ. ಅದು ಸೈನ್ಯದಲ್ಲಿ ಇವತ್ತಿಗೂ ಅವಕಾಶ ಇದೆ. ಮಾಡುವುದು ಸರಿಯೋ ತಪ್ಪೋ, ಅಗತ್ಯ

ಇದಯೋ ಇಲ್ಲವೋ ಎನ್ನುವ ಚರ್ಚೆಗೆ ನಾನು ಹೋಗುವುದಿಲ್ಲ. ಅದೇ ರೀತಿ ಹತ್ತಾರು ವರ್ಷಗಳ ಕಾಲ ದುಃಖ ಅನುಭವಿಸಿ, ನೋವು ಅನುಭವಿಸಿ, ನೋಡಿಕೊಳ್ಳುವುದಕ್ಕೆ ಯಾರು ಇಲ್ಲದೆ ಮನೆಯವರಿಗೆ ಹೊರೆಯಾಗಿ, ದೇವರೇ ಒಂದೇ ಸಲ ನನ್ನ ಕತೆಯನ್ನು ಮುಗಿಸಿಬಿಡಪ್ಪ ಎಂದು ಪ್ರಾರ್ಥನೆ ಮಾಡುವಂತಹ ಎಷ್ಟು ಜನರನ್ನು ನಾವು ನೋಡಿಲ್ಲ? ಹಾಗಾಗಿ ಚರ್ಚೆ ಚರ್ಚೆಯಾಗಿಯೇ ಉಳಿಯಬಾರದು. ಒಂದು ಬದಲಾವಣೆ ಬರಬೇಕು. ಒಂದು ಕಾನೂನಿನ ಚೌಕಟ್ಟಿನೊಳಗೆ ನಾವು ಸೀಮಿತ ದೃಷ್ಟಿಕೋನದಿಂದ ಇದು ಸರಿಯಿಲ್ಲ ಎಂದು ನಿರ್ಣಯ ತೆಗೆದುಕೊಳ್ಳಬಾರದು. ಕಷ್ಟ ಅನುಭವಿಸುವವರ, ಆ ಕಷ್ಟವನ್ನು ನಾವು ಅನುಭವಿಸಿ, ಆ ರೀತಿ ಆಗಬಾರದು, ಆದರೆ, ನಾಳೆ ಆ ರೀತಿಯಾದಾಗ ನಮಗೇನು ಭಾವನೆ ಬರುತ್ತದೆ? ನಾವೇನು ಅನುಭವಿಸಬಹುದು, ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಇವತ್ತು ಪ್ರಾಯಶಃ ಈ ಸದನದಿಂದ ಕೆಟ್ಟ ಸಂದೇಶವಲ್ಲ, ಒಂದು ಒಳ್ಳೆಯ ಸಂದೇಶ ಹೋಗಬೇಕು. ನಿಮ್ಮ ಸಮಸ್ಯೆಗೆ ನಾವು ಸ್ಪಂದಿಸುತ್ತಿದ್ದೇವೆ, ನಿಮ್ಮ ನೋವಿಗೆ ಎಲ್ಲೋ ಒಂದು ಕಡೆ ಪರಿಹಾರ ಕೊಡುವುದಕ್ಕಾಗಿ ಏನು ಅವಕಾಶ ಇದೆ, ಅದನ್ನು ಮಾಡಿಕೊಡುವಂಥ ಪ್ರಯತ್ನ ಮಾಡುತ್ತಿರಿ ಎಂದು ಹೇಳುವಂತಹ ಸಂಗತಿಯನ್ನು ಹೇಳುತ್ತಾ, ಎಲ್ಲೋ ಒಂದು ಕಡೆ ವೃದ್ಧಾಶ್ರಮಗಳ ಬಗ್ಗೆ ಉಲ್ಲೇಖ ಮಾಡಿದ್ದರು. ನಮ್ಮ ಸಮಾಜದಲ್ಲಿ ಏನಾಗುತ್ತಿದೆ, ಅಮೇರಿಕಾದ social security system ಬಗ್ಗೆ ಬಹಳ ಉಲ್ಲೇಖ ಮಾಡುತ್ತೇವೆ. ಅಂದರೆ, ಅಲ್ಲಿ ಮಕ್ಕಳು ಯಾರು ಹಿರಿಯರ ಒಟ್ಟಿಗೆ ಇರುವುದಿಲ್ಲ. ವಯಸ್ಸಾದವರ ಜವಾಬ್ದಾರಿ ಸರ್ಕಾರದ್ದು, ಅವರನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಅಲ್ಲಿ ಯಾವ ಕಡೆ ಹೋದರೂ ವೃದ್ಧಾಶ್ರಮ ಇರುವುದನ್ನು ನಾವು ನೋಡುತ್ತೇವೆ. ನಮ್ಮ ದೇಶದಲ್ಲಿಯೂ ಆ ರೀತಿ ಆಗುವಂಥದ್ದು ನಮ್ಮ ಕಣ್ಣು ಮುಂದೆ ಇದೆ. ಆ ಅಂತಿಮ ದಿನಗಳಲ್ಲಿ ಈಗ ನಮ್ಮ ಹಿರಿಯರು ಕಷ್ಟ ಅನುಭವಿಸುವುದನ್ನು ನೋಡಿದ್ದೇವೆ. ಹಾಗಾಗಿ ಬದಲಾಗುತ್ತಿರುವಂತಹ ಈ ಕಾಲಘಟ್ಟದಲ್ಲಿ, ಬದಲಾಗುತ್ತಿರುವಂತಹ ಪರಿಸ್ಥಿತಿಯಲ್ಲಿ, ಬದಲಾಗುತ್ತಿರುವಂತಹ ಸಾಮಾಜಿಕ ಜೀವನ ಶೈಲಿಯಲ್ಲಿ, ಎಲ್ಲೋ ಒಂದು ಕಡೆ ಈ ರೀತಿ ತೊಂದರೆ

ಅನುಭವಿಸುತ್ತಿರುವವರ ಸಂಖ್ಯೆ ಜಾಸ್ತಿಯಾಗುತ್ತಿರುವಾಗ, ಸರಿ, ತಪ್ಪು, ನ್ಯಾಯ, ಅನ್ಯಾಯ, ಧರ್ಮ, ಅಧರ್ಮ, ಇವೆಲ್ಲವನ್ನು ಮನಸ್ಸಿನಲ್ಲಿಟ್ಟುಕೊಂಡು, ಒಂದಷ್ಟು ಸಂಗತಿಗಳು ವಿಧಾನಸೌಧದ ಆಧ್ಯಾತ್ಮಿಕದ ಬಗ್ಗೆ ಚರ್ಚೆಯಾಯಿತು. ಅದು ನನಗೆ ಗೊತ್ತಿಲ್ಲ. ಆದರೆ, ವಾಸ್ತವಿಕವಾಗಿ ನೋಡಿದರೆ, ಎಲ್ಲೋ ಒಂದು ಕಡೆ ಈ ಸಮಸ್ಯೆ ಇದೆ, ಅದಕ್ಕಾಗಿ ಸದನದಲ್ಲಿ ನಾವೆಲ್ಲಾ ಚರ್ಚೆ ಮಾಡಿಕೊಂಡು ಒಂದು ನಿರ್ಣಯವನ್ನು ಕೈಗೊಳ್ಳಬೇಕು. ಆ ನಿರ್ಣಯವನ್ನು ತೆಗೆದುಕೊಳ್ಳುವಂತಹ ಅಧಿಕಾರ ನಮ್ಮ ಸದನಕ್ಕೆ ಖಂಡಿತವಾಗಿಯೂ ಇಲ್ಲ. ಆದರೆ, ಆ ಜನರ ನೋವನ್ನು ಅರ್ಥ ಮಾಡಿಕೊಂಡು, ಆ ನೋವಿಗೆ ಸ್ಪಂದಿಸಿ ಪರಿಹಾರ ಸೂಚಕವಾಗಿ ಯಾವುದಾದರೂ ನಿರ್ಣಯವನ್ನು ಕೈಗೊಂಡು ಅದನ್ನು ಕೇಂದ್ರ ಸರ್ಕಾರಕ್ಕೆ ಮುಟ್ಟಿಸುವ ಕೆಲಸ ಮಾಡುವಂತಹ ಎಲ್ಲಾ ಅಧಿಕಾರ ನಮ್ಮ ಸದನಕ್ಕೆ ಇದೆ. ಆ ದೃಷ್ಟಿಯಲ್ಲಿ ಇಚ್ಛಾ ಮರಣದ ಬಗ್ಗೆ ಎಲ್ಲೋ ಒಂದು ಕಡೆ ಈ ಸದನ ಒಂದು ಸಂದೇಶವನ್ನು ಕಳುಹಿಸಬೇಕು. ಅವರ ನೋವಿಗೆ ಸ್ಪಂದಿಸುವಂತಹ ಕೆಲಸ ಮಾಡಬೇಕೆಂದು ಹೇಳ ಬಯಸುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

**ಶ್ರೀ ಲಹರ್ ಸಿಂಗ್ ಸಿರೋಯಾ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಮ್ಮ ಅದೃಷ್ಟ ನೋಡಿ, ನಾನು ಮಾತನಾಡುವಾಗ ಮಂತ್ರಿಗಳು ಒಬ್ಬರೆ ಒಬ್ಬರು ಇದ್ದಾರೆ. ಸಭಾನಾಯಕರು ಇಲ್ಲ. But I am thankful to the Leader of Opposition for having present in the House. Today Our Council is converted as a religious Assembly and I think today’s proceedings should be telecast in Astha Channel or Sanskar Channel.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೇ, ಕನ್ನಡದಲ್ಲಿ ಮಾತನಾಡುವುದಕ್ಕೆ ಕಷ್ಟವಾಗುತ್ತದೆ ಎನ್ನುವುದಕ್ಕೋಸ್ಕರ ಇಂಗ್ಲಿಷ್‌ನಲ್ಲಿ ಮಾತನಾಡುವುದರ ಬದಲು ಸುಲಭವಾಗಿ ಹಿಂದಿಯಲ್ಲಿ ಮಾತನಾಡುವ

ಹಾಗಿದ್ದರೆ ರಾಷ್ಟ್ರ ಭಾಷೆಯನ್ನು ನಾವೆಲ್ಲರೂ ಕೇಳುತ್ತೇವೆ. ಅವರು ಹಿಂದಿಯಲ್ಲಿ ಮಾತನಾಡಲಿ.

**ಉಪ ಸಭಾಪತಿಯವರು:–** ಲಹರ್ ಸಿಂಗ್‌ರವರೇ, ಕನ್ನಡದಲ್ಲಿ ಮಾತನಾಡುವುದಕ್ಕೆ ಕಷ್ಟವಾಗುತ್ತದೆಯೇ? ನಮ್ಮ ಜೊತೆಯಲ್ಲಿ ಕನ್ನಡದಲ್ಲಿ ಮಾತನಾಡುತ್ತೀರಿ ಮಾತನಾಡಿ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, pronunciation ಸ್ವಲ್ಪ ಸರಿಯಾಗಿ ಬರುವುದಿಲ್ಲ.

**ಉಪಸಭಾಪತಿಯವರು:–** ಪರವಾಗಿಲ್ಲ, ಮಾತನಾಡಿ. ಮಾತನಾಡುತ್ತಿದ್ದರೆ ಅಭ್ಯಾಸವಾಗುತ್ತದೆ. ಲೆಹರ್‌ಸಿಂಗ್‌ರವರೇ, ಖಮರುಲ್ಲಾ ಇಸ್ಲಾಂ ಮತ್ತು ನಫೀಸಾ ಫಜಲ್ ನಮ್ಮ ಸದನದಲ್ಲಿದ್ದರು. ಅವರಿಗೆ ಕನ್ನಡದಲ್ಲಿ ಮಾತನಾಡುವುದಕ್ಕೆ ತುಂಬಾ ಕಷ್ಟವಾಗುತ್ತಿತ್ತು. ಡಾ॥ ತಂಗಾ, ಮುಖ್ಯಮಂತ್ರಿ ಚಂದ್ರು ಅವರೆಲ್ಲಾ ಪರವಾಗಿಲ್ಲ, ಮಾತನಾಡಿ ಎಂದು ಹೇಳಿ ಇವತ್ತು ಬಹಳ ಸ್ವಚ್ಛವಾಗಿ ಕನ್ನಡವನ್ನು ಮಾತನಾಡುತ್ತಾರೆ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಧುಸೂದನ್‌ರವರು ಹಿಂದಿಯಲ್ಲಿ ಮಾತನಾಡಿ ಎಂದು ಹೇಳಿದರು. ನಮ್ಮಲ್ಲಿ ಬಹಳ ಜನರಿಗೆ ಹಿಂದಿ ಗೊತ್ತಿಲ್ಲ. ರಾಷ್ಟ್ರ ಭಾಷೆ ಎಂದು ಹೇಳುವುದನ್ನು ಒಪ್ಪಿಕೊಳ್ಳೋಣ. ಎರಡನೆಯದು, ಈಗ ರೆಕಾರ್ಡ್ ಆಗುವುದಿಲ್ಲ. ಕನ್ನಡ, ಇಂಗ್ಲಿಷ್ ಮಾತ್ರ ರೆಕಾರ್ಡ್ ಆಗುತ್ತದೆ. ಬಾಕಿ ಯಾವ ಭಾಷೆಯೂ ರೆಕಾರ್ಡ್ ಆಗುವುದಿಲ್ಲ. ದಯವಿಟ್ಟು ಅವರು ಇಂಗ್ಲಿಷ್‌ನಲ್ಲೇ ಮಾತನಾಡಲಿ. ನಮಗೆಲ್ಲರಿಗೂ ಇಂಗ್ಲಿಷ್ ಅರ್ಥವಾಗುತ್ತದೆ.

**ಉಪ ಸಭಾಪತಿಯವರು:–** ನಾನು ಗಮನಿಸಿದ ಹಾಗೆ ನಫೀಸಾ ಫಜಲ್‌ರವರು, ಖಮರುಲ್ಲಾ ಇಸ್ಲಾಂರವರು ಕನ್ನಡದಲ್ಲಿ ಮಾತನಾಡಿದಾಗ ನಾನು ಆಗ ತಾನೆ ಸದನಕ್ಕೆ ಬಂದಿದ್ದೆ. ನಾನು ನಗಾಡುತ್ತಿದ್ದೆ. ಈಗ ಅವರ ಕನ್ನಡ ಮಾತು ಕೇಳಿ ನಾನು ಸ್ಥಂಭಿಭೂತಳಾದೆ. ಈಗ ಅವರು ಸ್ವಚ್ಛ ಕನ್ನಡದಲ್ಲಿ ಮಾತನಾಡುತ್ತಾರೆ.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೇ, ನಮ್ಮ ದೇಶದ ದುರ್ದೈವ ಎಂದು ನಾನು ಹೇಳುತ್ತಿದ್ದೇನೆ. ಈ ದೇಶದ ರಾಷ್ಟ್ರ ಭಾಷೆ ನಾವು ಹಿಂದಿ ಇಟ್ಟುಕೊಂಡಿದ್ದೇವೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 65 ವರ್ಷಗಳಾಯಿತು. ಈಗಲೂ ನಮ್ಮ ಸದನಕ್ಕೆ ಬರುವಂಥವರಿಗೆ ಇಂಗ್ಲಿಷ್‌ನಲ್ಲಿ ಮಾತನಾಡಿ ನಮಗೆ ಅರ್ಥವಾಗುತ್ತದೆ, ರೆಕಾರ್ಡಿಂಗ್ ಮಾಡಿಕೊಳ್ಳುತ್ತೇವೆ, ಹಿಂದಿ ನಾವು ರೆಕಾರ್ಡಿಂಗ್ ಮಾಡಿಕೊಳ್ಳುವುದಿಲ್ಲ ಎನ್ನುವಂಥದ್ದು, ಎಲ್ಲೋ ಒಂದು ಕಡೆ ನಮ್ಮ ರಾಷ್ಟ್ರ ಭಾಷೆಗೆ ನಾವು ಮಾಡುತ್ತಿರುವಂತಹ ಅವಮಾನ ಎಂದು ನನಗನಿಸುತ್ತಿದೆ. ಇದು ಸರಿಯಿಲ್ಲ.

**ಉಪ ಸಭಾಪತಿಯವರು:-** ಮಧುಸೂದನ್‌ರವರೇ, ಆ ಒಂದು ವ್ಯವಸ್ಥೆ ಇಲ್ಲ.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೇ, ಅವರು ಬೇಕಾದರೆ ಹಿಂದಿಯಲ್ಲಿ ಮಾತನಾಡಲಿ, ಆಡಿಯೋ ರೆಕಾರ್ಡ್ ಮಾಡಿಕೊಳ್ಳಿ. ಆಡಿಯೋ ರೆಕಾರ್ಡ್ ಮಾಡಿಕೊಂಡು ನಿಮಗೆ ಬರಲಿಲ್ಲವೆಂದರೆ, ಯಾರಿಗಾದರೂ ಟೇಪ್ ಕೊಟ್ಟು ನೀವು ಅದನ್ನು ಮಾಡಿಸಿಕೊಳ್ಳಿ. ಆದರೆ, ಹಿಂದಿಗೆ ಅವಮಾನ ಮಾಡುವಂಥದ್ದು ಸರಿಯಲ್ಲ. ಹಿಂದಿ ಭಾಷೆಗಿಂತ ಇಂಗ್ಲಿಷ್‌ಗೆ ದೊಡ್ಡ ಸ್ಥಾನ ಕೊಡುವಂಥದ್ದು ನಾನಂತೂ ಒಪ್ಪುವುದಿಲ್ಲ.

**ಉಪ ಸಭಾಪತಿಯವರು:-** ರೆಕಾರ್ಡ್ ಮಾಡುವ ವ್ಯವಸ್ಥೆ ಇಲ್ಲ.

**ಶ್ರೀ ಮತ್ತಿಕಟ್ಟೆ ವೀರಣ್ಣ:-** ಯಾವ ಇಂಗ್ಲಿಷ್ ಬೇಡ, ಯಾವ ಹಿಂದಿಯೂ ಬೇಡ. ಕನ್ನಡದಲ್ಲಿ ಮಾತನಾಡಿ.

**ಉಪ ಸಭಾಪತಿಯವರು:-** ಲೆಹರ್ ಸಿಂಗ್‌ರವರೇ, ನೀವು ನಮ್ಮ ಜೊತೆಯಲೆಲ್ಲಾ ಕನ್ನಡ ಚೆನ್ನಾಗಿ ಮಾತನಾಡುತ್ತೀರಲ್ಲಾ?

**ಶ್ರೀ ಲಹರ್ ಸಿಂಗ್ ಸಿರೋಯಾ:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ನಾವು ಒಳ್ಳೆಯ ಭಾಷಣವನ್ನು ಕೇಳಿದ್ದೇವೆ. ಪಂಡಿತ್ ಮಧುಸೂದನ್‌ರವರು, ರಾಮಚಂದ್ರಗೌಡರವರ ಭಾಷಣವನ್ನು ಕೇಳಿದಾಗ

ಪಂಡಿತ್ ರಾಮಚಂದ್ರ ಆಚಾರ್ಯರವರು ಮಾತನಾಡುತ್ತಿದ್ದಾರೆಂದು ನನಗನಿಸಿತು. ಗಣೇಶ್ ಕಾರ್ಣಿಕ್‌ರವರು ಮತ್ತು ಶಿವಯೋಗಿ ಸ್ವಾಮಿಯವರು initiated this discussion. ಇಚ್ಛಾ ಮರಣ ಮತ್ತು ದಯಾಮರಣದ ಬಗ್ಗೆ ನಾನು ಬಹಳ ಸರಳವಾಗಿ ವಿವರಿಸುತ್ತೇನೆ. I cannot quote either in Sanskrit or anything else. In Jainism there is a provision for 'Ichcha Mruthyu' and even today this legal in all the states. ನಮಗೆ ಬೇಕಾದಷ್ಟು ಸಾಧುಗಳು, ಸಂತರುಗಳು, every year they attain heavenly abode by their wish. ಒಂದು ಹಂತಕ್ಕೆ ಬಂದ ಮೇಲೆ ಅವರು ಯೋಚನೆ ಮಾಡುತ್ತಾರೆ. ನಮ್ಮ ಕೈಕಾಲು ಎಲ್ಲಾ ಬಿದ್ದುಹೋಗಿದೆ, ಬದುಕಿದರೆ ಏನು ಪ್ರಯೋಜನ ಎಂದು ಮರಣ ಹೊಂದಲು ಬಯಸುತ್ತಾರೆ.

At certain age when they accept from their Guru, it is called as Santhara, Sallekhana Marana. After that they stop eating or drink anything. Sir, I tell you, even my mother at the age of 94, she requested only one thing to me in her lifetime that, "Lahar Singh, Don't take me to the hospital at the last moment, whatever service you can do, do it at home only and don't forcibly inject anything to my body when I am not well." It was a great trauma for us but we accepted her last wish. For the last fifteen days, she did not take anything, we have not injected any medicine and she died peacefully. You might have heard about Mahesh Dattani, a great writer, who keep writing in many magazines, and he has now shifted to Mumbai. He regretted his life that he has not accepted his mother's wish, not to take her to hospital. Her departure was delayed by one week or ten days because of the hospital, because of the artificial ventilator and all that for keeping her alive. He regretted and wrote in an article that he did not fulfill his mother's wish. Ichcha Mruthyu and Mercy killing,

they are totally different. Mr. Suresh Kumarji very well elaborated about that. In our country it is very risky. Because, morality is diluted in our spiritual country. Everyday, we are hearing about murders. Even children are killing their own parents for properties. Another issue is suicide; it is fully different with this issue. Now-a-days, we are also seeing young boys and girls committing suicide. I came across a lady who used to sell ground-nut in Taluk Office. She was aged about 70-80 years. I simply asked her why she was forced to do all that. She said that she had one son who was a heavy drunkard. His wife, because of his everyday torture, had left him amd gone away by leaving his two kids. So, she is alive for her grand kids, taking care of them and feeding her own son. Therefore, people live for certain things.

Now-a-days, the youngsters committing suicide. In Jainism 'Athmahathya' is the biggest sin. It is more sin than the murder. Athmahathya and Ichcha Mruthyu are totally different. I think the concept should be clear that 'Ichcha Mruthyu and Mercy Killing" are totally different. Ichcha Mruthyu is not illegal. Ichcha Mruthyu is allowed; nobody can stop this and cannot force them to eat, drink and take any medicines. I don't know, whether Government is willing to make it legal or not. Because, I am not a lawyer. Mr. Nanaiahji will take up and throw light on this, what I feel, and he may come to my rescue also. I am thankful to all.

**ಶ್ರೀಮತಿ ಮೋಟಮ್ಮ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ನೀಡಿರುವ 330 ತೆಗೆದುಕೊಳ್ಳಿ. Clarification

ಮಾಡಲು ಮಂತ್ರಿಗಳಿಲ್ಲ. ಸುಮ್ಮನೆ ನಮ್ಮನ್ನು ಏಕೆ ಕಾಯುಸುತ್ತೀರಾ? ಅನಾವಶ್ಯಕ ನಮ್ಮನ್ನು ಈ ರೀತಿ ಬಳಸಿಕೊಳ್ಳಬಾರದು.

**ಶ್ರೀ ಎಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ, ಅನಿವಾರ್ಯವಾಗಿ ಇಂದು ತಾವು ಆ ಸ್ಥಾನದಲ್ಲಿ 10 ಅಲ್ಲ 12 ಗಂಟೆಯಾದರೂ ಕುಳಿತುಕೊಳ್ಳಲೇ ಬೇಕು. ಆಡಳಿತ ಪಕ್ಷದವರೂ ಸಹ ಒಂದಲ್ಲ ಎರಡು ಗಂಟೆಯಾದರೂ ಕುಳಿತುಕೊಳ್ಳಲೇ ಬೇಕು. ಏಕೆಂದರೆ, ವಿಪ್ ಜಾರಿ ಮಾಡಿರುವುದರಿಂದ ಅವರು ಕುಳಿತುಕೊಳ್ಳಲೇ ಬೇಕು.

**ಶ್ರೀ ಗೋ.ಮಧುಸೂದನ್:-** ವಿಪ್ ಜಾರಿ ಮಾಡಿಲ್ಲ.

**ಶ್ರೀ ಎಂ.ಸಿ.ನಾಣಯ್ಯ:-** ನನಗೆ ಗೊತ್ತಿಲ್ಲ. ಹೇಳಿದೆ ಅಷ್ಟೆ. ನಾವು ನಮ್ಮ ಚಿಂತನೆಯನ್ನು ಸರ್ಕಾರಕ್ಕೆ ನೇರವಾಗಿ ಹೇಳಲೇ ಬೇಕು. 31ನೇ ತಾರೀಖು 12 ಗಂಟೆಯೊಳಗೆ ರಾಜ್ಯಪಾಲರ ಅಂಕಿತವನ್ನು ತೆಗೆದುಕೊಳ್ಳಲು ಅವಕಾಶ ಇದೆ. ದಯವಿಟ್ಟು ಈ ದಿವಸವನ್ನು ಮುಂದೂಡಿಸಿ, ಸೋಮವಾರ ಅಥವಾ ಮಂಗಳವಾರ ಮಾಡಿ ಎಂದು ಕೇಳಿದೆವು. ಇದೇ ದಿನ ಮಾಡಬೇಕೆಂದು ಹಠತೊಟ್ಟಿರುವ ನಿಮ್ಮ ಸರ್ಕಾರ. ಇಲ್ಲ ಯಾವುದೂ ಚರ್ಚೆಯಾಗುವುದಿಲ್ಲ. ಬರಿ Appropriation Bill ಗೋಸ್ಕರ ನಾವಿಲ್ಲಿ ಕೂತಿರುವುದು. ನನಗೆ ಗೊತ್ತಿಲ್ಲ. ನಾವು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಒಂದು ಸಮಯದವರೆವಿಗೆ ಕುಳಿತುಕೊಳ್ಳಬಹುದು. ಅದಕ್ಕೂ ಮೀರಿ ನೀವು ಬಲತ್ಕಾರವಾಗಿ ನಮ್ಮನ್ನು ಕುಳ್ಳಿರಿಸಿಕೊಳ್ಳುವ ಅಧಿಕಾರ ನಿಮಗಿಲ್ಲ. ಆದರೆ, ನೀವು ಬಲತ್ಕಾರವಾಗಿ ಕುಳಿತುಕೊಳ್ಳಲೇ ಬೇಕು. ನಾವು ಯಾವುದಕ್ಕೂ ವಿರೋಧ ವ್ಯಕ್ತಮಾಡುವುದಿಲ್ಲ ಎಂಬ ಚಿಂತನೆಯನ್ನೂ ಹೇಳಿಬಿಡುತ್ತೇವೆ. ಒಂದು ಸಮಯ ನಿಗದಿಮಾಡಿ ಅದರೊಳಗಡೆ ಬಂದರೆ ಬಹುಶಃ ನಮ್ಮ ಚಿಂತನೆಯನ್ನು ಹೇಳಿ ನಾವು ಮತ್ತು ನೀವು ಎಲ್ಲರೂ ಹೋಗೋಣ. ಬಾರದೇ ಹೋದರೆ ಅನಿವಾರ್ಯವಾಗಿ ಕುಳಿತುಕೊಳ್ಳುವ ಪರಿಸ್ಥಿತಿ ಬಂದರೆ ನಾವು ಕುಳಿತುಕೊಳ್ಳುವುದಕ್ಕೆ ತಯಾರಿಲ್ಲ. ಇವತ್ತು 31ನೇ ತಾರೀಖಿನ ದಿವಸ ಅಲ್ಲ. 31ನೇ ತಾರೀಖಿನ ದಿವಸ ಆಗಿದ್ದರೆ ನಾವು ಖಂಡಿತವಾಗಿಯೂ ಒಪ್ಪಿಕೊಳ್ಳುತ್ತಿದ್ದೆವು ಇಂದು 27ನೇ ತಾರೀಖು.

ಇನ್ನು ನಮಗೆ 4 ದಿವಸಗಳ ಸಮಯವಿದೆ. ಅದರ ಮೇಲೆ ನಾನು ಒಂದು ಸಲಹೆಯನ್ನು ಕೊಟ್ಟಿದ್ದೇನೆ. Vote on Account ತೆಗೆದುಕೊಳ್ಳುವುದಕ್ಕೆ 6 ತಿಂಗಳ ಸಮಯವಿದೆ. 4 ತಿಂಗಳು ನಾವು ತೆಗೆದುಕೊಂಡಿದ್ದೇವೆ. ದಯವಿಟ್ಟು ಈ ವಿಚಾರದಲ್ಲಿ ಇನ್ನು 15 ದಿವಸಗಳ ಮಟ್ಟಿಗೆ ವಿಸ್ತರಿಸಿ, ಅದಕ್ಕೆ ನಮ್ಮ ಒಪ್ಪಿಗೆ ಅಥವಾ 1 ತಿಂಗಳು ತೆಗೆದುಕೊಳ್ಳಿ, ನಾವು ಒಪ್ಪಿಗೆ ಕೊಡುತ್ತೇವೆ, ಇನ್ನು 10 ದಿವಸಗಳ ಚರ್ಚೆ ಮಾಡಿ, ಚೆನ್ನಾಗಿ ಇರುವಂತಹ ಬಜೆಟ್ ಬಗ್ಗೆ ಮಾತನಾಡಿ ಹೋಗೋಣವೆಂದು ನಾವು ಮಾನ್ಯ ಮುಖ್ಯಮಂತ್ರಿಯವರಿಗೆ ಕಾರ್ಯ ಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಹೇಳಿದೆವು. ಯಾವ ಬಜೆಟ್‌ನಲ್ಲೂ ನಾವು ಚರ್ಚೆ ಮಾಡುವುದಿಲ್ಲ, ಕೇವಲ Appropriation Bill ತರುತ್ತೇವೆ, Vote ಹಾಕುತ್ತೇವೆ. ಮುಖ್ಯಮಂತ್ರಿಗಳು ಹೇಳಿದ್ದಕ್ಕೆಲ್ಲಾ ತಿಪ್ಪೆ ಸಾರಿಸಿ ನಾವು ಹೋಗಬೇಕೆನ್ನುವ ಈ ಒಂದು ಹುಚ್ಚು ಆಟ ಏಕೆ? ದಯವಿಟ್ಟು ಹೇಳಿ. ಸಮಯವಿದ್ದಾಗ ಈ ಪರಿಸ್ಥಿತಿ ಏತಕ್ಕೆ? ನಮ್ಮನ್ನೂ ಕೂಡ ಬಲತ್ಕಾರವಾಗಿ ಕುಳಿತುಕೊಳ್ಳಲು ಹೇಳಲಿಕ್ಕೆ ಮನಸ್ಸು ಬರುತ್ತದೆಯೇ? ಇದು ಒಂದು ರೀತಿಯ ಬಲತ್ಕಾರವಲ್ಲವೇ? ಇದು ಏನಾಗುತ್ತದೆ ಎಂದರೆ . . .

**ಶ್ರೀ ಗೋ.ಮಧುಸೂದನ್:–** ಶ್ರೀಯುತ ನಾಣಯ್ಯನವರೆ, ಈ ವಿಚಾರವಾಗಿ ತಾವು ಸಹ ಆತ್ಮಾವಲೋಕನ ಮಾಡಿಕೊಳ್ಳಿ. ನೀವು ಮಾಡಿದ್ದೀರಿ.

**ಶ್ರೀ ಎಂ.ಸಿ.ನಾಣಯ್ಯ:–** ನಾವು ಈ ಪರಿಸ್ಥಿತಿಯಲ್ಲಿ ಮಾಡಲಿಲ್ಲ. ಒಂದು ದಿನಕ್ಕೆ ಮುಂಚಿತವಾಗಿ ಬಿಲ್ ಅನ್ನು ತಂದು ಮಾಡುತ್ತಿದ್ದೆವು. ಈ ರೀತಿ ಮಾಡಲಿಲ್ಲ. ಇದು ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಇದಕ್ಕಿಂತ ಬೇರೆ ಉದಾಹರಣೆ ಯಾವುದೂ ಇರಲಿಕ್ಕೆ ಸಾಧ್ಯವಿಲ್ಲ. ನಾವು ಇದನ್ನು ಸ್ವೀಕಾರ ಮಾಡಲಿಕ್ಕೆ ಸಾಧ್ಯವಿಲ್ಲ. ನೀವು ಆ ಪಕ್ಷದಲ್ಲಿ ಕುಳಿತುಕೊಂಡು ಇದನ್ನು ಸ್ವೀಕಾರ ಮಾಡಲೇ ಬೇಕು. ದಯವಿಟ್ಟು, ಇದರ ಬಗ್ಗೆ ಯೋಚನೆ ಮಾಡಿ. ನಾವು ಮತ್ತು ನೀವು ಒಟ್ಟಾರೆ ಹೋಗೋಣ.

**ಸಭಾಪತಿಯವರು:–** ಮಾನ್ಯ ನಾಣಯ್ಯನವರೆ, ನೀವು ಹೇಳಿದಷ್ಟು ಸಮಯ ಏನೂ ಆಗುವುದಿಲ್ಲ. ಇನ್ನೇನು ಆಗಿಯೇ ಹೋಗುತ್ತದೆ.

**SRI. M.C.NANAIAH:-** Appropriation Bill and consequential money bills ಅಲ್ಲಿ ಮಾಡಿ ಅಲ್ಲಿಂದ ಇಲ್ಲಿಗೆ ಮೆಸೇಜ್ ಬಂದು ಪುನಃ ಇಲ್ಲಿಗೆ ತಂದು ನಾವು ಮಾಡಬೇಕಾದರೆ ಎಷ್ಟು ಹೊತ್ತು ಇಲ್ಲಿ ಕೂರಬೇಕು ಹೇಳಿ. ಇದು ಆತ್ಮಹತ್ಯೆಗಿಂತ ಹೀನಾಯವಾದುದಾಗಿದೆ.

**ಡಾ॥ ದೊಡ್ಡರಂಗೇಗೌಡ:–** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು:–** ಡಾ॥ ದೊಡ್ಡರಂಗೇಗೌಡರವರೆ, ಆಮೇಲೆ ಮಾತನಾಡಿ, ಕುಳಿತುಕೊಳ್ಳಿ. ನಿಯಮ 330 ರಡಿಯಲ್ಲಿ ಶ್ರೀಮತಿ ಮೋಟಮ್ಮ ಮತ್ತು ಶ್ರೀ ಮತ್ತಿಕಟ್ಟಿ ವೀರಣ್ಣನವರು ಮಾತನಾಡಿ.

**(ಈ ಹಂತದಲ್ಲಿ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ನಾನು 330 ವಿಚಾರವನ್ನು ಓದುತ್ತಿದ್ದೇನೆ. ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕಿನ ಚಿಕ್ಕೆರೆ ಗ್ರಾಮದ ದಲಿತರ ಹಾಲು ಬಹಿಷ್ಕಾರ, ಅರಣ್ಯ ಸಚಿವ ಶ್ರೀ ಯೋಗೇಶ್ವರ್‌ರವರ ಸ್ವಗ್ರಾಮ. . .

**ಡಾ॥ ದೊಡ್ಡರಂಗೇಗೌಡ:–** ಶ್ರೀಮತಿ ಮೋಟಮ್ಮನವರೆ, ದಯಮಾಡಿ ಎರಡು ನಿಮಿಷ ಕುಳಿತುಕೊಳ್ಳಿ. ಈ ವಿಚಾರವನ್ನು ಅವರು ಇನ್ನೂ ಮುಕ್ತಾಯ ಮಾಡಿಲ್ಲ. ಸ್ವ–ಇಚ್ಛಾ ಮರಣದ ವಿಷಯದ ಬಗ್ಗೆ ಎರಡು ನಿಮಿಷಗಳ ಕಾಲಾವಕಾಶವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀಮತಿ ಮೋಟಮ್ಮ:–** ಆಗಬಹುದು.

**ಡಾ॥ ದೊಡ್ಡರಂಗೇಗೌಡ:–** ನಾನು ತೆಗೆದುಕೊಳ್ಳುವುದೇ ಎರಡು ನಿಮಿಷ. ಎರಡು ನಿಮಿಷಕ್ಕಿಂತ ಹೆಚ್ಚು ತೆಗೆದುಕೊಳ್ಳುವುದಿಲ್ಲ. ಸನ್ಮಾನ್ಯ ಸಭಾಪತಿಯವರೆ, 6 ದಶಕಗಳಿಂದ ನಾನು ಸಾಹಿತ್ಯವನ್ನು ಅಧ್ಯಯನ ಮಾಡುತ್ತಾ ಬಂದಿದ್ದೇನೆ. ಸ್ವ–ಇಚ್ಛಾ ಮರಣದ ಬಗ್ಗೆ ನನ್ನ ವೈಯಕ್ತಿಕವಾದಂತಹ ಅಭಿಪ್ರಾಯ ಹೀಗಿದೆ.

**ಇಚ್ಛಾ ಮರಣ ಸರಿಯೇ?**

ಬೇರೆಯವರು ಸಾಯುವುದನ್ನು-
ನಿರ್ಧರಿಸೋಕೆ ನಾವು ಯಾರು?
ಬದುಕಿಸಲು ವ್ಯಕ್ತಿಗೆ ..
ನಾವು ನೆರವಾಗಬೇಕೇ ಹೊರತು,
ಸಾಯುವುದನ್ನು ಬೆಂಬಲಿಸೋಕೆ
ನಾವೇನು ಸೃಷ್ಟಿಯ ನಿರ್ಧಾರಕರೇ?

ಕಾನೂನಿಗಿಂತ-ಬದುಕು ದೊಡ್ಡದ್ದು!
ಬದುಕುವ ಹಂಬಲದಕಡೆಗೆ
ಮನುಜ ಅಭಿಮುಖವಾಗಬೇಕೇ ಹೊರತು
ಸಾಯಿಸುವುದಕ್ಕೆ ಪರವಾನಗಿ ಕೊಡುವುದಲ್ಲ!
ಬದುಕು ಎಂಬುದಕ್ಕಿದೆ ಆಶಾಕಿರಣ!
ಮರಣ ಯಾವತ್ತೂ ನೈಸರ್ಗಿಕ ನಿಯತಿ-
ಅದು ಪ್ರಕೃತಿ ಧರ್ಮ;
ಅದನ್ಯಾಕೆ ನಾವು ಮಾಡಬೇಕು ವಿಕೃತಿ?

ಸ್ಥಿತಿ ಎಂತೇ ಇರಲಿ
ಏನೇ ಗರಿಷ್ಠ ಸ್ಥಿತಿ ಇರಲಿ
ಬದುಕುವುದಕ್ಕೇ ಇರಬೇಕು ಅವಕಾಶ
ಜೀವನ ಪ್ರೀತಿಯಲ್ಲಿದೆ
ಸೃಷ್ಟಿಯ ಸಂದೇಶ!

**ದೊಡ್ಡರಂಗೇಗೌಡ**

**ಅವಕಾಶ ಕೊಟ್ಟಿದ್ದಕ್ಕಾಗಿ ಸಭಾಪತಿಯವರಿಗೆ ಧನ್ಯವಾದಗಳು.**

**ನಿಯಮ 330 ರ ಮೇರೆಗೆ ಚರ್ಚೆ ಪ್ರಾರಂಭ.**

**ಆ) ರಾಮನಗರ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕಿನ ಚೆಕ್ಕೆರೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘವು ದಲಿತರಿಗೆ ಸದಸ್ಯತ್ವ ನೀಡಲು ನಿರಾಕರಿಸಿರುವ ಬಗ್ಗೆ–**

– – – – –

**ಶ್ರೀಮತಿ ಮೋಟಮ್ಮ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಚೆಕ್ಕೆರೆ ದಲಿತರ ಹಾಲು ಬಹಿಷ್ಕಾರ, ಮಾನ್ಯ ಅರಣ್ಯ ಸಚಿವರಾದ ಮಾನ್ಯ ಯೋಗೇಶ್ವರ ಅವರ ಸ್ವಗ್ರಾಮದಲ್ಲಿ ಅಸ್ಪೃಶ್ಯತೆ ಜೀವಂತ ಎಂಬ ಈ ಶೀರ್ಷಿಕೆಯನ್ನು ಓದಿ ಬಹಳ ನೋವಾಯಿತು. 21ನೇ ಶತಮಾನದಿಂದಲೂ ಇಂತಹ ಆತಂಕ, ಆಘಾತಕಾರಿ ಘಟನೆಗಳಿಗೆ ನಮ್ಮ ಜನ ಎಡೆ ಮಾಡಿಕೊಡುತ್ತಾರೆಂದರೆ ನಾವೆಲ್ಲರೂ ಇಂದು ತಲೆ ತಗ್ಗಿಸಬೇಕಾಗುತ್ತದೆ. ಹಾಲಿನ ಸಹಕಾರ ಸಂಘದವರು ದಲಿತರಿಗೆ ಸದಸ್ಯತ್ವ ನೀಡಲು ನಿರಾಕರಣೆ ಮಾಡಿ ವಂಚನೆ ಮಾಡಿ ಅಸ್ಪೃಶ್ಯತೆ ಆಚರಣೆ ಜೀವಂತ ಇಟ್ಟಿರುವುದು ಅಮಾನವೀಯವಾದ ಘಟನೆ. ಕೆನರಾ ಬ್ಯಾಂಕ್ ಈಗಾಗಲೇ ಅವರಿಗೆ ಸಾಲವನ್ನು ದೊರಕಿಸಿ ಕೊಟ್ಟಿದೆ. ಕೂಡಲೇ ದಲಿತರಿಗೆ ಸದಸ್ಯತ್ವ ನೀಡಿ ಸಾಲ ಪಡೆಯಲು ಸಹಾಯ ಸಹಕಾರ ಮಾಡುವುದು. ಸರ್ಕಾರ ಈ ಬಗ್ಗೆ ಆದೇಶವನ್ನು ಹೊರಡಿಸಬೇಕಾಗಿ ವಿನಂತಿ. ಈಗ ಮಾಡಿರುವ ಈ ಕೃತ್ಯವೇನು ಇದೆ ಇದಕ್ಕಾಗಿ ಚನ್ನಪಟ್ಟಣ ತಾಲ್ಲೂಕಿನ ಚಕ್ಕೆರೆ ಹಾಲು ಉತ್ಪಾದಕರ ಸಂಘದ ರಿಜಿಸ್ಟ್ರೇಷನ್ ಅನ್ನು ಕೂಡಲೇ ರದ್ದುಪಡಿಸಬೇಕೆಂದು ಮತ್ತು ಈ ಅಸ್ಪೃಶ್ಯತೆಯ ಕಾಯಿದೆಯ ಮೇಲೆ ಕಾನೂನು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಮತ್ತಿಕಟ್ಟೆ ವೀರಣ್ಣ:–** ಮಾನ್ಯ ಸಭಾಪತಿಯವರೆ ನಾನೂ ಕೂಡ ಈ ನೋಟೀಸಿಗೆ ಸಹಿ ಮಾಡಿದ್ದೇನೆ.

**ಸಭಾಪತಿಯವರು:–** ಇಬ್ಬರ ಹೆಸರೂ ಇಲ್ಲಿ ಇದೆ. ನಾನು ಅದನ್ನು ನೋಡಲಿಲ್ಲ. ತಾವೂ ಕೂಡ ಸಹಿ ಹಾಕಿದ್ದೀರಿ. ತಾವು ಓದಿ ಬಿಡಿ.

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೆ, ಚಕ್ಕೆರೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಆ ಸಂಘದವರು ದಲಿತರಿಗೆ ಬಹಿಷ್ಕಾರ ಹಾಕಿದ್ದನ್ನು ಓದಿ ಬಹಳ ನೋವು ಎಂದು ಅನ್ನಿಸಿತು. ಆ ಗ್ರಾಮದ ಹಾಲು ಉತ್ಪಾದಕರ ಸಂಘದಲ್ಲಿ 31 ಜನ ಪರಿಶಿಷ್ಟರನ್ನು, ಅಸ್ಪೃಶ್ಯರನ್ನು ಸದಸ್ಯರನ್ನಾಗಿ ಮಾಡಿಕೊಂಡಿಲ್ಲ. ಕೇಂದ್ರದ ನಬಾರ್ಡಿನಿಂದ ಬಂದಂಥಹ ಹಣವನ್ನು ಒಬ್ಬೊಬ್ಬರಿಗೆ 1,25,000 ರೂಪಾಯಿಗಳ ಸಾಲವನ್ನು ಕೆನರಾ ಬ್ಯಾಂಕ್ ಈಗಾಗಲೇ ಅವರಿಗೆ ದೊರಕಿಸಿ ಕೊಟ್ಟಿದೆ. ಅದರಲ್ಲಿ ಸಿ.ಡಿ.ಓ. ಕೂಡ ಇದೆ. ಅದರಲ್ಲಿ ಒಬ್ಬ ಫಲಾನುಭವುಗಳಿಗೆ ಎರಡು ಹಸುಗಳನ್ನು ಹಾಗೂ ಒಂದು ದನದ ಕೊಟ್ಟಿಗೆಯನ್ನು ಕಟ್ಟುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಮಾಡಿದ್ದಾರೆ. ಈ ಸಾಲದ ಮರುಪಾವತಿಯನ್ನು ಹೇಗೆ ಮಾಡುತ್ತಾರೆ ಎಂಬುದೂ ಕೂಡ ಇಲ್ಲಿ ಮುಖ್ಯವಾಗುತ್ತದೆ. ಹೇಗೆ ಸಾಲವನ್ನು ವಾಪಸ್ ಕಟ್ಟುತ್ತಾರೆ ಎಂಬ ಉದ್ದೇಶಕ್ಕೋಸ್ಕರ ಅದನ್ನು ಹಿಡಿದುಕೊಂಡು ನಿಂತಿದ್ದಾರೆ. ಅವರನ್ನು ಈ ಹಾಲು ಉತ್ಪಾದಕರ ಸಹಕಾರ ಸಂಘದ ಸದಸ್ಯರನ್ನಾಗಿ ತೆಗೆದುಕೊಂಡಿದ್ದೇ ಆದರೆ ಅವರಿಗೆ ಬಹಳ ಸಹಾಯವಾಗುತ್ತದೆ. ಇದು ಅತ್ಯಂತ ಅಮಾನವೀಯವಾದಂತಹ ಕೃತ್ಯವಾಗಿದೆ. ಅದೂ ಈ ಒಂದು ಕೃತ್ಯ ಈ ಹಂತದಲ್ಲಿ ನಡೆಯುತ್ತಿದೆ ಎಂದರೆ ನಮಗೆ ಬಹಳ ದುಃಖ ಎಂದು ಅನ್ನಿಸುತ್ತದೆ. ಈ ವಿಚಾರವಾಗಿ ಹಿಂದೆ ಸಚಿವರಾಗಿದ್ದಂತಹ ದಿವಂಗತ ಕೆ.ಹೆಚ್. ರಂಗನಾಥ್ ಅವರು ಸಹಕಾರಿ ಸಚಿವರಾಗಿದ್ದಾಗ Universal Membership ಎಂದು ಜಾರಿಗೆ ತಂದರು. ಆ ಊರಿನ, ಗ್ರಾಮದ ಅಲ್ಲಿನ ಎಲ್ಲಾ ಜಾತಿ, ಜನಾಂಗದ ಜನರು ಈ ಸಹಕಾರ ಸಂಘಗಳಲ್ಲಿ ಸದಸ್ಯರಾಗಿ ಇರಬೇಕು ಎಂಬ ಉದ್ದೇಶದಿಂದ ಇದನ್ನು ಜಾರಿಗೆ ತಂದರು. ಈ ಸಹಕಾರಿ ಸಂಘ ಕೆಲವೇ ಜನರಿಗೆ ಮೀಸಲಾಗಿ ಇರಬಾರದು. ಅದರ ಅನುಕೂಲತೆ ಎಲ್ಲಾ ವರ್ಗದ ಜನರಿಗೆ ತಲುಪಬೇಕೆಂಬ ಒಂದು ಸದಿಚ್ಛೆಯಿಂದ ಇದನ್ನು ಜಾರಿಗೆ ತಂದಿದ್ದರು. ಅದರ ನಂತರ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಹಕಾರಿ ಸಚಿವರಾದಾಗ ಕಡ್ಡಾಯವಾಗಿ ಎಲ್ಲಾ ಪರಿಶಿಷ್ಟ ಜಾತಿ ಮತ್ತು ವರ್ಗದವರು ಈ ಸಹಕಾರ ಸಂಘದ ಸದಸ್ಯರಾಗಬೇಕು ಎಂದು ಮಾಡಿದರು. ಮತ್ತು ಅವರ

ಸದಸ್ಯತ್ವದ ಹಣವನ್ನು ಸರ್ಕಾರವೇ ಕೊಡುವುದಕ್ಕೆ ಒಂದು ಆದೇಶವನ್ನು ಮಾಡಿ ಅದನ್ನು ಕಾರ್ಯ ರೂಪಕ್ಕೆ ತಂದರು. ಇಷ್ಟೆಲ್ಲಾ ಬದಲಾವಣೆಗಳಾಗಿ ಹೊಸ ಮನ್ವಂತರ ಪ್ರಾರಂಭ ಆಗಿದೆ. ಇನ್ನೂ ಇಂತಹ ಕೆಟ್ಟ ಪರಂಪರೆ ನಡೆದಿರುವುದನ್ನು ನೋಡಿದರೆ ನಮಗೆ ಬಹಳ ದುಃಖವೆನಿಸುತ್ತದೆ. ಇದರ ಬಗ್ಗೆ ಸರ್ಕಾರ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಈ 31 ಜನರನ್ನು ಆ ಸಂಘದ ಸದಸ್ಯರನ್ನಾಗಿ ಮಾಡಿ ಅಲ್ಲಿ ಅವರಿಗೆ ಎಲ್ಲಾ ಅನುಕೂಲಗಳೂ ದೊರೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಇಲ್ಲದೇ ಹೋದಲ್ಲಿ ಆ ಹಾಲು ಉತ್ಪಾದಕರ ಸಹಕಾರ ಸಂಘವನ್ನು supersede ಮಾಡಿ ವಜಾಗೊಳಿಸಿ, ಹೊಸದಾಗಿ ಅವರದ್ದೇ ಆದ ಮತ್ತೊಂದು ಸಂಘವನ್ನು ಕಟ್ಟಿಕೊಂಡು ಅವರು ನೇರವಾಗಿ ಕೆ.ಎಂ.ಎಫ್ ಅವರ ಜೊತೆಯಲ್ಲಿ ವ್ಯವಹರಿಸತಕ್ಕಂಥ ದಿಸೆಯಲ್ಲಿ ಕಾರ್ಯ ನಿರ್ವಹಿಸಬೇಕೆಂದು ತಮ್ಮ ಮೂಲಕ ಸರ್ಕಾರದ ಮೇಲೆ ಒತ್ತಡವನ್ನು ತರುತ್ತೇನೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೆ ಹಿರಿಯ ಸದಸ್ಯರಾದ ಮಾನ್ಯ ವೀರಣ್ಣ ಮತ್ತಿಕಟ್ಟಿ ಅವರು ಹಾಗೂ ಮಾನ್ಯ ಸದಸ್ಯರಾದ ಶ್ರೀಮತಿ ಮೋಟಮ್ಮನವರು ನಿಯಮ 330ರ ಅಡಿಯಲ್ಲಿ ಪ್ರಸ್ತಾಪ ಮಾಡಿರುವ ವಿಚಾರದ ಬಗ್ಗೆ ಸರ್ಕಾರದ ಉತ್ತರ ಹೀಗಿದೆ.

ಚಕ್ಕೆರೆ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ ಈ ಸಹಕಾರ ಸಂಘದಲ್ಲಿ ಪರಿಶಿಷ್ಟ ಜಾತಿ ಮಹಿಳೆಯರಿಗೆ ಸದಸ್ಯತ್ವ ನೀಡದೇ ಅನ್ಯಾಯ ಮಾಡುತ್ತಿರುವ ಬಗ್ಗೆ ಬಂದಿರುವ ದೂರು ಅರ್ಜಿಗಳನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು ಮತ್ತು ಸಹಕಾರ ಸಂಘಗಳ ಉಪ ನಿಬಂಧಕರುಗಳಿಗೆ ಕಳುಹಿಸಿ ದೂರು ಅರ್ಜಿಯಲ್ಲಿನ ಅಂಶಗಳ ಬಗ್ಗೆ ಅರ್ಜಿದಾರರ ಸಮಕ್ಷಮ ವಿಚಾರಣೆ ನಡೆಸಿ ವಸ್ತು ನಿಷ್ಠ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾದ ಪ್ರಕಾರ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ರಾಮನಗರ ಉಪವಿಭಾಗ, ರಾಮನಗರ ಮತ್ತು ಸಹಕಾರ ಸಂಘಗಳ ಉಪನಿಬಂಧಕರು, ರಾಮನಗರ ಜಿಲ್ಲೆ,

ರಾಮನಗರ ಇವರು ಸದರಿ ಸಂಘಕ್ಕೆ ಭೇಟಿ ನೀಡಿ ಕೆಳಕಂಡಂತೆ ವರದಿಯನ್ನು ಸಲ್ಲಿಸಿರುತ್ತಾರೆ.

ಅಧ್ಯಕ್ಷರು, ಆಡಳಿತ ಮಂಡಳಿಯ ಸದಸ್ಯರು ಹಾಗೂ ದೂರರ್ಜಿದಾರರ ಸಭೆ ನಡೆಸಲಾಗಿ ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯವರು ಸಂಘದ ಆಡಳಿತ ಮಂಡಳಿ ಸಭೆಯನ್ನು ಕರೆದು ಸದಸ್ಯರನ್ನು ನೊಂದಣಿ ಮಾಡಿಕೊಳ್ಳುವುದಾಗಿ ಭರವಸೆ ನೀಡಿದ್ದರು. ಆದರೆ, ಸದರಿ ಸಂಘದವರು ದಿನಾಂಕ: 03.07.2012ರಂದು ನಡೆಸಿದ ಆಡಳಿತ ಮಂಡಳಿ ಸಭೆಯ ನಡವಳಿಕೆಯನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ರಾಮನಗರ ಉಪವಿಭಾಗ, ರಾಮನಗರ ರವರಿಗೆ ಕಳುಹಿಸಿರುತ್ತಾರೆ. ಸದರಿ ನಡವಳಿಯಲ್ಲಿ ಅರ್ಜಿದಾರರಿಗೆ ಸದಸ್ಯತ್ವ ನೀಡುವ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಂಡಿರುವುದಿಲ್ಲ. ಈ ಹಿನ್ನೆಲ್ಲೆಯಲ್ಲಿ, ಸಹಾಯಕ ನಿಬಂಧಕರು ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗೆ ದಿನಾಂಕ: 10.07.2012ರಂದು ನೋಟೀಸ್ ನೀಡಿ 15 ದಿನದೊಳಗೆ ದೂರು ಅರ್ಜಿದಾರರಿಗೆ ಸಂಘದಲ್ಲಿ ಸದಸ್ಯತ್ವ ನೀಡಿ ವರದಿ ನೀಡುವಂತೆ ಸೂಚಿಸಿರುತ್ತಾರೆ. ನೋಟೀಸಿನಲ್ಲಿ ನೀಡಿದ ಕಾಲಾವಕಾಶ ದಿನಾಂಕ: 25.07.2012ಕ್ಕೆ ಮುಗಿದಿರುತ್ತದೆ. ಸಂಘದ ಆಡಳಿತ ಮಂಡಳಿಯವರು ಅರ್ಜಿದಾರರಿಗೆ ಸಂಘದ ಸದಸ್ಯತ್ವ ನೀಡದೇ ಇದ್ದಲ್ಲಿ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕಾರ ಆಡಳಿತ ಮಂಡಳಿಯ ಮೇಲೆ ಸೂಕ್ತ ಕ್ರಮವಿಡಲಾಗುವುದು.

ಈ ವಿಚಾರ ನನ್ನ ಗಮನಕ್ಕೆ ಬಂದ ಕೂಡಲೇ ನನಗೇ ಅದನ್ನು ತಡೆಯಲಾರದೆ ಶಾಕ್ ಆಯಿತು. ನಾವು ಸಹಕಾರ ಸಂಘವನ್ನು ಸ್ಥಾಪನೆ ಮಾಡತಕ್ಕಂಥಾದ್ದು ಸಹಕಾರ ಸಂಘದ ದೂರದೃಷ್ಟಿ ಇರತಕ್ಕಂಥಾದ್ದು ಜನರಿಗೆ ಸಹಾಯವಾಗಬೇಕೆಂಬ ಉದ್ದೇಶ ಇದೆ. ಬಂಡವಾಳಶಾಹಿಗಳಿಗೆ ಪರ್ಯಾಯವಾಗಿ ಸಾಮಾನ್ಯ ಜನರು ಅವರದ್ದೇ ಆದಂತಹ ಸಂಸ್ಥೆಗಳನ್ನು ಸ್ಥಾಪಿಸಿ ಅವರ ಆರ್ಥಿಕ ಸಾಮಾಜಿಕ ಭದ್ರತೆಯನ್ನು ಕಾಪಾಡುವುದಕ್ಕೋಸ್ಕರ ಈ ಸಹಕಾರ ಸಂಘ ಸ್ಥಾಪನೆ ಆಗಿರತಕ್ಕಂಥಾದ್ದಾಗಿದೆ. ಈ ಸಹಕಾರಿ ಸಂಘಗಳ

ತತ್ವದ ಅಡಿಯಲ್ಲಿ 2 ಕೋಟಿ 64 ಲಕ್ಷ ಸದಸ್ಯರು ಇದ್ದಾರೆ. ಇದು ಸಾಮಾನ್ಯರ ಹಿತವನ್ನು ಕಾಯತಕ್ಕಂಥ ಸಂಸ್ಥೆಯಾಗಿದೆ. ತಾವು ಏನು ಹೇಳಿದ್ದೀರಿ ಅದರಂತೆ ಅವರಿಗೆ ಸದಸ್ಯತ್ವವನ್ನು ಕೊಡಬೇಕೆಂದು ಕಾಯಿದೆಯಲ್ಲಿ ಸ್ಪಷ್ಟವಾದಂಥಹ ನಿಯಮ ಇದೆ. ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಸದಸ್ಯತ್ವವನ್ನು ಕೊಡದೇ ತೊಂದರೆಯನ್ನು ಕೊಡತಕ್ಕಂಥಾದ್ದನ್ನು ನಾನು ತೀವ್ರವಾಗಿ ಗಮನಿಸಿದ್ದೇನೆ. ಮತ್ತು ಅವರಿಗೆ ಹೈನುಗಾರಿಕೆಗೋಸ್ಕರವಾಗಿ ಸಾಲ ಸಹ ಮಂಜೂರಾಗಿದೆ ಅವರು ಅದನ್ನೂ ಕೂಡ ಹೇಳಿದ್ದಾರೆ. ಇವತ್ತಿನ ದಿವಸ ತೊಂದರೆಯಾಗಿರತಕ್ಕಂಥಾದ್ದು ನಿಜ. ಈಗ ಅವರಿಗೆ ನೋಟೀಸ್ ಅನ್ನು ಕೊಟ್ಟಿದ್ದೇವೆ. 25ನೇ ತಾರೀಖಿಗೆ ಅವಧಿ ಮುಗಿದಿದೆ. ಕಾಯಿದೆ ಪ್ರಕಾರ ಆಡಳಿತ ಮಂಡಳಿಯ ಮೇಲೆ ಸೂಕ್ತ ಕ್ರಮಕ್ಕೆ ಸರ್ಕಾರ ಬದ್ಧವಾಗಿದೆ. ಅವರಿಗೆ ಸದಸ್ಯತ್ವವನ್ನು ಕೊಡಿಸುವುದಕ್ಕೆ ಸರ್ವ ಪ್ರಯತ್ನವನ್ನು ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ನೀವು ಅವರಿಗೆ ನೀಡಿದಂತಹ ಅವಧಿ ಮುಗಿದಿದೆ ಇವತ್ತು 27ನೇ ತಾರೀಖು. ಈಗಲಾದರೂ ಅವರು ಏನಾದರೂ ಈ ಜನರನ್ನು ನೊಂದಣಿ ಮಾಡಿಕೊಂಡಿದ್ದಾರೆಯೋ ಇಲ್ಲವೋ?

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಇವತ್ತಿನವರೆಗೂ ಸದಸ್ಯತ್ವ ನೊಂದಣಿಯಾಗಿಲ್ಲ. ಇದು ಬೆಳಿಗ್ಗೆ ನನ್ನ ಗಮನಕ್ಕೆ ಬಂದಿದೆ.

ಮಾನ್ಯ ಸಭಾಪತಿಯವರೆ, ಇವೊತ್ತು ಬೆಳಿಗ್ಗೆ ಈ notice ಬಂದ ಮೇಲೆ ನನ್ನ ಗಮನಕ್ಕೆ ಬಂತು. ನಾನು ತಕ್ಷಣ ಸಭೆಯನ್ನು ಮಾಡಿದ್ದೇನೆ. ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಆ ಕ್ರಮ ತೆಗೆದುಕೊಳ್ಳತಕ್ಕಂಥ ವಿಚಾರದಲ್ಲಿ ನಿವೇನಾದರು ಪ್ರಶ್ನೆ ಕೇಳುವುದಾದರೆ ಕೇಳಿ. ನಂತರ ಏನು ಮಾಡಬೇಕೆಂದು ನಾನು ಹೇಳುತ್ತೇನೆ. ಇಲ್ಲವೆಂದರೆ ಈಗಲೇ ಹೇಳು ಅಂದರೆ ಹೇಳುತ್ತೇನೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ನನ್ನ ಕಳಕಳಿ ಅಥವಾ ನೋವು ಏನೆಂದರೆ ನಾವು 21ನೇ ಶತಮಾನದಲ್ಲಿದ್ದೇವೆ. ಇವೊತ್ತು ಸಂವಿಧಾನದ ಬಗ್ಗೆ ಮಾತನಾಡುತ್ತೇವೆ. ಸಂವಿಧಾನ ಬರೆದವರ ಬಗ್ಗೆ

ಹೆಮ್ಮೆಯಿಂದ ಹೇಳುತ್ತೇವೆ. ಅವರು ಬರೀ ದಲಿತರಿಗೆ ಸಂವಿಧಾನ ಬರೆಯಲಿಲ್ಲ. ಇಡೀ ದೇಶದ ಆಡಳಿತ, ಪ್ರಜಾಪ್ರಭುತ್ವ ಹೇಗಿರಬೇಕೆಂದು ಸಂವಿಧಾನವನ್ನು ಬರೆದಿದ್ದಾರೆ. ಆದರೂ ಕೂಡ ಅದರಲ್ಲಿ ಈ ಸಾಮಾಜಿಕ ಮತ್ತು ಆರ್ಥಿಕ, ಶೈಕ್ಷಣಿಕ ಭದ್ರತೆಯನ್ನು ಈ ಜನರಿಗೆ ಕೊಡಬೇಕೆಂದು ವಿಶೇಷ ಒತ್ತು ಕೊಟ್ಟಿದ್ದಾರೆ. ಆ ನಿರ್ದೇಶನದ ಮೇರೆಗೆ ಬೇರೆ ಬೇರೆ ರಾಜ್ಯ, ರಾಷ್ಟ್ರದಲ್ಲಿ ಅವರಿಗೆ ಸಹಾಯ ಆಗುತ್ತಿದೆ. ನಾವು ಇದನ್ನು ಇಟ್ಟುಕೊಂಡು ದಲಿತರನ್ನು Mainstreamಗೆ ತರಬೇಕೆಂದು ಮಾತನಾಡುತ್ತೇವೆ. ಆದರೆ ಇದನ್ನು ಕಾರ್ಯಗತಗೊಳಿಸುವಲ್ಲಿ ನಮ್ಮ ಮನಸ್ಸು ಎಷ್ಟು ಸಣ್ಣದಾಗಿರುತ್ತದೆ. ನಮ್ಮಲ್ಲಿ ಯಾವ ರೀತಿ ಒಂದು ಸಣ್ಣತನ ಇರುತ್ತದೆ ಎಂದು ಹೇಳುತ್ತಿದ್ದೇನೆ. ಬೇರೆ ಯಾವುದೋ ಹಳ್ಳಿಯಲ್ಲಿದ್ದರೆ ಅಲ್ಲಿ ಯಾರೂ ಮುಖಂಡರು ಇಲ್ಲ ಅಂದರೆ ಬೇರೆ ವಿಷಯ. ಆದರೆ ಇದು ನಡೆದದ್ದು ಶ್ರೀ ಸಿ.ಪಿ. ಯೋಗಿಶ್ವರ್‌ರವರ ಕ್ಷೇತ್ರದಲ್ಲಿ. ಅವರು ಸರ್ಕಾರದಲ್ಲಿ ಕೂಡ ಇದ್ದಾರೆ. ಇವೊತ್ತು ಯಾರೇ ಗೆಲ್ಲಲಿ ದಲಿತರೆ deciding voters. ಅಂತಹವರಿಗೆ ಅನ್ಯಾಯವಾದಾಗ ನಾವು ರಕ್ಷಣೆ ಕೊಡಲಿಲ್ಲಿ ಅಂದರೆ ಹೇಗೆ? ಪತ್ರಿಕೆಯಲ್ಲಿ ಒಂದು ವಿಷಯವನ್ನು ಹೇಳಿದ್ದಾರೆ. ಶ್ರೀ ಯೋಗಿಶ್ವರ್‌ರವರು ದಲಿತರ ಪರವಾಗಿದ್ದರೂ ಅವರ ತಂದೆಯವರು ಇದಕ್ಕೆ ಅಡ್ಡಿ ಮಾಡುತ್ತಿದ್ದಾರೆನುವುದನ್ನು ದಿನಾಂಕ 21ನೇ ತಾರೀಖು ಕನ್ನಡ ಪ್ರಭ ಪತ್ರಿಕೆಯಲ್ಲಿ ಬಂದಿದೆ. ಇದು ಸರಿಯಲ್ಲ. ಮುಖ್ಯಯಾದವರು ಎಲ್ಲರನ್ನು ಕರೆದು, ಕೂಡಿಸಿ ಸಭೆಯನ್ನು, ಸಂಧಾನವನ್ನು ಮಾಡಿ ಎಲ್ಲಾ ಮಾಡಬೇಕು. ನಮ್ಮ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಹಕಾರ ಸಚಿವರಾಗಿದ್ದಾಗ ದಲಿತರು ಸಹಕಾರ ಸಂಘಗಳಲ್ಲಿ ಸದಸ್ಯತ್ವವನ್ನು ಹೊಂದುವುದಿಲ್ಲವೆಂದು ಹೇಳಿ ಸರ್ಕಾರವೇ ಅವರಿಗೆ ಷೇರ್ ಹಣವನ್ನು ಕೊಟ್ಟು ಅವರನ್ನು ಸದಸ್ಯರನ್ನಾಗಿ ಮಾಡಬೇಕೆಂದು ಕಾಯಿದೆ ಮಾಡಿದ್ದಾರೆ. ಅಂತಹ ಅವಕಾಶವಿದ್ದರೂ ಕೂಡ ದಲಿತರು ಎಷ್ಟೋ ಜನ ಈಗಲೂ ಅದರ ಅವಕಾಶವನ್ನು ಪಡೆದುಕೊಂಡಿಲ್ಲ. ಕೆಲವು ವಿದ್ಯಾವಂತರು, ಬುದ್ಧಿವಂತರು ಇದನ್ನು ಅರ್ಥ ಮಾಡಿಕೊಂಡು ಸ್ವಲ್ಪ ಸದಸ್ಯತ್ವವನ್ನು ಪಡೆದುಕೊಂಡಿದ್ದಾರೆ. ಹಸು ಸಾಕಲಿಕ್ಕೆ, ಕೊಟ್ಟಿಗೆ ಕಟ್ಟಲಿಕ್ಕೆ ಮತ್ತು ಬೇರೆ ಬೇರೆ ಕಾರ್ಯಕ್ರಮಗಳಿಗೋಸ್ಕರ ಈಗ ನಬಾರ್ಡ್ ಸಾಲ

ಮಂಜೂರಾಗಿದೆ. ಅವರು ನಬಾರ್ಡ್ ಸಾಲ ತೆಗೆದುಕೊಳ್ಳಬೇಕಾದರೆ ಅವರ ಷರತ್ತು ಏನು? ನೀವು ಹಾಲಿನ ಸಹಕಾರ ಸಂಘದಲ್ಲಿ ಸದಸ್ಯರಾಗಿರಬೇಕೆಂದು ಇದೆ. ಅವರು ಆ bindings ಅನ್ನು ಹಾಕಿದ್ದಾರೆ. ಇದರಲ್ಲಿ ಸಾಲ sanction ಆಗಿ ಎಷ್ಟೋ ದಿವಸ ಆಗಿದೆ, ಜನವರಿ ತಿಂಗಳಲ್ಲಿ ಆಗಿದೆ ಎಂದು ಇದರಲ್ಲಿ ಬರೆದಿದ್ದಾರೆ. ಜನವರಿಯಲ್ಲಿ ಆಗಿದ್ದು ಇಲ್ಲಿಯವರೆಗೆ ನಾವು ಅವರಿಗೆ ಸದಸ್ಯತ್ವ ಕೊಡುವುದಿಲ್ಲ ಎಂದು ಹೇಳಿದರೆ ಹೇಗೆ? ನಾವು ಒಂದು ಸಮಾಜ, ಒಂದು ಊರಿನಲ್ಲಿ ಒಟ್ಟಿಗೆ ಬದುಕಬೇಕಾಗುತ್ತದೆ. ಒಟ್ಟಿಗಿ ನಾವು ಕಷ್ಟ ಸುಖಕ್ಕೆ ಸ್ಪಂದಿಸಬೇಕಾಗುತ್ತದೆ. ಇಲ್ಲಿ ಇವರು ಏನು ತಪ್ಪು ಮಾಡಿದ್ದಾರೆ, ಏಕೆ ಇವರಿಗೆ ಸದಸ್ಯತ್ವವನ್ನು ನಿರಾಕರಣೆ ಮಾಡುತ್ತಿದ್ದಾರೆಂದು ತಿಳಿಯುವುದು ಮುಖ್ಯವಾಗಿದೆ. ದಲಿತರು ಹಸು ಕಟ್ಟಿದರೆ, ಅವರು ಹಾಲು ಕರೆದರೆ ಆ ಹಾಲು ಸಹಕಾರ ಸಂಘಕ್ಕೆ ಬಂದು ಇತರ ಹಾಲಿನೊಂದಿಗೆ ಬೆರಕೆ ಆಗಬಾರದೆಂದು ಅವರುಗಳಿಗೆ ಮೌಢ್ಯ ವಿಚಾರಗಳಿವೆ. ಅಂತಹ ಒಂದು ಅಮಾನವೀಯ ಮನಸ್ಸು, ಕಲುಷಿತ ಮನಸ್ಸು ನೋಡಿ ನಾವು ದಲಿತರ ಪ್ರತಿನಿಧಿಗಳಾಗಿ ಇರುವುದೇ ತಪ್ಪು ಎಂದು ಅನಿಸುತ್ತಿದೆ. ಅವರಿಗೆ ಆಗುವ ಅವಮಾನ, ನಮಗೂ ಆಗುವ ಅವಮಾನ. ಇದು ಏತಕ್ಕೋಸ್ಕರ ಆಗಿದೆ ಎನ್ನುವ ಪ್ರಶ್ನೆ ನಮ್ಮನ್ನು ಕಾಡುತ್ತದೆ. ದಯಮಾಡಿ ಇದಕ್ಕೆ ಅವಕಾಶ ಮಾಡಬೇಡಿ. ನೀವು ಹಿಂದುಳಿದ ವರ್ಗದವರಿಂದ ಬಂದವರು, ತಮಗೂ ಕಳಕಳಿ ಇದೆ. ದಯಮಾಡಿ ಇದನ್ನು ಸರಿ ಮಾಡಿ ಅವರಿಗೆ ಸದಸ್ಯತ್ವ ಕೊಡಬೇಕು. ಇಲ್ಲದಿದ್ದರೆ ಆ ಸಂಸ್ಥೆಯನ್ನು ನೀವು ರದ್ದು ಮಾಡಬೇಕಾಗುತ್ತದೆ. ಅವರ ಮೇಲೆ untouchability cases ಅನ್ನು ಹಾಕಬೇಕಾಗುತ್ತದೆ. ಮಾನ್ಯ ಹಿರಿಯರಾದ ನಾಣಯ್ಯನವರು ಊರು-ಕೇರಿಯಲ್ಲಿ ಎಲ್ಲರೂ ಹೊಂದಿಕೊಂಡು ಹೋಗಬೇಕು, ಇದನ್ನು set right ಮಾಡಿಕೊಂಡು ಹೋಗಬೇಕೆಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಆದರೆ ಜನವರಿಯಲ್ಲಿ ಆಗಬೇಕಾದದ್ದು ಇಲ್ಲಿಯವರೆಗೆ ಸದಸ್ಯತ್ವ ಕೊಡಲಿಲ್ಲ ಅಂದರೆ ಏನು? ಅವರು ಕೇವಲ 31 ಜನ ಮಾತ್ರ ಸದಸ್ಯತ್ವ ಕೇಳಿದ್ದಾರೆ, 300-400 ಜನ ಸದಸ್ಯತ್ವವನ್ನು ಕೇಳಿಲ್ಲ. ಅಷ್ಟು ಜನರನ್ನು ಇವರು ಸದಸ್ಯರನ್ನಾಗಿ ಮಾಡಿದರೆ ಇವರ ಗಂಟು ಏನು ಹೋಗುತ್ತದೆ? ಸದಸ್ಯತ್ವ

ಜಾಸ್ತಿಯಾಗುತ್ತದೆ. ಅವರಿಗೆ ಸ್ವಲ್ಪ ಷೇರ್ ಹಣ ಸಿಗುತ್ತದೆ. ಈ ಕಾಲದಲ್ಲಿಯೂ ಈ ರೀತಿಯ ತಾರತಮ್ಯ ಮಾಡುತ್ತಾರೆಂದು ನಾವೆಲ್ಲರೂ ತಲೆ ತಗ್ಗಿಸುವ ಹಾಗೆ ಆಗಿದೆ. ದಯಮಾಡಿ ಇಂತಹವುಗಳಿಗೆ ತಾವು ಅವಕಾಶ ಕೊಡಬಾರದೆಂದು ನನ್ನ ಕಳಕಳಿಯ ಮನವಿ. ಇನ್ನು ಎಲ್ಲರೂ ಇವರಿಗೆ reservation ಏಕೆ? ಇನ್ನು ಎಷ್ಟು ದಿನ ಎನ್ನುವ ಮಾತನ್ನು ತುಂಬಾ ಜನ ಮಾತನಾಡುತ್ತಾರೆ. ಒಳಗೊಳಗೆ ಸಂಕಟ ಪಡುತ್ತಾರೆ. ಅವರುಗಳಿಗೆ reservation ಏಕೆ ಬೇಕೆಂದು ಇಂತಹ ಉತ್ತರ ಹೇಳಬೇಕು. ಏಕೆ reservation ಇದೆ ಎಂದು ಹೇಳುವುದಕ್ಕೆ ಅವರು ಕೂಡ ಇವೊತ್ತು ಉತ್ತರ ಹೇಳಬೇಕಾಗುತ್ತದೆ. ಆಗ ಅವರಿಗೆ ಇದನ್ನು ನೋಡಿ realize ಆಗುತ್ತದೆ ಎನ್ನುವುದು ನನ್ನ ಒಂದು ಅನಿಸಿಕೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳುತ್ತಿರುವುದು ನಿಜ. ಆದರೆ ಕೆಲವರು ಶ್ರೀಮಂತರು ಇದ್ದವರಿಗೆ reservation ಏಕೆ ಕೊಡಬೇಕೆಂದು ಕೂಡ ಹೇಳುತ್ತಾರೆ. ಇಂತಹ ಮಾತುಗಳು ಕೂಡ ನಮ್ಮ ಕಿವಿಯ ಮೇಲೆ ಬೀಳುತ್ತವೆ.

**ಸಭಾಪತಿಯವರು:–** ಈಗ ಆ ಚರ್ಚೆ ಬೇಡ. ಈಗ ಬರೀ ಸೊಸೈಟಿಯ ಬಗ್ಗೆ ಮಾತನಾಡಿ. ಇಲ್ಲದಿದ್ದರೆ ಬೇರೆ ವಿಷಯಕ್ಕೆ ಚರ್ಚೆ ಹೋಗುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಅವರು real facts ಬಗ್ಗೆ ಹೇಳುತ್ತಿದ್ದಾರೆ. ಹಾಗೆಯೇ ಅವರು ಇವರು ಮಾತನಾಡುತ್ತಾರೆಂದು ಹೇಳುತ್ತಿದ್ದಾರೆ. ನಾನು ಹೇಳುವಂಥ ವಿಷಯ ಕೂಡ ಅಲ್ಲಲ್ಲಿ ಕೆಲವರು ಹೇಳುತ್ತಾರೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ತಾವು ನಮ್ಮನ್ನೆಲ್ಲಾ ಚೀನಾ ದೇಶಕ್ಕೆ study tour ಕಳುಹಿಸಿದ್ದೀರಿ. ಅಲ್ಲಿ ಒಂದೇ ಮಗು ಇರಬೇಕೆಂದು ಇದೆ ಎನ್ನುವುದನ್ನು ನೋಡಿದ್ದೇವೆ. ಅಲ್ಲಿ ಎರಡು ಮಕ್ಕಳು ಇದ್ದರೆ ಅವರಿಗೆ ಯಾವುದೇ ಸರ್ಕಾರಿ ಸೌಲಭ್ಯವನ್ನು ಕೊಡಬಾರದು ಎಂದು ಕಡ್ಡಾಯಗೊಳಿಸಿದ್ದಾರೆ. ಅಲ್ಲಿ ಅವರಿಗೆ ಐದು ಹೆಕ್ಟೇರ್ ಭೂಮಿ ಕೊಡುವುದು,

ಇನ್ನೊಂದು facilities ಕೊಡುವುದು ಎಂದು ಏನೇನೋ ಇತ್ತು. ಅವರಿಗೆ ಕೆಲಸ ಕೊಟ್ಟರೆ, ಅಥವಾ ಸತ್ತು ಹೋದರೆ ಆ ಜಮೀನು ವಾಪಸ್ಸು ಪಡೆದುಕೊಳ್ಳಬೇಕೆಂದು ಇದೆ. ನೀವು ಒಂದು yardstick ಹಾಕಿ ಕಾನೂನನ್ನು ತನ್ನಿ. ದಲಿತರಲ್ಲಿ ಒಂದು ಹಂತ ತಲುಪಿದವರಿಗೆ reservation ಬೇಡ ಎನ್ನುವ ಮಾತನ್ನು ಬೇಕಾದರೆ ಹೇಳಿ. ಸಂಕಟ ಇದ್ದರೆ ನಮ್ಮ ಹೊರಟ್ಟಿಯಂಥವರು ಖಾಸಗಿ ವಿಧೇಯಕವನ್ನು ತರಲಿ. ಅದಕ್ಕೆ ಯಾರು ಯಾರು ಒಪ್ಪಿಗೆ ಕೊಡುತ್ತಾರೆ ಕೊಡಲಿ. ನಾನು ಮಾತನಾಡುತ್ತಿರುವುದು ಕನಿಷ್ಠ ಸೌಲಭ್ಯ ಇಲ್ಲದೆ ಇರುವವರು, ಕನಿಷ್ಠ ಅನುಕೂಲ ಇಲ್ಲದೆ ಇರುವವರ ಬಗ್ಗೆ ಮಾತನಾಡುತ್ತಿದ್ದೇನೆ. In general, reservation promotionನಲ್ಲೂ ಸಂಕಟ ಇರುತ್ತದೆ. ತಮಗೆ ಗೊತ್ತಿರುವ ಹಾಗೆ ಲೋಕೋಪಯೋಗಿ ಇಲಾಖೆಯಲ್ಲಿ ಎಷ್ಟೋ ಬಡ್ತಿಗಳಲ್ಲಿ overlook ಆಗಿತ್ತು. ಆದರೆ ಶ್ರೀ ಕೃಷ್ಣಾರವರ ಸರ್ಕಾರದಲ್ಲಿ reservation promotion ಎಂದು ಮಾಡಿಕೊಟ್ಟರು. ಈಗ ಅದರ ವಿರುದ್ಧ ಕೋರ್ಟಿಗೆ ಹೋಗಿದ್ದಾರೆ ಪುನಃ ಈಗ ಹೈಕೋರ್ಟ್ ಸರ್ಕಾರಕ್ಕೆ ಪುನಃ ಪರಿಶೀಲನೆ ಮಾಡಬೇಕೆಂದು ವಾಪಸ್ಸು ಕಳುಹಿಸಿದೆ. ಇಂತಹ ಪರಿಸ್ಥಿತಿ ಇವೊತ್ತು ನಡೆಯುತ್ತಿದೆ. ಇದು ಆಗಬಾರದು. ಇದಕ್ಕಾಗಿ ಶ್ರೀ ದೇವರಾಜ್ ಅರಸುರವರ ಕಾಲದಲ್ಲಿ ಒಂದು High Power Committeeಯನ್ನು ಮಾಡಿದ್ದಾರೆ. ಅದಕ್ಕಾಗಿ ನಾವು ಅವರನ್ನು ಹಿಂದುಳಿದವರು, ದಲಿತರು ನೆನೆಸಿಕೊಳ್ಳಬೇಕು, ಹಾಗೂ ಪೂಜಿಸಬೇಕು. ಯಾವುದೇ ಇಲಾಖೆಯಲ್ಲಿ ದಲಿತರಿಗೆ ನೇಮಕಾತಿ ಮಾಡುವುದರಲ್ಲಿ ವ್ಯತ್ಯಾಸ ಆಗಬಾರದು, ಅನ್ಯಾಯ ಆಗಬಾರದು, ಪ್ರಮೋಶನ್‌ನಲ್ಲಿ ಅನ್ಯಾಯ ಆಗಬಾರದು ಎಂದು, care ತೆಗೆದುಕೊಳ್ಳಬೇಕೆಂದು ಹೇಳಿ ಅವರು High Power Committeeಯನ್ನು ಮಾಡಿದ್ದಾರೆ. ಅದರಲ್ಲಿ ಸಚಿವ ಸಂಪುಟದ 3–4 ಜನ ಸಚಿವರು, ವಿರೋಧ ಪಕ್ಷದ ನಾಯಕರು ಸೇರಿ ಅದಕ್ಕೆ ಸದಸ್ಯರಾಗಿದ್ದಾರೆ. ಆದರೆ ಇದುವರೆಗೆ ಆ ಸಮಿತಿ ಸಭೆ ನಡೆಯಲೇ ಇಲ್ಲ. ಒಮ್ಮೆ ನಮ್ಮ ಮೈಸೂರಿನ ಲೋಕಸಭಾ ಸದಸ್ಯರಾದ ಧ್ರುವನಾರಾಯಣರವರು ಯಡಿಯೂರಪ್ಪನವರ ಕಾಲದಲ್ಲಿ

ಕಡ್ಡಾಯ ಮಾಡಿ ಒಂದು ಸಭೆಯನ್ನು ಕರೆದು ದಲಿತರ ಮೇಲೆ ದೌರ್ಜನ್ಯ ಆಗುತ್ತಿದೆ...

**ಶ್ರೀ ಮೋಹನ್ ಎ.ಲಿಂಬೀಕಾಯಿ:–** ಮಾನ್ಯ ಸಭಾಪತಿಯವರೆ, ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನಮಂತ್ರಿಯವರಾಗಿದ್ದಂಥ ಕಾಲದಲ್ಲಿ ಆರ್ಟಿಕಲ್ 15 (3)ಕ್ಕೆ ತಿದ್ದುಪಡಿಯನ್ನು ತಂದು ಪ್ರಮೋಶನ್ ಸಂದರ್ಭದಲ್ಲಿಯೂ ಸಹಿತ reservation maintain ಮಾಡಬೇಕೆಂದು ತಿದ್ದಪಡಿ ತಂದಿದ್ದಾರೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಆಗಿದೆ ಆದರೆ ಇಲ್ಲಿ ಕೋರ್ಟ್ ಏನು ಮಾಡಿದೆ? ಕೋರ್ಟಿಗೆ ಹೋದವರು ಯಾರು? ಕೋರ್ಟಿಗೆ ಹೋದವರ ಮನಸ್ಸು ಎಂತಹದ್ದು ಎಂದು ಹೇಳಿ. ಅದೆಲ್ಲಾ ಇದ್ದರೂ ಇನ್ನು backlog ಹುದ್ದೆಗಳು ಖಾಲಿ ಇವೆ. ಶೇಕಡ 18ರಷ್ಟು ಹುದ್ದೆಗಳನ್ನು ತುಂಬಿಲ್ಲ. ಹಿಂದಿನ ಸರ್ಕಾರ ಹದಿನಾರು ಸಾವಿರ backlog ಹುದ್ದೆಗಳನ್ನು announce ಮಾಡಿತ್ತು. ಆದರೆ ತುಂಬಿದ್ದು ಎಷ್ಟು? ನಾವು ಇವೊತ್ತು 21ನೇ ಶತಮಾನದಲ್ಲಿದ್ದೇವೆ. ನಾವು ಅವರಿಗೆ ಕೊಡಬೇಕಾದಂಥ ಸೌಲಭ್ಯದಲ್ಲಿ ಯಾವ ರೀತಿ ವಂಚನೆ ಮಾಡುತ್ತಿದ್ದೇವೆ? ಮುಂದೆ ಇಂತಹದ್ದಕ್ಕೆ ಅವಕಾಶ ಕೊಡಬಾರದು ಎಂದು ಸರ್ಕಾರದ ಪರವಾಗಿ ನೀವು ಹೇಳಬೇಕಾಗುತ್ತದೆ. ಮತ್ತು ಈ ಇಲಾಖೆಯಲ್ಲಿ ಆಗಿರುವಂಥ ಅನ್ಯಾಯಕ್ಕೆ ಸಂಬಂಧಪಟ್ಟ ಮಾನ್ಯ ಸಚಿವರು ಕೂಡ ಕೂಡಲೇ ಇದರ ಬಗ್ಗೆ ಕ್ರಮ ತೆಗೆದುಕೊಂಡು ಇದು ಸರಿಯೋ ತಪ್ಪೋ ಎಂದು ನೀವು ಮೊದಲೇ ಹೇಳಿದ್ದೀರಿ. ತಾವು ತಮ್ಮ ಗಮನಕ್ಕೆ ಬಂದಿದೆ, ಅಧಿಕಾರಿಗಳನ್ನು ಕಳುಹಿಸಿದ್ದೇನೆಂದು ಹೇಳಿದ್ದೀರಿ. ಅದನ್ನು ಸರಿ ಮಾಡಬೇಕೆಂದು ಮತ್ತೊಮ್ಮೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

**ಪ್ರೊ. ಮುಮ್ತಾಜ್ ಅಲಿ ಖಾನ್:–** ಮಾನ್ಯ ಸಭಾಪತಿಯವರೆ, ಈ ರೀತಿ ದಲಿತರ ಮೇಲೆ ದೌರ್ಜನ್ಯ ಆಗುತ್ತಿರುವುದನ್ನು ನಾವು ಪ್ರತಿ ದಿವಸ

ಪತ್ರಿಕೆಯಲ್ಲಿ ಓದುತ್ತಿರುತ್ತೇವೆ. ನಾನು **"ಅಂದು ಮತ್ತು ಇಂದು"** ಎಂದು ಒಂದು ಪುಸ್ತಕವನ್ನು ಬರೆದಿದ್ದೇನೆ. ಅದು ಸಪ್ನಾ ಬುಕ್ ಹೌಸ್‌ನಲ್ಲಿ ಬಿಡುಗಡೆಯಾಗಿದೆ.

ಮಾನ್ಯ ಸಭಾಪತಿಯವರೆ, ಸಾಮಾನ್ಯವಾಗಿ ದಲಿತರ ಮೇಲೆ ಇನ್ನು ದೌರ್ಜನ್ಯಗಳು ನಡೆಯುತ್ತಿರುವುದನ್ನು ಪ್ರತಿದಿನ ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ. ಅಂದು ಮತ್ತು ಇಂದು ಎನ್ನುವಂತಹ ಪುಸ್ತಕ ಸ್ವಪ್ನ ಬುಕ್ ಹೌಸ್‌ನಲ್ಲಿ ಬಿಡುಗಡೆಯಾಗಿದೆ. ಅದರ ಆಧಾರದ ಮೇಲೆ ನಾನು ಒಂದು ಮಾತನ್ನು ಹೇಳುವುದೇನೆಂದರೆ, ಇಲ್ಲಿರುವಂಥವರೆಲ್ಲರೂ ಕೂಡ ಒಂದು ಜನ್ಮದಲ್ಲಿ ಹುಟ್ಟಬೇಕು. ಆಗ ದಲಿತ ಕಷ್ಟ-ಸುಖ ಮತ್ತು ನೋವು ಗೊತ್ತಾಗುತ್ತದೆ. ಈಗ ಮಾನ್ಯ ಮಂತ್ರಿಗಳು ಸಹಕಾರ ಸಂಘಗಳ 1959ರ ಅದಿ ನಿಯಮದ ಪ್ರಕಾರ ಆಡಳಿತ ಮಂಡಳಿಯ ಮೇಲೆ ನಡೆಸಿರುವ ಕ್ರಮವು ಸಾಕಾಗುವುದಿಲ್ಲ. ಇದು ಹಲ್ಲು ಇಲ್ಲದಂತಹ ಕಾನೂನು ಆಗಿದೆ. ನಮ್ಮಲ್ಲಿ ಎರಡು ಕಾನೂನುಗಳಿವೆ. Untouchability Act of 1957, SC/ST Attrocities Act, 1989. ಈ ಎರಡು ಕಾನೂನುಗಳ ಅಡಿಯಲ್ಲಿ ಈಗಾಗಲೇ ಆ ರೀತಿಯಾಗಿ ಮಾಡಿದವರನ್ನು ಬಂಧನ ಮಾಡಬೇಕಾಗಿತ್ತು. It is a congnisable offence. These people should have been arrested by now. You are quoting some law which has no teeth. There are already two important legislations prevailing in this country. Please take advantage of the prevailing legislations and see that these people are arrested immediately.

**ಶ್ರೀ ಡಿ.ಎಸ್.ವೀರಯ್ಯ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಏನು Rules of Procedure and Conduct of Business ನಿಯಮ 330ರ ಅಡಿಯಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀಮತಿ ಮೋಟಮ್ಮನವರು, ಶ್ರೀ ಮತ್ತಿಕಟ್ಟಿ ವೀರಣ್ಣನವರು ಚನ್ನಪಟ್ಟಣ ತಾಲ್ಲೂಕಿನ ಚಿಕ್ಕರೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ದಲಿತರಿಗೆ ಸದಸ್ಯತ್ವವನ್ನು ಕೊಡಲಿಲ್ಲ ಎನ್ನುವಂತಹ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದು ಸಂವಿಧಾನಕ್ಕೆ ವಿರೋಧ ಮತ್ತು ಸಹಕಾರ ತತ್ವಕ್ಕೆ

ವಿರೋಧವಾಗಿರುವಂಥದ್ದು. ಸಹಕಾರ ತತ್ವ, one for all, all for one, ಒಬ್ಬ ಎಲ್ಲರಿಗಾಗಿ, ಎಲ್ಲರೂ ಒಬ್ಬರಿಗಾಗಿ ಎಂದು ಹೇಳುತ್ತದೆ. ಆದರೆ ಅದು ಈ ಸಂಘದ ಸದಸ್ಯತ್ವ ವಿಷಯದಲ್ಲಿ ಇಂದು ಅರ್ಥ ಕಳೆದುಕೊಂಡಿದೆ. ಇದು ಯಾವ one for all, not for Dalits ರೀತಿಯಾಗಿದೆ. One for all, not for Dalits ಎನ್ನುವಂತಹ ಅರ್ಥವನ್ನು ಹೇಳಿದೆ. ಇದು ಪರಿಶಿಷ್ಟ ಜಾತಿಗೆ ಸೇರಿದ ಒಬ್ಬನ ಮೂಲಭೂತ ಹಕ್ಕನ್ನು ಕಸಿದುಕೊಳ್ಳುತ್ತಿದೆ. ಸದಸ್ಯತ್ವವನ್ನು ಹೊಂದುವುದು it is a right to associate. ಒಂದು ಸಂಘದ ಜೊತೆಯಲ್ಲಿ ಅವನು ಜೋಡಿಸಿಕೊಳ್ಳುವುದು, ಸದಸ್ಯತ್ವವನ್ನು ಹೊಂದುವುದು it is a fundamental right. ಆದರೆ ಆ ಉಲ್ಲಂಘನೆ ಇಲ್ಲಿ ಆಗಿದೆ. ಇವತ್ತು ಏನು ಸಂವಿಧಾನದ ಆಶಯ ಇದೆ. To ensure equality. ಇದು ಉಲ್ಲಂಘನೆಯಾಗಿದೆ. ಈ ದಲಿತರು ಅವರುಗಳ ದನಗಳನ್ನು ಮೇಯಿಸುವುದಕ್ಕೆ ಬೇಕು, ಹಲ್ಲು ಹಾಕುವುದಕ್ಕೆ ಬೇಕು, ತೊಪ್ಪೆ ಎತ್ತುವುದಕ್ಕೆ ಬೇಕು, ದನಗಳ ಮೈ ತೊಳೆಯುವುದಕ್ಕೆ ಬೇಕು, ಅವರುಗಳ ಸಾಕಿರುವಂತಹ ಹಸುಗಳನ್ನು ಹಾಲನ್ನು ಕರೆಯುವುದಕ್ಕೂ ಕೂಡ ಬೇಕು. ಅವರ ಹಸುಗಳಲ್ಲಿ ಹಾಲನ್ನು ಕರೆದಿದ್ದನ್ನು ಸುಲಭವಾಗಿ ಸಹಕಾರ ಸಂಘಗಳಲ್ಲಿ ತೆಗೆದುಕೊಳ್ಳುತ್ತಾರೆ. ಆದರೆ ದಲಿತರೆ ಸ್ವಂತವಾಗಿ ಹಸು ಸಾಕಿ ಅದರ ಹಾಲನ್ನು ಕರೆದುಕೊಂಡು ಹೋಗಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಕೊಟ್ಟರೆ ಅದನ್ನು ಮುಟ್ಟುವ ಹಾಗಿಲ್ಲ.. ಇಲ್ಲಿ Attrocities Act ಉಲ್ಲಂಘನೆಯಾಗಿದೆ. ನಮ್ಮ ಸಂವಿಧಾನದ Artivle 17,

practicing untouchability in any form is also an untouchability. Article 17 ಏನು ಹೇಳುತ್ತದೆಂದರೆ, untouchability is abolished. ಅಂದರೆ ದಿನಾಂಕ 26.01.1950 ದಂದೇ abolish ಆಗಿದೆ ಎಂದು ನಾವು ಸ್ವೀಕರಿಸಿ ಬಿಟ್ಟಿದ್ದೇವೆ. ಸಂವಿಧಾನದ ಕೆಳಗಡೆಯಲ್ಲಿ ನಾವು ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್ತುಗಳೆಲ್ಲವೂ ನಡೆಯುತ್ತಿದೆ. ಅವರ ಸ್ವತಂತ್ರ ಹರಣವಾಗುತ್ತಿದೆ. ಅವನಿಗೆ ಇರತಕ್ಕಂತಹ ಸ್ವತಂತ್ರ ಹರಣವಾಗಿದೆ.

**ಸಭಾಪತಿಯವರು:–** ನೀವು ಆ ಸಹಕಾರ ಸಂಘದ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಲಿಲ್ಲ.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೆ, ಅದರ ಪೂರಕವಾಗಿ ಇದನ್ನೆಲ್ಲಾ ಹೇಳಬೇಕು. ಇಲ್ಲದೇ ಇದ್ದರೆ ಅರ್ಥವಾಗುವುದಿಲ್ಲ.

**ಸಭಾಪತಿಯವರು:-** ಆ ಸಹಕಾರ ಸಂಘದ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೆ, ಅದನ್ನು ನಾನು ಹೇಳುವಾಗ ತಾವು ಇರಲಿಲ್ಲ. ಸಹಕಾರ ಉದ್ದೇಶ one for all and all for one.

**ಸಭಾಪತಿಯವರು:-** ಅದನ್ನೆಲ್ಲಾ ಹೇಳಿದ್ದೀರಿ.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೆ, one for all and all for one. ಎನ್ನುವಂಥದ್ದು ಸಹಕಾರ ಸಂಘಕ್ಕೆ ಸೇರಿದಂತಹ ವಿಷಯ. ಅಲ್ಲಿ ಏನಾಗಿದೆ ಎಂದರೆ. . .

**ಸಭಾಪತಿಯವರು:-** ನಿರ್ದಿಷ್ಟವಾಗಿ ಈ ಸಹಕಾರ ಸಂಘದ ಬಗ್ಗೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಇದುವರೆಗೆ ಹೇಳಿಲ್ಲ.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೆ, ಅದನ್ನು ಕೂಡ ಹೇಳುತ್ತೇನೆ. ಏಕೆಂದರೆ ಇಂತಹ ಘಟನೆಗಳು ನಡೆಯುತ್ತಲೇ ಇರುವುದರಿಂದ ಸ್ವಲ್ಪ ವಿಸ್ತೃತವಾಗಿ ಹೇಳಬೇಕು. ಮುಂದೆ ಈ ರೀತಿಯಾಗಿ ನಡೆಯಬಾರದು ಎನ್ನುವ ನಿಟ್ಟಿನಲ್ಲಿ ಈ ಚರ್ಚೆ ಅನಿವಾರ್ಯ.

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೆ, ಇಚ್ಛಾ ಮರಣದ ಬಗ್ಗೆ ಗಂಟೆಗಟ್ಟಲೆ ಚರ್ಚೆಯಾಯಿತು. ಅದಕ್ಕೆ ತಾವು ಅವಕಾಶ ಕೂಡ ಮಾಡಿಕೊಡಲಾಯಿತು. ಇದರ ಬಗ್ಗೆ ಕೂಡ ಚರ್ಚೆಯಾಗಲಿ ಅವಕಾಶ ಕೊಡಿ.

**ಸಭಾಪತಿಯವರು:-** ನೀವು ಮಾತನಾಡುವಂತಹ ಸಮಯದಲ್ಲಿ ನಾನು ಅಡ್ಡಿ ಬರಲೇ ಇಲ್ಲ. ಪೂರ್ಣ ವಿಷಯ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ವಿಷಯ ಚರ್ಚೆಯಾಗುವುದಕ್ಕೆ ಅವಕಾಶ ಕೊಡಿ.

**ಸಭಾಪತಿಯವರು:-** ನಾನು ಚರ್ಚೆ ಮಾಡಿ ಎಂದು ಹೇಳಿದೆ. ಆ ವಿಷಯ ಬಿಟ್ಟು ಬೇರೆ ವಿಷಯಕ್ಕೆ ಹೋಗುವುದು ಬೇಡ ಎಂದು ಹೇಳಿದೆ. ಅಂದರೆ ತಾವು ವಿಷಯವನ್ನು ಪ್ರಸ್ತಾಪ ಮಾಡಿರುವಂತಹ ಹಾಲು ಉತ್ಪಾದಕರ ಸಹಕಾರದ ಬಗ್ಗೆ ಸದಸ್ಯರು ತಮ್ಮ ಅಭಿಪ್ರಾಯವನ್ನು ಹೇಳದೇ ಹೋದರೆ, ಚರ್ಚೆ ಅರ್ಥಪೂರ್ಣವಾಗುವುದಿಲ್ಲ ಅದುದರಿಂದ ಆ ವಿಷಯವನ್ನು ಪ್ರಸ್ತಾಪ ಮಾಡಿ ಎಂದು ಹೇಳಿದೆ.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೆ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 67 ವರ್ಷಗಳಾಯಿತು, ಗಣರಾಜ್ಯ ಬಂದು 62 ವರ್ಷಗಳಾಯಿತು ಎಂದೆಲ್ಲಾ ಹೇಳಿಕೊಳ್ಳುತ್ತೇವೆ. ಆದರೂ ಕೂಡ ಇವತ್ತಿಗೂ ಕೂಡ ಸಾಮಾಜಿಕ ಬಹಿಷ್ಕಾರ, ದೌರ್ಜನ್ಯ, ಮಹಿಳೆಯವರ ಮೇಲೆ ಅತ್ಯಾಚಾರ, ಮನೆಗಳನ್ನು ಸುಡುವಂಥದ್ದು ನಡೆಯುತ್ತಲೇ ಇದೆ. ಅದುದರಿಂದ ಇದರ ಹೆಚ್ಚು ಚರ್ಚೆಯಾದರೆ it is going to prevent further occurrence. ಆ ದೃಷ್ಟಿಯಿಂದ ನಾನು ಇದನ್ನೆಲ್ಲಾ ಹೇಳುತ್ತಿರುವಂಥದ್ದು. ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ದಲಿತರ ಸದಸ್ಯತ್ವ ತೆಗೆದುಕೊಂಡಿಲ್ಲ, ತೆಗೆದುಕೊಂಡರೆ ಮುಗಿಯಿತು ಎನ್ನುವಂತಹ ಭಾವನೆಯಲ್ಲ. ಇಲ್ಲ ಅವನ Fundamental ಹಕ್ಕು ಉಲ್ಲಂಘನೆಯಾಗಿದೆ. ಸ್ವತಂತ್ರ ಹರಣವಾಗಿದೆ. Untouchability practice ಆಗಿದೆ. ನಾವು ಸಹಕಾರ ಕಾಯಿದೆಯನ್ನು ಹೇಳಿ departmental action ತೆಗೆದುಕೊಂಡು ಎರಡು increment cut ಮಾಡಬಹುದು. ಸಮಸ್ಯೆಗೆ ಪರಿಹಾರ ಅದಲ್ಲ. ಈ ರೀತಿಯಾಗಿ ಮಾಡಿದಂತಹ ಸಂಘವನ್ನೇ ರದ್ದು ಮಾಡಬೇಕು. ಪ್ರೊ: ಮುಮ್ತಾಜ್ ಅಲಿಖಾನ್‌ರವರು ಹೇಳಿದ ಹಾಗೆ ಈ ಎರಡು ಕಾನೂನುಗಳನ್ನು ಕಾಯಿದೆಯನ್ನು invoke ಮಾಡಿದಾಗ ಮಾತ್ರ ನ್ಯಾಯ ಸಿಗುವುದಕ್ಕೆ ಸಾಧ್ಯ. ಕೆಎಂಎಫ್ ನಲ್ಲಿ ಒಬ್ಬರು ದಲಿತ ಜನಾಂಗದವರನ್ನು ಎಂ.ಡಿ.ಯನ್ನು ಮಾಡುವುದಕ್ಕೆ ಇಷ್ಟು ವರ್ಷಗಳು ಬೇಕಾಯಿತು. ಅಲ್ಲಿನ ವ್ಯವಸ್ಥೆ ದಲಿತರನ್ನು ಎಂ.ಡಿ. ಮಾಡುವುದಕ್ಕೆ ಬಿಟ್ಟಿರಲಿಲ್ಲ. ಆಮೇಲೆ

ಕೋರ್ಟ್‌ಗೆ ಹೋಗಬೇಕಾಯಿತು, ಸದನದಲ್ಲಿ ಪ್ರಶ್ನೆ ಮಾಡಬೇಕಾಯಿತು. ಈ ಸ್ಥಿತಿ ನಮ್ಮ ರಾಜ್ಯದಲ್ಲಿರುವಾಗ ಇಂತಹ ಸಮಸ್ಯೆಗಳು ಬಂದಾಗ stringent action ತೆಗೆದುಕೊಂಡರೆ, ಆ ಹಾಲು ಉತ್ಪಾದಕರ ಸಂಘವನ್ನು ರದ್ದು ಮಾಡುವುದರ ಮುಖಾಂತರ ಅವರಿಗೆ ಪಾಠ ಕಲಿಸದೇ ಇದ್ದರೆ ಅದರಲ್ಲಿಯೂ ಅಲ್ಲಿಯ ಮಂತ್ರಿಗಳ್ಯಾರು, ಅದರಲ್ಲಿಯೂ ಚನ್ನಪಟ್ಟಣದ ಉಸ್ತುವಾರಿ ಮಂತ್ರಿಗಳಾಗಿ, ಆ ಜಿಲ್ಲೆಯ ಮಂತ್ರಿಗಳಾಗಿ ಈ ರೀತಿಯಾದರೆ ಹೇಗೆ? ಪ್ರೊ: ವೆಂಕಟಗಿರಿಗೌಡರ ಮಾತನ್ನು ಇಲ್ಲಿ ಮಧ್ಯಾಹ್ನ ಉಲ್ಲೇಖ ಮಾಡಿದರು. ಪ್ರೊ: ವೆಂಕಟಗಿರಿಗೌಡರು ಚನ್ನಪಟ್ಟಣದ ಗ್ರಾಮದವರು, ಆ ಊರಿನಲ್ಲಿ ಯಾರು ಇದ್ದರು ಅವರನ್ನು ಉಲ್ಲೇಖ ಮಾಡುತ್ತಿದ್ದೇನೆ. ಅವರು ಹುಟ್ಟಿದಾಗ ಅವರ ತಾಯಿಗೆ ಎದೆಯಲ್ಲಿ ಹಾಲು ಬರಲಿಲ್ಲ. ಅವರು ತಾಯಿ ಹೇಳುತ್ತಾರೆ ಒಬ್ಬರು ದಲಿತ ಮಹಿಳೆ ಇದ್ದಾಳೆ, ಅವಳಿಗೂ ಕೂಡ ನನಗೆ ಹೆರಿಗೆಯಾದ ದಿವಸವೇ ಆಗಿದೆ. ಅವರ ಮಗುವಿಗೆ ಕುಡಿಸಿ ಇನ್ನು ಉಳಿದ ಹಾಲನ್ನು ವೇಸ್ಟ್ ಮಾಡುತ್ತಿದ್ದಾಳೆ ಈ ಮಗುವನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಕುಡಿಸಿ ಎಂದು ಹೇಳುತ್ತಾಳೆ. ಪ್ರೊ: ವೆಂಕಟಗಿರಿಗೌಡರಿಗೆ ಅವರು ಹುಟ್ಟಿದಾಗ ಅವರ ಹೆತ್ತ ತಾಯಿಯ ಎದೆ ಹಾಲನ್ನು ಕುಡಿಯುವ ಭಾಗ್ಯ ಅವರಿಗೆ ಸಿಗಲಿಲ್ಲ. ಆದರೆ ಅವರ ತಾಯಿ ಒಬ್ಬ ದಲಿತ ತಾಯಿಯ ಹತ್ತಿರ ಮಗುವನ್ನು ಕಳುಹಿಸುತ್ತಾರೆ. ಆ ದಲಿತ ತಾಯಿ ಪ್ರೊ: ವೆಂಕಟಗಿರಿಗೌಡರು ಮಗುವಾಗಿದ್ದಾಗ 9–10 ಎದೆ ಹಾಲನ್ನು ಕುಡಿಸುತ್ತಾಳೆ. ಅವರು ಅಮೇರಿಕಾದಲ್ಲಿದ್ದಾಗ ಅವರು ಊರಿಗೆ ಬರುತ್ತಿದ್ದಾಗ ಎರಡು ಸೀರೆಗಳನ್ನು ತರುತ್ತಿರುತ್ತಾರೆ. ಮೊದಲು ತೆಗೆದುಕೊಂಡು ಬಂದಂತಹ ಸೀರೆಯನ್ನು ಆ ದಲಿತ ಮಹಿಳೆಗೆ ಕೊಡುತ್ತಾರೆ. ಎರಡನೆಯ ಸೀರೆಯನ್ನು ಅವರನ್ನು ಹೆತ್ತಂತಹ ತಾಯಿಗೆ ಕೊಡುತ್ತಾರೆ. ಅವರು ಅಮೇರಿಕಾ ದೇಶದಲ್ಲಿದ್ದಾಗ ಎದೆ ಹಾಲನ್ನು ಕುಡಿಸಿ ಬೆಳೆಸಿದಂತಹ ತಾಯಿ ಸತ್ತು ಹೋಗುತ್ತಾಳೆ. ಪ್ರೊ: ವೆಂಕಟಗಿರಿಗೌಡರಿಗೆ ಅವರ ತಂದೆ ತಾಯಿಗಳು ಈ ವಿಷಯವನ್ನು ತಿಳಿಸಲಿಲ್ಲ. ಪ್ರೊ: ವೆಂಕಟಗಿರಿಗೌಡರಿಗೆ ಇಬ್ಬರು ತಾಯಂದಿರು, ಪ್ರೊ: ವೆಂಕಟಗಿರಿಗೌಡರಿಗೆ ಎದೆ ಹಾಲನ್ನು ಕುಡಿಸಿದಂತಹ ತಾಯಿಯೇ ಹೆಚ್ಚು. ಇದು ಅವರ

ದೃಷ್ಟಿಕೋನ. ಪ್ರೊ: ವೆಂಕಟಗಿರಿಗೌಡರಿಗೆ ಆ ದಲಿತ ತಾಯಿ ತೀರಿ ಹೋದಾಗ ಅವರ ತಂದೆ ತಾಯಿಗಳು ತಿಳಿಸದೇ ಹೋಗಿದ್ದರಿಂದ ಸಾವಿನ ಕಾರ್ಯಕ್ಕೆ ಬರುವುದಕ್ಕಾಗಲಿಲ್ಲ. ನಂತರ ಒಂದು ತಿಂಗಳ ನಂತರ ಅಮೇರಿಕಾದಿಂದ ಬರುವಂತಹ ಸಮಯದಲ್ಲಿ ಮತ್ತೆ ಎರಡು ಸೀರೆಗಳನ್ನು ತೆಗೆದುಕೊಂಡು ಬರುತ್ತಾರೆ. ಮೊದಲು ಎದೆ ಹಾಲನ್ನು ಕುಡಿಸಿ ಬೆಳೆಸಿದಂತಹ ತಾಯಿ ಮನೆಗೆ ಪ್ರೊ: ವೆಂಕಟಗಿರಿಗೌಡರು ಹೋಗುತ್ತಾರೆ. ಅಲ್ಲಿ ಅವರು ಸತ್ತಿರುವಂತಹ ವಿಷಯ ಗೊತ್ತಾಗುತ್ತದೆ. ಇವರ ಮನೆಗೆ ಬಂದು ಅವರ ತಂದೆ ತಾಯಿಗೆ ನೀವು ಅವರು ಮರಣ ಹೊಂದಿದಂತಹ ವಿಷಯವನ್ನು ತಿಳಿಸದೇ ಬಹಳ ಅನ್ಯಾಯ ಮಾಡಿದ್ದೀರಿ ಎಂದು ಹೇಳುತ್ತಾರೆ. ನಮ್ಮ ಜೀವನದಲ್ಲಿ ನನಗೊಂದು ರೀತಿ ದ್ರೋಹ ಮಾಡಿದ್ದೀರಿ ಎಂದು ಹೇಳಿ, ಎಷ್ಟೇ ಖರ್ಚು ಆಗಿದ್ದರೂ ಕೂಡ ನಾನು ಅವರ ಅಂತ್ಯಕ್ರಿಯೆಗೆ ಬರುತ್ತಿದ್ದೆ ಎಂದು ಹೇಳುತ್ತಾರೆ. ಅದನ್ನು ನಾನು ಪತ್ರಕರ್ತನಾಗಿ ವ್ಯಕ್ತಿ ಶಕ್ತಿ ಎನ್ನುವಂತಹ ಕಲಂನಲ್ಲಿ ಪತ್ರಿಕೆಯಲ್ಲಿ ಬರೆದೆ ಪ್ರೊ: ವೆಂಕಟಗಿರಿಗೌಡರು ಬದುಕಿದ್ದರು. ಅವರಿಗೆ ತೋರಿಸಿದೆ. ನಿರರ್ಗಳವಾಗಿ ಅಳುವುದಕ್ಕೆ ಶುರು ಮಾಡಿದರು. ಬಹಳ ಅಳುತ್ತಾ ನಮ್ಮ ತಾಯಿಯ ನೆನಪನ್ನು ತೆಗೆದುಕೊಂಡು ಬಂದು ಬಿಟ್ರಿ ಎಂದು ಹೇಳಿದರು. ಅಂತಹ ತಾಲ್ಲೂಕಿನಲ್ಲಿ, ಅಂತಹ ಗ್ರಾಮದಲ್ಲಿ ಇವತ್ತು ಈ ಘಟನೆ ನಡೆದಿರುವಂಥದ್ದು. ಪ್ರೊ: ವೆಂಕಟಗಿರಿಗೌಡರು ಆ ತಾಯಿ ತನ್ನ ಎದೆ ಹಾಲನ್ನು ಕುಡಿಸದೇ ಇದಿದ್ದರೆ ನಾನು ಇವತ್ತು ನಾನು ಈ ಮಟ್ಟಕ್ಕೆ ಹೋಗುತ್ತಿರಲಿಲ್ಲ ಎಂದು ಹೇಳಿದರು. ಆದರೆ ಆ ದಲಿತ ತಾಯಿಯ ಸಾವಿನ ಅಂತ್ಯಕ್ರಿಯೆಯಲ್ಲಿ ಅವರ ತಂದೆ ತಾಯಿಗಳು ವಿಷಯ ತಿಳಿಸದೆ ಅವಕಾಶ ಮಾಡಿಕೊಡಲಿಲ್ಲ. ಈ ರೀತಿಯ ಮನುಷ್ಯತ್ವ ಇವತ್ತಿನ ದಿವಸ ಬೇಕಾಗಿದೆ. ಪ್ರತಿಯೊಬ್ಬರ ಸೇವೆಯನ್ನು ಮಾಡಿದಂತಹ ಜನಾಂಗ, ದೂರ ಇಡುವಂಥದ್ದು ಇದು ಅಮಾನವೀಯ, ಅಮಾನುಷ ಮತ್ತೆ ನಾವು ಏನು ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ಬಗ್ಗೆ, ಶ್ರೀ ಕ್ರಾಂತಿಯೋಗಿ ಬಸವಣ್ಣನವರ ಬಗ್ಗೆ ಮಾತನಾಡುತ್ತೇವೆ ಮತ್ತು ಮಹಾತ್ಮ ಗಾಂಧೀಜಿಯವರ ಬಗ್ಗೆ ಮಾತನಾಡುತ್ತೇವೆ. ಅವರ್ಯಾರು ಅಸ್ಪೃಶ್ಯತೆ ಆಚರಣೆಗೆ ಪ್ರೋತ್ಸಾಹಿಸಲಿಲ್ಲ. ನಾವು ಅದಕ್ಕೆ ಈ ಕಾಲದಲ್ಲಿ

ಪ್ರೋತ್ಸಾಹ ಮಾಡುವುದಾದರೆ ಬಹುಶಃ ಆ ಮೂವರ ಹೆಸರನ್ನು ಇಲ್ಲಿ ಉಲ್ಲೇಖಿಸುವುದು ಕೂಡ ಅಪ್ರಸ್ತುತ ಎಂದು ಹೇಳುತ್ತಾರೆ. ಶ್ರೀ ಬಸವಣ್ಣನವರ ಬಗ್ಗೆ ಮಾತನಾಡುವಾಗ ಜಾತಿಯ ಬಗ್ಗೆ ಮಾತನಾಡುವುದು, ಡಾ|| ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಬಗ್ಗೆ ಮಾತನಾಡುವಾಗ ಸಂವಿಧಾನದ ಬಗ್ಗೆ ಮಾತನಾಡುವಂಥದ್ದು. ಮಹಾತ್ಮ ಗಾಂಧೀಜಿಯವರ ಬಗ್ಗೆ ಮಾತನಾಡುವಾಗ ಅಸ್ಪೃಶ್ಯತೆ ಆಚರಣೆ ಬಗ್ಗೆ ಮಾತನಾಡುವುದು. ನಾನು ಆ ಜನಾಂಗದಿಂದ ಬಂದವನಾಗಿ ಆ ನೋವನ್ನು ಕೊಡುವಂಥದ್ದು ಯಾವುದೇ ಊರಿನಲ್ಲಿ ಆಗಬಾರದು. ಸಾಮಾಜಿಕ ಬಹಿಷ್ಕಾರ ಹೊರಗಡೆ ಇಡುವಂತಹ ಕೆಲಸ ಅದು ಸರಿಯಲ್ಲ. ಮನೆಗಳಿಗೆ ಬೆಂಕಿ ಹಚ್ಚುವಂತಹ ಇವತ್ತಿಗೂ ಕೂಡ ನಡೆಯುತ್ತಿರುವಂಥದ್ದು ಪತ್ರಿಕೆಗಳಲ್ಲಿ ವರದಿಯಾಗುತ್ತಿದೆ.

**ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಇವತ್ತು ಯಾಕೋ ಸಭೆಯಲ್ಲಿ ಭಾವನಾತ್ಮಕ ಸಂಗತಿಗಳ ಬಗ್ಗೆ ಉಲ್ಲೇಖವಾಗುತ್ತಿದೆ. ಇವರು ಆ ಸಂಗತಿಯನ್ನು ಉಲ್ಲೇಖ ಮಾಡಬೇಕಾದರೆ, ನಾನು ಮತ್ತು ಡಾ|| ಶಿವಯೋಗಿಸ್ವಾಮಿಯವರು ಜರ್ಮನಿಗೆ ಹೋಗಿದ್ದೆವು. ಅಲ್ಲಿ ನಮಗೆ ಒಬ್ಬ ಅಲ್‌ಮಾರ್ ಜೋಸಫ್ ಎನ್ನುವಂತಹ ಹುಡುಗನ ಪರಿಚಯವಾಗಿತ್ತು. ಅವನ ಜೊತೆಯಲ್ಲಿ ಹೀಗೆ ಮಾತುಕತೆಯನ್ನು ಮಾಡುವಾಗ ಹೀಗೆ ತಿಳಿದುಕೊಂಡು ಭಾರತ ದೇಶಕ್ಕೆ ಬಂದು ಇಲ್ಲಿ ಹಿಂದಿ ಭಾಷೆಯನ್ನು ಕಲಿತುಕೊಂಡು ಪ್ರಾಕೃತ ಭಾಷೆಯಲ್ಲಿ ಇಂಡಲಾಜಿಯ ಬಗ್ಗೆ ಅವನು ಸಂಶೋಧನೆಯನ್ನು ಮಾಡುತ್ತಿದ್ದಾನೆ. ಪ್ರಾಕೃತ ಭಾಷೆಯಲ್ಲಿ Indology ಬಗ್ಗೆ ಆ ಹುಡುಗ ಸಂಶೋಧನೆ ಮಾಡುತ್ತಿದ್ದಾನೆ. ದೆಹಲಿಯಲ್ಲಿ 3-4 ವರ್ಷಗಳಿದ್ದ, ಬಿಹಾರದಲ್ಲಿ ಕೆಲಸ ಮಾಡುತ್ತಿದ್ದ. ನಿಮ್ಮ ದೇಶದಲ್ಲಿ ಎಲ್ಲವೂ ತುಂಬಾ ಚೆನ್ನಾಗಿದೆ, ನೀವು ನಮ್ಮ ದೇಶಕ್ಕೆ ಬಂದಾಗ ಎನನ್ನಿಸಿತು ಎಂದು ಆತನ ಹತ್ತಿರ ಕುತೂಹಲಕ್ಕಾಗಿ ಕೇಳಿದ್ದೆವು. ಆಗ ಆತ ಹೇಳಿದ, ನಿಮ್ಮ ದೇಶಕ್ಕೆ ಬಂದು ಮೊದಲು ದೆಹಲಿಯಲ್ಲಿ ಇಳಿದಾಗ it was chaotic and confused and I wanted to go back. ಆದರೆ ನಾನು ಯಾವುದೊ ಕಾರಣಕ್ಕೆ ಬಂದಿದ್ದೆ, ಎರಡು ವರ್ಷ ಓದಬೇಕಾಗಿತ್ತು... ನಂತರ ಆತ ತನ್ನ ಭಾವನೆಗಳನ್ನು

ಬದಲಾಯಿಸಕೊಂಡನಂತೆ, ಆತ ಹಿಂದಿಯನ್ನು ಕಲಿತುಕೊಂಡಿದ್ದ, ಆತ ಹಿಂದಿಯಲ್ಲಿ ಒಂದು ಮಾತನ್ನು ಹೇಳಿದ, "ಹಮಾರೆ ದೇಶಮೆ ಸಬ್‌ಕುಛ ಹೈ, we have all modern comforts. ಲೇಕಿನ್ ಆಪ್‌ಕೇ ದೇಶಮೆ ಭಾವ ಹೈ, ಓರ್ ಹಮಾರೆ ದೇಶಮೆ ಸಬ್‌ಕುಛ ಹೋನೆಕೆ ವಜಹಭೀ ಭಾವ ಕಾ ಅಭಾವ ಹೈ" ಎಂದು ಹೇಳಿದ. ಇದನ್ನು ನಾನು ಇಲ್ಲಿ ಏಕೆ ಉಲ್ಲೇಖ ಮಾಡಿದೆ ಎಂದರೆ, ಭಾವನಾತ್ಮಕ ಸಂಬಂಧಗಳೇ ನಮ್ಮ ದೇಶದ ಸಂಪತ್ತು ಎಂದು ನಾನು ಅಂದುಕೊಳ್ಳುತ್ತೇನೆ. ಜಾತಿ–ಮತ, ಭಾಷೆ–ಪ್ರಾಂತ್ಯ, ಮೇಲು–ಕೀಳು, ಸ್ಪೃಶ್ಯ–ಅಸ್ಪೃಶ್ಯ ಇವು 65 ವರ್ಷಗಳಾದರೂ ಹೋಗಲಾಡಿಸಲು ಆಗಿರಿವುದಿಲ್ಲ. ಒಬ್ಬ ದಲಿತ ಎನ್ನುವ ಕಾರಣಕ್ಕೆ ಸದಸ್ಯತ್ವ ಕೊಟ್ಟಿರುವುದಿಲ್ಲ ಎಂದರೆ ಇದಕ್ಕಿಂತ ದುಃಖದಾಯಕ ಸಂಗತಿ ಏನು ಆಗಲು ಸಾಧ್ಯ? ನಮ್ಮ ಸಂವಿಧಾನಕ್ಕೆ ಈ ಸಂಗತಿಗಳನ್ನು ಇನ್ನೂ ಹೋಗಲಾಡಿಸಲು ಆಗಿರುವುದಿಲ್ಲ. ದೆಹಲಿಯ ಶಾಸನ ಸಭೆಗಳಲ್ಲಿ, ನಾವು ರಾಜ್ಯದಲ್ಲಿ ದಿನನಿತ್ಯ ಭಾಷಣವನ್ನು ಮಾಡುತ್ತೇವೆ. ಆದರೆ ದಲಿತರ ಮೇಲೆ ದಿನನಿತ್ಯ ಅತ್ಯಾಚಾರ ನಡೆಯುತ್ತಲೇ ಇದೆ. ಅವರು ಹೇಳಿದ ಘಟನೆ ಕೇಳಿದಾಗ, ಆ ತಾಯಿಯ ಹಾಲು ಕುಡಿದ ಬೆಳೆದ ಗೌಡರು ಅನುಭವಿಸಿದ ಮಾತೃವಾತ್ಸಲ್ಯ, ಈ ಭಾವನೆಗಳೇ ಈ ದೇಶದ ಆಸ್ತಿ. ನಾವು ಹೊಸ ದೃಷ್ಟಿ ಕೋನವನ್ನು ಇಟ್ಟುಕೊಂಡು, ಹೊಸರೀತಿ ಆಲೋಚನೆ ಮಾಡಿಕೊಂಡು, ಸಂವಿಧಾನದ ಆಶಯವನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸುವಂತಹ ಕೆಲಸವನ್ನು ಯಾವತ್ತು ಪ್ರಾರಂಭ ಮಾಡುತ್ತೇವೆಯೋ ಅವತ್ತು ಈ ದೇಶ ಉದ್ಧಾರವಾಗುತ್ತದೆ. ಇಂತಹ ಘಟನೆಗಳು ಅಲ್ಲಿ–ಇಲ್ಲಿ ದೃಷ್ಟಾಂತವಾಗಬಾರದು, ಅದು ಜನ–ಜೀವನದಲ್ಲಿ, ಎಲ್ಲರ ಜೀವನದಲ್ಲಿ ಅನುಷ್ಠಾನವಾಗಬೇಕು. ಈ ಎಲ್ಲ ಸಂಗತಿಗಳನ್ನು ಉಲ್ಲೇಖ ಮಾಡುವಾಗ ಈ ಆಶಯವನ್ನು ವ್ಯಕ್ತಪಡಿಸುತ್ತೇವೆ ಎಂದು ನಾನು ಅಂದುಕೊಳ್ಳುತ್ತೇನೆ. ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಗಳೆ, ಈ ಎಲ್ಲ ದೌರ್ಜನ್ಯಗಳನ್ನು ತಡೆಗಟ್ಟಲು ನಮ್ಮಲ್ಲಿ Civil Rights Enforcement Cell ಇದೆ. ಇದು ಹಲ್ಲು ಇಲ್ಲದ ಹಾವು. ಇಲ್ಲಿ ಪೂರಕವಾದ ಸಿಬ್ಬಂದಿ ಇಲ್ಲ,

ಕಾನೂನನ್ನು ಜಾರಿಗೊಳಿಸಲು ಅಗತ್ಯವಾದ ಹಣವನ್ನು ಇದಕ್ಕೆ ಕೊಡುತ್ತಿಲ್ಲ. ತಾಲ್ಲೂಕು ಕೇಂದ್ರಗಳಲ್ಲಿ ಇದರ ಶಾಖೆಗಳು ಇಲ್ಲ, ಶಾಖೆ ಇದ್ದರೆ ವೈಎಸ್‌ಪಿ ಮಟ್ಟದ ಅಧಿಕಾರಿ ಇಲ್ಲ. ಈ ಸೆಲ್ ಅನ್ನು ಇವತ್ತು ಗಟ್ಟಿಗೊಳಿಸಬೇಕಾಗಿದೆ, ಕ್ರಿಯಾಶೀಲ ಮಾಡಬೇಕಾಗಿದೆ. ಈ ರೀತಿಯ ಸಂದರ್ಭಗಳು ಬರದೆ ಇರುವ ಹಾಗೆ ನೋಡಿಕೊಳ್ಳುವ ಸಲುವಾಗಿ ಕೌನ್ಸಲಿಂಗ್ ಕೂಡ ಅಗತ್ಯವಿದೆ. ಒಬ್ಬ ಶಾಸಕರಾದವರು, ಮಂತ್ರಿಯಾದವರು ಪ್ರತಿಯೊಂದು ಗ್ರಾಮದ ದಲಿತ ಮುಖಂಡರನ್ನು, ಸವರ್ಣೀಯರನ್ನು ಕರೆಯಿಸಿ ಕೌನ್ಸಿಲಿಂಗ್ ಮಾಡಬೇಕಾಗಿದೆ. ಈ ವಿಷಯವಾಗಿ ಈ ರೀತಿಯ ಕಾನೂನೂ ಇದೆ, ನೀವು ಕಾನೂನನ್ನು ಕೈಗೆತ್ತಿಕೊಂಡರೆ ನಿಮ್ಮನ್ನು ಜೈಲಿಗೆ ಕಳುಹಿಸಲಾಗುತ್ತದೆ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಅವರು ಮನುಷ್ಯರೇ, ಮನುಷ್ಯರಾಗಿ ಬದುಕಲು ಬಿಡಿ. ಸರ್ಕಾರದಿಂದ ಸ್ಥಾಪಿತವಾದ ಸಹಕಾರಿ ಸಂಘದಲ್ಲಿ ಅವರನ್ನು ಸೇರಿಸುವುದಿಲ್ಲ, ಅವರ ಹಾಲನ್ನು ತೆಗೆದುಕೊಳ್ಳುವುದಿಲ್ಲ ಎಂದರೆ ಇದಕ್ಕಿಂತ ಅಮಾನವೀಯ ಕೃತ್ಯ, ಇದಕ್ಕಿಂತ ತಾರತಮ್ಯ, ಇದಕ್ಕಿಂತ ದೊಡ್ಡ ಕಿರುಕುಳ, ಬೇರೆ ಇಲ್ಲವೆಂದು ಹೇಳಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಇದು ದೌರ್ಜನ್ಯ. ಇದು ದೌರ್ಜನ್ಯ ಕಾಯಿದೆಯಡಿಯಲ್ಲಿ ಬರುತ್ತದೆ. ಆ ಕಾನೂನು ಪ್ರಕಾರ ಕಿರುಕುಳ ನೀಡಿದವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೆ, ಮಾನ್ಯ ವೀರಯ್ಯನವರು ಮಾತನಾಡಬೇಕಾದರೆ ನನಗೆ ಒಂದು ಘಟನೆ ಜ್ಞಾಪಕಕ್ಕೆ ಬಂತು. ನಮ್ಮ ಅವರ ಸಂಬಂಧ ಹೇಗೆ ಇದೆ ಎಂದು ಮಾನ್ಯ ವೀರಯ್ಯನವರಿಗೆ ಗೊತ್ತಿದೆ. ನಾನು ತುಂಬಾ ಚಿಕ್ಕ ಹುಡುಗನಾಗಿದ್ದಾಗ ನಮ್ಮ ಊರಿನಲ್ಲಿ ಊರಿನ ಎಲ್ಲ ದನಗಳನ್ನು ಒಂದು ಕಡೆ ಸೇರಿಸಿ ಅವುಗಳನ್ನು ಕಾಯಲು ಒಬ್ಬನನ್ನು ಇಡಲಾಗುತ್ತಿತ್ತು. ಆ ದನ ಕಾಯುತ್ತಿದವನು ಬಜ್ಜಪ್ಪ ಎಂದು ದಲಿತ ಮನುಷ್ಯ. ನನ್ನ ತಂದೆ ಊರಿಗೆ ಪಟೇಲರು ಮತ್ತು ಛೇರ್ಮನ್‌ರು. ಆ ಬಜ್ಜಪ್ಪ ದಿನಾ ಎಲ್ಲಾ ದನಗಳನ್ನು ಹಾಯಿಸಿಕೊಂಡು ಸಾಯಂಕಾಲ ಅವುಗಳನ್ನು ಮನೆಗಳಿಗೆ ಬಿಟ್ಟು ನಮ್ಮ ಮನೆ ಹತ್ತಿರ ಬಂದು

ಮಾತನಾಡಿಕೊಂಡು ಹೋಗುತ್ತಿದ್ದ. ನಾನು ಚಿಕ್ಕವನಾಗಿದ್ದಾಗ ಒಂದು ಮಂಕ್ರಿಯನ್ನು ತೆಗೆದುಕೊಂಡು ಸಗಣೆಯನ್ನು ಗೂಡು ಹಾಕಲು ಅವರ ಜೊತೆಯಲ್ಲಿ ಹೋಗುತ್ತಿದ್ದೆ. ಅವನು ಪ್ರತಿದಿನ ನನಗೆ ಹಸುಗಳ ಹಾಲನ್ನು ಕರೆದು ಕುಡಿಸಿ, ನನ್ನ ಬಟ್ಟೆಗಳನ್ನು ಬಿಚ್ಚಿ ಕೆರೆಯ ಕೆಸರನ್ನು ಪೂರ್ತಿಯಾಗಿ ಬಳಿಯುತ್ತಿದ್ದನು, ನಂತರ ಸಾಯಂಕಾಲ ಬರುವಾಗ ನನ್ನನು ಕೆರೆಕುಂಟೆಯಲ್ಲಿ ಮುಳುಗಿಸಿ ಕ್ಲೀನ್ ಮಾಡಿ ಬಟ್ಟೆ ಹಾಕಿಸಿ ಮನೆಗೆ ಕರೆದುಕೊಂಡು ಬರುತ್ತಿದ. ಇವತ್ತು ಆತ ಇದ್ದಾನೆ. ಅವನಿಗೆ 8 ಜನ ಗಂಡುಮಕ್ಕಳು, 3 ಜನ ಹೆಣ್ಣುಮಕ್ಕಳು. ನನ್ನನ್ನು ಅವರ ಮಗನಿಗಿಂತ ಹೆಚ್ಚಾಗಿ ಪ್ರೀತಿ ಮಾಡಿದರು. 2006ರಲ್ಲಿ ನಾನು ಎಂಎಲ್‌ಸಿಯಾಗಿ ಊರಿಗೆ ಹೋದಾಗ, ನಾನು ಚಿಕ್ಕವನಾಗಿದ್ದಾಗ ಯಾವ ರೀತಿ ಎತ್ತಿಕೊಂಡು ಭುಜದ ಮೇಲೆ ಕೂಡಿಸಿಕೊಳ್ಳುತ್ತಿದ್ದ, ಅದೇ ರೀತಿ ಅವತ್ತು ಎತ್ತಿಕೊಂಡು ಭುಜದ ಮೇಲೆ ಕೂಡಿಸಿಕೊಂಡ. ನನ್ನ ಹುಡುಗ ಎಂಎಲ್‌ಸಿಯಾಗಿದ್ದಾನೆ ಎನ್ನುವ ಅಭಿಮಾನ ಅವನಿಗೆ. ಆಗ ಆತ ನನಗೆ ಒಂದು ಮಾತನ್ನು ಹೇಳಿದ, 'ನೋಡಪ್ಪ, ನನಗೆ ಏನು ಬೇಡ. ಒಂದು ಸೈಕಲ್ ಕೊಡಿಸು ಸಾಕು' ಎಂದು. ನಮ್ಮ ಹೊಲದ ಪಕ್ಕದಲ್ಲಿಯೇ ಅವರ ಹೊಲ. ಈಗ ಆತನಿಗೆ 85–90 ರಷ್ಟು ವಯಸ್ಸು. ಆದ್ದರಿಂದ ಮನೆಯಲ್ಲಿ ಹೊಲಕ್ಕೆ ನಡೆದುಕೊಂಡು ಹೋಗಲು ಆಗುವುದಿಲ್ಲ ಒಂದು ಸೈಕಲ್ ಕೊಡಿಸು ಎಂದ, ಅವನಿಗೆ ಸೈಕಲ್ ಕೊಡಿಸಿದೆ. ಮತ್ತೆ ಮೊನ್ನೆ ಗೆದ್ದು ಊರಿಗೆ ಹೋದಾಗ ನನ್ನ ಜನಾಂಗ ಅವನಷ್ಟು ಖುಷಿಪಡಲಿಲ್ಲ. ಆ ಬಚ್ಚಪ್ಪನ ಎಂಟು ಜನ ಮಕ್ಕಳೇ ಊರೆಲ್ಲ ಹೂ ಹಾಕಿ, ನನಗೆ ಹಾರ–ತುರಾಯಿ ಹಾಕಿ ಊರಿನ ತುಂಬಾ ಮೆರವಣಿಗೆ ಮಾಡಿ ಮೊದಲು ಅವರ ಮನೆಗೆ ಕರೆದುಕೊಂಡು ಹೋಗಿ ನಂತರ ನಮ್ಮ ಮನೆಗೆ ತಂದು ಬಿಟ್ಟರು. ನಾನು ಏಕೆ ಈ ಮಾತನ್ನು ಹೇಳುತ್ತೇನೆ ಎಂದರೆ, ಮನುಷ್ಯನಿಗೆ ಮಾನವೀಯತೆ ಬಹಳ ಮುಖ್ಯ. ಹುಟ್ಟು ಆಕಸ್ಮಿಕ, ಸಾವು ನಿಶ್ಚಿತ. ಹುಟ್ಟುವಾಗ ಯಾವ ಜಾತಿ, ಏನು ಜಾತಿ ಎನ್ನುವುದು ಗೊತ್ತಾಗುವುದಿಲ್ಲ. ಕಟ್ಟಕಡೆಯ ದಟ್ಟ ದರಿದ್ರ ಜನರು ಯಾರು ಇದ್ದಾರೆ ಅವರನ್ನು ಇವತ್ತು ವಿಶೇಷವಾಗಿ ನೋಡುವ ಹಂಬಲ ನಮಗೆ ಇದೆ. ನೋಡಬೇಕಾಗುತ್ತದೆ. ಕಾನೂನನ್ನು ಮುಂದೆ

ಇಟ್ಟುಕೊಂಡು ನೋಡುವುದು ಅಲ್ಲ. ಒಬ್ಬ ಮನುಷ್ಯನಾಗಿ ನೋಡಬೇಕು. ಮನುಷ್ಯ ಮನುಷ್ಯರನ್ನು ಮನುಷ್ಯರನ್ನಾಗಿ ನೋಡುವ ಪ್ರಕ್ರಿಯೆ ಈ ಭಾರತ ದೇಶದಲ್ಲಿ ಎಲ್ಲಿಯವರೆಗೆ ಬರುವುದಿಲ್ಲ ಅಲ್ಲಿಯವರೆಗೆ ಈ ಕಾನೂನುಗಳು ಏನು ಮಾಡಲು ಸಾಧ್ಯವಿಲ್ಲ. ಈ ಕಾನೂನಿನ ಚೌಕಟ್ಟನ್ನು ಮೀರಿ ನಾವೆಲ್ಲರೂ ಮನುಷ್ಯರಾಗಿ ಬದುಕಬೇಕಾದರೆ ಎಲ್ಲವನ್ನು ಸಮಾನವಾಗಿ ನೋಡಬೇಕಾಗುತ್ತದೆ. ಎಲ್ಲರು ಗಮನಿಸಿರಬಹುದು, ಬಡವರ ಮನೆ ಮದುವೆಗೆ ಹೋದರೆ ಅವರು ಎಷ್ಟು ಖುಷಿಪಡುತ್ತಾರೆ. ಶ್ರೀಕೃಷ್ಣ ಕುಚೇಲನ ಮನೆಗೆ ಬಂದಾಗ ಆ ಕುಚೇಲ ಎಷ್ಟು ಖುಷಿಪಟ್ಟನು. ಆ ದೊಡ್ಡಪ್ರಮಾಣದಲ್ಲಿ ಖುಷಿಪಡುತ್ತಾರೆ. ಆ ಬಡವ, ನಿರ್ಗತಿಕ, ದಲಿತರನ್ನು ಪ್ರೀತಿ ಮಾಡಿದಾಗ ಬದುಕಿಗೆ ಒಂದು ಅರ್ಥ ಬರುತ್ತದೆ. ಆದರೆ ಇಷ್ಟು ವರ್ಷವಾದರೂ ಇಂತಹ ಸಣ್ಣ–ಪುಟ್ಟ ವಿಷಯಗಳನ್ನು ಇಟ್ಟುಕೊಂಡು ಒಂದು ಸೊಸೈಟಿಯಲ್ಲಿ ಸದಸ್ಯತ್ವನ್ನು ಕೊಡುತ್ತಿಲ್ಲ, ಮನೆಯಲ್ಲಿ ಇವತ್ತು ಬಿಟ್ಟುಕೊಡುವುದಿಲ್ಲ. ಇನ್ನೊಂದು ಘಟನೆಯನ್ನು ನಾನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಮಾನ್ಯ ಕೆ.ಹೆಚ್. ಮುನಿಯಪ್ಪನವರು 1991ರಲ್ಲಿ ಟಿಕೆಟ್ ತೆಗೆದುಕೊಂಡು ಊರಿಗೆ ಬಂದರು, ಅವರು ನನಗೆ ಬಹಳ ಹಳೆಯ ಸ್ನೇಹಿತರು, ಅವರನ್ನು ನಾನು ನಮ್ಮ ಮನೆ ಒಳಗೆ ಕರೆದುಕೊಂಡು ಹೋಗಿ ಹಾಲ್‌ನಲ್ಲಿ ಕೂಡಿಸಿ ಎಲ್ಲರನ್ನು ಕರೆದು ಇವರು ಕೆ.ಹೆಚ್. ಮುನಿಯಪ್ಪ ಎಂದು ಇವರಿಗೆ ಕಾಂಗ್ರೆಸ್‌ನಿಂದ ಟಿಕೆಟ್ ಕೊಟ್ಟಿದ್ದಾರೆ, ಎಲ್ಲರೂ ಇವರಿಗೆ ಓಟು ಹಾಕಬೇಕು ಎಂದು ಪರಿಚಯ ಮಾಡಿಸಿದೆ. ಕೆ.ಹೆಚ್. ಮುನಿಯಪ್ಪನವರು ಇರುವವರೆಗೆ ಆ ಊರಿನವರು ಸುಮ್ಮನೆ ಇದ್ದರು. ಅವರು ಊರಿನಿಂದ ಆಚೆ ಹೋದ ಮೇಲೆ ನಮ್ಮ ಊರಿನ ಎಲ್ಲ ಜನರು ನಮ್ಮ ಮೇಲೆ ಜಗಳಕ್ಕೆ ಬಂದರು. 'ಏನಪ್ಪ, ನಿನಗೆ ಬುದ್ಧಿ ಇದ್ದೆಯಾ? ನಾಲ್ಕು ಅಕ್ಷರ ಓದಿ ಬೆಂಗಳೂರಿಗೆ ಹೋಗಿದ್ದೀಯಾ, ಅಲ್ಲಿ ಲೆಕ್ಚರರ್ ಆಗಿದ್ದೀಯಾ, ಇಲ್ಲಿ ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ. ಕರೆದುಕೊಂಡು ಬಂದು ಮನೆಯೊಳಗೆ ಕೂಡಿಸುತ್ತಿಯಾ' ಎಂದು ಅಂದರು. ಏಕೆಂದರೆ ಇದಕ್ಕೆ ಒಂದು ಕಾರಣವಿದೆ. ಮಾನ್ಯ ಎನ್. ರಾಚಯ್ಯ ಮಂತ್ರಿಗಳಾಗಿದ್ದರು. ಅವರು ನಮ್ಮ ಊರಿನ ಹತ್ತಿರ

ಒಂದು ಬಾವಿ ಇದೆ ಅಲ್ಲಿಗೆ ದಲಿತರನ್ನು ಕರೆದುಕೊಂಡು ಬಾವಿಯಿಂದ ನೀರು ಸೇದಿಸಿದ್ದರು. ನಿಮಗೆ ಗೊತ್ತು, ಮೊದಲು ದಲಿತರಿಗೆ ಬಾವಿ ನೀರನ್ನು ಸೇದಲು ಬಿಡುತ್ತಿರಲಿಲ್ಲ.

**ಶ್ರೀ ಎಂ.ಆರ್.ಹುಲಿನಾಯ್ಕರ್:-** ಮಾನ್ಯ ಸಭಾಪತಿಗಳೆ, ಪದೇ-ಪದೇ ಆ ಶಬ್ದವನ್ನು ಬಳಸಿ ಅವಮಾನ ಮಾಡುವುದು ಬೇಡ. ಇಂತಹ ವಿಷಯಗಳನ್ನು ಇಲ್ಲಿ ಮಾತನಾಡಲೇಬಾರದು. ಈಗ ಏನು ಘಟನೆ ನಡೆದಿದೆ ಅದರ ಬಗ್ಗೆ ಮಾತ್ರ ಹೇಳಬೇಕು. ಈ ಮಾತುಗಳೆಲ್ಲ ಅಸಹ್ಯ ಮಾಡುವ ರೀತಿಯಲ್ಲಿ ಅಷ್ಟೆ. ಆದ್ದರಿಂದ ಇಲ್ಲಿ ಹೇಳಲೆಬಾರದು. ಮತ್ತೆ ರಿಪೀಟ್ ಮಾಡಬೇಡಿ.

**ಶ್ರೀ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೆ, ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ನಮಗೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಇಂತಹ ಘಟನೆಗಳು ನಡೆಯುತ್ತಿವೆ. ಇದನ್ನು ಒಕ್ಕೊರಲಿನಿಂದ, ಪಕ್ಷಾತೀತವಾಗಿ, ಒಬ್ಬ ಮನುಷ್ಯರಾಗಿ ಖಂಡಿಸಲೇಬೇಕಾಗುತ್ತದೆ. ಈಗ 25ನೇ ತಾರೀಖಿನವರೆಗೆ ಸಮಯವನ್ನು ಕೊಡಲಾಗಿದೆ. ಅಷ್ಟರ ಒಳಗೆ ಸದಸ್ಯತ್ವವನ್ನು ಕೊಡದೆ ಇದ್ದರೆ, ಆ ಸೊಸೈಟಿಯನ್ನು ರದ್ದು ಮಾಡುವುದು ಅಷ್ಟೇ ಅಲ್ಲ, ಇದಕ್ಕೆ ಯಾರು ಕಾರಣರಾಗಿದ್ದಾರೆ ಅವರನ್ನು ಪತ್ತೆ ಹಚ್ಚಿ ವಿಶೇಷವಾದ ಉಗ್ರ ಶಿಕ್ಷೆಯನ್ನು ಕೊಡುವುದರ ಮುಖಾಂತರ ಸಮಾಜದಲ್ಲಿ ಮತ್ತೆ ಈ ರೀತಿಯ ಘಟನೆಗಳು ಮರುಕಳಿಸಬಾರದು ಎನ್ನುವ ನಿಟ್ಟಿನಲ್ಲಿ ತಾವು ನಿರ್ದೇಶನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರು ಮಾತನಾಡಿದ್ದರಲ್ಲಿ ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ. ಎನ್ನುವ ಪದವನ್ನು ಕಡತದಿಂದ ತೆಗೆದುಹಾಕಬೇಕು. ಆ ಪದದ ಬಳಕೆಯನ್ನು ಮಾಡಬಾರದೆಂದು

ಕಾನೂನನ್ನು ಮಾಡಲಾಗಿದೆ. ಅದು ಕೂಡ un-touchability practice ಗೆ ಒಂದು ದಾರಿಯಾಗುತ್ತದೆ.

**ಸಭಾಪತಿಯವರು:–** ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ. ಎನ್ನುವ ಪದವನ್ನು ಕಡತದಿಂದ ತೆಗೆದುಹಾಕಲಾಗುವುದು. ನಾನು ಆಗಲೇ ಈ ಮಾತನ್ನು ಹೇಳುವವನಿದ್ದೆನು. ತಾವು ನೆನಪು ಮಾಡಿದ್ದು ಒಳ್ಳೆಯದಾಯಿತು. ನಮ್ಮಲ್ಲಿ ಆ ಪದವನ್ನು ಬಳಸಬಾರದೆನ್ನುವ ಕಾನೂನು ಇರುವ ಕಾರಣಕ್ಕಾಗಿ ಆ ಪದದ ಬಳಕೆ ಬೇಡ. ಪ್ರಾಸಂಗಿಕವಾಗಿ ಆ ಪದ ಬಂದಿದ್ದರೂ ಸಹ ಅದರ ಬಳಕೆ ಬೇಡ. ಮಾಧ್ಯಮಮಿತ್ರರು ಕೂಡ ಇದನ್ನು ಗಮನಿಸಬೇಕು.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಗಳೇ, ಬಸವಣ್ಣನವರು 'ಹೊಲಸು ತಿನ್ನುವವರೆಲ್ಲ ಹೊಲೆಯರು' ಎಂದು ಹೇಳಿದ್ದರು. ಆದರೆ ಈ ಹೊಲಸನ್ನು ಕೇವಲ ಪರಿಶಿಷ್ಟ ಜಾತಿಯವರ ಮೇಲೆ ಹಾಕಲಾಗಿದೆ. It applies to every body. ಮೀನು, ಮಾಂಸ, ಕೋಳಿ, ಏಡಿ ಎಲ್ಲ ತಿನ್ನುವವರೆಲ್ಲರೂ ಹೊಲಸು ಎಂದು ಈಗ ಮಾಡಿದ್ದಾರೆ.

**ಶ್ರೀ ಸಿದ್ದರಾಜು:–** ಮಾನ್ಯ ಸಭಾಪತಿಗಳೇ, ತಿನ್ನುವ ಆಹಾರ ಏನೇ ಆದರೂ ಸಹ ಹೊಲಸಾಗುವುದಿಲ್ಲ.

**ಶ್ರೀ ಅಶ್ವಥ ನಾರಾಯಣ:–** ಮಾನ್ಯ ಸಭಾಪತಿಗಳೇ, ಡೈರಿಗೆ ಹಾಲನ್ನು ಹಾಕಿಸಿಕೊಳ್ಳದೇ ದಲಿತರನ್ನು ಬಹಿಷ್ಕಾರ ಹಾಕಿರುವುದು ಹೊಲಸು.

**ಶ್ರೀ ಎಸ್.ಆರ್.ಪಾಟೀಲ್:–** ಲಂಚವನ್ನು ತಿನ್ನುವುದು ಹೊಲಸು.

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಈ ವಿಷಯ ಪ್ರಸ್ತಾಪ ಆದಾಗ ಮಾನ್ಯ ಸದಸ್ಯರುಗಳು ಈ ಶಬ್ದದ ಬಳಕೆಯನ್ನು ಮಾಡಿರುವ ಹಿನ್ನಲೆಯಲ್ಲಿ ಕೆಲವೊಂದು ವಿಚಾರವನ್ನು ಇಲ್ಲಿ ಹೇಳಬಯಸುತ್ತೇನೆ. ಬಸವಣ್ಣವನರು ಹೇಳಿದ್ದು ಏನೆಂದರೆ;

**"ಕೊಲುವವನೆ ಮಾದಿಗ**

**ಹೊಲಸು ತಿಂಬವನೆ ಹೊಲೆಯ,**

**ಕುಲವೇನು ಅವನಂದಿರ ಕುಲವೇನು?**

**ಸಕಲ ಜೀವಾತ್ಮರಿಗೆ ಲೇಸನೆ ಬಯಸುವ**

**ನಮ್ಮ ಕೂಡಲಸಂಗಮದೇವ."**

ಕೊಲುವವನೆ ಮಾದಿಗ ಎಂದರೆ ನಾವು ಈ ಜಗತ್ತಿಗೆ ಬಂದ ಮೇಲೆ ಯಾರು ಸತ್ಯ, ನ್ಯಾಯವನ್ನು, ಧರ್ಮವನ್ನು ಸಾಯಿಸುತ್ತಾರೆ ಅವರು ನನ್ನ ದೃಷ್ಟಿಯಲ್ಲಿ ಹೊಲೆಯರು ಎನ್ನುವ ಅರ್ಥದಲ್ಲಿ ಹೇಳಿದ್ದಾರೆ. ಕೊಲುವವನೆ ಮಾದಿಗ ಎಂದರೆ ಸತ್ಯವನ್ನು ಸಾಯಿಸುವವರು, ಧರ್ಮವನ್ನು ನ್ಯಾಯವನ್ನು ಸಾಯಿಸುವಂತಹವರು.

**ಶ್ರೀಮತಿ ಮೋಟಮ್ಮ:-** ನಾನು ಹೇಳುವುದೇನೆಂದರೆ ಆ ಪಟ್ಟವನ್ನು ದಲಿತರಿಗೆ ಕಟ್ಟಿದ್ದಾರೆ.

**ಶ್ರೀ ಸಿ.ಹೆಚ್.ವಿಜಯ ಶಂಕರ:-** ಮಾನ್ಯ ಸಭಾಪತಿಗಳೇ, ಹೊಲಸು ತಿನ್ನುವವನೆ ಹೊಲೆಯ ಎಂದರೆ ಯಾರು ಹೊಲಸನ್ನು ಮಾತನಾಡುತ್ತಾರೆ ಅವರು ಲೌಕಿಕವಾಗಿ ಹೊಲೆಯರು ಎಂದರ್ಥ. ಕುಲವೇನು ಅವರ ಕುಲವೇನು ಎಂದರೆ ಯಾರು ಹುಟ್ಟುತ್ತಲೇ ಲೌಕಿಕವಾಗಿ ಯಾರು ಹೊಲೆಯರು ಅಲ್ಲ ಮಾದಿಗರೂ ಅಲ್ಲ. ಯಾರ ಮನಸ್ಸಿನಲ್ಲಿ ಕೊಳೆ ಇದೆ ಹೊಲಸು ಇದೆ, ಅವರು ಮಾತ್ರ ಹೊಲೆಯರು ಎಂದು ಹೇಳುತ್ತಿದ್ದಾರೆ. ಕೊನೆಯಲ್ಲಿ ಬಸವಣ್ಣನವರು ಸಕಲ ಜೀವಿಗಳಿಗೆ ಯಾರು ಒಳ್ಳೆಯದನ್ನು ಬಯಸುತ್ತಾರೆ ಅವರು ಮಾತ್ರ ಮಾನವರು ಎನ್ನುವ ಮಾತನ್ನು ಹೇಳುತ್ತಾರೆ.

**ಶ್ರೀ ಸಿದ್ದರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಮೊದಲಿಗೆ ವಿಶೇಷವಾಗಿ ಸಹಕಾರ ಕ್ಷೇತ್ರದಲ್ಲಿ ಯಾವುದೇ ವ್ಯಕ್ತಿ ಸದಸ್ಯತ್ವವನ್ನು ಪಡೆಯಲಿಕ್ಕೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿರಬೇಕೆನ್ನುವ ಮೀಸಲಾತಿ ಇರಲಿಲ್ಲ. ಕಳೆದ ಹಲವಾರು ವರ್ಷಗಳ ಹಿಂದೆ ಪರಿಶಿಷ್ಟ ಜಾತಿ

ಮತ್ತು ಪರಿಶಿಷ್ಟ ಪಂಗಡಗಳ ಜನಾಂಗದವರು ಸಹ ಸಹಕಾರ ಕ್ಷೇತ್ರದಲ್ಲಿ ಪಾಲ್ಗೊಳ್ಳಬೇಕು, ತನ್ಮೂಲಕ ಅವರ ಆರ್ಥಿಕ, ಸಾಮಾಜಿಕ ಸ್ಥಿತಿಯ ವೃದ್ಧಿಯಾಗಬೇಕೆನ್ನುವ ಕಾರಣಕ್ಕಾಗಿ ಸದಸ್ಯತ್ವವನ್ನು ಪಡೆಯಲಿಕ್ಕೆ ಕಾನೂನಿನಲ್ಲಿ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಇದರಲ್ಲಿ ಗಮನಿಸಬೇಕಾದ ಅಂಶ ಏನೆಂದರೆ ಸಹಕಾರಿ ಕ್ಷೇತ್ರಗಳಲ್ಲಿ ಇರತಕ್ಕ ತಾಲ್ಲೂಕು ಹಾಗೂ ಜಿಲ್ಲಾಮಟ್ಟದ ಸಂಘಗಳಲ್ಲಿ ಕೆಲವೇ ಪಟ್ಟಾಭದ್ರಾ ಹಿತಾಸಕ್ತಿಗಳು ಅವರ ಕಪಿಮುಷ್ಠಿಯಲ್ಲಿಯೇ ಇವುಗಳ ಆಡಳಿತವನ್ನು ನಡೆಸುತ್ತಿದ್ದಾರೆ. ನನ್ನ ಒಂದು ಪ್ರಶ್ನೆ ಏನೆಂದರೆ ಇದಕ್ಕೆ ಕಾನೂನಿನಲ್ಲಿ ಏನಾದರೂ ತಿದ್ದುಪಡಿಯನ್ನು ತಂದು ಅಧ್ಯಕ್ಷ ಅಥವಾ ಉಪಾಧ್ಯಕ್ಷರ ಒಂದು ಅವಧಿಗೆ ಅಧಿಕಾರ ನೀಡಬೇಕು. ಏಕೆಂದರೆ ಈ ಜನಾಂಗಕ್ಕೆ ಆತ್ಮವಿಶ್ವಾಸ ಬರಬೇಕು. ನನ್ನ ಜನಾಂಗದ ಒಬ್ಬ ವ್ಯಕ್ತಿ ಆ ತಾಲ್ಲೂಕಿನ ಅಥವಾ ಜಿಲ್ಲಾ ಸಮಿತಿಯ ಅಧ್ಯಕ್ಷನಾಗಿದ್ದಾನೆ ನಾನು ಈ ರೀತಿಯ ಚಟುವಟಿಕೆಯಲ್ಲಿ ಪಾಲ್ಗೊಳ್ಳಬೇಕೆನ್ನುವ ಆತ್ಮವಿಶ್ವಾಸ ಬರಬೇಕೆಂದರೆ ಅವರ ಸಮಾಜದ ಒಬ್ಬ ವ್ಯಕ್ತಿಯೇ ಅಲ್ಲಿನ ಮುಖ್ಯ ಸ್ಥಾನವನ್ನು ಅಲಂಕರಿಸಬೇಕು. ಈ ಸಂದರ್ಭದಲ್ಲಿ ನಾನು ಸರ್ಕಾರ ಈ ಬಗ್ಗೆ ಚಿಂತನೆಯನ್ನು ಮಾಡಬಹುದೇ ಎನ್ನುವ ಪ್ರಶ್ನೆಯನ್ನು ಕೇಳಬಯಸುತ್ತೇನೆ. ಸಹಕಾರ ಒಂದು ತಾಲ್ಲೂಕಿನಲ್ಲಿ TAPCMS ಇರಬಹುದು, ಕೃಷಿ ಉತ್ಪನ್ನ ಮಾರುಕಟ್ಟೆ ನಿಗಮ ಆಗಿರಬಹುದು, ಹಾಲು ಉತ್ಪಾದಕರ ಸಹಕಾರ ಸಂಘಗಳಿರಬಹುದು, ಹೀಗೆ ಸಹಕಾರದ ತತ್ವದಡಿಯಲ್ಲಿ ಬರುವ ಎಲ್ಲಾ ತಾಲ್ಲೂಕು ಮತ್ತು ಜಿಲ್ಲಾಮಟ್ಟದ ಸಹಕಾರ ಸಂಘದಲ್ಲಿ ಒಂದು ಅವಧಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಅವಕಾಶ ನೀಡಲಿಕ್ಕೆ ಆಗುವುದೇ? ಇದರಿಂದ ನಮ್ಮ ಮೂಲಕ ಮುಂದಿನ ದಿನಮಾನಗಳಲ್ಲಿ ಈ ಪದ್ಧತಿಯನ್ನು ತಡೆಗಟ್ಟುವ ಕೆಲಸವನ್ನು ಸಾಧ್ಯವಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ಆ ನಿಟ್ಟಿನಲ್ಲಿ ಸರ್ಕಾರ ಚಿಂತನೆಯನ್ನು ಮಾಡಬೇಕು ಎಂದು ಹೇಳಿ ಈ ಒಂದು ಸಂದರ್ಭದಲ್ಲಿ ನಾಲ್ಕು ಮಾತುಗಳನ್ನು ಆಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಗಳೇ, ಜನವರಿ ತಿಂಗಳಿನಿಂದಲೇ ಸಂಬಂಧಪಟ್ಟ ಅಧಿಕಾರಿಗಳೆಲ್ಲರೂ ಇವರಿಗೆ ಸದಸ್ಯತ್ವವನ್ನು ನೀಡಬೇಕೆನ್ನುವ ನಿರ್ದೇಶನವನ್ನು ನೀಡಿದ್ದಾರೆ. ಈ ಸಹಕಾರ ಸಂಘದವರು ಸರ್ಕಾರದ ನಿರ್ದೇಶನವನ್ನು ಮೀರಿ ನಡೆದಾಗ ಈ ಸಂಘವನ್ನು ದಲಿತರಿಗೆ ಏಕೆ ನೀಡಬಾರದು? ಜನವರಿಯಿಂದ ಇಲ್ಲಿಯವರೆಗೆ ಎಷ್ಟು ದಿವಸಗಳಾಗಿವೆ? ಸಚಿವರ ಮಾತನ್ನು ಕೂಡ ಕೇಳಿಲ್ಲ, ಇದಕ್ಕೆ ಕಾರಣವೇನು? ಈಗ ಈ ವಿಚಾರದಲ್ಲಿ ಕಾನೂನು ಇದೆಯೋ ಇಲ್ಲವೋ ಅದು ಎರಡನೆಯ ವಿಚಾರ. ನೀವು ಇದೊಂದು ಮಾದರಿಯ ಕೆಲಸವನ್ನು ಮಾಡಿ, ಇರುವ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ, ಅದರ ಆಡಳಿತವನ್ನು ದಲಿತರ ಕೈಯಲ್ಲಿ ಕೊಡಿ ಮುಂದೆ ಏನಾಗುತ್ತದೋ ನೋಡೋಣ. ಈ ಕೆಲಸವನ್ನು ಸರ್ಕಾರ ತಕ್ಷಣ ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

**ಡಾ॥ ಎಂ.ಆರ್.ಹುಲಿನಾಯ್ಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಇವತ್ತು ಚನ್ನಪಟ್ಟಣ ತಾಲ್ಲೂಕಿನ ಚಿಕ್ಕರೆಯ ಸಹಕಾರ ಸಂಘದಲ್ಲಿ ದಲಿತರಿಗೆ ಸದಸ್ಯತ್ವವನ್ನು ನೀಡಿದಿರುವುದನ್ನು ಕೇಳಿ ಬಹಳ ದುಃಖ ಆಗುತ್ತಿದೆ. ನಿಜವಾಗಿ ನಾವು ಇದನ್ನು ಖಂಡಿಸಬೇಕು. ಬಹಳಷ್ಟು ಜನರು ತಮ್ಮ ಸಂಬಂಧಗಳನ್ನು ಹೇಳಿಕೊಂಡು ಹಿಂದಿನವರಿಗೆ ಅವಮಾನ ಮಾಡುವ ರೀತಿಯಲ್ಲಿ ಮಾತನಾಡುವುದನ್ನು ನಾವು ಸಹಿಸಬಾರದು. ಆ ರೀತಿಯ ಉದಾಹರಣೆಗಳನ್ನು ಸಹ ನೀಡಬಾರದು. ಎರಡನೆಯದಾಗಿ ವಿಶ್ವನಾಥ್‌ರವರು ಸಹಕಾರಿ ಇಲಾಖೆಯ ಸಚಿವರಾದಾಗ ಯಾವ ರೀತಿಯಲ್ಲಿ ಜಿಲ್ಲಾಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮಪಂಚಾಯಿತಿಗಳ ಮೀಸಲಾತಿಯನ್ನು ತರಲಾಯಿತು ಹಾಗೆಯೇ ಸಹಕಾರಿ ಕ್ಷೇತ್ರದಲ್ಲೂ ಕೂಡ ಮೀಸಲಾತಿಯನ್ನು ತರಬೇಕೆನ್ನುವ ಒಂದು ಹೋರಾಟ ನಡೆಯಿತು. ಅನೇಕ ಕಾರಣಗಳಿಂದ ಇಲ್ಲಿಯವರೆಗೆ ಆ ಕೆಲಸ ಆಗಲಿಲ್ಲ. ಈಗಲಾದರೂ ಈಗಿನ ಘನ ಸರ್ಕಾರ ಮತ್ತು ಸಹಕಾರ ಸಚಿವರು ಆಸಕ್ತಿಯನ್ನು ವಹಿಸಿ ಯಾವ ರೀತಿಯಲ್ಲಿ ಜಿಲ್ಲಾಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮಪಂಚಾಯಿತಿಗಳ ಮೀಸಲಾತಿಯನ್ನು ತರಲಾಯಿತು ಹಾಗೆಯೇ ಸಹಕಾರಿ ಕ್ಷೇತ್ರದಲ್ಲೂ ಕೂಡ

ಮೀಸಲಾತಿಯನ್ನು ತಂದು ಈ ಜನಾಂಗಗಳಿಗೆ ಕೇವಲ ಸದಸ್ಯತ್ವವನ್ನು ನೀಡುವುದಲ್ಲ, ಅವರು ಸಹ ಸಂಘದ ಪದಾಧಿಕಾರಿಗಳ ಹುದ್ದೆಯ ಚುನಾವಣೆಗಳಿಗೆ ಭಾಗವಹಿಸಿ, ಅಧ್ಯಕ್ಷ ಅಥವಾ ಉಪಾಧ್ಯಕ್ಷ ಹುದ್ದೆಗಳಿಗೆ ಆಯ್ಕೆಯಾಗುವ ಹಾಗೆ ತಿದ್ದುಪಡಿಗಳನ್ನು ರೂಪಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, ಕೊನೆಗೂ ನನಗೆ ಮಾತನಾಡಲು ಅವಕಾಶ ಸಿಕ್ಕಿದೆ. ಈ ಧನವಿನಿಯೋಗ ವಿಧೇಯಕ ಬರುವ ತನಕ ನಮ್ಮನ್ನು ಕೂರಿಸುತ್ತಾರೆನ್ನುವುದು ನಮಗೆ ಅರ್ಥವಾಗಿದೆ.

**ಶ್ರೀ ವಿ. ಸೋಮಣ್ಣ:-** ನಾವು ಇಲ್ಲಿ ಎದ್ದರೆ ಕಷ್ಟ, ಕುಳಿತರೆ ಕಷ್ಟ ಎಂದರೆ ಮಾನ್ಯ ಸಭಾಪತಿಗಳು ಯಾವಾಗಲೂ ಕುಳಿತೇ ಇರುತ್ತಾರೆ ಅವರಿಗೆ ಹೇಗಾಗಬಹುದು?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರಿಗೆ ಅಷ್ಟು ಶಕ್ತಿ ಇದೆ.

**ಶ್ರೀ ಬಸವರಾಜ ಹೊರಟ್ಟಿ:-** ಸೋಮಣ್ಣನವರನ್ನು ಸಭಾ ನಾಯಕರನ್ನಾಗಿ ಮಾಡದಿದ್ದಲ್ಲಿ ಅವರು ಈ ಸದನದಲ್ಲಿ ಇರುತ್ತಲೇ ಇರಲಿಲ್ಲ. ಕೆಳಮನೆಯಲ್ಲಿಯೇ ಇರುತ್ತಿದ್ದರು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೇ, ನಿನ್ನೆಯ ದಿವಸ ನನಗೆ ಹಾಗೂ ಸಭಾನಾಯಕರಿಗೆ ಗೊತ್ತಿರುವವರೊಬ್ಬರು ಏನು ನಿಮ್ಮ ಸಭಾನಾಯಕರು ಯಾವಾಗಲೂ ಸದನದಲ್ಲಿಯೇ ಇರುತ್ತಾರೆ ಎನ್ನುವ ಮಾತನ್ನು ಹೇಳಿದರು, ಅವರ ಹೆಸರನ್ನು ಇಲ್ಲಿ ಹೇಳುವುದು ಬೇಡ. ನಮ್ಮ ಸಹಕಾರಿ ತತ್ವ ಏನಿದೆ ಎಂದು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಸಹಕಾರಿ ತತ್ವ ಎಂದರೆ 'ನಾನು ಎಲ್ಲರಿಗಾಗಿ, ಎಲ್ಲರೂ ನನಗಾಗಿ' ಎನ್ನುವುದು. ಆ ತತ್ವದ ಅಡಿಯಲ್ಲಿ ಸಹಕಾರಿ ಚಳುವಳಿಯನ್ನು ಪ್ರಾರಂಭಿಸಲಾಗಿತ್ತು. ಈ ಸಹಕಾರಿ ಚಳುವಳಿ ಇಡೀ ಭಾರತದಲ್ಲಿ ಮೊದಲು ಗದಗ್

ತಾಲ್ಲೂಕಿನ ಕಣಗಿನಹಾಳದಲ್ಲಿ ದಿವಂಗತ ಎಸ್.ಎಸ್.ಪಾಟೀಲ್‌ರವರಿಂದ ನೂರು ವರ್ಷಗಳ ಹಿಂದೆ ಪ್ರಾರಂಭಗೊಂಡಿತ್ತು. ಈ ಚಳುವಳಿ ಶತಮಾನವನ್ನು ಕಂಡಿದೆ. ನೂರು ವರ್ಷಗಳ ಇತಿಹಾಸವನ್ನು ಹೊಂದಿರುವ ಸಹಕಾರ ಕ್ಷೇತ್ರದಲ್ಲಿ ಈ ಪರಿಸ್ಥಿತಿಯನ್ನು ನೋಡಿ ನನಗೆ ಸಖೇದಾಶ್ಚರ್ಯ ಆಗುತ್ತಿದೆ. ಇಷ್ಟು ಶತಮಾನ ಇತಿಹಾಸವುಳ್ಳಂತಹ ಸಹಕಾರಿ ಚಳುವಳಿ ಅದು ಇಡೀ ಭಾರತ ದೇಶದಲ್ಲಿ ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆವಿಗೆ ಅದು ಹುಟ್ಟಿದ್ದು ನಮ್ಮ ಕರ್ನಾಟಕ ರಾಜ್ಯದಲ್ಲಿ, ಉತ್ತರ ಕರ್ನಾಟಕದ ಗದಗ್ ತಾಲ್ಲೂಕಿನ ಕಣಗಿನಹಾಳದಲ್ಲಿ ದಿವಂಗತ ಎಸ್.ಎಸ್.ಪಾಟೀಲ್ ರವರಿಂದ ನೂರು ವರ್ಷಗಳ ಹಿಂದೆ ಪ್ರಾರಂಭಗೊಂಡಂತಹ ಈ ಚಳುವಳಿ ಇಪ್ಪತ್ತೊಂದನೇ ಶತಮಾನದ ಹೊಸ್ತಿಲಿನಲ್ಲಿ ಒಂದು ಸಹಕಾರಿ ಸಂಸ್ಥೆ ಪರಿಶಿಷ್ಟ ಜಾತಿಯವರಿಗೆ ನಾವು ನಿಮ್ಮ ಸದಸ್ಯತ್ವವನ್ನು ನೋಂದಾಯಿಸಿಕೊಳ್ಳುವುದಿಲ್ಲ, ನಿಮ್ಮ ಹಾಲನ್ನು ತೆಗೆದುಕೊಳ್ಳುವುದಿಲ್ಲವೆಂದು ಹೇಳಿರುವಂಥದ್ದು ಸಖೇದಾಶ್ಚರ್ಯ ಎನ್ನಿಸುತ್ತಿದೆ. ಈ ದೇಶದ ಪ್ರಥಮ ಪ್ರಧಾನ ಮಂತ್ರಿಗಳಾದಂತಹ ದಿವಂಗತ ಪಂಡಿತ್ ಜವಾಹರ್‌ಲಾಲ್ ನೆಹರುರವರು ಒಂದು ಮಾತನ್ನು ಹೇಳಿದ್ದಾರೆ. ಸಹಕಾರಿ ಚಳುವಳಿಯನ್ನುದ್ದೇಶಿಸಿ ಏನು ಮಾತನ್ನು ಹೇಳುತ್ತಾರೆಂದರೆ, ಸಹಕಾರಿ ಚಳುವಳಿ ಭಾರತ ದೇಶದ ಅಭಿವೃದ್ಧಿಯ ಹೆಬ್ಬಾಗಿಲು ಎನ್ನುವಂತಹ ಮಾತನ್ನು ಹೇಳಿದ್ದಾರೆ. ಸಹಕಾರಿ ಚಳುವಳಿಯ ಮುಖಾಂತರ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಿ ಅದರ ಜೊತೆಗೆ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿ ಎಲ್ಲರನ್ನೂ ಒಂದುಗೂಡಿಸಿ, ಎಲ್ಲರ ಅಭಿವೃದ್ಧಿಗೆ ಇದು ಒಂದು ದಾರಿ ದೀಪ ಎನ್ನುವಂತಹ ಮಾತನ್ನು ದಿವಂಗತ ಪಂಡಿತ್ ಜವಾಹರ್‌ಲಾಲ್ ನೆಹರುರವರು ಹೇಳಿದ್ದನ್ನು ನಾನು ಇಲ್ಲಿ ಉಲ್ಲೇಖ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕಿಂತ ಹಿಂದೆ ಹೋದರೆ, 12ನೇ ಶತಮಾನದಲ್ಲಿ ಶ್ರೀ ಬಸವಣ್ಣನವರು ವರ್ಗರಹಿತವಾದಂತಹ, ಜಾತಿರಹಿತವಾದಂತಹ ಸಮಾಜವನ್ನು ನಿರ್ಮಾಣ ಮಾಡುವುದಕ್ಕೆ ಬಹುದೊಡ್ಡ ಕೊಡುಗೆಯನ್ನು ನೀಡುವುದರ ಜೊತೆಗೆ ಸವರ್ಣೀಯರು ಮತ್ತು ದಲಿತರ

ನಡುವೆ ರಕ್ತ ಸಂಬಂಧವನ್ನು ಬೆಳೆಸುವಂಥಹ ಮಹಾನ್ ಕ್ರಾಂತಿಯನ್ನುಂಟು ಮಾಡಿ ಸುಮಾರು 800 ವರ್ಷಗಳಾಗಿವೆ. ಆದರೂ ಇವತ್ತಿಗೂ ಸಹ ಈ ಅಸಮಾನತೆಯನ್ನು ಕಾಣುತ್ತೇವೆಂದರೆ ನಿಜವಾಗಿಯೂ ನಾಗರೀಕ ಸಮಾಜ ತಲೆತಗ್ಗಿಸುವಂತಹ, ಅನಾಗರೀಕವಾದಂತಹ ವ್ಯವಸ್ಥೆಯೆಂದು ಹೇಳುವುದಕ್ಕೆ ನಾನು ಬಹಳ ಉಗ್ರವಾದಂತಹ ಶಬ್ದಗಳಲ್ಲಿ ಇದನ್ನು ಖಂಡಿಸಬೇಕಾಗುತ್ತದೆ. ಇವತ್ತು ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ದಲಿತರು, ಸವರ್ಣೀರು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಒಂದು ಮುಖ ಸವಕಳಿಯಾದರೆ ಆ ನಾಣ್ಯ ಚಲಾವಣೆಯಾಗುವುದಿಲ್ಲ. ಅದೇ ರೀತಿ ರಥದ ಎರಡು ಗಾಲಿ ಇದ್ದಂತೆ. ಗ್ರಾಮೀಣ ಭಾಗದಲ್ಲಿ ಅಷ್ಟು ಸಂಬಂಧಗಳಿವೆ. ಒಬ್ಬೊರನ್ನೊಬ್ಬರು interdependent. ಅಣ್ಣ ತಮ್ಮಂದಿರಿಗಿಂತ ಹೆಚ್ಚಿನ ಸಂಬಂಧವಿದೆ. ಒಂದೇ ರಕ್ತವನ್ನು ಹಂಚಿಕೊಂಡು ಹುಟ್ಟಿದಂತಹ ಸಹೋದರ ಸಹೋದರಿಯೆನ್ನುವಂತಹ ಭಾವನೆ ಇರತಕ್ಕಂತಹ ಸಂಬಂಧಗಳನ್ನು ನಾನು ಕಂಡಿದ್ದೇನೆ. ಆದರೆ ಈ ಸಂಬಂಧದ ಮಧ್ಯೆ ಈ ರೀತಿಯಾಗಿ ನಡೆಯುವುದು ನನಗೆ ಬಹಳ ನೋವು ತರುವಂತಹ ವಿಚಾರ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಸುಮಾರು 800 ವರ್ಷಗಳ ಹಿಂದೆ ಶ್ರೀ ಬಸವಣ್ಣನವರು ಕಾಯಿದೆ ಮುಖಾಂತರ ಈ ಅಂತರವನ್ನು ಹೋಗಲಾಡಿಸುವಂತಹ ಪ್ರಯತ್ನವನ್ನು ಮಾಡಲಿಲ್ಲ. ಜನರಲ್ಲಿ ಜಾಗ್ರತೆ ಮೂಡಿಸಿ, ದಲಿತರು, ಸವರ್ಣೀಯರು ಒಂದೇ ನಾಣ್ಯದ ಎರಡು ಮುಖ ಎನ್ನುವಂತಹ ಮಾತನ್ನು motivation ಮಾಡಿ ಜಾಗ್ರತೆ ಮಾಡಿ ಮಾಡಿದರು. ಇವತ್ತು ನಾವು ಕಾನೂನಿನಿಂದ ಇದನ್ನು ಹೋಗಲಾಡಿಸಲು ಸಾಧ್ಯವಿಲ್ಲ. ಇದಕ್ಕೆ ಕಾನೂನಿನಲ್ಲಿ ಪರಿಹಾರವಿಲ್ಲ. ಈಗಾಗಲೇ ಆ ಕೇಸ್ ರಿಪೋರ್ಟ್ ಆಗಿದೆ. ಇದರ ಮೇಲೆ ಸಾಕಷ್ಟು ಚರ್ಚೆಯಾಗಿದೆ, ಪ್ರಮುಖ ಪತ್ರಿಕೆಗಳಲ್ಲಿ ಈ ವಿಷಯ ಪ್ರಕಟಗೊಂಡಿದೆ. ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸಹಕಾರ ಸಚಿವರನ್ನು ಕೇಳುವುದೇನೆಂದರೆ, ತಕ್ಷಣವಾಗಿ ತಾವು ಆ ಗ್ರಾಮಕ್ಕೆ ಭೇಟಿ ಕೊಡಬೇಕಾಗಿತ್ತು. ಅಲ್ಲಿ ನಿಮ್ಮ Assistant Registrar of Cooperative Societies, Deputy Registrar of Cooperative Societies ಅವರನ್ನು

ಕರೆದುಕೊಂಡು ಹೋಗಿ ಅವರ ಮಧ್ಯದಲ್ಲಿ ಏನಾದರು ಸಣ್ಣಪುಟ್ಟ ಭಿನ್ನಾಭಿಪ್ರಾಯಗಳಿದ್ದರೆ ಅದನ್ನು ಬಗೆಹರಿಸಿ ಅವರನ್ನು ಕೌನ್ಸಿಲಿಂಗ್ ಮಾಡಿ ಅವರನ್ನು ಸದಸ್ಯರನ್ನಾಗಿ ನೇಮಿಸುವಂತಹ ಕೆಲಸವನ್ನು ನೀವು ಮಾಡಬೇಕಾಗಿತ್ತು, ಅದು ನಿಮ್ಮ ಜವಾಬ್ದಾರಿಯಾಗಿತ್ತು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ಈ ವಿಷಯ ನನಗೆ ಇದೇ ತಾನೆ ನೋಟಿಸ್ ಕೊಟ್ಟಮೇಲೆ ಗೊತ್ತಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ವಿಷಯ ಮಾನ್ಯ ಸಚಿವರಿಗೆ ಇವತ್ತು ಗೊತ್ತಾಗಿರುವುದೇ ದೊಡ್ಡ ದುರಂತ. You pull up your Officers.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಆಫೀಸರ್ಸ್‌ನ್ನು pull up ಮಾಡುವ ಬಗ್ಗೆ ಅವರಿಗೆ ಹೇಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಬಹಳ ಆಶ್ಚರ್ಯಕರವಾದಂತಹ ವಿಷಯವೇನೆಂದರೆ, ಇಂತಹ ಒಂದು ಘಟನೆ ನಡೆದು, ಪ್ರಮುಖ ಪತ್ರಿಕೆಗಳಲ್ಲಿ ಬಂದಾಗ ಇದಕ್ಕೆ ತಕ್ಷಣವಾಗಿ ಸ್ಪಂದಿಸಬೇಕಾದುದು ನಮ್ಮ ಇಲಾಖೆಯ ಆದ್ಯ ಕರ್ತವ್ಯ ಹಾಗೂ ಪರಮ ಗುರಿ. ನಿಮ್ಮ ಧರ್ಮ ಅದು, ನಿಮ್ಮ ನೀತಿ ಅದು. You have got the men and material. ಈ ಘಟನೆ ನಡೆದಾಗ ಸಹಕಾರಿ ಸಚಿವರು ಸಹಕಾರಿ ಸಂಸ್ಥೆಯಲ್ಲಿ ನಡೆದಂತಹ ಅಪಚಾರವಾಗಿದೆ. ಇದರಿಂದಾಗಿ ಸರ್ಕಾರ ಅನಾವಶ್ಯಕವಾಗಿ ಕೆಟ್ಟ ಹೆಸರು ಬರುತ್ತದೆ. ತಕ್ಷಣವಾಗಿ ಮಾನ್ಯ ಸಚಿವರು ಭೇಟಿ ಕೊಟ್ಟು ಅಧಿಕಾರಿಗಳನ್ನು ಹಾಗೂ ಅದಕ್ಕೆ ಸಂಬಂಧಿಸಿದಂತಹ ಎಲ್ಲಾ ಹಿರಿಯರನ್ನು ಒಂದುಗೂಡಿಸಿಕೊಂಡು ಅವರಿಗೆ ತಿಳಿಹೇಳಿ ಅವರ ಸದಸ್ಯತ್ವನ್ನು ಮಾಡಿ ಅದಕ್ಕೆ ಪರಿಹಾರಕೊಂಡಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು. ಅದರ ಬದಲಾಗಿ ತಾವು Assistant Registrar of Cooperative Societies, ಯಾರನ್ನೋ ಕಳಿಸಿ, ಅವರಿಗೆ ಒಂದು ನೋಟಿಸ್ ಕೊಡಿಸಿ, 25ನೇ ತಾರೀಖು

ಡೆಡ್‌ಲೈನ್ ಕೊಟ್ಟು ಅವರನ್ನು ನೋಂದಣಿ ಮಾಡಿ ಎಂದು ಹೇಳಿದ್ದೀರಲ್ಲ ಇದು ಸರಿಯೇ. ನಾನು ಹೇಳುವುದೇನೆಂದರೆ, ಅಲ್ಲಿಗೆ ಮಾನ್ಯ ಸಚಿವರೇ ಹೋಗಿ ಎಂದು ಹೇಳುವುದಿಲ್ಲ, ಹಿರಿಯ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಬೇಕಾಗಿತ್ತು, ಅತ್ಯಂತ ಹಿರಿಯ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ, ಎರಡು ವರ್ಗಗಳ ಮಧ್ಯೆ ಇರುವಂತಹ ಭಿನ್ನಾಭಿಪ್ರಾಯ ಏನಿದೆ ಅದನ್ನು ಸರಿಪಡಿಸಿ ಅವರನ್ನು ಒಂದುಮಾಡಿ ಆ ಗ್ರಾಮದಲ್ಲಿ ಅವರು ಬದುಕುವಂತೆ ಮಾಡಬೇಕು. ಏಕೆಂದರೆ, ಒಬ್ಬೊಬ್ಬರ ಮುಖ ಒಬ್ಬರು ನೋಡಬೇಕು. ಅಲ್ಲಿಯೇ ಬದುಕಬೇಕು. ಅವರ ಮಧ್ಯದಲ್ಲಿ ಸಾಮರಸ್ಯವನ್ನು ಹುಟ್ಟಿಸುವಂತಹ ಕೆಲಸವನ್ನು ಮಾಡಬೇಕೆಂದು ನೀವು ಹಿರಿಯ ಅಧಿಕಾರಿಗಳಿಗೆ instructions ಕೊಡಬೇಕಾಗಿತ್ತು. ತಕ್ಷಣವಾಗಿ ನೀವು ಇವತ್ತಿನ ಸಂಜೆಯೊಳಗೆ ಅದು settle ಆಗಬೇಕು, ಅವರ ಸದಸ್ಯತ್ವ ನೋಂದಣಿ ಆಗಬೇಕು ಎನ್ನುವಂಥ ಕಡಾಖಂಡಿತವಾಗಿ ಸರ್ಕಾರ ಸ್ಪಂಧಿಸಿದ್ದರೆ I would have appreciated you. ನಾವು ಸಹ ಸರ್ಕಾರ ಉತ್ತಮವಾದಂತಹ ಕೆಲಸವನ್ನು ಮಾಡಿದೆ ಎನ್ನುವಂಥ ಮಾತನ್ನು ಹೇಳುತ್ತಿದ್ದೆವು. ಇದು ಕೊನೆಯ ಅಸ್ತ್ರ. ಈ ರೀತಿಯಾದಂತಹ ಸಂದರ್ಭದಲ್ಲಿ ಅವರೇನು ನಿಮ್ಮ ಹಿರಿಯ ಅಧಿಕಾರಿಗಳ ಮಾತಿಗೆ ಒಪ್ಪಲಿಲ್ಲ, ಅಥವಾ ತಮ್ಮಂಥವರ ಮಧ್ಯಸ್ಥಿಕೆಯ ಮಾತಿನ ಸಹ ಒಪ್ಪಲಿಲ್ಲವೆಂದರೆ ನೀವು ನೇರವಾಗಿ ಆ ಸಂಸ್ಥೆಯನ್ನು supersede ಮಾಡಬೇಕು, ಆಡಳಿತಕಾರಿಯನ್ನು ನೇಮಿಸಬೇಕು, ಆಡಳಿತಾಧಿಕಾರಿಯವರ ಮುಖಾಂತರ ಇವರ ಸದಸ್ಯತ್ವವನ್ನು ನೋಂದಣಿ ಮಾಡಬೇಕು, ಅವರು ಸದಸ್ಯರಾದ ಕೂಡಲೇ ಅವರ ಹಾಲನ್ನು ಅವರು ಕೊಡುವುದಕ್ಕೆ ಸಾಧ್ಯವಿದೆ. Taking penal action is the last resort. ನೀವು ಅದಕ್ಕಿಂತ ಮೊದಲು ಎರಡು ವರದಿಗಳ ಮಧ್ಯೆ ಏನು ಸಾಮರಸ್ಯ ತಪ್ಪಿದೆ ಅದನ್ನು ಸರಿಪಡಿಸುವಂತಹ ಕೆಲಸವನ್ನು ನಿಮ್ಮ ಹಿರಿಯ ಅಧಿಕಾರಿಗಳನ್ನು ಕಳಿಸಿ ನೀವು ತಕ್ಷಣವಾಗಿ ಸ್ಪಂದಿಸಿದ್ದರೆ ಶ್ರೀಮತಿ ಮೋಟಮ್ಮನವರು ಇಲ್ಲಿ ಚರ್ಚೆ ಮಾಡುವಂತಹ ವಿಷಯವೇ ಬರುತ್ತಿರಲಿಲ್ಲ.

**ಶ್ರೀ ಮೋಹನ್ ಎ.ಲಿಂಬಿಕಾಯಿ:-** ಮಾನ್ಯ ಸಭಾಪತಿಯವರೇ, ಸರ್ಕಾರ ಇಲ್ಲಿ ಸ್ಪಂದಿಸಿದೆ. ಯಾವುದೇ ಒಂದು ಕ್ರಮವನ್ನು ಕೈಗೊಳ್ಳಬೇಕೆಂದರೆ

ಕಾನೂನಿನ ಅಡಿಯಲ್ಲಿಯೇ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಅವರಿಗೆ ನೋಟಿಸ್ ಕೊಡಬೇಕು, ಅವರಿಗೆ ನೋಟೀಸ್ ಕೊಟ್ಟಿದ್ದಾರೆ, 25ನೇ ತಾರೀಖು ಡೆಡ್‌ಲೈನ್ ನೀಡಿದ್ದಾರೆ. Then they have to take action. They will take action. ಮಾನ್ಯ ವಿರೋಧ ಪಕ್ಷದ ನಾಯಕರಾದಂತಹ ಪಾಟೀಲರು ಆ ಸಂಸ್ಥೆಯನ್ನು ಸೂಪರ್‌ಸೀಡ್ ಮಾಡಬೇಕೆಂದು ತಿಳಿಸಿದರು. ಸೂಪರ್‌ಸೀಡ್ ಮಾಡಿದರೆ ಅವರಿಗೆ ತೊಂದರೆಯಾಗುತ್ತದೆ. ಏಕೆಂದರೆ ಅವರಿಗೆ alternative Society ಇಲ್ಲವೆಂದಾಗ ಅವರು ಬೇರೆ ಎಲ್ಲಿಗೆ ಹೋಗಬೇಕು? ಅದು ಸಣ್ಣ ಕುಗ್ರಾಮ ಹಳ್ಳಿ ಆಗಿರುವುದರಿಂದ ಒಂದೇ ಸೊಸೈಟಿ ಇರುವುದರಿಂದ ಅದೇ ಸೊಸೈಟಿಯಲ್ಲಿಯೇ ಸದಸ್ಯತ್ವವನ್ನು ಕೊಡಿಸಬೇಕು. ಈ ವಿಷಯಕ್ಕೆ ಸ್ಪಂದಿಸಲಿಲ್ಲ ಎಂದರೆ ಮಾನ್ಯ ಸಚಿವರು ಅದಕ್ಕೆ ವಿರೋಧವನ್ನು ವ್ಯಕ್ತಪಡಿಸಿದ್ದರೆ ನಿಜವಾಗಿ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಅದು ಸರಿ. ಆದರೆ ಸರ್ಕಾರ ತಕ್ಷಣ ಅವರಿಗೆ Notice issue ಮಾಡಿದ್ದಾರೆ, 25ನೇ ತಾರೀಖಿನವರೆವಿಗೆ ಕಾಲಾವಕಾಶವನ್ನು ಕೊಟ್ಟಿದ್ದಾರೆ, ತಕ್ಷಣ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ. ಅವರು ವಿರೋಧ ವ್ಯಕ್ತಪಡಿಸಿದ್ದರೆ ಮಾನ್ಯ ವಿರೋಧ ಪಕ್ಷದ ನಾಯಕರು ಆ ರೀತಿ ಹೇಳಬಹುದಾಗಿತ್ತು ಎಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮ್ಮ ಗೌರವಾನ್ವಿತ ಸದಸ್ಯರಾದಂತಹ ಶ್ರೀ ಮೋಹನ್ ಲಿಂಬೀಕಾಯಿಯವರು ಅತ್ಯಂತ ಪ್ರಖ್ಯಾತ ವಕೀಲರು. ಹಾಗಾಗಿ ಅವರು ಕಾನೂನಿನ ವಿಚಾರದಲ್ಲಿಯೇ ಮಾತನಾಡುತ್ತಾರೆ. ನಾನು ಹೇಳಿದ್ದು ಅವರಿಗೆ ಅರ್ಥವಾಗಿದೆಯೋ ಇಲ್ಲವೋ ಗೊತ್ತಾಗಲಿಲ್ಲ. ಕಾನೂನು ಕಟ್ಟಳೆಗೆ ಕೈ ಹಾಕಲಾರದೆ ಹಿರಿಯ ಅಧಿಕಾರಿಗಳನ್ನು ಕಳುಹಿಸಿ ಎರಡು ವರ್ಗಗಳ ಮಧ್ಯೆ ಅಂದರೆ ಸವರ್ಣೀಯರು ಮತ್ತು ದಲಿತರ ಮಧ್ಯೆ ಏನು ಭಿನ್ನಾಭಿಪ್ರಾಯ ಉಂಟಾಗಿದೆ ಅದನ್ನು ಸರಿಪಡಿಸಿ ಎಂದು ನಾನು ಹೇಳಿದ್ದು.

**ಶ್ರೀ ಮೋಹನ್ ಎ. ಲಿಂಬೀಕಾಯಿ:-** ಮಾನ್ಯ ಸಭಾಪತಿಯವರೇ, ಮೊನ್ನೆ ದಿವಸ ಶ್ರೀಮತಿ ಮೋಟಮ್ಮನವರು ಮಾತನಾಡಿದರು. ಅವರು

ಮಾತನಾಡುವಂತಹ ಸಮಯದಲ್ಲಿ ಪತ್ರಿಕೆಯನ್ನು ಓದಿ ಹೇಳಿದರು. ಆ ಪತ್ರಿಕೆಯಲ್ಲಿ ಅಲ್ಲಿಯ ಸಚಿವರಾದಂತಹ ಸಮಯದಲ್ಲಿ ಪತ್ರಿಕೆಯನ್ನು ಓದಿ ಹೇಳಿದರು. ಆ ಪತ್ರಿಕೆಯಲ್ಲಿ ಅಲ್ಲಿಯ ಸಚಿವರಾದಂತಹ ಶ್ರೀ ಪಿ.ಸಿ ಯೋಗಿಶ್ವರ್‌ರವರು ಪ್ರಯತ್ನ ಮಾಡಿದರು. ಆಗಿಲ್ಲವೆಂದು ಹೇಳಿದರು. ಈ ರೀತಿ ಆಗುವುದಿಲ್ಲವೆಂದು ಕಂಡು ಬಂದಾಗ ಕಾನೂನಿನ ಅಡಿಯಲ್ಲಿಯೇ ಕ್ರಮ ಕೈಗೊಳ್ಳಬೇಕಾದುದು ಅನಿವಾರ್ಯವಾಗುತ್ತದೆ. ಆ ಕಾನೂನಿನ ಕ್ರಮವನ್ನು ಸರ್ಕಾರ ಕೈಗೊಳ್ಳುತ್ತಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದಂತಹ ಶ್ರೀ ಮೋಹನ ಲಿಂಬೀಕಾಯಿರವರಿಗೆ ನಾನು ಹೇಳುವಂತಹ ಮಾತು ಏಕೆ ಅರ್ಥವಾಗುತ್ತಿಲ್ಲವೆಂದು ಆಶ್ವರ್ಯವಾಗುತ್ತಿದೆ. ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಳ್ಳಬೇಕೆಂದರೆ ನೋಟಿಸ್ ಕೊಡಬೇಕು, ನಾನೂ ಕೂಡ ಹದಿನೈದು ವರ್ಷಗಳ ಕಾಲ ವಕೀಲಿ ವೃತ್ತಿಯನ್ನು ಮಾಡಿ, ನಂತರ ಸಾರ್ವಜನಿಕ ಬದುಕಲ್ಲಿ ಪ್ರವೇಶ ಮಾಡಿದ್ದೇನೆ.

**ಸಭಾಪತಿಯವರು:-** ಈಗ ಆ ಕಛೇರಿ ಇದೆಯೇ ಅಥವಾ ಅದನ್ನು ಮುಚ್ಚಲಾಗಿದೆಯೇ?

**ಶ್ರೀ ಎಸ್.ಆರ್.ಪಾಟೀಲ್:-** ನಾನು ಈಗ ಪ್ರಾಕ್ಟೀಸ್ ಮಾಡುತ್ತಿಲ್ಲ. Now I am away from Legal Practice. ಇವತ್ತಿಗೂ ನಾನು ನಮ್ಮ ಬೀಳಗಿ ತಾಲ್ಲೂಕಿನ ವಕೀಲರ ಸಂಘಕ್ಕೆ ಅಧ್ಯಕ್ಷನಾಗಿದ್ದೇನೆ. ಆ ಮಾತು ಬೇರೆ. ಆದರೆ ನಾನು ಹೇಳಿದ್ದು ಏನೆಂದರೆ, ಈ ಸಂಸ್ಥೆಯನ್ನು ಸೂಪರ್‌ಸೀಡ್ ಮಾಡಬೇಕಾದರೆ ನೋಟೀಸ್ ಕೊಡಬೇಕು. ಕಾನೂನನ್ನು ಪಾಲನೆ ಮಾಡಿ, ಆದರೆ ಕಾನೂನನ್ನು ಕೈಗೆತ್ತಿಕೊಳ್ಳುವ ಪೂರ್ವದಲ್ಲಿ ಕಾನೂನಾತ್ಮಕವಾಗಿ ನೀವು ಸೂಪರ್‌ಸೀಡ್ ಮಾಡಿ, Administrator ನೇಮಿಸಿ ಆ ಸದಸ್ಯತ್ವ ಮಾಡುವುದಕ್ಕೆ ಬರುತ್ತದೆ. ಅದಕ್ಕಿಂತ ಪೂರ್ವದಲ್ಲಿ ಸರ್ಕಾರ ಏನು ಮಾಡಬೇಕು, ಸಾಮರಸ್ಯವನ್ನು ಬೆಸುಗೆ ಮಾಡುವಂತಹ ಕೆಲಸ ಮಾಡಬೇಕು. ಇವತ್ತೇನು ಸಂಬಂಧ ಬಿಗಡಾಯಿಸಿದೆ, ಅದನ್ನು ಒಂದು ಮಾಡುವಂತಹ ಕೆಲಸ

ಮಾಡಬೇಕಾಗಿತ್ತು. ಅಲ್ಲಿಗೆ ಮಾನ್ಯ ಸಚಿವರೇ ಹೋಗಬೇಕೆಂದು ನಾನೇನು ಹೇಳುವುದಿಲ್ಲ, ಅವರು ಹಿರಿಯ ಅತ್ಯಂತ ಹಿರಿಯ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ನೋಡಿ ನೀವು ಒಂದು ವೇಳೆ ನೋಂದಣಿ ಮಾಡದಿದ್ದರೆ ಅವರ ಸದಸ್ಯತ್ವ ಮಾಡಿಕೊಳ್ಳದಿದ್ದರೆ ನಿಮ್ಮ ಸಂಸ್ಥೆ ಸೂಪರ್‌ಸೀಡ್ ಆಗುತ್ತದೆ, ನಿಮ್ಮ Chairmanship ಹೋಗುತ್ತದೆ, ಆಡಳಿತ ಮಂಡಳಿ ಮನೆಯ ಹೋಗುತ್ತದೆ, ಒಬ್ಬ ಸರ್ಕಾರಿ ಆಡಳಿತಾಧಿಕಾರಿ ಬರುತ್ತಾರೆ, ಅವರು ಮೆಂಬರ್‌ಶಿಪ್ ಮಾಡುತ್ತಾರೆ, ಅವರು ಸಂಸ್ಥೆಯನ್ನು ನಡೆಸಿಕೊಂಡು ಹೋಗುತ್ತಾರೆ, ನಿಮ್ಮ ಅಧಿಕಾರ ನಿಮ್ಮ ಕೈಯಲ್ಲಿ ತಪ್ಪಿ ಹೋಗುತ್ತದೆ ಎಂದು ತಿಳಿಸಿ ಹೇಳಿದರೆ ಅವರು ತಕ್ಷಣ ಒಪ್ಪಿಕೊಳ್ಳುತ್ತಾರೆ. ಆಯಿತು ತಾವು ಹೇಳಿದಂತೆ ಮಾಡುತ್ತೇವೆಂದು ಹೇಳಿ ಅವರ ಮಧ್ಯದಲ್ಲಿ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳು ಇರುತ್ತವೆ. ಆ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿ ಎರಡು ಜನಾಂಗದ ಮಧ್ಯೆ ಸಾಮರಸ್ಯವನ್ನು ಕಲ್ಪಸಿ ಅವರು ಸುಮಧುರವಾದಂತಹ ಬಾಂಧವ್ಯವನ್ನು ಕಲ್ಪಿಸಿ, ಅವರು ಜೊತೆ ಜೊತೆಯಾಗಿ ಬದುಕುವಂತಹ ಕೆಲಸವನ್ನು 12ನೇ ಶತಮಾನದಲ್ಲಿ ಶ್ರೀ ಬಸವಣ್ಣನವರು ಮಾಡಿದ್ದಾರೆ. ಅಂತಹ ಕೆಲಸವನ್ನು ನೀವು ಮಾಡಬೇಕು. ಅವರು ಅದಕ್ಕೂ ಬಗ್ಗದೇ ಹೋದರೆ ಈ ಎಲ್ಲಾ ವಿಚಾರಗಳಿಗೂ ಸ್ಪಂದಿಸದಿದ್ದರೆ ಅನಿವಾರ್ಯವಾಗಿ ನೋಟಿಸ್ ಕೊಟ್ಟು ಸೂಪರ್‌ಸೀಡ್ ಮಾಡಿ ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅಥವಾ ತಾಲ್ಲೂಕು ಮಟ್ಟದ ಸಂಸ್ಥೆ ಇರುವುದರಿಂದ, ಅದರ ಪ್ರಕಾರ ಯಾವ ಅಧಿಕಾರಿಗಳನ್ನು ಅಲ್ಲಿ ಆಡಳಿತಾಧಿಕಾರಿಯನ್ನಾಗಿ ನೇಮಿಸಬೇಕು ಆ ಕೆಲಸವನ್ನು ಮಾಡಿ. ಆಡಳಿತಾಧಿಕಾರಿ ತಕ್ಷಣ ಸದಸ್ಯರನ್ನು ನೋಂದಣಿ ಮಾಡುತ್ತಾರೆ. ನೋಂದಣಿಯಾದ ತಕ್ಷಣ ಅವರು ಅಲ್ಲಿ ಹಾಲನ್ನು ಕೊಡುವಂತಹ ವ್ಯವಸ್ಥೆ ಬರುತ್ತದೆ. ಅದಕ್ಕೆ ನಾನು ಹೇಳುವುದು it is a lapse on the part of the Government. ತಕ್ಷಣ ಇದಕ್ಕೆ ಸರ್ಕಾರ ಸ್ಪಂಧನೆ ಮಾಡಿ ಸಮಸ್ಯೆಯನ್ನು ಬಗೆಹರಿಸಬೇಕಾಗಿತ್ತು. ಮಂತ್ರಿಗಳು ಹೊಸಬರು. ಈ ಸಮಸ್ಯೆ ಬಗ್ಗೆ ತಕ್ಷಣ ತೀರ್ಮಾನ ತೆಗೆದುಕೊಂಡಿದ್ದರೆ ಇಷ್ಟು ಸುಧೀರ್ಘವಾದ ಚರ್ಚೆಯನ್ನು ಮಾಡುವ ಅವಶ್ಯಕತೆಯೇ ಇರಲಿಲ್ಲ. ನಾನು ಸಹಕಾರಿ ಕ್ಷೇತ್ರದಿಂದ

ಬಂದವನು, ಅಲ್ಲಿಯ ನೋವು-ನಲಿವುಗಳನ್ನು ಅರ್ಥಮಾಡಿಕೊಂಡು ಅನೇಕ ಮಜಲುಗಳಲ್ಲಿ ನಾನು ಕೆಲಸ ಮಾಡಿದ್ದೇನೆ. ನನ್ನ ಅನುಭವದಲ್ಲಿ ನನ್ನ ವಿಚಾರಗಳನ್ನು ತಮ್ಮ ಎದುರಿನಲ್ಲಿ ಹೇಳುತ್ತಿದ್ದೇನೆ. It may be my personal opinion. You may differ. You may agree or you may not agree. It is upto you. Even then, ಕೆಲವೊಂದು ವೈಯಕ್ತಿಕ ವಿಚಾರಗಳನ್ನು ಹೇಳುತ್ತೇವೆ, ಕೆಲವು ಸಲಹೆಗಳನ್ನು ಕೊಡುತ್ತೇವೆ. ಇದರ ಬಗ್ಗೆ ಮೊದಲೇ ಗಮನಹರಿಸಿದರೆ ಇನ್ನು ಒಳ್ಳೆಯದಾಗುತ್ತಿತ್ತು. ಇವತ್ತು ಮಾಜಿ ವಿರೋಧ ಪಕ್ಷದ ನಾಯಕರಾದ ಶ್ರೀಮತಿ ಮೋಟಮ್ಮನವರು ಇಲ್ಲಿ ಚರ್ಚೆ ಮಾಡುವುದಕ್ಕಿಂತ ಮೊದಲೆ "Madam, we have solved that problem. All have become members of the Society. ಸವರ್ಣೀಯರು ಮತ್ತು ದಲಿತ ಎರಡು ವರ್ಗಗಳ ಮಧ್ಯೆ ಮಧುರ ಬಾಂಧವ್ಯ ಕಲ್ಪಿಸುವಂತಹ ಕೆಲಸವನ್ನು ನಾವು ಈಗಾಗಲೇ ಮಾಡಿದ್ದೇವೆ" ಎಂದು ಇಲ್ಲಿ ತಾವು ಈಗ ಉತ್ತರ ಕೊಡಬೇಕಾಗಿತ್ತು. At that time, we would have appreciated you. ಆ ದೃಷ್ಟಿಯಲ್ಲಿ ಇನ್ನು ಕಾಲ ಮಿಂಚಿಲ್ಲ. ನೋಟಿಸ್ ಕೊಟ್ಟಿದ್ದೇವೆ, 25ನೇ ತಾರೀಖು ಮುಗಿಯಿತು, ಈ ಕಾನೂನು-ಕಟ್ಟಳೆಗಿಂತ ಹೆಚ್ಚು ಆ ಎರಡು ಜನಾಂಗದವರ ಮಧ್ಯೆ ಒಳ್ಳೆಯ ಬಾಂಧವ್ಯ ತರಬೇಕು. ಆಡಳಿತ ಅಧಿಕಾರಿಯನ್ನು ನೇಮಿಸಿ ಅವರಿಗೆ ಸದಸ್ಯತ್ವವನ್ನು ಕೊಡಬಹುದು ಇಲ್ಲಿಗೆ ಸರ್ಕಾರದ ಕೆಲಸ ಮುಗಿದು ಹೋಯಿತೆ? ಅವರು ಅಲ್ಲಿ ಜೊತೆ-ಜೊತೆಯಾಗಿ ಬದುಕಬೇಕು. ಪ್ರೀತಿ-ವಿಶ್ವಾಸ-ಸ್ನೇಹದಿಂದ ಆ ಗ್ರಾಮದಲ್ಲಿ ಅವರು ಬದುಕಬೇಕು. ಗ್ರಾಮೀಣ ವ್ಯವಸ್ಥೆ ಹೇಗೆ ಇದೆ ಎಂದರೆ, ಒಬ್ಬ ವ್ಯಕ್ತಿಯ ಜೊತೆ ನಾವು ದ್ವೇಷ ಕಟ್ಟಿಕೊಂಡರೆ ಆ ಗ್ರಾಮದಲ್ಲಿ ಇರಲು ಮನಸ್ಸಿಗೆ ನೆಮ್ಮದಿಯೇ ಇರುವುದಿಲ್ಲ. ಯಾವಾಗ ಅವರ ನಮ್ಮ ಸಂಬಂಧ ಸರಳವಾಗುತ್ತದೆ ಆಗ ಆ ಗ್ರಾಮದಲ್ಲಿ ಖುಷಿಯಿಂದ ಇರಲು ಹೇಗೆ ಸಾಧ್ಯ.? ಗ್ರಾಮೀಣ ವ್ಯವಸ್ಥೆಯಲ್ಲಿ ಮಧುವಾದ, ಸುಮಧುರವಾದ ಸಂಬಂಧವನ್ನು ಜಾತಿ-ಜಾತಿಗಳ ಮಧ್ಯೆ ಕಲ್ಪಿಸುವಂತಹ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ಮಂತ್ರಿಗಳು ನಾಳೆಯೇ ಅಲ್ಲಿಗೆ ಹೋದರೆ ಸಮಸ್ಯೆ ಬಗೆಹರಿಯುತ್ತದೆ. ಒಂದು ದಿನದಲ್ಲಿ ಬಗೆಹರಿಸುವಂತಹ

ಸಮಸ್ಯೆ ಇದು. ಅವರು ಅರ್ಜಿಯನ್ನು ಕೊಟ್ಟಿರುತ್ತಾರೆ ತಾವು ಹೋದ ತಕ್ಷಣ ಸದಸ್ಯತ್ವವನ್ನು ಕೊಟ್ಟುಬಿಡಬಹುದು. ಅರ್ಧ ಗಂಟೆಯ ಕೆಲಸ ಇದು. ಬಹಳ ಎಂದರೆ ಒಂದು ತಾಸಿನ ಕೆಲಸ. ಒಂದು ಗಂಟೆಯಲ್ಲಿ ಸಮಸ್ಯೆ ಬಗೆಹರಿಯುತ್ತದೆ. ಅವರಿಗೆ ಸದಸ್ಯತ್ವವನ್ನು ಕೊಡಿಸಿ. ಅವರು–ಅವರು ಪ್ರೀತಿಯಿಂದ ಬದುಕಲಿ. ತಲೆ–ತಲಾಂತರದಿಂದ ಅಲ್ಲಿ ಹುಟ್ಟಿ ಬಾಳಿ ಬದುಕಿರುತ್ತಾರೆ. ಅವರ ಪೂರ್ವಜರು ಶತಮಾನಗಳಿಂದ ಆ ನೆಲದಲ್ಲಿದ್ದಾರೆ. ಮುಂದೆಯು ಅವರು ಆ ಗ್ರಾಮೀಣ ವ್ಯವಸ್ಥೆಯಲ್ಲಿ ಇರಬೇಕು. ಈ ದೃಷ್ಟಿಯಲ್ಲಿ ಅವರ ಮಧ್ಯೆ ಬಾಂಧವ್ಯ ಕೂಡ ಬಹಳ ಮಹತ್ವದ್ದು. ಅದೆಲ್ಲವನ್ನು ಲಕ್ಷ್ಯದಲ್ಲಿಟ್ಟುಕೊಂಡು ಒಂದು attempt ಮಾಡಲಿ. ಮಂತ್ರಿಗಳು ಅಲ್ಲಿಗೆ ಭೇಟಿ ಕೊಡಬೇಕು If necessary, let him go personally. ಅಲ್ಲಿ ಮಾನ್ಯ ಮಂತ್ರಿಗಳಾದ ಯೋಗೇಶ್ವರರವರು ಇದ್ದಾರೆ ಎಂದರು ಕೂಡ ಆ ಸಹಕಾರಿ ಇಲಾಖೆ ನಿಮ್ಮದು, ಈ ಕೆಲಸವನ್ನು ಮಾಡಿ ಎಂದು ಅವರಿಗೆ ನಾವು ಒತ್ತಾಯ ಮಾಡುವುದಕ್ಕಿಂತ, ಈ ಇಲಾಖೆ ನಿಮ್ಮದು ನೀವು ಕ್ರಮವನ್ನು ತೆಗೆದುಕೊಳ್ಳಿ.

**ಶ್ರೀ ಮೋಹನ ಎ. ಲಿಂಬೀಕಾಯಿ:–** ಮಾನ್ಯ ಸಭಾಪತಿಗಳೆ, ಆ ಜವಾಬ್ದಾರಿಯನ್ನು ವಿರೋಧ ಪಕ್ಷದ ನಾಯಕರಾದ ಮಾನ್ಯ ಎಸ್.ಆರ್.ಪಾಟೀಲ್‌ರವರಿಗೆ ಕೊಟ್ಟರೆ ಅವರೆ ಬಗೆಹರಿಸುತ್ತಾರೆನೋ ಅನ್ನಿಸುತ್ತದೆ.

**ಸಭಾಪತಿಯವರು:–** ಆದೆಲ್ಲಾ ಮಾತನಾಡಬಾರದು. ಸರಿಯಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ಅವರ ಚರ್ಚೆ ಯಾಕೊ ದಾರಿ ತಪ್ಪುತ್ತಿದೆ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಗಳೆ, ನಾನು ಒಂದು ಸಲಹೆಯನ್ನು ಕೊಡಲು ಬಯಸುತ್ತೇನೆ, ಇಷ್ಟು ಚಿಕ್ಕದಾಗಿರುವ ವಿಷಯಕ್ಕೆ ಇಷ್ಟೊಂದು ದೊಡ್ಡ ಚರ್ಚೆ ಮಾಡುವ ಅವಶ್ಯಕತೆ ಇತ್ತೆ? ನಿಜವಾದ ವಿಚಾರವನ್ನು ಬಿಟ್ಟು ಬೇರೆ ಎಲ್ಲವನ್ನು ಮಾತನಾಡಿದ್ದೇವೆ. ಮಾನ್ಯ ವಿರೋಧ

ಪಕ್ಷದ ನಾಯಕರು ತಮ್ಮ ಮಾತನ್ನು ಮುಗಿಸಿದ ತಕ್ಷಣ ನಾನು ಒಂದು ಸಲಹೆಯನ್ನು ಕೊಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ಅಲ್ಲಿ ಎರಡು ಜನಾಂಗದವರ ಮಧ್ಯೆ ಮಧುರವಾದ ಬಾಂಧವ್ಯ ಉಳಿಯುವ ನಿಟ್ಟಿನಲ್ಲಿ ಸಮಸ್ಯೆಯನ್ನು ಬಗೆಹರಿಸಬೇಕು. ಅವರ ಸದಸ್ಯತ್ವ ನೋಂದಣಿ ಮಾಡಿಸಬೇಕು. ಅದು ಅಲ್ಲದೆ ಈಗಾಗಲೇ ಎರಡು ಹಸು ತೆಗೆದುಕೊಳ್ಳಲು ಮತ್ತು ಕೊಟ್ಟಿಗೆಯನ್ನು ನಿರ್ಮಾಣ ಮಾಡಲು 1,25,000 ಸಾವಿರ ರೂ.ಗಳ ಸಾಲ ಮಂಜೂರು ಆಗಿದೆ ಆ ಸಾಲವು ಅವರಿಗೆ ಸಿಗುವಂತೆ ಮಾಡಿ. ಅಥವಾ ಹಿರಿಯ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿ ಇದನ್ನು ಬಗೆಹರಿಸಿ ಇದಕ್ಕೆ ಇತಿಶ್ರೀ ಹಾಡಬೇಕು ಎನ್ನುವ ಮಾತನ್ನು ಮಾನ್ಯ ಸಭಾಪತಿಯವರ ಮುಖಾಂತರ ಹೇಳಲು ಇಚ್ಛೆಪಡುತ್ತೇನೆ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಗಳೆ, ಸರ್ಕಾರ ಕ್ರಮ ತೆಗೆದುಕೊಂಡಿದ್ದೇ. 25ನೇ ತಾರೀಖಿನೊಳಗೆ ಸದಸ್ಯತ್ವ ನೋಂದಣಿ ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ. ಆದರೆ ಇದುವರೆಗೂ ಮಾಡಿರುವುದಿಲ್ಲ. ನಮ್ಮ Divisional Joint Registrar ಗೆ ಇವತ್ತು ಒಂದು ಆದೇಶವನ್ನು ಕೊಡಿ, ಪತ್ರವನ್ನು ತೆಗೆದುಕೊಂಡು ಅವರೆ ನೇರವಾಗಿ ಅಲ್ಲಿಗೆ ಹೋಗಲಿ, ಮೂರು ದಿನಗಳಲ್ಲಿ ಸಭೆಯನ್ನು ಕರೆಯಲಿ, ಆ ಸಭೆಯಲ್ಲಿ ಸದಸ್ಯತ್ವವನ್ನು ನೋಂದಣಿ ಮಾಡಿಕೊಳ್ಳಲು ಕ್ರಮತೆಗೆದುಕೊಳ್ಳಲಿ. ಇದು ಆಗದೆ ಹೋದರೆ, ಆ ಸೊಸೈಟಿಯನ್ನು super sede ಮಾಡುವುದು, ಅವರನ್ನು disqualify ಮಾಡುವ ಇವುಗಳನ್ನು ಕಾನೂನು ಪ್ರಕಾರ ಮಾಡಿಬಿಡಬಹುದು. ಆದರೆ ಸ್ಥಳೀಯವಾದ ವಿಚಾರಗಳು ಬಂದಾಗ ಏನು ಆಗುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಿರುವಂತಹ ವಿಚಾರ. ಆದ್ದರಿಂದ ಇದನ್ನು ಹೆಚ್ಚಿಗೆ ಬೆಳೆಸಿಕೊಂಡು ಹೋಗುವ ಅವಶ್ಯಕತೆ ಇಲ್ಲ. ದಯಮಾಡಿ ನಿಮ್ಮ ಇಲಾಖೆಯ Joint Registrar ಗೆ ಆದೇಶ ಕೊಟ್ಟು ಅಲ್ಲಿಗೆ ಕಳುಹಿಸಿ ಮೂರು ದಿನಗಳಲ್ಲಿ ಸಭೆಯನ್ನು ಕರೆದು ಅವರಿಗೆ ಸದಸ್ಯತ್ವನ್ನು ಕೊಟ್ಟು, ಅವರು ಅಲ್ಲಿ ಹಾಲನ್ನು ಹಾಕುವಂತೆ ಮಾಡಿ. ಅವರು ಹಾಲು ಕೊಟ್ಟು ದುಡ್ಡನ್ನು ಪಡೆಯುವಂತೆ

ವ್ಯವಸ್ಥೆ ಮಾಡಿ ಅವರು ಹಸುಗಳನ್ನು ತೆಗೆದುಕೊಳ್ಳುವಂತೆ ಮಾಡಿ. ಈ ಕೆಲಸವನ್ನು ಕೂಡಲೇ ಮಾಡಲು ಕ್ರಮವನ್ನು ತೆಗೆದುಕೊಳ್ಳಿ.

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಮಾನ್ಯ ಸಭಾಪತಿಗಳೆ, ಈ ವಿಚಾರದಲ್ಲಿ ಈಗಾಗಲೇ ಎಲ್ಲ ಹಿರಿಯ ಸದಸ್ಯರು ಮಾತನಾಡಿದ್ದಾರೆ. ನಾನು ಕೊನೆಯದಾಗಿ ಹೇಳುವುದು ಇಷ್ಟೆ, ಈಗಾಗಲೆ ನಬಾರ್ಡ್‌ನಿಂದ ಕೆನರಾ ಬ್ಯಾಂಕ್ ಮೂಲಕ 31 ಜನ ಫಲಾನುಭವಿಗಳಿಗೆ 1.25,000 ರೂ.ಗಳ ಸಾಲ ಮಂಜೂರಾಗಿದೆ. ಈ ಸಾಲವನ್ನು ಮರುಪಾವತಿ ಹೇಗೆ ಮಾಡುತ್ತಾರೆ ಎನ್ನುವುದಕ್ಕೆ ಒಂದು ಷರತ್ತನ್ನು ಹಾಕಿದ್ದಾರೆ. ಸಾಲವನ್ನು ತೆಗೆದುಕೊಳ್ಳುವವರು ಸಹಕಾರ ಸಂಘದ ಸದಸ್ಯರಾಗಿರಬೇಕು, ಅವರು ಹಾಲನ್ನು ಆ ಸೊಸೈಟಿಗೆ ಹಾಕಿ ಬಂದಿರುವ ಹಣದಲ್ಲಿ ಮರುಪಾವತಿ ಮಾಡಬೇಕು ಎಂದು. ಈ ಷರತ್ತಿನ ಹಿನ್ನೆಲೆಯಲ್ಲಿ ಇವತ್ತು ಈ ಸಮಸ್ಯೆ ನಿರ್ಮಾಣವಾಗಿದೆ. ಆದ್ದರಿಂದ ಮೊಟ್ಟಮೊದಲು ಮಂತ್ರಿಗಳು ಸಂಬಂಧಪಟ್ಟ ನಬಾರ್ಡ್ ಅಧಿಕಾರಿಗಳಿಗೆ ಮತ್ತು ಕೆನರಾ ಬ್ಯಾಂಕ್‌ನವರಿಗೆ, ನಾವು ಇದಕ್ಕೆ ಪೂರಕವಾದ ಭೂಮಿಕೆಯನ್ನು ನಿರ್ಮಾಣ ಮಾಡುತ್ತೇವೆ. ತಾವು ಈ ಸಾಲವನ್ನು ಕ್ಯಾನ್ಸಲ್ ಮಾಡಬೇಡಿ ಎಂದು ಹೇಳಬೇಕು. ಎರಡನೆಯದಾಗಿ, ಗ್ರಾಮೀಣ ಪ್ರದೇಶದಲ್ಲಿಯ ಸಮಸ್ಯೆಗಳೇ ಬೇರೆ ರೀತಿಯಲ್ಲಿರುತ್ತವೆ. ಆದ್ದರಿಂದ ಅಲ್ಲಿ ಸೌಹಾರ್ದ ವಾತಾವರಣವನ್ನು ನಿರ್ಮಾಣ ಮಾಡಬೇಕು. Supersede ಮಾಡುವುದು ಸಮಸ್ಯೆಗೆ ಪರಿಹಾರವಲ್ಲ. ಏಕೆಂದರೆ ಈಗಾಗಲೇ ನಾನು ಕೆಲವರ ಕೊತೆಯಲ್ಲಿ ಮಾತನಾಡಿದಾಗ ತಿಳಿದು ಬಂದ ವಿಚಾರದ ಹಿನ್ನಲೆಯಲ್ಲಿ ಹೇಳುತ್ತಿದ್ದೇನೆ ಇದನ್ನು ಬೆಳೆಸಬಾರದು. ಸಾಧ್ಯವಾದಷ್ಟು ಅವರಿಗೆ ತಿಳಿ ಹೇಳಿ ಇವರಿಗೆ ಸದಸ್ಯತ್ವ ಕೊಡಿ ಎಂದು ಹೇಳಿ. ಇಲ್ಲದೆ ಹೋದರೆ ನೇರವಾಗಿ ಆ 31 ಜನರ ಹಾಲನ್ನು K.M.F., ನವರೆ ಖರೀದಿ ಮಾಡಲಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, K.M.F., ನವರು ಖರೀದಿ ಮಾಡಿದ್ದರೆ, ಆ ಸಮಸ್ಯೆ ಹಾಗೆ ಉಳಿಯುತ್ತದೆ.

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಅಲ್ಲಿ ಖಂಡಿತವಾಗಿ ಅಹಂ ಇರುತ್ತದೆ. ಆದ್ದರಿಂದ ಈ ರೀತಿಯ ಪರಿಸ್ಥಿತಿ ಉಂಟಾಗಿರುತ್ತದೆ. ಆದ್ದರಿಂದ ಎಲ್ಲರನ್ನು ಸೇರಿಸಿ ಮಾತನಾಡಿ ಈ ಸಮಸ್ಯೆಯನ್ನು ಬಗ್ಗೆಹರಿಸಬೇಕು. ದ್ವೇಷ, ಅಸೂಯೆ ಬೆಳೆಯಬಾರದು. ಇಂತಹ ಘಟನೆಯಿಂದ ನಮಗೆಲ್ಲರಿಗೂ ನೋವು ತಂದಿದೆ. ಅದಕ್ಕೆ ಸರ್ಕಾರ ತೀವ್ರಗತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು. ಕಾನೂನು ರೀತಿ ಏನು ಮಾಡಬೇಕು ಅದನ್ನು ನಿಮ್ಮ ಇಲಾಖೆ ವತಿಯಿಂದ ನೀವು ನಿಮ್ಮ ಅಧಿಕಾರಿಗಳು ಮಾಡಿದ್ದೀರಿ. ಅದು ಯಶಸ್ವಿಯಾಗಬೇಕಾದರೆ ಇಬ್ಬರನ್ನು ಸೇರಿಸಿ ತಿಳಿಹೇಳುವಂತಹ ಕೆಲಸವಾಗಲಿ. ನಬಾರ್ಡ್ ಮತ್ತು ಕೆನರಾ ಬ್ಯಾಂಕ್ ಅಧಿಕಾರಿಗಳ ಜೊತೆ ಮಾತನಾಡಿ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ಸಹಕಾರ ಸಚಿವರು):–** ಮಾನ್ಯ ಸಭಾಪತಿಗಳೆ, ಹಲವಾರು ಸದಸ್ಯರು ಹಾಗೂ ವಿರೋಧ ಪಕ್ಷದ ನಾಯಕರು, ನಾಣಯ್ಯನವರು, ವೀರಯ್ಯನವರು, ಹೊರಟ್ಟಿಯವರು, ವಿಜಯ ಶಂಕರ್‌ರವರು, ನಾರಾಯಣಸ್ವಾಮಿಯವರು ಎಲ್ಲರು ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ನಿನ್ನೆ 5 ಗಂಟೆಗೆ ಈ ರೀತಿ ನೋಟಿಸ್ ಬಂದಿದೆ ಚರ್ಚೆ ಇದೆ ಎಂದು ನನ್ನ ಆಪ್ತ ಕಾರ್ಯದರ್ಶಿಯವರು ನನ್ನ ಗಮನಕ್ಕೆ ತಂದರು. ನಿನ್ನೆ ರಾತ್ರಿ 12 ಗಂಟೆವರೆಗೆ ವಿಧಾನಸಭೆಯಲ್ಲಿ ಇದೆ. ಇವತ್ತು ಬೆಳಗ್ಗೆ 12 ಗಂಟೆವರೆಗೆ ಅಲ್ಲಿ ಇದ್ದು ನಂತರ ಈ ಮನೆಗೆ ಬಂದೆ. ಬೆಳಿಗ್ಗೆ 9 ಗಂಟೆಗೆ ನಮ್ಮ ಹಿರಿಯ ಅಧಿಕಾರಿಗಳನ್ನು ಕರೆಯಿಸಿ ಚರ್ಚೆ ಮಾಡಿದೆ. ಅಧಿಕಾರಿಗಳ ಜೊತೆ ವಿಷಯವನ್ನು ಚರ್ಚೆ ಮಾಡಿದ ತಕ್ಷಣ, ಈ ವಿಷಯ ಗೊತ್ತಾದ ತಕ್ಷಣ ಯಾರಾದರು ಹಿರಿಯ ಅಧಿಕಾರಿಗಳು ಅಲ್ಲಿಗೆ ಹೋಗಿ ಸಾಮರಸ್ಯವನ್ನು ಕಾಪಾಡಿ ಆ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಪಟ್ಟಿದ್ದಿರಾ ಎಂದು ನಾನು ಅಧಿಕಾರಿಗಳನ್ನು ಪ್ರಶ್ನೆ ಮಾಡಿದೆ. ಚರ್ಚೆಯ ಸಮಯದಲ್ಲಿ ನನಗೆ ಗೊತ್ತಾಗಿರುವುದು, ಆ ಗ್ರಾಮದಲ್ಲಿ ಅಭಿವೃದ್ಧಿ ಅಧಿಕಾರಿಗಳು (CDO–Co-operative Development Officer) ಎಂದು ಇರುತ್ತಾರೆ. ಅವರು ಆ ಸೊಸೈಟಿಯ ಜೊತೆಯಲ್ಲಿ ಸೇರಿಕೊಂಡಿದ್ದಾರೆ ಎನ್ನುವುದು ಮೇಲ್ನೋಟಕ್ಕೆ ನನ್ನ ಮನಸ್ಸಿಗೆ ದೃಡವಾಗಿದೆ. Assistant Registrar ಕೂಡ ಅಲ್ಲಿ effective ಆಗಿ

ಕೆಲಸ ಮಾಡಿರುವುದಿಲ್ಲ ಎನ್ನುವುದು ಗೊತ್ತಾಗಿದೆ. ನಾನು ಈ ಸದನದ ಮೂಲಕ ಹಿರಿಯ ಅಧಿಕಾರಿಗಳಲ್ಲಿ ಮತ್ತು ಇತರೆ ಅಧಿಕಾರಿಗಳಲ್ಲಿ ಮನವಿ ಮಾಡಿಕೊಳ್ಳುವುದು ಏನು ಎಂದರೆ. ಈ ಸದನದ ಮೂಲಕ ಇಲಾಖಾಧಿಕಾರಿಗಳಲ್ಲಿ ಮನವಿ ಮಾಡುವುದೇನೆಂದರೆ, ಸಾಮಾಜಿಕ ನ್ಯಾಯಕ್ಕೆ ಮತ್ತು ಯಾವುದೇ ವರ್ಗದ ಸಾಮಾನ್ಯ ಜನರಿಗೆ, ಹಣ ಇಲ್ಲದೇ ಇರುವವರು ಅಥವಾ ದುರ್ಬಲ ವರ್ಗಗಳಿಗೆ ಸರ್ಕಾರದ ಕಾರ್ಯಕ್ರಮಗಳು ತಲುಪಿ, ಅವರಿಗೆ ಪ್ರಯೋಜನ ಸಿಗುವುದರಲ್ಲಿ ನಮ್ಮ ಅಧಿಕಾರಿಗಳು ಕೆಲಸ ಮಾಡದಿದ್ದರೆ ಅಥವಾ ಅವರ ಮನಸ್ಸನ್ನು ಬದಲಾಯಿಸದಿದ್ದರೆ ಸರ್ಕಾರದ ಕಾರ್ಯಕ್ರಮಗಳು ತಲುಪುವುದಿಲ್ಲ. ಇದರ ಬಗ್ಗೆ ನನಗೆ ಅತ್ಯಂತ ವ್ಯಥೆ ಇದೆ. ಇದನ್ನು ನಾನು ಮೊದಲಿನಿಂದಲೂ ನೋಡಿದ್ದು, ಇದರಲ್ಲಿ ಕೆಲವು ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ನನ್ನ ಮನಸ್ಸಿಗೆ ಬಂದಿದೆ. ರತ್ನಮ್ಮ ಎಂಬ ಒಬ್ಬ ಅಧ್ಯಕ್ಷೆ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ. ಅಲ್ಲದೆ Deputy Commissioner, Superintendent of Police ಮತ್ತು ನಮ್ಮ ಅಧಿಕಾರಿಗಳಿಗೆ ಪತ್ರ ಬರೆದು ಕೊನೆಗೆ ಎಲ್ಲೂ ನ್ಯಾಯ ಸಿಗದೇ 'National Commission for Scheduled Castes and Scheduled Tribes' ಅಲ್ಲಿಗೆ ಪತ್ರವನ್ನು ಬರೆದಿದ್ದು, ಅಲ್ಲಿಂದ ಪತ್ರ ಬಂದ ಮೇಲೆ ಈ process ಪ್ರಾರಂಭವಾಗಿದೆ. ಇದರಿಂದ ಮಾನಸಿಕವಾಗಿ ನೊಂದಿದ್ದೇನೆ. ದಲಿತ ಸಮಿತಿಯವರು ನ್ಯಾಯಕ್ಕೋಸ್ಕರವಾಗಿ ದೆಹಲಿಗೆ contact ಮಾಡಿರುವುದು ನೋಡಿ ಬೇಸರವಾಗಿದೆ. ಇಂತಹ ವಿಚಾರಗಳನ್ನು ನಾನಾಗಲೀ ಅಥವಾ ನಮ್ಮ ಅಧಿಕಾರಿಗಳಾಗಿ ಅಥವ ಇದರ ಬಗ್ಗೆ ಆಸಕ್ತಿ ವಹಿಸದಿರುವುದು ಅಕ್ಷಮ್ಯ ಅಪರಾಧ. ಈ ರೀತಿ ಸಾರ್ವಜನಿಕ ಮತ್ತು ಬಡವರ ವಿಚಾರದಲ್ಲಿ ಅಲಕ್ಷ್ಯ ಮಾಡಿದರೆ ತೀವ್ರ ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂದು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರ ಸಲಹೆ ತೆಗೆದುಕೊಂಡು ಭಾನುವಾರ ನಾನು ಮತ್ತು ಅಧಿಕಾರಿಗಳು ಗ್ರಾಮಕ್ಕೆ ಭೇಟಿ ಕೊಟ್ಟು ಸೌಹಾರ್ದತೆಯನ್ನು ಕಾಪಾಡುವುದು......

**(ಈ ಹಂತದಲ್ಲಿ ಮಾನ್ಯ ಉಪಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಚಿವರು ಹೋಗಿ ಮಾಡುವಂತಹ ದೊಡ್ಡ ವಿಚಾರ ಇದಲ್ಲ. ಆದರೆ ಅಲ್ಲಿ ಸಂಘರ್ಷ ಇದ್ದರೆ ಅಧಿಕಾರಿಗಳ ಮುಖಾಂತರ ಪರಿಹರಿಸಬೇಕು. ಅಧಿಕಾರಿಗಳ ಮಾತೂ ಕೇಳದ ಪರಿಸ್ಥಿತಿ ನಿರ್ಮಾಣವಾದ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬಹುದಾದ ಅಧಿಕಾರ ತಮ್ಮ ಕೈಯಲ್ಲಿದೆ. ನಂತರ ಚಲಾವಣೆ ಮಾಡಿ.

**ಶ್ರೀ ಬಿ.ಜಿ.ಪುಟ್ಟಸ್ವಾಮಿ:–** ನಾಳೆ ಅಥವಾ ನಾಡಿದ್ದು ನಮ್ಮ ಹಿರಿಯ ಅಧಿಕಾರಿಗಳನ್ನು ಆ ಸ್ಥಳದಲ್ಲಿ ಸೇರಿಸಿ, ಅಲ್ಲಿನ ಎರಡೂ ಕಡೆಯವರನ್ನು ಸೇರಿಸಿ ಸಾಮರಸ್ಯವನ್ನು ಕಾಪಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅಧಿಕಾರಿಗಳು ವರದಿ ಕೊಟ್ಟ ಪ್ರಕಾರ ಈಗಾಗಲೇ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯತ್ವ ಬಯಸಿದ 31 ಹರಿಜನರನ್ನು ಸೇರಿಸಿ ಸಭೆ ಮಾಡಿದ್ದಾರೆ ಎಂದು ತಿಳಿದುಬಂದಿದೆ. ಅಂದರೂ ಅವರು ಹಾಲನ್ನು ಹಾಕುತ್ತಿಲ್ಲವಾದ್ದರಿಂದ ಸೊಸೈಟಿಯಲ್ಲಿ ಸದಸ್ಯತ್ವ ಕೊಡುವುದಿಲ್ಲ ಎನ್ನುವ ದೃಢ ನಿಲುವನ್ನು ತೆಗೆದುಕೊಂಡು resolution ಪಾಸ್ ಮಾಡಿದ್ದಾರೆ

**ಶ್ರೀ ಡಿ.ಎಸ್.ವೀರಯ್ಯ:–** ಹರಿಜನ ಪದ ಎನ್ನುವುದು ದಾಖಲೆಗೆ ಹೋಗಬಾರದು.

**ಶ್ರೀ ಬಿ.ಜಿ. ಪುಟ್ಟಸ್ವಾಮಿ:–** ಕ್ಷಮಿಸಿ, ವಾಪಸ್ಸು ತೆಗೆದುಕೊಳ್ಳುತ್ತೇನೆ. 3–7–2012ರಂದು ಸೊಸೈಟಿಯವರು resolution ಪಾಸ್ ಮಾಡಿದ್ದು, ಹಾಲು ಹಾಕದಿದ್ದರೆ ಸದಸ್ಯತ್ವ ಕೊಡುವುದಿಲ್ಲ ಎಂದು ತಿಳಿದುಬಂದಿದೆ. ಇದನ್ನು ಅಧಿಕಾರಿಗಳ ಜೊತೆ ಚರ್ಚೆ ಮಾಡಿದಂತೆ ಕಾನೂನಿನ ಸದಸ್ಯತ್ವ ಕೊಡಬೇಕೆಂದು ಸ್ಪಷ್ಟವಾಗಿ ಇದೆ. ಅವರು ಹಸು ಇಲ್ಲದೇ ಹಾಲು ಹಾಕಿದರೆ ಸದಸ್ಯತ್ವ ಕೊಡುತ್ತೇನೆ ಎನ್ನುವುದು ಉದ್ದೇಶಪೂರ್ವಕವಾಗಿ ಮಾಡುತ್ತಿರುವುದು ಗೊತ್ತಾಗಿದೆ. ಆದರೂ ಅವರಲ್ಲಿ ಸಾಮರಸ್ಯ ಕಾಪಾಡಲು ಅಧಿಕಾರಿಗಳನ್ನು ಕಳುಹಿಸಿ ಸಭೆ ಮಾಡಿಸುತ್ತೇನೆ. ಸ್ವಲ್ಪವಾದರೂ ತಪ್ಪು

ಮಾಡಿದವರಿಗೆ ಶಿಕ್ಷೆ ಆಗಬೇಕೆಂಬ ದೃಷ್ಟಿಯಿಂದ ಸಹಕಾರಿ ಅಭಿವೃದ್ಧಿ ಅಧಿಕಾರಿಯನ್ನು ಈ ತಕ್ಷಣದಿಂದ ಅಮಾನತ್ತುಗೊಳಿಸಲು ಆದೇಶ ಕೊಡುತ್ತಿದ್ದೇನೆ ಹಾಗೂ ವಿಚಾರಣೆ ಮಾಡಿಸುತ್ತೇನೆ. Correspondence ಇದ್ದ ನವೆಂಬರ್ ತಿಂಗಳಿನಿಂದಲೇ ಹೆಚ್ಚಿನ ಮಹತ್ವವನ್ನು ಅಧಿಕಾರಿಗಳು ಕೊಟ್ಟಿದ್ದಾರೆ ಚರ್ಚೆಗೆ ಬರುತ್ತಿರಲಿಲ್ಲ ಮತ್ತು ಹರಿಜನರಿಗೆ ಅನ್ಯಾಯ ಆಗುತ್ತಿರಲಿಲ್ಲ ಎಂದು ನನ್ನ ಭಾವನೆ. ಇದನ್ನು ವಿಚಾರಣೆಗೆ ಆದೇಶ ಮಾಡುತ್ತೇನೆ, ಅಧಿಕಾರಿಯನ್ನು ಅಮಾನತ್ತು ಮಾಡಿದ್ದೇನೆ. ಯಾರು ಇದರಲ್ಲಿ ತಪ್ಪು ಮಾಡಿರುವವರ ವಿರುದ್ಧ ಕಾನೂನು ಪ್ರಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

**Sri S.R. PATIL:-** Mr. Chairman Sir, that Assistant Registrar of Co-operative Societies (ARCS) has also failed to discharge his duties properly ಎಂದು ಹೇಳಿದಿರಲ್ಲ, ಅವರಿಗೂ ಒಂದು ನೋಟೀಸ್ issue ಮಾಡಿ.

**ಶ್ರೀ ಬಿ.ಜಿ. ಪುಟ್ಟಸ್ವಾಮಿ:-** ಪೂರ್ಣ ವಿಚಾರಣೆಗೆ ಆದೇಶ ಮಾಡುತ್ತೇನೆ. ಈ ಪತ್ರವನ್ನು ಯಾರು ಯಾರು ನೋಡಿದ್ದಾರೆ ಮತ್ತು ಇಲ್ಲಿಯವರೆವಿಗೂ ಡಿಲೇ ಮಾಡಿದ್ದು ಏಕೆ? ARCSಗೂ ನೋಟೀಸ್ ಕೊಡುತ್ತೇನೆ. ಅವರು ತಪ್ಪಿತಸ್ಥರಾಗಿದ್ದರೆ ಅವರ ಮೇಲೂ ಶಿಸ್ತು ಕ್ರಮ ತೆಗೆದುಕೊಳ್ಳುತ್ತೇನೆ. ಈಗ ಸಹಕಾರ ಅಭಿವೃದ್ಧಿ ಅಧಿಕಾರಿಯನ್ನು ಅಮಾನತ್ತು ಮಾಡುತ್ತಿದ್ದೇನೆ ಹಾಗೂ ಈ ಸದನದ ಮೂಲಕ ಇಲಾಖೆಯಲ್ಲಿರುವ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತಿದ್ದೇನೆ. ಇಂತಹ ಯಾವುದೇ ವಿಚಾರಗಳು ಕರ್ನಾಟಕ ರಾಜ್ಯದಲ್ಲಿ ಮರುಕಳಿಸಿದರೆ ಅಸಿಸ್ಟೆಂಟ್ ರಿಜಿಸ್ಟ್ರಾರ್ ಮತ್ತು ಅಭಿವೃದ್ಧಿ ಅಧಿಕಾರಿಯವರು ನೇರವಾದ ಜವಾಬ್ದಾರಿ ಹೊರಬೇಕಾಗುತ್ತದೆ ಎಂಬ ಸೂಚನೆ ಮತ್ತು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಅಧಿಕಾರಿಗಳ ಸಾಮರಸ್ಯಕ್ಕೆ ಬಗ್ಗದಿದ್ದರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ.

**ಉಪಸಭಾಪತಿಯವರು:-** ಈಗ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಬಿಲ್ ಬರುತ್ತದೆ. ಅರ್ಧ ಗಂಟೆಯ ಚರ್ಚೆಯನ್ನು ತೆಗೆದುಕೊಳ್ಳೋಣವೇ?

**ಶ್ರೀ ಎಂ.ಸಿ.ನಾಣಯ್ಯ:-** 10 ನಿಮಿಷ ಮುಂದೂಡಿದರೆ ಕಾಫಿ ಕುಡಿದುಕೊಂಡು ಬರಬಹುದು.

**ಶ್ರೀ ಗೋ.ಮದುಸೂಧನ್:-** 'ಆಂಟಿಸಿಪೇಟರಿ ಬೇಲ್' ಇದ್ದಂತೆ 'ಆಂಟಿಸಿಪೇಟರಿ ಬೇಲ್' ಪಾಸ್.... 'ಆಂಟಿಸಿಪೇಟರಿ ವಾಕ್ಔಟ್'......

**Sri M.C. NANAIAH:-** Yes, in anticipation of the Bill, we will pass it

**ಡಾ|| ಎ.ಹೆಚ್.ಶಿವಯೋಗಿಸ್ವಾಮಿ:-** ಇಲಾಖೆ ಮೇಲೆ ಚರ್ಚೆ ಇದೆ.

**ಶ್ರೀ ಬಸವರಾಜ ಹೊರಟ್ಟಿ:-** ಕುಳಿತು-ಕುಳಿತು ಸಾಕಾಗಿದೆ, 10 ನಿಮಿಷ ಮುಂದೂಡಿ.

**ಶ್ರೀ ಎಸ್.ಆರ್.ಪಾಟೀಲ್:-** ಈಗ ಚರ್ಚೆ ಮಾಡುವುದು ಸಾಧ್ಯವೇ? Is it possible? Can we discuss it now?

**ಶ್ರೀ ಗೋ.ಮದುಸೂಧನ್:-** ಇಚ್ಛಾ ಮರಣದ ಬಗ್ಗೆ ಮಾತನಾಡಲಿ, ಯಾರೂ ಬೇಕಾದರೂ ಓಡಾಡಲಿ.

**ಶ್ರೀ ಎಸ್.ಆರ್.ಪಾಟೀಲ್:-** ಯಾವ ಇಚ್ಛಾ ಮರಣವೂ ಇಲ್ಲ, mercy killing ಸಹ ಇಲ್ಲ.

**ಶ್ರೀ ವಿ.ಸೋಮಣ್ಣ:-** 10 ನಿಮಿಷ ಮುಂದಕ್ಕೆ ಹಾಕಿ, ಮಾನ್ಯ ನಾಣಯ್ಯನವರು ಮಾತನಾಡುವುದನ್ನು ನಾವು ಕೇಳಬೇಕು.

**ಶ್ರೀ ಎಂ.ಸಿ.ನಾಣಯ್ಯ:-** ಮಾನ್ಯ ಸಚಿವರು ಮಾನವ ಹಕ್ಕು ಆಯೋಗಕ್ಕೆ ಒಂದು ಪತ್ರ ಹೋಗಿರುವ ಹಿನ್ನೆಲೆಯಲ್ಲಿ ಮತ್ತು ಆ ಪತ್ರದ ನಕಲು ಬಂದ ನಂತರ ಚಾಲನೆ ಸಿಕ್ಕಿತು ಎಂದು ಹೇಳಿದರು. ತಾವು ನಮಗೆ ಕೊಡುತ್ತಿರುವ human rights violation ಬಗ್ಗೆ ನಾವು ಅವರಿಗೆ ಕೊಟ್ಟು ತಮಗೆ

ಕಳುಹಿಸಬೇಕಾಗುತ್ತದೆ. ಏನ್ ಸಾರ್ ಇದು? This is a torture. This is nothing but human torture. ಏನೂ ವ್ಯತ್ಯಾಸ ಆಗುವುದಿಲ್ಲ. ಅಧಿಕಾರದಲ್ಲಿ ಇದ್ದೇವೆ ಎಂದು ಸುಮ್ಮನೆ ಕೂರಿ. ಅವರಿಗೆ ದಿನಾಂಕ 30, 31ರವರೆಗೆ ಸಮಯ ಇದೆ. ಘನತೆವೆತ್ತ ರಾಜ್ಯಪಾಲರು ಇರುತ್ತಾರೆ. ಇದೇನಿದು? ವರಲಕ್ಷ್ಮಿ ಪೂಜೆ ಎಂದು ಎಲ್ಲಾ ಹೆಣ್ಣುಮಕ್ಕಳು ಹೋದರು. ಎಲ್ಲಾ ಲಕ್ಷ್ಮಿಗಳು ಹೋದರು. ಮಹಾಲಕ್ಷ್ಮಿಯವರಾದ ಉಪಸಭಾಪತಿಯವರು ಮಾತ್ರ ಇದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಬಹಳ ಮಹತ್ವದ ಬಿಲ್ಲುಗಳು ಇದ್ದು, ಅವುಗಳ ಮೇಲೆ ಸುದೀರ್ಘವಾಗಿ ಚರ್ಚೆಯಾಗಬೇಕು. ಕನಿಷ್ಠ 8–10 ಗಂಟೆಗಳ ಕಾಲ ಚರ್ಚೆಯಾಗಬೇಕು.

**ಉಪ ಸಭಾಪತಿಯವರು:-** ಮಾನ್ಯ ಹುಲಿನಾಯ್ಕರ್‌ರವರು ಒಂದು ಚೀಟಿಯನ್ನು ಕಳುಹಿಸಿ, ಅವರು ವೈದ್ಯರಾಗಿರುವುದರಿಂದ ಇಚ್ಛಾ ಮರಣದ ಬಗ್ಗೆ 5–10 ನಿಮಿಷಗಳ ಕಾಲ ಮಾತನಾಡಲು ವಿನಂತಿಸಿದ್ದಾರೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಅದರ ವಿಷಯ ಮುಗಿದಿದೆ, ಮತ್ತೆ ಪುನಃ reopen ಮಾಡುತ್ತೀರಾ? ಅದು ಸದನದ ಸತ್ಸಂಪ್ರದಾಯವಲ್ಲ.

**ಶ್ರೀ ಎಂ.ಸಿ.ನಾಣಯ್ಯ:-** ಮಾನ್ಯ ಸಭಾಪತಿಯವರೇ, ನಾವು ಒಂದು ಹತ್ತು ನಿಮಿಷ ಕಳೆದು ಮತ್ತೆ ಸದನಕ್ಕೆ ಬರುತ್ತೇವೆ.

**ಶ್ರೀ ಗೋ. ಮದುಸೂಧನ್:-** ಹುಲಿ ಒಂದು ಆತ್ಮಹತ್ಯೆ ಮಾಡಿಕೊಂಡಿತ್ತು. ಶ್ರೀ ಹುಲಿನಾಯ್ಕರ್‌ರವರಿಗೆ ಅನುಮತಿ ಕೊಡಬೇಕು.

**ಉಪ ಸಭಾಪತಿಯವರು:-** ಈಗ ಸದನವನ್ನು 20 ನಿಮಿಷಗಳ ಕಾಲ ಮುಂದೂಡುತ್ತೇನೆ.

**(8 ಗಂಟೆ 14 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು ಪುನಃ 8 ಗಂಟೆ 47 ನಿಮಿಷಗಳಿಗೆ ಪುನಃ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು)**

## 7. ಪ್ರಕಟಣೆ

**ಸಭಾಪತಿಯವರು:–** ಕರ್ನಾಟಕ ವಿಧಾನ ಸಭೆಯ ಸಭಾಧ್ಯಕ್ಷರವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯ ದಿನಾಂಕ 27–7–2012 ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿತೆಂದೂ ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿಯನ್ನು ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ಧನ ವಿನಿಯೋಗ (ಸಂಖ್ಯೆ 2) ವಿಧೇಯಕ, 2012
2. ಕರ್ನಾಟಕ ಧನ ವಿನಿಯೋಗ (ಸಂಖ್ಯೆ 3) ವಿಧೇಯಕ, 2012
3. ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ಎರಡನೇ ತಿದ್ದುಪಡಿ), ವಿಧೇಯಕ, 2012

## 8. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿ:–** ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಇಡುತ್ತೇನೆ.

1. ಕರ್ನಾಟಕ ಧನ ವಿನಿಯೋಗ (ಸಂಖ್ಯೆ 2) ವಿಧೇಯಕ, 2012
2. ಕರ್ನಾಟಕ ಧನ ವಿನಿಯೋಗ (ಸಂಖ್ಯೆ 3) ವಿಧೇಯಕ, 2012
3. ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ಎರಡನೇ ತಿದ್ದುಪಡಿ), ವಿಧೇಯಕ, 2012

## 9. ಶಾಸನ ರಚನೆ

## ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

## i) ಕರ್ನಾಟಕ ಧನ ವಿನಿಯೋಗ (ಸಂಖ್ಯೆ 2) ವಿಧೇಯಕ 2012

## ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಜಗದೀಶ್ ಶೆಟ್ಟರ್(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2012 ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೊರುತ್ತೇನೆ.

**ಪ್ರಸ್ತಾವವನ್ನು ಮಂಡಿಲಾಯಿತು**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಇಂದು ಈ ಮಹತ್ವದ ಧನ ವಿನಿಯೋಗ ವಿಧೇಯಕವನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಒಪ್ಪಿಗೆಗಾಗಿ ಮಂಡಿಸಿದ್ದಾರೆ. ಆಗಲೇ 9 ಗಂಟೆ ಸಮೀಪಿಸುತ್ತಿದೆ. ಇದರ ಬಗ್ಗೆ ಕನಿಷ್ಠ ಎಂದರೂ 5-6 ಗಂಟೆಗಳ ಕಾಲ ಚರ್ಚೆ ಆಗಬೇಕಾಗಿದೆ. ಇದು ಬಹಳ ಮಹತ್ವದ ವಿಧೇಯಕವಾಗಿರುತ್ತದೆ. ಕೇವಲ ಬರಗಾಲದ ಮೇಲೆ ಸುಮಾರು 8-10 ತಾಸುಗಳವರೆಗೆ ನಮ್ಮ ಮಾನ್ಯ ಸದಸ್ಯರುಗಳು ಮತ್ತು ನಾವೆಲ್ಲರೂ ಕೂಡಿ ಚರ್ಚೆಯನ್ನು ಮಾಡಿದ್ದೇವೆ. ತಾವು 4 ತಿಂಗಳಿನವರೆಗೆ ಲೇಖಾನು ದಾನವನ್ನು ಪಡೆದಿದ್ದೀರಿ. ಇನ್ನು 8 ತಿಂಗಳು ಇದೆ. ಇವತ್ತು ಪೂರ್ಣ ಪ್ರಮಾಣದ ಆಯವ್ಯಯದ ಒಪ್ಪಿಗೆಗಾಗಿ ಈ ಸದನದ ಮುಂದೆ ಮಂಡಿಸಿದ್ದೀರಿ. ಇದರ ಬಗ್ಗೆ ಈ ಸದನದಲ್ಲಿ ಸುದೀರ್ಘವಾಗಿ ಚರ್ಚೆ ಆಗಬೇಕಾಗಿದೆ. ಮತ್ತು ನಾವು ಅನೇಕ ವಿಚಾರಗಳ ಮೇಲೆ ಬೆಳಕನ್ನು ಚೆಲ್ಲಬೇಕಾಗಿದೆ. ಮತ್ತು ಕೆಲವು ವಿಚಾರಗಳ ಬಗ್ಗೆ ಸರ್ಕಾರಕ್ಕೆ ಹೇಳಬೇಕಾಗಿದೆ. ಆದುದರಿಂದ, ಈಗ ಈ ವಿಚಾರದ ಬಗ್ಗೆ ಚರ್ಚೆ ಪ್ರಾರಂಭವಾಗಿದ್ದೇ ಆದರೆ ಬೆಳಗಿನವರೆಗೂ ಕೂಡ ಚರ್ಚೆ ಮಾಡಬೇಕಾಗಬಹುದು ಮತ್ತು ಇದು ಬಹಳ ಮಹತ್ವವಾದದ್ದಾಗಿದೆ. ಅಧಿವೇಶನ ಕರೆದ ಮಹತ್ವದ ಉದ್ದೇಶವೇ ಇದು

ಎಂದರೆ ತಪ್ಪಾಗಲಾರದು. ಇದರ ಜೊತೆಯಲ್ಲಿ ಇನ್ನೂ ಹಲವಾರು ವಿಧೇಯಕಗಳು ಇವೆ. ಈ ಧನ ವಿನಿಯೋಗ ವಿಧೇಯಕದ ಬಗ್ಗೆ ಪ್ರತಿ ಪಕ್ಷದ ಪರವಾಗಿ ಎಲ್ಲ ಸದಸ್ಯರು ಬಹಳ ಸುದೀರ್ಘವಾದ ಮಾತುಗಳನ್ನು ಹೇಳಬೇಕಾಗುತ್ತದೆ. ಅನೇಕ ಅಂಶಗಳ ಬಗ್ಗೆ ಬೆಳಕನ್ನು ಚೆಲ್ಲಬೇಕಾಗುತ್ತದೆ. ಆ ಮೂಲಕ ಸರ್ಕಾರಕ್ಕೆ ಅನೇಕ ಸಲಹೆ ಸೂಚನೆಗಳನ್ನು ಕೊಡಬೇಕಾಗಿದೆ. ಈ ನಾಲ್ಕು ತಿಂಗಳ ಅವಧಿಯಲ್ಲಿ ಏನೇನಾಗಿದೆ ಅದರ ಬಗ್ಗೆ ನಾವು ಚರ್ಚೆ ಮಾಡಬೇಕಾಗುತ್ತದೆ. ಇಷ್ಟು ಹೊತ್ತಿನ ನಂತರ ಇದನ್ನು ಚರ್ಚೆ ಮಾಡಲು ಕೈಗೆತ್ತಿಕೊಳ್ಳುವ ವಿಚಾರ ಅಲ್ಲ. ಆದುದರಿಂದ, ಈ ಬಗ್ಗೆ ಸೋಮವಾರ ಚರ್ಚೆಗೆ ತೆಗೆದುಕೊಂಡರೆ ಎಲ್ಲರ ಹಿತದೃಷ್ಟಿಯಿಂದ ಬಹಳ ಒಳ್ಳೆಯದು ಎಂದು ಹೇಳಬಯಸುತ್ತೇನೆ. We will place it on Monday.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಯವರು ಏನು ಹೇಳುತ್ತಾರೆಯೋ ಕೇಳೋಣ. ನನ್ನ ಕೈಯ್ಯಲ್ಲಿ ಏನೂ ಇಲ್ಲ.

**ಶ್ರೀ ಎಂ.ಸಿ.ನಾಣಯ್ಯ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾವು ಈ ಚರ್ಚೆಯಿಂದ ಪಲಾಯನ ಮಾಡುವಂತಹ ಸ್ಥಿತಿಯಲ್ಲಿ ಇಲ್ಲ. ಆದರೆ ವಸ್ತು ಸ್ಥಿತಿಯನ್ನು ನಾವು ಸರ್ಕಾರಕ್ಕೆ ಹೇಳಲೇಬೇಕಾಗುತ್ತದೆ. ಈ ಮುಂಗಡ ಪತ್ರವನ್ನು ಮಂಡಿಸಿದಂತಹ ಸಂದರ್ಭದಲ್ಲಿ ಇವತ್ತು ಮುಖ್ಯಮಂತ್ರಿಯಾಗಿರತಕ್ಕಂಥ ಮಾನ್ಯ ಜಗದೀಶ್ ಶೆಟ್ಟರ್ ಅವರು ಅಂದು ಮುಖ್ಯಮಂತ್ರಿಗಳಾಗಿ ಇರಲಿಲ್ಲ. ಅಂದು ಮಾನ್ಯ ಸದಾನಂದಗೌಡರವರು ಮುಖ್ಯಮಂತ್ರಿಗಳಾಗಿದ್ದರು. ಇವತ್ತು ಮಾನ್ಯ ಜಗದೀಶ್ ಶೆಟ್ಟರ್ ಅವರು ಮುಖ್ಯಮಂತ್ರಿಗಳಾಗಿದ್ದಾರೆ. ಇಡೀ ಲೋಕಕ್ಕೆ, ಇಡೀ ರಾಷ್ಟ್ರಕ್ಕೆ ಹೇಳಿದ ಹಾಗೆ 1 ಲಕ್ಷದ 3 ಸಾವಿರ ಕೋಟಿ ರೂಪಾಯಿಗಳ ಆಯವ್ಯಯವನ್ನು ಮಂಡಿಸಿದರು. ಅತ್ಯಂತ ದೊಡ್ಡದಾದ ಆಯವ್ಯಯವನ್ನು ಮಂಡಿಸಿ, ಬಹಳ ದೊಡ್ಡದಾದ ಇತಿಹಾಸವನ್ನೇ ಸೃಷ್ಟಿ ಮಾಡಿದ್ದೇವೆಂದು ಹೇಳಿ ನಮ್ಮ ರಾಜ್ಯದ ಉದ್ದಗಲಕ್ಕೂ ಪತ್ರಿಕೆಗಳೂ ಕೂಡ ಬಹಳ ದೊಡ್ಡದಾದ ಪ್ರಚಾರವನ್ನು ಮಾಡಿದರು. ನಾವೂ ಕೂಡ ಇದರ ಬಗ್ಗೆ ಅಂದು ಒಂದು ಚಿಂತನೆಯನ್ನು ಮಾಡಿದ್ದೆವು. ನಾವು ಬಹಳ ವರ್ಷಗಳವರೆಗೆ ಈ ವಿಧಾನ ಮಂಡಲದಲ್ಲಿ

ಕೆಲಸ ಮಾಡಿದ್ದೇವೆ ಮತ್ತು ಹಿಂದೆ ಮಂಡಿಸಿದಂತಹ ಎಲ್ಲಾ ಆಯವ್ಯಯ ಪತ್ರಗಳನ್ನೂ ಕೂಡ ನೋಡಿದ್ದೇವೆ. ಈ ಆಯವ್ಯಯ ಇತಿಹಾಸವನ್ನು ಸೃಷ್ಟಿಸುವ ಆಯವ್ಯಯ ಎಂದ ಮೇಲೆ ಇದರ ಬಗ್ಗೆ ಸಾಕಷ್ಟು ಚರ್ಚೆ ಮಾಡುವುದಕ್ಕೆ ಎಷ್ಟು ಅವಕಾಶ ಸಿಗಬೇಕಾಗಿತ್ತೋ ಅಷ್ಟು ಅವಕಾಶ ಸಿಗಬೇಕಾಗಿತ್ತು. 15–20–25–30–40 ಸಾವಿರ ಕೋಟಿ ರೂಪಾಯಿಗಳ ಆಯವ್ಯಯವನ್ನು ನೋಡಿದ್ದೇವೆ. ಅವುಗಳ ಮೇಲೆ ಚರ್ಚೆಯನ್ನು ಮಾಡಿಕೊಂಡು ಬಂದಿದ್ದೇವೆ. ಆದರೆ, ಇಷ್ಟು ದೊಡ್ಡ ಪ್ರಮಾಣದ ಆಯವ್ಯಯದ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ನಮಗೆ ಸಾಕಷ್ಟು ಅವಕಾಶಗಳನ್ನು ಕೊಡಬೇಕಾಗುತ್ತದೆ. ಈ ಸದನದಲ್ಲಿ ಒಂದು ದಿವಸ ಮುಂಚೆ ಈ ಧನ ವಿನಿಯೋಗ ಮಸೂದೆ ಬಂದು ಆ ಒಂದು ದಿವಸ ಇದರ ಬಗ್ಗೆ ಚರ್ಚೆ ಮಾಡಿದಂತಹ ಉದಾಹರಣೆ ಕೂಡ ಉಂಟು. ನಾನು ಇಲ್ಲವೆಂದು ಹೇಳುವುದಕ್ಕೆ ತಯಾರಿಲ್ಲ. ಇನ್ನು ಕೆಳಗಿನ ಮನೆಯಲ್ಲಿ ಕಳೆದ ಒಂದೂವರೆ ದಿವಸ ಕೂಡ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಆಗಲಿಲ್ಲ. ಇಲಾಖಾವಾರು ಬೇಡಿಕೆಗಳ ಬಗ್ಗೆ ಕೂಡ ಸರಿಯಾಗಿ ಚರ್ಚೆ ನಡೆಯದೆ guillotine ಮುಖಾಂತರ ಪಾಸ್ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ಈ ಸದನದಲ್ಲಿ ಇಲಾಖಾವಾರು ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವುದಿಲ್ಲ. ಇಲ್ಲಿ ಈ ಧನ ವಿನಿಯೋಗ ವಿಧೇಯಕದ ಬಗ್ಗೆ ಚರ್ಚೆ ಮಾಡುತ್ತೇವೆ. ಆ ಸಂದರ್ಭದಲ್ಲಿ 4 ತಿಂಗಳಿಗೆ ಲೇಖಾನುದಾನವನ್ನು ತೆಗೆದುಕೊಂಡಿದ್ದಿರಿ. ಈ ನಾಲ್ಕು ತಿಂಗಳು ಪೂರ್ತಿಯಾಗುವುದಕ್ಕೆ ಇನ್ನೂ ನಾಲ್ಕು ದಿವಸ ಇದೆ. ಮಾನ್ಯ ರಾಜ್ಯಪಾಲರು ಇಲ್ಲಿಯೇ ಇದ್ದಾರೆ. ಅವರು ಹೊರಗೆ ಎಲ್ಲೂ ಕೂಡ ಹೋಗಿಲ್ಲ. ಅದರಲ್ಲೂ ಇವತ್ತು 27ನೇ ತಾರೀಖು. ಇಂದು ವರಮಹಾಲಕ್ಷ್ಮಿ ಪೂಜೆ ಇದೆ. ಈ ವರಮಹಾಲಕ್ಷ್ಮಿ ಪೂಜೆಯ ದಿವಸವೇ ಇದನ್ನು ಪಾಸ್ ಮಾಡಬೇಕೆಂದು ಹೊರಟಾಗ ಒಬ್ಬ ಮಹಾಲಕ್ಷ್ಮಿ ಒಬ್ಬರನ್ನು ಬಿಟ್ಟು ಬಾಕಿ ಇರತಕ್ಕ ವರ ಮಹಾಲಕ್ಷ್ಮಿಯವರೆಲ್ಲರೂ ಕೂಡ ನಮ್ಮನ್ನು ಬಿಟ್ಟು ಹೋಗಿದ್ದಾರೆ. ಈ ಮಹಾಲಕ್ಷ್ಮಿ ಅವರಿಗೆ ಒಂದು ಅಧಿಕಾರವನ್ನು ಕೊಟ್ಟಿದ್ದೀರಿ ಅದಕ್ಕೋಸ್ಕರ ಅನಿವಾರ್ಯವಾಗಿ ಅವರು ಇಲ್ಲಿ

ಕುಳಿತಿದ್ದಾರೆ. ಇಲ್ಲವಾದಲ್ಲಿ ಅವರು ಕೂಡ ವರಮಹಾಲಕ್ಷ್ಮಿ ಪೂಜೆಗೆ ಇಂದು ಮನೆಗೆ ಹೋಗಲೇಬೇಕಾಗಿತ್ತು. ನೀವು ಮಾಡುತ್ತಿರುವಂತಹ ಈ ಕೆಲಸದಲ್ಲಿ ಲಕ್ಷ್ಮಿ ಅಂತೂ ನಿಮ್ಮ ಕಡೆ ಒಲಿಯುವುದಿಲ್ಲ. ಈಗ 8–45 ಆಯಿತು. ಈ ಮಸೂದೆ ಮಧ್ಯಾಹ್ನದ ಮೇಲೆ ಆದರೂ ಬರುತ್ತದೆ ಎಂದು ನಾವು ನಿರೀಕ್ಷೆ ಅಂದುಕೊಂಡಿದ್ದೆವು. ಮಾನಸಿಕವಾಗಿ ನಾವು ಈ ಚರ್ಚೆಯಲ್ಲಿ ಭಾಗವಹಿಸಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳೇ ತಾವೂ ಇದನ್ನು ಒಪ್ಪುತ್ತೀರೋ ಇಲ್ಲವೋ ಹೇಳಿ. ಮಾನ್ಯ ಮುಖ್ಯಮಂತ್ರಿಗಳೆ ತಮಗೆ ಎಷ್ಟು ಹಿಂಸೆ ಆಗಿರಬಹುದೆಂಬುದು ನನಗೆ ಗೊತ್ತಿದೆ. ಇವತ್ತೇ ಈ ವಿಧೇಯಕವನ್ನು ಪಾಸ್ ಮಾಡಬೇಕೆಂದು ಹೇಳುವುದರಲ್ಲಿ ಜ್ಯೋತಿಷಿಗಳು ಅವರು ಇವರು ಇರುವುದರಿಂದ ನೀವು ಏನಾದರೂ ಆ ಒಂದು ಮೌಢ್ಯಕ್ಕೆ ಕಟ್ಟು ಬಿದ್ದಿದ್ದೀರಾ ಎಂಬ ಒಂದು ಭಾವನೆ, ಸಂಶಯ ನನಗೆ ಬರುತ್ತಿದೆ. ಅದು ಇಲ್ಲವೆಂದಾದರೆ ನೀವು ಈ ವಿಧೇಯಕವನ್ನು 30ನೇ ತಾರೀಖು ಅಂದರೆ ಸೋಮವಾರ ಇದನ್ನು ತೆಗೆದೊಕೊಳ್ಳಿ. ನಿಮಗೆ 30ನೇ ತಾರೀಖಿನ ರಾತ್ರಿಯವರೆಗೆ ಇದರ ಬಗ್ಗೆ ಚರ್ಚೆ ಮಾಡಿ ಇದನ್ನು ಪಾಸ್ ಮಾಡಿ ಇದನ್ನು ಮಾನ್ಯ ರಾಜ್ಯಪಾಲರ ಒಪ್ಪಿಗೆಗಾಗಿ ಕಳುಹಿಸಿದರೆ ತಪ್ಪು ಏನಾಗುತ್ತದೆ? ಹೇಗೂ 31ನೇ ತಾರೀಖಿನವರೆಗೆ ಸಮಯ ಇರುತ್ತದೆ. ನಾವು ಆಗಲೇ ಹೋಗಬೇಕೆಂದು ನಮ್ಮ ಮನಸ್ಸಿನಲ್ಲಿ ತೀರ್ಮಾನ ಇದ್ದರೂ ಕೂಡ ನಮ್ಮ ಈ ಒಂದು ವಿಚಾರವನ್ನು ತಮಗೆ ತಿಳಿಸಿ ತಮ್ಮ ಮನಸ್ಸನ್ನು ಪರಿವರ್ತನೆ ಮಾಡೋಣ ಎಂದು ಇಲ್ಲಿ ಇದ್ದೇವೆ. ಕೆಳಗಿನ ಮನೆಯಲ್ಲಿ ಇದು ಆಗಲಿಲ್ಲ. ಮೇಲ್ಮನೆಯಲ್ಲಿ ಆದರೂ ಹಿರಿಯರ ಮಾತಿಗೆ ಬೆಲೆಯನ್ನು ಕೊಡಬಹುದು ಎಂಬ ದೃಷ್ಟಿಯಿಂದ ಇಲ್ಲಿಯವರೆಗೆ ಕಾದು ಕುಳಿತಿದ್ದೇವೆ. human rightsನ ಕಾನೂನಿನ ಅಡಿಯಲ್ಲಿ ಈ human rights violation ಎಲ್ಲಿಯಾದರೂ ಕಾನೂನಿನಡಿಯಲ್ಲಿ ಇದ್ದರೆ ಅದು this is the biggest human violation which you are doing. This is not only mental torture, this is physical torture also. 8 ಗಂಟೆ ಅಲ್ಲ 10 ಗಂಟೆಯವರೆಗೂ ಕೂತಿದ್ದೂ ಇದೆ. ಈ ಸದನದಲ್ಲಿ ನಾನು ಸಭಾ ನಾಯಕನಾಗಿ ಕೆಲಸವನ್ನು ನಿರ್ವಹಿಸಿದ್ದೇನೆ. ಕೆಳಗಿನ ಮನೆಯಲ್ಲಿ ಕೂಡ

ಸದಸ್ಯನಾಗಿ ಕೆಲಸವನ್ನು ಮಾಡಿದ್ದೇನೆ. ಆಗ ವಿರೋಧ ಪಕ್ಷದಲ್ಲಿ ಕಾಂಗ್ರೆಸ್ ಮತ್ತು ಬಿ.ಜೆ.ಪಿ ಪಕ್ಷದವರು ಎಲ್ಲರೂ ಸೇರಿದ್ದೀರಿ. ನೀವೆಲ್ಲರೂ ಸೇರಿ ವಿಧಾನ ಸಭೆಯ ಪ್ರಾಂಗಣದಲ್ಲಿ ಧರಣಿಯನ್ನು ನಡೆಸಿದ್ದಿರಿ. ನಾನೇ ಆ ಸಂದರ್ಭದಲ್ಲಿ ಸಚಿವನಾಗಿ ಇದ್ದೆ. ನಿಮಗೆಲ್ಲರಿಗೂ ಊಟ ಮತ್ತು ಹಾಸಿಗೆ ಹೊದಿಯಲಿಕ್ಕೆ ಮೆತ್ತನೆಯನ್ನು ಕೊಡುವಂತಹ ಕೆಲಸವನ್ನು ಮಾಡಿದ್ದೇನೆ. ಇಲ್ಲವೆಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಮತ್ತು ಆ ಸಂದರ್ಭದಲ್ಲಿ ನೀವು ಅದನ್ನು ಮಾಡಿದ್ದಕ್ಕೆ ಒಂದು ಕಾರಣ ಇತ್ತು. ನಾನು ಅದನ್ನು ಸ್ವೀಕಾರ ಮಾಡಿದೆ. ನಾನು ನಿಮ್ಮನ್ನು ಹೊರಗೆ ಹಾಕಿ ಬೀಗ ಹಾಕುವ ಕೆಲಸವನ್ನು ಮಾಡಲಿಲ್ಲ. ನಿಮ್ಮನ್ನು ಅಲ್ಲಿ ಕೂರಿಸಿ ಈ ಎಲ್ಲಾ ಅನುಕೂಲಗಳನ್ನು ಮಾಡಿ ಕೊಟ್ಟಿದ್ದೆ. ಮಾರನೇಯ ದಿವಸ ನೀವೇ ಸುಪುಷ್ಠಿಗಳಾಗಿ ಅಲ್ಲಿಂದ ಹೊರಟು ಹೋದಿರಿ. ಇವತ್ತು 30 ಇಲ್ಲವೇ 31ನೇ ತಾರೀಖು ಆಗಿದ್ದಿದ್ದರೆ ಖಂಡಿತವಾಗಿ ನಾವು ಇಲ್ಲಿ ಕುಳಿತು ಇನ್ನು ಎರಡು ಗಂಟೆ ಆಗಿದ್ದರೂ ಈ ಬಗ್ಗೆ ಚರ್ಚೆ ಮಾಡುತ್ತಿದ್ದೆವು. ಆದರೆ ಇನ್ನೂ ಎರಡು ದಿವಸ ಸಮಯಾವಕಾಶ ಇರುವಾಗ ಮತ್ತು ಮಾನ್ಯ ರಾಜ್ಯಪಾಲರು ಇಲ್ಲಿಯೇ ಇದ್ದಾರೆ. ನಾವು ಇಲ್ಲಿ ಪಾಸ್ ಮಾಡಿದ ನಂತರ ಅದು ಕೂಡಲೇ ಅವರಿಗೆ ಹೋಗುತ್ತದೆ. ಅವರು ಅದಕ್ಕೆ ಕೂಡಲೇ ತಮ್ಮ ಅಂಕಿತವನ್ನು ಹಾಕುತ್ತಾರೆ. ಈ ಧನ ವಿನಿಯೋಗ ತಿದ್ದುಪಡಿ ಮಸೂದೆಗೆ ಅಂಕಿತವನ್ನು ಹಾಕುತ್ತಾರೆ. ನಿಮ್ಮ consequential money bill ಏನು ಇದೆ ಅದನ್ನು ನೀವು ಕಳುಹಿಸಿದರೆ ಅದಕ್ಕೆ ಒಪ್ಪಿಗೆಯನ್ನು ಕೊಡುತ್ತಾರೆ. ಈ ಪರಿಸ್ಥಿತಿಯನ್ನು ನಾನು ಹೇಳಿದೆ. ನಾನು ಇನ್ನೂ ಒಂದು ಸಲಹೆಯನ್ನು ತಮಗೆ ಕೊಟ್ಟಿದ್ದೆ. ಅದನ್ನೂ ಕೇಳಲಿಲ್ಲ. 4 ತಿಂಗಳಿಗೆ ಲೇಖಾನುದಾನವನ್ನು ತೆಗೆದುಕೊಂಡಿದ್ದೀರಿ. ಇನ್ನು 15 ದಿವಸಕ್ಕೆ ಲೇಖಾನುದಾನವನ್ನು ಹೆಚ್ಚಿಗೆ ತೆಗೆದುಕೊಳ್ಳಿ. ಹೇಗೂ ಈ ಲೇಖಾನುದಾನವನ್ನು 6 ತಿಂಗಳವರೆಗೆ ಪಡೆಯುವುದಕ್ಕೆ ನಿಮಗೆ ಅವಕಾಶ ಇದ್ದೇ ಇದೆ. ಆದರೆ ಅದನ್ನೂ ಕೂಡ ನೀವು ತೆಗೆದುಕೊಳ್ಳುವುದಕ್ಕೆ ತಯಾರಾಗಿಲ್ಲ. ಮಾನ್ಯ ಸಭಾಪತಿಗಳೇ ತಮಗೆ ಆಗಿರುವ ಹಿಂಸೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅನಿವಾರ್ಯವಾಗಿ ತಾವು ಅಲ್ಲಿ ಕೂರಲೇಬೇಕಾಗಿದೆ. ನೀವು ಎಲ್ಲಿಯಾದರೂ ಅಲ್ಲಿ ಕೂರದೇ

ಹೋದರೆ ಎಲ್ಲಿಯಾದರೂ ಎದ್ದು ಹೋದಲ್ಲಿ ಸಂವಿಧಾನದ ಬಿಕ್ಕಟ್ಟು ಉಂಟಾಗುತ್ತದೆ. ಇದರಿಂದಾಗಿ ಮಾನ್ಯ ಜಗದೀಶ್ ಶೆಟ್ಟರ್ ಅವರಿಗೆ ಇರಿಸುಮುರಿಸು ಆದೀತು. ತಾವು ಆ ಕೆಲಸವನ್ನು ಮಾಡುವುದಿಲ್ಲ ನಮಗೆ ಗೊತ್ತಿದೆ. This is a money bill. ಈ ಸದನದಲ್ಲಿ ನಾವು ಕುಳಿತಿದ್ದಾಗ ಮತ್ತು ಬಹುಮತ ಇದ್ದಂಥಹ ಸಂದರ್ಭದಲ್ಲಿ ಮತ್ತು ಕಾಂಗ್ರೆಸ್ ಇಲ್ಲವೇ ಬಿ.ಜೆ.ಪಿ ಪಕ್ಷದವರು ಅಲ್ಪ ಬಹುಮತ ಇದ್ದಾಗ ನಾವು ಎಂದೂ ಕೂಡ ಈ ಮನಿ ಬಿಲ್ ಬಗ್ಗೆ ವಿರೋಧವನ್ನು ವ್ಯಕ್ತ ಮಾಡಲಿಲ್ಲ. ಆ ಕೆಲಸವನ್ನು ನಾವಾಗಲೀ, ನಮ್ಮ ಪ್ರತಿ ಪಕ್ಷದ ನಾಯಕರಾಗಲೀ ಮಾಡುವುದಿಲ್ಲ. ಅವರು ತಮ್ಮ ಮನವಿಯನ್ನು ಮಾಡಿದ್ದಾರೆ. ಇದನ್ನು ಸೋಮವಾರ ಮಧ್ಯಾಹ್ನ 12–00 ಗಂಟೆಗೆ ತೆಗೆದುಕೊಂಡು ರಾತ್ರಿ 8–00 ಗಂಟೆಯವರೆವಿಗೂ ಚರ್ಚೆ ಮಾಡೋಣ. ಇಲ್ಲವೇ 6 ಗಂಟೆಯವರೆವಿಗಾದರೂ ಚರ್ಚೆ ಮಾಡೋಣ. ನಿಮಗೆ ಅವಕಾಶ ಮಾಡಿಕೊಟ್ಟು ನಾವೆಲ್ಲರೂ ಒಂದಾಗಿ ಧ್ವನಿಮತದಲ್ಲಿ ಅದಕ್ಕೆ ಸರ್ವಾನುಮತದಿಂದ ಒಪ್ಪಿಗೆಯನ್ನು ಕೊಡುತ್ತೇವೆ. ದಯವಿಟ್ಟು ನಮ್ಮ ಈ ಮನವಿಗೆ ತಾವು ಸ್ಪಂದಿಸಬೇಕೆಂದು ವಿನಂತಿಸುತ್ತೇನೆ. ಬಹುಶಃ ಇದನ್ನು ಅನಿವಾರ್ಯವಾಗಿ ಕೇಳದೇ ಹೋದರೆ, ನಿಮ್ಮ ಮಾತನ್ನು ನಾವು ಕೇಳಿಯಾದ ಮೇಲೆ, ನಿಮ್ಮ ಸ್ಪಂದನೆಯನ್ನು ನಾವು ನಿರೀಕ್ಷೆ ಮಾಡಿಯಾದ ಮೇಲೆ, ನಿಮ್ಮ ನಗುಮುಖದಲ್ಲಿ ಈ ಒಂದು ಲಕ್ಷ ಕೋಟಿ ರೂಪಾಯಿಯ ಆಯವ್ಯಯ ಏನು ಇದೆ, ಆ ಆಯವ್ಯಯದ ಮುಖಾಂತರ ನೀವು ಇನ್ನು ಎಷ್ಟು ದಿವಸ ಅಧಿಕಾರದಲ್ಲಿ ಇರುತ್ತೀರಿ ಅಷ್ಟು ದಿವಸಗಳ ಕಾಲ ಚೆನ್ನಾಗಿ ಕೆಲಸ ಮಾಡುವಂತಹ ಒಂದು ವಾತಾವರಣವನ್ನು ನಿರ್ಮಾಣ ಮಾಡುವ ಸಲುವಾಗಿ ತಮಗೆ ಆ ಎಲ್ಲಾ ಸಹಕಾರವನ್ನು ಕೂಡ ಕೊಡುತ್ತೇವೆ. ಇದನ್ನು ಸೋಮವಾರ ತೆಗೆದುಕೊಳ್ಳಿ. ನಾವೆಲ್ಲರೂ ಅದಕ್ಕೆ ಸಹಕಾರವನ್ನು ಕೊಡುತ್ತೆವೆ. ಕೇವಲ ಪಟ್ಟು ಹಿಡಿದ ಕೇವಲ ಕಾಕತಾಳೀಯಕ್ಕೋಸ್ಕರವಾಗಿ ಚರ್ಚೆ ಮಾಡುವುದು ಅಲ್ಲ. ಫಲಪ್ರದವಾಗಿರತಕ್ಕಂಥ ಚರ್ಚೆ ಆಗಲಿ.

**ಶ್ರೀ ಎಸ್.ಆರ್.ಪಾಟೀಲ್:–** ನಾವು ಕಾಂಗ್ರೆಸ್ ರಾಷ್ಟ್ರೀಯ ಪಕ್ಷದವರೂ ಆಗಿದ್ದೇವೆ. ನಾವೂ ಸಹ ಈ Money Billಗೆ ನಿಶ್ಚಿತವಾಗಿ

ಸಹಕಾರವನ್ನು ಕೊಡುತ್ತೇವೆ. ಈ Money Bill ಅನ್ನು ಸೋಮವಾರದ ದಿವಸ ಚರ್ಚೆಗೆ ತೆಗೆದುಕೊಳ್ಳಿ. ನಿಶ್ಚಿತವಾಗಿಯೂ ಸಹಕಾರವನ್ನು ಕೊಡುತ್ತೇವೆ. ಸೋಮವಾರದ ದಿವಸ 30ನೇ ತಾರೀಖು ಆಗಿರುತ್ತದೆ. ಇನ್ನೂ ಒಂದೆರಡು ದಿವಸ ನಿಮಗೆ ಅವಕಾಶ ಇರುತ್ತದೆ. Money Billಗೆ ನಮ್ಮ ಜವಾಬ್ದಾರಿ ಏನಿದೆ. ನಾವು ರಾಷ್ಟ್ರೀಯ ಪಕ್ಷದವರು ಈ Money Billಗೆ ಸಂಪೂರ್ಣವಾಗಿ ಸಹಕಾರವನ್ನು ಕೊಡುತ್ತೇವೆ. ಆದರೆ ಇದರ ಬಗ್ಗೆ ಚರ್ಚೆ ಮಾಡುವುದು ಬಹಳ ಮಹತ್ವದ್ದಾಗಿದೆ. ಈ ಕರ್ನಾಟಕ ರಾಜ್ಯದ ಶಾಸನ ಸಭೆಯ ಇತಿಹಾಸದಲ್ಲಿ ಇದು ಒಂದು ಲಕ್ಷ ಕೋಟಿ ರೂಪಾಯಿಯ ಬೃಹತ್ ಮೊತ್ತದ ಆಯವ್ಯಯ ಆಗಿದ್ದು ಇದು ದೇಶದಾದ್ಯಂತ ಬಹಳ ಹೆಸರುವಾಸಿಯನ್ನು ಪಡೆದಿರುತ್ತದೆ. ಆಯವ್ಯಯವನ್ನು ಅರ್ಧ ಗಂಟೆ ಒಂದು ಗಂಟೆ ಕಾಲ ಚರ್ಚೆ ಮಾಡಿ ಇದನ್ನು ಪಾಸ್ ಮಾಡಿದರೆ ಈ ರಾಜ್ಯದ ಜನರಿಗೆ ನ್ಯಾಯ ಒದಗಿಸಿದಂತಾಗುವುದಿಲ್ಲ. ಇದರ ಬಗ್ಗೆ ಬಹಳವಾಗಿ ಸುದೀರ್ಘವಾಗಿ ಚರ್ಚೆ ಆಗುವುದು ಬಹಳ ಮುಖ್ಯವಾಗಿದೆ. ಮಾನ್ಯ ಮುಖ್ಯಮಂತ್ರಿಗಳ ಖುಷಿ ನೋಡಿದರೆ ಈ ವಿಧೇಯಕವನ್ನು ಸೋಮವಾರ ಮಂಡಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

**ಶ್ರೀ ಜಗದೀಶ್ ಶೆಟ್ಟರ್:-** ಮಾನ್ಯ ಸಭಾಪತಿಯವರೆ, ಮನಿ ಬಿಲ್ ಅನ್ನು ಪಾಸ್ ಮಾಡುವ ಸಲುವಾಗಿ ಪರ್ಯಾಲೋಚನೆಯ ಸಲುವಾಗಿ ನಾವು ಈ ಸದನದ ಮುಂದೆ ವಿನಂತಿ ಮಾಡಿದ್ದೇವೆ. ಪ್ರತಿ ಪಕ್ಷದ ನಾಯಕರಾದ ಮಾನ್ಯ ಎಸ್.ಆರ್.ಪಾಟೀಲ್ ಅವರು ಮತ್ತು ಜನತಾ ದಳದ ನಾಯಕರಾದ ಮಾನ್ಯ ಎಂ.ಸಿ.ನಾಣಯ್ಯನವರು ಈ ವಿಧೇಯಕವನ್ನು ಪಾಸ್ ಮಾಡಿಕೊಳ್ಳುವುದಕ್ಕೆ ಇನ್ನು ಸಮಯಾವಕಾಶ ಇದೆ. ಆದುದರಿಂದ ಇದನ್ನು ಸೋಮವಾರಕ್ಕೆ ತೆಗೆದುಕೊಳ್ಳಬೇಕೆಂದು ತಮ್ಮ ವಾದವನ್ನು ಮಂಡನೆ ಮಾಡಿದ್ದಾರೆ. ನಾನು ಒಂದು ವಿಚಾರವನ್ನು ಹೇಳಬಯಸುತ್ತೇನೆ. ಇಲ್ಲಿ ಕೂಡ ಒಂದು ಸಂಪ್ರದಾಯ ಇದೆ. ಹಿಂದೆ ಕೆಳಮನೆಯಲ್ಲಿ ಪಾಸ್ ಆಗಿ ಬಂದಂತಹ Financial Bill ಅಲ್ಲದೆ ಇತರೆ regular ಆದಂಥಹ ಕೆಲವು ವಿಧೇಯಕಗಳು

ಬಂದಾಗ ತಡ ರಾತ್ರಿಯವರೆಗೆ ಕುಳಿತು ಪಾಸ್ ಮಾಡಿದಂಥಹ ಉದಾಹರಣೆಗಳು ಇವೆ.

**ಸಭಾಪತಿಯವರು:–** ರಾತ್ರಿ 3–00 ಗಂಟೆಯವರೆವಿಗೂ ಕಲಾಪವನ್ನು ನಡೆಸಲಾಗಿತ್ತು ನಾನು ಇಲ್ಲೇ ಇದ್ದೆ.

**ಶ್ರೀ ಜಗದೀಶ್ ಶೆಟ್ಟರ್:–** ಕೆಲವು ವಿಧೇಯಕಗಳು ಬಂದಾಗ ರಾತ್ರಿ 11–12–3 ಗಂಟೆಯವರೆವಿಗೆ ಅಧಿವೇಶನವನ್ನು ನಡೆಸಿ ವಿಧೇಯಕಗಳನ್ನು ಪಾಸ್ ಮಾಡುವ ಒಂದು ಸಂಪ್ರದಾಯ ಇಲ್ಲಿ ಇದೆ. ಒಂದು ಲಕ್ಷ ಕೋಟಿ ರೂಪಾಯಿಯ ಈ ಆಯವ್ಯಯವನ್ನು ಮಾನ್ಯ ಸದಾನಂದಗೌಡರವರು ಮುಖ್ಯಮಂತ್ರಿಗಳಾಗಿದ್ದಂಥಹ ಸಂದರ್ಭದಲ್ಲಿ ಇದನ್ನು ಮಂಡನೆ ಮಾಡಿದರು. ಅದರಲ್ಲಿನ ವಿಷಯಗಳ ಬಗ್ಗೆ ಮತ್ತು ಯಾವ್ಯಾವ ಹಣವನ್ನು ಯಾವ್ಯಾವ ಇಲಾಖೆಗಳಿಗೆ allocation ಮಾಡಿದಂಥಾದ್ದರ ಬಗ್ಗೆ ಆವತ್ತು ಕೂಡ ಚರ್ಚೆಯಾಗಿದೆ. ಇದರಲ್ಲಿ ಮತ್ತೇನೂ ಹೊಸದಾಗಿ ಚರ್ಚೆ ಮಾಡುವಂಥಾದ್ದು ಏನೂ ಇಲ್ಲ. ಇವತ್ತೇನಾದರೂ ಚರ್ಚೆ ಮಾಡಬೇಕೆಂದು ಇದ್ದರೆ Supplementary Budget ಬಗ್ಗೆ ಚರ್ಚೆ ಮಾಡಬೇಕಾಗಿದೆ. ನಾವು appropriation bill ಗೆ ಅನುಮತಿಯನ್ನು ಕೇಳುತ್ತಿದ್ದೇವೆ. 4 ತಿಂಗಳ ಹಿಂದೆ ಮಂಡನೆಯಾದಂತಹ ಬಜೆಟ್ ಇದಾಗಿದೆ. ಅದಕ್ಕಾಗಿ ನಾನು ಇಡಿ ವರ್ಷಕ್ಕೆ ಸಂಬಂಧಪಟ್ಟಂತೆ Appropriation Bill ಮಂಡನೆ ಮಾಡಿದ್ದೇನೆ ಮತ್ತು ಇದನ್ನು ಪಾಸ್ ಮಾಡಿಕೊಡಬೇಕೆಂದು ಕೇಳುತ್ತಿದ್ದೇನೆ. ಈ ನಾಲ್ಕು ತಿಂಗಳ ಅವಧಿಯಲ್ಲಿ ಕೆಲವೊಂದು ತುರ್ತಾದಂತಹ ಕಾಮಗಾರಿಗಳಿಗೆ ಖರ್ಚು ಮಾಡಿರುತ್ತೇವೆ ಮತ್ತು ಕೆಲವೊಂದು ಇತರ ಬಾಬ್ತುಗಳಿಗೆ allocation ಮಾಡಿರುತ್ತೇವೆ. ಅದರ ವಿವರಗಳನ್ನು ಈ Supplementary Bill ನಲ್ಲಿ ತಿಳಿಸಿದ್ದೇವೆ ಮತ್ತು ಇದಕ್ಕೆ ತಮ್ಮ ಒಪ್ಪಿಗೆ ಕೇಳುತ್ತಿದ್ದೇವೆ. ಮತ್ತೆ ಇನ್ನೊಂದು ಬಿಲ್ ಬಹಳ ಸಿಂಪಲ್ ಇದ್ದಂತಹ ಬಿಲ್ ಆಗಿದೆ.

ಹೀಗಾಗಿ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ನಾಣಯ್ಯನವರು ಮತ್ತು ಇನ್ನಿತರ ಸದಸ್ಯರು ಈ ಚರ್ಚೆಯಲ್ಲಿ

ಭಾಗವಹಿಸಬೇಕು. ಇವೊತ್ತು ಕೆಳಮನೆಯಲ್ಲಿ ವಿಧೇಯಕವನ್ನು ಪಾಸ್ ಮಾಡಿಕೊಂಡು ಬಂದಿದ್ದೇವೆ. ಇವೊತ್ತು ಮಾನ್ಯ ನಾಣಯ್ಯನವರು ವರಮಹಾಲಕ್ಷ್ಮೀ ಹಬ್ಬ ಎಂದು ಹೇಳಿದ್ದಾರೆ. ಇಂದು ಬಹಳ ಒಳ್ಳೆಯ ದಿವಸ. ಇಂದು ವಿಧೇಯಕ ಪಾಸ್ ಆದರೆ ಮಹಾಲಕ್ಷ್ಮೀಯಾಗಲಿ, ಲಕ್ಷ್ಮಿಯಾಗಲಿ ಯಾರೂ ಸಿಟ್ಟು ಮಾಡಿಕೊಳ್ಳುವುದಿಲ್ಲ. ಇಡೀ ರಾಜ್ಯಕ್ಕೆ ನಾವು ಲಕ್ಷ್ಮೀಯನ್ನು ಮಂಜೂರು ಮಾಡುವಾಗ ಆ ಮಹಾಲಕ್ಷ್ಮೀ ಸಿಟ್ಟಿಗೆ ಬರುವುದಿಲ್ಲ. ಆದ್ದರಿಂದ ದಯಮಾಡಿ ಸಹಕಾರ ಕೊಡಬೇಕೆಂದು ವಿನಂತಿ ಮಾಡುತ್ತೇನೆ. ಇದೊಂದು ವಿಶೇಷ ಪ್ರಕರಣ. ಮಾನ್ಯ ನಾಣಯ್ಯನವರು ಬಹಳ ತೊಂದರೆಯಾಗುತ್ತದೆಂದು ಹೇಳಿದ್ದಾರೆ. ಅದು ನಿಜ. ಬಹಳ ಹೊತ್ತು ನಾವು ಕುಳಿತು ಚರ್ಚೆಯನ್ನು ಮಾಡುವಾಗ ತೊಂದರೆಯಾಗುವುದು ನನಗೆ ಗೊತ್ತಿದೆ. ಅದರ ಅರ್ಥವನ್ನು ನಾನು ಮಾಡಿಕೊಳ್ಳುತ್ತೇನೆ. ಆದರೆ ಕೆಲವೊಂದು ವಿಶೇಷ ಪ್ರಕರಣಗಳಿರುತ್ತವೆ. ಆ ರೀತಿ ಇದೊಂದು ವಿಶೇಷ ಪ್ರಕರಣವೆಂದು ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ನಾಣಯ್ಯನವರು ಮತ್ತು ಇನ್ನಿತರ ಸದಸ್ಯರು ಅದಕ್ಕೆ ಸಹಕಾರ ಕೊಟ್ಟು ದಯಮಾಡಿ ಈ ವಿಧೇಯಕಗಳನ್ನು ಪಾಸ್ ಮಾಡಿಕೊಡಬೇಕೆಂದು ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಸರ್ಕಾರದ ಮೊಂಡತನ ನನಗೆ ಸರಿ ಅನಿಸುತ್ತಿಲ್ಲ. ಇನ್ನು 30–31ನೇ ತಾರೀಖಿನವರೆಗೆ ಸಾಕಷ್ಟು ಸಮಯ ಇದೆ ಎಂದು ಬಹಳಷ್ಟು ರೀತಿಯಲ್ಲಿ ನಾವು ಸರ್ಕಾರಕ್ಕೆ ಹೇಳಿದ್ದೇವೆ. 30ನೇ ತಾರೀಖು ಈ ವಿಧೇಯಕವನ್ನು ಚರ್ಚೆ ಮಾಡಿದರೆ ಇದಕ್ಕೆ ನ್ಯಾಯ ಒದಗಿಸಿದ ಹಾಗೆ ಆಗುತ್ತದೆ. ಆದರೆ ನಿಮ್ಮ ವಾದಕ್ಕೆ ನೀವು ಅಂಟಿಕೊಂಡಿರುತ್ತೀರೆಂದು ಹೇಳಿದರೆ ನಿಮ್ಮ ಮೊಂಡುತನಕ್ಕೆ ನಾವು ಪ್ರತಿಭಟಿಸಿ ನಾವು ಸದನದಿಂದ ಹೋಗುತ್ತೇವೆ.

**(ಸದರಿ ಸಂಧರ್ಭದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸರ್ಕಾರದ ನಿಲುವನ್ನು ಪ್ರತಿಭಟಿಸಿ ಸಭಾತ್ಯಾಗವನ್ನು ಮಾಡಿದರು)**

**ಶ್ರೀ ಎಂ.ಸಿ.ನಾಣಯ್ಯ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾವು ಒಂದು ವಿಚಾರವನ್ನು ಎತ್ತಿದ್ದೇವೆ. ಸರ್ಕಾರ ಅದಕ್ಕೆ ಒಪ್ಪುತ್ತಿಲ್ಲ. ಇವೊತ್ತೆ ಹಣಕಾಸು ವಿಧೇಯಕವನ್ನು ಪಾಸ್ ಮಾಡಿಕೊಂಡು ಹೋಗಬೇಕೆಂದು ಹೇಳುತ್ತಿದ್ದಾರೆ. ಹಾಗಾದರೆ ಅವರು ಪಾಸ್ ಮಾಡಿಕೊಳ್ಳಲಿ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಯಾವಾಗ ವರಲಕ್ಷ್ಮೀಪೂಜೆಗೆ ಎಲ್ಲರೂ ಹೋಗಿ ಪೂಜೆ ಮಾಡದೆ, ನೀವು ಮೊಂಡತನ ಮಾಡಿ ಇವೊತ್ತು ಪಾಸ್ ಮಾಡಬೇಕೆಂದು ಏನು ಹೊರಟ್ಟಿದ್ದೀರಿ ಅದಕ್ಕೆ ಅವಳು ನಿಮ್ಮ ಮೇಲೆ ಮುನಿಸಿಕೊಳ್ಳುತ್ತಾಳೆ. ಅದು ಏನೇ ಇರಲಿ, ಕರ್ನಾಟಕ ರಾಜ್ಯದ ವಿಧಾನ ಮಂಡಲದ ಇತಿಹಾಸದಲ್ಲಿ ಒಂದು ಮುಂಗಡ ಪತ್ರದ ಚರ್ಚೆ ಕೇವಲ ನಾಲ್ಕು ದಿವಸದಲ್ಲಿ ಮುಗಿಸಿ ನೀವು ಅದನ್ನು ಇವೊತ್ತು ಪಾಸ್ ಮಾಡಬೇಕೆಂದು ಕೇಳುವಂಥದ್ದು ಕರ್ನಾಟಕ ವಿಧಾನ ಮಂಡಲದ ಇತಿಹಾಸದಲ್ಲಿ ಆಗಿಲ್ಲ. ಬಹುಶಃ ಅದೇ ಇತಿಹಾಸವನ್ನು ಸೃಷ್ಠಿ ಮಾಡಿದ್ದೀರಿ. ಬಹುಶಃ ಈ ಸಂದರ್ಭದಲ್ಲಿ ಇಷ್ಟೇ ಹೇಳುತ್ತೇನೆ. ನಾವು ಇದಕ್ಕೆ ವಿರೋಧವನ್ನು ಇಲ್ಲಿ ಕುಳಿತುಕೊಳ್ಳುವುದಕ್ಕಿಂತ ನಿಮ್ಮ ಮೊಂಡತನ ಮತ್ತು ನಿಮ್ಮ ಈ human temperament ಎಂದು ಹೇಳುತ್ತಿರತಕ್ಕಂಥಕ್ಕೆ ನೀವು adjust ಆಗುವುದಿಲ್ಲ. ಏಕೆಂದರೆ ನಿಮ್ಮ ಚಿಂತನೆಯೇ ಆ ತರಹ. ಮಾನ್ಯ ಸಭಾಪತಿಯವರೆ, ಆ ಹಿನ್ನೆಲೆಯಲ್ಲಿ ನಾವು ದಯಮಾಡಿ ನಿಮ್ಮ ಕ್ಷಮಾಪಣೆಯನ್ನು ಕೋರಿ, ಏಕೆಂದರೆ ಇಂತಹ ಒಂದು ಮಹತ್ತರವಾದಂಥ ಹಣಕಾಸು ವಿಧೇಯಕವನ್ನು ಒಂದು ಲಕ್ಷ ಕೋಟಿಯನ್ನು ಚರ್ಚೆ ಮಾಡಲಿಕ್ಕೆ ಅವಕಾಶವೇ ಇಲ್ಲ, ಬಹುಶಃ ತರಾತುರಿಯಲ್ಲಿ ಪಾಸ್ ಮಾಡುವಂಥದ್ದು ನಮ್ಮ ಚಿಂತನೆಗೊಳ ಪಡಬಾರದು, ಖಂಡಿತವಾಗಿ ನಾವು ಪ್ರತಿಪಕ್ಷದವರು ಇದಕ್ಕೆ ಭಾಗಿಗಳಾಗಬಾರದು. ಈ ಹಿನ್ನಲೆಯಲ್ಲಿ ನಾವು ಈ ಸದನದಲ್ಲಿ ಈ ಒಂದು ಬಿಲ್‌ಗೆ ಸಂಬಂಧಪಟ್ಟ ಹಾಗೆ ನಮ್ಮ ಪ್ರತಿಭಟನೆಯನ್ನು ನಾವು ಯಾವ ರೀತಿ ವ್ಯಕ್ತ ಮಾಡಬೇಕು ಮಾನ್ಯ ಸಭಾಪತಿಯವರೆ? ನಾವು ಒಂದು ವೇಳೆ ಇದರಲ್ಲಿ participate ಮಾಡಿದರೆ ಜನರಿಗೆ ನಾವು ಒಳ್ಳೆಯ ಸಂದೇಶವನ್ನು ಕೊಡಲಿಕ್ಕಾಗುವುದಿಲ್ಲ.

ಒಳ್ಳೆಯ ಚರ್ಚೆಯನ್ನು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ನೀವು ತಂದಿರತಕ್ಕಂಥದ್ದಕ್ಕೆ ನಾವು ಕೇವಲ ಕೈ ಎತ್ತುವುದಕ್ಕೆ ನಾವು your majesty's opposition ಅಲ್ಲ. ದಯವಿಟ್ಟು ಹೇಳಿಬಿಡುತ್ತೇನೆ, we are not his majesty's opposition. We are here to tell you, to guide you. ಅದಕ್ಕೆ ತಾವು ತಯಾರಿಲ್ಲ ಅಂದರೆ ನಾವು ನಿಸ್ಸಹಾಯಕರು. ಆದ್ದರಿಂದ ನಾವು ಕೂಡ ಸಭೆಯಿಂದ ಸಭಾತ್ಯಾಗ ಮಾಡುತ್ತೇವೆ. ನಿಮಗೆ majority ಇದೆ ನೀವು ಏನು ಬೇಕಾದರು ಮಾಡಿಕೊಳ್ಳಿ.

**(ಸದರಿ ಸಂದರ್ಭದಲ್ಲಿ ಜೆಡಿ (ಎಸ್) ಪಕ್ಷದ ಸದಸ್ಯರುಗಳು)**

**(ಸರ್ಕಾರದ ನಿಲುವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು)**

**ಶ್ರೀ ಜಗದೀಶ್ ಶೆಟ್ಟರ್(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ವಿರೋಧ ಪಕ್ಷದವರಿಗೆ ಸಹಕಾರ ನೀಡಿ ಎಂದು ಬಹಳಷ್ಟು ಕೇಳಿಕೊಂಡಿದ್ದೇನೆ. ಈ ಹಿಂದೆ ಕೂಡ ಬಹಳಷ್ಟು ತಡವಾಗಿ ರಾತ್ರಿ ಚರ್ಚೆ ನಡೆದಿವೆ. ರಾತ್ರಿ ಸುಮಾರು ಒಂದು ಗಂಟೆಯವರೆಗೂ ಕೂಡ ಸದನ ನಡೆದು ಚರ್ಚೆ ನಡೆದಿರುವಂಥ ಉದಾಹರಣೆಗಳಿವೆ. ಆದರೂ ಕೂಡ ಅವರು ಸಭಾತ್ಯಾಗವನ್ನು ಮಾಡಿದ್ದಾರೆ. ನಾನು ಅದರ ಬಗ್ಗೆ ಹೆಚ್ಚು comment ಮಾಡುವುದಕ್ಕೆ ಹೋಗುವುದಿಲ್ಲ. ದಯಮಾಡಿ ಈ ಎಲ್ಲಾ ವಿಧೇಯಕಗಳನ್ನು ಪರ್ಯಾಲೋಚನೆಗಾಗಿ ತಮ್ಮ ಒಪ್ಪಿಗೆಯನ್ನು ಕೇಳುತ್ತಿದ್ದೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

> "ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:–** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಮತ್ತು 3ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

> "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಜಗದೀಶ್ ಶೆಟ್ಟರ್(ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೆ ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ii) ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕ, 2012**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜಗದೀಶ್ ಶೆಟ್ಟರ್(ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೆ ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕವನ್ನು ಪರ್ಯಾಲೋಚಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:–** “ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಮತ್ತು 3ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಜಗದೀಶ್ ಶೆಟ್ಟರ್(ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೆ ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**iii) ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 2012**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಜಗದೀಶ್ ಶೆಟ್ಟರ್(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

> "ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:-** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಮತ್ತು 3ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಜಗದೀಶ್ ಶೆಟ್ಟರ್(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2012ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ಬಹಳ ಮುಖ್ಯವಾಗಿ ಬಜೆಟ್ ಅನ್ನು ಪೂರ್ತಿ ವರ್ಷಕ್ಕೆ ಇವೊತ್ತು ಅನುಮೋದನೆಯನ್ನು ಪಡೆಯಲಾಗಿದೆ. ಅದರ ಜೊತೆಗೆ Supplementary Budget ಏನಿದೆ ಅದಕ್ಕೂ ಸಹಿತ ಸದನ

ಅನುಮೋದನೆಯನ್ನು ನೀಡಿದೆ. ನಾವು ಇವೊತ್ತು ರೈತರ ಸಾಲವನ್ನು ಏನು ಮನ್ನಾ ಮಾಡಿದ್ದೇವೆ ಅದರಿಂದ ನಮ್ಮ ಬಜೆಟ್ ಮೇಲೆ ಸ್ವಲ್ಪ ಹೊರೆ ಬಿದ್ದಿದೆ. ಅದನ್ನು ಸರಿದೂಗಿಸಲು ನಾವು ಶೇಕಡ 0.5 ವ್ಯಾಟ್ ಅನ್ನು ಹೆಚ್ಚಿಗೆ ಮಾಡುವ ವಿಧೇಯಕವನ್ನು ತಂದಿದ್ದೇವೆ. ಅದು ಕೂಡ ಇವೊತ್ತು ಪಾಸ್ ಮಾಡಿದ್ದಾರೆ. ಅದಕ್ಕೆ ಮಾನ್ಯ ವಿರೋಧ ಪಕ್ಷದವರು ಸಹಕಾರ ಕೊಡಬೇಕೆಂದು ಹಾಗೂ ಸದನದ ಸದಸ್ಯರು ಸಹಕಾರ ಕೊಡಬೇಕೆಂದು ಕೋರಿಕೊಂಡಿದ್ದೆ. ಅವರೆಲ್ಲರೂ ಸಹಕಾರವನ್ನು ಕೊಟ್ಟಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ಮೂರು ವಿಧೇಯಕಗಳು ಬಹಳ ಪ್ರಮುಖವಾದವು. ಆ ಬಜೆಟ್ ಇವೊತ್ತು ಪಾಸ್ ಆಗಿದೆ. ಇದರ ಮುಖಾಂತರ ಕರ್ನಾಟಕದ ಜನತೆಗೆ ಮತ್ತು ನಮ್ಮ ರೈತರಿಗೆ ಅದರಲ್ಲೂ ಬರಗಾಲ ಬಂದಂಥ ಈ ಸಂದರ್ಭದಲ್ಲಿ ಇವೊತ್ತು ಇನ್ನು ಹೆಚ್ಚಿನ ರೀತಿಯಾದಂಥ ಅವರ ನೆರವಿಗೆ ನಾವು ಧಾವಿಸುತ್ತೇವೆ. ನಮ್ಮ ಕರ್ನಾಟಕದ ಅಭಿವೃದ್ಧಿಗೆ ಮತ್ತು ಜನಸಾಮಾನ್ಯರ ಕಳಕಳಿಗೆ ಮತ್ತು ಅವರ ತೊಂದರೆಗಳಿಗೆ ಪರಿಹಾರ ಹುಡುಕುವ ದಿಕ್ಕಿನಲ್ಲಿ ನಾವು ಪ್ರಯತ್ನ ಮಾಡುತ್ತೇವೆ. ಮತ್ತು ಬರಗಾಲ ಬಂದಂಥ ಸಂದರ್ಭದಲ್ಲಿ ಇವೊತ್ತು ಈ ಸದನದ ಮುಖಾಂತರ, ವಿಧಾನ ಸಭೆಯ ಮುಖಾಂತರ ಈಗಾಗಲೇ ನಾವು ಇನೊಂದು ಪರಿಹಾರವನ್ನು ಕೊಟ್ಟಿದ್ದೇವೆ ಆ ದೃಷ್ಟಿಯಿಂದ ಎರಡೂ ಸದನಗಳು ಇವೊತ್ತು ಈ ವಿಧೇಯಕಗಳಿಗೆ ಒಪ್ಪಿಗೆ ಕೊಟ್ಟಿವೆ. ಅದಕ್ಕಾಗಿ ನಾನು ಎಲ್ಲರಿಗೂ ಅಭಿನಂದಿಸುತ್ತೇನೆ. ಸಭಾಪತಿಯವರಾದ ತಾವು ಕೂಡ ಈ ಒಂದು ಸದನವನ್ನು ಬಹಳ ದಕ್ಷತೆಯಿಂದ ನಡೆಸಿದ್ದೀರಿ. ಎಲ್ಲಾ ರೀತಿಯ ಚರ್ಚೆಗೆ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಇಲ್ಲಿ ಉತ್ತಮವಾದಂಥ ಚರ್ಚೆಗಳಾಗುತ್ತಿವೆ. ತಮಗೂ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರುಗಳಲ್ಲಿ ನನ್ನ ಒಂದು ವಿನಂತಿ. ರಾತ್ರಿ 9 ಗಂಟೆ 15 ನಿಮಿಷಗಳಾದರೂ ಕೂಡ ದೊಡ್ಡ ಸಂಖ್ಯೆಯಲ್ಲಿ ತಾವು ಸದನದಲ್ಲಿ ಉಪಸ್ಥಿತರಿದ್ದು ಸರ್ಕಾರದ ಕಲಾಪಗಳಿಗೆ ಸಹಕಾರ ಕೊಟ್ಟಿದ್ದೀರಿ. ಇನ್ನು ಮುಂದಿನ ನಾಲ್ಕು ದಿನಗಳ ಕಾಲ ಅಧಿವೇಶನ ನಡೆಯುತ್ತದೆ. ಅದಕ್ಕೂ

ಇದೇ ರೀತಿಯ ಸಹಕಾರವನ್ನು ತಾವೆಲ್ಲಾ ಕೊಡಬೇಕು. ಚರ್ಚೆಗಳಲ್ಲಿ ಭಾಗವಹಿಸಬೇಕೆಂದು ಹೇಳುತ್ತ ಸದನವನ್ನು ಸೋಮವಾರ ಬೆಳಿಗ್ಗೆ 12 ಗಂಟೆ 15 ನಿಮಿಷಗಳ ವರೆಗೆ ಮುಂದೂಡಿದ್ದೇನೆ.

**(ಸದನವು 9 ಗಂಟೆ 15 ನಿಮಿಷಕ್ಕೆ ತನ್ನ ಕಾರ್ಯಕಲಾಪಗಳನ್ನು ಮುಕ್ತಾಯಗೊಳಿಸಿ ಪುನಃ ದಿನಾಂಕ 30ನೇ ಜುಲೈ 2012 ರಂದು ಮಧ್ಯಾಹ್ನ 12 ಗಂಟೆ 15 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**